Karnataka State Archives
(Departmental Library) (B)
4808

THE
MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FIRST DAY

OF THE

FOURTH SESSION

THURSDAY, 27TH FEBRUARY 1964

Vol. IV—No. 1

Karnataka State Archives.
(Departmental Library)
Accession No. (K) 4803
Date..........

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP

CONTENTS

	Pages
Starred Questions and Answers ...	1—25
Question for answer on the day (but not taken up) ...	25—26
Panel of Chairmen ...	26
Papers laid on the Table—	
Copy of Governor's Address ...	26
Governor's Address ...	26—40
Arrest and Release of a Member—(Announced) ...	40
Twenty-second Report of the Business Advisory Committee—(Adopted) ...	40—41
Papers laid on the Table—	
Statement of Bill assented to by the Governor or the President ... Orders, Notifications, etc., issued under several Acts in force in the State ...	41—45
Introduction of Bills—	
Mysore Tenants (Temporary Protection from Eviction) (Amendment) Bill, 1964 ... Mysore Tenancy Laws (Amendment) Bill, 1964 ...	45
Mysore Tenants (Temporary Protection from Eviction) (Amendment) Bill, 1964—(Passed) ...	45—74
Mysore Tenancy Laws (Amendment) Bill, 1964—(Passed)	74—80
Chair's ruling on a point of order *re*: Postponement of discussion on Motion of Thanks ...	80

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE SECOND DAY

OF THE

FOURTH SESSION

FRIDAY, 28TH FEBRUARY 1964

Vol. IV—No. 2

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1964

Price: 25 nP.

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE THIRD DAY

OF THE

FOURTH SESSION

SATURDAY, 29TH FEBRUARY 1964

Vol. IV—No. 3

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1964

Price : 25 nP.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FOURTH DAY

OF THE

FOURTH SESSION

MONDAY, 2ND MARCH 1964

Vol. IV—No. 4

BANGALORE :

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP

(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 4808
ದಿನಾಂಕ Date..................................

MYSORE LEGISLATIVE ASSEMBLY

FIRST DAY.

Thursday, 27th February 1964.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Establishment of Depressed Class Housing Societies in Bagepally and Gudibanda Taluks of Kolar District.

**Q.*—2. SRI B. SUBBARAYAPPA (Bagepalli).—

Will the Government be pleased to state :—

(*a*) whether it is not a fact that Depressed Class Housing Societies have been established in Bagepally and Gudibanda Taluks of Kolar District ;

(*b*) If so, the function of these Socities ;

(*c*) whether they are aware that these Societies are not functioning properly ?

A.—SRI RAMAKRISHNA HEGDE (Minister for Development, Panchayat Raj and Co-operation).—

(*a*) Yes.

(*b*) The main functions are as under :—

1. To encourage thrift and Mutual help.
2. To construct houses for Members on the sites belonging either to the members or to the Society.
3. To improve the locality of the members in all respects.
4. To obtain at the current market rates the materials required for the construction of houses from the concerned Government Departments for the members.

(*c*) No.

ಶ್ರೀ ಬಿ. ಸುಬ್ಬರಾಯಪ್ಪ.—ಗುಡಿಬಂಡೆ ಮತ್ತು ಬಾಗೇಪಲ್ಲಿಯ ಸೊಸೈಟಿಗಳು ರಿಜಿಸ್ಟರು ಆಗಿವೆಯೊ ಇಲ್ಲವೊ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ರಿಜಿಸ್ಟರು ಆಗಿವೆ—ಗುಡಿಬಂಡೆಯಲ್ಲಿ ಒಂದು ಮತ್ತು ಬಾಗೆ ಪಲ್ಲಿಯಲ್ಲಿ ಒಂದು, ಎರಡೂ ರಿಜಿಸ್ಟರು ಆಗಿವೆ.

ಶ್ರೀ ಬಿ. ಸುಬ್ಬರಾಯಪ್ಪ.—ಇನ್ನೂ ರಿಜಿಸ್ಟರು ಆಗದೆ ಇರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ, ರಿಜಿಸ್ಟರು ಆಗದೆ ಇರುವುದು ಸರಕಾರದ ಗಮನಕ್ಕೆ ಬರುವುದು ಸಾಧ್ಯವಿಲ್ಲ. ಒಂದು ತಾಲ್ಲೂಕಿಗೆ ಒಂದು ಸೊಸೈಟಿ ಮಾಡಬೇಕು ಎಂಬುದು ಸರಕಾರದ ನೀತಿ.

ಶ್ರೀ ಬಿ. ಸುಬ್ಬರಾಯಪ್ಪ.—ಷೇರು ಅಮೌಂಟು ವಸೂಲು ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ರಿಜಿಸ್ಟರು ಆದರೆ ವಸೂಲು ಆಗಲೇಬೇಕು.

ಶ್ರೀ ಬಿ. ಸುಬ್ಬರಾಯಪ್ಪ.—2 ಸಾವಿರ ರೂಪಾಯಿವರೆಗೆ ವಸೂಲುಮಾಡಿ ಡಿಪಾಜಿಟ್ಟು ಇಟ್ಟಿದ್ದರೂ ಇನ್ನೂ ರಿಜಿಸ್ಟರು ಆಗಿಲ್ಲ ! ಏಕೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಗುಡಿಬಂಡೆ ಹರಿಜನ ಮತ್ತು ಗಿರಿಜನ ಹೌಸ್‌ಬಿಲ್ಡಿಂಗ್ ಸೊಸೈಟಿಯ ವಿಷಯವನ್ನು ಹೇಳುತ್ತೇನೆ. ಅದು 22-1-1963 ಕ್ಕೆ ರಿಜಿಸ್ಟರಾಗಿದೆ, 176 ಜನ ಸದಸ್ಯರಿದ್ದಾರೆ, ಒಟ್ಟು ಷೇರು ಅಮೌಂಟು 986 ರೂಪಾಯಿಗಳುಯಿವೆ. ಬಾಗೆಪಲ್ಲಿಯ ಸೊಸೈಟಿ 28-3-1963 ಕ್ಕೆ ರಿಜಿಸ್ಟರಾಗಿದೆ. 172 ಜನ ಸದಸ್ಯರಿದ್ದಾರೆ, 1,780 ರೂಪಾಯಿ ಷೇರು ಕ್ಯಾಪಿಟಲ್ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ಸಾಲ ಕೊಟ್ಟಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇನ್ನೂವರೆಗೆ ಸಾಲ ಕೊಟ್ಟಿಲ್ಲ. 53 ಸಾವಿರ ರೂಪಾಯಿ ಸಾಲ ಕೊಡಬೇಕೆಂದು ಗುಡಿಬಂಡೆ ಸೊಸೈಟಿಯವರು ಲೋನ್ ಅಪ್ಲಿಕೇಷನ್ ಕಳುಹಿಸಿದ್ದಾರೆ. ಬಾಗೆಪಲ್ಲಿ ಸೊಸೈಟಿ ಇನ್ನೂ ಯಾವ ಅಪ್ಲಿಕೇಷನ್ನೂ ಕಳುಹಿಸಿಲ್ಲ. ಗುಡಿಬಂಡೆಯ ಸೊಸೈಟಿಗೆ ಸಾಲ ಕೊಡುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಸಂಘಗಳಿಗೆ ಸರಕಾರದವರು ಏನಾದರೂ ಹಣ ಕೊಟ್ಟಿದ್ದಾರೆಯೆ !

ಶ್ರೀ ರಾಮಕೃಷ್ಣ ಹೆಗ್ಗಡೆ.—ಉತ್ತರ ಆಗಲೇ ಹೇಳಿದೆ. ಎರಡಕ್ಕೂ ಸಾಲ ಕೊಟ್ಟಿಲ್ಲ. ಮೊದಲನೆ ಸೊಸೈಟಿಯವರು 53 ಸಾವಿರ ರೂಪಾಯಿ ಸಾಲ ಕೊಡಬೇಕು ಎಂದು ಅಪ್ಲಿಕೇಷನ್ ಕಳುಹಿಸಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಲೋನ್ ರಿಕಾರ್ಡ್‌ಗಳನ್ನು ಮಾಡಿ ಕಳುಹಿಸಿದ್ದರೂ ದುಡ್ಡು ಇಲ್ಲವೆಂಬ ಕಾರಣದಿಂದ ಇಲ್ಲಿಯವರೆಗೆ ಸಾಲ ಮಂಜೂರು ಆಗಿಲ್ಲ, ಅಲ್ಲವೇ ಸ್ವಾಮಿ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಸಂಪೂರ್ಣ ನಿಜವಲ್ಲ. ಲೋನ್ ಅಪ್ಲಿಕೇಷನ್ ಬಹಳ ತಡವಾಗಿ ಬಂದಿದೆ. ಕಳೆದ ವರ್ಷದ ಕೊನೆಯ ಭಾಗದಲ್ಲಿ ಬಂದಿದೆ. ದುಡ್ಡಿನ ತೊಂದರೆ ಕೂಡ ಸ್ವಲ್ಪಮಟ್ಟಿಗೆ ಇದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ನಿಮ್ಮವರ್ಗದ ಸೊಸೈಟಿಗಳಿಗೆ ಕಳೆದ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹಣ ಸಾಲ ಕೊಡಲಾಗಿದೆ ?

Sri RAMAKRISHNA HEGDE.—I cannot say that off-hand. This is only with regard to these two specific societies.

Sri GANJI VEERAPPA.—What is the policy of the Government in this matter, whether the amount is to be distributed districtwise or whether they will view it liberally ?

Sri RAMAKRISHNA HEGDE.—Formerly, the procedure was that whenever any proposals were receieved from co-operative institutions, they were examined on merit and loans were advanced. But because last year there was some criticism in the House that only certain areas were receiving attention at the cost of other areas, we have decided that while sanctioning loans we should also take into consideration the needs and requirements of other areas.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಸೊಸೈಟಿಗಳನ್ನು ಮಾಡಿದ ಉದ್ದೇಶವೇನು? ಮೈಸೂರು ಸಂಸ್ಥಾನದಲ್ಲಿ 2 ವರ್ಷಗಳಿಂದ ಅನುಸೂಚಿತ ಜಾತಿಗಳಿಗೆ ಎಲ್ಲಿಯಾದರೂ ಸಾಲ ಕೊಟ್ಟಿದ್ದಾರೆಯೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಲ ಬಹಳ ಕೊಟ್ಟಿದ್ದೇವೆ. ಅದನ್ನು ಹಿಂದೆಯೆ ಒಂದೆರಡು ಬಾರಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ ಉತ್ತರರೂಪವಾಗಿ ಯಾವ ಯಾವ ಸೊಸೈಟಿಗಳಿಗೆ ಎಷ್ಟೆಷ್ಟು ಹಣ ಕೊಟ್ಟಿದೆ ಎಂದು ಹೇಳಿದ್ದೇನೆ. ಈಗ ತೊಂದರೆ ಏನೆಂದರೆ, ಸರಕಾರಕ್ಕೆ ಎಷ್ಟು ಬೇಡಿಕೆ ಬರುತ್ತದೋ ಅದನ್ನೆಲ್ಲಾ ಪೂರೈಸುವುದಕ್ಕೆ ಅವಶ್ಯವಿರುವಷ್ಟು ಹಣ ಸದ್ಯಕ್ಕೆ ಇಲ್ಲ. ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ನಿನೊಂದಿಗೆ, ಸರಕಾರದವರು ಗ್ಯಾರಂಟಿ ಕೊಡುತ್ತಾರೆಂದು ಹೇಳಿ ಒಂದು ಕೋಟಿ ರೂಪಾಯಿ ನಮಗೆ ಸಾಲ ಕೊಡಬೇಕೆಂದು ಪತ್ರವ್ಯವಹಾರ ಮಾಡಿದ್ದೇವೆ. ಅದು ಬಹುಶಃ ಅದಷ್ಟು ಜಾಗ್ರತೆ ಫಲಪ್ರದವಾಗುತ್ತದೆ ಎಂದು ನನ್ನ ನಿರೀಕ್ಷೆ ಇದೆ. ಮತ್ತೊಂದು ಮುಖ್ಯ ತೊಂದರೆ ಏನು ಎಂಬುದನ್ನು ಮಾನ್ಯ ಸದಸ್ಯರ ತಿಳಿವಳಿಕೆಗಾಗಿ ಹೇಳುತ್ತೇನೆ. ಈ ಸೊಸೈಟಿಗಳಿಗೆ ಸೇರಿರತಕ್ಕಂಥ ಜನರೆಲ್ಲರೂ ಬಹಳ ಬಡವರು. ಅವರಿಗೆ ಮೊದಲು ಷೇರು ಬಂಡವಾಳ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ 2 ತೀರ್ಮಾನವನ್ನು ಮಾಡಿದ್ದೇವೆ : ಮೊದಲನೆಯದು, ಯಾರು 10 ರೂಪಾಯಿ ಷೇರು ತೆಗೆದುಕೊಂಡ ಸದಸ್ಯರು ಇರುತ್ತಾರೊ ಅವರ ಬಾರೊಯಿಂಗ್ ಕೆಪ್ಯಾಸಿಟಿ ಹೆಚ್ಚು ಮಾಡಲಿಕ್ಕೆ 90 ರೂಪಾಯಿನಷ್ಟು ಸರಕಾರ ರಿಟರ್ನಬಲ್ ಷೇರ್ ಕ್ಯಾಪಿಟಲ್ ಹಾಕಬೇಕು. ಎರಡನೆಯದು ಸಾಮಾನ್ಯವಾಗಿ ಸಹಕಾರ ಸಂಘಗಳಲ್ಲಿ 10 ರೂಪಾಯಿಯ ಷೇರು ಕ್ಯಾಪಿಟಲ್ ಇದ್ದರೆ 100 ರೂಪಾಯಿಗಳಷ್ಟು ಬಾರೊಯಿಂಗ್ ಕೆಪ್ಯಾಸಿಟಿ ಇರುತ್ತದೆ-ಹತ್ತು ಪಟ್ಟು ಇರುತ್ತದೆ. ಹರಿಜನರ ಹೌಸ್‌ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಹತ್ತು ಇದ್ದದ್ದನ್ನು 30ಕ್ಕೆ ಏರಿಸಿದೆ. ಅದರಿಂದ 10 ರೂಪಾಯಿ ಷೇರು ಇರುವ ಸದಸ್ಯರಿಗೆ 3 ಸಾವಿರ ರೂಪಾಯಿವರೆಗೆ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದು ಬಹಳ ಮಹತ್ತರವಾದ ತೀರ್ಮಾನ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಿಮ್ನ ವರ್ಗದವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಸರಕಾರದವರು ಡಿಜೈನುಗಳನ್ನು ಮಾಡಿದ್ದಾರೆಯೆ? ಆ ಪ್ಲಾನಿನ ಅಂದಾಜು ಎಷ್ಟು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ರೀತಿಯ ಪ್ಲಾನುಗಳನ್ನು ಮಾಡಿದ್ದಾರೆ. 15—20 ತರಹ ಬೇರೆ ಬೇರೆ ಸೈಜಿನ, ರೂಪದ, ಪ್ಲಾನುಗಳನ್ನು ಮಾಡಿದ್ದಾರೆ. 1,500 ರೂಪಾಯಿನಿಂದ 3 ಸಾವಿರ ರೂಪಾಯಿವರೆಗೆ ಖರ್ಚು ಆಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯದಾದ್ಯಂತ ಅರ್ಧಂಬರ್ಧವಾಗಿರತಕ್ಕ ಕಟ್ಟಡಗಳನ್ನು ಪೂರ್ಣ ಮಾಡುವುದಕ್ಕೆ ಸರಕಾರದವರು ಏನಾದರೂ ಯೋಜನೆ ಮಾಡಿದ್ದಾರೆಯೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೋ-ಆಪರೇಟಿವ್ ಸೊಸೈಟಿ ಕಟ್ಟಡ ಅರ್ಧಂಬರ್ಧ ಕಟ್ಟಡ ತಯಾರು ಮಾಡಿರತಕ್ಕಂಥಾದ್ದು ಯಾವುದೂ ನನಗೆ ಗೊತ್ತಿಲ್ಲ. ಹಿಂದೆ 2ನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಅರ್ಧಂಬರ್ಧ ಕಟ್ಟಡವಾಗಿದ್ದರೆ ಅದನ್ನು ಪೂರೈಕೆ ಮಾಡುತ್ತೇವೆಂದು ಸರಕಾರದವರು ಆಶ್ವಾಸನೆ ಕೊಟ್ಟಿದ್ದಾರೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಹಣ ಅದಕ್ಕಾಗಿ ಬೇಕಾದಷ್ಟು ಇದೆ, ಕೊಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಹರಿಜನ ಗಿರಿಜನರಿಗೆ ತಾಲ್ಲೂಕುವಾರು ಹಣ ಕೊಡುತ್ತೀರ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಜನಸಂಖ್ಯೆಯ ಒಂದೇ ಆಧಾರದ ಮೇಲೆ ಕೊಡುವುದಕ್ಕೆ ಸಾಧ್ಯವಿಲ್ಲ, ಅದು ಸರಿಯೂ ಅಲ್ಲ. ಕೆಲವು ಭಾಗಗಳಲ್ಲಿ ಈಗಾಗಲೆ ಮನೆ ಕಟ್ಟುವುದಕ್ಕೆ ಹಣ ಕೊಡುತ್ತಾ ಇದ್ದೇವೆ. ಕೊಡದೆ ಇರುವ ಅನೇಕ ಪ್ರದೇಶಗಳು ಕೆಲವು ಕಡೆ ಇವೆ. ಜನಸಂಖ್ಯೆಯನ್ನು ನೋಡುತ್ತೇವೆ, ಅಲ್ಲಿ ಆಗಿರತಕ್ಕಂಥ ಕೆಲಸವನ್ನೂ ನೋಡುತ್ತೇವೆ.

Annual income of Sri Male Mahadeswara temple in Kollegal Taluk.

*Q.—17. Sri T. MADAIAH GOWDA (Ramanagaram).—

Will the Government be pleased to state :—

(a) what is the annual income of Sri Malè Mahadeswara temple in Kollegal taluk for the last 3 years ;

(SRI T. MADAIAH GOWDA)

(b) whether the Board of Trustees of the Temple have drawn up any Master Plan for the improvement of the above Muzrai institute;

(c) if so, what are the important items of the said plan and what is the cost of each item;

(d) when the each item of improvement would be completed?

A.—Sri M. V. KRISHNAPPA (Minister for Revenue).—

(a) 1960-61 ... ... Rs. 2,69,961-31
1961-62 ... ... Rs. 3,30,589-50
1962-63 ... ... Rs. 4,17,166-49

(b) Yes.

(c) *Vide* Statement given below.

(d) The items of works are proposed to be taken up in stages spread over a period of five years.

STATEMENT.

Sl. No.	*Item of work*	*Estimated Cost.* Rs.
1.	Acquisition of land at Mahadewara Hills and at Kollegal Layout and formation of Roads.	...
2.	Multistoryed Buildings ...	3,00,000
3.	Construction of 6 choultries under "Own Your Building Scheme" ...	48,000
4.	Open type Pilgrim Sheds ...	20,000
5.	Construction of 2 flats in the multistoryed buildings, 5 cottages, 4 pilgrim sheds, Rest Houses at Kollegal ...	4,76,000
6.	Construction of one multistoryed building. Constructing of 100 rooms, 18 cottages, 15 pilgrim sheds, markets and Bus Stand ...	6,52,000
7.	Construction of one multistoryed building consisting of 100 rooms, Tourist Home attached with canteen, twenty cottages, Beauty spots with Mantapams ...	8,06,000
8.	Construction of one multistoryed building consisting of 100 rooms, 21 cottages, Mantapams and Rest Houses. ...	5,76,000

ಶ್ರೀ ಟಿ. ಮಾದಯ್ಯ ಗೌಡ.—5 ವರ್ಷಗಳ ಕಾಲದಲ್ಲಿ ಮಹದೇಶ್ವರ ದೇವಸ್ಥಾನಕ್ಕೆ ಆಗತಕ್ಕ ಅಭಿವೃದ್ಧಿ ಕಾರ್ಯಗಳ ವಿಚಾರವಾಗಿ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ, ಇದರಲ್ಲಿ

ಪ್ರಾಮುಖ್ಯವಾಗಿ ಅಲ್ಲಿಗೆ ಬೇಕಾದಂಥ ನೀರು, ದೀಪ, ರಸ್ತೆ ಇವುಗಳ ವಿಚಾರವಾಗಿ ಯಾವ ಒಂದು ಮಾತನ್ನೂ ಹೇಳಿಲ್ಲ ಏಕೆ?

† ಶ್ರೀ ಎಂ. ವಿ. ಕೃಷ್ಣಪ್ಪ.—ನೀರಿನ ವಿಚಾರದಲ್ಲಿ ಈಗಾಗಲೇ ಎರಡು ವರ್ಷಗಳಿಂದ ಒಂದು ಸ್ಕೀಂ ಇದ್ದು ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ ಖರ್ಚು ಮಾಡಿ ಆ ಸ್ಕೀಮು ರೆಡಿಯಾಗಿದೆ, ಅದನ್ನು ಸ್ವಿಚ್ ಆನ್ ಮಾಡಬೇಕಾಗಿದೆ. ದೀಪದ ವಿಷಯವಾಗಿ ಹೇಳುವುದಾದರೆ, ಪವರ್‌ಲೈನ್ ಎಳೆಯುತ್ತಾ ಇದ್ದಾರೆ ಮತ್ತು ಮುಖ್ಯವಾಗಿ ಜನಗಳಿಗೆ ಬೇಕಾದ್ದು ಅಕಾಮಾಡೇಷನ್, ಅಲ್ಲದೆ 13 ಲಕ್ಷ ರೂಪಾಯಿ ಖರ್ಚು ಮಾಡಿ ರಸ್ತೆ ಮುಗಿಸಿದ್ದೇವೆ, ಪಾಲಾರ್ ನದಿಗೆ ಮದರಾಸ್ ಕಡೆಯಿಂದ ಕೆಲಸ ನಡೆಯುತ್ತಾ ಇದೆ. ರಸ್ತೆ ಮತ್ತು ನೀರಿನ ವಿಷಯವಂತೂ ಪೂರ್ತಿ ಮುಗಿದಿದೆ. ಪವರ್ ಲೈನ್ ಎಳೆಯುತ್ತಾ ಇದ್ದಾರೆ, ಮತ್ತು ಮುಖ್ಯವಾಗಿ ಬೇಕಾದ್ದು ಅಲ್ಲಿಗೆ ಹೋದ ಯಾತ್ರಾರ್ಥಿಗಳಿಗೆ ಒಳ್ಳೆಯ ಅಕಾಮಾಡೇಷನ್; ಅದಕ್ಕಾಗಿ ಒಂದು ಹೈ ಪವರ್ ಕಮಿಟಿಯವರು 30 ಲಕ್ಷ ರೂಪಾಯಿಗಳ ಒಂದು 5ವರ್ಷದ ಸ್ಕೀಂಮನ್ನು ತಯಾರು ಮಾಡಿ ಅದನ್ನು ಸರ್ಕಾರದವರಿಗೆ ಒಪ್ಪಿಸಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಯಾವಾಗಿನಿಂದ ಆ 5 ವರ್ಷದ ಅವಧಿ ಪ್ರಾರಂಭವಾಗುತ್ತದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾವಾಗ ಕೆಲಸ ಪ್ರಾರಂಭ ಮಾಡುತ್ತಾರೋ ಆಗಿನಿಂದ ಆ 5 ವರ್ಷದ ಅವಧಿ ಪ್ರಾರಂಭವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 8 ಐಟಂಗಳಲ್ಲಿ ಆ ದೇವಸ್ಥಾನದ ಸುತ್ತ ಇರತಕ್ಕ ಸ್ಲಂ ಕ್ಲಿಯರೆನ್ಸ್ ಮತ್ತು ಕಲ್ಯಾಣಿಯಲ್ಲಿರತಕ್ಕ ಕೆಟ್ಟ ನೀರನ್ನು ಪರಿಶುದ್ಧ ಮಾಡುವುದು ಇದು ಯಾವುದೂ ಕಾಣುತ್ತಾ ಇಲ್ಲವಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಟ್ಟಡಗಳನ್ನು ಕಟ್ಟಬೇಕಾದರೆ ಸ್ಲಂಕ್ಲಿಯರೆನ್ಸ್ ಆಗುತ್ತದೆ. ಎರಡನೆಯದು ಕಲ್ಯಾಣಿ, ಈಗ ತಾವು ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ, ಅದು ಗಲೀಜಾಗಿಲ್ಲ ಎಂದು. ಜಾತ್ರೆ ಆದಾಗ ಸ್ವಲ್ಪ ದಿವಸ ಗಲೀಜಾಗಿರುತ್ತದೆ, ಈಗ ಅದರ ಪಕ್ಷದಲ್ಲಿ ಒಂದು ನಲ್ಲಿ ಇವೆ ಅದರಿಂದ ನೀರನ್ನು ಉಪಯೋಗ ಮಾಡಿಕೊಳ್ಳಲು ಕಲ್ಯಾಣಿಯಿಂದ ನೀರನ್ನು ಪಂಪ್ ಮಾಡಿ ಶೇಖರ ಮಾಡಲು ಒಂದು ಓವರ್ ಹೆಡ್ ಟ್ಯಾಂಕ್ ಕಟ್ಟಿದೆ.

ಶ್ರೀ ಜಿ. ವಿ. ಗೌಡ.—8 ಅಭಿವೃದ್ಧಿ ಕಾರ್ಯಗಳಿಗೆ 30 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದಕ್ಕಾಗಿ ಸರ್ಕಾರದವರು ಕೊನೆಯಪಕ್ಷ 25 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಅಥವಾ ಸರ್ಕಾರದವರು ಗ್ಯಾರಂಟಿ ಕೊಟ್ಟು ಯಾವುದಾದರೂ ಒಂದು ರೀತಿಯಲ್ಲಿ ಜಾಗ್ರತೆ ಈ ಕೆಲಸ ಕಾರ್ಯಗಳನ್ನು ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಈಗ ಈ ಮಾದೇಶ್ವರ ದೇವಸ್ಥಾನ ಒಂದೇ ಅಲ್ಲ 5–6 ದೊಡ್ಡ ದೇವಸ್ಥಾನಗಳು ಎಂದರೆ ಗೋಕರ್ಣ, ಕುಕ್ಕೆ ಸುಬ್ರಹ್ಮಣ್ಯ, ಬಿಳಿಗಿರಿ ರಂಗನಾಥ, ಎಲ್ಲಮ್ಮ, ರೇಣುಕಾ ದೇವಸ್ಥಾನ, ಬಸವೇಶ್ವರ ಕಲ್ಯಾಣ–ಇವುಗಳನ್ನೆಲ್ಲಾ ಇಂತಹ ಸೌಕರ್ಯಗಳನ್ನು ಮಾಡಿಕೊಡಬೇಕೆಂದಿರುವ ಪಟ್ಟಿಯಲ್ಲಿ ಸೇರಿಸಬೇಕೆಂದಿದ್ದೇವೆ, ಇವುಗಳೂ ಅಲ್ಲದೇ ಇನ್ನೂ ಕೆಲವು ಮಹಮ್ಮದೀಯರ shrines ಅನ್ನು ಕೂಡ ಸೇರಿಸಿಕೊಂಡಿದ್ದೇವೆ. ಇದಕ್ಕೆಲ್ಲಾ ಒಂದು ಮಾಸ್ಟರ್ ಪ್ಲಾನ್ ತಯಾರಾಗುತ್ತಾ ಇದೆ, ಅದರ ಪ್ರಕಾರ ತಾವು ಹೇಳುತ್ತಿರುವ 30 ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ಇವುಗಳೆಲ್ಲಾ ದೊಡ್ಡ ದೇವಸ್ಥಾನಗಳು ಇಲ್ಲಿ ಖರ್ಚು ಮಾಡತಕ್ಕ ಹಣವು ನಾಲ್ಕೈದು ವರ್ಷಗಳಲ್ಲಿ ವಾಪಸು ಬರುತ್ತದೆ. ಆದ್ದರಿಂದ ಇವಕ್ಕೆ ಸರ್ಕಾರದವರು ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ತಾವು ಕೊಟ್ಟಿರುವ ಪಟ್ಟಿಯಲ್ಲಿ ಛತ್ರ, ಕಲ್ಯಾಣಿ, ಮಂಟಪ ಇವುಗಳೇ ಇವೆ. ತಿರುಪತಿ ದೇವಸ್ಥಾನದವರು ಮಾಡುತ್ತಿರುವ ಮಾದರಿಯಲ್ಲಿ ವಿದ್ಯಾ ಸಂಸ್ಥೆಗಳನು ಸ್ಥಾಪನೆ ಮಾಡುವ ವ್ಯವಸ್ಥೆ ಮತ್ತು ಯೋಜನೆ ತಮ್ಮಲ್ಲಿ ಇಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಿರುವ ಆಕ್ಟ್ ಪ್ರಕಾರ ದೇವಸ್ಥಾನಗಳ ಹಣವನ್ನು ವಿದ್ಯಾ ಸಂಸ್ಥೆಗಳಿಗೆ ಖರ್ಚು ಮಾಡುವುದಕ್ಕೆ ಆಸ್ಪದವಿಲ್ಲ ಎಂದು ನಮ್ಮ ಲಾ ಮಿನಿಸ್ಟ್ರಿಯವರು ಹೇಳುತ್ತಾರೆ, ಆದ್ದರಿಂದ ಮುಂದೆ ಬರುವ ರಿಲಿಜಿಯಸ್ ಅಂಡ್ ಎಂಡೌಮೆಂಟ್ ಆಕ್ಟ್ ಪ್ರಕಾರ ದೇವಸ್ಥಾನಗಳ ದುಡ್ಡನ್ನು ವಿದ್ಯಾ ಸಂಸ್ಥೆಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಸರ್ಕಾರದ ಆಶೆ ಇದೆ. ಮೈಸೂರು ಸಂಸ್ಥಾನದಲ್ಲಿ ಬಹುಶಃ ಅಂತಹ 300 ದೇವಸ್ಥಾನಗಳು ಇವೆ. ಏನಿಲ್ಲ ಎಂದರೂ ಅವುಗಳ ಹಣವನ್ನು ಉಪಯೋಗಿಸಿಕೊಂಡು ಗರ್ಲ್ಸ್ ಹೈಸ್ಕೂಲುಗಳನ್ನು ರನ್ ಮಾಡಬಹುದು.

---

†Indicates that the r. marks or speeches have not been revised by the member concerned.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ದೊಡ್ಡ ದೊಡ್ಡ ದೇವರು, ದೇವಸ್ಥಾನಗಳನ್ನು ಟೂರಿಂಗ್ ಸೆಂಟರುಗಳನ್ನಾಗಿ ಮಾಡಿ ಅಲ್ಲಿ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದಿರಿ. ಸೋಷಿಯಲಿಸ್ಟಿಕ್ ಪ್ಯಾಟರನ್‌ನಲ್ಲಿ ಸಣ್ಣ ಸಣ್ಣ ದೇವರು ಮತ್ತು ಸಣ್ಣ ಸಣ್ಣ ದೇವಸ್ಥಾನಗಳ ಬಗ್ಗೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಮಾಡಿ ಅಲ್ಲಿ ಬರತಕ್ಕ ಆದಾಯವನ್ನು ಉಪಯೋಗಿಸಿಕೊಂಡು ಪ್ರೈಮರಿ ಅಥವಾ ಮಿಡಲ್ ಸ್ಕೂಲುಗಳನ್ನು ಮಾಡುತ್ತೇವೆ ಎಂದರೆ ಲಾ ಮಿನಿಸ್ಟರು ಒಪ್ಪುವುದಿಲ್ಲ ಎಂದು ಹೇಳಿದಿರಿ, ಮದರಾಸ್ ಸೆಕ್ರೆಟೇರಿಯಟ್‌ನವರು ಒಪ್ಪುತ್ತಾರೆ ಎಂದಮೇಲೆ ನಮ್ಮ ಸೆಕ್ರೆಟರಿಯೇಟ್‌ನವರು ಒಪ್ಪದೇ ಇರುವುದಕ್ಕೆ ಕಾರಣವೇನು ?

Mr. SPEAKER. That question is disallowed.

ಶ್ರೀ ಇ. ನಾರಾಯಣಗೌಡ.—ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಆ ಪ್ರಕಾರ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ ಎಂದು ಹೇಳಿದಿರಿ, ಬಂಗಾರಪೇಟೆ ತಾಲ್ಲೂಕಿನಲ್ಲಿ ಚಿನ್ನದ ತಿರುಪತಿ ಎಂದು ಇವೆ, ಅದೂ ಕೂಡ ತಮ್ಮ ಮಾಸ್ಟರ್ ಪ್ಲಾನ್‌ನಲ್ಲಿ ಬರುತ್ತದೆಯೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತಮ್ಮ ಕ್ಷೇತ್ರದಲ್ಲಿ ಇದೆ, ಅದು ಬಹಳ ಒಳ್ಳೆಯಸ್ಥಳ, ಒಂದು ವರ್ಷದಲ್ಲಿ ಒಂದೂವರೆ ಲಕ್ಷ ರೂಪಾಯಿ ಕೊಟ್ಟು ಮುಜರಾಯಿ ಇಲಾಖೆಯವರು ಕಲ್ಯಾಣಿ ಕಟ್ಟಿಸಿ ಕೊಟ್ಟಿದ್ದಾರೆ; ಅದರ ಪ್ರಾರಂಭೋತ್ಸವ ಕೂಡ ನಡೆದಿರುವುದು ತಮಗೆ ಗೊತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಕೃತಿ ಸೌಂದರ್ಯದ ಮಡಿಲನಲ್ಲಿ ಈ ಮಹದೇಶ್ವರನ ದೇವಸ್ಥಾನ ಇದೆ, ಇದಕ್ಕೆ ಮದರಾಸ್ ಪ್ರಾಂತ್ಯದಿಂದ ಬಹಳ ಜನ ಭಕ್ತಾದಿಗಳು ಬರುತ್ತಾರೆ. ಅದಕ್ಕೋಸ್ಕರ ಪಾಲಾರ್ ನದಿಗೆ ಒಂದು ಸೇತುವೆ ಬೇಕು. ಅದನ್ನು ಮಾಡುವುದರಿಂದ ಇನ್ನೂ ಆದಾಯ ಜಾಸ್ತಿಯಾಗುತ್ತದೆ. ಅಲ್ಲದೆ ದೇವಸ್ಥಾನದ ಸೌಂದರ್ಯವನ್ನೂ ಕೂಡ ಮತ್ತಷ್ಟು ಹೆಚ್ಚು ಮಾಡಿದರೆ ದೇವಸ್ಥಾನವು ಕಂಗೊಳಿಸುತ್ತದೆ. ಆದ್ದರಿಂದ ಆ ಸೇತುವೆಯನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ತಾವು ಹೇಳಿರುವ ರೀತಿಯಲ್ಲಿ ಮಹದೇಶ್ವರ ದೇವರು ಇಂಟರ್ ಸ್ಟೇಟ್ ಗಾಡ್, ಮದರಾಸ್ ಕಡೆಯಿಂದ ಬಹಳ ಜನ ಯಾತ್ರಾರ್ಥಿಗಳು ಬರುತ್ತಾರೆ, ಈಗಿರುವ ಪ್ರಕಾರ ಬಹಳ ಸುತ್ತಿಕೊಂಡು ಎಂದರೆ ಕೊಯಮತ್ತೂರು, ಸೇಲಂ ಜಿಲ್ಲೆಗಳ ಮುಖಾಂತರ ಹಾದು ಹೋಗಿ ಬೆಂಗಳೂರಿಗೆ ಬಂದು ಅಲ್ಲಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಪಾಲಾರ್ ಕಡೆಯಿಂದ ರಸ್ತೆ ಮಾಡಿ ಮುಗಿಸುತ್ತಾ ಇದ್ದೇವೆ, ಪಾಲಾರ್‌ದಿಂದ ಸೇತುವೆ ಆಗಬೇಕು; ಆ ಕಡೆ ರಸ್ತೆ ಇದೆ, ಪಾಲಾರ್ ನದಿಗೆ ಸೇತುವೆ ಕಟ್ಟಲು ಮದರಾಸ್ ಸರ್ಕಾರದವರು ಅದನ್ನು ತಮ್ಮ ಕೆಲಸದಲ್ಲಿ ಸೇರಿಸಿಕೊಂಡಿದ್ದಾರೆ. ಕಾಮರಾಜ ನಾಡಾರ್ ಅವರು ಮನಸ್ಸು ಮಾಡಿದರೆ ಇದು ಸುಲಭವಾಗಿ ಆಗಬಹುದು ಎಂದು ಅಂದುಕೊಂಡಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೋಲಾರ ಜಿಲ್ಲೆಯವರಾದ ನಾರಾಯಣ ಗೌಡರು ಪ್ರಶ್ನೆ ಕೇಳುವುದು ಅದೇ ಜಿಲ್ಲೆಯವರಾದ ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಹೀಗಾಗಿ ಹೆಚ್ಚು ದೇವಸ್ಥಾನಗಳ ಕೆಲಸ ಅಲ್ಲೇ ಆಗಿದೆ, ಆದ್ದರಿಂದ ಮೈಸೂರು ಸಂಸ್ಥಾನಕ್ಕೆಲ್ಲಾ ಅನ್ವಯಿಸುವಂತೆ ಕೆಲಸ ಮಾಡಲು ಮನಸ್ಸು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರ ದುಡ್ಡಿನಿಂದ ಅವರು ಕಟ್ಟಿಕೊಂಡಿದ್ದಾರೆ ದೇವರ ದುಡ್ಡು ಒಂದೂವರೆ ಲಕ್ಷ ರೂಪಾಯಿ ಇತ್ತು, ಅದೇ ರೀತಿ ತಮ್ಮ ದೇವಸ್ಥಾನಗಳಲ್ಲೂ ದೇವರ ದುಡ್ಡು ಇದ್ದರೆ ಹೇಳಿ ಕಟ್ಟಿಸಿ ಕೊಡುತ್ತೇವೆ. ದೇವರಾಯನ ದುರ್ಗದಲ್ಲಿ ಕಲ್ಯಾಣಿ ಆಗಬೇಕು ಅದಕ್ಕೆ ನಾಳೆಯ ದಿವಸ ಫೌಂಡೇಷನ್ ಹಾಕುತ್ತೇವೆ.

ಶ್ರೀ ಎನ್. ರಾಚಯ್ಯ.—ತಮ್ಮ ಮಾಸ್ಟರ್ ಪ್ಲಾನ್‌ನಲ್ಲಿ ನಂಜನಗೂಡು ಮತ್ತು ಮೇಲುಕೋಟೆ ದೇವಸ್ಥಾನಗಳೂ ಸೇರಿವೆಯೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸದ್ಯಕ್ಕೆ ಸೇರಿಲ್ಲ. ಮುಂದೆ 500 ರೂಮುಗಳನ್ನು ಕಟ್ಟಲು 60 ಲಕ್ಷ ರೂಪಾಯಿ ಪ್ರೊವೈಡ್ ಮಾಡಿದೆ, ದೊಡ್ಡ ಒಂದು ಛತ್ರವನ್ನು ಕಟ್ಟಲು ಒಂದು ಸ್ಕೀಂ ತಯಾರಾಗಿದೆ, ಅದನ್ನು ಇಷ್ಟರಲ್ಲೇ ಪ್ರಾರಂಭ ಮಾಡುವವರಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ದೇವರಾಯನ ದುರ್ಗದಲ್ಲಿ ಫೌಂಡೇಷನ್ ಹಾಕುತ್ತೇವೆ ಎಂದು ಹೇಳಿದರು, ಆ ವಿಚಾರ ನನಗೇ ಗೊತ್ತಿಲ್ಲ. ಯಾರು ತಮ್ಮನ್ನು ಇನ್‌ವೈಟ್ ಮಾಡಿದರು ? ಯಾರು ಫೌಂಡೇಷನ್ ಹಾಕುತ್ತಾರೆ ಎಂಬುದನ್ನು ಹೇಳುತ್ತೀರಾ ?

Mr. SPEAKER.—It is disallowed. It does not arise out of the main question.

SRI K. LAKKAPPA.—In the course of the answer, the Hon'ble Minister stated.........

MR. SPEAKER.—It may be a very good ground to get the information, but he can do it on some other occasion and not during the Question Hour by putting a supplementary question.

ಶ್ರೀ ಜಿ. ವಿ. ಗೌಡ.—ದೇವಸ್ಥಾನದ ಹಣದಿಂದ ವಿದ್ಯಾ ಸಂಸ್ಥೆಗಳನ್ನು ತೆರೆಯಬಾರದು ಎಂದು ಹೇಳಿದರು. ಮದರಾಸ್ ರಿಲಿಜಿಯಸ್ ಅಂಡ್ ಎಂಡೋಮೆಂಟ್ ಆಕ್ಟ್ ಪ್ರಕಾರ ದೇವಸ್ಥಾನದ ಹಣದಿಂದ ವಿದ್ಯಾ ಸಂಸ್ಥೆಗಳನ್ನು ತೆರೆಯಲು ಅವಕಾಶವಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಮದರಾಸ್ ಆಕ್ಟ್‌ನಲ್ಲಿ ಆ ಅವಕಾಶವಿದೆ. ಅದರ ಪ್ರಕಾರ ಮದರಾಸ್‌ಗೆ ಸಂಬಂಧಪಟ್ಟಿದ್ದಂತಹ ಕೆಲವು ಭಾಗಗಳಲ್ಲಿ, ಮಂಗಳೂರು ಮತ್ತು ಸೌತ್ ಕೆನರಾದಲ್ಲಿ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದಾರೆ, ಮೈಸೂರು ಸಂಸ್ಥಾನದಲ್ಲಿ ಅದು ಜಾರಿಯಲ್ಲಿಲ್ಲ.

Failure of Ragi Crop in Malur Taluk for want of Rains last year.

* *Q.*—30. SRI B. CHANNABYRE GOWDA (Hoskote) [on behalf of SRI S. V. RAME GOWDA (Malur)].—

Will the Government be pleased to state :—

(*a*) whether it is not a fact that on account of failure of rains in Malur Taluk during last year, 75 per cent of the Ragi crop has failed thereby causing heavy loss to the ryots ;

(*b*) if so, whether they intend to take steps to exempt the ryots of this Taluk from paying land revenue surcharge ?

A.—SRI M. V. KRISHNAPPA (Minister for Revenue).—

(*a*) No.

(*b*) Does not arise.

ಶ್ರೀ ಬಿ. ಚನ್ನಬೈರೇಗೌಡ.—ಈ ತಾಲ್ಲೂಕಿನಲ್ಲಿ ಮಳೆ ಬಾರದೆ ಶೇಕಡ 75 ಭಾಗ ಬೆಳೆ ನಷ್ಟವಾಗಿದೆಯೇ ಎಂಬ ಪ್ರಶ್ನೆಗೆ 'ನಿಜವಲ್ಲ' ಎಂದು ಒಂದೇ ಮಾತಿನಲ್ಲಿ ಉತ್ತರಿಸಿದ್ದೀರಿ. ಯಾವ ಆಧಾರದ ಮೇಲೆ ನಿಜವಲ್ಲ ಎಂದು ಹೇಳುತ್ತೀರಿ ?

† ಶ್ರೀ ಎಂ. ವಿ. ಕೃಷ್ಣಪ್ಪ.— ಅಂಕಿ ಅಂಶಗಳ ಮೇಲೆ ಹೇಳಿದ್ದೇವೆ. ಮಳೆ ಚೆನ್ನಾಗಿ ಆಗಿದೆ, ಅವರು ಹೇಳಿದ ಹಾಗೆ ಮಳೆ ಫೇಲ್ಯೂರ್ ಆಗಿಲ್ಲ, ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕಿನಲ್ಲಿ ಇದ್ದದ್ದರಲ್ಲಿ ಕೆರೆಗಳಿಗೆಲ್ಲಾ ನೀರು ಬಂದು ಬೆಳೆ ಸಾಧಾರಣವಾಗಿ ಆಗಿದೆ. 6 ಆಣೆಯಿಂದ 8 ಆಣೆ, 10 ಆಣೆಯವರೆಗೂ ಬೆಳೆ ಆಗಬಹುದು ಎಂದು ವರದಿ ಬಂದಿದೆ.

Failure of Crops in Sathanoor Hobli and Uyyamballi Hobli of Kanakapura Taluk for want of timely Rains.

* *Q.*—31. SRI K. L. SHIVALINGE GOWDA (Virupakshipura).—

Will the Government be pleased to state :—

(*a*) whether it has come to their notice that crops have failed in some parts of Sathanoor Hobli and Uyyomballi Hobli of Kanakapura

(SRI K. L. SHIVALINGE GOWDA)

Taluk and Virupakshipura Holbi of Channapatna Taluk for want of timely rains ;

(*b*) if so, the relief measures taken by them in this behalf ?

A.—Sri M. V. KRISHNAPPA (Minister for Revenue).—

(*a*) The condition of the crops in these Hoblies was causing anxiety during the early part of the season but the subsequent rains were helpful and the situation improved in these areas.

(*b*) It was not considered necessary to take up any relief measures as the situation improved with the subsequent rains.

ಶ್ರೀ ಕೆ. ಎಲ್. ಶಿವಲಿಂಗೇ ಗೌಡ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲವು ಭಾಗಗಳಲ್ಲಿ ಬೆಳೆ ನಷ್ಟವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದೆ, ವಿರೂಪಾಕ್ಷಿಪುರ ಮತ್ತು ಕೆಲವು ಕಡೆ ನಷ್ಟವಾಗಿದೆ.

ಶ್ರೀ ಕೆ. ಎಲ್. ಶಿವಲಿಂಗೇ ಗೌಡ.—ಹಾಗಾದರೆ ಸರ್ಕಾರ ಪರಿಹಾರ ಕ್ರಮಗಳನ್ನು ಕೈಕೊಳ್ಳಲು ಯೋಚನೆಮಾಡಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಹುಶಃ ತೆಗೆದುಕೊಂಡಿರಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಗದದ ಮೂಲಕ ಮತ್ತು ಫೋನ್ ಮೂಲಕ ತಿಳಿಸಿದೆ. ವಿಚಾರ ತಿಳಿದುಕೊಂಡು ತಿಳಿಸುತ್ತೇನೆ.

ಶ್ರೀ ಬಿ. ಎಲ್. ಗೌಡ.—ಹೋದ ವರ್ಷ ಎಷ್ಟು ಮಳೆ ಬೇಕಾಗಿತ್ತೋ ಅಷ್ಟು ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಷ್ಟು ಬಂದಿಲ್ಲ, 35 ಇಂಚು ಬರಬೇಕಾಗಿತ್ತು.

Industrial and Weavers' Co-operative Societies established under Khadi and Village Industries Board in Mandya District.

* *Q.*—44. Sri N. NANJE GOWDA (Krishnarajapet).—

Will the Government be pleased to state :—

(*a*) the number of Industrial and Weavers' Co-operative Societies that were established in Mandya District under the Khadi and Village Industries Board; together with the dates of their establishment (taluk-war information may be furnished) ;

(*b*) the amount of loan and the amount of subsidy paid to these Societies ;

(*c*) the annual turnover of the each of the above Societies and the amount of profit earned by each one of them for the last three years ;

(*d*) whether the accounts of the above Societies have been audited and if so, the particulars of the audit objections ;

(*e*) whether the concerned authorities are properly checking the stocks of the said Societies ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) and (*b*) 27—*Vide* Statement I given below.

(*c*), (*d*) and (*e*)—*Vide* Statement II given below.

STATEMENT I

Statement showing the Financial Assistance given to various Co-operative Societies in Mandya District (Talukwar) from 1957-58 to 1962-63.

Sl. No.	Name of the Society	Date of establishment	Financial assistance given by the Board	
			Loan	Grant
(1)	(2)	(3)	(4)	(5)
			Rs.	Rs.
	KRISHNARAJPET TALUK			
1.	Laxminarasimha Spinners and Weaver's Co-operative Society, P. B. Manchenahalli.	6-1-1961	7,750	6,500
2.	Sri Gajanana Potters Craft Co. operative Society Ltd., Seelanere.	20-6-1958	3,750	...
3.	Karnatak Oil Ghana Co-operative Society, K. R. Pet.	24-7-1958	1,700	800
4.	Sree Mallikarjunaswamy Ghanada Kaigarika Sahakara Sangha Ltd., Vitalpur.	27-7-1958	3,150	800
5.	Adijambhava Leather Craft Co-operative Society, Hosaholalu	20-6-1958	3,150	5,250
		Total Rs. ...	20,070	13,250
	NAGAMANGALA TALUK			
1.	Gramanathara Yenne Kushala Kaigarika Sahakara Sangha Ltd , Nagamangala.	3-5-1958	5,350	600
2.	Rural Industrial Co-operative Society, Nagamangala.	29-5-1953	10,250	6,150
		Total Rs. ...	15,600	6,750

(SRI RAMAKRISHNA HEGDE)

(1)	(2)	(3)	(4)	(5)
			Rs.	Rs. nP.
	SRIRANGAPATNA TALUK			
1.	R.I.C.S.,Sreerangapatna (Khadi Sales, Fibre and Village Oil).	29-5-1953	43,310	21,985-91
2.	Taluk Leather Industrial Co-operative Society, Sreerangapatna (Leather)	29-3-1961	3,000	...
3.	Handpounding of Paddy Industrial Co-operative Society, Madevapura (HPP)	18-3-1959	3,000	...
4.	Handpounding Rice Industrial Co-operative Society Ltd., Kodiyala	12-8-1959	20,000	49-95
	Total Rs. ...		69,310	22,035-86
	MALAVALLI TALUK			
1.	Cobblers Industrial Co-operative Society, Malavalli (Leather)	10-4-1962	...	11,970
2.	R. I. C. S., Halagur	14-3-1961	27,000	...
3.	Arkeshwara Potters Society, Mullegala, Malavalli Taluk	16-1-1958	14,500	...
4.	Gundu Brahmiah Kumbarara S. S. Ballagere (Pottery).	26-9-1961	7,940	2,900
	Total Rs. ...		49,440	14,870
	PANDAVAPURA TALUK			
1.	Gramaswavalambana Sahakara Sangha Ltd., Melkote (Khadi) (HPP) (N. E. O. & Soap) (Sales)	19-1-1957	22,900	13,394-24
2.	Yenneganada Kai S. S. Ltd., Pandavapura	19-9-1957	4,550	800-00
3.	Kumbar Kushala Kai S. S. Kumbarkoppala.	16-1-1958	2,500	...
	Total Rs. ...		29,950	14,194-24

(1)	(2)	(3)	(4)	(5)
			Rs.	Rs. nP.
	MANDYA TALUK			
1.	Kushala Kai-S. S. Ltd., Mangala (Leather)	10-2-1961	11,250	9,250
2.	Mandya Charma Kai-S. S., Mandya (Leather)	31-12-1961	3,000	...
3.	Ghana Oil Ind. Co-operative Society, Keregodu	16-1-1959	2,175	300
4.	Oil Ghana Craft Society Ltd., Mudugandur	30-7-1959	3,200	1,800
5.	Panchalingeswara Jagey and Sugar Mfg. Co-operative Society Ltd., Panhegowdanadoddi (Gur and Khandasary)	19-1-1959	10,000	...
6.	R. I. C. S., Keragodu (HPP).	27-5-1963	15,875	740-37
7.	Shree Bheereswara Kumbarara Kush. Kaigarika W. S. S. Ltd., Keragodu	16-1-1959	5,000	1,000
		Total ...	50,500	13,340-37
	MADDUR TALUK			
1.	Vividoddesha Paraspara S. S. Ltd., Sivaragudda (Stores)	25-5-1959	750	250
2.	Madduru Mannina S. S. Ltd., Madduru	10-2-1961	...	...
			750	250

(SRI RAMAKRISHNA HEGDE)

STATEMENT II.

Statement showing the information of Khadi and Village Industries Co-operative Societies in Mandya District.

Name of the Society	*Turnover*			*Net profit or loss*			*Whether audited or not*			*Audit Objection*			*Whether concerned authorities are checking stocks*
	1960-61	1961-62	1962-63	1960-61	1961-62	1962-63	1960-61	1961-62	1962-63	1960-61	1961-62	1962-63	
1	2	3	4	5	6	7	8	9	10	11	12	13	14
	Rs.	Rs.	Rs.	Rs.	Rs.	Rs.							
KRISHNARAJAPET TALUK—													
1. Laxminarasimha Spinners and Weavers C. S. P.B. Manchenahally.	29,550	Not audited.	Not audited.	Nil.	..	..	Audited	Not audited.	Not audited.	Nil.	..	..	..
2. Gajanana Potters Craft C.S., Seelanere.	559	Not audited.	Not audited.	+52	..	..	Audited.	Not audited.	Not audited.	Nil.	..	..	..
3. Karnataka Oilgana C.S., K.R. Pet.	Un-started.	2,700	2,225	..	6.50 nP. loss.	93·00 loss.	..	Audited	Audited	..	..	..	..
4. Mallikarjunaswamy Ganada Kaigarika C.S., Vittalapura.	Un-started.	Not audited.	Not audited.	..	..	..	Un-started.	Not audited.	Not audited.	..	..	..	..

5. Adijambava Leather Craft C.S., Hosaholalu.	12,511	4,881	1,497	Nil.	92.77 nP.	..	Audited	Audited	Audited	Nil.	..	..	..
NAGAMANGALA TALUK—													
1. Gramantara Kushala Kaigarika C.S., Nagamangala.	400	Not audited.	Not audited.	Loss	..	..	Audited	Not audited.	Not audited.	Nil.	..	..	..
2. R.I.C.S., Nagamangala.	30,030	69,696	Not audited.	—1,687 loss.	+3,379 profit.	Not audited.	Audited	Audited	Audited	15 30 nP. not counted in cash book.	Nil.	..	Yes
SRIRANGAPATNA TALUK—													
1. R.I.C.S., S. Patna	37,809	35,566	35,437	+2,863 37 nP. profit.	+1,982 07 nP.	—106 99 nP.	Audited	Audited	Audited	Nil.	Nil.	Nil.	Yes
2. Taluk Leather Industrial C.S., Srirangapatna.	Nil.	Nil.	Nil.	—1. 9 nP. loss.	—6. 7 nP.	—126 69 nP.	Audited	Audited	Audited	Nil.	Nil.	Nil.	Yes
3. Handpounding Paddy Indus. C.S., Mahadevapura.	Nil.	2,142	Not audited.	+19. 88 nP. profit.	+222	Not audited.		Audited.	Not audited.	Nil.	Nil.	Nil.	..
4. Handpounding Rice Indus. C.S., Kodiyala.	6,000	..	Not audited.	+90 profit.	..	..	Audited	Not audited.	Not audited.	Nil.	Nil.	Nil.	..
MALAVALLY TALUK—													
1. Cobblers' Indul. C.S., Malavally.	Nil.	Nil.	1,100	—10 less.	—10 less.	Less	Audited	Audited	Not audited.	Nil.	Nil.	Nil.	..

Name of the Society	Turnover 1960-61	Turnover 1961-62	Turnover 1962-63	Net profit or loss 1960-61	Net profit or loss 1961-62	Net profit or loss 1962-63	Whether audited or not 1960-61	Whether audited or not 1961-62	Whether audited or not 1962-63	Audit Objection 1960-61	Audit Objection 1961-62	Audit Objection 1962-63	Whether concerned authorities are checking stocks
1	2	3	4	5	6	7	8	9	10	11	12	13	14
	Rs.	Rs.	Rs.	Rs.	Rs.	Rs.							
2. R.I.C.S., Halgur ..	Amalgamated with the R.I.C.S., Malavally.												
3. Arakeswar Potters C.S., Hullegal.	10,549	20,657		+60 17 profit.	—520 loss.	—13	Audited	Audited	Audited	Nil.	Nil.	Nil.	..
4. Gundu Brahmiah Kumbar S.S., Bellegere.	No transactions.	No turnover.	1,164 26 nP.	..	..	Loss	..	Audited	Audited	Nil.	Nil.	Nil.	..
PANDAVAPURA TALUK—													
1. Gramaswavalambana S.S., Melukote.	1,305	2,454 27 nP.	Not audited.	+157	+1,506	..	Audited	Audited	Not audited.	Nil.	Nil.	Nil.	Yes
2. Yenneganada Kaigarika C.S., P. Pura.	Nil.	74 27 nP.	Not audited.	—188 23 nP.	—183 56 nP.	Not audited.	Audited	Audited	Not audited.	Nil.	Nil.	Not audited.	No. 1
3. Kumbarkushala Kaigarika C.S., Kumbarkoppal.	Information is not available as there is no audit reports in this society.												
MANDYA TALUK.—													
1. Mangala Kushal Kaigarika Leather C. S.	Not audited.	Not audited.	Not audited.	..	..	..	Not audited.	Not audited.	Not audited.	..	..	..	..

Mandya Grama Kaigarika Leather C. S.	..	342	6,764	..	..	..	No transaction.	Audited	Audited	..	..	Nil	Nil
3. Oil-gana Industrial Co-operative Society, Keragodu.	No transaction.	272	863	..	+25·99	26	No transaction.	Audited	Audited	..	500‡	..	..
4. Oil-gana C.S., Mudagandur.	14,118	92	Not audited.	—70	+22	Not audited.	Audited	Audited	Not audited.	Nil	Nil	Nil	..
5. Panchalingeswara Jaggery and Sugar C.S., Panchegowdanadoddi.	24,129	16,832	13,012	..	+112 profit.	Audited	Audited	Audited	..	Nil	Nil	Nil	..
6. R.I.C.S., Kergodu	Amalgamated with R. I. C. S., Mandya.												
7. Beereswara Kumbar Kaigarika C. S., Keregodu.	6,516	4,791	450	+22	+32	Nil	Audited	Audited	Audited	..	..	..	..
ADDUR TALUK.—													
1. Vividoddesha Paraspara S. S., Shivaragudda.	36,298	26,236	Not audited.	+198·4	+440	Not audited.	Audited	Audited	Not audited.	..	..	..	..
2. Maddur Mannina S. S.	Not audited.	Not audited.	Not audited.	..	..	..	Not audited.	Not audited.	Not audited.	..	..	..	..

‡ To be recovered from Sri Seetharam being the Honorarium drawn without proper authority.

ಶ್ರೀ ಎನ್. ನಂಜೇಗೌಡ.—ರಿಮಾರ್ಕ್ಸ್‌ನಲ್ಲಿ ಆಡಿಟ್ ಆಗಿಲ್ಲವೆಂದು ಕೆಲವಕ್ಕೆ ತಿಳಿಸಲಾಗಿದೆ, ಅದರ ಉದ್ದೇಶವೇನು ? ಉತ್ಪತ್ತಿಯ ತಪಶೀಲೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಡಿಟ್ ಯಾವುದು ಆಗಿಲ್ಲವೋ ಅದರ ಬಗ್ಗೆ ರಿಮಾರ್ಕ್ಸ್ ಪ್ರಶ್ನೆ ಉದ್ಭವವಾಗುವುದಿಲ್ಲ. ಬಹಳ ಸೊಸೈಟಿಗಳಲ್ಲಿ 3-4 ವರ್ಷಗಳಿಂದ ಆಡಿಟ್ಟಾಗಿಲ್ಲ, ಅದಕ್ಕೆ ಸಾಕಷ್ಟು ಸಿಬ್ಬಂದಿ ಇರಲಿಲ್ಲ, ಹೊಸದಾಗಿ ನೇಮಿಸಿದ್ದೇವೆ, 3-4 ತಿಂಗಳಲ್ಲಿ ಎಲ್ಲಾ ಕಡೆ ಆಡಿಟ್ ಮಾಡಿಸ ಬೇಕೆಂದಿದ್ದೇವೆ.

ಶ್ರೀ ಎನ್. ನಂಜೇಗೌಡ.—ಆದಿಜಾಂಬವ ಚರ್ಮದ ಕುಶಲ ಕೈಗಾರಿಕಾ ಸಹಕಾರ ಸಂಘ, ಎಲ್ಲಿದೆ ? ಅದರ ಆದಾಯವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮಗೆ ತಿಳಿದುಬಂದಿರುವ ಪ್ರಕಾರ ಅದು ಹೊಸಹೊಳಲನಲ್ಲಿದೆ, ಅದರ ಟರ್ನ್ ಓವರ್ 13 ಸಾವಿರ ಚಿಲ್ಲರೆ ರೂಪಾಯಿಗಳು ಎಂದು ಮುಂತಾಗಿ 3 ವರ್ಷದ್ದನ್ನು ಕೊಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಈಗ ಹೇಗೆ ಹೇಳಲು ಸಾಧ್ಯ ? ಆಡಿಟ್ ಆದಮೇಲೆ ಹೇಳಬಹುದು.

ಶ್ರೀ ಬಿ. ಚನ್ನಬೈರೇಗೌಡ.—ಸರ್ಕಾರ ಹಣ ಕೊಟ್ಟಮೇಲೆ ಆಡಿಟ್ ಮಾಡಿಸುವ ಜವಾಬ್ದಾರಿ ಸರ್ಕಾರದ್ದೇ ಅಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಸರ್ಕಾರದ ಜವಾಬ್ದಾರಿ ಆಡಿಟ್ ಮಾಡಿಸುವುದು ಮಾತ್ರ. ಅದಕ್ಕೆ ತೊಂದರೆಯಾಗಿತ್ತು, ಸಾಕಷ್ಟು ಸಿಬ್ಬಂದಿ ಇರಲಿಲ್ಲ. ಹಣ ಸರಿಯಾಗಿ ಉಪಯೋಗ ವಾಗಿದೆಯೆ, ಇಲ್ಲವೆ ಎಂಬುದನ್ನು ಖಾದಿ ಬೋರ್ಡಿನವರು ನೋಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಮದ್ದೂರು ಮಣ್ಣಿನ ಸಹಕಾರ ಸಂಘಕ್ಕೆ ಎಷ್ಟು ಹಣ ಕೊಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದಕ್ಕೆ ಸಾಲವಾಗಲಿ ಅಥವಾ ಗ್ರ್ಯಾಂಟಾಗಲಿ ಏನನ್ನೂ ಕೊಟ್ಟಿಲ್ಲ.

ಶ್ರೀ ಎನ್. ನಂಜೇಗೌಡ.—ಮೋಚಿಗಳ ಕೈಗಾರಿಕಾ ಸಹಕಾರ ಸಂಘ, ಮಳವಳ್ಳಿ—ಇದಕ್ಕೆ 11,970 ರೂಪಾಯಿಗಳ ಗ್ರ್ಯಾಂಟನ್ನು ಕೊಟ್ಟಿದ್ದೀರಿ. ಆದರೆ ಷೇರೇ ಇಲ್ಲ. ಕಾರಣ ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಲ ಮತ್ತು ಗ್ರ್ಯಾಂಟಿನ ವಿಚಾರ ಮಾತ್ರ ಕೇಳಿದ್ದರಿಂದ ಅದನ್ನು ಮಾತ್ರ ಕೊಟ್ಟಿದೆ, ಬೇಕಾದರೆ ತಾವು ಕೇಳುವ ಮಾಹಿತಿಯನ್ನು ಒದಗಿಸಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಡಿಟ್ ಆಗದೆ ದುರುಪಯೋಗವಾಗಿದೆಯೆ, ಇಲ್ಲವೆ ಎಂಬುದನ್ನು ಹೇಗೆ ಹೇಳಲು ಸಾಧ್ಯ ಎಂದು ಮಂತ್ರಿಗಳು ಹೇಳಿದರು. ಹಾಗಾದರೆ ಖಾದಿಬೋರ್ಡಿಗೆ ಸಂಬಂಧಪಟ್ಟಹಾಗೆ ಹಣ ದುರುಪಯೋಗವಾಗಿದೆಯೆ ಎಂಬುದನ್ನು ಯಾರು ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಹೇಳಿದ್ದು ಅವರಿಗೆ ಅರ್ಥವಾಗಿಲ್ಲ. ನಾವು ಸಾಲ ಅಥವಾ ಸಬ್ಸಿಡಿ ಖಾದಿಬೋರ್ಡಿಗೆ ಕೊಡುತ್ತೇವೆ. ಸೊಸೈಟಿ ಸರಿಯಾಗಿ ಕೆಲಸಮಾಡುತ್ತಿದೆಯೆ, ಇಲ್ಲವೆ ಎಂದು ನೋಡತಕ್ಕ ಜವಾಬ್ದಾರಿ ಖಾದಿ ಬೋರ್ಡಿನಮೇಲಿದೆ. ಆದರೆ ಆಡಿಟ್ ಆದಮೇಲೆ ದುರುಪಯೋಗವಾಗಿರುವುದು ಕಂಡುಬಂದರೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ವಿ. ಗೌಡ.—ಕೊಟ್ಟಿರುವ ಅಂಕಿಅಂಶಗಳನ್ನು ವಿಚಾರಮಾಡುವುದಾದರೆ ಅನೇಕ ಸಹಕಾರ ಸಂಘಗಳಲ್ಲಿ ಲೆಕ್ಕ ಆಡಿಟ್ಟಾಗಿಲ್ಲ, ಪ್ರತಿ ವರ್ಷ ಟರ್ನ್ ಓವರ್ ಕಡಮೆಯಾಗುತ್ತಿದೆ ಎಂದು ಕಂಡುಬರುತ್ತದೆ. ಆದಿಜಾಂಬವ ಚರ್ಮದ ಕುಶಲ ಕೈಗಾರಿಕಾ ಸಹಕಾರ ಸಂಘದ ಟರ್ನ್ ಓವರ್ ವರ್ಷ ವರ್ಷ ಕಡಮೆಯಾಗುತ್ತಿದೆ. ಹೀಗೆ ವಿಚಾರಮಾಡಿದರೆ ಅನೇಕ ಸಹಕಾರ ಸಂಘಗಳ ಆಡಳಿತ ಸರಿಯಾಗಿ ನಡೆಯದಿರುವುದು ವ್ಯಕ್ತವಾಗುತ್ತದೆಯಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಯಾವ ಅಭಿಪ್ರಾಯವನ್ನು ಬೇಕಾದರೂ ವ್ಯಕ್ತ ಗೊಳಿಸಬಹುದು.

ಶ್ರೀ ಬಿ. ಎರ್. ಗೌಡ.—ಕಾಯಿದೆಯ ಪ್ರಕಾರ ಪ್ರತಿಯೊಂದು ಸಹಕಾರ ಸಂಘದ ಲೆಕ್ಕವೂ ಆಡಿಟ್ಟಾಗಬೇಕು. ಅದಾಗದೆ ಬಹಳ ನಿಧಾನವಾದರೆ ಯಾರಿಗಾದರೂ ಅವುಗಳ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯ ಬರುವುದೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಿಬ್ಬಂದಿ ಸಾಕಷ್ಟಿರಲಿಲ್ಲ, ಈಗ ನೇಮಿಸಲಾಗಿದೆ, ಆಡಿಟಾಗು ತ್ತದೆ. ಸ್ವಲ್ಪಮಟ್ಟಿಗೆ ಲೋಪವಿರಬಹುದು. ಮುಂದೆ ಆಡಿಟ್ ಬೇಗ ಆಗಲು ಅವಕಾಶ ಕಲ್ಪಿಸಲಾಗಿದೆ.

1-00 P.M.

ಶ್ರೀ ಜೆ. ದೇವಯ್ಯ.—ಮಂಡ್ಯ ತಾಲ್ಲೂಕು ಕೆರಗೋಡು ಗ್ರಾಮ ಕೈಗಾರಿಕಾ ಸಹಕಾರ ಸಂಘಕ್ಕಾಗಿ 15,875 ರೂಪಾಯಿಗಳನ್ನು ಯಾವ ಬಾಬಿಗೋಸ್ಕರ ಕೊಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಕಾರಣಕ್ಕೋಸ್ಕರ ಸೊಸೈಟಿಯನ್ನು ಸ್ಥಾಪನೆ ಮಾಡಲಾಗಿದೆಯೋ ಅದಕ್ಕಾಗಿ ಅಲ್ಲಿ ಕೊಡಲಾಗಿದೆ.

Sri S. SIVAPPA.—Are there any categories of societies which have been exempted by Government from the purview of audit ?

Sri RAMAKRISHNA HEGDE.—The accounts of every society or institution that is registered under the Mysore Co-operative Societies Act are bound to be audited.

Sri S. SIVAPPA.—Why is discretion being allowed in auditing the accounts of certain societies, excluding certain other societies ?

Mr. SPEAKER.—That is a hypothetical question.

ಶ್ರೀ ಕೆ. ಲಕ್ಕಪ್ಪ.—ಪ್ರಶ್ನೆಗೆ ಸಂಬಂಧಪಟ್ಟಂತೆ ಕೊಟ್ಟಿರುವ ತಃಖ್ತೆಯಲ್ಲಿ 'ಅಧಿಕೃತವಾದ ಆಧಾರವಿಲ್ಲದೆ ಪಡೆದಿರುವ ಗೌರವ ಸಂಭಾವನೆಯು ಹೆಚ್ಚಾದ 500 ರೂಪಾಯಿಗಳನ್ನು ಶ್ರೀ ಸೀತಾರಾಂರವರಿಂದ ವಾಪಸ್ಸು ಪಡೆಯಬೇಕಾಗಿದೆ.' 'ಎನ್ನುವ ಒಂದು ನಿದರ್ಶನವನ್ನು ಮಾತ್ರ ಕೊಡಲಾಗಿದೆ. ಇಂತಹ 'ಸೀತಾರಾಂ' ಮಾತಿರುವಂತಹ ಇನ್ನು ಎಷ್ಟು ನಿದರ್ಶನಗಳು ಸರಕಾರದ ಗಮನಕ್ಕೆ ಬಂದಿವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮಗೆ ತಿಳಿದುಬಂದ ಒಂದು ನಿದರ್ಶನವನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಇದಕ್ಕಿಂತ ಹೆಚ್ಚಿನ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ.

Sri G. V. GOWDA.—Is there anything to show that the Khadi Board is satisfied that the amounts of loan and subsidy given to these societies are spent for the purposes for which they were given and whether the Khadi Board has received the utilisation certificates ?

Sri RAMAKRISHNA HEGDE.—The Khadi Board takes all precautions and necessary measures to see that the amounts given to these societies are properly spent.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಖಾದೀ ಬೋರ್ಡಿನವರು ಈಚೆಗೆ ಹೊಸದಾಗಿ ಲೆಕ್ಕ ತಯಾರು ಮಾಡಿರುವ ನಾಲ್ಕು ಕೋಟಿ ರೂಪಾಯಿಗಳ ಲೆಕ್ಕದಲ್ಲಿ ಇದರಲ್ಲಿ ಹೇಳಿರುವಂತೆ ಇರುವ ನಾಲ್ಕು ಲಕ್ಷ ರೂಪಾಯಿಗಳನ್ನು ಸೇರಿಸಲಾಗಿದೆಯೇ ?

Sri RAMAKRISHNA HEGDE.—I cannot answer according to the presumption of the Hon'ble Member.

ಶ್ರೀ ಎಚ್. ಆರ್. ಕೇಶವಮೂರ್ತಿ.—ಏಳು ತಾಲ್ಲೂಕುಗಳಲ್ಲಿರುವ ಸುಮಾರು 25 ಸೊಸೈಟಿಗಳ ಲೆಕ್ಕಪತ್ರಗಳನ್ನು ಮೂರು ವರ್ಷಗಳಲ್ಲಿ ಆಡಿಟ್ಟು ಮಾಡಿದ್ದರೂ, ದೊಡ್ಡ ವ್ಯವಹಾರ ಮಾಡುತ್ತಿರುವ ಸೊಸೈಟಿಗಳ ಲೆಕ್ಕ ಪತ್ರಗಳನ್ನು ಈಗಲೇ ಆಡಿಟ್ಟು ಮಾಡುವುದು ಅಗತ್ಯವಿಲ್ಲ ಎಂದು ಸರಕಾರ ಸೂಚನೆಗಳನ್ನೇನಾದರೂ ಕಳುಹಿಸಿದೆಯೇ ?

Mr. SPEAKER.—The supplementary is disallowed.

Amount spent for the erection of new types of Name Boards and Caution Boards on P.W.D. Roads in Bangalore P. W. D Circle.

* *Q.*—56. Sri ANDANAIAH (Kunigal).—

Will the Government be pleased to state :

(*a*) the amount spent for the erection of new type of Name Boards and Caution Boards on the P. W. D. road in Bangalore P. W. D. Circle during the last three years ;

(*b*) the amount spent so far towards the repairs for the above Boards ?

A.—**Sri G. B. SHANKARA RAO** (Parliamentary Secretary to the Minister for Public Works).—

(*a*) Rs. 36,935.
(*b*) Rs. 6,684.

ಶ್ರೀ ಅಂದಾನಯ್ಯ.—ಹೊಸ ನಮೂನೆಯ ಬೋರ್ಡುಗಳನ್ನು ತಯಾರು ಮಾಡಲು ಇದ್ದಂತಹ ಅವಶ್ಯಕತೆಯೇನು ? ಅಲ್ಲದೆ ಹೊಸ ಬೋರ್ಡುಗಳನ್ನು ಬರೆಸಿದ್ದರೂ ಅವುಗಳನ್ನು ಹಳೆಯ ಬೋರ್ಡುಗಳಿದ್ದ ಜಾಗದಲ್ಲೇ ರಿಪೇರಿ ಮಾಡಿರುವಂತೆ ತೋರುತ್ತದಲ್ಲವೇ ?

Sri G. B. SHANKARA RAO.—These Name Boards are there just to indicate curves, narrow bridges and branch off roads etc.

ಶ್ರೀ ಎಸ್. ಗೋಪಾಲ ಗೌಡ.—ರಸ್ತೆಗಳಲ್ಲಿ ಹೋಗುವಾಗ ಕೆಲವು ಕಡೆಗಳಲ್ಲಿ 'Thank you' ಎಂದು ಬರೆದಿದ್ದಾರೆ. ಯಾರಿಗಾಗಿ ಇದು ? (ನಗು)

(*No reply.*)

ಶ್ರೀ ಎಸ್. ಗೋಪಾಲ ಗೌಡ.—ಬೋರ್ಡುಗಳನ್ನು ಬರೆಯುವಾಗ ಕನ್ನಡದಲ್ಲಿಯೇ ಬರೆಸಬೇಕು ಎನ್ನುವ ನಿಯಮವೇನಾದರೂ ಮಾಡಲಾಗಿದೆಯೋ ?

(ಉತ್ತರವಿಲ್ಲ.)

ಶ್ರೀ ಅಂಗಡಿ ಚನ್ನಬಸಪ್ಪ.—ಆರುಸಾವಿರದ ಆರುನೂರ ಎಂಭತ್ತನಾಲ್ಕು ರೂಪಾಯಿಗಳನ್ನು ಏತಕ್ಕಾಗಿ ಇಲ್ಲಿ ಖರ್ಚುಮಾಡಲಾಯಿತು ?

Sri G. B. SHANKARA RAO.—If damage is caused, it is necessary to carry out repairs. So it is spent.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹಿಂದೆ ಬೋರ್ಡುಗಳನ್ನು ಗ್ರಾಮ ಪಂಚಾಯಿತಿಯವರು ಕಲ್ಲಿನಲ್ಲಿ ಬರೆಸಿ ಅದರಲ್ಲಿ ಕೆತ್ತಿಸಿ ಹಾಕಿಡುತ್ತಿದ್ದರು. ಅದರಲ್ಲಿ ಊರಿನ ಹೆಸರು ಮತ್ತು ಮೈಲಿಗಳ ಹೆಸರು ಇವುಗಳ ವಿವರಗಳೆಲ್ಲ ಇರುತ್ತಿದ್ದುವು. ಹೀಗಿದ್ದರೂ ಈಗ ಹೊಸದಾಗಿ ಬೋರ್ಡುಗಳನ್ನು ಬರೆಸುವ ಅವಶ್ಯಕತೆಯಾದರೂ ಏನಿತ್ತು ?

Sri G. B. SHANKARA RAO.—Recently, roads have been taken over by the P. W. D. and it is the responsibility of the road authorities to provide boards. The boards provided by the panchayats were not scientific. Just to bring them to the scientific standard, we have up up new boards.

ಶ್ರೀ ವಿ. ಎಂ. ದೇವ್.—ಇಂತಹ ಬೋರ್ಡುಗಳನ್ನು ಬರೆಸಿ ಹಾಕಿಸಿದ ಮೇಲೆ ಹಿಂದೆ ಒಂದು ವರ್ಷದಲ್ಲಿ ಎಷ್ಟು ಅಪಘಾತಗಳಾದುವು ಮತ್ತು ಅದರಿಂದೀಚೆಗೆ ಬೋರ್ಡುಗಳಿಲ್ಲದಿರುವುದರಿಂದ ಎಷ್ಟು ಅಪಘಾತಗಳು ಆದುವು ಎನ್ನುವ ವಿವರಗಳನ್ನು ಕೊಡಲಾಗುತ್ತದೆಯೇ ?

Sri G. B. SHANKARA RAO.—Those details are not with me.

ಶ್ರೀ ಕೆ. ಲಕ್ಕಪ್ಪ.—ಈ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೆ ಬದಲು ಪೀಸ್ ವರ್ಕಿನ ಮೇಲೆ ಕೊಡುವುದು ಸರಿಯಾಗಿರುತ್ತದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಉತ್ತರದಲ್ಲಿ ಸೂಚಿಸಿರುವ 36 ಸಾವಿರ ರೂಪಾಯಿಗಳಷ್ಟು ಹಣವನ್ನು ಕಂಟ್ರಾಕ್ಟರುಗಳಿಗೆ ಕೊಡುತ್ತಿದ್ದಾರೆ ಎನ್ನುವ ಅರ್ಥ ಬರುವಂತೆ ಮಾನ್ಯ ಸದಸ್ಯರುಗಳು ಇಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇಲ್ಲಿರುವ ಏಳು ಡಿವಿಜನ್ನುಗಳ ವ್ಯಾಪ್ತಿಯೊಳಗೆ ಎಷ್ಟು ದೊಡ್ಡ ಪ್ರಮಾಣದ ರೋಡುಗಳು ಬರುತ್ತವೆ ಎನ್ನುವುದನ್ನು ನೋಡುವುದಾದರೆ ಬಹುಶಃ ಬೇರೆಲ್ಲಿಯೂ ಇಷ್ಟು ದೊಡ್ಡ ಪ್ರಮಾಣದ ರಸ್ತೆಗಳು ಬರುವುದಿಲ್ಲ. ಇದಕ್ಕಾಗಿ ಎಲ್ಲ ಕಡೆಯಲ್ಲಿಯೂ ಟ್ರಾಫಿಕ್ ನಿಯಮಗಳಿಗನುಸಾರವಾಗಿ ಸೈನು ಬೋರ್ಡುಗಳನ್ನು ಮಾಡಿಸಬೇಕಾಗಿ ಬರುತ್ತದೆ ಇದನ್ನೆಲ್ಲ ಇಲಾಖೆಯಲ್ಲಿರುವವರೇ ಎಷ್ಟೋ ಕಡೆಗಳಲ್ಲಿ ದುರಸ್ತು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಬೇರೆಯವರಿಂದ ಮಾಡಿಸಬೇಕಾಗುತ್ತದೆ. ಅಲ್ಲದೆ ನಮ್ಮಲ್ಲೇ ಮೇಂಟೆನೆನ್ಸ್ ಗ್ರಾಂಟಿಗಾಗಿ ಪ್ರತಿ ವರ್ಷ ಇಷ್ಟು ಹಣ ಎಂದು ಒದಗಿಸಲಾಗಿರುತ್ತದೆ. ಅದರಂತೆ ಪ್ರತಿ ವರ್ಷವೂ ರಿಪೇರಿ ಕೆಲಸಗಳು ಇಲಾಖೆಯ ಮೂಲಕವೇ ನಡೆಯುತ್ತಿರುತ್ತವೆ. ಇದಕ್ಕಾಗಿ ಮೂರು ವರ್ಷಗಳಿಗಾಗಿ 36,935 ರೂಪಾಯಿಗಳನ್ನು ಒದಗಿಸಲಾಗಿತ್ತು. ಇದರಲ್ಲಿ ಇದುವರೆಗೆ 6,684 ರೂಪಾಯಿಗಳಷ್ಟು ಮಾತ್ರ ವೆಚ್ಚವಾಗಿದೆ. ಇದನ್ನು ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೋ

ಸ್ಕರ ಖರ್ಚುಮಾಡುತ್ತಿಲ್ಲ. ನಮ್ಮ ಇಲಾಖೆಯಲ್ಲಿ ಮೇನ್‌ಟೆನೆನ್ಸ್ ಸಲುವಾಗಿ ಪ್ರತ್ಯೇಕವಾಗಿ ಹಣವನ್ನು ಇಟ್ಟುಕೊಂಡು ನಮ್ಮ ಇಲಾಖೆಯವರ ಮೂಲಕವೇ ಕೆಲಸಗಳನ್ನು ಮಾಡಲಾಗುತ್ತಿದೆ. ಕಂಟ್ರಾಕ್ಟರುಗಳಿಗೆ ಕೊಡುವ ಮಾತೇನು ಇದರಲ್ಲಿ ಬರುತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಟ್ಟಿಗೆ ಗೋಡೆಗೆ ಬದಲಾಗಿ ಕಲ್ಲಿನ ಗೋಡೆಯನ್ನು ಕಟ್ಟಿಸಲು ಪ್ರಯತ್ನ ಮಾಡುತ್ತೀರಾ ?

Sri VEERENDRA PATIL.—That is a suggestion for action.

Payment of the teaching and management grants to the Junior Basic and Higher Elementary School of Kidiyur in South Kanara District.

* *Q*.—65. Sri B. BHASKARA SHETTY (Kaup).—

Will the Government be pleased to state:—

(*a*) the period for which the teaching and management grants are pending for payment to the mangement of Kidiyur Aided Junior Basic and Higher Elementary School, Udipi Taluk in South Kanara District;

(*b*) if withheld, what are the reasons for withholding the grants to that institution?

A.—Sri S. R. KANTHI (Minister for Education).—

(*a*) (i) Maintenance grant for 1959, 1960 and 1961

(ii) Part of the teaching grant for 1961.

(*b*) For the wrongfull termination of services of a teacher.

ಶ್ರೀ ಬಿ. ಭಾಸ್ಕರಶೆಟ್ಟಿ.—ಉಪಾಧ್ಯಾಯರೊಬ್ಬರನ್ನು ಕೆಲಸದಿಂದ ಅಕ್ರಮವಾಗಿ ತೆಗೆದುಹಾಕಿದ್ದರಕಾರಣ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಡಿ. ಪಿ. ಐ. ಮತ್ತು ಪರೀಕ್ಷಾಧಿಕಾರಿಗಳು ಅಪ್ಪಣೆಕೊಟ್ಟ ಮೂರುತಿಂಗಳ ನಂತರ ಅವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ ಎಂಬ ಅಂಶ ತಮಗೆ ಗೊತ್ತಿದೆಯೇ?

† ಶ್ರೀ ಎಸ್. ಆರ್. ಕಂಠಿ.—ಅವರು ತಮ್ಮ ಟರ್ಮಿನೇಷನ್ ಬಗ್ಗೆ ಡಿ. ಇ. ಓ. ಗೆ ಅಪೀಲ್ ಹಾಕಿದ್ದರು. ಅವರು ಆ ಟರ್ಮಿನೇಷನ್ನನು ರಿಜೆಕ್ಟ್ ಮಾಡಿ ಅವರನ್ನು ಕೆಲಸಕ್ಕೆ ಮತ್ತೆ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದ್ದರು. ಅನಂತರ ಪಾಠಶಾಲೆಯವರು ಡಿ. ಪಿ. ಐ. ಗೆ ಅಪೀಲ್ ಹಾಕಿದರು ಅವರು ಇದರಲ್ಲಿ ತಾವು ಇಂಟರೆಫಿಯರ್ ಮಾಡುವುದಿಲ್ಲ ಎಂದು ಹೇಳಿದರು. ಈಗ ಸಿ.ಪಿ.ಸಿ. 85ನೆಯ ಕಲಂ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದಾರೆ. ಬಹುಶಃ ಅವರು ಕೋರ್ಟಿಗೆ ಹೋಗಬಹುದೆಂದು ಕಾಣುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ತಾರೀಖು 28-8-58ರಲ್ಲಿ ಆ ಉಪಾಧ್ಯಾಯರನ್ನು ಕೆಲಸದಿಂದ ತೆಗೆಯಬಹುದೆಂದು ಇಲಾಖೆಯವರು ಅಭಿಪ್ರಾಯ ಕೊಟ್ಟಿರಲಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ನನಗೆ ಇಲ್ಲಿ ಒದಗಿಸಿರತಕ್ಕ ಮಾಹಿತಿಯ ಪ್ರಕಾರ ಅವರು ಅದನ್ನು ರಿಜೆಕ್ಟ್ ಮಾಡಿದ್ದರು. ಎಂದು ಹೇಳಿದೆ.

Sri G. V. GOWDA.—Assuming that the termination of the services is wrongful is there anythihg provided in the Grant-in-Aid Rules for withholding the grant payable to the institution?

ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಆ ರೀತಿ ವಿವರ ಇದೆ.

Sri G. V. GOWDA.—I want a categorical answer from the Government.

ಶ್ರೀ ಎಸ್. ಆರ್. ಕಂಠಿ.—ಅವರ ಸರ್ವಿಸನ್ನು ನೋಡಿಕೊಂಡು ಸರ್ಕಾರದವರು ರೂಲ್ಸ್ ಪ್ರಕಾರ ಮಾಡುತ್ತಾರೆ.

ಶ್ರೀ ಬಿ. ಎಲ್. ಗೌಡ.—ಈಗ ಅವರು ಯಾರನ್ನು ಕೆಲಸದಿಂದ ತೆಗೆದುಹಾಕಿದ್ದಾರೋ ಅವರು ಐ. ಪಿ. ಸಿ. 302ರ ಪ್ರಕಾರ ಒಂದುವರ್ಷ ಸಜಾ ಮತ್ತು ಜುಲ್ಮಾನೆಗಳನ್ನು ತೆತ್ತಿರತಕ್ಕವರಾಗಿದ್ದಾರೆಂಬ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಈಗ ಕೆಲಸದಿಂದ ಯಾರನ್ನು ತೆಗೆದುಹಾಕಲಾಗಿದೆಯೋ ಅವರು 2-2-45ರಲ್ಲಿ ಕೆಲಸಕ್ಕೆ ಸೇರಿದರು. ಅವರಿಗೆ 1946ರಲ್ಲಿ ಕೆಲಸ ಖಾಯಂ ಆಯಿತು. ಮತ್ತೆ 1956ರಲ್ಲಿ ಅವರಿಗೆ ಡಿಮೋಟ್ ಆಗಿ ಮತ್ತೆ ಅದೇವರ್ಷ ಕೆಲಸದಿಂದ ಟರ್ಮಿನೇಟ್ ಆಗಿದೆ.

Sri S. SIVAPPA.—Since the whole matter is before the Court and *sub judice* why not Government give the grant till the whole question is decided by the court?

ಶ್ರೀ ಎಸ್. ಆರ್. ಕಂಠಿ.—ಅವರೀಗ ಸಿ. ಪಿ. ಸಿ. 85ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. It is not *sub judice.*

Paddy hullers working in Channapatna Town and Taluk.

**Q.*—75. Sri B. J. LINGE GOWDA (Channapatna).—

Will the Government be pleased to state :—

(*a*) the number of paddy hullers actually working in Channapatna Town and Taluk and how many of them are licensed.

(*b*) what action has been taken by Government against the owners of hullers commissioned without licences?

A.—Sri M. V. KRISHNAPPA (Minister for Revenue).—

(*a*)	*Channapatna Town*	*Channapatna Taluk*
(i) Number of paddy huller actually working.	12	30
(ii) Number. of paddy hullers licensed.	2	10

(*b*) Action is being taken under Section 13 of the Rice Milling Industry (Regulation) Act, 1858 against the concerned persons for contravention of the Act and Rules made thereunder.

ಶ್ರೀ ಬಿ. ಜೆ. ಲಿಂಗೇಗೌಡ.— ಈ ತಾಲ್ಲೂಕಿನಲ್ಲಿ ಒಟ್ಟು 42 ಗಿರಣಿಗಳು ಕೆಲಸಮಾಡುತ್ತಿವೆ. ಆ ಪೈಕಿ 12ಕ್ಕೆ ಮಾತ್ರ ಲೈಸೆನ್ಸ್ ಕೊಟ್ಟು ಇನ್ನುಳಿದವುಗಳಿಗೆ ಏಕೆ ಲೈಸೆನ್ಸ್ ಕೊಡಲಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಪೈಕಿ 15 ಜನರ ವಿಚಾರ ಕರೆಸ್‌ಪಾಂಡೆನ್ಸಿನಲ್ಲಿದೆ. ಇನ್ನುಳಿದವರ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಜೆ. ಲಿಂಗೇಗೌಡ.—ಸರ್ಕಾರದವರು ಇತ್ತೀಚೆಗೆ ಪ್ರಾರಂಭಮಾಡಿರತಕ್ಕವರಿಗೆ ಲೈಸೆನ್ಸ್ ಕೊಟ್ಟಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಇವುಗಳಿಗೆ ಲೈಸೆನ್ಸ್ ಪಡೆಯಬೇಕಾಗಿರಲಿಲ್ಲ. ಇತ್ತೀಚೆಗೆ ಇಂಡಿಯಾಸರ್ಕಾರದವರ ಆಜ್ಞೆಯಪ್ರಕಾರ ಈ ಗಿರಣಿಗಳು ಲೈಸೆನ್ಸ್‌ನ್ನು ಪಡೆಯಬೇಕಾಗಿದೆ. ಈಗ ಪ್ರಾರಂಭಮಾಡಿರತಕ್ಕವರಿಗೂ ಕೆಲವನ್ನು ಕೂಡಲೆ ನಿಲ್ಲಿಸಬೇಕೆಂದು ಹೇಳಿದ್ದೇವೆ. ಅವರು ಹಾಗೆ ನಿಲ್ಲಿಸದಿದ್ದರೆ ಅವರಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—1963ರಲ್ಲಿ ಪ್ರಾರಂಭಮಾಡಿರತಕ್ಕವರಿಗೆ ಲೈಸೆನ್ಸ್ ಕೊಟ್ಟಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಮೇಲೆ ಕೇಸನ್ನು ಬುಕ್ ಮಾಡಿದ್ದಾರೆ.

(ಶಾಖಾ ಗ್ರಂಥಾಲಯ) 4808
ಪ್ರಾಪ್ತಿ ಕ್ರಮಾಂಕ Accession No. (B) 21
ದಿನಾಂಕ Date

Sri V. S. PATIL.—May I know this Rice-milling Industries Regulation has been brought into force at all because it must be everybody's concern? Why do the Government restrict it to rice-milling industry?

Sri M. V. KRISHNAPPA.—This Act has been passed by the Government of India. There was a committee appointed by the Centre to encourage hand-pounding industry.

Mr. SPEAKER.—Vitamins are better preserved by handpounding.

Sri M. V. KRISHNAPPA.—That was the main reason to protect the nutritive food that is being wasted in the polishing of the rice in the mills. The Government wanted to have control over them and that is why the Act was brought into force.

Metalling of Road leading to Dadinayakana Doddi Jathre in Malur Taluk.

*Q.—31. Sri S. V. RAME GOWDA (Malur).—

Will the Government be pleased to state :—

(*a*) whether they are aware that 3 buses are plying on the ten mile road leading to Dadinayakana Doddi Jathre in Malur Taluk.

(*b*) if so, whether they would take over the above road to the Public Works Department and metal the same?

A.—Sri R. M. PATIL, (Minister for Home).—

(*a*) Yes.

(*b*) This will be considered.

ಶ್ರೀ ಎಸ್. ವಿ. ರಾಮೇಗೌಡ.—ವಿಷಯ ಪರ್ಯಾಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಹೇಗೆ ಎಷ್ಟು ದಿವಸಗಳ ಪರ್ಯಾಲೋಚನೆಯಲ್ಲಿದೆ? ಇದನ್ನು ಯಾವಾಗ ಹಾಕಿಸಿ ಕೊಡುತ್ತೀರಿ?

ಶ್ರೀ ಎಂ. ಆರ್. ಪಾಟೀಲ್.—ಇದನ್ನು ಸ್ಟೇಟ್‌ಫಂಡ್ ರಸ್ತೆಮಾಡಬೇಕೆಂದು ವಿಚಾರವಿದೆ. ಅದಕ್ಕೆ ಅವಶ್ಯಕವಾದ ಹಣ ಯಾವಾಗ ಅವೇಲಬಲ್ ಆಗುತ್ತದೆಯೋ ಆಗ ಮಾಡುತ್ತಾರೆ.

Mariamma Temples that are functioning under the H. R. and C. Endowments in Kaup Town of South Kanara District.

*Q.—74. Sri B. BHASKAR SHETTY (Kaup).—

Will the Government be pleased to state :—

(*a*) the number of Mariamma temples that are functioning under the Hindu Religious and Charitable Endowments in Kaup Town of South Kanara District;

(*b*) the total amount of income of each Mariamma temples for the last three years;

(SRI B. BHASKAR SHETTY)

(c) whether they have received the yearly audited statement of accounts of each temples up to Fasli 1372 ;

(d) what are the assets in immovable and movable properties of these temples ;

(e) what are the total loans given by these Mariamma temples to other temples and charitable institutions ;

(f) if so, whether proper sanctions where obtained for the grant of such loans from competent authorities ?

A.—SRI M. V. KRISHNAPPA (Minister for Revenue).—

(a) Three.

(b) (1) Hale Mariamma temple, Kaup.

Fasli	...	*Income*
		Rs. nP.
1370	...	10,385-00
1371	...	15,123-00
1372	...	17,389-00

(2) Sri Hosa Mariamma temple, Kaup.

		Rs. nP.
1370	...	20,792-00
1371	...	31,611-00
1372	...	36,841-00

(3) Sri Third Mariamma temple, Uliyargoli village.

		Rs. np.
1370	...	3,946-00
1371	...	3,946-00
1372	...	3,946-00

(c) (1) The accounts of Hale Mariayamma temple have been audited and audit reports received up to Fasli 1963.

(2) The accounts of Shri Hosa Mariamma temple have been audited and audit reports received up to Fasli 1367.

(3) The accounts of Shri Third Mariamma temple have been audited and audit reports received up to Fasli 1371.

(d) *Name of the temple.*	*Immovable.*	*Movable Gold-Silver.*
1. Shri Hale Mariyamma temple.	13,000,00	11,866-17
2. Shri Hosa Mariayamma temple.	38,000,00	96,000-00
3. Shri Third Mariyamma temple.	2,000,00	4,142-75

(*e*) A loan of Rs. 3,431 was given to Shri Janardhana temple, Pangal Village, Udipi Taluk by Shri Hosa Mariamma temple.

(*f*) Yes.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆರೇಳು ವರ್ಷಗಳ ತನಕ ಈ ದೇವಸ್ಥಾನದ ಲೆಖ್ಖಗಳು ಆಡಿಟ್ ಆಗದೇ ಇರಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಅಕೌಂಟ್ ಪುಸ್ತಕಗಳೆಲ್ಲವೂ ಎರಡು-ಮೂರು ವರ್ಷಗಳಿಂದಲೂ ಕೋರ್ಟ್‌ನಲ್ಲಿ ಇವೆ. ಅವು ಅಲ್ಲಿಂದ ಬಂದ ತಕ್ಷಣ ಸರ್ಕಾರಕ್ಕೆ ಸಬ್‌ಮಿಟ್ ಮಾಡುತ್ತೇವೆಂದು ಒಬ್ಬರು ಹೇಳುತ್ತಾರೆ. ಇನ್ನೊಬ್ಬರು ಸಬ್‌ಮಿಟ್ ಮಾಡುವುದಿಲ್ಲದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದೇವಸ್ಥಾನದ ಟ್ರಸ್ಟಿಗಳ ಮೀಟಿಂಗ್‌ನಲ್ಲಿ ಪ್ರತಿಯೊಬ್ಬರೂ ಅಪ್ಪಣೆ ಪಡೆದು ದೇವಸ್ಥಾನದ ಕೆಲಸಗಳನ್ನು ಮಾಡಬೇಕೆಂದು ರೆಜಲ್ಯೂಷನ್ ಪಾಸಾಗಿದೆ. ಅಂದಮೇಲೆ ಅಪ್ಪಣೆ ಪಡೆಯದೆಯೇ ಒಬ್ಬ ಪೇಂಟರ್‌ನಿಂದ ಪೇಯಿಂಟ್ ಮಾಡಿಸಿ ಹಣ ಕೊಡದೇ ಇರುವುದರಿಂದ ಬಾಕಿ ವಸೂಲು ಮಾಡಲು ಆತ ಕೋರ್ಟಿಗೆ ಹೋಗಿದ್ದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಯಾವಾಗಲೂ ಸಾಮಾನ್ಯವಾಗಿ ಖರ್ಚು ಮಾಡಬೇಕಾದರೂ ಕೆಲವು ಲಿಮಿಟ್ಸ್ ಇದೆ. ಸ್ವಲ್ಪಮಟ್ಟಿಗೆ ಹಣವನ್ನು ಅವರೇ ಖರ್ಚು ಮಾಡಬಹುದು. ಸಂಬಂಧಪಟ್ಟ ಮೇಲ್ಪಟ್ಟ ಅಧಿಕಾರಿಗಳು ಅದನ್ನು ಪಾಸ್ ಮಾಡಬೇಕು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇನ್ನು ಮುಂದೆ ಈ ರೀತಿ ಮಾಡಿದರೆ ತಕ್ಕ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಸಾಲವನ್ನು ಕೊಟ್ಟಿದ್ದೇವೆ. ಜನಾರ್ಧನ ದೇವಸ್ಥಾನಕ್ಕೆ ರೂಲ್ಸ್ ಪ್ರಕಾರ ಏನು ಹಣವನ್ನು ಕೊಡಬೇಕೋ ಅದನ್ನು ಸಾಲವಾಗಿ ಕೊಡಲಾಗಿದೆ.

ಶ್ರೀ ಎ. ಕೃಷ್ಣ ಶೆಟ್ಟಿ.—ಈಗ ಮಾರಿಯಮ್ಮ ದೇವಸ್ಥಾನಗಳು ಮೂರು ಇವೆ. ಒಂದು ದೇವಸ್ಥಾನಕ್ಕೆ ಮೊಖ್ತೇಸರರು ಆಗಲು ಬೇಕೆಂದು ಎಂ. ಎಲ್. ಎ. ಗಳ ಪೈಕಿ ಯಾರಾದರೂ ಸರ್ಕಾರಕ್ಕೆ ಅರ್ಜಿ ಹಾಕಿರುವುದು ತಮ್ಮ ಗಮನಕ್ಕೆ ಬಂದದೆಯೇ !

Mr. SPEAKER.—How can it arise out of the main question?

Sri A. KRISHNA SHETTY.—Something must come out of this question. It shows how we are interested in this matter.

Mr. SPEAKER.—The Hon'ble member should not bring in personalities.

ಶ್ರೀ ಬಿ. ಎಲ್. ಗೌಡ.—ಈ ಮಾರಿಯಮ್ಮ ದೇವಸ್ಥಾನದ ಟ್ರಸ್ಟಿಗಳು ಮಾಡಿಸಿದ್ದ ಒಂದು ಬೆಳ್ಳಿ ಮುಖವಾಡ ಬೆರೆಬಾಳುವ ಒಡವೆ ಈಗ ಇಲ್ಲ ಎಂದು ಸರ್ಕಾರಕ್ಕೆ ದೂರು ಬಂದಿರುವುದು ನಿಜವೇ !

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮವರೆಗೂ ಆರೀತಿ ದೂರು ಬಂದಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಆ ರೀತಿ ದೂರು ಬಂದಿವೆಯೇನೋ ನೋಡಬೇಕು. ಹೊಸ ಮಾರಿಯಮ್ಮ ದೇವಸ್ಥಾನದ ಅಧಿಕಾರ ನಮಗೆ ಬಂದಿಲ್ಲ. ಹಳೆಯ ಮಾರಿಯಮ್ಮ ದೇವಸ್ಥಾನದ ಮೇಲೆ ಮಾತ್ರ ನಮಗೆ ಅಧಿಕಾರವಿದೆ. ಅದು ನಮ್ಮ ಕಂಟ್ರೋಲಿನಲ್ಲಿದೆ. ಮೂರನೆಯ ಶ್ರೀ ಮಾರಿಯಮ್ಮ ದೇವಸ್ಥಾನ ಇನ್ನೂ ನಮ್ಮ ಕಂಟ್ರೋಲಿನಲ್ಲಿಲ್ಲ. ಅದು ನಮ್ಮ ಕಂಟ್ರೋಲಿಗೆ ಬರುವವರೆಗೂ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ಜನ ಮಾರಿಯಮ್ಮಗಳು ಎಷ್ಟೆಷ್ಟು ದೂರದಲ್ಲಿ ವಾಸ ಮಾಡುತ್ತಿದ್ದಾರೆ ?

Mr. SPEAKER.—For what purpose is the hon'ble member asking the supplementary ?

Sri C. J. MUCKANNAPPA.—The First Mariamma is under the control of the Religious and Endowment Commissioner. The Second Mariamma also comes under his control ಮೂರನೆಯದು ಉತ್ಪನ್ನ ಆಗಲು ಕಾರಣ ಏನು ? ಅದು ಎಷ್ಟು ದೂರದಲ್ಲಿದೆ ಎಂದು ನಾನು ಕೇಳಿದ್ದು.

Mr. SPEAKER.—They are distant enough not to quarrel.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಮಾನ್ಯವಾಗಿ ಆದಿಶಕ್ತಿ ಒಳ್ಳೆಯರೂಪುತಾಳಿದರೆ ಪರವಾ ಇಲ್ಲ. ಒಂದು ವೇಳೆ ಸಪ್ತ ಮಾತೆಯರಾದ ಮಾರಿ, ಮಸಣಿ, ಚಂಡಿ, ಮೋಹಿನಿ, ಮಹಿಷಾ ಮರ್ಧಿನಿ ಕೋಪಿಸಿಕೊಂಡರೆ ಆಗ ಇವರ ಮಹತ್ವ ಹೆಚ್ಚು ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಪ್ತ ಮಾತೆಯರಲ್ಲಿ ಮಾರಿ-first of all these goddesses. She will be powerful. She is not afraid of other godesses.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೊಸ ಮಾರೀಗುಡಿ ಸರ್ಕಾರದ ಕಂಟ್ರೋಲಿನಲ್ಲಿಲ್ಲವೆಂದು ಈಗ ತಾನೇ ಮಾನ್ಯ ಮಂತ್ರಿಗಳು ಹೇಳಿದರು. ಇದು ಹೊಸದಾಗಿ ಆಗಿರುವುದರಿಂದ ಸುಮಾರು 10-15 ವರ್ಷಗಳಿಂದಲೂ ಈ ಮಾರೀಗುಡಿಯ ಅಭಿವೃದ್ಧಿ ಕಾರ್ಯಗಳನ್ನು ಮ್ಯಾನೇಜ್ ಮಾಡಲು ಎರಡು ಪಾರ್ಟಿಗಳವರೂ ಸರ್ಕಾರಕ್ಕೇನಾದರೂ ಅರ್ಜಿ ಹಾಕಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತಮಗೇ ಗೊತ್ತಿದೆ. ಸುಮಾರು ಎರಡುವರ್ಷಗಳಿಂದಲೂ ಈ ವಿಚಾರವನ್ನು ಅವರ ಗಮನಕ್ಕೆ ತರುತ್ತಿದ್ದಾರೆ. ಹಳೆಯ ಮಾರಿಯಮ್ಮ ದೇವಸ್ಥಾನದ ಮ್ಯಾನೇಜ್‌ಮೆಂಟ್ ಕೋರ್ಟ್‌ನಲ್ಲಿ ಆರ್ಡರ್ ಆದ ಹಾಗೆ ಕೋರ್ಟ್ ಕಂಟ್ರೋಲಿನಲ್ಲಿದೆ. They can appoint Manager. ಹೊಸ ಮಾರಿಯಮ್ಮ ದೇವಸ್ಥಾನದ ಮ್ಯಾನೇಜ್‌ಮೆಂಟನ್ನು ಶ್ರೀಮಾನ್ ಮಹಾಲಿಂಗ ಶೆಟ್ಟಿಯವರು ನೋಡಿಕೊಳ್ಳುತ್ತಿದ್ದಾರೆ. ಇನ್ನೊಬ್ಬರಾದ ಶ್ರೀ ಸರ್ವೋತ್ತಮ ಶೆಟ್ಟಿಯವರು ಸುಮಾರು 60 ವರ್ಷಗಳಿಂದ ಮ್ಯಾನೇಜ್‌ಮೆಂಟ್ ಮಾಡುತ್ತಿದ್ದೇನೆಂದು ಹೈ ಕೋರ್ಟಿನಿಂದ ಮೊದಲನೆಯವರ ಮೇಲೆ ಸ್ಟೇ ಆರ್ಡರ್ ತಂದಿದ್ದಾರೆ. ಆ ಸ್ಟೇ-ಆರ್ಡರನ್ನು Vacate ಮಾಡುವವರೆಗೂ, that Mariamma temple will not come under the control of Government.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹಾಗಾದರೆ ಮಂಗಳೂರಿನಲ್ಲಿ ನಿಮ್ಮ ಕಂಟ್ರೋಲಿನಲ್ಲಿ ಎಷ್ಟು ಮಾರಿಯಮ್ಮಗಳಿವೆ ?

Mr. SPEAKER.—That will require notice.

ಶ್ರೀ ಸಂಜೀವನಾಥ ಐಕಳ.—ಈ ಮಾರಮ್ಮಗುಡಿಗಳಲ್ಲಿ ಕುರಿ; ಕೋಳಿ, ಕೋಣ ಇವುಗಳನ್ನು ಕಡಿಯಬಾರದು ಎಂಬುದಾಗಿ ಸರ್ಕಾರದವರು ಸ್ಟ್ರಿಕ್ಟಾಗಿ ಸೂಚನೆಗಳನ್ನುಕೊಟ್ಟಿದ್ದರೂ ಕೆಲವು ಕಡೆಗಳಲ್ಲಿ ಆ ಕಾಯಿದೆಗಳಿಗೆ ವಿರೋಧವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—How does it arise out of this question ? Let the member put another question.

Sri SANJEEVANATH AIKALA.—This Mariamma Temple violates Government Rules as it permits killing of animals.

[*No reply*]

ಶ್ರೀ ಎಸ್. ಗೋಪಾಲ ಸಾರೆನ್ನ.—ಒಂದು ಗ್ರಾಮದಲ್ಲಿ ಈ 3 ಮಾರಿಯಮ್ಮ ದೇವಸ್ಥಾನಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಪದೇ ಪದೇ ಶ್ರೀ ಭಾಸ್ಕರಶೆಟ್ಟರು ಕೇಳುತ್ತಿರುತ್ತಾರೆ. ಈ ಮೂರನ್ನೂ ಏತಕ್ಕೆ ಒಂದಾಗಿ ಸೇರಿಸಬಾರದು ?

Mr. SPEAKER.—That is disallowed.

Losses caused to the lands on account of the working of Syphons in Kanva Reservoir.

**Q.*—76. Sri B. J. LINGE GOWDA (Channapatna).—

Will the Government be pleased to state :—

(*a*) whether it has not been brought to the notice of the Government that on account of the working of the Syphons in Kanva Reservoir, heavy lossess are caused to the lands situated below the Reservoir along the River Bed, as a result of sudden rush of water ?

(*b*) whether they are aware that the Kanva River Belt consists of costly and fertile garden lands which are subjected to the above damages and lossess frequently, whenever the syphons work ;

(*c*) whether it is not a fact that frequent requests have been made for providing sluice gates to Kanva Reservoir in addition to the retention of Syphons to avoid the above contingency ;

(*d*) what action has been taken by Government in this direction ?

A.—**Sri ALUR HANUMANTHAPPA** (Deputy Minister for Minor Irrigation).—

(*a*) No.
(*b*) No.
(*c*) No.
(*d*) Does not arise in view of reply to Clause (*c*).

ಶ್ರೀ ಬಿ. ಜೆ. ಲಿಂಗೇಗೌಡ.—ನನ್ನ ಪ್ರಶ್ನೆಗೆ "ಆ" ನಲ್ಲಿ ಗೊತ್ತಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಇದನ್ನು ಗೊತ್ತುಮಾಡುವ ರೀತಿ ಹೇಗೆ ?

† ಶ್ರೀ ಅಲೂರು ಹನುಮಂತಪ್ಪ.—ಈ ಜಲಾಶಯದ ಸೈಫನ್ ನಡೆಸುವುದರಿಂದ ಇದ್ದಕ್ಕಿದ್ದ ಹಾಗೆ ನೀರು ಹೆಚ್ಚಾಗಿ ನುಗ್ಗಿ ಜಮೀನುಗಳಿಗೆ ವಿಶೇಷ ನಷ್ಟವಾಗುವುದು ಎಂದು ಮಾನ್ಯಸದಸ್ಯರು ತಿಳಿದುಕೊಂಡಿದ್ದಾರೆ ಅದಕ್ಕೋಸ್ಕರವೇ ಅದು ಗೊತ್ತಿಲ್ಲವೆಂದು ಉತ್ತರದಲ್ಲಿ ಹೇಳಿದೆ.

ಶ್ರೀ ಬಿ. ಜೆ. ಲಿಂಗೇಗೌಡ —ಪದೇ ಪದೇ ಈ ರೀತಿ ಅಲ್ಲಿನ ಜಮೀನುಗಳು ಹಾನಿ ಮತ್ತು ನಷ್ಟಗಳಿಗೆ ಗುರಿಯಾಗುವುದು ಹೆಚ್ಚಿಗೆ ನೀರು ಬರುತ್ತಾ ಇರುವುದರಿಂದ ಎಂಬುದು ಸರ್ಕಾರಕ್ಕೆ ಗೊತ್ತಿದೆಯೋ ? ಮತ್ತು ಪಿಕಪ್ ನಾಲೆಗಳನ್ನು ಮಾಡುವುದರಿಂದ ಈ ಜಲಾಶಯದ ಕೆಳಗೆ ನದಿಯ ಅಂಗಳದ ಕಡೆಯಿರತಕ್ಕ ಬೆಲೆ ಬಾಳುವ ಹಾಗೂ ಫಲವತ್ತಾದ ತೋಟ ಮತ್ತು ಜಮೀನುಗಳಿಗೆ ಹೆಚ್ಚು ನೀರು ಬರುವುದನ್ನು ತಪ್ಪಿಸಬಹುದಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹೆಚ್ಚಿಗೆ ನೀರು ಬರುವುದರಿಂದ ಈ ರೀತಿ ತೊಂದರೆ ಯಾಗುತ್ತಾ ಇಲ್ಲ. ಹೊಸ ಪ್ರಾಜೆಕ್ಟುಗಳನ್ನು ಅಲ್ಲಿ ಹೆಚ್ಚಿಗೆ ಕಟ್ಟಬೇಕೆಂದು ಈಗಾಗಲೆ ಪ್ರಯತ್ನ ಮಾಡಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಪರಿಸ್ಥಿತಿಯನ್ನು ತಪ್ಪಿಸಲು ಈ ಸೈಫನ್ನುಗಳನ್ನು ಉಳಿಸಿ ಕೊಳ್ಳುವುದರ ಜೊತೆಗೆ ಕಣ್ವ ಜಲಾಶಯಕ್ಕೆ ತೂಬುಗಳನ್ನಾದರೂ ಹಾಕಬೇಕೆಂದು ಅಲ್ಲಿನವರು ಪ್ರಾರ್ಥನೆ ಮಾಡಿಕೊಂಡಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ರಿಜರ್‌ವಾಯರುಗಳಿಗೆ ತೂಬುಗಳನ್ನು ಹಾಕುವುದು ಒಂದು ಪದ್ಧತಿ. ಈ ಜಲಾಶಯಕ್ಕೆ ಅದನ್ನು ಹಾಕುವುದರಲ್ಲಿ ಸ್ವಲ್ಪಮಟ್ಟಿಗೆ ನಿಧಾನ ಮಾಡಿದ್ದಾರೆ. ಅದನ್ನು ಜಾಗ್ರತೆ ಮಾಡಿಸಲು ಪ್ರಯತ್ನ ನಡೆಸಲಾಗುತ್ತದೆ.

Mr. SPEAKER.—Question hour is over.

QUESTION FOR ANSWER ON THE DAY
(but not taken up)

Establishment of 'Bapuji Rythodaya Agricultural Co-operative Society' in Sathanoor Hobli, Kanakapura Taluk.

*Q.—87 **Sri K. L. SHIVALINGE GOWDA** (Virupakshipura).—

Will the Government be pleased to state :—

(*a*) when the 'Bapuji Rythodaya Agricultural Co-operative Society' was established in Sathanoor Hobli, Kanakapura together with the number of members ;

(SRI K. L. SHIVALINGE GOWDA)

(*b*) the financial and other facilities given by them to the members of this Society ;

(*c*) whether they intend to distribute the lands granted to this society to the members permanently of this Society ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) No such Co-operative Society has been registered in Sathanoor Hobli of Kanakapura Taluk.

(*b*) and (*c*) Does not arise in view of the reply to clause (*a*) above.

PANEL OF CHAIRMEN

Mr. SPEAKER.—As required under rule 9 of the Rules of Procedure and Conduct of Business in the Mysore Legislative Assembly, the following Members will form the Panel of Chairmen for the current session :—

1. Smt. Nagarathnamma Hiremath
2. Sri S. M. Guraddi
3. Sri H. R. Keshava Murthy
4. Sri M. Y. Ghorpade

PAPERS LAID ON THE TABLE

Mr. SPEAKER.—As required under Rule 18 (1) of the Rules of Procedure and Conduct of Business in the Mysore Legislative Assembly, I report that His Excellency the Governor was pleased to address the Legislature yesterday and I place a copy of the Address on the Table of the House.

GOVERNOR'S ADDRESS

" ವಿಧಾನಮಂಡಲದ ಸದಸ್ಯ ಮಹಾಶಯರೆ, ಕಳೆದ ವರ್ಷ ತಮ್ಮನ್ನು ಉದ್ದೇಶಿಸಿ ನಾವು ಭಾಷಣ ಮಾಡಿದ ಕಾಲಕ್ಕೆ, ನಮ್ಮ ದೇಶದ ಗಡಿಗಳಲ್ಲಿ ನಡೆದಿದ್ದ ಚೀನೀ ಆಕ್ರಮಣದ ಫಲವಾಗಿ ನಾವೆಲ್ಲರೂ ಉದ್ವಿಗ್ನರಾಗಿದ್ದೆವು. ದೇಶದ ಅಪಾತ ಪರಿಸ್ಥಿತಿಯು ಕಾವು ನಮ್ಮೆಲ್ಲರನ್ನೂ ಬಹಳ ತೀವ್ರವಾಗಿ ತಟ್ಟಿದ್ದಿತು. ರಕ್ಷಣಾ ಕಾರ್ಯಕ್ಕಾಗಿ ಜನಬಲ ಸಂಗ್ರಹಕ್ಕೂ ಸಾಮಗ್ರಿ ಸಂಗ್ರಹಕ್ಕೂ ದೇಶನಾಯಕರು ನೀಡಿದ್ದ ಕರೆಗೆ ಭಾರತದ ಜನತೆ ಒಮ್ಮನಸ್ಸಿನಿಂದ ಓಗೊಟ್ಟಿದ್ದಿತು. ದೇಶದ ಗಡಿಗಳಲ್ಲಿ ಅಪಾಯ ಪರಿಸ್ಥಿತಿ ಇಂದೂ ಇದೆ. ಇದರ ಜತೆಗೆ, ಇನ್ನೊಂದು ಸಮಸ್ಯೆಯೂ ತಲೆ ಎತ್ತಿದೆ. ಪಾಕೀಸ್ತಾನದಿಂದ ಓಡಿಬಂದ ಹತಭಾಗ್ಯರು ಪುನರಪಿ ನಮ್ಮ ದೇಶದ ಮರೆಹೋಗುತ್ತಿದ್ದಾರೆ. ಪರಿಸ್ಥಿತಿ ಹೀಗಿರುತ್ತಾ, ಸಾವಧಾನವೂ ಅಧಿಕೋತ್ಪಾದನೆಗಾಗಿ ಪರಸ್ಪರ ಸಹಕಾರ ವರ್ತನೆಯೂ ಇಂದು ಎಂದಿಗಿಂತಲೂ ಹೆಚ್ಚು ಅವಶ್ಯವಾಗಿದೆ.

ರಾಷ್ಟ್ರೀಯ ಅಪಾತ ಪರಿಸ್ಥಿತಿ.

ಪ್ರಸ್ತುತ ವರ್ಷದಲ್ಲಿ ಗೃಹರಕ್ಷಕದಳ ಸಂಘಟನೆಯು ತೀವ್ರವಾಗಿ ವಿಸ್ತರಣಗೊಂಡಿದೆ: ಅದರ ಪೂರ್ಣಕಾಲಿಕ ಮುಖ್ಯಾಧಿಕಾರಿಗಳಾಗಿ ಡೆಪ್ಯುಟಿ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರ ಹುದ್ದೆಯ ಅಧಿಕಾರಿಯೊಬ್ಬರು ಕಮಾಂಡೆಂಟ್ ಜನರಲ್‌ರವರಾಗಿ ನಿಯುಕ್ತರಾಗಿದ್ದಾರೆ. ನಾಲ್ಕು ಮುಂಬಯಿ ಕರ್ನಾಟಕ ಜಿಲ್ಲೆಗಳಲ್ಲಿ ಈಗಾಗಲೇ ಈ ದಳದ ಘಟಕಗಳಿವೆಯಷ್ಟೆ; ಇವುಗಳ ಜತೆಗೆ ಬೇರೆ ಬೇರೆ ಜಿಲ್ಲಾ ಕಸಬೆಗಳಲ್ಲಿ ಇಪ್ಪತ್ತು ಘಟಕಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ. ನಾಗರಿಕ ರಕ್ಷಣಾ ಕಾರ್ಯವನ್ನು ಸಹ ಗೃಹರಕ್ಷಕದಳದ ಕಮಾಂಡೆಂಟ್ ಜನರಲ್‌ರವರಿಗೆ ವಹಿಸಿಕೊಡಲಾಗಿದೆ.

ಎನ್. ಸಿ. ಸಿ. ದಳಗಳ ವಿಸ್ತರಣ ಕಾರ್ಯವು ವಿಶೇಷವಾಗಿ ಕಾಲೇಜುಗಳಲ್ಲಿಯೂ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿಯೂ, ಪ್ರಸಕ್ತ ವರ್ಷದಲ್ಲಿ ಮುಂದುವರಿದಿದೆ. ದೃಢಕಾಯರಾದ ವಿದ್ಯಾರ್ಥಿ ಬಾಲಕರಿಗೆ ಎನ್.ಸಿ.ಸಿ. ಶಿಕ್ಷಣವು ಕಡ್ಡಾಯ ಶಿಕ್ಷಣವಾಗಿದೆ. ಎನ್.ಸಿ.ಸಿ. ದಳಗಳಿಗೆ ಸೇರುವಂತೆ ಬಾಲಕಿಯರಿಗೂ ಪ್ರೋತ್ಸಾಹ ಕೊಡಲಾಗುತ್ತಿದೆ. ಯುವಜನ ಸಮುದಾಯದಲ್ಲಿ ನಾಯಕ ಲಕ್ಷಣಗಳನ್ನು ಹೆಚ್ಚಿಸುವುದಲ್ಲದೆ ದೇಶದಲ್ಲಿ ಒಕ್ಕಟ್ಟನ್ನು ಸಾಧಿಸುವುದಕ್ಕೂ ಈ ಯೋಜನೆಯು ಸಹಾಯಕವಾಗುವುದೆಂದು ನಿರೀಕ್ಷಿಸಹುದಾಗಿದೆ. ಈಗ ಬಿಜಾಪುರದಲ್ಲಿ ಸೈನಿಕ ಶಾಲೆಯು ಸ್ಥಾಪಿತವಾಗಿದೆ. ಅದು ಎಪ್ಪತ್ತು ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ೧೯೬೩ನೇ ಇಸವಿಯ ಸೆಪ್ಟೆಂಬರ್ ತಿಂಗಳಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಶೇಕಡಾ ಅರವತ್ತಕ್ಕೂ ಮೀರಿದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದವರಿಂದ ವಿದ್ಯಾರ್ಥಿವೇತನ ದೊರೆಯುತ್ತಿದೆ.

ರಾಷ್ಟ್ರೀಯ ರಕ್ಷಣಾ ನಿಧಿ.

ದಿನಾಂಕ ೧-೨-೧೯೬೪ರ ವರೆಗೆ ೧,೯೭,೬೪೬ ಗ್ರ್ಯಾಮ್ ಚಿನ್ನವೂ ೮೩,೮೦೨ ಗ್ರ್ಯಾಂ ಬೆಳ್ಳಿಯೂ, ಇದರ ಜೊತೆಗೆ ನಗದಾಗಿ ೩೩೧.೬೭ ಲಕ್ಷ ರೂಪಾಯಿ ಹಣವೂ ರಾಷ್ಟ್ರೀಯ ರಕ್ಷಣಾ ನಿಧಿಗೆ ದಾನವಾಗಿ ಬಂದಿವೆ. ರಾಷ್ಟ್ರೀ ರಕ್ಷಣಾ ನಿಧಿಯ ಹಿತರಕ್ಷಣ ಸಮಿತಿಯ ಸಂಚಾಲಕರಿಗೆ ಸುಮಾರು ೧.೭೮ ಲಕ್ಷ ರೂಪಾಯಿ ಮೌಲ್ಯದ ದಾನವಸ್ತುಗಳು ಬಂದಿವೆ; ಇವುಗಳನ್ನು ನವದೆಹಲಿಯಲ್ಲಿರುವ ಕೇಂದ್ರ ನಾಗರಿಕ ಪರಿಷತ್ತಿನ ಸಭಾಪತಿಯವರೆಗೆ ಕಳುಹಿಸಿಕೊಟ್ಟಿದೆ. ರಾಷ್ಟ್ರೀಯ ರಕ್ಷಣಾನಿಧಿಯ ಸಹಾಯಾರ್ಥವಾಗಿ ನಡೆದ ಒಂದು ರೂಪಾಯಿ ಚೀಟಿಯ ರ್ಯಾಫಲ್‌ನಿಂದ ೧೦.೮೧ ಲಕ್ಷ ರೂಪಾಯಿ ಬಂದಿದೆ; ಅದರಲ್ಲಿ ೮೦,೦೦೦ ರೂಪಾಯಿಗಳನ್ನು ಗೆದ್ದವರಿಗೆ ಬಹುಮಾನ ಕೊಡುವುದಕ್ಕಾಗಿ ಮೀಸಲಾಗಿಟ್ಟಿದೆ.

ಯೋಜನಾ ಕಾರ್ಯಕ್ರಮ

ತೃತೀಯ ಪಂಚವಾರ್ಷಿಕ ಯೋಜನೆಗೆ ೨೫೦ ಕೋಟಿ ರೂಪಾಯಿ ವೆಚ್ಚವಾಗತಕ್ಕದ್ದೆಂದು ಉದ್ದೇಶಿಸಿದೆ. ಮೂರನೆಯ ಯೋಜನೆಯ ಮಧ್ಯಾವಧಿಯಲ್ಲಿ ವೆಚ್ಚವಾದ ಒಟ್ಟು ಹಣ ೧೧೦ ಕೋಟಿ ರೂಪಾಯಿ; ಎಂದರೆ ಒಟ್ಟು ಯೋಜನೆಯ ವೆಚ್ಚದ ಶೇಕಡಾ ೪೪ರಷ್ಟು ಹಣ ವೆಚ್ಚವಾದಂತಾಯಿತು. ಒಟ್ಟಿನ ಮೇಲೆ ಆರ್ಥಿಕ ಲಕ್ಷ್ಯದ ಮಟ್ಟಿಗೆ ತೃಪ್ತಿಕರವಾದ ಪ್ರಗತಿ ಕಂಡುಬರುವುದಾದರೂ ಕೆಲ ಕೆಲವು ವಲಯಗಳಲ್ಲಿ ಸಾಕಷ್ಟು ಕಾರ್ಯಸಿದ್ಧಿಯಾಗಿಲ್ಲ. ಉಳಿದ ಅಭಿವೃದ್ಧಿ ಬಾಬುಗಳೊಡನೆ ಹೋಲಿಸಿ ನೋಡಿದರೆ, ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ ಹೆಚ್ಚಿನ ಹಣ ವಿನಿಯೋಗವಾಗಿರುವುದೇ ಇದಕ್ಕೆ ಕಾರಣ. ೧೯೬೩ನೇ ಇಸವಿಯ ನವೆಂಬರ್ ತಿಂಗಳ ಅಂತ್ಯದಲ್ಲಿ ೧೯೬೪-೬೫ನೇ ವರ್ಷದ ವಾರ್ಷಿಕ ಯೋಜನಾ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಪ್ರತಿನಿಧಿಗಳು ಯೋಜನಾ ಅಯೋಗದೊಡನೆ ಚರ್ಚಿಸಿದ್ದರು. ಭಾರತ ಸರ್ಕಾರದೊಡನೆ ಸಮಾಲೋಚನೆ ನಡಿಸಿ ವಾರ್ಷಿಕ ಯೋಜನೆಯ ಗಾತ್ರವನ್ನು ಕೊನೆಯದಾಗಿ ನಿರ್ಧರಿಸಲಾಗುತ್ತಿದೆ. ನಮ್ಮ ಸರ್ಕಾರದವರು ಅಭಿವೃದ್ಧಿಯ ಬೇರೆ ಬೇರೆ ಬಾಬುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಕಾರ್ಯ ಸಮಿತಿಗಳನ್ನು ರಚಿಸಿಕೊಂಡು, ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿಯೂ ಸೂಕ್ತ ಕಾರ್ಯವನ್ನು ಕೈಕೊಂಡಿದ್ದಾರೆ.

ಸಮಾಜ ವಿಕಾಸ ಮತ್ತು ಪಂಚಾಯಿತಿ ರಾಜ್ಯ.

ಮೈಸೂರು ರಾಜ್ಯದ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಗಳ ಅಧಿನಿಯಮಕ್ಕೆ ಮಾಡತಕ್ಕ ತಿದ್ದುಪಡಿಗಳ ಮೇಲೆ ವರದಿ ಮಾಡುವುದಕ್ಕಾಗಿ ಸರ್ಕಾರದವರು ರಚಿಸಿದ ಅಭ್ಯಾಸ

ಮಂಡಲಿಯು (ಸ್ಟಡಿ ಟೀಮ್) ಸರ್ಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿದೆ. ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಅಧಿಕಾರಗಳನ್ನು ವಹಿಸಿಕೊಡುವ ಯೋಜನೆಯ ಮೇರೆಗೆ ಜಿಲ್ಲಾ ಪರಿಷತ್ತು, ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಗ್ರಾಮ ಪಂಚಾಯಿತಿ—ಎಂಬ ಈ ಬಗೆಯ ಮೂರಂತಸ್ತಿನ ಪದ್ಧತಿಯೊಂದನ್ನು ಏರ್ಪಡಿಸಬೇಕೆಂದು ಅಭ್ಯಾಸ ಮಂಡಲಿಯು ಸಲಹೆ ಮಾಡಿದೆ. ಈ ಸಲಹೆಯು ತತ್ತ್ವತಃ ಅಂಗೀಕೃತವಾಗಿದೆ ; ಅದರ ವಿವರಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಈ ಅಭ್ಯಾಸ ಮಂಡಲಿಯಿಂದ ಸೂಚಿತವಾದ ತಿದ್ದುಪಡಿಗಳುಳ್ಳ ಒಂದು ವಿಧೇಯಕವು ವಿಧಾನಮಂಡಲದಲ್ಲಿ ಮಂಡಿಸಲ್ಪಡುವುದು ; ದ್ರವ್ಯಾನುಕೂಲತೆಯನ್ನು ನೋಡಿಕೊಂಡು ಈ ಹೊಸ ಅಧಿನಿಯಮದ ಉಪಬಂಧಗಳನ್ನು ಹಂತ ಹಂತವಾಗಿ ಆಚರಣೆಗೆ ತರಲಾಗುವುದು.

ಸಮಾಜಾಭಿವೃದ್ಧಿ ಕ್ಷೇತ್ರಗಳು.

ಇಂದು ಇಡೀ ಮೈಸೂರು ರಾಜ್ಯದ ಎಲ್ಲೆಲ್ಲೂ ಸಮಾಜಾಭಿವೃದ್ಧಿ ಕ್ಷೇತ್ರಗಳು ತುಂಬಿವೆ. ಈಗಿನ ಅಪಾತ ಸ್ಥಿತಿಯಿಂದಾಗಿ ವ್ಯವಸಾಯೋತ್ಪಾದನ ಕಾರ್ಯಕ್ರಮಕ್ಕೆ ಪರಮೋಚ್ಚ ಪ್ರಾಶಸ್ತ್ಯ ಕೊಟ್ಟಿದೆ ಪಂಚಾಯಿತಿ ವ್ಯವಸಾಯೋತ್ಪಾದನ ಯೋಜನೆಗಳನ್ನು ಸಕಲ ಪಂಚಾಯಿತಿಗಳಲ್ಲೂ ಸಿದ್ಧಪಡಿಸಲಾಗಿದೆ ! ಸುಧಾರಿತ ಬೀಜಗಳು, ಗೊಬ್ಬರಗಳು, ರಾಸಾಯನಿಕ ಗೊಬ್ಬರಗಳು, ಸುಧಾರಿತ ಉಪಕರಣಗಳು, ನೀರಾವರಿ—ಇವೇ ಮೊದಲಾದುವುಗಳ ಸಹಾಯದಿಂದ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತ್ನವೂ ಪ್ರಾರಂಭವಾಗಿದೆ.

ಸಹಕಾರ.

ಸಹಕಾರ ಇಲಾಖೆಯು ಚಿಕ್ಕಪುಟ್ಟ ಬೇಸಾಯಗಾರರಿಗೂ ಸಮಾಜದ ಬಡ ವರ್ಗಗಳಿಗೂ ನೆರವು ನೀಡುವ ಕರ್ತವ್ಯವನ್ನು ನಿರ್ವಹಿಸುತ್ತಲೇ ಇದೆ. ಸಹಕಾರ ಸಂಘಗಳಿಗೆ ಹೊಸತಾಗಿ ಹಣ ಒದಗಿಸುವುದಕ್ಕೂ, ಸಾಲದ ಮರುಸಂದಾಯಕ್ಕೆ ತಪ್ಪಿದ ಸಹಕಾರ ಸಂಘಗಳಲ್ಲೂ ಸಹ ತಪ್ಪದೆ ಸಾಲ ಸಂದಾಯ ಮಾಡುವ ಸದಸ್ಯರಿಗೆ ರಾಸಾಯನಿಕ ಗೊಬ್ಬರಗಳನ್ನು ಮತ್ತು ಬೀಜಗಳನ್ನು ಕೊಂಡುಕೊಳ್ಳುವ ಸಲುವಾಗಿ ಸಾಲಗಳನ್ನು ಕೊಡುವುದಕ್ಕೂ ಉದಾರವಾದ ನಿಯಮಗಳನ್ನು ಮಂಜೂರು ಮಾಡಿದೆ. ಸಹಕಾರ ಇಲಾಖೆಯು ರಾಸಾಯನಿಕ ಗೊಬ್ಬರಗಳ ಮಾರಾಟ ಸ್ಥಳಗಳ ಸಂಖ್ಯೆಯನ್ನು ೧,೫೦೦ಕ್ಕೂ ಮಿಕ್ಕಿ ಹೆಚ್ಚಿಸಿದೆ ; ರಾಜ್ಯದ ಎಲ್ಲೆಡೆಗಳಲ್ಲೂ ಬೇಸಾಯಗಾರರು ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಈ ಸದವಕಾಶದ ಪ್ರಯೋಜನ ಪಡೆಯಲು ಸಾಧ್ಯವಾಗುವುದು.

ಗ್ರಾಹಕ ಸಹಕಾರ ಸಂಘಗಳ ಕ್ಷೇತ್ರದಲ್ಲಿ ಒಟ್ಟು ಮಾರಾಟದ ೧೧ ಸ್ಟೋರುಗಳೂ ೧೮೫ ಚಿಲ್ಲರೆ ಮಾರಾಟದ ಸ್ಟೋರುಗಳೂ ರಚಿತವಾಗಿದ್ದವು. (ಏಪ್ರಿಲ್‌ನಿಂದ ಅಕ್ಟೋಬರದ ತಿಂಗಳವರೆಗಿನ ಅರ್ಧ ವರ್ಷಕ್ಕೆ) ; ಇವುಗಳಲ್ಲಿ ವ್ಯಾಪಾರದ ಮೊತ್ತವು ಒಟ್ಟು ಮಾರಾಟದ ಸ್ಟೋರುಗಳಲ್ಲಿ ೨.೯೮ ಕೋಟಿ ರೂಪಾಯಿ ಮತ್ತು ಚಿಲ್ಲರೆ ಮಾರಾಟದ ಸ್ಟೋರುಗಳಲ್ಲಿ ೬.೫೨ ಕೋಟಿ ರೂಪಾಯಿ. ಒಟ್ಟು ಮಾರಾಟದ ಇನ್ನೂ ಎರಡು ಸ್ಟೋರುಗಳಿಗೆ ಮಂಜೂರಾತಿ ಕೊಟ್ಟಿದೆ ; ಇವುಗಳನ್ನು ಬೇಗನೆ ತೆರೆಯಲಾಗುವುದು. ಸಕ್ಕರೆಯ ಹಂಚಿಕೆಯು ಬಹುಮಟ್ಟಿಗೆ ಸಹಕಾರ ಸಂಘಗಳ ಮೂಲಕ ನಡೆಯುವ ಕಾರಣ, ಬೆಲೆಯನ್ನು ತಡೆಗಟ್ಟಲು ಅತ್ಯಂತ ಅನುಕೂಲವಾಗಿದೆ. ದಳ್ಳಾಳಿಗಳಿಂದ ಸಾಗುವಳಿದಾರರ ಶೋಷಣೆಯಾಗದಂತೆ ನೋಡಿಕೊಳ್ಳುವ ಸಲುವಾಗಿ ಸಹಕಾರಿ ಸಂಘಗಳು ಭತ್ತವನ್ನು ಪೂರ್ತಿಯಾಗಿ ಕೊಂಡುಕೊಳ್ಳುವ ಯೋಜನೆಗೆ ರಾಜ್ಯದ ಎಲ್ಲೆಡೆಗಳಲ್ಲೂ ಸ್ವಾಗತ ದೊರೆತಿರುವುದರಿಂದ, ಈ ಯೋಜನೆಯನ್ನು ಈ ವರ್ಷದಲ್ಲಿಯೂ ಮುಂದುವರಿಸುವ ಉದ್ದೇಶವಿದೆ. ಗ್ರಾಹಕ ಸಹಕಾರಿ ಸಂಘಗಳಿಗೆ ಭತ್ತವನ್ನು ಈ ರೀತಿಯಾಗಿ ಅಗ್ಗದ ದರಗಳಿಗೆ ಒದಗಿಸಲು ಸಾಧ್ಯವಾಗುವುದು ; ಇದರಿಂದ ಬೆಳೆಯುವವರಿಗೆ ಹೇಗೋ ಹಾಗೆ ಗ್ರಾಹಕರಿಗೂ ಅನುಕೂಲವಾಗುವುದು.

ಸಹಕಾರಿ ವ್ಯವಸಾಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಗಣನೀಯವಾಗಿದೆ. ಈವರೆಗೆ ೧೭೩ ಸಂಘಗಳು ಸ್ಥಾಪಿತವಾಗಿವೆ; ಅವುಗಳ ಸದಸ್ಯ ಸಂಖ್ಯೆ ೪,೬೩೨ ; ಅವು ಸಾಗುವಳಿ ಮಾಡಿದ ಜಮೀನಿನ ವಿಸ್ತೀರ್ಣ ೧೧,೫೫೫ ಎಕರೆ.

೧೯೫೫ನೇ ಇಸವಿಯ ಸಹಕಾರಿ ಸಂಘಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ ಒಂದು ವಿಶೇಷ ವಿಧೇಯಕವನ್ನು ಮಂಡಿಸಲಾಗುವುದು. ಈ ಅಧಿನಿಯಮದಲ್ಲಿ ಕಂಡುಬಂದ ಕೆಲವಾರು

ನ್ಯೂನತೆಗಳನ್ನು ಸರಿಪಡಿಸುವುದೇ ಪ್ರಕೃತ ವಿಧೇಯಕದ ಉದ್ದೇಶ ! ಇದು ಶಾಸನವಾಗಿ ಏರ್ಪ ಟ್ಟಾಗ, ಸಹಕಾರಿ ಸಂಘಗಳಿಗೆ ಸಲ್ಲತಕ್ಕ ಹಣದ ವಸೂಲಿ ಮಾಡಲು ಬಹಳ ಅನುಕೂಲವಾಗುವುದು.

ಈಗಿರುವ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳ ವಿಸ್ತರಣೆಗಾಗಿ ಲೈಸೆನ್ಸು ಕೊಡಲು ಶಿಫಾರಸು ಮಾಡಲಾಗಿದೆ. ಒಂದು ಹೊಸ ಲೈಸೆನ್ಸು ಕೊಟ್ಟಿದೆ; ಅಲ್ಲದೆ ಇನ್ನೂ ಎಂಟು ಸಹಕಾರಿ ಸಂಸ್ಥೆಗಳಿಗೆ ಉದ್ಯಮ ನಿಮಿತ್ತವಾಗಿ ಹೊಸ ಲೈಸೆನ್ಸು ಕೊಡಲು ಶಿಫಾರಸು ಮಾಡಲಾಗಿದೆ. ಕಳೆದ ವರ್ಷ ಸಹಕಾರ ಸಂಸ್ಥೆಗಳಿಂದ ಉತ್ಪಾದಿತವಾದ ಸಕ್ಕರೆಯ ಒಟ್ಟು ಪ್ರಮಾಣವು ೪೪,೦೦೦ ಟನ್ನಿನಷ್ಟಾಗಿತ್ತೆಂಬ ಅಂಶವು ಸಂತೋಷಕರವಾಗಿದೆ. ಐದು ಸಹಕಾರಿ ನೂಲುವ ಗಿರಣಿಗಳಿಗೆ ಮಂಜೂರಾತಿ ಕೊಟ್ಟಿದೆ; ಇವು ಬೇಗನೆ ಸ್ಥಾಪಿತವಾಗುವ ನಿರೀಕ್ಷೆಯಿದೆ.

ಮಳೆ ಬೆಳೆಗಳ ಪರಿಸ್ಥಿತಿ.

ಪ್ರಸಕ್ತ ವರ್ಷದಲ್ಲಿ, ರಾಜ್ಯದಲ್ಲಿ, ಸಾಮಾನ್ಯವಾಗಿ ಭಾರಿ ಮಳೆ ಬೀಳುವ ಪ್ರದೇಶಗಳಲ್ಲೂ ಸಹ, ಭಾರೀ ಪ್ರಮಾಣದ ಪ್ರವಾಹಗಳೇನೂ ಇರಲಿಲ್ಲ. ಮಳೆ ಬಿದ್ದುದೇ ತಡವಾಗಿ; ಬಿದ್ದ ಮಳೆಯೂ ಕಡಿಮೆ; ಇದರಿಂದಾಗಿ ಪೂರ್ವಭಾಗದ ಕೆಲವು ಜಿಲ್ಲೆಗಳಲ್ಲಿ, ಮುಖ್ಯವಾಗಿ ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆಗಳು ಅಷ್ಟೇನೂ ತೃಪ್ತಿಕರ ವಾಗಿರಲಿಲ್ಲ. ಪೀಡಿತ ಪ್ರದೇಶಗಳ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದಕ್ಕಾಗಿ ಪರಿಹಾರ ಕಾರ್ಯಕ್ರಮಗಳು, ತಕ್ಕಾವಿ ಮತ್ತು ಜಮೀನು ಆಧಾರದ ಸಾಲಗಳು, ಇತ್ಯಾದಿ ಸಹಾಯ ಕಾರ್ಯ ಗಳನ್ನೂ ಅವಶ್ಯವಿರುವ ಕಡೆಗಳಲ್ಲೆಲ್ಲಾ ಕೈಕೊಳ್ಳಲಾಗಿತ್ತು.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿ.

ಮುಖ್ಯವಾಗಿ ದಕ್ಷಿಣ ತಪ್ಪಲಿನ ಅದರಲ್ಲೂ ಜಲಾಶ್ರಯವಿಲ್ಲದ ಪ್ರದೇಶಗಳಲ್ಲಿ ಅನಾವೃಷ್ಟಿ ಯಿಂದಲೂ ದುರ್ಭಿಕ್ಷ ಸ್ಥಿತಿಯಿಂದಲೂ ಪುನಃ ಪುನಃ ತಲೆದೋರುವ ದುರ್ಧರ ಪ್ರಸಂಗವನ್ನು ಇದಿರಿಸು ವುದಕ್ಕಾಗಿ ಸರ್ಕಾರದವರು ಕೆಲವಾರು ಶಾಶ್ವತ ವ್ಯವಸ್ಥೆಗಳನ್ನು ಕೈಕೊಂಡಿದ್ದಾರೆ. ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಭೂಸಾರ ರಕ್ಷಣೆ, ತೋಟಗಾರಿಕೆ, ವನನಿರ್ಮಾಣ, ಚಿಕ್ಕ ಪುಟ್ಟ ನೀರಾವರಿ—ಇವೇ ಮೊದಲಾದವುಗಳಿಂದ ಕೂಡಿದ ವ್ಯಾಪಕವಾದ ಸುಸಂಘಟಿತ ಅಭಿವೃದ್ಧಿ ಯೋಜನೆ ಯೊಂದನ್ನು ಸಿದ್ಧಪಡಿಸಲಾಗಿದೆ; ಇದಕ್ಕೆ ೪೦ ಕೋಟಿ ರೂಪಾಯಿ ವೆಚ್ಚ ತಗಲುವುದಾಗಿದೆ. ಈ ವಿಚಾರದಲ್ಲಿ ಕೇಂದ್ರಸರ್ಕಾರದವರ ನೆರವನ್ನು ಕೋರಿದಾಗ, ಅವರು ಈ ವ್ಯಾಪಕ ಯೋಜನೆಯಲ್ಲಿ ಅಡಕವಾಗಿರುವ ಕೆಲಕೆಲವು ವಿಶಿಷ್ಟ ಬಾಬುಗಳಿಗೆ ಸಹಾಯ ನೀಡಲು ಒಪ್ಪಿಕೊಂಡಿದ್ದಾರೆ. ೧೯೬೩-೬೪ನೆಯ ಪ್ರಸಕ್ತ ವರ್ಷದಲ್ಲಿ ಅವರು ೨·೫ ಕೋಟಿ ರೂಪಾಯಿಯಷ್ಟು ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ; ಅಲ್ಲದೆ ಸಣ್ಣ ಪುಟ್ಟ ನೀರಾವರಿ ಮತ್ತು ವ್ಯವಸಾಯೋತ್ಪಾದನ ಕಾರ್ಯಕ್ರಮಗಳ ಕೆಲವೊಂದು ಯೋಜನೆಗಳನ್ನು ಕಾರ್ಯಗತಮಾಡಲು ಇನ್ನೂ ೧ ಕೋಟಿ ರೂಪಾಯಿ ಕೊಡುವುದಾಗಿ ಆಶ್ವಾಸನೆ ನೀಡಿದ್ದಾರೆ ಈ ವ್ಯಾಪಕ ಯೋಜನೆಯನ್ನು ಹಂತ ಹಂತಗಳಲ್ಲಾದರೂ ಕಾರ್ಯಗತ ಮಾಡುವ ಸಲುವಾಗಿ, ಯೋಜನಾವಧಿಯ ಇನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದವರು ಅದೇ ಬಗೆಯ ನೆರವು ನೀಡುವರೆಂಬ ಹಾರೈಕೆ ಇದೆ.

ನೀರಾವರಿ ಬಾವಿಗಳು.

ನೀರಾವರಿ ಬಾವಿಗಳನ್ನು ಕಟ್ಟಿಸುವುದಕ್ಕೆ ಸಂಬಂಧಪಟ್ಟಂತೆ ೧೯೬೦ರಲ್ಲಿ ಉದಾರ ನಿಯಮ ಗಳನ್ನು ರಚಿಸಲಾಗಿದ್ದಿತಷ್ಟೆ. ಈ ನಿಯಮಗಳು ಜನಪ್ರಿಯವಾಗಿವೆ; ಬಾವಿಗಳನ್ನು ತೋಡಿಸಲು ಇಂಥ ಸಾಲಗಳನ್ನು ಕೋರುವ ಮನವಿಗಳು ಹೆಚ್ಚು ಹೆಚ್ಚಾಗಿ ಬರುತ್ತಿವೆ. ಪ್ರಸಕ್ತ ವರ್ಷದ ಬಜೆಟ್ಟು ಅಂದಾಜುಗಳಲ್ಲಿ ಹೊಸ ಬಾವಿಗಳಿಗಾಗಿ ೧೭.೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು; ಆದರೆ ಹಿಂದಿನ ಬಾವಿ ಕಾಮಗಾರಿಗಳ ವೆಚ್ಚವನ್ನು ನಿರ್ವಹಿಸುವುದಕ್ಕಾಗಿಯೇ ಈ ಹಣವೆಲ್ಲವನ್ನೂ ಬಳಸಿ ಕೊಳ್ಳಬೇಕಾಗಿ ಬಂದ ಕಾರಣ, ಅದರಲ್ಲಿ ಹೊಸ ಬಾವಿಗಳ ವೆಚ್ಚಕ್ಕೆ ಹಣವೇನೂ ಉಳಿಯದೆ ಹೋಯಿತು. ಆದರೆ ವ್ಯವಸಾಯೋತ್ಪಾದನ ಕಾರ್ಯಕ್ರಮಕ್ಕಾಗಿ ಭಾರತ ಸರ್ಕಾರದವರು ಒದಗಿಸಿದ್ದ ೨೫೦ ಲಕ್ಷ ರೂಪಾಯಿಯ ಹೆಚ್ಚಿಗೆ ಮೊತ್ತದಿಂದ ೪೦ ಲಕ್ಷ ರೂಪಾಯಿಯನ್ನು ಈ ಉದಾರಗೊಳಿಸಿದ ಯೋಜನೆಯ ಮೇರೆಗೆ ಹೊಸ ಬಾವಿಗಳನ್ನು ರಚಿಸುವದಕ್ಕಾಗಿ ವಿನಿಯೋಗಿಸಲಾ ಗಿದೆ. ೧೯೬೦ನೇ ಇಸವಿಯ ಏಪ್ರಿಲ್ ತಿಂಗಳಿನಿಂದ ೧೯೬೩ನೇ ಇಸವಿಯ ಮಾರ್ಚಿ ತಿಂಗಳ ಅಂತ್ಯದ

ವರೆಗೆ ಸುಮಾರು ೨೭,೫೦೦ ಬಾವಿಗಳಿಗೆ ಮಂಜೂರಾತಿ ಕೊಟ್ಟಿದೆ. ಇವುಗಳಲ್ಲಿ ಅರ್ಧಕ್ಕೂ ಹೆಚ್ಚಿನಷ್ಟು ಬಾವಿಗಳು ಈಗಾಗಲೇ ಪೂರ್ತಿಯಾಗಿವೆ. ಉಳಿದ ಬಾವಿಗಳು ಮುಂದೆ ಕೆಲವೇ ತಿಂಗಳುಗಳಲ್ಲಿ ಪೂರ್ತಿಯಾಗುವ ನಿರೀಕ್ಷೆ ಇದೆ.

ಮೈಸೂರು ಭೂಕಂದಾಯದ ಅಧಿನಿಯಮ.

ಮೈಸೂರು ಭೂಕಂದಾಯದ ಅಧಿನಿಯಮವು ಇತ್ತೀಚೆಗೆ ವಿಧಾನ ಮಂಡಲದಲ್ಲಿ ತೀರ್ಣವಾಯಿತಷ್ಟೆ. ಈ ಅಧಿನಿಯಮವು ಆಚರಣೆಗೆ ಬಂದೊಡನೆಯೇ ಭೂಮಿಗೂ ಭೂಕಂದಾಯಕ್ಕೂ ಸಂಬಂಧಪಡುವ ವಿಧಿಯ ಪ್ರಶಾಸನದಲ್ಲಿ ಏಕರೂಪತೆಯುಂಟಾಗುವುದು. ಈವರೆಗೆ ಸಲುವಳಿಯಲ್ಲಿದ್ದ ಭೂಕಂದಾಯದ ದರಗಳು, ಎಷ್ಟೋ ದಶಮಾನಗಳ ಹಿಂದೆ ನಿಶ್ಚಿತವಾಗಿದ್ದ ದರಗಳು ; ಅವೂ ರಾಜ್ಯದ ಭಿನ್ನ ಭಿನ್ನ ಭಾಗಗಳಲ್ಲಿ ಭಿನ್ನ ಭಿನ್ನವಾಗಿದ್ದುವು ; ಆದರೆ ಈ ಹೊಸ ಭೂಕಂದಾಯದ ಅಧಿನಿಯಮದ ಬಲದಿಂದ, ಇಂದು ಪ್ರಚಲಿತವಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಂದಾಯವನ್ನು ನಿರ್ಧರಿಸಲು ಸರ್ಕಾರಕ್ಕೆ ಸಾಧ್ಯವಾಗುವುದು. ಹೊಸ ಕಂದಾಯ ವ್ಯವಸ್ಥೆಯಾಗತಕ್ಕ ಎಲ್ಲ ಪ್ರದೇಶಗಳಲ್ಲೂ ೧೯೬೫ನೇ ಇಸವಿ ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ಕಂದಾಯ ನಿರ್ಣಯ ಸಂಬಂಧವಾದ ಕಾರ್ಯವು ಪೂರ್ತಿಯಾಗುವ ನಿರೀಕ್ಷೆಯಿದೆ ; ಹೊಸ ಕಂದಾಯ ದರಗಳನ್ನು ೧೯೬೫-೬೬ನೇ ಕಂದಾಯ ವರ್ಷದ ಪ್ರಾರಂಭದಲ್ಲಿ ಸಲುವಳಿಗೆ ತರಲಾಗುವುದು.

ಹಿಂದೆ ವಿಧಾನಮಂಡಲದಿಂದ ತೀರ್ಣವಾಗಿದ್ದ ಮೈಸೂರು ಭೂಸುಧಾರಣಾ ಅಧಿನಿಯಮವನ್ನು ಆಚರಣೆಗೆ ತರಲು ಇನ್ನೂ ಸಾಧ್ಯವಾಗಿಲ್ಲ ; ಇದಕ್ಕೆ ಕೆಲವಾರು ಸಂವಿಧಾನಿಕ ತೊಂದರೆಗಳೇ ಕಾರಣ. ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಚಾರವು ಈಗ ಸಂಸತ್ತಿನ ಪರ್ಯಾಲೋಚನೆಯಲ್ಲಿದೆ. ರಾಜ್ಯ ಸರ್ಕಾರದವರು ಭಾರತ ಸರ್ಕಾರದವರ ಹಾಗೂ ಯೋಜನಾ ಆಯೋಗದವರ ಸೂಚನೆಗಳನ್ನು ಪರ್ಯಾಲೋಚಿಸಿ, ಆ ವಿಚಾರದಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಅಧಿನಿಯಮವನ್ನು ಆಚರಣೆಗೆ ತರುವುದಕ್ಕಿಂತ ಮುಂಚೆ, ಅದರ ಕೆಲವಾರು ಅಂಶಗಳನ್ನು ತಿದ್ದುಪಡಿ ಮಾಡಬೇಕಾಗಬಹುದು. ಈ ಮಧ್ಯೆ, ಗೇಣಿದಾರರನ್ನು ಹೊರದೂಡದಂತೆ ಅವರಿಗೆ ರಕ್ಷಣೆ ಕೊಡುವುದಕ್ಕಾಗಿ, ೧೯೬೧ನೆಯ ಇಸವಿಯ ಮೈಸೂರು ರಾಜ್ಯದ ಗೇಣಿದಾರಿ ಅಧಿನಿಯಮದ ಅವಧಿಯನ್ನು ೧೯೬೫ನೆಯ ಇಸವಿ ಮಾರ್ಚ್ ೩೧ನೆಯ ದಿನಾಂಕದವರೆಗೆ ವಿಸ್ತರಿಸಲಾಗಿದೆ. ಈ ಅವಧಿಯನ್ನು ಆ ದಿನಾಂಕದಿಂದ ಮತ್ತೂ ಮುಂದಕ್ಕೆ ವಿಸ್ತರಿಸಬೇಕಾಗಬಹುದು.

ಆಹಾರದ ಪರಿಸ್ಥಿತಿ.

ಆಹಾರ ಧಾನ್ಯಗಳ ಬೆಲೆಗಳು ಸಾಮಾನ್ಯವಾಗಿ ಹತೋಟಿಯಲ್ಲಿ ಉಳಿದಿದ್ದು, ಆಹಾರ ಪದಾರ್ಥಗಳ ಬೆಲೆಯಲ್ಲಿ ಯಾವ ಅಸಾಧಾರಣ ಹೆಚ್ಚಳವೂ ಉಂಟಾಗಿರುವುದಿಲ್ಲೆಂಬುದೊಂದು ಸಂತೋಷದ ಸಂಗತಿಯಾಗಿದೆ. ಒಂದು ರಾಜ್ಯದಿಂದ ಬೇರೊಂದು ರಾಜ್ಯಕ್ಕೆ ಮಾಡಲಾಗುವ ಬೆಲ್ಲದ ಸಾಗಾಣಿಕೆಯು ಈಗ ೧೯೬೩ನೇ ಇಸ್ವಿಯ ಬೆಲ್ಲದ ಸಾಗಾಣಿಕೆಯ ನಿಯಂತ್ರಣಕ್ಕೆ ಸಂಬಂಧಪಟ್ಟ ಆದೇಶದ ಮೇರೆಗೆ ನಿಯಂತ್ರಿಸಲ್ಪಡುತ್ತಲಿದೆ. ಸಂಬಂಧಪಟ್ಟ ರಾಜ್ಯಗಳೊಡನೆ ಪರ್ಯಾಲೋಚನೆ ಮಾಡಿ ಪ್ರತಿ ತಿಂಗಳಿಗೆ ೧,೦೦೦ ಟನ್ನುಗಳವರೆಗೆ ಆಯಾತ ಹಾಗೂ ನಿರ್ಯಾತ ಮಾಡಲು ರಾಜ್ಯ ಸರ್ಕಾರವರು ಅಧಿಕಾರ ಪಡೆದಿದ್ದಾರೆ. ೧೯೬೩ನೇ ಇಸ್ವಿಯ ಸಕ್ಕರೆ ನಿಯಂತ್ರಣಕ್ಕೆ ಸಂಬಂಧಪಡುವ ಆದೇಶವನ್ನು ೧೯೬೩ನೇ ಇಸ್ವಿಯ ಏಪ್ರಿಲ್ ತಿಂಗಳ ೧ನೇ ತಾರೀಖಿನಿಂದ ಸಮಗ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ನಿಶ್ಚಯಿಸಲ್ಪಟ್ಟ ದರಗಳ ಮೇರೆಗೆ ಸಕ್ಕರೆಯನ್ನು ನ್ಯಾಯವಾಗಿ ಹಂಚಿಕೊಡುವುದನ್ನು ಖಾತರಿಮಾಡಿಕೊಳ್ಳುವುದರ ಸಲುವಾಗಿ, ಸಹಕಾರಿ ಸಂಘಗಳ, ನ್ಯಾಯ ಬೆಲೆಯ ಅಂಗಡಿಗಳ ಹಾಗೂ ಮಾನ್ಯತೆ ಪಡೆದ ವ್ಯಾಪಾರಿಗಳ ಮುಖಾಂತರ ಸಕ್ಕರೆಯು ಹಂಚಿಕೆಯಾಗಲು ಸಹ ಏರ್ಪಾಡುಗಳನ್ನು ಮಾಡಲಾಗಿದೆ.

ಸಾಗುವಳಿ ಯೋಗ್ಯ ಭೂಮಿಯ ವಿಲೆ.

ಸಾಗುವಳಿ ಯೋಗ್ಯ ಭೂಮಿಯನ್ನು ಸಾಗುವಳಿ ಮಾಡಲಚ್ಛಿಸುವ ಸಾಗುವಳಿದಾರರಿಗೆ ವಿಲೆ ಮಾಡುವ ಸಂಬಂಧದ ನಿಯಮಗಳನ್ನು ಸರ್ಕಾರದವರು ಸಲೀಸುಗೊಳಿಸಿದ್ದಾರೆ. ಯಾವ ಯಾವ ಪ್ರದೇಶಗಳನ್ನು ಸಾಗುವಳಿಯ ಸಲುವಾಗಿ ವಿಲೆಮಾಡಬಹುದಾಗಿದೆ ಮತ್ತು ಯಾವ

ಯಾವ ಪ್ರದೇಶಗಳನ್ನು ಕಾಡು ಬೆಳೆಸುವುದಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಬಹುದಾಗಿದೆ ಎಂಬುದನ್ನು ನಿರ್ಧರಿಸುವುದಕ್ಕಾಗಿ ಸಬ್-ಡಿವಿಜನಲ್ ಆಫೀಸರು ಮತ್ತು ಅರಣ್ಯ, ಆಬ್ಕಾರಿ ಹಾಗೂ ಪಶುಸಂಗೋಪನ ಇಲಾಖೆಗಳ ಒಬ್ಬೊಬ್ಬ ಸ್ಥಳೀಯ ಪ್ರತಿನಿಧಿ ಮತ್ತು ಸಂಬಂಧಪಟ್ಟ ತಾಲ್ಲೂಕು ಬೋರ್ಡಿನ ಅಧ್ಯಕ್ಷರು—ಇವರುಗಳನ್ನೊಳಗೊಂಡ ಒಂದು ಸ್ಥಳೀಯ ಸಮಿತಿಯನ್ನು ಪ್ರತಿಯೊಂದು ತಾಲ್ಲೂಕಿನ ಸಂಬಂಧದಲ್ಲಿಯೂ ರಚಿಸಲಾಗಿದೆ. ಸರ್ಕಾರಿ ಭೂಮಿಗಳ ಈ ವರ್ಗೀಕರಣದಿಂದ ಅನೇಕ ಭೂರಹಿತ ಸಾಗುವಳಿದಾರರು ಈ ಮೊದಲು ಸಾಧ್ಯವಿದ್ದಷ್ಟಕ್ಕಿಂತ ಹೆಚ್ಚು ಬೇಗನೇ ಭೂಮಿಗಳನ್ನು ಪಡೆದುಕೊಳ್ಳಲು ಶಕ್ತರಾಗುವರೆಂದು ಆಶಿಸಲಾಗಿದೆ.

ಭಾರಿ ನೀರಾವರಿ.

ರಾಜ್ಯದ ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಮೂವತ್ತೆರಡು ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಸೇರ್ಪಡೆಯಾಗಿದ್ದು ಇವುಗಳ ಪೈಕಿ ೨೫ ಯೋಜನೆಗಳು ದ್ವಿತೀಯ ಪಾಂಚವಾರ್ಷಿಕ ಯೋಜನೆಯಿಂದ ಮುಂದುವರಿಸಲಾಗಿದ್ದ ಯೋಜನೆಗಳಾಗಿವೆ. ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆಯಿಂದ, ಘಟಪ್ರಭಾ ಯೋಜನೆ ಹಂತ ೧ ಇದರಿಂದ, ತುಂಗಭದ್ರಾ ಅಣೆಕಟ್ಟಿನಿಂದ, ನುಗು ಜಲಾಶಯದಿಂದ ಹಾಗೂ ಅಂಬ್ಲಿಗೋಲ ಪ್ರಾಜೆಕ್ಟಿನಿಂದ ನೀರಾವರಿಯ ಸಲುವಾಗಿ ನೀರನ್ನು ಬಿಡಲಾಗಿದೆ. ಪ್ರಸಕ್ತ ಸಾಲು ಅಖೈರಾಗುವುದಕ್ಕಿಂತ ಮೊದಲೇ ಈ ಪ್ರಾಜೆಕ್ಟುಗಳ ಮೇರೆಗೆ ೬.೯೧ ಲಕ್ಷ ಎಕರೆಗಳಷ್ಟು ಪ್ರದೇಶವು ನೀರಾವರಿಯಾಗುವಂತೆ ಏರ್ಪಡಿಸಲಾಗುವುದು. ತುಂಗಭದ್ರಾ ಪ್ರಾಜೆಕ್ಟಿನ ಎಡ ಹಾಗೂ ಬಲದಂಡೆಗಳ ಕೆಳಗೆ ಬರುವ ಪ್ರದೇಶದ ಅಭಿವೃದ್ಧಿಯ ಸಲುವಾಗಿ ಡಿವಿಜನಲ್ ಕಮಿಷನರವರ ದರ್ಜೆಯ ಒಬ್ಬ ಹಿರಿಯ ಅಧಿಕಾರಿಯನ್ನು ಆಡಳಿತಗಾರರಾಗಿ ನೇಮಿಸಲಾಗುವುದು. ಇದು ಒಂದು ಪ್ರತ್ಯೇಕ ಆಡಳಿತೆಯ ವಿಭಾಗವಾಗುವುದು. ಭಾರತ ಸರ್ಕಾರದವರು, ಮಲಪ್ರಭಾ ಹಾಗೂ ಮೇಲ್ಮಟ್ಟದ ಕೃಷ್ಣಾ ಯೋಜನೆಗಳನ್ನು ಕೈಕೊಳ್ಳುವುದಕ್ಕಾಗಿ ಅನುಮತಿಯನ್ನು ನೀಡಿದ್ದಾರೆ. ಇವುಗಳ ಕೆಲಸವು ಸಹ ಇಷ್ಟರಲ್ಲಿಯೇ ಪ್ರಾರಂಭವಾಗುವುದು. ಅದೇ ಮೇರೆಗೆ ಹಾರಂಗಿ ಹಾಗೂ ಹೇಮಾವತಿ ಯೋಜನೆಗಳನ್ನು ಸಹ ಬೇಗನೆ ಕೈಕೊಳ್ಳಲಾಗುವುದು.

ಕೃಷ್ಣಾ ಹಾಗೂ ಗೋದಾವರಿ ನೀರಿನ ಹಂಚಿಕ್ಕೆ.

ಕೃಷ್ಣಾ ಹಾಗೂ ಗೋದಾವರಿ ನೀರಿನ ಉಪಯೋಗದ ಸಂಬಂಧದಲ್ಲಿ ಭಾರತ ಸರ್ಕಾರದವರು ೨೫ನೇ ಮಾರ್ಚ್ ೧೯೬೩ರಂದು ಮಾಡಿದ ಸೂಚನೆಗಳಿಗೆ ನಮ್ಮ ಒಪ್ಪಿಗೆ ಇಲ್ಲವೆಂಬುದನ್ನು ನಮ್ಮ ಸರ್ಕಾರದವರು ಭಾರತ ಸರ್ಕಾರದವರಿಗೆ ತಿಳಿಸಿದ್ದಾರೆ. ಮೈಸೂರು ರಾಜ್ಯದಲ್ಲಿ ನೀರಾವರಿಯ ಅಭಿವೃದ್ಧಿಯ ಸಲುವಾಗಿ, ಈ ನೀರಿನ ಹಂಚಿಕೆ ವಿಚಾರದಲ್ಲಿ ಇರುವ ನಮ್ಮ ಹಕ್ಕಿನ ಪಾಲಾಂಶವನ್ನು ಪಡೆಯಲು ನಾವು ನಮ್ಮ ಪ್ರಯತ್ನವನ್ನು ಮುಂದುವರಿಸುವೆವು.

ಬೆಂಗಳೂರಿನೀರಿಗೆನ ಸರಬರಾಜು.

ಬೆಂಗಳೂರು ನಗರಕ್ಕೆ ಇರುವ ಸರಬರಾಜನ್ನು ಸುಧಾರಿಸಲು ಇರುವ ಅಗತ್ಯವನ್ನು ಕುರಿತು ನಾವು ನಮ್ಮ ಹಿಂದಿನ ಭಾಷಣದಲ್ಲಿ ಪ್ರಸ್ತಾಪಿಸಿದ್ದೇವೆ. ಬೆಂಗಳೂರು ನಗರದ ನೀರಿನ ಸರಬರಾಜನ್ನು ಈಗ ಪ್ರತಿದಿನಕ್ಕೆ ೧೭ ಎಮ್.ಜಿ.ಯಿಂದ ೨೫ ಎಮ್.ಜಿ. ವರೆಗೆ ಹೆಚ್ಚಿಸಲಾಗಿದೆ. ಮುಂಬರುವ ಬೇಸಿಗೆ ಕಾಲಕ್ಕಿಂತ ಮುಂಚೆ ಈ ಸರಬರಾಜನ್ನು ಪ್ರತಿದಿನಕ್ಕೆ ೨೮ ಎಮ್.ಜಿ. ವರೆಗೆ ಇನ್ನೂ ಹೆಚ್ಚಿಸಲಾಗುದೆಂದು ಆಶಿಸಲಾಗಿದೆ. ದೀರ್ಘಾವಧಿಯ ಕ್ರಮವೆಂದು ಸರ್ಕಾರದವರು ಕಾವೇರಿ ನೀರು ಸರಬರಾಜು ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ವಿಷಯದಲ್ಲಿ ಈಗಾಗಲೆ ನಿರ್ಧಾರವನ್ನು ಕೈಕೊಂಡಿದ್ದಾರೆ; ಈ ಯೋಜನೆಯು ಪೂರ್ತಿಯಾದ ಬಳಿಕ ಇದರಿಂದ ಪ್ರಥಮತಃ ಪ್ರತಿದಿನಕ್ಕೆ ೬೦ ಎಮ್.ಜಿ. ಯಷ್ಟು ಮತ್ತು ಅಂತಿಮವಾಗಿ ಪ್ರತಿದಿನಕ್ಕೆ ೧೨೦ ಎಮ್.ಜಿ. ಯಷ್ಟು ಹೆಚ್ಚಿನ ಸರಬರಾಜು ದೊರೆಯುವುದು.

ವಿದ್ಯುಚ್ಛಕ್ತಿಯ ಯೋಜನೆಗಳು.

೫೮.೮೮ ಕೋಟಿ ರೂಪಾಯಿಗಳ ಪರಿಷ್ಕೃತ ಅಂದಾಜಿನ ಶರಾವತಿ ಕಣಿವೆ ಯೋಜನೆಯ ಮೊದಲನೇ ಹಂತವು ಪೂರ್ತಿಯಾದ ಮೇಲೆ, ರಾಜ್ಯದಲ್ಲಿಯ ಒಟ್ಟು ಸ್ಥಾಪಿತ ಶಕ್ತಿಯು ಶರಾವತಿ, ಭದ್ರಾ ಹಾಗೂ ತುಂಗಭದ್ರಾ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವುದಕ್ಕಿಂತ ಮುಂಚೆ

೧,೮೮,೨೦೦ ಕಿಲೋವಾಟುಗಳಷ್ಟಿದ್ದು ಅದು ಈಗ ೪,೨೬,೨೦೦ ಕಿಲೋವ್ಯಾಟುಗಳಷ್ಟಾಗುವುದು. ಈಗಾಗಲೇ ಮಂಜೂರು ಮಾಡಲ್ಪಟ್ಟಿರುವಂಥ ೨ನೇ ಹಂತದಲ್ಲಿ ಒಂದೊಂದೂ ೮೯,೧೦೦ ಕಿಲೋವ್ಯಾಟಿನಷ್ಟು ಸಾಮರ್ಥ್ಯವುಳ್ಳ ೫ ಜನರೇಟರುಗಳನ್ನು ಪ್ರಾರಂಭಿಸಲಾಗುವುದು ; ೩ನೇ ಹಂತದಲ್ಲಿ ಅಷ್ಟೇ ಸಾಮರ್ಥ್ಯವುಳ್ಳ ಇನ್ನೂ ಮೂರು ಜನರೇಟರುಗಳನ್ನು ಸೇರಿಸಲಾಗುವುದು. ಅಂತಿಮವಾಗಿ, ಶರಾವತಿಯಿಂದಲೇ ೮,೯೧,೦೦೦ ಕಿಲೋವ್ಯಾಟಿನಷ್ಟು ಉತ್ಪಾದನೆಯಾಗುವುದೆಂಬ ನಿರೀಕ್ಷೆ ಇದೆ. ಇತರ ಕಾಮಗಾರಿಗಳೊಡನೆ ಕಾಳೀನದಿ ಹಾಗೂ ಶರಾವತಿ 'ಟೇಲ್-ರೇಸ್' ಇವುಗಳ ಪರಿಶೀಲನಾ ಕಾರ್ಯವು ಪ್ರಗತಿಪಥದಲ್ಲಿದೆ ಮತ್ತು ನಿರೀಕ್ಷಿಸಲಾದ ಉತ್ಪನ್ನವು, ಅನುಕ್ರಮವಾಗಿ, ೧ ದಶಲಕ್ಷ ಹಾಗೂ ೦.೩ ದಶಲಕ್ಷ ಕಿಲೋವ್ಯಾಟಿನಷ್ಟು ಆಗುವ ಸಂಭವವಿದೆ.

೧೯೬೩-೬೪ನೇ ವರ್ಷದ ಅವಧಿಯಲ್ಲಿ ೧೨೭ ಗ್ರಾಮಗಳಿಗೆ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಪೂರೈಸಲಾಯಿತು. ವಿದ್ಯುಚ್ಛಕ್ತಿಯ ತೀವ್ರ ಕೊರತೆ ಇದ್ದಾಗ್ಯೂ, 'ಪರ್ಯಾಯ ಕ್ರಮದ' ಸರಬರಾಜಿನ ಪದ್ಧತಿಯನ್ನು ಮುಂದುವರಿಸಿ ನೀರಾವರಿ ಪಂಪ್‌ಸೆಟ್ಟುಗಳು ಹಗಲಿನಲ್ಲಿ ಕೆಲಸಮಾಡುವಂತೆ ಏರ್ಪಾಟು ಮಾಡಲಾಗಿದೆ. ವಿದ್ಯುಚ್ಛಕ್ತಿಯ ತೀವ್ರತರವಾದ ಕೊರತೆಯನ್ನು ಪೂರೈಸುವುದಕ್ಕಾಗಿ, ೨೦,೦೦೦ ಕಿಲೋವಾಟಿನ ಒಟ್ಟು ಸಾಮರ್ಥ್ಯವುಳ್ಳ ಆಯಾತಮಾಡಲಾದ ಎರಡು ಗ್ಯಾಸ್ ಟರ್ಬೈನ್ ಜನರೇಟರುಗಳು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡಲಿವೆ. ಭದ್ರಾ ಯೋಜನೆಯಿಂದ ಇತ್ತೀಚೆಗೆ ೨೬,೦೦೦ ಕಿಲೋವ್ಯಾಟಿನಷ್ಟು ವಿದ್ಯುಚ್ಛಕ್ತಿಯು ದೊರೆತಿರುವುದರಿಂದ, ಕಳೆದ ವರುಷ ಮನೆ ಬಳಕೆ, ಸಾರ್ವಜನಿಕ ದೀಪ ಹಾಗೂ ಜಾಹೀರಾತು ಇವುಗಳಿಗಾಗಿ ಉಪಯೋಗಿಸಲ್ಪಡುವ ವಿದ್ಯುತ್‌ಚ್ಛಕ್ತಿಯ ಮೇಲೆ ವಿಧಿಸಲಾದ ತುರ್ತುಪರಿಸ್ಥಿತಿಯ ವಿದ್ಯುಚ್ಛಕ್ತಿ ಖೋತಾಗಳನ್ನು ನಿಲ್ಲಿಸಲಾಗಿದೆ.

ಲಭ್ಯವಿರುವ ವಿದ್ಯುಚ್ಛಕ್ತಿಯ ಸಕ್ಷಮ ಹಾಗೂ ಸುಧಾರಿತ ರೀತಿಯ ಉಪಯೋಗವನ್ನು ಮಾಡಿಕೊಳ್ಳುವ ಉದ್ದೇಶದಿಂದ ಮತ್ತು ಹಾಗೆಯೇ ಯಂತ್ರ ಸ್ಥಾಪನೆಗಳ ವೆಚ್ಚಗಳನ್ನೂ ಹಾಗೂ ಇತರ ಬೇರೆ ಬೇರೆ ವೆಚ್ಚಗಳನ್ನು ಕಡಮೆಮಾಡುವ ಉದ್ದೇಶದಿಂದ ಮೈಸೂರು ರಾಜ್ಯವು, ಮೈಸೂರು, ಕೇರಳ, ಮದ್ರಾಸು ಹಾಗೂ ಆಂಧ್ರ—ಇವುಗಳನ್ನೊಳಗೊಂಡ ದಕ್ಷಿಣ ವಿದ್ಯುಜ್ಜಾಲವನ್ನು (ಸದರ್ನ್ ಗ್ರಿಡ್) ಸೇರಿಕೊಂಡಿದೆ.

ಶರಾವತಿ ಕಣಿವೆ ಯೋಜನೆಯನ್ನು ಪ್ರಾರಂಭಿಸುವುದರಿಂದ ದೊರೆಯುವ ವಿದ್ಯುಚ್ಛಕ್ತಿಯ ಸಾಧನ ಸಂಪತ್ತಿಯನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಮತ್ತು ರಾಜ್ಯದಲ್ಲಿಯ ಕೈಗಾರಿಕೆಗಳನ್ನು ಅತ್ಯಂತ ಸಕ್ಷಮ ಸ್ಥಾನದಲ್ಲಿರಿಸಿ ಅವುಗಳನ್ನು ಸೂಕ್ತರೀತಿಯಲ್ಲಿ ಪ್ರಸರಿಸುವ ಸಲುವಾಗಿ ಪೂರ್ವಭಾವಿ ಯೋಜನೆಯ ಏರ್ಪಾಟುಗಳನ್ನು ಮಾಡಲು ರಾಜ್ಯ ಸರ್ಕಾರದವರು ಉನ್ನತಾಧಿಕಾರವುಳ್ಳ ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಬಂದರುಗಳು ಹಾಗೂ ರೈಲ್ವೆಗಳು.

ಹಿಂದಿನಸಲ ನಾವು ನಿಮ್ಮನ್ನುದ್ದೇಶಿಸಿ ಭಾಷಣಮಾಡಿದ್ದಾಗ್ಗೆ, ಮಂಗಳೂರಿನಲ್ಲಿ ಒಂದು ದೊಡ್ಡ ಸರ್ವಋತು ಬಂದರಿನ ನಿರ್ಮಾಣದ ಪ್ರಶ್ನೆಯು ಭಾರತ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತು. ಈ ಯೋಜನೆಯು ಈಗ ಮಂಜೂರಾಗಿ ಅದರ ಕಾರ್ಯವು ಪ್ರಗತಿಪಥದಲ್ಲಿದೆಯೆಂಬುದು ಸಂತೋಷದ ಸಂಗತಿ. ಮಂಗಳೂರು ನಗರ ಹಾಗೂ ಯೋಚಿತ ಬಂದರು ಇವುಗಳ ನಡುವೆ ರೈಲ್ವೆ ಮಾರ್ಗವನ್ನು ಹಾಕುವ ಕಾರ್ಯವು ಕೇಂದ್ರದ ರೈಲ್ವೆ ಮಂತ್ರಿಯವರಿಂದ ಉದ್ಘಾಟಿಸಲ್ಪಟ್ಟಿರುತ್ತದೆ. ಇವುಗಳ ಜತೆಗೆ ಸುಮಾರು ೧೨೦ ಮೈಲಿಗಳ ದೂರದ ಹಾಸನ—ಮಂಗಳೂರು ರೈಲ್ವೆ ಮಾರ್ಗದ ಸರ್ವೇ ಕೆಲಸವನ್ನು ಹಾಗೂ ಅದನ್ನು ಎಲ್ಲಿ ಹಾಕಬೇಕೆಂಬುದನ್ನೂ ಅಂತಿಮಗೊಳಿಸಲಾಗಿದೆ. ಹಡಗುಗಳು ಸಮುದ್ರದಲ್ಲಿ ನಿಲ್ಲಲು ಅನುಕೂಲವಾಗಿರುವ ಪಕ್ಕ ಪಕ್ಕದಲ್ಲಿಯ ಸ್ಥಳದಿಂದೊಡಗೂಡಿದ ಸರ್ವಋತು ಮಧ್ಯವರ್ತಿ ಬಂದರಾಗಿ ಕಾರವಾರ ಬಂದರನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಅಭಿವೃದ್ಧಿ ಕಾರ್ಯದ ಮೊದಲನೆಯ ಹಂತವು ಈಗಾಗಲೇ ಪೂರ್ತಿಯಾಗುವುದರಲ್ಲಿದೆ ; ಎರಡನೆಯ ಹಂತದ ಸಂಬಂಧದಲ್ಲಿ ಪುಣೆಯ ಸಂಶೋಧನಾ ಕೇಂದ್ರದಲ್ಲಿ ನಡೆಸಲಾಗುತ್ತಿರುವ ಮಾದರಿಯ ಅಭ್ಯಾಸಗಳ ಫಲಿತಾಂಶಗಳನ್ನು ನಿರೀಕ್ಷಿಸಲಾಗುತ್ತಿದೆ. ತೃತೀಯ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹೊನ್ನಾವರ, ಕುಂದಾಪುರ, ಮಲ್ಪೆ, ಬೆಳಿಕೆರೆ ಹಾಗೂ ಭಟ್ಕಳ ಮುಂತಾದ ಇತರ

ಕೆಲವು ಚಿಕ್ಕ ಬಂದರುಗಳನ್ನು ಸಹಾಯಕ (ಸಬ್ಸಿಡಿಯರಿ) ಬಂದರುಗಳಾಗಿ ಅಭಿವೃದ್ಧಿಗೊಳಿಸಬೇಕಾಗಿದೆ. ದ್ವಿತೀಯಪಾಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಈ ಬಂದರುಗಳಲ್ಲಿ ೦.೪ ದಶಲಕ್ಷ ಟನ್ನುಗಳಷ್ಟು ಸಾಗಾಣಿಕೆಯಾಗುತ್ತಿದ್ದುದಕ್ಕೆ ತೃತೀಯ ಪಾಂಚವಾರ್ಷಿಕ ಯೋಜನೆಯ ಕೊನೆಗೆ ಈ ಬಂದರುಗಳಲ್ಲಿ ೧.೮ ದಶಲಕ್ಷ ಟನ್ನುಗಳಷ್ಟು ಸಾಗಾಣಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಹಾಸನ—ಮಂಗಳೂರು ರೈಲ್ವೆ 'ಲೈನು' ದೊಡ್ಡಳತೆಯ ರೈಲ್ವೆ 'ಲೈನಾಗಿ' ('ಬ್ರಾಡ್-ಗೇಜ್ ಲೈನ್') ಕೈಕೊಳ್ಳಲ್ಪಡುವುದೆಂಬುದನ್ನು ದೃಢಪಡಿಸಿಕೊಳ್ಳಲು ನಮ್ಮ ಸರ್ಕಾರದವರು ಕುತೂಹಲವುಳ್ಳವರಾಗಿರುತ್ತಾರೆ. ರಾಜ್ಯದ ವ್ಯಾಪಾರ ನಿಗಮವು ('ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್') ವರ್ಷವೊಂದಕ್ಕೆ ೨ ರಿಂದ ೫ ದಶಲಕ್ಷ ಟನ್ ಪ್ರಮಾಣದ ಕಬ್ಬಿಣದ ಅದುರನ್ನು ನಿರ್ಯಾತಮಾಡುವ ತಕ್ಷಣದ ಕಾರ್ಯ ಕ್ರಮವನ್ನು ಇಟ್ಟುಕೊಂಡಿದೆ. ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯಲ್ಲಿ, ನಿರ್ಯಾತಮಾಡಬೇಕೆಂದು ಉದ್ದೇಸಿಸಲಾಗಿರುವ ೨೫ ದಶಲಕ್ಷ ಟನ್ ಪ್ರಮಾಣದ ಕಬ್ಬಿಣದ ಅದುರಿನ ಪೈಕಿ ಕನಿಷ್ಠಪಕ್ಷ ಸೇಕಡಾ ೫೦ ರಷ್ಟು ಪ್ರಮಾಣದ ಅದುರನ್ನು ಪಶ್ಚಿಮ ತೀರದ ಬಂದರುಗಳ ಮೂಲಕ ನಿರ್ಯಾತ ಮಾಡಬೇಕಾಗುವುದು ; ಈ ಬಂದರುಗಳ ಪೈಕಿ, ಎಲ್ಲ ಋತುಗಳಲ್ಲಿಯೂ ಉಪಯೋಗಿಸಬಹುದಾಗಿದ್ದು ಮರ್ಮಗೋವಾ ದಕ್ಷಿಣಕ್ಕಿರುವ ಒಂದೇ ಒಂದು ಪ್ರಧಾನ ('ಮೇಜರ್') ಬಂದರೆಂದರೆ ಮಂಗಳೂರು ಬಂದರು, ಅಧಿಕ ಪ್ರಮಾಣದಲ್ಲಿ ನಿರ್ಯಾತಮಾಡಲು ಆವಶ್ಯಕವಾಗಿರುವ ಅದುರನ್ನು ರೈಲ್ವೆ ಮುಖಾಂತರವಾಗಿ ರವಾನಿಸಿದ ಹೊರತು ಬಂದರಿನಿಂದ ಸಂಪೂರ್ಣವಾಗಿ ಪ್ರಯೋಜನವನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲದೆ, ಈ ಬಂದರಿನ ಹಿನ್ನಡಿನಲ್ಲಿ ೧,೦೦೦ ದಶಲಕ್ಷ ಟನ್ ಪ್ರಮಾಣಕ್ಕಿಂತಲೂ ಮಿಗಿಲಾದ ಉತ್ತಮ ದರ್ಜೆಯ ('ಹೈಗ್ರೇಡ್') ಅದುರು ದೊರಕುವುದಾಗಿ ಈಗ ಸ್ಥಿರಪಟ್ಟಿದೆ, ಆದಕಾರಣ, ಹಾಸನದಿಂದ ಮಂಗಳೂರಿಗೆ ಹೋಗುವ ದೊಡ್ಡಳತೆಯ ರೈಲ್ವೆ 'ಲೈನ'ನ್ನು ಹಾಕುವುದು ಅತ್ಯಧಿಕ ಪ್ರಾಮುಖ್ಯತೆಯುಳ್ಳದ್ದಾಗಿದೆ ಹಾಗೂ ಪ್ರಾಶಸ್ತ್ಯವುಳ್ಳದ್ದಾಗಿದೆ.

ರಸ್ತೆಗಳು ಮತ್ತು ಕಟ್ಟಡಗಳು.

ಪಶ್ಚಿಮ ಕರಾವಳಿಯ ರಸ್ತೆಯನ್ನು ಏರ್ಪಡಿಸುವುದರಲ್ಲಿಯೂ ಮತ್ತು ಅದುರನ್ನು ರವಾನಿಸಲು ಉಪಯೋಗಿಸುವ ರಸ್ತೆಗಳನ್ನು ಮೇಲ್ಪಾಟುಗೊಳಿಸುವುದರಲ್ಲಿಯೂ ಮತ್ತಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಬಾಣಸಂದ್ರ-ಹಾಸನ-ಮಂಗಳೂರು ರಸ್ತೆಗೆ ಕಲ್ಲರಗನ್ನು ಹಾಕುವ ಕೆಲಸವು ಶೀಘ್ರದಲ್ಲಿಯೇ ಮುಗಿಯುವುದಾಗಿ ನಿರೀಕ್ಷಿಸಲಾಗಿದೆ. ಬಾಳಿಗುಳಿ ಸಂಧಿಸ್ಥಾನದಿಂದ ('ಜಂಕ್ಷನ್') ಗೋವಾ ದಕ್ಷಿಣ ಸರಹದ್ದಿನವರೆಗೆ ಹೋಗುವ ಪಶ್ಚಿಮ ಕರಾವಳಿ ರಸ್ತೆಯನ್ನು ಬಡಾವಣೆಗೊಳಿಸುವ ಕೆಲಸವನ್ನು ಕೈಕೊಳ್ಳಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ಇಲಾಖೆಯವರು ೧೩ ಭಾರಿ ಪ್ರಮಾಣದ ('ಮೇಜರ್') ಸೇತುವೆಗಳನ್ನು ಕಟ್ಟಿಪೂರೈಸಿರುತ್ತಾರೆ ; ಈ ಸೇತುವೆಗಳ ಪೈಕಿ ಪ್ರತಿಯೊಂದೂ ೧೦೦ ಅಡಿಗಳಿಗಿಂತಲೂ ಹೆಚ್ಚು ಏಕಪರಿಮಾಣಾತ್ಮಕ ಅಳತೆಯ ('ಲೀನಿಯರ್') ಜಲಮಾರ್ಗವುಳ್ಳದಾಗಿದೆ. ಅಲ್ಲದೆ, ಇಲಾಖೆಯವರು ೨೫೦ ಮೈಲಿಗಳಷ್ಟು ದೂರ ರಸ್ತೆಗಳನ್ನು ಏರ್ಪಡಿಸುವುದರ ಹಾಗೂ ಅವುಗಳನ್ನು ಮೇಲ್ಪಾಟುಗೊಳಿಸುವುದರ ಜತೆಗೆ ಸುಮಾರು ೨೫೦ ಮೈಲಿಗಳಷ್ಟು ರಸ್ತೆಗಳಿಗೆ ಕಲ್ಲರಗನ್ನು ಹಾಕಿರುತ್ತಾರೆ. ವಿಜಾಪುರ ಮತ್ತು ಸೊಲ್ಲಾಪುರವೊಂದಿಗೆ ಸಂಪರ್ಕವನ್ನೇರ್ಪಡಿಸುವ ೧೩ನೇ ಕ್ರಮಾಂಕದ ರಾಷ್ಟ್ರದ ರಾಜಮಾರ್ಗಕ್ಕೆ ಸಂಬಂಧಪಟ್ಟ ತಾಂತ್ರಿಕ ('ಟೆಕ್ನಿಕಲ್') ಪರಿಶೀಲನೆಯೂ ಅದಕ್ಕೆ ಸಂಬಂಧಪಟ್ಟ ತಪಶೀಲಾದ ಯೋಜನೆಯನ್ನು ತಯಾರಿಸುವ ಕೆಲಸವೂ ಮುಗಿದಿದೆ. ಮುಂದಿನ ಎರಡು ವರ್ಷಗಳಲ್ಲಿ, ತುಂಗಭದ್ರಾ ಮತ್ತು ಕೃಷ್ಣಾನದಿಗಳ ಭಾರಿ ಪ್ರಮಾಣದ 'ಮೇಜರ್') ಸೇತುವೆಗಳನ್ನು ಕಟ್ಟಲು, ಭಾರತ ಸರ್ಕಾರದವರು ತಾಂತ್ರಿಕವಾಗಿ ('ಟೆಕ್ನಿಕಲ್') ಅನುಮತಿಯನ್ನು ಕೊಡುವರೆಂದೂ ಹಾಗೂ ಅವಶ್ಯಕವಾಗಿ ಬೇಕಾದ ಹಣವನ್ನೊದಗಿಸುವರೆಂದೂ ನಿರೀಕ್ಷಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾರ್ಗಗಳನ್ನು ಏರ್ಪಡಿಸುವ ವಿಚಾರದಲ್ಲಿ, ತೀವ್ರವಾದ ಹಣದ ಕೊರತೆಯಿದ್ದಾಗ್ಯೂ ಸಹ ಸ್ವಲ್ಪಮಟ್ಟಿಗೆ ಪ್ರಗತಿಯನು ಸಾಧಿಸಲಾಗಿದೆ. ಯೋಜನೆಯ ಮೇರೆಗೆ ಏರ್ಪಡಿಸಬೇಕಾದ ೧೨,೭೫೬ ಮೈಲಿಗಳಷ್ಟು ಉದ್ದದ ಸಂಚಾರ ಮಾರ್ಗಗಳ ಪೈಕಿ, ಇದುವರಗೆ ೯,೭೭೨ ಮೈಲಿಗಳಷ್ಟು ಉದ್ದದ ಸಂಚಾರ ಮಾರ್ಗಗಳ ಕೆಲಸವು ಮುಗಿದಿದೆ.

ಅನೇಕ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಕಸಬೆಗಳಲ್ಲಿರತಕ್ಕ ವಾಸದ ಮನೆಗಳ ಅಭಾವವನ್ನು ಹೋಗಲಾಡಿಸಲು ಸುಮಾರು ೬೦೦ ವಸತಿಗೃಹಗಳನ್ನು ('ಕ್ವಾರ್ಟರ್ಸ್') ಕಟ್ಟುವುದಕ್ಕೆ ಸಂಬಂಧಿಸಿದ ಯೋಜನೆಯನ್ನು ತಯಾರಿಸುವ ಕೆಲಸವು ಮುಗಿಯುತ್ತಾ ಬಂದಿದೆ. ಅಲ್ಲದೆ, ಹತ್ತು ವರ್ಷಗಳ

ಕಾಲಾವಧಿಯಲ್ಲಿ ಸುಮಾರು ೫೦೦ ಲಕ್ಷ ರೂಪಾಯಿಗಳ ವೆಚ್ಚದಿಂದ ಕನಿಷ್ಠಪಕ್ಷ ೩,೫೦೦ ಹೆಚ್ಚು ವಸತಿ ಗೃಹಗಳನ್ನು ('ಕ್ವಾರ್ಟರ್ಸ್') ಕಟ್ಟುವುದಕ್ಕಾಗಿ ಜೀವವಿಮಾ 'ಕಾರ್ಪೊರೇಷನ್ ಸಂಸ್ಥೆಯಿಂದ ('ಎಲ್. ಐ. ಸಿ.') ಸಾಲದ ನೆರವನ್ನು ಸಹ ಪಡೆದು ಕೊಳ್ಳಬೇಕೆಂದು ಉದ್ದೇಶಿಸಲಾಗಿದೆ.

ರಸ್ತೆ ಸಾರಿಗೆ.

ಮೈಸೂರು ರಾಜ್ಯದ ರಸ್ತೆ ಸಾರಿಗೆ ಕಾರ್ಪೊರೇಷನ್ ಸಂಸ್ಥೆಯ ಮಾಲೀಕತೆಯಲ್ಲಿ ಪ್ರಯಾಣಿಕರುಗಳನ್ನು ಒಯ್ಯುವ ೧,೯೬೬ಳ ವಾಹನಗಳು ಇವೆ. ಈ ವಾಹನಗಳು ೧,೪೦೭ ಮಾರ್ಗಗಳಲ್ಲಿ ೪೬,೮೨೧ ಮೈಲಿಗಳ ದೂರದವರೆಗೆ ಸಂಚರಿಸುತ್ತವೆ. ಎಂದರೆ, ಈ ವಾಹನಗಳ ಸಂಚಾರವು ರಾಜ್ಯದ ಮೂರನೇ-ಎರಡು ಭಾಗಕ್ಕಿಂತಲೂ ಹೆಚ್ಚು ವಿಸ್ತೀರ್ಣದ ಪ್ರದೇಶದಲ್ಲಿ ಪ್ರಸರಿಸಿದೆ. ಪ್ರಸಕ್ತ ಪಾಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ, ಬಳ್ಳಾರಿಯಲ್ಲಿನ ಮತ್ತಷ್ಟು ಪ್ರದೇಶಗಳಲ್ಲಿಯೂ ಮತ್ತು ಇನ್ನೂ ೧೦ ಇತರ ವಿಭಾಗಗಳಲ್ಲಿಯೂ ('ಸೆಕ್ಷನ್ಸ್', ಮೋಟಾರು ವಾಹನಗಳ 'ಸರ್ವೀಸು'ಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಕಾರ್ಪೊರೇಷನ್ನಿನವರು ಉದ್ದೇಶಿಸಿರುತ್ತಾರೆ. ಬಸ್ ಸ್ಟೇಷನ್‌ಗಳು, ಪ್ರಯಾಣಿಕರುಗಳಿಗೆ ಬೇಕಾದ ಆಸರೆಗಳು—ಇವೇ ಮೊದಲಾದುವನ್ನು ಕಟ್ಟುವುದರ ಮೂಲಕ ಸಂಚಾರ ಮಾಡುವ ಸಾರ್ವಜನಿಕರಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕೆಂಬ ಕಾರ್ಯಕ್ರಮವನ್ನು ಸಹ ಕಾರ್ಪೊರೇಷನ್ ಸಂಸ್ಥೆಯವರು ಇಟ್ಟುಕೊಂಡಿರುತ್ತಾರೆ.

ವ್ಯವಸಾಯ ಮತ್ತು ಅರಣ್ಯಗಳು.

ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿಯನ್ನು ಉತ್ತಮ ಪಡಿಸುವುದಕ್ಕೆ ವ್ಯವಸಾಯ ಇಲಾಖೆಯವರು ವಿಶೇಷ ರೀತಿಯ ಗಮನವನ್ನು ಕೊಡುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ ವಿದ್ಯುಚ್ಛಕ್ತಿಯ ಮತ್ತು 'ಡೀಸಲ್' ಎಣ್ಣೆ ಎಂಜಿನ್ 'ಪಂಪು' ಸೆಟ್ಟುಗಳನ್ನು ಹಂಚುವುದಕ್ಕಾಗಿ ೧೨೭ ಲಕ್ಷ ರೂಪಾಯಿಗಳ ಹೆಚ್ಚಿಗೆ ಮೊಬಲಗನ್ನು ನಿರ್ದಿಷ್ಟ ಉದ್ದೇಶದಿಂದ ಮೀಸಲಿಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಕೈಕೊಳ್ಳಲಾಗಿರುವ ತೀವ್ರಗಾಮಿಯಾಗಿ ವ್ಯವಸಾಯಾಭಿವೃದ್ಧಿ ಕಾರ್ಯಗಳನ್ನು ನಡೆಸುವ ಯೋಜನೆಯ ('ಪ್ಯಾಕೇಜ್ ಪ್ರೋಗ್ರಾಂ') ಕಾರ್ಯಕಲಾಪಗಳು ಹೆಚ್ಚು ಭರದಿಂದ ಮುಂದುವರಿಯುತ್ತವೆಂದು ನಿರೀಕ್ಷಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಸಾಗುವಳಿಯನ್ನು ತೀವ್ರಗೊಳಿಸಲು ಒಂದು ತೀವ್ರಗಾಮಿ ('ಪ್ಯಾಕೇಜ್') ಕಾರ್ಯಕ್ರಮವನ್ನು ಮತ್ತು ರಾಯಚೂರು ಜಿಲ್ಲೆಯಲ್ಲಿ ನೆಲಗಡಲೆಯ ಸಾಗುವಳಿಗಾಗಿ ತತ್ಸಮಾನವಾದ ಒಂದು ಕಾರ್ಯಕ್ರಮವನ್ನೂ ಮಂಜೂರು ಮಾಡಲಾಗಿದೆ. ಇತ್ತೀಚೆಗೆ ಬಿಡುಗಡೆ ಮಾಡಲ್ಪಟ್ಟ ಹೊಸತರದ ಹತ್ತಿಯ ಜತೆಗೆ 'ಸೀ ಐಲ್ಯಾಂಡ್ ಕಾಟನ್' ಬೆಳೆಯುವ ಎಕರೆಗಳ ಪ್ರದೇಶವನ್ನು ವಿಸ್ತರಿಸಲು ಈಗ ಹೆಚ್ಚು ಗಮನ ಕೊಡಲಾಗುತ್ತಿದೆ. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ೫೫ ಲಕ್ಷ ರೂಪಾಯಿಯ ಖರ್ಚಿನಲ್ಲಿ ಭೂಸಾರ ರಕ್ಷಣೆಯ ಏರ್ಪಾಡುಗಳನ್ನೂ ಮತ್ತು 'ಕಾಂಟೂರ್ ಬಂಡಿಂಗ್' ಯೋಜನೆಯನ್ನೂ ಕೈಕೊಳ್ಳಲಾಗಿದೆ.

ತೇಗ, ಮೃದುವಾದ ಮರ ಮೊದಲಾದುವನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿದುದರಿಂದ ಉಂಟಾದ ನಷ್ಟಭರ್ತಿಗಾಗಿ ಕಾಡುಗಳನ್ನು ಬೆಳೆಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ; ಮತ್ತು ತೃತೀಯ ಪಾಂಚವಾರ್ಷಿಕ ಯೋಜನೆಯ ಮೇರೆಗೆ ೨ ಲಕ್ಷ ಎಕರೆಗಳಲ್ಲಿ ಈ ಜಾತಿಯ ಮರಗಳನ್ನು ಬೆಳೆಸಬೇಕೆಂದು ಉದ್ದೇಶಿಸಲಾಗಿದೆ. ಮೈಸೂರು ವಿಧಾನಮಂಡಲದಲ್ಲಿ ತೀರ್ಮಾನಗೊಳಿಸಲ್ಪಟ್ಟ ಮೈಸೂರು ಅರಣ್ಯಗಳಿಗೆ ಸಂಬಂಧಪಟ್ಟ ವಿಧೇಯಕವೂ ಮತ್ತು ಮೈಸೂರು ವನ್ಯ ಮೃಗಗಳ ಮತ್ತು ವನ್ಯ ಪಕ್ಷಿಗಳ ರಕ್ಷಣೆಯ ಸಂಬಂಧವಾದ ವಿಧೇಯಕವೂ ಈಗ ರಾಷ್ಟ್ರಪತಿಯವರ ಸಮ್ಮತಿಯನ್ನು ಪಡೆದಿರುತ್ತವೆಂದು ತಿಳಿಸಲು ನಮಗೆ ಸಂತೋಷ.

ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ನಂದಿ ಮತ್ತು ಕೆಮ್ಮಣ್ಣುಗುಂಡಿ ಆರೋಗ್ಯ ಕೇಂದ್ರಗಳಲ್ಲಿ ಫಲಪುಷ್ಪಗಳ ವ್ಯವಸಾಯದ ಇಲಾಖೆಯವರು ಸುಧಾರಣೆಗಳನ್ನು ಮಾಡಿರುತ್ತಾರೆ. ತುಂಗಭದ್ರಾಯೋಜನೆಯ ಪ್ರದೇಶದಲ್ಲಿ ತೋಟದ ಬೆಳೆಗಳನ್ನೂ ಮತ್ತು ಹಣ್ಣುಗಳನ್ನೂ ಇನ್ನೂ ಹೆಚ್ಚು ಪ್ರದೇಶದಲ್ಲಿ ಬೆಳೆಸಲಾಗಿದೆ. ರೊಕ್ಕದ ಬೆಳೆಗಳ ವಿಷಯದಲ್ಲಿ ಹೇಳುವುದಾದರೆ, ೮೬೦ ಎಕರೆಗಳ ಪ್ರದೇಶದಲ್ಲಿ ಏಲಕ್ಕಿ ಬೆಳೆಯನ್ನು ೧,೫೦೦ ಎಕರೆಗಳ ಪ್ರದೇಶದಲ್ಲಿ ಕಾಳು ಮೆಣಸಿನ ಬೆಳೆಯನ್ನು ೧೫,೦೬೦ ಎಕರೆಗಳ ಪ್ರದೇಶದಲ್ಲಿ ಗೋಡಂಬಿ ಬೆಳೆಯನ್ನು ಇಡಲಾಗಿದೆ.

ಇಂಡೋ ನಾರ್ವೇಜಿಯನ್ ಪ್ರಾಜೆಕ್ಟ್ ಮೇರೆಗೆ ನಾರ್ವೇಜಿಯನ್ ತಂಡದವರ ಸಹಾಯದಿಂದ ಮೀನಿನ ಉತ್ಪನ್ನವನ್ನು ಹೆಚ್ಚಿಸುವ ಕಾರ್ಯವು ಪ್ರಗತಿಯಿಂದ ಸಾಗುತ್ತಿದೆ. ಕಾರವಾರದಲ್ಲಿ ಉಪಯೋಗಿಸಲು ವಿವಿಧ ಸಲಕರಣೆಗಳೂ, 'ವರ್ಕ್‌ಷಾಪ್' ಉಪಕರಣಗಳೂ ಮೀನನ್ನು ಕೆಡದಂತೆ ಶೀತಲವಾಗಿಡಲು ಸಾಧಕವಾದ ಯಂತ್ರ ಸಲಕರಣಗಳೇ ಮುಂತಾದುವುಗಳು ನಮ್ಮಲ್ಲಿಗೆ ಬಂದಿವೆ. ನಾರ್ವೆಯ ತಜ್ಞರು ಕಾರವಾರದಲ್ಲಿಯ ನಮ್ಮ ಮೀನುಗಾರರಿಗೆ ತರಬೇತಿಯನ್ನು ಕೊಡುತ್ತಿದ್ದಾರೆ. ಜಪಾನ್ ಸರ್ಕಾರದ ಸಹಾಯದಿಂದ ಮಂಗಳೂರಿನಲ್ಲಿ ಒಂದು ಮೀನಿನ ಸಂಸ್ಕರಣ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ; ಮತ್ತು ೩೦ ವಿದ್ಯಾರ್ಥಿಗಳನ್ನು ಒಂದು ವರ್ಷದ ವ್ಯಾಸಂಗ ಕ್ರಮಕ್ಕೆ (ಕೋರ್ಸಿಗೆ) ಸೇರಿಸಿಕೊಳ್ಳಲಾಗಿದೆ. ಶೀತಲವಾಗಿಟ್ಟ ಕೆಲವು (ಮೀನುಗಳ) ಉತ್ಪನ್ನಗಳನ್ನು ಅಮೇರಿಕದ ಸಂಯುಕ್ತ ರಾಜ್ಯಗಳಿಗೆ ನಿರ್ಯಾತಮಾಡುವುದರ ಮೂಲಕ, ಸಂಬಂಧಪಟ್ಟ ಇಲಾಖೆಯವರು ೨೫ ಲಕ್ಷ ರೂಪಾಯಿಗಳ ವಿದೇಶಿ ವಿನಿಮಯವನ್ನು ಸಂಪಾದಿಸಿರುತ್ತಾರೆ. ದೋಣಿಗಳನ್ನು ರಚಿಸುವುದಕ್ಕಾಗಿ ಇಲಾಖೆಯು ೪೫ ಡೀಸೆಲ್ ಎಂಜಿನ್ನುಗಳನ್ನು ಸಂಪಾದಿಸಿದೆ.

ಕೈಗಾರಿಕೆಗಳು.

ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಧಾರಾಳವಾಗಿ ಹಣ ಸಾಲ ದೊರೆಯುವ ಸೌಕರ್ಯಗಳನ್ನು ಒದಗಿಸುವ ಮೂಲಕ ಮತ್ತು ಅಗತ್ಯವಾಗಬಹುದಾದಂಥ ಇತರ ಸಹಾಯವನ್ನು ನೀಡುವ ಮೂಲಕ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಪ್ರೋತ್ಸಾಹ ನೀಡಲು ಒಂದು ಕೈಗಾರಿಕೆಯ ಸಂಚಯ ಮತ್ತು ಅಭಿವೃದ್ಧಿ ನಿಗಮವನ್ನೇರ್ಪಡಿಸುವುದಕ್ಕೆ ಸರ್ಕಾರ ಮಂಜೂರಾತಿಯನ್ನು ಕೊಟ್ಟಿದೆ.

ಇನ್ನೂ ಒಂದು ಲಕ್ಷ ಟನ್ ಹೆಚ್ಚು ಉಕ್ಕನ್ನು ಉತ್ಪತ್ತಿ ಮಾಡುವ ಉದ್ದೇಶದ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಉಕ್ಕು ವಿಸ್ತರಣಾ ಯೋಜನೆಯು ಪ್ರಗತಿ ಹೊಂದುತ್ತಿವೆ. ಭದ್ರಾವತಿಯಲ್ಲಿ ೭೭,೦೦೦ ಟನ್ನುಗಳಷ್ಟು ವಿಶೇಷ ರೀತಿಯ ಉಕ್ಕನ್ನು ಉತ್ಪನ್ನ ಮಾಡುವ ಒಂದು ಯೋಜನೆಗೆ ಭಾರತ ಸರ್ಕಾರ ಅನುಮೋದನೆಯನ್ನು ಕೊಟ್ಟಿದೆ; ಮತ್ತು ಇದಕ್ಕೆ ಇತ್ತೀಚೆಗೆ ಆಖೈರಾಗಿ ತೀರ್ಮಾನಿಸಲ್ಪಟ್ಟ ಮೇರೆಗೆ ಜರ್ಮನಿಯಿಂದ ಕೊಡಲಾಗುವ ಸಾಲದ ಮೊಬಲಗಿನಿಂದ ಹಣ ಒದಗಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಪ್ರಪಂಚದಲ್ಲೇ ವಿಶೇಷ ರೀತಿಯ ಉಕ್ಕನ್ನು ತಯಾರಿಸುವುದರಲ್ಲಿ ಪ್ರಮುಖವಾಗಿರುವ ಆಸ್ಟ್ರಿಯಾದ ಭೋಲರ್ ಮತ್ತು ಕಂಪನಿಯವರೊಡನೆ ತಾಂತ್ರಿಕ ಸಂಬಂಧವಾದ ತಿಳಿವಳಿಕೆಯನ್ನು ಪಡೆಯಲು ಸಾಧಕವಾದ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ವರ್ಷವೊಂದಕ್ಕೆ ೧,೦೦,೦೦೦ ಟನ್ನುಗಳಿಂದ ೧,೨೦,೦೦೦ ಟನ್ನುಗಳಷ್ಟು ಬೀಡು ಕಬ್ಬಿಣವನ್ನು ತಯಾರಿಸುವಂತೆ ಸದರಿ ಕಾರ್ಖಾನೆಯ ಸಾಮರ್ಥ್ಯವನ್ನೂ ಹೆಚ್ಚಿಸುವ ಯೋಜನೆಯನ್ನು ಭಾರತ ಸರ್ಕಾರದವರು ಸಹ ಅನುಮೋದಿಸಿರುತ್ತಾರೆ.

ಭಾರತದಲ್ಲಿ ಇಲೆಕ್ಟ್ರೋ-ಪೋರ್ಸಿಲಿನ್ ಉತ್ಪನ್ನಗಳಿಗಾಗಿ ಗಿರಾಕಿಯು ಹೆಚ್ಚುತ್ತಿರುವುದರಿಂದ ಬೆಂಗಳೂರಿನಲ್ಲಿರುವ ಪಿಂಗಾಣಿ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯವನ್ನು ೨,೫೦೦ ಟನ್ನುಗಳಿಂದ ೫,೦೦೦ ಟನ್ನುಗಳಷ್ಟಕ್ಕೆ ಹೆಚ್ಚಿಸಲಾಗುತ್ತಿದೆ.

ಮೈಸೂರು ಸಕ್ಕರೆ ಕಾರ್ಖಾನೆಯವರು ಸೆಲ್ಯುಲೋಸ್ ಅಸಿಟೇಟ್ ತಯಾರಿಸುವುದಕ್ಕಾಗಿ ಮಂಡ್ಯದ ಹತ್ತಿರ ಒಂದು ಪ್ರಾಜೆಕ್ಟನ್ನು ಸ್ಥಾಪಿಸಲು ಒಂದು ಜಾಯಿಂಟ್ ಸ್ಟಾಕ್ ಕಂಪನಿಯನ್ನು ಏರ್ಪಡಿಸುವ ಕೆಲಸವನ್ನು ಕೈಕೊಂಡಿದ್ದಾರೆ. ಈ ಉದ್ದೇಶಕ್ಕಾಗಿ, ಪ್ರತಿವರ್ಷಕ್ಕೆ ೩,೩೦೦ ಟನ್ನುಗಳಷ್ಟು ತಯಾರಿಸಲು ಭಾರತ ಸರ್ಕಾರದವರು ಒಂದು ಕೈಗಾರಿಕೆಯ ಲೈಸೆನ್ಸನ್ನು ಕೂಡ ಮಂಜೂರು ಮಾಡಿದ್ದಾರೆ. ಈ ಯೋಜನೆಯಲ್ಲಿ, ಕಚ್ಚಾ ಫಿಲ್ಮು ತಯಾರಿಸುವಲ್ಲಿ ಉಪಯೋಗಿಸಲು ಮತ್ತು ಕೆಲಮಟ್ಟಿಗೆ ಪ್ಲಾಸ್ಟಿಕ್ ಕೈಗಾರಿಕೆಗಳಲ್ಲಿ ಬಳಸುವ ಪುಡಿಗಳನ್ನು ಸಂಸ್ಕರಿಸಲು ಬೇಕಾಗುವ ಸೆಲ್ಯುಲೋಸ್ ಅಸಿಟೇಟನ್ನು ಆಲ್ಕೋಹಾಲಿನಿಂದ ತಯಾರಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ಸಮಾರು ೪೧೫ ಲಕ್ಷ ರೂಪಾಯಿಗಳ ವೆಚ್ಚ ಹಿಡಿಯಬಹುದೆಂದು ಅಂದಾಜು ಮಾಡಲಾಗಿದೆ.

ಇತ್ತೀಚೆಗೆ ರಚನೆಗೊಂಡ ಕೈಕಸಬುಗಳ ಅಭಿವೃದ್ಧಿ ನಿಗಮವು (ಕಾರ್ಪೋರೇಶನ್ನು) ರಾಜ್ಯದಲ್ಲಿ ಸದ್ಯಕ್ಕಿರುವ ಸರ್ಕಾರೀ ಎಂಪೋರಿಯಮ್‌ಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ; ಮತ್ತು ಮೈಸೂರು ರಾಜ್ಯದಲ್ಲಿ ಕಲೆ ಮತ್ತು ಕೈಕಸಬುಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವುದಾಗಿದೆ.

ಕಬ್ಬಿಣದ ಅದಿರಿನ ರಫ್ತು ಸದ್ಯದ ವರ್ಷದಲ್ಲಿ ೫ ಲಕ್ಷ ಟನ್ನಿನಷ್ಟಿದೆಯಷ್ಟೆ; ಅದನ್ನು ಖನಿಜಾಭಿವೃದ್ಧಿ ಮಂಡಲಿಯವರು ಮುಂದಿನ ವರ್ಷದಲ್ಲಿ ೧೦ ಲಕ್ಷ ಟನ್ನಿನ ಪ್ರಮಾಣಕ್ಕೆ ಹೆಚ್ಚಿಸುವವರಾಗಿದ್ದಾರೆ.

ತುಮಕೂರು, ಚಿತ್ರದುರ್ಗ ಪ್ರದೇಶಗಳಲ್ಲಿ ಮತ್ತು ಬಾಬಾಬುಡನ್ ಬೆಟ್ಟದ ಸಾಲಿನ ಜಾನ್ಸುರಿ ಗುಡ್ಡದಲ್ಲಿ ಕಬ್ಬಿಣದ ಅದಿರಿನ ಸಂಗ್ರಹಗಳನ್ನು ಇನ್ನೂ ವಿವರವಾಗಿ ಗುರುತಿಸುವ ಮತ್ತು ಅವುಗಳನ್ನು ಕೊರೆಯುವ ಪರಿಶೀಲನೆಗಳು ನಡೆಯುತ್ತಿವೆ.

ನಮ್ಮ ರೇಷ್ಮೆ ವ್ಯವಸಾಯವು ವಿಕಾಸಹೊಂದುತ್ತ ನಡೆದಿದೆ ಮತ್ತು ರೇಷ್ಮೆ ವ್ಯವಸಾಯದ ದೊಡ್ಡ ದೊಡ್ಡ ಭಾಗಗಳಲ್ಲಿ ರೇಷ್ಮೆ ಗೂಡುಗಳ ಮಾರುಕಟ್ಟೆಗಳನ್ನು ತೆರೆಯಲಾಗಿದೆ. ರಾಜ್ಯದ ಎಲ್ಲ ಕಡೆಗಳಲ್ಲಿಯೂ ಪರೀಕ್ಷಿಸಿದ ರೇಷ್ಮೆ ಬಿತ್ತನೆಯು ಸರಬರಾಯಿಯಾಗುವುದೆಂದು ರೇಷ್ಮೆ ವ್ಯವಸಾಯಗಾರರಿಗೆ ಭರವಸೆ ನೀಡಲಾಗಿದೆ. ಚನ್ನಪಟ್ಟಣದಲ್ಲಿರುವ ನೂತ ರೇಷ್ಮೆ ಹಾಗೂ ಮೈಸೂರಿನಲ್ಲಿರುವ ನೇಯ್ಗೆ ಕಾರಖಾನೆಯಲ್ಲಿ ಈಗಿರುವ ಹಳೆಯ ಯಂತ್ರೋಪಕರಣಗಳ ಬದಲಾಗಿ ೧೭ ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಹೊಸ ಯಂತ್ರೋಪಕರಣಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ಕೇಳಿಕೊಳ್ಳಲಾಗಿದೆ.

ಶಿಕ್ಷಣ.

೧೯೬೧-೬೨ನೇ ವರ್ಷದಲ್ಲಿ ಜಾರಿಗೆ ಬಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಸಂಬಂಧವಾದ ಯೋಜನೆಯು ತೀವ್ರಗತಿಯಿಂದ ಪ್ರಗತಿಹೊಂದುತ್ತಿದೆ; ಈಗ ೬ ರಿಂದ ೧೧ ವರ್ಷಗಳ ವಯೋಪರಿಮಿತಿಯಲ್ಲಿರುವ ಬಾಲಕ ಬಾಲಿಕೆಯರ ಪೈಕಿ ನೂರಕ್ಕೆ ೮೦ ರಷ್ಟು ಶಾಲೆಗೆ ಹೋಗುತ್ತಿದ್ದಾರೆ. ಮೂರನೇ ಪಾಂಚವಾರ್ಷಿಕ ಯೋಜನಾರಂಭದಲ್ಲಿ ಪ್ರಾಥಮಿಕ ಶಾಲೆಗಳಿಗಾಗಿ ಜಾರಿಗೆ ತರಲಾದ ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸುವ ಯೋಜನೆಯನ್ನು, ಕೇರ್ ಸಂಸ್ಥೆಯವರು ಆಹಾರ ವಸ್ತುಗಳ ರೂಪದಲ್ಲಿ ಒದಗಿಸಿದ ೨.೫ ಕೋಟಿ ರೂಪಾಯಿಗಳ ಉದಾರವಾದ ಸಹಾಯದಿಂದ ಇನ್ನೂ ವಿಸ್ತಾರಗೊಳಿಸಲಾಗಿದೆ. ಈ ಯೋಜನೆಯಿಂದ ಐದು ಲಕ್ಷ ಮಕ್ಕಳಿಗೆ ಪ್ರಯೋಜನ ದೊರೆತಿದೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಟ್ಟವನ್ನು ಉತ್ತಮಗೊಳಿಸಲು ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ತರಬೇತು ಕೊಡುವ ಸಂಬಂಧದಲ್ಲಿ ಧಾರವಾಡದಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಅದು ೧೯೬೪ನೇ ಇಸ್ವಿಯ ಜೂನ್ ತಿಂಗಳಿಂದ ಕೆಲಸವನ್ನು ಆರಂಭಿಸುವುದು. ಸಾರ್ವಜನಿಕರು ಖಾಸಗಿಯಾಗಿ ಹೆಚ್ಚು ಹೆಚ್ಚು ಹೈಸ್ಕೂಲುಗಳನ್ನು ತೆರೆಯುವಂತೆ ಪ್ರೋತ್ಸಾಹಿಸುವ ಸರ್ಕಾರದ ನೀತಿಯು ಸಾಕಷ್ಟು ಯಶಸ್ವಿಯಾಗಿದೆ. ಇಡಿಯ ಮೂರನೆಯ ಪಾಂಚವಾರ್ಷಿಕ ಯೋಜನಾವಧಿಯಲ್ಲಿ ಒಟ್ಟು ೨೦೦ ಖಾಸಗಿ ಹಾಗೂ ಸರಕಾರೀ ಸಹಾಯ ಪೋಷಿತ ಹೈಸ್ಕೂಲುಗಳನ್ನು ತೆರೆಯಬೇಕೆಂದು ಯೋಚಿಸಲಾಗಿದ್ದ ಆ ಗುರಿಯನ್ನು ಮೀರಿದ್ದೇವೆ ಮತ್ತು ಈಗಾಗಲೇ ಅಂಥ ೪೨೦ ಹೈಸ್ಕೂಲುಗಳು ಸ್ಥಾಪಿತವಾಗಿವೆ. ಹೈಸ್ಕೂಲುಗಳಲ್ಲಿ ಸುಮಾರು ನೂರಕ್ಕೆ ೮೨ರಷ್ಟು ವಿದ್ಯಾರ್ಥಿಗಳು ಉಚಿತ ಶಿಕ್ಷಣವನ್ನು ಹಾಗೂ ನೂರಕ್ಕೆ ೧೦ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನೂ ಪಡೆಯುತ್ತಿದ್ದಾರೆ. ಸಹಾಯದ್ರವ್ಯ ಪೋಷಿತ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕ ವರ್ಗದವರ ನೌಕರಿಯ (ಸೇವೆಯ) ಸ್ಥಿತಿಗತಿಗಳನ್ನು ಸುಧಾರಿಸುವ ಉದ್ದೇಶದಿಂದ ೧-೪-೧೯೬೩ ರಿಂದ ಭವಿಷ್ಯ ನಿಧಿ (ಪ್ರಾವಿಡೆಂಟ್ ಫಂಡ್). ಜೀವವಿಮೆ (ಇನ್ಶೂರೆನ್ಸ್) ಮತ್ತು ನಿವೃತ್ತಿವೇತನ (ಪೆನ್ಷನ್) ಇವುಗಳಿಂದ ಕೂಡಿದ ''ತ್ರಿವಿಧ ಸೌಲಭ್ಯಗಳ ಯೋಜನೆ''ಯನ್ನು ಜಾರಿಗೆ ತರಲಾಗಿದೆ.

ವಿಶ್ವವಿದ್ಯಾಲಯದ ಶಿಕ್ಷಣ ರಂಗದಲ್ಲಿ ಫೀಜುಗಳ ಕ್ರಮಬದ್ಧತೆಯನ್ನು ಪರಿಶೀಲಿಸಲು ಮತ್ತು ಮೈಸೂರು ಹಾಗೂ ಕರ್ಣಾಟಕದ ವಿಶ್ವವಿದ್ಯಾಲಯಗಳೆರಡರಲ್ಲಿಯೂ ಆರ್ಟ್ಸ್, ಸೈನ್ಸ್ ಹಾಗೂ ಕಾಮರ್ಸ್ ಕಾಲೇಜಗಳಲ್ಲಿ ಇರಬೇಕಾದ ಏಕಪ್ರಕಾರದ ಶಿಕ್ಷಣ ಶುಲ್ಕದ ದರವನ್ನು (ಫೀಜುಗಳ ಸ್ಕೇಲನ್ನು) ಮತ್ತು ಫೀ ರಿಯಾಯಿತಿಗಳನ್ನು ಕುರಿತು ಶಿಫಾರಸು ಮಾಡಲು ಮದ್ರಾಸ್ ವಿಶ್ವವಿದ್ಯಾನಿಲಯದ ಉಪ-ಕುಲಪತಿಗಳಾದ ಡಾ॥ ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ಅಧ್ಯಕ್ಷರಾಗಿಯೂ ಮತ್ತು ಮೈಸೂರು ಹಾಗೂ ಕರ್ಣಾಟಕ ವಿಶ್ವವಿದ್ಯಾನಿಲಯಗಳ ಉಪ-ಕುಲಪತಿಗಳು ಸದಸ್ಯರಾಗಿಯೂ ಇರುವ ಒಂದು ಸಮಿತಿಯನ್ನು ನಿಯಮಿಸಲಾಗಿದೆ. ಕಾಲೇಜುಗಳಲ್ಲಿ ಕೆಲಸ ಮಾಡುವ ಶಿಕ್ಷಕ ವರ್ಗದವರ ವೇತನಗಳು, ಪಠ್ಯಕ್ರಮ, ವಿದ್ಯಾರ್ಥಿಗಳು ಒಂದು ವಿಶ್ವವಿದ್ಯಾನಿಲಯದಿಂದ ಮತ್ತೊಂದು ವಿಶ್ವವಿದ್ಯಾನಿಲಯಕ್ಕೆ ಹೋಗುವುದು, ಹಾಗೂ ವಿದ್ಯಾರ್ಥಿಗಳ ಶಿಸ್ತು—ಈ ಮುಂತಾದ ವಿಷಯಗಳನ್ನೂ ಸಹ ಈ ಸಮಿತಿಯವರು ಪರಿಶೀಲಿಸುವರು. ಈ ಸಮಿತಿಯವರು ತಮ್ಮ ವರದಿಯನ್ನು ಏಪ್ರಿಲ್, ೧೯೬೪ ರೊಳಗಾಗಿ ಒಪ್ಪಿಸುವರೆಂದು ಸರ್ಕಾರವು ನಿರೀಕ್ಷಿಸುತ್ತದೆ.

ಬೆಂಗಳೂರಿನಲ್ಲಿ ಏಕೀಕೃತ ಅಥವಾ ಸಂಯುಕ್ತ ನಮೂನೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವದರ ಸಲುವಾಗಿ ಏರ್ಪಾಟುಗಳನ್ನು ಸೂಚಿಸಲು ೧೯೬೨ನೆಯ ಇಸವಿಯ ಆಗಸ್ಟ್ ತಿಂಗಳಲ್ಲಿ ಸರ್ಕಾರದವರಿಂದ ನೇಮಿಸಲ್ಪಟ್ಟ ಸಮಿತಿಯವರು ತಮ್ಮ ವರದಿಯನ್ನು ಸಲ್ಲಿಸಿದ್ದಾರೆ.

ವಿದ್ಯೆಯ ಬೇರೆ ಬೇರೆ ಪ್ರಾಮುಖ್ಯತೆಯುಳ್ಳ ಶಾಖೆಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಉತ್ತೇಜನ ಕೊಡುವದರ ಸಲುವಾಗಿ ಮತ್ತು ಅದರ ವಿಕಾಸದ ಸಲುವಾಗಿ ವಿಶಾಲ ಬೆಂಗಳೂರಿನ ಪರಿಮಿತಿಗಳಿಗೆ ಒಳಪಟ್ಟ ಕ್ಷೇತ್ರಾಧಿಕಾರವುಳ್ಳ ಸಂಯುಕ್ತ ನಮೂನೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬುದೇ ಸಮಿತಿಯವರ ಮುಖ್ಯ ಶಿಫಾರಸಾಗಿರುತ್ತದೆ. ಸಮಿತಿಯವರ ಶಿಫಾರಸುಗಳನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ ಮತ್ತು ಉದ್ದೇಶಿಸಲಾದ ವಿಶ್ವವಿದ್ಯಾನಿಲಯದ ಸಲುವಾಗಿ ವಿಧೇಯಕವನ್ನು ತಯಾರಿಸಲು ಸಹ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸದ್ಯದ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಇಂಜಿನಿಯರಿಂಗ್ ಡಿಪ್ಲೋಮಾಗಳನ್ನು ಪಡೆದಿರುವವರ ಸಲುವಾಗಿ, ಅಂಶಕಾಲಿಕ (ಪಾರ್ಟ್‌ಟೈಂ) ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು, ತಾಂತ್ರಿಕ ವಿದ್ಯಾ ಸಂಸ್ಥೆಗಳಲ್ಲಿ ಹೆಚ್ಚುಹೆಚ್ಚಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದು ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ೩ ವರ್ಷಗಳ ಅವಧಿಯ ಡಿಪ್ಲೋಮಾ ವ್ಯಾಸಂಗ ಕ್ರಮವನ್ನು ಪ್ರಾರಂಭಿಸುವುದು—ಈ ವಿಷಯಗಳನ್ನೊಳಗೊಂಡ ಒಂದು ಯೋಜನೆಯನ್ನು, ತಾಂತ್ರಿಕ ಶಿಕ್ಷಣದ ವಿಸ್ತರಣೆಯ ಸಲುವಾಗಿ ತಯಾರಿಸಲಾಗಿದೆ. ಇದರ ಅಂಗವಾಗಿ ಪ್ರಸ್ತುತ ವರ್ಷದಲ್ಲಿ ಕೆಲವೊಂದು ಪದವಿ ಮಟ್ಟದ ಕಾಲೇಜುಗಳಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಪ್ರವೇಶವು ದೊರೆಯುವಂತೆ ಅವಕಾಶ ಕಲ್ಪಿಸಲಾಗಿದೆ. ಸರ್ಕಾರೀ ಧನ ಸಹಾಯ ಪಡೆಯದೇ ಇರುವ ೬ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಿರುವ ಸೀಟುಗಳ ಸಂಖ್ಯೆಯನ್ನು ಹೊರ್ತುಪಡಿಸಿದರೆ, ಈಗ ಡಿಪ್ಲೋಮಾ ವ್ಯಾಸಂಗ ಕ್ರಮದ ಸಲುವಾಗಿ ೩,೭೫೦ ಮಂದಿ ವಿದ್ಯಾರ್ಥಿಗಳಿಗೂ ಪದವಿ ವ್ಯಾಸಂಗ ಕ್ರಮದ ಸಲುವಾಗಿ ೧,೪೧೦ ಮಂದಿ ವಿದ್ಯಾರ್ಥಿಗಳಿಗೂ ಅವಕಾಶ ಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ಸಂಪನ್ಮೂಲಗಳಿಲ್ಲದೆ ಅನೇಕ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಏರ್ಪಟ್ಟಿರುವ ವಿಷಯವು ಸರ್ಕಾರದವರಿಗೆ ಆತಂಕವನ್ನುಂಟುಮಾಡಿದೆ. ಅವರು ಅಂಥ ಕಾಲೇಜುಗಳು ಸರಿಯಾದ ರೀತಿಯಲ್ಲಿ ತಮ್ಮ ಕೆಲಸಕಾರ್ಯಗಳನ್ನು ನಿರ್ವಹಿಸುವಂತೆ ಮಾಡಲು ಅವಶ್ಯವಿರುವ ಕ್ರಮಗಳನ್ನು ಕೈಕೊಳ್ಳಲು ಯೋಚಿಸುತ್ತಿದ್ದಾರೆ. ೧೯೬೪-೬೫ನೆಯ ಸಾಲಿನಲ್ಲಿ ಸರ್ಕಾರದವರು ಲಲಿತ ಕಲೆಗಳ ಹಾಗೂ ಕೈಕಸಬಿನ ಒಂದು ಶಾಲೆಯನ್ನು, ಜೂನಿಯರ್ ತಾಂತ್ರಿಕ ಶಾಲೆಗಳನ್ನು ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿಯ ಉಪಾಧ್ಯಾಯರ ತರಬೇತಿಯ ಸಲುವಾಗಿ ಒಂದು ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಸಂಕಲ್ಪಿಸಿದ್ದಾರೆ.

ಜನಾರೋಗ್ಯ ಸೇವೆಗಳು.

ರಾಷ್ಟ್ರೀಯ ಮಲೇರಿಯಾ ನಿರ್ಮೂಲನ ಹಾಗೂ ರಾಷ್ಟ್ರೀಯ ಸಿಡುಬು ರೋಗ ನಿರ್ಮೂಲನ ಕಾರ್ಯಕ್ರಮಗಳು ತೃಪ್ತಿಕರವಾಗಿ ಮುಂದುವರಿಯುತ್ತಿವೆ. ಈ ವರ್ಷದಲ್ಲಿ ಕುಷ್ಠ ರೋಗದ ನಿಯಂತ್ರಣದ ಸಲುವಾಗಿ ೨೦ ಹೊಸ ಸರ್ವೇ ಪರಿಶೀಲನೆ, ಶಿಕ್ಷಣ ಹಾಗೂ ತರಬೇತಿ ಕೇಂದ್ರಗಳು ಮಂಜೂರ್ಮಾಡಲ್ಪಟ್ಟಿವೆ. ೩೬ ಹೊಸ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರ್ಮಾಡಿದೆ. ಈಗ ಅಂಥ ಘಟಕಗಳ ಒಟ್ಟು ಸಂಖ್ಯೆಯು ೨೫೪ಕ್ಕೆ ಏರಿದೆ. ೧೨ ಆರೋಗ್ಯ ಘಟಕಗಳ ಮಾದರಿಯ ಔಷಧಾಲಯಗಳನ್ನು ಈ ವರ್ಷದಲ್ಲಿ ಮಂಜೂರ್ಮಾಡಲಾಗಿದೆ. ಆಹಾರ ಪೋಷಣೆಯ ಕೊರತೆಗೆ ಬಲಿಯಾಗುವಂಥ ಜನವರ್ಗಗಳಲ್ಲಿನ ಪೌಷ್ಟಿಕಾಹಾರದ ಕೊರತೆಗಳನ್ನು ಸುಧಾರಿಸುವ ಸಲುವಾಗಿ ಪೋಷಕಾಹಾರಕ್ಕೆ ಸಂಬಂಧಪಟ್ಟ ಒಂದು ಸಂಸ್ಥೆಯನ್ನು (ಬ್ಯೂರೋ) ಮಂಜೂರ್ಮಾಡಲಾಗಿದೆ. ರಾಜ್ಯದಲ್ಲಿಯ ಜನಾರೋಗ್ಯ ಸೇವೆಗಳಿಗೆ ಸಂಬಂಧಪಡುವ ಯೋಜನೆಗಳ ಮೇರೆಗೆ ಪಾರಾ-ಆರೋಗ್ಯ ಕೆಲಸಗಾರರ (ಜನಾರೋಗ್ಯ ರಕ್ಷಣೆಯ ಕೆಲಸಗಳ ಮಾದರಿಯ ಕೆಲಸಗಳನ್ನು ಮಾಡುವವರ) ಅವಶ್ಯಕತೆಯಿರುವ ಕಾರಣ ಅಂಥ ಕೆಲಸಗಾರರ ಸಲುವಾಗಿ ತರಬೇತಿಯ ಅನುಕೂಲತೆಗಳನ್ನು ಹೆಚ್ಚಿಸಲಾಗಿದೆ.

ವೈದ್ಯಕೀಯ ಸೇವೆಗಳು.

ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿಯ ಕೆಲವೊಂದು ಜಿಲ್ಲಾ ಮತ್ತು ದೊಡ್ಡ ಆಸ್ಪತ್ರೆಗಳನ್ನು ವಿಸ್ತರಿಸಲಾಗಿದೆ. ಇದರಿಂದ ರುಗ್ಣಶಯ್ಯಾ ಸಂಖ್ಯೆಯ ಒಟ್ಟು ಹೆಚ್ಚಳವು ೪೪೦ ಆಗಿರುತ್ತದೆ. ಬೆಂಗಳೂರಿನಲ್ಲಿರುವ ಎಸ್. ಡಿ. ಎಸ್. ಕ್ಷಯರೋಗ ಚಿಕಿತ್ಸೆಯ ಆಸ್ಪತ್ರೆಯಲ್ಲಿ ಹೊಸದಾಗಿ ೧೦೦ ರುಗ್ಣ ಶಯ್ಯೆಗಳನ್ನು ಹೆಚ್ಚಿಸಲಾಗಿದೆ.

ರಾಜ್ಯದಲ್ಲಿಯ ವೈದ್ಯಕೀಯ ಸಂಸ್ಥೆಗಳನ್ನು ನಡೆಸುವದಕ್ಕೆ ಬೇಕಾದ ಹೆಚ್ಚು ಜನ ವೈದ್ಯರ ಅವಶ್ಯಕತೆಯನ್ನು ಪೂರೈಸಲು ಹಾಗೂ ರಕ್ಷಾದಳಗಳ ಅವಶ್ಯಕತೆಗಳನ್ನು ಪೂರೈಸಲು ಸರ್ಕಾರೀ

ವೈದ್ಯಕೀಯ ಕಾಲೇಜುಗಳಲ್ಲಿ ಇನ್ನೂ ೨೨೫ ಮಂದಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಹೆಚ್ಚಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಮೂರು ಖಾಸಗಿ ವೈದ್ಯಕೀಯ ಕಾಲೇಜುಗಳು ಕೂಡ ಸ್ಥಾಪಿಸಲ್ಪಟ್ಟವು. ವೈದ್ಯಕೀಯ ಹಾಗೂ ಜನಾರೋಗ್ಯ ರಕ್ಷಣಾ ಇಲಾಖೆಗಳ ಕೆಲಸಗಳು ಸರಿಯಾಗಿ ನಡೆಯಲು ಬಾಧಕವುಂಟಾಗಿರುವುದಕ್ಕೆ ಈಗಿನ ವೈದ್ಯರುಗಳ ಕೊರತೆಯೇ ಕಾರಣವಾಗಿದೆ. ಈ ಕೊರತೆಯನ್ನು ಸದ್ಯದಲ್ಲಿಯೇ ನಿವಾರಣೆ ಮಾಡುವುದು ಸಾಧ್ಯವಾಗಬಹುದೆಂದು ನಿರೀಕ್ಷಿಸಲಾಗಿದೆ. ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಲೈಸೆನ್ಸಿಯೇಟರುಗಳ ಸಲುವಾಗಿ ನಡೆಸಿಕೊಂಡು ಬರುತ್ತಿದ್ದು ಕಳೆದ ವರ್ಷ ನಿಲ್ಲಿಸಲ್ಪಟ್ಟ ಸಂಕ್ಷಿಪ್ತ ಎಂ. ಬಿ. ಬಿ. ಎಸ್. ಪಠ್ಯಕ್ರಮವನ್ನು, ಪೂರ್ಣವಾಗಿ ಅರ್ಹತೆಯನ್ನು ಪಡೆದ ವೈದ್ಯರುಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ, ಪುನಃ ಪ್ರಾರಂಭಿಸಲಾಗಿದೆ. ಔಷಧಶಾಸ್ತ್ರದಲ್ಲಿ ಒಂದು ಡಿಪ್ಲೋಮಾ ಮತ್ತು ಇನ್ನೊಂದು ಪದವಿಯ ಎರಡು ಸ್ನಾತಕೋತ್ತರ ಪಾಠಕ್ರಮಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ.

ಕಾರ್ಮಿಕ ವರ್ಗ.

ಪ್ರಸಕ್ತ ವರುಷದಲ್ಲಿ ಉದ್ದಿಮೆಯ ತಾತ್ಕಾಲಿಕ ಶಾಂತಿ ಒಪ್ಪಂದವು ಜಾರಿಯಲ್ಲಿದ್ದಿತು ಮತ್ತು ನಿಯೋಜಿತ–ನಿಯೋಜಿತರ ಸಂಬಂಧಗಳು ಸಾಮಾನ್ಯವಾಗಿ ತೃಪ್ತಿಕರವಾಗಿದ್ದವು. ಕೈಗಾರಿಕಾ ಕೆಲಸಗಾರರಿಗೆ ಬಳಕೆಯ ವಸ್ತುಗಳನ್ನು ನ್ಯಾಯ ಬೆಲೆಗೆ ಒದಗಿಸುವುದರ ಸಲುವಾಗಿ ಭಾರತ ಸರಕಾರದವರಿಂದ ಪುರಸ್ಕರಿಸಲ್ಪಟ್ಟ ಯೋಜನೆಯ ಮೇರೆಗೆ ಪ್ರಸಕ್ತ ವರುಷದಲ್ಲಿ ೩೭ ಬಳಕೆಗಾರರ ಸಹಕಾರೀ ಸಂಸ್ಥೆಗಳನ್ನು ಆರಂಭಿಸಲಾಯಿತು.

ಉದ್ಯಮಗಳಿಗಾಗಿ ಪರಿಣಿತ ಕೆಲಸಗಾರರನ್ನೊದಗಿಸುವಲ್ಲಿ ಸಹಾಯಕವಾಗಿರುವ ಕಸಬುದಾರರ ತರಬೇತಿ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲಾಯಿತು; ಮತ್ತು ಪ್ರಸಕ್ತ ವರುಷದಲ್ಲಿ ಅಂಥ ಎರಡು ತರಬೇತು ಕೇಂದ್ರಗಳನ್ನು ಒಂದನ್ನು ವಿಜಾಪುರದಲ್ಲಿ ಮತ್ತೊಂದನ್ನು ಹಾಸನದಲ್ಲಿ ಆರಂಭಿಸಲಾಯಿತು. ಇದರಿಂದಾಗಿ ಅಂಥ ಸಂಸ್ಥೆಗಳ ಒಟ್ಟು ಸಂಖ್ಯೆಯು ೧೪ಕ್ಕೆ ಏರಿತು. ಸುವರ್ಣ ನಿಯಂತ್ರಣದ ಆಜ್ಞೆಗೊಳಪಟ್ಟು ಕೆಲಸದಿಂದ ಹೊರಗೆ ಹಾಕಲ್ಪಟ್ಟ ಸುವರ್ಣಕಾರರಿಗೆ ಸಹಾಯಮಾಡುವುದರ ಸಲುವಾಗಿ, ವೃತ್ತಿಬಾಹಿತರಾದ ಸುವರ್ಣಕಾರರಿಗೆ ತರಬೇತು ಕೊಡುವ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ವರುಷದಲ್ಲಿ ಅಂಗವಿಕಲರಿಗಾಗಿ ಒಂದು ಉದ್ಯೋಗ ವಿನಿಮಯ ಕೇಂದ್ರವನ್ನೂ ('ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್') ಆರಂಭಿಸಲಾಗಿದೆ.

ಪೌರಾಡಳಿತ.

೧೯೬೧ನೆಯ ಇಸವಿಯ ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಯೋಜನಾ ಅಧಿನಿಯಮವು ರಾಷ್ಟ್ರಪತಿಗಳ ಅಂಗೀಕಾರವನ್ನು ಪಡೆದಿರುವ ಸಂಗತಿಯು ಸದಸ್ಯರಿಗೆ ತಿಳಿದೇ ಇದೆ. ಈ ಅಧಿನಿಯಮವು ಜಾರಿಯಲ್ಲಿ ಬರುವುದರಿಂದ ರಾಜ್ಯದಲ್ಲಿಯ ಪಟ್ಟಣಗಳ ಮತ್ತು ನಗರಗಳ ಕ್ರಮಬದ್ಧವಾದ ಯೋಜಿತ ಅಭಿವೃದ್ಧಿಗಾಗಿ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಗುವುದು. ಬೆಂಗಳೂರು ಮಹಾನಗರದ ವಿಚಾರದಲ್ಲಿ ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸುವುದರ ಸಲುವಾಗಿ ಮೈಸೂರಿನ ಮಾಜಿ ದೀವಾನರಾದ ಶ್ರೀ ಎನ್. ಮಾಧವರಾವ್ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದ ವಿಚಾರವನ್ನು ಕುರಿತು ಹಿಂದಿನ ಅಧಿವೇಶನದ ನಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದೆವು. ಆ ಸಮಿತಿಯವರು ಈಗ ತಮ್ಮ ಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಅವರ ಶಿಫಾರಸುಗಳ ಮೇರೆಗೆ ಬೆಂಗಳೂರು ನಗರದ ಸುತ್ತಲೂ ಅದಕ್ಕೆ ಹೊಂದಿಕೊಂಡು ಹೋಗುವಂಥ ಉಪನಗರಗಳನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ. ಕೆಂಗೇರಿಯಲ್ಲಿ ಒಂದು ಉಪನಗರವನ್ನು ಸ್ಥಾಪಿಸುವುದರ ಮೂಲಕ ಈ ದಿಶೆಯಲ್ಲಿ ಕಾರ್ಯವನ್ನು ಆರಂಭಿಸಲಾಗುತ್ತಿದೆ.

ಹಿಂದುಳಿದ ವರ್ಗದವರ ಕಲ್ಯಾಣ.

ಅನುಸೂಚಿತ ಜಾತಿ ಮತ್ತು ಪಂಗಡದವರ ಹಾಗೂ ಇತರ ಹಿಂದುಳಿದ ವರ್ಗದವರ ಸ್ಥಿತಿಗತಿಗಳನ್ನು ಸುಧಾರಿಸುವುದರ ಅವಶ್ಯಕತೆಯಿದೆಯೆಂಬುದನ್ನು ನಮ್ಮ ಸರಕಾರದವರು ಸಾಕಷ್ಟು ಮನಗಂಡಿದ್ದಾರೆ, ರಾಜ್ಯದ ವಿವಿಧ ಭಾಗಗಳಲ್ಲಿರುವ ಅನುಸೂಚಿತ ಜಾತಿ ಹಾಗೂ ಪಂಗಡದವರ

ವರ್ಗೀಕರಣದ ಸಂಬಂಧದಲ್ಲಿರುವ ವ್ಯತಿಕ್ರಮಗಳನ್ನು ನಿವಾರಿಸಲು ಅನುಸೂಚಿತ ಜಾತಿ ಮತ್ತು ಪಂಗಡದವರ ಸಂಬಂಧದಲ್ಲಿ ಏಕಪ್ರಕಾರವಾದ ಒಂದು ಪಟ್ಟಿಯನ್ನು ತಯಾರಿಸಿ ಅದನ್ನು ಅನುಸರಿಸುವ ವಿಚಾರದಲ್ಲಿ ಭಾರತ ಸರಕಾರದವರನ್ನು ಕೇಳಿಕೊಳ್ಳಲಾಗಿದೆ. ಈ ಹಿಂದುಳಿದ ವರ್ಗಗಳವರ ಮಟ್ಟವನ್ನು ಸಾಧ್ಯವಿದ್ದಷ್ಟು ಬೇಗನೆ ಸಾರ್ವತ್ರಿಕ ಜನತೆಯ ಮಟ್ಟಕ್ಕೆ ತರುವ ದೆಶೆಯಲ್ಲಿ ಸರಕಾರವು ಪ್ರಯತ್ನಿಸುತ್ತಿದೆ; ಮತ್ತು ಅವರ ಪ್ರಯೋಜನಕ್ಕಾಗಿ ಕಾರ್ಯರೂಪಕ್ಕೆ ತರಲಾಗಿರುವ ವಿವಿಧ ಯೋಜನೆಗಳು ಈ ಉದ್ದೇಶವನ್ನು ಈಡೇರಿಸಲು ಉದ್ಯುಕ್ತವಾಗಿವೆ. ಸರಕಾರದವರು ಅನುಸೂಚಿತ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಎಲ್ಲ ಹಂತಗಳಲ್ಲಿ ವಿದ್ಯಾರ್ಥಿವೇತನ ಹಾಗೂ ಇತರ ಶಿಕ್ಷಣ ಸೌಲಭ್ಯಗಳನ್ನೊದಗಿಸುವ ಕಾರ್ಯವನ್ನು ಸಂತತವಾಗಿ ನಡೆಯಿಸಿಕೊಂಡು ಬರುತ್ತಿದ್ದಾರೆ. ಅನುಸೂಚಿತ ಜಾತಿಯ ಮತ್ತು ಪಂಗಡದ ಉಮೇದುವಾರರಿಗೆ ಸರಕಾರದಲ್ಲಿನ ಉನ್ನತ ಹುದ್ದೆಗಳಿಗಾಗಿ ಐ. ಎ. ಎಸ್. ಮತ್ತು ಐ. ಪಿ. ಎಸ್. ತರಬೇತಿ ಕೇಂದ್ರಗಳಲ್ಲಿ ತರಬೇತು ಕೊಡಲಾಗುತ್ತಿದೆ. ವೃತ್ತಿಶಿಕ್ಷಣ ಹಾಗೂ ತಾಂತ್ರಿಕ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳಿಗೆ ಉಪಕರಣ ಇತ್ಯಾದಿಗಳ ರೂಪದಲ್ಲಿ ವಿಶೇಷ ಸಹಾಯ ಮತ್ತು ವಿಶೇಷ ವಿದ್ಯಾರ್ಥಿವೇತನಗಳನ್ನು ಕೊಡಲಾಗುತ್ತಿದೆ.

ಅನುಸೂಚಿತ ಪಂಗಡಗಳವರ ಸಂಬಂಧದಲ್ಲಿ, ಎಂದಿನ ಕಾರ್ಯಕ್ರಮಗಳ ಜತೆಗೆ ೨೦ ಲಕ್ಷ ರೂಪಾಯಿಗಳ ವೆಚ್ಚದ ವಿಶೇಷಕಾರ್ಯಕ್ರಮಗಳನ್ನು ಕೂಡ ಕೈಕೊಳ್ಳಲಾಗಿದೆ. ಕಳೆದ ವರುಷದಲಾಗಾಯ್ತು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಮತ್ತು ಕೊಡಗು ಜಿಲ್ಲೆಯ ನಾಗರಹೊಳೆಯಲ್ಲಿ ಎರಡು ತದರ್ಥ ಅನುಸೂಚಿತ ಪಂಗಡದವರ ಅಭಿವೃದ್ಧಿ ಬ್ಲಾಕುಗಳು ಕಲಸ ಮಾಡಹತ್ತಿವೆ. ಇದಲ್ಲದೆ ಬಿಳಿಗಿರಿರಂಗನ ಬೆಟ್ಟಗಳಲ್ಲಿ ಸೋಲಿಗರ ಮರುವಸತಿಯ ಸಲುವಾಗಿ ಕೂಡ ವಿಶೇಷ ಗಮನವನ್ನು ಕೊಡಲಾಗುತ್ತಿದೆ.

ಸುಖೀ ರಾಜ್ಯದ ಸ್ಥಾಪನೆಯ ಉದ್ದೇಶಕ್ಕೆ ಅನುಸಾರವಾಗಿ, ಸಾಮಾಜಿಕವಾಗಿ ತೊಂದರೆಗೊಳಗಾಗಿರುವ ಸ್ತ್ರೀಯರು ಮತ್ತು ಮಕ್ಕಳ ಮತ್ತು ದೈಹಿಕವಾಗಿ ತೊಂದರೆಗೊಳಗಾಗಿರುವ ವ್ಯಕ್ತಿಗಳ ಮರುವಸತಿಗೆ ಸಂಬಂಧಪಟ್ಟ ಯೋಜನೆಗಳನ್ನು ನಮ್ಮ ಸರ್ಕಾರದವರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಸಾಮಾಜಿಕ ಶಾಸನಗಳ ಮೇರೆಗೆ ಸಂಸ್ಥೆಗಳ ಸೇವೆಯನ್ನು ಹಾಗೂ ಸಂಸ್ಥೆಯಿಂದ ಬಿಡುಗಡೆಯಾದ ತರುವಾಯದ ಎಚ್ಚರಿಕೆ ಕಾರ್ಯಕ್ರಮಗಳನ್ನು ಮುಂದುವರಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಕ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು, ಸಲ್ಲಿಸುವ ಸೇವೆಯ ಜತೆಗೆ ತಮ್ಮ ಸೇವೆಯನ್ನು ಸಲ್ಲಿಸಲು ಸಹಾಯಕವಾದ ಎಲ್ಲಾ ಉತ್ತೇಜನವನ್ನೂ ಪಡೆಯುತ್ತವೆ. ಮುಂಬರುವ ವರ್ಷಗಳಲ್ಲಿ, ವಯಸ್ಸಾದವರ, ಮಕ್ಕಳ ಮತ್ತು ನಿರಾಶ್ರಿತ ಸ್ತ್ರೀಯರ ಕಲ್ಯಾಣಕ್ಕಾಗಿ ಕ್ರಮಗಳನ್ನು ಕೈಕೊಳ್ಳುವುದರ ಮೂಲಕ, ಇಲ್ಲಿಯವರೆಗೆ ನಡೆಸಿರುವುದಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಸಮಾಜ• ಕಲ್ಯಾಣ ಚಟುವಟಿಕೆಗಳ ವಿಸ್ತರಣೆಗೆ ಪ್ರಾಧಾನ್ಯತೆಯನ್ನು ಕೊಡಲಾಗುವುದೆಂದು ನಂಬುತ್ತೇವೆ.

ದ್ರವ್ಯಶಾಖೆಯ ಮಂತ್ರಿಯವರು ಈ ಅಧಿವೇಶನದಲ್ಲಿ ಆಯವ್ಯಯದ ಪಟ್ಟಿಯನ್ನು ನಿಮ್ಮ ಮುಂದೆ ಇಡುವರು ಹಾಗೂ ರಾಜ್ಯದ ಆರ್ಥಿಕಸ್ಥಿತಿಯ ಮತ್ತು ವಿವಿಧ ಯೋಗಕ್ಷೇಮ ಸಾಧನೆಯ ಏರ್ಪಾಡುಗಳ ಕಾರ್ಯಗಳಿಗೆ ಒದಗಿಸಿರುವ ಮೊಬಲಗಿನ ವಿವರಗಳನ್ನು ಒದಗಿಸುವರು. ರಾಜ್ಯದ ಆರ್ಥಿಕ ಸ್ಥಿತಿಯು ಮುಂದಿನ ಎರಡು ವರ್ಷಗಳಲ್ಲಿ ಅತ್ಯಂತ ಕ್ಲಿಷ್ಟಕರವಾಗುವುದಾದರೂ ಜನರ ಸಹಕಾರದಿಂದ ಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಬೇಕಾಗಿದೆ ಮತ್ತು ಉದ್ದಿಷ್ಟ ಗುರಿಯನ್ನು ಮುಟ್ಟಬೇಕಾಗಿದೆ. ಹೀಗೆ ಮಾಡುವುದರಿಂದ ಸಾಮಾನ್ಯ ಮನುಷ್ಯನು ಕೂಡ ತನ್ನ ಉತ್ತಮ ಭವಿಷ್ಯದ ಅರುಣೋದಯವಾಗಿದೆಯೆಂಬುದನ್ನು ತಿಳಿಯಲು ಸಹಾಯವಾಗಬಹುದು. ಭಾರತ ಸರ್ಕಾರದವರು ನಮ್ಮ ತೊಂದರೆಗಳನ್ನು ಗಮನಿಸಿ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಸೂಕ್ತ ಆರ್ಥಿಕ ಸಹಾಯವನ್ನು ಒದಗಿಸುವರೆಂದು ನಂಬಿದ್ದೇವೆ.

ರಾಜ್ಯದಲ್ಲಿ ಏಕರೀತಿಯ ಶಾಸನವನ್ನು ವಿಧಾಯಕಮಾಡುವುದಕ್ಕಾಗಿ, ತೆರಿಗೆ, ಭೂಗಂದಾಯ, ಪೋಲೀಸು, ಸಹಕಾರ ನ್ಯಾಯಾಲಯಗಳು, ಅರಣ್ಯಗಳು, ಪೌರ ಆಡಳಿತ ಮೊದಲಾದ ಮುಖ್ಯ ವಿಷಯಗಳಿಗೆ ಸಂಬಂಧಪಟ್ಟ ಎಂಭತ್ತಕ್ಕಿಂತ ಹೆಚ್ಚಿನ ವಿಧೇಯಕಗಳನ್ನು ನೀವು ಈಗಾಗಲೇ ಅನುಮೋದಿಸಿದ್ದೀರಿ. ಇತರ ಹದಿನೈದು ವಿಧೇಯಕಗಳು ಈಗಾಗಲೇ ನಿಮ್ಮ ಮುಂದಿವೆ ಮತ್ತು ಮುಂಬರುವ ವರ್ಷದಲ್ಲಿ ಇನ್ನೂ ಕೆಲವು ವಿಧೇಯಕಗಳನ್ನು ಮಂಡಿಸುವ ಉದ್ದೇಶವಿದೆ. ಮುಂದಿನ ಎರಡು ವರ್ಷಗಳಲ್ಲಿ ಸಾಮಾನ್ಯ ವ್ಯಾಪಕತೆಯುಳ್ಳ ಎಲ್ಲಾ ಶಾಸನಗಳ ಸಂಬಂಧದಲ್ಲಿ ಇಡೀ ರಾಜ್ಯದಲ್ಲಿ ಏಕರೂಪತೆಯು ಸಾಧ್ಯವಾಗುತ್ತವೆಂಬುದನ್ನು ದೃಢಪಡಿಸಿಕೊಳ್ಳಲು ನಾವು ಪ್ರಯತ್ನಿಸಬೇಕು.

ನಾವು ಈ ಮೊದಲೇ ಹೇಳಿರುವಂತೆ, ನಿಮ್ಮ ಮುಂದೆ ಗುರುತರವಾದ ಕಾರ್ಯಕ್ರಮವಿದೆ. ಆದರೆ ನಿಮ್ಮ ಸಾರ್ವಜನಿಕ ಕರ್ತವ್ಯ ತತ್ಪರತೆ ಹಾಗೂ ಶಾಸನಸಭೆಯ ಕೆಲಸದಲ್ಲಿ ನಿಮಗಿರುವ

ಅನುಭವ, ಇವುಗಳಿಂದ ನೀವು ಈ ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುತ್ತೀರೆಂಬ ಭರವಸೆಯು ನನಗಿದೆ. ನೀವೆಲ್ಲರೂ ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕೆಂಬುದರ ಹಾಗೂ ನೀವು ಪ್ರತಿನಿಧಿಸುವ ಜನತೆಯ ಹೆಚ್ಚಿನ ಕ್ಷೇಮಲಾಭಗಳಿಗಾಗಿ ಬಹುತೇಕ ಒಮ್ಮತದಿಂದ ಕಾರ್ಯಸಾಧನೆ ಮಾಡಬೇಕೆಂಬುದರ ಆವಶ್ಯಕತೆಯನ್ನು ನಿಮಗೆ ಒತ್ತಿ ತಿಳಿಸುವುದು ಅನಾವಶ್ಯಕವಾಗಿದೆ. ರಾಷ್ಟ್ರೀಯ ತುರ್ತುಪರಿಸ್ಥಿತಿಯು ಮುಂದುವರಿಯುತ್ತಿದೆ ಮತ್ತು ನಾವು ಇನ್ನೂ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಹಾಗೂ ನಮ್ಮ ದೇಶದ ರಕ್ಷಣೆಗೆ ಒಟ್ಟಾಗಿ ಪ್ರಯತ್ನಿಸಬೇಕಾದ ಪರಿಸ್ಥಿತಿಯಲ್ಲಿಯೇ ಇದ್ದೇವೆ.

"ಜೈಹಿಂದ"

ARREST AND RELEASE OF A MEMBER.

Mr. SPEAKER.—There is one matter which I ought to have mentioned to the House a little earlier and I am sorry for the delay. It relates to an unfortunate event. One of the Hon'ble Members of this House was taken into custody and a report was sent to me and I wanted to get at the facts correctly and this has resulted in delay. But the delay has not done any harm. On the other hand, it will make us feel happy because the case in connection with which the Member was taken into custody has ended in acquittal. I received a report that the Hon'ble Member Sri Angadi Channabasappa was taken into custody and released by the Police on 10th October 1963. The case against him was investigated and tried and I am very happy to inform the House that according to theletter received by me from the Hon'ble Member the criminal proceedings against him have ended in his acquittal on 30th January 1964 in the court of Stationary Sub-Magistrate, Thirupattur. He does not have immediately a copy of the judgement. He will forward it to me. The acquittal should have been reported to me by the Court. It has not been done till now. I will examine the matter still further and if it is necessary I may bring it before the House again.

1-30 P.M.

TWENTY-SECOND REPORT OF BUSINESS ADVISORY COMMITTEE.

Presentation.

Mr. SPEAKER.—I present the Twenty-Second Report of the Business Advisory Committee.

Sri A. R. PANCHAGAVI.—Sir, I beg to move :

"That this House agrees with the Twenty-second Report of the Business Advisory Committee."

Mr. SPEAKER.—The question is :

"That this House agrees with the Twenty-Second Report of the Business Advisory Committee."

I suppose the House agrees.

HON'BLE MEMBERS.—Yes.

The motion was adopted.

STATENENT OF BILLS ASSENTED TO BY THE GOVERNOR OR THE PRESIDENT.

SECRETARY.—I beg to lay on the Table of the House a statement showing the Bills which have received the assent of the Governor or the President, as the case may be, subsequent to the report made during the previous session.

Statement showing the Bills assented to by the Governor or the President.

Sl. No.	*Name of the Bill*	*Date of assent*	*Assented by*
1	2	3	4
1	The Mysore Treasure Trove Bill, 1963 ...	21st February 1963 ...	President
2	The Mysore Appropriation Bill, 1963 ...	8th March 1963 ...	Governor
3	The Mysore Town and Country Planning Bill, 1961 ...	8th March 1963 ...	President
4	The Mysore Housing Board Bill, 1962 ...	9th March 1963 ...	Do
5	The Mysore Tenancy Laws (Amendment) Bill, 1963 ...	27th March 1963 ...	Do
6	The Mysore Tenants (Temporary Protection from Eviction) (Amendment) Bill, 1963 ...	28th March 1963 ...	Do
7	The Mysore Appropriation (No.2) Bill, 1963...	31st March 1963 ...	Governor
8	The Mysore Parliamentary Secretaries Allowances Bill, 1963 ...	19th April 1693 ...	Do
9	The Mysore Land Improvement Loans Bill, 1963 ...	19th April 1963 ...	Do
10	The Mysore Agriculturists' Loans Bill, 1963...	19th April 1963 ...	Do

(SECRETARY)

1	2	3	4
11	The Bhalki Taluk (Registration of Documents) Bill, 1963. ...	2nd May 1963 ...	Governor
12	The Bangalore Acquisition of Lands (Validation) Bill, 1963 ..	4th May 1963 ...	President
13	The Mysore Gift Goods (Unlawful Possession) Bill, 1963 ..	23rd May 1963 ...	Do
14	The Bombay Merged Territories and Areas (Jagirs Abolition) (Mysore Amendment) Bill, 1963. ...	25th May 1963 ...	Do
15	The University of Agricultural Sciences Bill, 1963 ...	25th May 1963 ...	Do
16	The Mysore Industrial Establishments (National and Festival Holidays) Bill, 1963.	26th June 1963 ...	Do
17	The Madras Hindu Religious and Charitable Endowments (Mysore Amendment) Bill, 1963.	3rd October 1963 ...	Governor
18	The Mysore Official Language Bill 1963 ...	5th October 1963 ...	Do
19	The City of Bangalore Municipal Corporation Amendment) Bill, 1963	19th October 1963 ...	Do
20	The Mysore Appropriation (No. 3) Bill, 1963 ..	19th October 1963 ...	Do
21	The Mysore Agricultural Income Tax (Amendment) Bill, 1963	19th October 1963 ...	Do
22	The Mysore Prohibition of Smoking in Show Houses and Public Halls Bill. 1963	23rd October 1963 ...	Do
23	The Mysore Land Revenue (Surcharge) (Amendment) Bill, 1963	1st November 1963 ...	Do

1	2	3	4
24	The Mysore Famine Relief Fund Bill, 1963	1st November 1963 ...	Governor
25	The Mysore Prisons Bill, 1963 ...	4th November 1963 ...	Do
26	The Mysore Bhoodan Yagna Bill, 1963 ...	11th November 1963 ...	President
27	The Industrial Disputes (Mysore Amendment) Bill, 1963 ..	29th November 1963 ...	Do
28	The Mysore Wild Animals and Wild Birds Preservation Bill, 1963.	31st December 1963 ...	Do
29	The Mysore Appropriation (No. 4) Bill, 1963	11th January 1964 ...	Governor
30	The Mysore Police Bill, 1963 ...	18th January 1964 ...	President
31	The Mysore State Aid to Industries (Amendment) Bill, 1963.	26th January 1964 ...	Governor
32	The Mysore Forest Bill, 1963 ...	28th January 1964 ...	President

PAPERS LAID ON THE TABLE.

Sri M. V. KRISHNAPPA (Minister for Revenue). Sir, I beg to lay Order No. RD 45 GST 62, dated 2nd January 1964 (Exemption from payment of Stamp Duty) as required under sub section (2) of Section 9 of the Mysore Stamp Act, 1957.

Sri R. M. PATIL (Minister for Home).—Sir, on behalf of the Hon'ble Minster for law, I beg to relay :

(i) Notification No. PHS 174 KPS 62, dated 21st September 1963 [The Mysore Prohibition (Committees) Rules, 1963].

(ii Notification No. PHS 175 EPS 62, dated 28th September 1963 [The Mysore Prohibition (Board of Experts) Rules, 1963]; and

(iii) Notification No. PHS 176 EPS 62 dated 24th October 1963 [The Mysore Prohibition (Through Transport) Rules, 1963];

as required under section 125 of the Mysore Prohibition Act, 1961.

Sri R. M. PATIL (Minister for Home).—Sir, I beg to relay:

(i) Notification No. HD 62 (1) TMT 61, dated 11th September 1963 (Exemption of Tax for the Vehicles of TCM personnel);

(SRI R. M. PATIL)

(ii) Notification No. HD 50 TMT 63, dated 11th September 1963 (Reduction of Tax payable);

(iii) Notification No. HD 114 TMT 62, dated 9th July 1963 (Exemption from the tax payable);

(iv) Notification No. HD 87 TMT 63, dated 22nd October 1963 (Reduction of Tax payable);

(v) Notification No. HD 102 TMT 63, dated 24th October 1963 (Reduction of Tax payable);

(vi) Notification No. HD 150 TMT 62, dated 6th November 1963 (Reduction of Tax payable);

(vii) Notification No. HD 150 TMT 62, dated 7th November 1963 (Amendments to the Notification No. HD 39 TMT 62, dated 19th October 1962);

(viii) Notification No. HD 173 TMT 63, dated 2nd December 1963 (Reduction of Tax payable);

as required under sub-section (2) of Section 16 of Mysore Motor Vehicles Taxation Act, 1957; and

Notification No. HD 96 TMR 63, dated 18th November 1963 (Amendments to the Mysore Motor Vehicles Rules, 1963)

as required under sub-section (3) of Section 138 of the Motor Vehicles Act, 1939 (Central Act 4 of 1939).

SRI R. M. PATIL (Minister for Home).—Sir, I beg to lay:

(i) Notification No. HD 160 TMT 63, dated 28th December 1963 (Reduction of Tax payable);

(ii) Notification No HD 181 TMT 63, dated 23rd December 1963 (Amendment to the Notification No. HD 9 TMT 62, dated 22nd December 1962;

(iii) Notification No. HD 172 TMT 62, dated 16th January 1964 (Reduction of Tax payable);

as required under sub-section (2) of Section 16 of the Mysore Motor Vehicles Taxation Act, 1957; and

Notification No. HD 139 TMR 63, dated 19th December 1963 (Amendment to the Mysore Motor Vehicles Rules, 1963);

as required under sub-section (3) of Section 133 of the Motor Vehicles Act, 1939 (Central Act 4 of 1939).

SRI RAMAKRISHNA HEGDE (Minister for Development), Panchayat Raj and Co-operation.—Sir, I beg to relay Notification No. DRL 4 VEL 62, dated 25th June 1963 (Amendment to the Mysore Village Panchayats (Reservation of seats for the representatives of the Scheduled Castes and Women) Rules, 1959 as required under Section 246 of the Mysore Village Panchayats and Local Boards Act, 1959.

Sri RAMAKRISHNA HEGDE (Minister for Development, Panchayat Raj and Co-operation).—Sir, I beg to lay Notification No. DRL 1 CCS 63, dated 23rd December 1963 (Amendment to the Mysore Co-operative Societies Rules, 1960), as required under Section 130 of the Mysore Co-operative Societes Act, 1959.

Introduction of Bills

Sri M. V. KRISHNAPPA (Minister for Revenue).—Sir, I beg to introuduce:—

The Mysore Tenants (Temporary Protection from Eviction) (Amendment) Bill, 1964.

Mr. SPEAKER.—The Bill is Introduced.

Sri M. V. KRISHNAPPA (Minister for Revenue).—Sir, I beg to introduce :

The Mysore Tenancy Laws (Amendment) Bill, 1964.

Mr. SPEAKER.—The Bill is Introduced.

Sri M. V. KRISHNA.—I am not introducing the other Bill now.

Mr. SPEAKER.—Yes.

MYSORE TENANTS (TEMPORARY PROTECTION FROM EVICTION) (AMENDMENT) BILL, 1964

Motion to consider.

Sri M. V. KRISHNAPPA (Minister for Revenue).—Sir, I beg to move:

"That the Mysore Tenants (Temporary Protection from Eviction) (Amendment) Bill, 1964, be taken into consideration".

Mr. SPEAKER.—Motion moved :

"That the Mysore Tenants (Temporary Protection from Eviction) (Amendment) Bill, 1964, be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಗೇಣಿ ರೈತರಿಗೆ ರಕ್ಷಣೆಯನ್ನು ಕೊಡುವ ಉದ್ದೇಶದಿಂದ ತಾತ್ಕಾಲಿಕವಾಗಿ ಒಕ್ಕಲನ್ನು ಎಬ್ಬಿಸುವುದನ್ನು ನಿಲ್ಲಿಸುವುದಕ್ಕೋಸ್ಕರ ಹೋದ ವರ್ಷ ಮೈಸೂರು ರಾಜ್ಯದ ಗೇಣಿದಾರರನ್ನು ಹೊರಕ್ಕೆ ಹಾಕದಂತೆ ತಾತ್ಕಾಲಿಕ ರಕ್ಷಣೆಯನ್ನು ಕೊಡುವುದಕ್ಕೆ ಸಂಬಂದಪಟ್ಟ ತಿದ್ದುಪಡಿ ವಿಧೇಯಕವನ್ನು ಈ ಮಾನ್ಯ ಸಭೆಯಲ್ಲಿ ತಂದಿದ್ದು ಅದಕ್ಕೆ ಜೀವದಾನ ದೊರೆಯಿತು. ಮೈಸೂರು ಭೂಸುಧಾರಣೆಯು ಆಕ್ಟು ಜಾರಿಗೆ ಬರುವುದಾದರೆ ಈ ಆಕ್ಟಿನ ಅವಶ್ಯಕತೆ ಇಲ್ಲ. ಆರೆ ಹೋದ ವರ್ಷ ನಾವು ಭೂಸುಧಾರಣೆಯ ಶಾಸನವನ್ನು ಜಾರಿಗೆ ತರಬಹುದು ಎಂಬ ಭಾವನೆಯನ್ನು ಇಟ್ಟುಕೊಂಡಿದ್ದೆವು. ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತಿದೆ, ಈ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರುವ ಸಂಬಂಧದಲ್ಲಿ ಕೆಲವು ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ಸ್ ಆಗಬೇಕಾಗಿರುವುದರಿಂದ ಈ ವಿಚಾರ ಪಾರ್ಲಿಮೆಂಟಿನ ಮುಂದೆ ಬಂದಿದೆ.

Sri ANNA RAO GANAMUKHI (Afzalpur).—Sir, I rise to a point of order. According to Rule 2. of the Rules of Procedure, a formal motion should be made to adjourn discussion on the Governor's Address and allow a discussion on another subject.

Mr. SPEAKER.—It is a very good point of order. I will think over it and deliver my ruling after 3-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರು ಭೂಸುಧಾರಣಾ ಕಾನೂನು ರಾಷ್ಟ್ರಾಧ್ಯಕ್ಷರಿಂದ ಒಪ್ಪಿಗೆಯನ್ನು ಪಡೆದು 1962ರಲ್ಲಿ ಬಂತು. ಅದು ಬಂದ ಕೂಡಲೇ ಕೇರಳದ ಅಗ್ರೇರಿಯನ್ ರಿಲೇಷನ್ಸ್ ಆಕ್ಟಿನ ಕೆಲವು ಸೆಕ್ಷನ್ನುಗಳನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಪ್ರಶ್ನಿಸಲಾಗಿದ್ದಿತು. ಅದರಲ್ಲಿನ ಕೆಲವು ಸೆಕ್ಷನ್‌ಗಳನ್ನು ಅಲ್ಟ್ರಾವೈರ್ಸ್ ಎಂದು ಹೈಕೋರ್ಟು ಹೊಡೆದುಹಾಕಿತು. ಅದರ ಪರಿಣಾಮವಾಗಿ ನಾವು ನಮ್ಮ ರಾಜ್ಯದಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕಾಗಲಿಲ್ಲ. ನಾವು ಅವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಡುವುದಾದರೆ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಮತ್ತು ಹೈದರಾಬಾದು ಕರ್ಣಾಟಕ ಭಾಗಗಳಲ್ಲಿ ಕೇರಳದ ಕಾನೂನಿನಲ್ಲಿ ಯಾವ ಭಾಗಗಳು ಸರಿಯಾಗಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆಯೋ ಅದು ಇಲ್ಲಿಗೂ ಅನ್ವಯಿಸುವುದು. ಆ ದೃಷ್ಟಿಯಿಂದ ನಾವು ಕೇಂದ್ರ ಸರ್ಕಾರ ಮತ್ತು ಪ್ಲಾನಿಂಗ್ ಕಮಿಷನ್ನನ್ನು ಕೇಳಲಾಗಿ ಅವರು ನಮಗೆ ಒಂದು ವಾಗ್ದಾನವನ್ನು ಕೊಟ್ಟರು, ರಾಜ್ಯಾಂಗದ 31-ಎ ಆರ್ಟಿಕಲ್ಲನ್ನು ತಿದ್ದುಪಡಿ ಮಾಡುತ್ತೇವೆಂದು ಅವರು ಒಪ್ಪಿಕೊಂಡರು. ಆ ಪ್ರಕಾರ ಪಾರ್ಲಿಮೆಂಟ್ ಮುಂದೆ ರಾಜ್ಯಾಂಗವನ್ನು ತಿದ್ದುಪಡಿ ಮಾಡುವ ಮಸೂದೆ ಬಂದಿದೆ. ಕೇಂದ್ರ ಸರ್ಕಾರದವರು ತಿದ್ದುಪಡಿಯನ್ನು ಪಾರ್ಲಿಮೆಂಟಿನಲ್ಲಿ ಬಹಳ ಸುಲಭವಾಗಿ ಪಾಸು ಮಾಡಿಸುತ್ತೇವೆ ಎಂದು ಹೇಳಿದ್ದರು. ಆದರೆ 17ನೆಯ ತಿದ್ದುಪಡಿ ಮಸೂದೆ ಅಸಾಧಾರಣವಾದ ರೂಪವನ್ನು ತಾಳಿದೆ. ಅನೇಕ ಪಕ್ಷಗಳು ಅದಕ್ಕೆ ವಿರೋಧವಾಗಿವೆ. ಸ್ವತಂತ್ರ ಪಕ್ಷದವರು ದೇಶದಾದ್ಯಂತ ಸಹಿ ಸಂಗ್ರಹ ಚಳುವಳಿಯನ್ನು ಆರಂಭಿಸಿ, ಈ ತಿದ್ದುಪಡಿಯು ಪಾಸಾಗುವುದಕ್ಕೆ ಅನುಮತಿ ಕೊಡಬಾರದೆಂದು ಚಳುವಳಿಯನ್ನು ಮಾಡುತ್ತಿದ್ದಾರೆ. ಈ ತಿದ್ದುಪಡಿಯು ಈಗ ಸೆಲೆಕ್ಟ್ ಕಮಿಟಿಯ ಪರಿಶೀಲನೆಯಲ್ಲಿದೆ. ಈ ತಿದ್ದುಪಡಿಯು ಅಂಗೀಕೃತವಾದರೆ ನಮ್ಮ ಭೂಸುಧಾರಣಾ ಕಾನೂನನ್ನು ತಕ್ಷಣ ಜಾರಿಗೆ ತರಬಹುದು. ಅಲ್ಲಿಯವರೆಗೂ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈ ಸಭೆಯ ಮಾನ್ಯ ಸದಸ್ಯರಿಗೆ ಭೂಸುಧಾರಣೆ ಮಸೂದೆಯನ್ನು ಬೇಗ ಜಾರಿಗೆ ತರಬೇಕೆಂದು ಎಷ್ಟು ಉತ್ಸಾಹವಿದೆಯೋ ಅದಕ್ಕಿಂತಲೂ ಹೆಚ್ಚು ಉತ್ಸಾಹ ನಮಗೆ ಇದೆ. ಭೂಸುಧಾರಣೆ ನಮ್ಮ ರಾಜ್ಯದಲ್ಲಿ ಜಾರಿಗೆ ಬರಬೇಕೆಂದು ಹೋರಾಟ ನಡೆಸಿದವರಲ್ಲಿ ನಾವೂ ಕೂಡ ಕೆಲವರು. ಭೂಸುಧಾರಣೆಯನ್ನು ಜಾರಿಗೆ ತರಬೇಕು ಎನ್ನುವುದೇ ನಮ್ಮ ಮುಖ್ಯ ಗುರಿ. ಆದರೂ ಕಾನೂನಿನ ತೊಡಕುಗಳು ಇರುವುದರಿಂದ ಕೂಡಲೇ ಅದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ.

ಎರಡನೆಯದಾಗಿ ಭೂಸುಧಾರಣಾ ಕಾನೂನಿಗೆ ರಾಷ್ಟ್ರಾಧ್ಯಕ್ಷರು ಒಪ್ಪಿಗೆಯನ್ನು ಕೊಡುವಾಗ 2-3 ಮುಖ್ಯವಾದ ವಿಷಯಗಳನ್ನು ನಮ್ಮ ಗಮನಕ್ಕೆ ತಂದರು. ಆ ವಿಚಾರಗಳ ಬಗ್ಗೆ ಮುಂದೆ ಬರುವ ಶಾಸನ ಸಭೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕು ಎಂದು ಹೇಳಿದರು. ಅವರಲ್ಲಿ ಮುಖ್ಯವಾದುವು, ಎಂದರೆ ನಮ್ಮ ಭೂಸುಧಾರಣಾ ಮಸೂದೆಯಲ್ಲಿ ಸೀಲಿಂಗ್ ಮಿತಿ ಇಟ್ಟಿರುವುದು ಬಹಳ ಜಾಸ್ತಿಯಾಗಿರುವುದರಿಂದ ಅದನ್ನು ಕಡಮೆ ಮಾಡಬೇಕು ಎಂದು ಹೇಳಿದ್ದಾರೆ. ಅಲ್ಲದೆ ರೈತರು ಗೇಣಿಯನ್ನು ಕೊಡುವ ವಿಚಾರದಲ್ಲಿ ಹೇಳುವುದಾದರೆ ಉತ್ತರ ಕರ್ಣಾಟಕದಲ್ಲಿ ಆರರಲ್ಲಿ ಒಂದು ಭಾಗ ಅಥವಾ ಭೂಕಂದಾಯದ ಐದರಷ್ಟು, ಹಳೆಯ ಮೈಸೂರಿನಲ್ಲಿ ನಾಲ್ಕನೇ ಒಂದು ಭಾಗದಷ್ಟು ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲೆಲ್ಲ ಏಕರೂಪವಾದ ಶಾಸನಗಳು ಜಾರಿಯಲ್ಲಿರಬೇಕೆಂದೂ, ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯಾಗಿರಬೇಕೆಂದೂ ಯೋಚಿಸಿ, ನಾಲ್ಕನೆಯ ಒಂದು ಭಾಗವನ್ನು ಗೇಣಿಯಾಗಿ ಕೊಡಬೇಕೆಂಬುದಕ್ಕೆ ಈ ಮಾನ್ಯ ಸಭೆ ಒಪ್ಪಿತ್ತು. ಹಳೆಯ ಮೈಸೂರು ಭಾಗವನ್ನು ಬಿಟ್ಟು ಹೊಸ ಮೈಸೂರಿನ ಭಾಗಗಳಲ್ಲಿ ಯಾವ ರೈತರು ಆರರಲ್ಲಿ ಒಂದು ಭಾಗ ಗೇಣಿಯನ್ನು ಕೊಡುತ್ತಿದ್ದಾರೆಯೋ ಅವರೂ ಸಹ ನಾಲ್ಕನೆಯ ಒಂದು ಭಾಗವನ್ನು ಕೊಡಬೇಕಾಗುತ್ತದೆ. ಈ ರೀತಿ ಮಾಡುವುದು ಸರಿಯಲ್ಲ, By any subsequent legislation you cannot deprive them of that benefit. That has to be amended ಎಂದು ಪ್ಲಾನಿಂಗ್ ಕಮಿಷನ್‌ನವರು ಹೇಳಿದರು. ಈ ಎರಡು ತಿದ್ದುಪಡಿಗಳನ್ನೂ ನಮ್ಮ ಭೂಸುಧಾರಣಾ ಮಸೂದೆಯಲ್ಲಿ ಅಳವಡಿಸಬೇಕು. ಇದಲ್ಲದೆ ನಾಲ್ಕೈದು ಸಣ್ಣಪುಟ್ಟ ಬದಲಾವಣೆಗಳನ್ನು ಸೂಚಿಸಿದ್ದಾರೆ. ಇವನ್ನೆಲ್ಲ ರೂಲ್ಸ್‌ನಲ್ಲಿ ಸೇರಿಸಬಹುದು.

ಪ್ಲಾಂಟೇಷನ್‌ಗಳಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದ್ದಾರೆ. ಅಡಕೆ ತೋಟಗಳ ವಿಷಯವಾಗಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವೆಲ್ಲ ಮೈನರ್ ಡೀಟೇಲ್ಸ್ ಹೀಗೆ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಪ್ಲಾನಿಂಗ್ ಕಮೀಷನ್ನಿನವರೂ, ಗೃಹಶಾಖೆಯವರೂ ಹೇಳಿದ್ದಾರೆ. ಈ ಎಲ್ಲ ದೃಷ್ಟಿಯಿಂದಲೂ ನಾವು ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತರಬೇಕಾಯಿತು. ರಾಜ್ಯಾಂಗಕ್ಕೆ ಎಷ್ಟು ಬೇಗ ತಿದ್ದುಪಡಿಯನ್ನು ಪಾರ್ಲಿಮೆಂಟಿನವರು ಅಂಗೀಕರಿಸುತ್ತಾರೆಯೋ ಅಷ್ಟು ಬೇಗ ನಾವು ಕೂಡ ಭೂಸ ಧಾರಣೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಡುತ್ತೇವೆ. ಅಲ್ಲಿಯವರೆಗೂ ಗೇಣಿದಾರರಿಗೆ ರಕ್ಷಣೆ ಇರಬೇಕು. ಇಲ್ಲದೆ ಇದ್ದರೆ ಜಮೀನ್ದಾರರೂ, ಶ್ರೀಮಂತರೂ ರೈತರನ್ನು ಒಕ್ಕಲೆಬ್ಬಿಸುತ್ತಾರೆ. ಈ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತರಲಾಗಿದೆ. ಹೋದವರ್ಷ ಇದೇ ರೀತಿಯ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಿರಿ. ಈಗಲೂ ಅದಕ್ಕೆ ಒಂದು ವರ್ಷ ಜೀವದಾನ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—May I know how many members desire to speak?

(*About 10 membe s rose*)

Ten members want to participate in the Debate. In fact I wanted to see whether we should have a tea break to-day because we had put in three Bills for to-day but one Bill is not coming up. Therefore we have got a little more time to-day.

Sri G. V. GOWDA (Palya).—Sir, instead of sitting everyday at 12-30 p. m. we can sit for half an hour more after 6 P.M.

Mr. SPEAKER —I put it to the Business Advisory Committee and I want to tell it to the Hon'ble Members so that they may know the position The desire expressed was that if we worked so late, then there would be delay in reporting the deleberation of the House in the press and the same would be stale if it is reported later. If we are able to close the sittings earlier, in the next day's paper, we will find all that transpires here. It is left to the convenience of the members and we may decide it, taking into consideration the relative merits and demerits of the suggestion made by the Hon'ble Member.

† ಶ್ರೀ ಅಂಗಡಿ ಚನ್ನಬಸಪ್ಪ (ಹಡಗಲಿ).—ಸ್ವಾಮಿ, ನಾನು ಮೊಟ್ಟ ಮೊದಲನೆಯದಾಗಿ ಇಂಥ ಒಂದು ಮಸೂದೆಯನ್ನು ಸ್ವಾಗತಿಸುತ್ತೇನೆ. ಆದರೆ ಇದು ಹಿಂದೆ ಶಾಸನ ಸಭೆಯಲ್ಲಿ ಪಾಸಾಗಿ ಅದನ್ನು ಕಾರ್ಯಾಚರಣೆಯಲ್ಲಿ ತರುವಾಗ ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರದಿಂದ ಉದ್ದೇಶ ಬಂದ ಪ್ರಕಾರ ಟೆನನ್ಸಿ ಕೋರ್ಟುಗಳು ಕೆಲವು ತಪ್ಪುಗಳನ್ನು ಮಾಡಿವೆ. ಹೇಗೆಂದರೆ ಸರ್ಕಾರದಿಂದ ಒಂದು ಸರ್ಕ್ಯುಲರ್ ಅಥವಾ ಗವರ್ನ್ಮೆಂಟ್ ಆರ್ಡರ್ ಬಂದ ತಕ್ಷಣ all proceedings for possession have been staged. ಯಾರೋ ಒಬ್ಬ ಶ್ರೀಮಂತ ಅಥವಾ ಪಟ್ಟಾದಾರ, ಜಮೀನುದಾರ ರೈತರಿಂದ ಒತ್ತಾಯವಾಗಿ ಭೂಮಿಯನ್ನು ಕಸಿದುಕೊಂಡು ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿರುವುದನ್ನು ರೈತ ತನ್ನ ಸ್ವಾಧೀನಕ್ಕೆ ಕೊಡಿಸಿಕೊಡಿ ಎಂದು ಕೇಳುವುದಕ್ಕೆ ಅವಕಾಶವಿರಲಿಲ್ಲ. ಭೂಸುಧಾರಣಾ ಕಾನೂನು ಬರುವುದಕ್ಕೆ ಮುಂಚಿತವಾಗಿ ಇಂಥ ಒಂದು ಮಸೂದೆಯ ಆವಶ್ಯಕತೆ ಇದೆ ಎಂದು ಗೊತ್ತಿದೆ. ಇದನ್ನು ಕಾರ್ಯರೂಪದಲ್ಲಿ ತರಬೇಕಾದರೆ ಏನು ಮಾಡಬೇಕು ಎಂದರೆ ರೈತನಿಂದ ಸ್ವಾಧೀನ ಬಿಡಿಸಿ ಭೂಮಾಲೀಕನಾದವನು ಒತ್ತಾಯದಿಂದ ತನ್ನ ಸ್ವಾಧೀನದಲ್ಲಿ ಆ ಭೂಮಿಯನ್ನು ಇಟ್ಟುಕೊಂಡಿದ್ದರೆ ಅದನ್ನು ರೈತನು ತನ್ನ ಸ್ವಾಧೀನಕ್ಕೆ ಕೊಡಲಿಕ್ಕೆ ಒಂದು ಅರ್ಜಿ ಮಾಡಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅವಕಾಶವಿರಬೇಕು. ಇದಕ್ಕೆ ನಿಮ್ಮ ಇಲಾಖೆ ಸರಿಯಾದ ಸೂಚನೆಗಳನ್ನು ಕೊಡಬೇಕು ಎಂದರೆ, ಆಗ ಇದು ಕಾರ್ಯಗತವಾಗುತ್ತದೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ, ಇಂತಹ ಒಂದು ಅವಕಾಶವನ್ನು ಉಪಯೋಗ ಮಾಡಿಕೊಂಡು ಎಷ್ಟೋ ಜನ ಶ್ರೀಮಂತರು ಕೋರ್ಟಿನಿಂದ ಹಾಗೆ ತೀರ್ಮಾನ ಬಂದಿದೆ, ಹೀಗೆ ತೀರ್ಮಾನ ಬಂದಿದೆ, ನಿಮ್ಮ ಅರ್ಜಿಯನ್ನು ಕೋರ್ಟು ಎತ್ತಿ ಹಿಡಿಯುವುದಿಲ್ಲ ಎಂದು ರೈತರಿಗೆ ಹೇಳಿ ತೊಂದರೆ ಕೊಡುತ್ತಾರೆ. ಈ ಒಂದು ಕಾರಣದ ಮೇಲೆ ಪ್ರೊಸೀಡಿಂಗ್ಸ್ ಸ್ಟೇ ಮಾಡಿದರೆ ರೈತರ ಗತಿಯೇನು? ಹೀಗಾದರೆ ಉದ್ದೇಶ ಸಫಲವಾಗುವುದಿಲ್ಲ. ನಿಜವಾಗಿಯೂ ಗೇಣಿದಾರರಿಗೆ ಅನುಕೂಲವಾಗ

(ಶ್ರೀ ಅಂಗಡಿ ಚನ್ನಬಸಪ್ಪ)

ಬೇಕಾದರೆ ಇಂತಹ ತೊಂದರೆಗಳನ್ನು ನಿವಾರಿಸಬೇಕು. ಗೇಣಿದಾರರಿಗೆ, ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ಇದು ಸಫಲವಾಗಬೇಕಾದರೆ, ರೈತನಿಂದ ಭೂಮಾಲೀಕನು ಪ್ರಭಾವದಿಂದ ಭೂಮಿಯನ್ನು ತೆಗೆದುಕೊಂಡರೆ ಅದನ್ನು ಬಿಡಿಸಿಕೊಳ್ಳುವುದಕ್ಕೆ ರೈತನಿಗೆ ಅವಕಾಶ ಮಾಡಿದರೆ ಆಗ ಉದ್ದೇಶ ಸಫಲವಾಗುತ್ತದೆ. ಇದೊಂದು ವಿಷಯವಲ್ಲದೆ ಈ ಮಸೂದೆ ಎಲ್ಲ ದೃಷ್ಟಿಯಿಂದಲೂ ಸ್ವಾಗತಾರ್ಹ ಎಂದು ಹೇಳಬೇಕಾಗಿದೆ.

Sri KADIDAL MANJAPPA (Sringeri).—Mr. Speaker, Sir, I rise to support this measure. It has become very necessary to pass this measure in view of the peculiar situation that has been created on account of the judgment of the Supreme Court on the Kerala Agrarian Reforms Act. But how long are we to extend this interim protection and how long are we to continue this uncertain situation in the rural economy is a question that will have to be seriously Considered. When we tackle a vital problem relating to rural economy which affects the lives of a vast majority of people, we must be serious, definite and earnest. I am sure, the Prime Minister is very earnest; the Congress High Command is equally earnest and serious and the Government of India is also serious. But the situation is a bit different in some States perhaps including Mysore. The past events and the present events have proved that we are not very earnest in this matter. I submit this very seriously because I am trying to make out a case that there is imperative need for enforcing those provisions in the Land Reforms Act which deal with tenancies and there is no impediment at all in enforcing those provisions. The decision of the Supreme Court does not come in the way of enforcing those provisions which deal with the relationship between the landlord and the tenant. For more than two decades, we have been telling the people that our objective is to make the tiller the owner of the soil. But what has happened after two decades ;. The old relationship between the tenant and the landlord is disrupted because of the changed situation in the country and the tenant is in a frustrated mood. The farm production has suffered to some extent because the landlord is not prepared to invest money. The tenant is not interested in growing more food because he does not know when he is going to be kicked out of the land. The present situation is such that the landlord is not happy and the tenant is not pleased. I therefore appeal to Government to take early steps to enforce at least one or two chapters that deal with leases. If that had been done there would have been no need for this interim protection. There is provision in the Land Reforms Bill to safeguard the interests of the tenants. I have been telling this for the last two years and I do not know why my young friend, the Revenue Minister, has not thought about it. On account of this uncertain position, even some landlords have suffered, because in places where the tenants are strong the landlord has found it very difficult to collect the rent. Therefore, in the interest of both, the tenants and the landlords it is necessary to enact a uniform law concerning tenancies and leases. So far as Mysore is concerned, the net result is that some landlords, parti-

cularly in Maland, have accused me, abused me and carried on malicious propaganda against me and thousands of tenants have been mercilessly evicted in spite of the legal protection made available to them. I cannot blame the Government, but that is the position today because the tenant is helpless and he is not in a position to fight the legal battle against the powerful landlord.

Last year, the Government have exempted lands belonging to Religious and Charitable Institutions from the operation of this Act. I do not understand why a distinction should have been made between...

SRI M. V. KRISHNAPPA.—That applies only to lands belonging to Muzrai temples managed by the Government because the temple buildings are falling and the temples have no income......

SRI KADIDAL MANJAPPA.—Even then, I feel there is no need to make a distinction. The invisible God has evoked the sympathy of my friend, the Revenue Minister, but unfortunately the visible God in the form of the down-trodden dumb tenants has failed to evoke his sympathy. I request him not to make any distinction. The Government of India and the Congress High Command are anxious that the land reforms should be completed within two years. I am sure at the rate at which we are proceeding, it will take another decade to complete the land reforms; it cannot be done within two years. Therefore, I would request the Revenue Minister and the Government to take speedy steps to enforce the tenancy provisions and also to plead with the Government of India to expedite the passing of the Seventeenth Amemdment to the Constitution.

With these remarks, I conclude, Sir.

[SMT. NAGARATNAMMA HIREMATH (Chairman) in the Chair]

ಶ್ರೀ ಬಿ. ಎಲ್. ಗೌಡ (ಚಿಕ್ಕಕೆರೆ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ರೆವಿನ್ಯೂ ಮಂತ್ರಿಗಳು ಮಂಡಿಸಿರತಕ್ಕ ಈ ವಿಧೇಯಕವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ಹೇಳಬೇಕೆಂದಿದ್ದುದನ್ನು ಈಗಾಗಲೇ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಬಹಳ ಚೆನ್ನಾಗಿ ಸಭೆಯ ಮುಂದಿಟ್ಟಿದ್ದಾರೆ. ಈ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ರೈತರಿಗೂ ಗೇಣಿದಾರರಿಗೂ ಅನುಕೂಲವಾಡುತ್ತೇವೆಂದೂ, ಭೂಸುಧಾರಣೆ ಕಾನೂನನ್ನು ಜಾರಿಗೆ ತರುತ್ತೇವೆಂದೂ ಒಂದು ಸೋಗನ್ನು ಹಾಕಿಕೊಂಡು ಬರುತ್ತಿದ್ದಾರೆಯೋ ಏನೋ ಎಂದು ನನಗನಿಸುತ್ತದೆ. ಈ ಭೂಸುಧಾರಣೆಯನ್ನು ಸೋಗಿನ ರೂಪದಲ್ಲೇ ಉಳಿಸ ಹುದು ಇದನ್ನು ಕಾರ್ಯರೂಪಕ್ಕೆ ತರುವ ಶಕ್ತಿ ಇವರಿಗೆ ಇಲ್ಲವೆಂದು ಖಂಡಿತವಾಗಿ ಹೇಳ ಬೇಕಾಗಿದೆ. ಕಳೆದ ಮೂರು ವರ್ಷಗಳಿಂದ ಭೂಸುಧಾರಣೆ ಕಾನೂನಿನ ಯಾವ ಭಾಗವನ್ನೂ ಜಾರಿಗೆ ಕೊಡುವ ಧೈರ್ಯ ಇವರಿಗಿಲ್ಲವಾಗಿದೆ. ಕಾಂಗ್ರೆಸ್‌ನಲ್ಲಿ ಬಹುಪಾಲು ರೀ ಅಕ್ಷನರೀಸ್ ಎಂದರೆ, ಪ್ರಗತಿವಿರೋಧಿಗಳೂ ಮತ್ತು ಬಂಡವಾಳಶಾಹಿ ಶಕ್ತಿಗಳೂ ಇರುವುದರಿಂದ ಇವರಿಗೆ ಇದನ್ನು ಜಾರಿಗೆ ಕೊಡುವ ಶಕ್ತಿ ಇಲ್ಲ. ಏಕೆಂದರೆ ಇದು ಅವರ ಉಳಿವು ಅಥವಾ ಅಳಿವಿನ ಪ್ರಶ್ನೆ. ಆದಕಾರಣ ಇದನ್ನು ಜಾರಿಮಾಡದೆ ಮುಂದೂಡುತ್ತಿದ್ದಾರೆ. ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರಲು ಏನು ತೊಂದರೆ ಇದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಬರೀ ಊಹೆಯ ಮೇಲೆ ಇಂಥ ತಿದ್ದುಪಡಿ ಸರ್ಕಾರ ತರುತ್ತಿದೆ. ಯಾವದಾವರೂ ನ್ಯಾಯಾಲಯ ತೀರ್ಮಾನ ಕೊಟ್ಟಿದೆಯೇ? ಭೂಸುಧಾರಣಾ ಕಾನೂನನ್ನು ಜಾರಿಗೆ ತಂದರೆ ಪಕ್ಷಪಾತವಾಗುತ್ತದೆ ಎಂದು ಯಾರೂ ಹೇಳಿಲ್ಲ. ಸರಿಯಾದ ದಾರಿಯಲ್ಲಿ ಹೋಗುವಾಗ್ಗೆ ಒಂದು ತಪ್ಪು ಹೆಜ್ಜೆ ಇಟ್ಟರೂ ಪರವಾಯಿಲ್ಲ. ಅನೇಕ ಬಡ ರೈತರಿಗೆ, ಗೇಣಿದಾರರಿಗೆ ಅನುಕೂಲ ಮಾಡಿಕೊಡುವ ಒಳ್ಳೇ ದಾರಿಯಲ್ಲಿ ಬೇಕಾದರೆ ಒಂದು ತಪ್ಪು ಹೆಜ್ಜೆ ಇಡಬಹುದು. ಇದನ್ನು

(ಶ್ರೀ ಬಿ. ಎಲ್. ಗೌಡ)

ಸರಿಯಾಗಿ ಆಲೋಚನೆ ಮಾಡಬೇಕಾದುದು ಅಗತ್ಯ. ಭೂಸುಧಾರಣಾ ಕಾನೂನು ಜಾರಿಗೆ ಬಾರದೇ ಇರುವುದರಿಂದ ಇಂದು ದೇಶದಲ್ಲಿ ಆಹಾರ ಉತ್ಪತ್ತಿ ನಿಧಾನವಾಗುತ್ತಿದೆ. ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ ಆಹಾರ ಉತ್ಪತ್ತಿ ಜಾಸ್ತಿ ಮಾಡಬೇಕು ಎಂದು ಬರಿ ಬಾಯಿಂದ ಹೇಳಿದರೆ ಏನು ಪ್ರಯೋಜನ? ಕಾನೂನು ಜಾರಿಗೆ ಬಾರದೇ ಇದ್ದರೆ 'ಹೆಚ್ಚಿಗೆ ಬೆಳೆಯಿರಿ' ಎಂದು ರೈತರಿಗೆ ಹೇಳಿದ್ದನ್ನು ಅವರು ಕಾರ್ಯಗತಗೊಳಿಸುವುದು ಹೇಗೆ? ಈ ರೀತಿ ಮಾಡುವುದು ಬಹಳ ಅನ್ಯಾಯ. ಈ ಕಾನೂನು ಜಾರಿಗೆ ತರುವ ವಿಚಾರದಲ್ಲಿ ನಿಮಗೆ ಶ್ರದ್ಧೆ ಇಲ್ಲ. ಹೀಗೆ ಮಾಡದೆ, ಭೂ ಸುಧಾರಣ ಕಾನೂನನ್ನು ಕೂಡಲೆ ಜಾರಿಗೆ ತರಬೇಕು. ಈ ರೀತಿ ತಿದ್ದುಪಡಿ ತಂದು ಮುಂದುವರಿಸುವುದು ಬೇಡ ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇದೇ ಕೊನೆಯದಾಗಬೇಕು. ಇನ್ನೊಂದು ಸಲ ಇಂಥ ತಿದ್ದುಪಡಿ ತರುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

2-00 P.M.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷಿಣಿಯವರೇ, ನಾನು ಈ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ಬಹಳ ಕಠಿಣವಾಗಿ ಖಚಿತವಾದ ಅಭಿಪ್ರಾಯದಿಂದ ವಿರೋಧ ಮಾಡುತ್ತೇನೆ. ಈ ರೀತಿ ವಿರೋಧ ಮಾಡುವಾಗ್ಗೆ ದುರುದ್ದೇಶವದಿಂದ ಇಬ್ಬರು ಆತ್ಮೀಯ ಗೆಳೆಯರನ್ನು ಬಹು ಕಟುವಾಗಿ ಟೀಕಿಸಬೇಕೆಂದು ಮನಸ್ಸು ಮಾಡಿದ್ದೇನೆ. ಭೂ ಸುಧಾರಣಾ ಕಾನೂನಿಗೆ ಜನ್ಮ ಕೊಟ್ಟಂಥ ಶಕ್ತಿಯುವರ ಮಂತ್ರಿ ಮಂಡಳದಲ್ಲಿದ್ದಾಗ್ಗೆ ಭೀಷ್ಮ ಪ್ರತಿಜ್ಞೆ ಮಾಡಿ ಕಾನೂನು ಜಾರಿಗೆ ತರುತ್ತೇವೆಂದು ಹೇಳಿ ಈಗ ಶನಿ ಪಂಜರದಲ್ಲಿ ಮಲಗಿರುವಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಒಬ್ಬರು. ಬರೀ ಬಾಯಿ ಮಾತಿನಲ್ಲಿ ಹೇಳುತ್ತಾ ದಿಲ್ಲಿಯ ಕಡೆ ಬೆರಳು ತೋರಿಸುವ ಶ್ರೀ ಗೋಪಾಲ ಕೃಷ್ಣ ಇನ್ನೊಬ್ಬರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ದೇಶದಲ್ಲಿಯ ಸಹಸ್ರಾರು ಜನ ಬಡ ರೈತರನ್ನು ನಿರಾಶೆಗೊಳಿಸಿದಂಥ ಸರ್ಕಾರಕ್ಕೆ ಇವತ್ತಿನ ದಿವಸ ಈ ತಿದ್ದುಪಡಿ ಮಸೂದೆಗೆ ಜೀವದಾನ ಮಾಡತಕ್ಕದ್ದು ಎಂದು ಕೇಳತಕ್ಕಂಥ ಅಧಿಕಾರವಿಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು 'ಪಂಜರವಳ್ಳಿ ಪಂಜು' ಎಂಬ ಪುಸ್ತಕವನ್ನು ಕನ್ನಡದಲ್ಲಿ ಬರೆದಿದ್ದಾರೆ. ಅದರಲ್ಲಿ ಹೇಳಿರುವ ಹಾಗೆ ಅವರು ಮಾಡಿದ್ದಾರೆಯೇ? ಎಂದು ನಾನು ಕೇಳುತ್ತೇನೆ. ಅವರ ಭೀಷ್ಮ ಪ್ರತಿಜ್ಞೆ ಏನಾಯಿತು? ಈ ಕಾನೂನು ಪರಿಶೀಲನೆ ಮಾಡುವುದಕ್ಕೆ ಸಣ್ಣ ಅಸೆಂಬ್ಲಿ ಹಾಗೆ ಇರುವ ಒಂದು ಸಮಿತಿ ರಚನೆ ಮಾಡಿ 3 ತಿಂಗಳ ಕಾಲ ಚರ್ಚಿಸಿ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಇದನ್ನು ಜಾರಿಗೆ ತರುತ್ತೇವೆಂದು ಹೇಳಿದರು. ಆದರೆ ಮುಂದೆ ಅಧಿಕಾರ ಕೈ ತಪ್ಪಿ ಹೋಯಿತು. ನಾನು ಅವರನ್ನು ವೈಯಕ್ತಿಕವಾಗಿ ಟೀಕೆ ಮಾಡುತ್ತಾ ಇಲ್ಲ. ಆದರೆ 'ಪಂಜರವಳ್ಳಿ ಪಂಜು' ಪುಸ್ತಕದಲ್ಲಿ ಆಶ್ವಾಸನೆ ಕೊಟ್ಟಿದ್ದರೂ ಪದೇ ಪದೇ ಇಂಥ ತಿದ್ದುಪಡಿ ತರುವುದು ಅವರಿಗೆ ಸಲ್ಲದು. ಅಧಿಕಾರದಲ್ಲಿರತಕ್ಕಂಥ ಮಂತ್ರಿ ಮಂಡಲಕ್ಕೂ ಸಲ್ಲದು. ಅವರ ಪಕ್ಷಕ್ಕೂ ಸಲ್ಲದು. ಭೂಸುಧಾರಣೆ ಕಾನೂನು ಜಾರಿಗೆ ತರದೇ ಇರುವುದಕ್ಕೆ ಯಾವ ಬಾಲಗ್ರಹ ಹಿಡಿದಿದೆ? ಅದಕ್ಕೆ ಯಂತ್ರ ಮಂತ್ರ ಮಾಡಿ ಪರಿಹಾರ ಮಾಡುವುದಕ್ಕೆ ಆಗಲಿಲ್ಲವೇ? ಎಂದು ಕೇಳುತ್ತೇನೆ. ಅಧಿಕಾರದಲ್ಲಿರುವ ಪಕ್ಷವನ್ನೂ ಮಂತ್ರಿ ಮಂಡಳವನ್ನೂ ಈ ಬಗ್ಗೆ ಕೇಳುತ್ತೇನೆ. ಇಂದು ಜನ ಭೂಮಿ ಬಿಟ್ಟು ಹೋಗುತ್ತಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಇದು ಸರಿಯೇ? ಅಧಿಕಾರಾರೂಢ ಪಕ್ಷದಲ್ಲಿ ಮಲ್ಲ ಯುದ್ಧ ನಡೆದು ಯಾವ ತೀರ್ಮಾನವಾಗಿಲ್ಲ. ನೀವು ತಪ್ಪು ಮಾಡಿ ಎಲ್ಲರ ಮುಖಕ್ಕೆ ಮಸಿ ಬಳಿಯುವುದು ಸರಿಯಲ್ಲ. ಇದನ್ನು ಮಾಡಲು ಆಗದಿದ್ದರೆ ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ. ದೇಶದ ಜನಕ್ಕೆ ಹೀಗೆ ಅನ್ಯಾಯ ಮಾಡುವುದು ಸರಿಯಲ್ಲ. ಇದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ. ಬಂಡವಾಳ ಶಾಹೀ ಸ್ವತಂತ್ರ ಪಾರ್ಟಿಗೆ ಸಹಾಯ ಮಾಡುವುದಕ್ಕೆ ಈ ತಿದ್ದುಪಡಿ ತಂದಿದ್ದೀರಾ? ನೀವು ಚುನಾವಣಾ ಘೋಷಣೆಯಲ್ಲಿ ಹೇಳಿರುವ ಹಾಗೆ ಮಾಡಿದ್ದೀರಾ? ಹೇಳಿದಂತೆ ಮಾಡಲು ನಿಮ್ಮ ಕೈಯಿಂದ ಆಗುವುದಿಲ್ಲವೇ? ಜನತೆಯ ಕಣ್ಣಿಗೆ ಮಣ್ಣೆರಚಿ ಮೋಸದಿಂದ ರಾಜ್ಯಭಾರ ಮಾಡುತ್ತಿರುವಿರಲ್ಲವೇ? ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಎಲ್ಲಾ ಭೂಮಿ ಶ್ರೀಮಂತರ ವಶವಾಗಿದೆ. ಬಡವರಿಗೆ ಜಮೀನು ಇಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು. ನಿನ್ನೆ ಈ ಸಭೆಯಲ್ಲಿ ಮಾಡಿದ ಗವರ್ನರ್ ಅವರ ಭಾಷಣದಲ್ಲಿ ಹೇಳಿಸಿದ್ದೀರಿ ವ್ಯವಸಾಯ ಮತ್ತು ವಿದ್ಯುಚ್ಛಕ್ತಿಯಿಂದ ಹೆಚ್ಚಿನ ಉತ್ಪತ್ತಿ ಯಾಗುವುದಕ್ಕೆ ಪ್ರಾರಂಭವಾಗಿದೆ ಎಂದು. ಹಾಗೆ ಹೆಚ್ಚಿಗೆ ಬೆಳೆದಿದ್ದರೆ ಆಹಾರ ಧಾನ್ಯಕ್ಕಾಗಿ ಪರದೇಶಗಳಿಗೆ ಜೋಳಿಗೆ ಹಿಡಿದು ಏಕೆ ಕೈ ಒಡ್ಡುತ್ತಿದ್ದೀರಿ? ಅದನ್ನು ಏಕೆ ನಿಲ್ಲಿಸಿಲ್ಲ? ಇವತ್ತಿನ ದಿವಸ ಈ ದೇಶದ 44 ಕೋಟಿ ಮಕ್ಕಳಿಗೋಸ್ಕರ ಅವರ ಒಂದು ತುತ್ತು ಅನ್ನಕ್ಕೋಸ್ಕರ

ಆರು ತಿಂಗಳಿಗೊಮ್ಮೆ ಜೋಳಿಗೆ ಹಾಕಿಕೊಂಡು, ಭವತಿ ಭಿಕ್ಷಾಂದೇಹಿ ಎಂದು ಹೊರದೇಶಕ್ಕೆ ಆಹಾರಕ್ಕೆ ಹೋಗುತ್ತಾ ಇದ್ದೀರಲ್ಲ ಕಾರಣವೇನು? ಹೆಚ್ಚು ಆಹಾರ ಉತ್ಪಾದನೆ ಮಾಡುತ್ತೇವೆಂದು, ಬಡವರಿಗೆ ಭೂಮಿ ಕೊಟ್ಟರೂ, ಸಹಕಾರ ಕೊಟ್ಟರೂ, ನೀವು ಮಾಡಿದಂಥ, ಹಾಕಿದಂಥ ಪ್ಲಾನುಗಳು, ಅಂದಾಜುಗಳು, ಸ್ಕೀಮುಗಳು ಏನಿವೆಯೋ ಅವುಗಳೆಲ್ಲಾ ನಿರರ್ಥಕವಾಗಿಬಿಟ್ಟು ನಿರಾಶೆ ಮಾಡಿ, ಮತ್ತೊಮ್ಮೆ ಟೆನೆಂಟುಗಳಿಗೆ ಪ್ರೊಟೆಕ್ಷನ್ ಕೊಡುತ್ತೇವೆಂದು ಹೇಳತಕ್ಕಂಥಾದನ್ನು ನೋಡಿದರೆ ನಿಜವಾಗಿಯೂ ನಿಮಗಿಂತಲೂ ದೇಶಕ್ಕೆ ಹೆಚ್ಚು ಅನ್ಯಾಯ ಮಾಡತಕ್ಕಂಥ, ಮಾಡಿದಂಥ ಪಕ್ಷ ಅಧಿಕಾರಕ್ಕೆ ಬರಲಾರದು ಎಂದು ಹೇಳುತ್ತೇನೆ. ದೇಶದಲ್ಲಿ ಯಾರು ಶೇಕಡ 80 ಜನ ನೇಗಿಲ ಯೋಗಿಗಳಾಗಿದ್ದು ಭೂಮಿ ತಾಯಿಯನ್ನು ನಂಬಿಕೊಂಡಿದ್ದಾರೋ, ಅಂಥವರಿಗೆ ನೀವು ಕೊಟ್ಟ ಒಂದು ಮಾತನ್ನು ಉಳಿಸಿಕೊಳ್ಳಲಿಕ್ಕೆ ಆಗಲಿಲ್ಲ. ಶ್ರೀಮಂತರಿಗೆ ಕೊಟ್ಟ ಮಾತನ್ನು, ಕೈಗಾರಿಕೋದ್ಯಮಿಗಳಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೀರಿ, ಅಧಿಕಾರಿಗಳಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೀರಿ; ಆದರೆ ರೈತನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲ. ಅಧಿಕಾರಿಗಳಿಗೆ 100 ರೂಪಾಯಿ ಇದ್ದ ಸಂಬಳವನ್ನು 300 ಮಾಡಿದ್ದೀರಿ. ಕೈಗಾರಿಕೋದ್ಯಮಿಗಳಿಗೆ ಒಂದಲ್ಲ 10 ಲೈಸನ್ಸನ್ನು ಕೊಟ್ಟಿದ್ದೀರಿ. ಅವರಿಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಕೊಟ್ಟಿರಿ. ಆದರೆ ರೈತನಿಗೋಸ್ಕರ ತಾವು ಏನು ಮಾಡಿದ್ದೀರ ಎಂದು ಕೇಳುತ್ತಾ ಇದ್ದೇನೆ. ದೇಶದಲ್ಲಿ ಜನತೆ ಏನು ಅನ್ನುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಂಡಿದ್ದಾರೆಯೇ ಎಂದರೆ ಇಷ್ಟಾದರೂ ತಿಳಿದುಕೊಂಡಿಲ್ಲ. ಇನ್ನೂ 17 ನೇ ಅಮೆಂಡ್‌ಮೆಂಟ್ ಸೆಲೆಕ್ಟ್ ಕಮಿಟಿಯಲ್ಲಿದೆ, ಅದು ಯಾವಾಗ ಸೆಲೆಕ್ಟ್ ಕಮಿಟಿಯಿಂದ ಬರುತ್ತದೋ ಗೊತ್ತಿಲ್ಲ, ಅದು ಪಾರ್ಲಿಮೆಂಟ್‌ನ ಮುಂದೆ ಬಂದು ಅದಕ್ಕೆ ಪಾರ್ಲಿಮೆಂಟ್ ಹೌದು ಎಂದು ರಾಷ್ಟ್ರಾಧ್ಯಕ್ಷರಿಗೆ ಹೋಗಿ, ಅವರ ರುಜುವಾಗಿ, ಆಮೇಲೆ ಅದು ರಾಜ್ಯಾಂಗದಲ್ಲಿ ಸೇರುವ ಹೊತ್ತಿಗೆ, ಆವಾಗ್ಯೆ ನೀವು ಏನು ಆಗುತ್ತೀರೋ! ನಿಮ್ಮ ಕೈಯಲ್ಲಿ ಏನೇನೂ ಇರುವುದಿಲ್ಲ, ಜಮೀನು ಇರುವುದಿಲ್ಲ ಸಣ್ಣ ಪುಟ್ಟ ರೈತರಿಗೆ ಒಕ್ಕಲುತನ ಬಿಡುವುದಿಲ್ಲ. ಟೆನೆನ್ಸಿ ಪ್ರೊಟೆಕ್ಷನ್ ಕೊಡಬೇಕೆಂದು ಹೇಳಿದ್ದೀರಿ. ಅದು ಬರೀ ನೀರ್ಗುದುರೆ, ಬಿಸಿಲು ಕುದುರೆ, ಜನತೆಗೆ ನೀವು ತೀರ ಅನ್ಯಾಯ ಮಾಡಿದ್ದೀರ ಎಂದು ಕಡಾ ಖಂಡಿತವಾಗಿ ಹೇಳಬೇಕಾಗಿದೆ. ಯಾವ ಆಧಾರದ ಮೇಲೆ ಯಾವ ಗ್ಯಾರಂಟಿ ಮೇಲೆ, ಭೂಸುಧಾರಣೆ ಒಂದು ವರ್ಷದೊಳಗೆ ಮಾಡುತ್ತೇವೆಂದು ಹೇಳುತ್ತಿದ್ದೀರಿ? ಲ್ಯಾಂಡ್ ರೆವಿನ್ಯೂ ಸರ್ಚಾರ್ಜು ಒಂದು ವರ್ಷಕ್ಕೆಂದು ಮಾತು ಕೊಟ್ಟಿರಿ, ಎರಡು ವರ್ಷ ಮಾಡಿ, ಮೂರು ವರ್ಷಕ್ಕೆ ಮತ್ತೆ ತೆಗೆದುಕೊಂಡು ಬಂದಿದ್ದೀರಿ. ನಿಮ್ಮ ಮಾತನ್ನು ಹೇಗೆ ನಂಬುವುದು? ಯಾವ ಆಧಾರದ ಮೇಲೆ ನಿಮ್ಮ ಮಾತಿನಲ್ಲಿ ನಂಬಿಕೆ ಇಡಬೇಕು? ಯಾವುದಾದರೂ ಒಂದು ವಿಷಯದಲ್ಲಿ ತಾವು ನಂಬಿಕಸ್ತರು ಅನ್ನುವುದನ್ನು ತೋರಿಸಿ ಕೊಟ್ಟಿದ್ದೀರ? ಈ ಸಭೆಗೆ ಕೊಟ್ಟ ಮಾತನ್ನು, ವಚನವನ್ನು ಉಳಿಸಿಕೊಂಡಿದ್ದೀರ? ನಾನು ಈ ಸಭೆಗೆ ಬಂದ ಏಳು ವರ್ಷಗಳಲ್ಲಿ, ಭೂಸುಧಾರಣೆ ವಿಷಯದಲ್ಲಿ, ರೈತರ ವಿಷಯದಲ್ಲಿ ತಂದಂಥ ಕಾನೂನುಗಳು ಎಷ್ಟು, ಆ ಕಾನೂನುಗಳಿಗೆ ತಂದಂಥ ತಿದ್ದುಪಡಿಗಳೆಷ್ಟು? ಅವುಗಳಿಂದ ರೈತನಿಗೆ ಸಿಕ್ಕಿದಂಥ ಸವಲತ್ತು ಎಷ್ಟು? ದೊಡ್ಡ zero, ಕುಂಬಳಕಾಯಿ, ಬೂದಕುಂಬಳಕಾಯಿ, ಏನೂ ಸಿಕ್ಕಿಲ್ಲ. ಶ್ರೀಮಾನ್ ಕೃಷ್ಣಪ್ಪನವರು ಉತ್ತರ ಹೇಳುವಾಗ ವ್ಯವಸಾಯಕ್ಕೋಸ್ಕರ ಕೋಟಿ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ನೀರಿಲ್ಲದ ಬಾವಿಗಳನ್ನು ಎಷ್ಟೋ ತೆಗೆದಿದ್ದೇವೆ ಎಂದು ಹೇಳುತ್ತಾರೆ. ಅವರು ಹೇಳುವಾಗ ಕೋಟಿ ಕೋಟಿಗಳು ಕಡೆ ಇಲ್ಲದೆ ಹೊರಟು ಹೋಗುತ್ತವೆ. ಇವತ್ತು ಮಾಲೂರು ತಾಲ್ಲೂಕು ಪ್ರಶ್ನೆ ಬಂದಾಗ 75 ಪರ್ಸೆಂಟ್ ರಾಗಿ ಬೆಳೆ ಆಗಲಿಲ್ಲವೆಂದು ಹೇಳಿದರಲ್ಲ, ಅದನ್ನು ಯಾವ ಆಧಾರ ಇಟ್ಟುಕೊಂಡು ಹೇಳಿದಿರಿ ಎಂದು ಕೇಳಿದ್ದಕ್ಕೆ, ಅನೇಕ ಆಧಾರಗಳಿವೆ ಎಂದು ಜವಾಬು ಕೊಟ್ಟರು. ಕುರುಡ ಇಕ್ಕಿದ, ಮೂಗ ಉಂಡ ಎಂದ ಹಾಗಿದೆ. ಇವರು ಅಧಿಕಾರದಲ್ಲಿರುವುದರಿಂದ, ಇವರು ಹೇಳಿದ್ದನ್ನು ನಾವು ಕೇಳಿಕೊಂಡು ಹೋಗಬೇಕಾಗಿದೆ. ದೇಶದ ಜನತೆ ನಿಮ್ಮನ್ನು ನೋಡುತ್ತಾ ಇದ್ದಾರೆ. ನಿಮ್ಮಿಂದ ಎಷ್ಟು ಕಲ್ಯಾಣವಾಗುತ್ತದೆ, ಎಷ್ಟು ಉಪಯೋಗವಾಗುತ್ತದೆನ್ನುವುದನ್ನು ನೋಡುತ್ತಿದ್ದಾರೆ. ನಮ್ಮನ್ನು ನಿಮ್ಮನ್ನು ಜನರು ಪರೀಕ್ಷೆ ಮಾಡುತ್ತಿದ್ದಾರೆ. ತಾವು ಈ ಶುಭ ಮುಹೂರ್ತದಲ್ಲಿ ಅಧ್ಯಕ್ಷಣಿಯರಾಗಿದ್ದೀರಿ. ತಾವು ಆ ಗದ್ದುಗೆಗೆ ಏರಿರುವುದರಿಂದ ನನಗೆ ಇಂಥ ಒಂದು ಸಂದರ್ಭ ಸಿಕ್ಕಿತು ತಾವು ಅಲ್ಲಿ ನಿಂತು ಏನು ಹೇಳಬೇಕಾಗಿರುತ್ತೋ, ಅದನ್ನು ನಾನು ಹೇಳುವುದಿಲ್ಲ ನೀವೇ ಹೇಳಿ ಎಂದು ನನಗೆ ಸ್ಫೂರ್ತಿ ಕೊಡುತ್ತಾ ಇದ್ದೀರಿ. ನಾನು ಇವತ್ತು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಆಡಳಿತವಲ್ಲಿರತಕ್ಕಂಥ ಕಾಂಗ್ರೆಸ್ ಪಕ್ಷದಿಂದ ಎಷ್ಟೇ ತಡವಾಗಿದ್ದರೂ ಕೂಡ, ನನ್ನ ಸ್ನೇಹಿತರಾದ ಕಡಿದಾಳ್ ಮಂಜಪ್ಪನವರಿಗೆ ಜ್ಞಾನೋದಯವಾಗಿದೆ. ಈಗಲಾದರೂ ಭೂಸುಧಾರಣೆ ಕಾನೂನಿನಲ್ಲಿ 1, 2, 3, ಚಾಪ್ಟರುಗಳನ್ನು ಜಾರಿಗೆ ಕೊಟ್ಟರೆ ತೊಂದರೆಯಾಗುವುದಿಲ್ಲ ಅದನ್ನಾದರೂ ಜಾರಿಗೆ ಕೊಡಿಸುವುಕ್ಕೆ ಸರಕಾರದ ಮೇಲೆ ತಮ್ಮ ಸರ್ವ ಪ್ರಯತ್

(ಶ್ರೀ ಸಿ. ಜೆ ಮುಕ್ಕಣ್ಣಪ್ಪ)

ವನ್ನೂ ಅವರು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ, ಮಾನ್ಯ ಕೃಷ್ಣಪ್ಪನವರು ನಿಜವಾಗಿ ಜನತೆಗೆ ಕಲ್ಯಾಣ ಮಾಡುತ್ತಾರೆಂದು ನಂಬುತ್ತೇನೆ. "ನಾನು ರೈತನ ಮಗ, ಎಂದು ಹೇಳುತ್ತಾರೆ, ರೈತನ ಮಗನಾಗಿ ಈ ಟೆನೆನ್ಸಿ ಅಮೆಂಡ್‌ಮೆಂಟ್ ಕಾನೂನನ್ನು ವಾಪಸು ತಗೆದುಕೊಂಡು, ಇನ್ನು 15 ದಿವಸ—ಒಂದು ತಿಂಗಳೊಳಗೆ, ಈ ಸಭೆಯ ಅಧಿವೇಶನ ಮುಗಿಯುವುದರೊಳಗಾಗಿ. ಶ್ರೀ ಕಡಿದಾಳ್ ಮಂಜಪ್ಪನವರ ಜೊತೆ ಮಾತನಾಡಿ, ಅಂದರೆ ಭೂಸುಧಾರಣೆ ಕಾನೂನಿಗೆ ಯಾರು ಜನ್ಮ ಕೊಟ್ಟರೋ ಅವರೊಡನೆ ಮಾತನಾಡಿ, ಯಾವ ಮೂರು ಚಾಪ್ಟರುಗಳನ್ನು ಜಾರಿಗೆ ಕೊಟ್ಟರೆ ರೈತನಿಗೆ ಒಳ್ಳೆಯದಾಗುತ್ತದೋ ಅದನ್ನು ಜಾರಿಗೆ ಕೊಡಲಿ, ಇಬ್ಬರೂ ರೈತರ ಮಕ್ಕಳು ಆಗ ಇಬ್ಬರೂ ದೇಶದಲ್ಲಿರುವುದಕ್ಕೆ ಲಾಯಕ್ ಎನ್ನಿಸಿಕೊಳ್ಳುತ್ತಾರೆ. ಇಲ್ಲವೆ ಹೋದರೆ ಅವರು ನಾನೇನೂ ಮಾಡುವುದಕ್ಕಾಗುವುದಿಲ್ಲ, ಕೃಷ್ಣಪ್ಪನವರು ಮಾಡಬೇಕೆಂದು ಹೇಳುತ್ತಾರೆ ಕಡಿದಾಳ್ ಮಂಜಪ್ಪನವರು ಡಿಫೆಕ್ಟೀವ್‌ಲಾ ಮಾಡಿದ್ದಾರೆ ಎಂದು ಇನ್ನೊಬ್ಬರು ಹೇಳುತ್ತಾರೆ. ಅದಕ್ಕೋಸ್ಕರ ಶ್ರೀಮಾನ್ ಕಡಿದಾಳ್‌ಮಂಜಪ್ಪ ಮತ್ತು ಕೃಷ್ಣಪ್ಪ ಇಬ್ಬರಿಗೂ ಕೆಟ್ಟ ಹೆಸರು ಬಂದಿದೆ. ಈ ಕೆಟ್ಟ ಹೆಸರು ತಪ್ಪಿಸುವುದಕ್ಕೆ ಯಾವುದನ್ನು ಜಾರಿಗೆ ಕೊಡಬೇಕು. ಯಾದದನ್ನು ಜಾರಿಗೆ ಕೊಟ್ಟರೆ ಕಾನೂನು ಅಡ್ಡಿ ಬರುವುದಿಲ್ಲ, ಸುಪ್ರೀಂ ಕೋರ್ಟು ಮತ್ತು ರಾಷ್ಟ್ರಾಧ್ಯಕ್ಷರು ಅಡ್ಡಿ ಬರುವುದಿಲ್ಲ, ಕಾಂಗ್ರೆಸ್ ಪಾರ್ಟಿಯವರು ಅಡ್ಡಿ ಬರುವುದಿಲ್ಲ, ಬಂಡವಾಳಗಾರರು ಸವಾರಿ ಮಾಡುವುದಿಲ್ಲ ಎಂದು ತಿಳಿದುಕೊಂಡು ಅಂಥ ಭಾಗವನ್ನು ಭೂಸುಧಾರಣಾ ಕಾನೂನಿನಲ್ಲಿ ಜಾರಿಗೆ ಕೊಟ್ಟು ಈ ಅಮೆಂಡ್ ಮೆಂಟನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಈ ಭೂಸುಧಾರಣೆ, ಇನ್ನು ಒಂದು ವರ್ಷವಲ್ಲ, ಇನ್ನು 12 ವರ್ಷಗಳಾದರೂ ಜಾರಿಗೆ ಬರುವುದಿಲ್ಲ, ಆದ್ದರಿಂದ ಒಂದು ಪ್ರತಿಜ್ಞೆ ಮಾಡಿ, ಈ ಆಯವ್ಯಯದ ಅಧಿವೇಶನ ಮುಗಿಯುವುದರೊಳಗಾಗಿ, ಮಾಡಿರತಕ್ಕ ಭೂವಿಧೇಯಕದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಜಾರಿಗೆ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟು, ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಇಷ್ಟು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ನನ್ನ ತಾಯಿಗೆ ನಮಸ್ಕಾರ ಮಾಡಿ ಕುಳಿತುಕೊಳ್ಳುತ್ತೇನೆ,

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷಿಣಿಯರೇ, ಈಗಾಗಲೇ ಈ ಮಾನ್ಯ ಸಭೆಯ ಮುಂದೆ ಬಂದಿರುವ ಈ ಮೈಸೂರು ಟೆನೆನ್ಸಿ ಲಾಸ್ (ಅಮೆಂಡ್‌ಮೆಂಟ್), 1964 ರ ಮಸೂದೆಯನ್ನು ಸ್ವಾಗತ ಮಾಡುತ್ತಾ, ಒಂದೆರಡು ತಿದ್ದುಪಡಿಗಳನ್ನು ಅದರಲ್ಲಿ ಮಾಡಬೇಕೆಂದು ನಮ್ಮ ಮಾನ್ಯ ರಾಜಸ್ವ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಈ ಒಕ್ಕಲುತನ ಮಸೂದೆ ಎಂಬ ಒಂದು ಶಬ್ದದಿಂದ ನನಗಾದರೂ ಏನು ಅನ್ನಿಸುತ್ತದೆ ಎಂದರೆ ಇದು ಕಾಂಗ್ರೆಸ್ ಪಾರ್ಟಿಯ ಚುನಾವಣೆ ಕಾಲದ ಒಂದು ಶಬ್ದವಾಗಿದೆ; ಪ್ರತಿಚುನಾವಣೆ ಬರುವಾಗ ಇದು ರೈತನಿಗೆ ಕೊಡುವ ಆಶ್ವಾಸನೆ: ನಾವು ಬರುವ ವರ್ಷ ಭೂಸುಧಾರಣೆ ಕಾನೂನನ್ನು ಜಾರಿಗೆ ತರುತ್ತೇವೆ, ಉಳುವವನೆ ಭೂಮಿಯ ಒಡೆಯನಾಗುತ್ತಾನೆ ಎಂಬ ಆಶ್ವಾಸನೆಯನ್ನು ಕೊಡುತ್ತಾ ಬಂದಿದ್ದೀರ. ಈ ಆಶ್ವಾಸನೆ ಬರೀ ಬಾಯಲ್ಲೇ ಆಗಿದೆ 1961 ನೇ ಇಸವಿಯಲ್ಲಿ ಒಕ್ಕಲುತನ ಮಸೂದೆ ಮೈಸೂರು ವಿಧಾನ ಸಭೆಯಲ್ಲಿ ಪಾಸಾಯಿತು. ಸಾಧಾರಣವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ, ಅಲ್ಲಿ ಚಾಲುಗೇಣಿ ಒಕ್ಕಲು ಯಾರಿದ್ದಾರೋ, ಅವರಲ್ಲಿ 100 ಕ್ಕೆ 50 ಮಂದಿ ಈಗ ಒಕ್ಕಲು ಎದ್ದು ಹೋಗಿದ್ದಾರೆ. ಕಾರಣ, ಒಕ್ಕಲು ಮಸೂದೆ ಜಾರಿಗೆ ತರುತ್ತಾರೆಂದು ಒಂದಲ್ಲ ಒಂದು ವಿಧದಲ್ಲಿ ಧಣಿಗಳು ಅವರಿಗೆ ಕಿರುಕುಳ ಕೊಡುತ್ತಾ ಇದ್ದು, ಯಾವುದಾದರೂ ನೆಪವನ್ನು ಮುಂದೊಡ್ಡಿ, ಕೆಲವು ಕಡೆಗಳಲ್ಲಿ ಒಕ್ಕಲುಗಳಿಗೆ ಬೇಕಾದ ರಸೀತಿಯನ್ನು ಕೊಡದೆ ಕೋರ್ಟಿನಲ್ಲಿ ದಾವ ಮಾಡಿ ಒಕ್ಕಲುಗಳನ್ನು ಎಬ್ಬಿಸುತ್ತಾ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಲ್ಲಿ ಒಂದು ವಿಶಿಷ್ಟ ರೀತಿಯ ಒಕ್ಕಲುತನ ಜಾರಿಯಲ್ಲಿದೆ. ಸಾಧಾರಣವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ಕ್ಕೆ 80 ಜನ ಚಾಲುಗೇಣಿ ರೈತರಿದ್ದಾರೆ. ಹೀಗಿರುವಾಗ ಈ ಒಂದು ಕಾನೂನು ಬರುತ್ತದೆ ಎಂದು ಹೇಳಿ ಇದರ ಒಂದು ಸುಸಂದರ್ಭವನ್ನು ಉಪಯೋಗಿಸಿಕೊಂಡು ಧಣಿಗಳು ಒಕ್ಕಲನ್ನು ಎಬ್ಬಿಸುತ್ತಾ ಇದ್ದಾರೆ ಮೊನ್ನೆ ಒಂದು ಪ್ರಸಂಗ ಏನಾಯಿತು ಎಂಬುದನ್ನು ಹೇಳುತ್ತೇನೆ. ಗೇಣಿಗೆ ಕೊಟ್ಟ ಒಬ್ಬ ಒಕ್ಕಲಿಗನ ಮನೆಯನ್ನು ಶ್ಯಾನುಭೋಗರು ಶೇಕದಾರರು, ರೆವಿನ್ಯೂ ಇನ್‌ಸ್ಪೆಕ್ಟರು ಎಲ್ಲರೂ ಬಂದು ಜಪ್ತಿ ಮಾಡಿ ಆತನ ಮನೆಯಲ್ಲಿ ಇದ್ದ ಸಾಮಾನು ಬತ್ತ ವಗೈರೆ ಎಲ್ಲವನ್ನೂ ಕೊಂಡು ಹೋಗಿ ಏಲಂ ಮಾಡಿದ್ದಾರೆ ಈ ವಿಷಯ ಆತನು ಸರ್ಕಾರಕ್ಕೆ ಮನವಿಮಾಡಿಕೊಂಡು ನನಗೂ ಸಹ ಒಂದು ನಕಲನ್ನು ಕೊಟ್ಟಿದ್ದ, ಈ ವಿಷಯ ಮಾನ್ಯ

ಮಂತ್ರಿಗಳ ಗಮನಕ್ಕೂ ಬಂದಿರಬೇಕು ಎಂದು ನನಗೆ ಅನಿಸುತ್ತದೆ. ಈ ಒಕ್ಕಲು ತಿದ್ದುಪಡಿ ಮಸೂದೆ ಎನ್ನುವುದು ಶಾಸ್ತ್ರಿಗಳ ಪಂಚಾಂಗದ ಮಳೆಯಂತಾಗಿದೆ. ಯಾವುದೋ ಒಬ್ಬ ರೈತ ಮಳೆ ಬರುತ್ತದೆಯೋ ಎಂದು ಪಂಚಾಂಗವನ್ನು ನೋಡುತ್ತಾ ಇದ್ದನಂತೆ, ಪಂಚಾಂಗದ ಪ್ರಕಾರ ಮಳೆ ಬರುತ್ತದೆ ಎಂದು ಬೀಜವನ್ನು ತೆಗೆದುಕೊಂಡು ಬಿತ್ತನೆ ಮಾಡಿದ; ಮಳೆ ಬರಲಿಲ್ಲ ಆಗ ಪಂಚಾಂಗವನ್ನು ತೆಗೆದುಕೊಂಡು ಅದರಲ್ಲೇನಾದರೂ ಮಳೆ ಇದೆಯೋ ಎಂದು ಹಿಂಡಲು ಶುರು ಮಾಡಿದನಂತೆ. ರೈತರು ರಾಮ ರಾಜ್ಯ ಬರುತ್ತದೆ, ಹೊಲದ ಒಡೆಯನಾಗುತ್ತೇನೆ ಎಂದು ಆಶೆ ಇಟ್ಟುಕೊಂಡಿದ್ದರು— ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯವರು ಆ ಒಂದು ಭಾವನೆ ಮಾಡಿಕೊಂಡಿದ್ದವರು. ಆದ್ದರಿಂದ ಏನಾದರೂ ಒಂದು ಕಾರಣ ಕೊಟ್ಟು 17ನೇ ಅಮೆಂಡ್‌ಮೆಂಟ್ ಬಂದ ಮೇಲೆ ಈ ಒಕ್ಕಲು ಮಸೂದೆಯನ್ನು ಜಾರಿಗೆ ತರುತ್ತೇವೆ ಎಂದು ಹೇಳುವುದಕ್ಕೆ ಬದಲಾಗಿ ಆದಷ್ಟು ಜಾಗ್ರತೆ ಇದನ್ನು ಜಾರಿಗೆ ತರಬೇಕು, ಇದರಿಂದ ಬಡ ರೈತರಿಗೆ ಬಹಳ ತೊಂದರೆಯಾಗುತ್ತಾ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಮೆ ಎಂದರೆ ಎರಡು ಸಾವಿರ ಎಕರೆ ಜಮೀನನ್ನು ಇಂದಿನ ತುರ್ತು ಪರಿಸ್ಥಿತಿಯಲ್ಲಿ ಆಹಾರ ಬೆಳೆ ಬೆಳೆಸದೆ ಹಾಗೆಯೇ ಖಾಲಿ ಇಟ್ಟಿದ್ದಾರೆ, ಇದರ ಪರಿಸ್ಥಿತಿ ಏನಾಗಿದೆ ಎಂದರೆ ಧಣಿ ಒಕ್ಕಲಿನ ಮೇಲೆ ವ್ಯಾಜ್ಯ ಹಾಕಿ ಅವನ ಬೆಳೆಯನ್ನು ಅಥವಾ ಮನೆ ಸಾಮಾನುಗಳನ್ನು ಜಪ್ತಿ ವಗೈರೆ ಮಾಡಿಸಿ ಬೇಸಾಯ ಮಾಡಲು ಸಾಧ್ಯವಿಲ್ಲದಂತೆ ಆಗಿದೆ. ಈ ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ಖಂಡಿತವಾಗಿ ಹೇಳುತ್ತೇನೆ. ಎರಡು ಸಾವಿರ ಎಕರೆ ಮೂರು ಬೆಳೆ ಆಗುವುದು ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ಖಾಲಿ ಇದೆ. ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ. ಹೀಗಿರುವಾಗ ಆದಷ್ಟು ಬೇಗ ಒಕ್ಕಲು ಮಸೂದೆಯನ್ನು ಜಾರಿಗೆ ತರಬೇಕು, ಮತ್ತು ರೈತರಿಗೆ ಇನ್ನಿತರೆ ಯಾವುದಾದರೂ ರೀತಿಯಲ್ಲಿ ಎಂದರೆ ಅವರ ಮನೆ ಅಲ್ಲದೆ ಅವರು ಬೆಳೆಗಳನ್ನು ಜಪ್ತಿ ಮಾಡದ ರೀತಿಯಲ್ಲಿ ಕಾನೂನು ತಿದ್ದುಪಡಿ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **Sri B. P. KADAM** (Karwar).—Madam, with all humility and due respect, I wish to say that this amendment is a huge farce and a huge show. When the Communist Government of Nambudripad assumed power in Kerala, immediately, an ordinance was issued by them protecting the ryots. They feared that the land-halders, anticipating land reforms would indiscriminately evict the tenants. Now this Government wants to display that they are also out for the tenants protection of the against eviction. But, what is this protection, when we see every day mass eviction on one pretext or the other, voluntary surrender and all that? In this State, the peasantry is very backward. Legal knowledge has not percolated to them. The land-lord uses all sorts of influence and with the assistance of goondas and doubtful persons and so called social workers carries on mass evictions. The Hon'ble Minister said that they were awaiting the passing of the amendment to the Constitution. I do not think that the amendment to the Constitution is an hindrance. The The real hindrance is that a large section of the legislators who themselves are very big exploiters and huge landlords are opposed to the tenancy laws as such. We have experience of the North Karnataka Legislators in the Bombay legislature, where they opposed a Bill on the anvil of the Bombay Legislature, in 1956. The rent, in North Kanara is five times the land assessment or Rs 20 per acre, which cover is less, and this has been recommended by the Planning Commission, and that is most feared by this Government. Of course, there is some suggestion by the Planning Commission regarding ceiling and all that. That is also another provision which has been attacked by the Bombay legislators in the Bombay Legislative Assembly then. The case decided by the Supreme Court in this behalf does not come in the way. However, an amendment has been brought and let this be the last amendment. Let

(SRI B. P. KADAM)

not the Government bring another amendment after one year under one guise or the other.

It has been stated by the Hon'ble Minister that the Swathanthra Party is collecting a lot of signatures and therefore the Government ot India or this Government has to look at both sides and see how far if can be taken into consideration. Sir, this Government has got only one alternative, either to kick off socialism or embrace socialism. If they want to woo the Swathantra Party, let them not claim that the Congress is wedded to Socialism of any sort. Even this is a farce. Here after at least, let it be made clear, whether they want to have socialism or believe with the views of the Swathantra Party. If they want to fear people, let them fear people who will serve the Nation, especially the mass of peasantry, who must grow more food and save the country, and not tall talkers whose good and rabid talk is published in all newspapers, and who are themselves supporters of free enterprise. I request the Hon'ble Ministers to bring the Land Reforms Act into force as early as possible. Let this be the last amendment. Thank you, Madam.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಕಂದಾಯ ಮಂತ್ರಿಗಳವರು ಎರಡು ಮಸೂದೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ ಮತ್ತು ರೈತರಿಗೆ ತಾತ್ಕಾಲಿಕವಾಗಿ ರಕ್ಷಣೆ ಕೊಡತಕ್ಕ ಮಸೂದೆಯನ್ನು ಮಾನ್ಯ ಸಭೆಯ ಪರ್ಯಾಲೋಚನೆಗಾಗಿ ಕೂಡ ಇಟ್ಟಿದ್ದಾರೆ. ಭೂ ಸುಧಾರಣೆಯನ್ನು ಜಾರಿಗೆ ತರ ವಲ್ಲಿ ಕೆಲವು ಅಡಚಣೆಗಳು ಇವೆ, ರಾಜ್ಯಾಂಗಕ್ಕೆ ತಿದ್ದುಪಡಿ ಆಗಬೇಕಾಗಿದೆ, ಸಂಸತ್ತಿನ ಮುಂದೆ ರಾಜ್ಯಾಂಗದ 17ನೇ ತಿದ್ದುಪಡಿ ಇದೆ, ಆದರೆ ಅದನ್ನು ಸ್ವತಂತ್ರ ಪಕ್ಷದವರು ವಿರೋಧ ಮಾಡುತ್ತಾ ಇದ್ದಾರೆ ಆದ್ದರಿಂದ ಭೂಸುಧಾರಣೆಯನ್ನು ತರಲು ತಡವಾಗುತ್ತಾ ಇದೆ ಎಂದು ಹೇಳಿ ಈ ಮನೆಗೆ ಮಾನ್ಯ ಮಂತ್ರಿಗಳು ಒಂದು ಸಮಾಧಾನವನ್ನು ಹೇಳಿದರು.

2-30 P.M.

ಈ ಮಾತನ್ನು ಮಾನ್ಯ ಕಂದಾಯ ಸಚಿವರಿಗೆ ಹೋದ ವರ್ಷವೇ ಹೇಳಿದೆ. ಒಂದು ವರ್ಷ ಮುಂದುವರಿಸಲು ಈ ಸಭೆಯ ಮುಂದೆ ತಿದ್ದುಪಡಿ ತಂದಾಗಲೂ ಇದೇ ಆಶ್ವಾಸನೆ, ಇದೇ ಮಾತು, ಇದೇ ಕಾರಣವನ್ನು ಹೇಳಿದರು. ಅಡಚಣೆಯಿರುವ ಕೊಳ್ಳೇಗಾಲ, ದಕ್ಷಿಣಕನ್ನಡಜಿಲ್ಲೆ, ಬಳ್ಳಾರಿ ಜಿಲ್ಲೆ, ಹೈದರಾಬಾದು ಕರ್ಣಾಟಕ ಜಿಲ್ಲೆ ಮುಂತಾದ ಭಾಗಗಳನ್ನು ಬಿಟ್ಟು ಹಳೇ ಮೈಸೂರು ಮತ್ತು ಇತರ ಭಾಗಗಳಿಗೆ ಭೂಸುಧಾರಣಾ ಮಸೂದೆಯ ಕೆಲವು ಅಧ್ಯಾಯಗಳನ್ನು ಏಕೆ ಜಾರಿಗೆ ತರಬಾರದು ಎಂದು ಆಗ ಒತ್ತಾಯಪಡಿಸಿದೆವು. ಯಾವ ಯಾವ ಕಾರಣಗಳಿಂದಲೋ ಏನೋ ಸರ್ಕಾರದವರು ಈ ವಿಷಯಗಳಲ್ಲಿ ಏನೊಂದು ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಶ್ರೀಮಾನ್ ಜತ್ತಿಯವರ ಅಧ್ಯಕ್ಷತೆಯಲ್ಲಿ ವಿಶಾಲ ಮೈಸೂರಾದ ಮೇಲೆ ಆಗ ಬಹುಶಃ ಶ್ರೀಮಾನ್ ನಿಜಲಿಂಗಪ್ಪನವರು ಕೆಲವು ದಿವಸ ಮುಖ್ಯ ಮಂತ್ರಿಗಳಾಗಿದ್ದರೆಂದು ಕಾಣುತ್ತದೆ—ಆ ಕಾಲದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಯವರು ಕೊಟ್ಟ ಒಂದು ವರದಿಯ ಆಧಾರದ ಮೇಲೆ ಒಂದು ಕಣ್ಣೊರೆಸುವ ಭೂಸುಧಾರಣೆ ಮಸೂದೆ ಈ ಸಭೆಯ ಅಂಗೀಕಾರಕ್ಕೆ ಬಂತು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಆ ಮಸೂದೆಯ ಪಿತೃವಾಗಿದ್ದರೆಂದು ಕಾಣುತ್ತದೆ. 10 ವರ್ಷ ಅವರು (ದೇವರ ದಯೆಯಿಂದ ಎಂದು ಹೇಳಬಹುದು), ಅಧಿಕಾರದಲ್ಲಿರುವ ಅವಕಾಶ ಪಡೆದಿದ್ದರು. ಶ್ರೀಮಾನ್ ಜತ್ತಿಯವರು ಯಾವ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿ ಆ ಒಂದು ಸಮಿತಿಯ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರೋ ಅವರೇ ಈ ರಾಜ್ಯದ ಮುಖ್ಯ ಮಂತ್ರಿಯಾಗುವ ಸೌಭಾಗ್ಯ ಪಡೆದರು, ನಮಗೆ ಅದು ದೌರ್ಭಾಗ್ಯವಾಯಿತು. ಅವರು ತಮ್ಮ ವರದಿಯ ಮೇಲೆ ತಾವೇ ಕುಳಿತು 4 ವರ್ಷ ನಿರಾತಂಕವಾಗಿ ರಾಜ್ಯಭಾರ ಮಾಡಿದರು. ಆದರೆ ಸಮಿತಿಯ ಯಾವ ಸಲಹೆಯನ್ನೂ

ಸರ್ಕಾರ ಕಾರ್ಯಗತ ಮಾಡಲಿಲ್ಲ; ನನಗೆ ಚೆನ್ನಾಗಿ ನೆನಪಿದೆ. ಮುಂಬಯಿಯಿಂದ ಕೆಲವು ಮಹನೀಯರು ಬಂದಾಗ ಕಂಠಿಯವರು, ಜತ್ತಿಯವರು ಹಾಗೂ ಪಾಟೀಲ್ ಎನ್ನುವವರೊಬ್ಬರು ಇಲ್ಲಿಗೆ ಬಂದರು. ಪಾಟೀಲರು ಒಮ್ಮೆ ಕಂದಾಯ ಮಂತ್ರಿಗಳಾಗಿದ್ದರು. ಅವರನ್ನೊಮ್ಮೆ ನಾನು ವ್ಯಾಪಕವಾಗಿ ವಿರೋಧಿಸಬೇಕಾದ ಪ್ರಸಂಗ ಬಂತು. ನಮ್ಮಲ್ಲಿ ಮುಂಬಯಿ ಕರ್ಣಾಟಕದ ರೈತರು ಭೂಮಿಯ ಒಡೆಯರಾಗುವ ತಾರೀಖನ್ನು ಮುಂದುವರೆಸಿದರು. ಅದು ಇವತ್ತಿಗೂ ಮುಂದೆ ಹೋಗುತ್ತಿದೆ. ಇವತ್ತಿಗೂ ಆ ರೈತರು ಭೂ ಒಡೆಯರಾಗಿಲ್ಲ. ಮುರಾರ್ಜಿಯವರ ಕಾಲದಲ್ಲಿ ಅವತ್ತಿನ ಕೆಲವು ಕಾಂಗ್ರೆಸ್ಸಿನವರು, ಬಲ ಪಕ್ಷದವರು ಪ್ರತಿಗಾಮಿ ಎಂದು ಹೇಳಿಕೊಂಡು ಸಮಾಜವಾದ ಜಾರಿಗೆ ತರಬೇಕೆಂದಿದ್ದಾಗ ಮುಂಬಯಿ ಪ್ರಾಂತದಲ್ಲಿ ಬಸ್ ರಾಷ್ಟ್ರೀಕರಣವಾಗಿತ್ತು, ಭೂ ಸುಧಾರಣೆಯಾಗದಿದ್ದರೂ ರೈತ 5 ಪಟ್ಟು ಕಂದಾಯ ಕೊಟ್ಟರೆ ಸಾಕು ಎಂದು ಕಾನೂನು ಮಾಡಿದ್ದರು, ಮತ್ತು ಗೇಣಿ ರಿಜಿಸ್ಟರಿಟ್ಟು ಬಂಸಿದರು. ಹಾಗೆಯೇ ಪಟೇಲ ಶಾನುಭೋಗರನ್ನು ತಕ್ಷಣ ರದ್ದುಮಾಡಿ ಒಳ್ಳೆಯ ವ್ಯವಸ್ಥೆ ಮಾಡಿದರು. ಆ ಭಾಗ ಮೈಸೂರಿಗೆ ಸೇರಿದ ಮೇಲೆ ಆಗ ಇಲ್ಲೇನು ಕೆಟ್ಟ ಪದ್ಧತಿ, ಚಾಳಿ ವ್ಯವಸಾಯ ಕ್ಷೇತ್ರದಲ್ಲಿತ್ತು, ಅದು ಮುಂಬಯಿ ಕರ್ಣಾಟಕದಲ್ಲಿ ಇವತ್ತು ಆರಂಭವಾಗಿದೆ. ಹೀಗೆ ವ್ಯವಸಾಯ ಕ್ಷೇತ್ರದಲ್ಲಿ ಎಷ್ಟು ಅನಾಹುತವಾಗಿದೆ ಎಂದರೆ ಬಹುಶಃ ಈ ಅನಾಹುತದಿಂದ ಆಗಿರುವ ನಷ್ಟವನ್ನು ಮುಂದೆ ಯಾರು ಸರಿಪಡಿಸಲಾರರು. ವ್ಯವಸಾಯ ಕ್ಷೇತ್ರದಲ್ಲಿ ಉತ್ಪತ್ತಿ ಕಡಮೆಯಾಗುವುದಕ್ಕೆ ಕೂಡ ಭೂ ಸುಧಾರಣೆಯನ್ನು ತರದಿರುವುದೇ ಕಾರಣ ಎಂದು ಮಾನ್ಯ ಕಡಿದಾಳ್ ಮಂಜಪ್ಪನವರು ಹೇಳಿದರು. ಈ ಪ್ರಕಾರವಾಗಿ ಜಮೀನುದಾರನೂ, ಹಿಡುವಳಿದಾರನೂ ತಮ್ಮ ಜಮೀನು ಕೈಬಿಟ್ಟು ಹೋಗುತ್ತದೆ ಎಂಬ ಭಯದಿಂದ ಅವರು ವ್ಯವಸಾಯಾಭಿವೃದ್ಧಿಗೆ ಹಣ ಹಾಕುವುದಿಲ್ಲ. ಗೇಣೀದಾರ ಯಾವುದೇ ರೀತಿ ಹಣ ಹಾಕಿ ಕೃಷಿ ಅಭಿವೃದ್ಧಿ ಮಾಡುವ ಸ್ಥಿತಿಯಲ್ಲಿಲ್ಲ. ಯೋಜನಾ ಆಯೋಗದವರು ಮಾತ್ರ 1-2-3 ಎಂದು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಎಲ್ಲರೂ ಅದರಿಂದ ಒಳ್ಳೆಯ ಪ್ರಗತಿಯಾಗಿದೆ, ಭೂ ಶಾಸನದ ಬಗ್ಗೆ ಪ್ರಗತಿಯಾಗಿದೆ ಎನ್ನುತ್ತಿದ್ದಾರೆ. ನಂದಾ ಅವರು ಬರೆದ ಲೇಖನದ ಪ್ರಕಾರ ಮೈಸೂರಿನಲ್ಲಿ ಭೂ ಸುಧಾರಣೆ ಜಾರಿಗೆ ಬಂದಿದೆ. ಈ ಯೋಜನೆಗಳ ಪ್ರಕಾರ ಹೆಚ್ಚು ಬೆಳೆ ಬೆಳೆಯದೆ ಪ್ರತಿ ವರ್ಷ ಬೆಳೆ ಹೆಚ್ಚುತ್ತಿದೆ. ಕೃಷ್ಣಪ್ಪನವರು ಒಂದು ಸಲ ಚೈನಾ ವಿಚಾರವನ್ನು ಮೊದಲಿಸಿ ಹೇಳುವಾಗ ಅಲ್ಲಿ ಪ್ರತಿ ವರ್ಷ ಬೆಳೆ ಜಾಸ್ತಿಯಾಯಿತೆಂದು ಲೆಕ್ಕದಲ್ಲಿ ಬರೆಯುತ್ತಿದ್ದರು. ವಾಸ್ತವವಾಗಿ ಚೈನಾದಲ್ಲಿ ಮಳೆ ಬೆಳೆ ಇಲ್ಲದೆ, ಕ್ಷಾಮ ಇದೆ, ಪ್ರಚಾರಕ್ಕಾಗಿ ಹಾಗೆ ಮಾಡುತ್ತಾರೆ ಎಂದು ಹೇಳಿದರು. ನಮ್ಮ ದೇಶದ ಸ್ಥಿತಿ ಹಾಗಾಗಿದೆ. ಈಗ ಎರಡು ಯೋಜನೆಗಳು ಮುಗಿದು ಮೂರನೆಯ ಯೋಜನೆಯ ಕೊನೆಯ ವರ್ಷದಲ್ಲಿದ್ದೇವೆ. ಆದರೆ ನಮ್ಮ ಯೋಜನೆಯ ಪ್ರಕಾರ ಮುಖ್ಯವಾಗಿ ವ್ಯವಸಾಯ ಕ್ಷೇತ್ರದಲ್ಲಿ ನಿರೀಕ್ಷೆ ಇರುವಷ್ಟು ಉತ್ಪತ್ತಿಯಾಗಿಲ್ಲ. ಈಗ ತಾತ್ಕಾಲಿಕವಾಗಿ ರಕ್ಷಣೆ ಕೊಡುವ ಈ ಕಾನೂನೇದೆಯೋ ಅದು ಕೇವಲ ಕಾನೂನು ಕಡತದಲ್ಲಿ ಮಾತ್ರ ಇದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮುಖ್ಯವಾಗಿ ಈಗಾಗಲೆ ಮಾನ್ಯ ಭಾಸ್ಕರ ಶೆಟ್ಟಿಯವರು ಮತ್ತು ಇತರರು ಕೆಲವರು ಹೇಳಿದ್ದಾರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 51ನೆಯ ಕ್ಲಾಜಿನ ಪ್ರಕಾರ ಸುಮಾರು ಸೇಕಡ 35 ಗೇಣೀದಾರರಿದ್ದಾರೆ, ಶಿವಮೊಗ್ಗಾದಲ್ಲಿ ನೂರಕ್ಕೆ 9 ರಷ್ಟಿದ್ದಾರೆ, ಉತ್ತರಕನ್ನಡದಲ್ಲಿ ಶೇಕಡ 35 ಜನರಿದ್ದಾರೆ. ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರಕನ್ನಡಗಳಲ್ಲಿ ಗೇಣಿ ಪರಿಸ್ಥಿತಿ ಹೇಗಿದೆ ಎಂದು ತಾವು ವಿಚಾರಮಾಡಬೇಕು. ಇವತ್ತಿಗೂ ನಮ್ಮ ಪ್ರದೇಶಗಳಲ್ಲಿ, ಮಲೆನಾಡು ಪ್ರದೇಶಗಳಲ್ಲಿ ಯಾವುದೇ ಒಂದು ರಸೀತಿ ಕೊಡುವ ಸಂಪ್ರದಾಯವಿಲ್ಲ, ಯಾವ ಶಾನುಭೋಗರು ವಂಶಪಾರಂಪರ್ಯವಾದ ತಮ್ಮ ಹಕ್ಕು ರದ್ದಾಗುತ್ತದೆಂದು ರೊಚ್ಚಿಗೆದ್ದು ಪಹಣಿಯನ್ನು ಸರಿಯಾಗಿ ಬರೆಯದೆ ಇವತ್ತು ಮನಬಂದ ಹಾಗೆ ನಡೆಯುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಜಮಾಬಂದಿ ಇಟ್ಟರೆ ಅದಕ್ಕೆ ಒಬ್ಬರೂ ಬರುತ್ತಿಲ್ಲ. ಹೀಗಾಗಿ ಎರಡು ಮೂರು ಸಲ ಜಿಲ್ಲಾಧಿಕಾರಿಗಳು ಜಮಾಬಂದಿ ಮಾಡಲಿಕ್ಕಾಗಲಿಲ್ಲ. ಆ ಬಗ್ಗೆ ಕಾಗದದಲ್ಲಿ ತಿಳಿಸದೆ ಬಾಯಲ್ಲೇ ಹೇಳುವ ಪರಿಸ್ಥಿತಿ ಉಂಟಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬೇಕಾದರೆ ವಿಚಾರಮಾಡಿ, ತೀರ್ಥಹಳ್ಳಿಯಲ್ಲಿ ಜಮಾಬಂದಿ ವಿಚಾರ ಏನಾಯಿತು ಎಂದು ಕೇಳಿ. ಜಮೀನುದಾರರು ಕೆಲವು ಕಡೆ ರೈತರು ಜಮೀನನ್ನು ಸಾಗುಮಾಡದಿದ್ದರೂ ಮಾಡಿದಂತೆ ಬರೆಯುವ ಸ್ಥಿತಿ ಬಂದಿದೆ.

ಇವೊತ್ತು ಹಳೆಯ ಮೈಸೂರಿನಲ್ಲಿ ಪಹಣಿಯನ್ನು ಬರೆಯುವ ಕ್ರಮವೇ ವಿಚಿತ್ರವಾಗಿದೆ. ಗ್ರಾಮಗಳಿಗೆ ಹೋಗಿ ಜಮೀನಿನಲ್ಲಿ ಕುಳಿತು ಪಹಣಿಯನ್ನು ಬರೆಯಬೇಕು. ಈಗ ಹಾಗೇನೂ ಮಾಡುತ್ತಿಲ್ಲ. ಅವರು ಹಿಂದೆ ನಾಲ್ಕು ವರ್ಷಗಳಲ್ಲಿ ಪಹಣಿ ಲೆಕ್ಕ ಏನು ಬರೆದಿದ್ದರೋ ಅದನ್ನು ಈಗಲೂ ತಿದ್ದುಪಡಿ ಮಾಡಲಿಕ್ಕೆ ಅವಕಾಶವಿದೆ. ಏಕೆಂದರೆ ಕಟ್ಟು ಅವರಲ್ಲೇ ಇರುತ್ತದೆ. ಈಗ

(ಶ್ರೀ ಎಸ್. ಗೋಪಾಲಗೌಡ)

ಕೋರ್ಟಿನವರೂ ಪಹಣಿ ರೆಕ್ಕವನ್ನೇ ಒಂದು ದೊಡ್ಡ ಆಧಾರವಾಗಿ ನಂಬುತ್ತಾರೆ. ಹಳೆಯ ಮೈಸೂರಿನಲ್ಲಿರುವ ಕೋರ್ಟುಗಳಲ್ಲಿ ಪಹಣಿ ರೆಕ್ಕವನ್ನೇ ಒಂದು ದೊಡ್ಡ ಆಧಾರವಾಗಿ ಇಟ್ಟು ಕೊಂಡಿದ್ದಾರೆ. ಅದರಂತೆ ಹಿಂದಿನ ಪಹಣಿ ರೆಕ್ಕದಲ್ಲಿ ಗೇಣಿದಾರನಾಗಿರುವವನು ಮಧ್ಯ ಒಂದು ವರ್ಷ ಸಾಗುವಳಿ ಮಾಡಿಲ್ಲ ಎಂದು ಬರೆದು ಬಿಟ್ಟರೆ ಆಗ ಅವನು ಕೋರ್ಟಿಗೆ ಹೋಗಿ ಸಾಕ್ಷಿ ದ್ವಾರವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದ ಎಂದು ಹೇಳಿದರೂ ಕೋರ್ಟಿನಲ್ಲಿ ಗೇಣಿಯನ್ನು ಸತತವಾಗಿ ಮಾಡಿಲ್ಲ ಎಂದು ಪಹಣಿ ರೆಕ್ಕದಲ್ಲಿದೆ; ಅದರಿಂದ ಈ ಭೂಮಿ ನಿನಗೆ ಸೇರಿದ್ದಲ್ಲ ಎಂದು ಹೇಳಲು ಅವಕಾಶವಾಗುತ್ತಿದೆ. ಮತ್ತು ಕೋರ್ಟಿಗೂ ಇಂತಹ ಒಂದು ಅನುಮಾನ ಬರಲು ಅವಕಾಶವಾಗುತ್ತದೆ. ಅದರಂತೆ ವಿರೋಧವಾದ ತೀರ್ಮಾನವನ್ನು ಕೊಡುತ್ತಾರೆ. ನಾನು ಅನೇಕ ಸಾರಿ ಈ ಮಾನ್ಯ ಸಭೆಯ ಮುಂದೆ ಒತ್ತಾಯವಾಗಿ ಪ್ರಾರ್ಥನೆ ಮಾಡಿದ್ದೆ. ನೀವು ಗ್ರಾಮದಲ್ಲಿ ಪಹಣಿಯನ್ನು ಬರೆಸಿ ಅವರಿಗೆ ಗೇಣಿಯನ್ನು ಪಾವತಿ ಮಾಡಿದುದಕ್ಕೆ ಒಂದು ರಶೀದಿ ಯನ್ನು ಕೊಡಿಸಿ ಎಂದು. ಇಲ್ಲವೆ ಇದ್ದರೆ ಅನಾವಶ್ಯಕವಾಗಿ ಅವರ ಮೇಲೆ ಬದ್ದು ಯಾರಾದರೂ ಜಮೀನನ್ನು ಬಿಡಿಸುತ್ತಾರೆ ಅದಕ್ಕಾಗಿ ಅವರಿಗೆ ರಕ್ಷಣೆ ಕಲ್ಪಿಸಿ ಕೊಡಬೇಕಾದುದು ಅಗತ್ಯ ಎಂದು ನಾನು ಸರ್ಕಾರದ ಮುಂದೆ ಹೇಳುತ್ತಲೇ ಇದ್ದೇನೆ. ಆದರೆ ಈ ಸರ್ಕಾರದ ಮುಂದೆ ಹೇಳಿದರೆ ಎಷ್ಟು ಪ್ರಯೋಜನವಾಗುತ್ತದೆ ಎಂದರೆ ಕಲ್ಲಿನ ಮುಂದೆ ಅಥವಾ ಒಂದು ಮರದ ಮುಂದೆ ಹೇಳಿದರೆ ಎಷ್ಟು ಪ್ರಯೋಜನವಾಗುತ್ತದೆಯೋ ಅಷ್ಟೇ ಪ್ರಯೋಜನ ಎಂದೆನಿಸುತ್ತದೆ. ಸರ್ಕಾರ ಈ ಕಡೆಗೆ ಗಮನವನ್ನೇ ಕೊಡುವುದಿಲ್ಲ. ನಾವು ಏನನ್ನು ಹೇಳುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಳ್ಳು ವುದಕ್ಕೆ ಅವರಲ್ಲಿ ಆಸಕ್ತಿ ಕೂಡ ಇಲ್ಲ. ಎಷ್ಟೋ ಒತ್ತಾಯಗಳು ಬಂದ ಮೇಲೆ ಟೆನೆನ್ಸಿ ಕೋರ್ಟು ಗಳೆಂದು ಮಾಡಿ ಅವರಲ್ಲಿ ತಹಶೀಲುದಾರರುಗಳನ್ನು ನೇಮಕ ಮಾಡಿದರು. ಇಲ್ಲಿ ಏನು ಪರಿಸ್ಥಿತಿ ಇದೆ ಎಂದರೆ ಯಾರಾದರೂ ಹೋಗಿ ನೋಡುವುದಾದರೆ ಇವೊತ್ತು ಗೇಣಿದಾರರುಗಳು ಕೋರ್ಟು ಗಳಿಗೆ ಹೋಗಿ ತಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕಾಗಿ ದಿನಂಪ್ರತಿ ಅವರು ಬೆಳೆದ ದವಸಗಳನ್ನು ನ್ಯಾಯವಾದಿಗಳಿಗಾಗಿ ವಕೀಲರುಗಳಿಗಾಗಿ ತುಂಬಬೇಕಾಗಿರುತ್ತದೆ. ಈ ಪರಿಸ್ಥಿತಿಯಿಂದ ಎಷ್ಟೋ ಜನ ಗೇಣಿದಾರರನ್ನು ಅನ್ಯಾಯವಾಗಿ ಕಾಡು ಪಾಲು ಮಾಡಬೇಕಾಗಿ ಬಂದಿದೆ. ಇಂತಹ ವರಿಗೇನೂ ಪರಿಹಾರವಿಲ್ಲದೆ ಮಾನ್ಯ ಮಂತ್ರಿಗಳು ಇಲ್ಲಿ ಸೀಲಿಂಗು ವಿಷಯವನ್ನು ಮಾತನಾಡುತ್ತಾರೆ. ಸೀಲಿಂಗಿನ ವಿಷಯಕ್ಕೂ ಗೇಣಿಗೂ ಸಂಬಂಧವಿಲ್ಲ. ಅಲ್ಲದೆ, ಗೇಣಿಯನ್ನು ಕಡಮೆ ಮಾಡುವುದಕ್ಕೆ ನಿಮ್ಮ 17ನೇ ತಿದ್ದುಪಡಿ ಇದಕ್ಕೆ ಅಡ್ಡಿ ಬರುವುದಿಲ್ಲ. ಮುಂಬಯಿನಲ್ಲಿ ಕಂದಾಯದ ಐದು ಪಟ್ಟು ಗೇಣಿ ಇದ್ದರೆ ರೈತರಿಗೆ ಅಲ್ಲಿ ಕಡಮೆ ಮಾಡಿ ಅನ್ವಯಿಸುವುದಕ್ಕೆ ನೀವು ತರುವ 17ನೇ ಅಮೆಂಡು ಮೆಂಟು ಹೇಗೆ ಅಡ್ಡಿ ಬರುತ್ತದೆ ಎನ್ನುವುದು ಅರ್ಥವಾಗುತ್ತಿಲ್ಲ. ಇದನ್ನು ಸರಿಯಾಗಿ ಜಾರಿಗೆ ತಂದು ಕಾರ್ಯಕ್ರಮಕ್ಕೆಳಸಲು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರಿಗೆ ಸ್ವತಃ ಮನಸ್ಸಿಲ್ಲ. ಅವರಿಗೆ ಯಾರೋ ದೇವರ ಜಮೀನಿನ ಬಗ್ಗೆ ಅಡ್ಡಿ ಮಾಡಿದರು ಎಂದು ಹೇಳಿದರೆ ಅದಕ್ಕೆ ಇದು ಹೇಗೆ ಅನ್ವಯವಾಗುತ್ತದೆ? ಗೇಣಿದಾರ ಎನ್ನುವವನು ದೇವರ ಭೂಮಿಗೂ ಗೇಣಿದಾರ. ಹಳೆಯ ಮಹಾರಾಜರ ಭೂಮಿಗೂ ಗೇಣಿದಾರ. ಗೇಣಿದಾರನೆನ್ನುವುದರ ಅರ್ಥ ಮುಖ್ಯ. ಗೇಣಿದಾರ ಎಂದರೆ ಬೇರೆಯವರಿಂದ ಜಮೀನನ್ನು ಮತ್ತೊಬ್ಬರಿಂದ ಪಡೆದು ಸಾಗುವಳಿ ಮಾಡುವವನು. ಇದರಲ್ಲಿ ತಾರತಮ್ಯ ಮಾಡಿ ದೇವರ ಭೂಮಿ ಎಂದೇಕೆ ಮಾಡಬೇಕು? ದೇವರಿಗೆ ಸೇರಿದ ಭೂಮಿಯನ್ನು ಹಾಳು ಮಾಡಲು ಅಲ್ಲಿರುವ ಪೂಜಾರಿಗಳು ಕಾರಣರಾಗಿರಬಹುದು. ದೇವರ ಕಲ್ಲುಗಳನ್ನು ಅಲ್ಲಿನ ಪೂಜಾರಿಗಳು ತೆಗೆದು ಕಟ್ಟಡಗಳಿಗಾಗಿ ಉಪಯೋಗಿಸಿರಬಹುದು. ಇದರ ಬಗ್ಗೆ ಈಗಾಗಲೇ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಬಹಳ ಚೆನ್ನಾಗಿ ಹೇಳಿದರು. ಸ್ವತಃ ಭೂಸುಧಾರಣೆಯ ಕಾನೂನನ್ನು ಪರಿಶೀಲನೆ ಮಾಡಿ ಬೆಳೆಯುವಂತಹ ರೈತನನ್ನುಳಿಸ ಬೇಕೆನ್ನುವುದು ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರ ಕಣ್ಣಿಗೆ ಬೀಳಲಿಲ್ಲ. ಇದು ಬಹಳ ಆಶ್ಚರ್ಯಕರ ವಾಗಿದೆ. ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕೆಂದು ತಂದಿರತಕ್ಕ ಮಸೂದೆಯನ್ನು ಸ್ವತಂತ್ರ ಪಾರ್ಟಿಯವರು ವಿರೋಧಿಸುತ್ತಿದ್ದಾರೆ ಎನ್ನುವ ಕಾರಣವನ್ನು ಮುಂದೆ ಮಾಡಿ ಈ ರೀತಿಯಾಗಿ ವ್ಯವಸಾಯ ಕ್ಷೇತ್ರದಲ್ಲಿ ನಡೆಯುತ್ತಿರತಕ್ಕ ಅನಾಹುತಗಳನ್ನು ತಪ್ಪಿಸದೇ ಹೀಗೇಕೆ ಎಡೆಕೊಡು ತ್ತಿದ್ದಾರೆನ್ನುವುದು ನನಗಂತೂ ಗೊತ್ತಾಗುತ್ತಿಲ್ಲ. ನಿಜ, ಈ ಮಾನ್ಯ ಸಭೆಯಲ್ಲಿ ಮಾತನಾಡುವುದಕ್ಕೆ ಬದಲಾಗಿ ಹೊರಗಡೆ ಹೋಗಿ ಸಂಘಟನೆ ಮಾಡಿ ರೈತರನ್ನು ತಾವೇನು ಬಯಸುತ್ತಿದ್ದಾರೋ ಅವುಗಳನ್ನು ಕೊಡಿಸುವ ಶಕ್ತಿ ಪಡೆಯಬೇಕು. ಅಂತಹ ಸಂಘಟನೆ ಇಲ್ಲದೇ ಇರುವುದರಿಂದ ನಾವು ಇಲ್ಲಿ ದೈನ್ಯದಿಂದ ಏನಾದರೂ ಮಾಡಿ ಎಂದು ಯೋಚಿಸಬೇಕಾಗಿದೆ, ಇದಕ್ಕಾಗಿ ನಾನು ತುಂಬಾ ವಿಷಾದ ಪಡುತ್ತೇನೆ.

ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಭೂಸುಧಾರಣೆಯನ್ನು ಆದಷ್ಟು ಜಾಗ್ರತೆಯಾಗಿ ಜಾರಿಗೆ ತರಬೇಕೆಂದು ಹೇಳುತ್ತಾರೆ ಮತ್ತು ಅದನ್ನು ನಾವೂ ಕೂಡ ಒಪ್ಪಬೇಕಾಗುತ್ತದೆ. ಆದರೆ ಅವರು ಸ್ವಲ್ಪ ತಮ್ಮ ಗಮನವನ್ನು ಈ ಕಡೆಗೆ ಹೆಚ್ಚಾಗಿ ಹರಿಸಬೇಕು. ಇನ್ನೊಂದು ಪರಿಸ್ಥಿತಿ ಏನಿದೆ ಎಂದರೆ, ಇನಾಂತಿಗಳನ್ನು ರದ್ದು ಮಾಡಿ ಸರಕಾರ ಎಷ್ಟೋ ವರ್ಷಗಳಾದುವು, ಇನಾಂತಿಗಳನ್ನು ರದ್ದು ಮಾಡುವ ಕೆಲಸಗಳಿಗಾಗಿ ವಿಶೇಷವಾದ ತಹಶೀಲುದಾರರುಗಳನ್ನು ನೇಮಕ ಮಾಡಿದ್ದರು ಅಂತಹವರ ಕೆಲಸಗಳು ಪೂರ್ಣವಾಗಿಲ್ಲ ಎಂದು, ಅವರ ಅಸ್ತಿತ್ವವನ್ನುಳಿಸಿಕೊಂಡು ಹೋಗುವುದಕ್ಕಾಗಿ, ಈ ರೀತಿ ಮಾಡುತ್ತಿದ್ದಾರೆ ಎನ್ನುವ ಅನುಮಾನ ಕೂಡ ಬರುತ್ತಿದೆ. ಇನಾಂತಿ ಬಾಬಗಾಗಿ ಕಮಿಷನರುಗಳು, ಡೆಪ್ಯುಟೀ ಕಮಿಷನರುಗಳು, ತಹಶೀಲುದಾರರುಗಳು ಎಂದು ಮಾಡಿ ಅವರದೇ ಒಂದು ದೊಡ್ಡ ಎಸ್ಟಾಬ್ಲಿಷ್‌ಮೆಂಟು ಈ ರೆವಿನ್ಯೂ ಇಲಾಖೆಯಲ್ಲಿ ಇನ್ನೂ ಮುಂದುವರಿಯುತ್ತಲೇ ಇವೆ. ಇವನ್ನು ಇನ್ನೂ ಮುಂದುವರಿಸಿಕೊಂಡು ಹೋಗುವುದರ ಅವಶ್ಯಕತೆ ಯಾದರೂ ಏನಿದೆ? ರೈತರಿಗೆ ತಕ್ಕಷ್ಟು ಪರಿಹಾರವನ್ನು ಕೊಡುತ್ತಿದ್ದಾರೆಯೇ ಎಂದರೆ ಅವರಿಗೇನೂ ಸಿಕ್ಕುತ್ತಿಲ್ಲ. ಏನೋ ಒಂದು ಕುಂಟು ನೆಪ ತೋರಿಸಿ ಇನಾಂತಿಯು ಕೋರ್ಟಿಗೆ ಹೋಗಿ ಬಿಟ್ಟಿದ್ದಾರೆಂದು ಇಲ್ಲಿ ಹೇಳುತ್ತಾರೆ. ಕೋರ್ಟಿಗೆ ಹೋಗುವುದಕಿಂತ ಮುಂಚೆ ಇಲ್ಲಿರುವ ಲೆಕ್ಕ ಪತ್ರಗಳನ್ನು ಪರಿಶೀಲನೆ ಮಾಡುವ ಕೆಲಸ ಮುಗಿಸಬೇಕು ಅನಂತರ ಕೋರ್ಟಿನ ತೀರ್ಮಾನ ಬಂದ ಮೇಲೆ ಟೈಟಲು ಡೀಡುಗಳನ್ನು ಸರಿಪಡಿಸುವ ಪ್ರಶ್ನೆ ಬರುತ್ತದೆ. ಅದಕ್ಕೆ ಮುಂಚೆ ಸರಕಾರ ಇಲ್ಲಿ ತೀರ್ಮಾನ ಮಾಡಲು ಏನು ಅಡ್ಡಿ ಬಂದಿಲ್ಲವಲ್ಲ.

ಗ್ರಾಮದಲ್ಲಿರತಕ್ಕ ಬಾವಿ, ಇನಾಂ ಗ್ರಾಮಗಳಲ್ಲಿ ಇತರ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕ ವಿಚಾರವಲ್ಲಿ ಸರ್ಕಾರದವರು ಏನಾದರೊಂದು ಕುಂಟುನೆಪವನ್ನು ಹೇಳಿಕೊಂಡು ಸುಮ್ಮನೆ ಕಾಲ ಹರಣ ಮಾಡುತ್ತಿರತಕ್ಕ ನೀತಿಯೇನಿದೆ ಅದು ತುಂಬಾ ವಿಷಾದಕರ. ಸರ್ಕಾರದವರು ಈಗೇನು ಒಂದು ಭೂಸುಧಾರಣಾ ನೀತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೋ ಇದು ಗೇಣಿದಾರರ ದೃಷ್ಟಿಯಿಂದ ಹೇಳುವುದಾದರೆ ತೀರಾ ಅಕ್ಷಮ್ಯವಾದ್ದು. ಸರ್ಕಾರದವರು ನಮಗೆ ಇಲ್ಲಿಯವರೆಗೂ ಕೊಡುತ್ತಾ ಬಂದಿರತಕ್ಕ ಆಶ್ವಾಸನವನ್ನು ಕೇಳಿ ಕೇಳಿ ನಮಗೆ ಇವರ ಮಾತಿನಲ್ಲಿ ವಿಶ್ವಾಸವೇನೂ ಉಳಿದಿಲ್ಲ. 1962ಕ್ಕೆ ಹಿಂದೆಯೇ ಸರ್ಕಾರದವರು ಇದನ್ನು ಹೇಳುತ್ತಿದ್ದರು. ಈಗ ಚುನಾವಣೆಗಳಾಗಿ 3 ವರ್ಷಗಳು ಕಳೆದವು. 1962ರಲ್ಲಿ ಹೇಳುತ್ತಿದ್ದ ಭೂಸುಧಾರಣೆಗಳೇನಿದ್ದವು ಅವುಗಳನ್ನೇ ಈಗಲೂ ಇವರು ಹೇಳುತ್ತಿದ್ದಾರೆ......

ಸಭಾಪತಿಯವರು.—ಈ ಮಸೂದೆಯನ್ನು ಚರ್ಚೆಮಾಡಲು ಬಿಜಿನೆಸ್ ಅಡ್ವೈಜರಿ ಕಮಿಟಿಯವರು ನಿಗದಿಮಾಡಿದ್ದ ವೇಳೆ ಮುಗಿದ ಪ್ರಯುಕ್ತ ಈ ಚರ್ಚೆಯನ್ನು ಇನ್ನೂ ಅರ್ಧಗಂಟೆಯ ಕಾಲ ಮುಂದುವರಿಸಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಇನ್ನು ಈಗ ಮೂರು ಯೋಜನೆಗಳು ಕಳೆದು ನಾಲ್ಕನೇ ಯೋಜನೆಗೆ ಸಿದ್ಧತೆಗಳಾಗುತ್ತಿವೆ. ಅದೇ ಪ್ರಕಾರ ಮುಂದಿನ ಮಹಾ ಚುನಾವಣೆಗೂ ಸಿದ್ಧತೆಗಳಾಗಲೇ ನಡೆಯುತ್ತಿವೆ. ಈ ಚುನಾವಣೆಗಳೆಂದರೆ ಶ್ರೀಮಾನ್ ಕೃಷ್ಣಪ್ಪನವರಿಗೆ ಯಾವಾಗಲೂ ಗಡಿಬಿಡಿಯೇ. ಅಂದರೆ ಇಲ್ಲಿಯವರೆಗೂ ಸರ್ಕಾರದವರೇನು ಹೇಳುತ್ತಾ ಬಂದಿದ್ದಾರೆ ಅದೆಲ್ಲವೂ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಂತೆ ಬರಿ ಒಂದು ನಾಟಕ ಮಾತ್ರ. ಆದ್ದರಿಂದ ಸರ್ಕಾರದವರು ಹೇಳತಕ್ಕ ಆಶ್ವಾಸನದಲ್ಲಿ ಜನಗಳಿಗಾರಿಗೂ ನಂಬಿಕೆ ಉಳಿದಿಲ್ಲ. ಮಾತೆತ್ತಿದರೆ ಶ್ರೀಮಾನ್ ಕೃಷ್ಣಪ್ಪನವರು ಸ್ವತಂತ್ರ ಪಕ್ಷದವರು ಆ 17ನೇ ತಿದ್ದುಪಡಿಗೆ ವಿರೋಧಮಾಡುತ್ತಿದ್ದಾರೆ ಎಂಬುದನ್ನು ಬಹಳ ದೊಡ್ಡದಾಗಿ ಹೇಳುತ್ತಿದ್ದಾರೆ. ಈ ರೀತಿ ಹೇಳತಕ್ಕ ಈ ಡೆಮೊಕ್ರಾಟಿಕ್ ಪಾರ್ಟಿ ಎಂದೆನಿಸಿಕೊಂಡಿರತಕ್ಕ ಜನ ಈ ಹಿಂದೆ ರಾಜ್ಯಾಂಗಕ್ಕೆ ತಂದಿದ್ದ 16 ತಿದ್ದುಪಡಿಗಳಲ್ಲಿ ಒಂದಲ್ಲೊಂದು ರೀತಿಯಲ್ಲಿ ವಿರೋಧ ಇದ್ದೇ ಇತ್ತು ಎಂಬುದನ್ನು ಅಷ್ಟಾಗಿ ಗಮನಿಸಿದಂತೆ ಕಂಡುಬರುವುದಿಲ್ಲ.

ಆದರೆ ಇದರಲ್ಲಿ ಇರತಕ್ಕ ಒಂದು ಮುಖ್ಯ ಅಂಶವೇನೆಂದರೆ ಈ ತಿದ್ದುಪಡಿಗೆ ಸ್ವತಂತ್ರ ಪಕ್ಷದ ವಿರೋಧಕ್ಕಿಂತ ಕಾಂಗ್ರೆಸ್ ಪಕ್ಷದಲ್ಲಿರತಕ್ಕ ಒಳಗುಂಪುಗಳ ವಿರೋಧವೇ ಜಾಸ್ತಿ ಇರುತ್ತದೆ. ಕಾಂಗ್ರೆಸಿನಲ್ಲಿರತಕ್ಕ ಕೆಲವು ಜನರು ಇತ್ತೀಚೆಗೆ ಗಳಿಸಿರತಕ್ಕ ಆಸ್ತಿಪಾಸ್ತಿಗಳೆಲ್ಲಾ ಹೋಗುತ್ತವೆಂಬ ಹೆದರಿಕೆಯಿಂದ ಅದನ್ನು ವಿರೋಧಿಸುತ್ತಿದ್ದಾರೆ. ಇದಕ್ಕಾಗಿ ಕೆಲವು ಕಾಂಗ್ರೆಸ್ಸಿನವರು ಒಳಗಿಂದೊಳಗೇ ಸಹಿ ಸಂಗ್ರಹಣೆ ಕೂಡ ಮಾಡುತ್ತಿರಬಹುದು. ಇದನ್ನು ಜಾರಿಗೆ ತರಲು ಕಾಂಗ್ರೆಸ್ಸಿನವರಿಗೆ ಮನಸ್ಸಿಲ್ಲ. ಮೇಲಾಗಿ ಈ ದಿವಸ ಜನರು ಆಧುನಿಕರೀತಿಯ ಎಂದರೆ ಅಮೆರಿಕಾ ದೇಶದ ಪದ್ಧತಿಯನ್ನು ಅನುಸರಿಸುತ್ತಾ ಭೂಮಿಯನ್ನು ಟ್ರಾಕ್ಟರುಗಳಿಂದ ಉಳುಮೆ ಮಾಡುವುದು, ಪಂಪ್ ಸೆಟ್‌ಗಳ ಮೂಲಕ ಬೆಳೆ ಬೆಳೆಸುವುದು, ಇಂಥ ಅನುಕೂಲಗಳನ್ನೆಲ್ಲ ಕಂಡುಕೊಂಡಿದ್ದಾರೆ. ಈ ದಿವಸ ಕೂಲಿ ಆಳುಗಳ ಸಹಕಾರವಿಲ್ಲದೇನೇ ಬೆಳೆ ಬೆಳೆಯಲು ಪ್ರಯತ್ನಗಳಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ ಮದ್ರಾಸಿನಲ್ಲಿ ಶ್ರೀ ಕಾಮರಾಜ ನಾಡಾರರು ಅಲ್ಲಿ ವ್ಯವಸಾಯಕ್ಕೆ ಸಕಲ ಅನುಕೂಲ

(ಶ್ರೀ ಎಸ್. ಗೋಪಾಲಗೌಡ)

ಗಳನ್ನೂ ಒದಗಿಸಿಕೊಡುತ್ತಿರುವಂತೆ ಹೇಳುತ್ತಿದ್ದಾರೆ. ಅದರ ಪರಿಣಾಮವಾಗಿ ಈಗಾಗಲೇ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಆ ಮದ್ರಾಸಿನ ಕಡೆಯಿಂದ ಬಂದಿರತಕ್ಕ ನಿರ್ಗತಿಕರ ಸಂಖ್ಯೆ ಕಳೆದ ನಾಲ್ಕು ವರ್ಷಗಳಲ್ಲಿ 10 ಲಕ್ಷಕ್ಕೆ ಏರಿದೆ. ಅಲ್ಲಿಯ ಸರ್ಕಾರ ಅಷ್ಟು ಅನುಕೂಲಗಳನ್ನು ರೈತರಿಗೆ ಒದಗಿಸಿಕೊಡುತ್ತಿದ್ದರೂ ಜನ ತಮ್ಮ ಗುಡಿ ಗೋಪುಗಳನ್ನು ಬಿಟ್ಟು ಬೇರೆ ದೇಶಗಳಿಗೆ ವಲಸೆ ಬರುತ್ತಿದ್ದಾರೆ. ಹೀಗಿರುವಾಗ ಅಲ್ಲಿ ಎಂಥ ರಾಮ ರಾಜ್ಯ ಸ್ಥಾಪನೆ ಆಗುತ್ತಿದೆಯೋ ಗೊತ್ತಾಗುತ್ತಿಲ್ಲ. ಹಾಗೆ ರಾಮ ರಾಜ್ಯ ಸ್ಥಾಪನೆಯಾಗುತ್ತಿದ್ದಾಗ್ಗೂ ಜನರು ಮಾತ್ರ ಗೆಯ್ಯಲು ಭೂಮಿ ಇಲ್ಲದೆ ತಿನ್ನಲು ಅನ್ನವಿಲ್ಲದೆ ಊರೂರುಗಳನ್ನು ಅಲೆಯುವ ಸ್ಥಿತಿ ಬಂದಿದೆ ಸರ್ಕಾರದವರು ಈ ದಿವಸ ಕುಟುಂಬ ಹಿಡುವಳಿ, ಆರ್ಥಿಕ ಹಿಡುವಳಿ ಮತ್ತು ಸೀಲಿಂಗ್ ಪರಿಮಿತಿಗಳನ್ನು ಹಾಕುತ್ತಿದ್ದಾಗ್ಗೂ ಅವು ದಿನ ದಿನಕ್ಕೂ ಹಿಗ್ಗುತ್ತಲೇ ಇವೆ. ಕೆಲವರು ತಮ್ಮ ಪಟ್ಟಭದ್ರತೆ ಮಾಡಿಕೊಂಡು ದೊಡ್ಡ ದೊಡ್ಡ ಎಸ್ಟೇಟುಗಳನ್ನು ಮಾಡುತ್ತಲೇ ಇದ್ದಾರೆ. ಹಾಗೊಂದು ವೇಳೆ ನಮ್ಮ ಸರ್ಕಾರಕ್ಕೆ ಅಮೆರಿಕಾ ದೇಶದ ಪದ್ಧತಿಯನ್ನೇ ಇಲ್ಲಿಯೂ ಜಾರಿಗೆ ತರುವ ಅಭಿಪ್ರಾಯವಿದ್ದರೆ ಅದನ್ನಾದರೂ ಸ್ಪಷ್ಟವಾಗಿ ತಿಳಿಸಲಿ. ನಮ್ಮ ದೇಶದಲ್ಲಿ ನೂರಕ್ಕೆ 80 ಜನ ಬೇಸಾಯಗಾರರಿದ್ದಾರೆ ನಮ್ಮ ದೇಶದ ರಾಷ್ಟ್ರೀಯ ವರಮಾನದಲ್ಲಿ ಸೇಕಡ ಎಷ್ಟು ಭಾಗ ಈ ವ್ಯವಸಾಯ ಕ್ಷೇತ್ರದಿಂದ ಬರುತ್ತಿದೆ ಎಂಬುದನ್ನು ತಿಳಿಸಲಿ. ಈ ದಿವಸ ಸರ್ಕಾರಕ್ಕೆ ದೇಶದಲ್ಲಿರತಕ್ಕ ನಿರುದ್ಯೋಗಿ ಜನರಿಗೆ ಭೂಮಿಯನ್ನು ಒದಗಿಸಲು ಸಾಧ್ಯವಿಲ್ಲದೆ ಅವರು ಭಿಕಾರಿಗಳಾಗಿ ದೇಶದಲ್ಲಿ ಅಲೆಯುತ್ತಿದ್ದಾರೆ. ಈ ವಿಚಾರ ಶ್ರೀ ಕಡಿದಾಳ್ ಮಂಜಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಆದರೆ ಅವರು ಈ ವಿಚಾರದಲ್ಲಿ ಏನು ಮಾಡಿದ್ದಾರೆ? ಅವರು ಈ ಹೊತ್ತು ತಮ್ಮ ಒಂದು ಜವಾಬ್ದಾರಿಯೇನಿತ್ತು ಅದನ್ನು ತಪ್ಪಿಸಿಕೊಳ್ಳಲು ಶ್ರೀ ಕೃಷ್ಣಪ್ಪನವರ ಮೇಲೆ ಜವಾಬ್ದಾರಿಯನ್ನು ಹೇರುತ್ತಿದ್ದಾರೆ. ರಾಜ್ಯ ಸರ್ಕಾರದವರು ತಮ್ಮ ಹೊಣಗಾರಿಕೆಯನ್ನು ಕೇಂದ್ರ ಸರ್ಕಾರದಮೇಲೆ ಹಾಕುತ್ತಿದ್ದಾರೆ. ಅತ್ತ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದಮೇಲೆ ಜವಾಬ್ದಾರಿಯನ್ನು ಉರುಳಿಸಲು ಶ್ರೀ ನಂದಾ ಅವರು ನಾನು ಈ ವಿಚಾರವನ್ನು 1952ರಲ್ಲೇ ತಿಳಿಸಿದ್ದೇನೆ ಎಂದು ಹೇಳುತ್ತಿದ್ದಾರೆ. ಹೀಗಾಗಿ ಈ ದಿನ ಲಕ್ಷಾಂತರ ಜನ ಗೇಣೀದಾರರು ಮಣ್ಣು ಮುಕ್ಕುತ್ತಿದ್ದಾರೆ. ಇನ್ನೊಂದು ಕಡೆ ಸರ್ಕಾರದವರು ಕೋಟ್ಯಾನುಕೋಟಿ ರೂಪಾಯಿ ಸಾಲವನ್ನು ಕೊಡಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎಷ್ಟು ಜನ ಗೇಣೀದಾರರಿಗೆ ಅನುಕೂಲವಾಗಿದೆ ಎಂಬುದನ್ನು ಹೇಳಲಿ. ಇವರಿಗಾಗಿ ಸರ್ಕಾರ ಎಷ್ಟು ಹೊಸ ಸ್ಕೀಮುಗಳನ್ನು ಮಾಡಿದೆ? ನೀರಾವರಿ ಸೌಲಭ್ಯ ಎಷ್ಟು ಜನರಿಗೆ ಸಿಕ್ಕಿದೆ? ಸಹಕಾರ ಸಂಘಗಳಿಂದ ಎಷ್ಟು ಉಪಕರಣಗಳನ್ನು ಒದಗಿಸಲಾಗಿದೆ, ತಿಳಿಸಲಿ. ಇಲ್ಲಿಗೆ 1,2,3 ಪಂಚವಾರ್ಷಿಕ ಯೋಜನೆಗಳನ್ನು ಮಾಡಿದ್ದಾಗಿದೆ. ಇದರಲ್ಲಿ ಗೇಣೀದಾರರಿಗೆ ಎಷ್ಟು ಅನುಕೂಲ ಆಗಿದೆ? ಈ ದಿವಸ ಯಾರು ಯಾರು ಕಷ್ಟಪಟ್ಟು ಬೆವರು ಸುರಿಸಿ ಜೀವನ ಮಾಡುತ್ತಿದ್ದಾರೋ ಅಂಥವರಿಗೆ ಒಂದು ನಯಾಪೈಸೆ ಕೂಡಾ ಮುಟ್ಟಿಲ್ಲ. ಹೀಗಿದ್ದಾಗ್ಗೂ ಅಧಿಕಾರಿಗಳೂ ಮಂತ್ರಿ ಸ್ಥಾನದಲ್ಲಿರತಕ್ಕ ಜನರೂ ದೇಶದಲ್ಲಿ ಬೆಳೆ ಹೆಚ್ಚಿದೆ, ನೀರಾವರಿ ಕಾಂಗಾರಿಗಳು ಹೆಚ್ಚಿವೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ವಾಸ್ತವಾಂಶವನ್ನು ನೋಡಿದರೆ ಎಲ್ಲವೂ ಹೀನಸ್ಥಿತಿಯಲ್ಲಿದೆ. ಜನರು ಹೀನ ಸ್ಥಿತಿಯಲ್ಲಿರುತ್ತಾರೆ.

ಇದು ಬಹಳ ವಿಷಾದಕರವಾದ ವಿಷಯ. ಮಾನ್ಯ ಕಂದಾಯ ಮಂತ್ರಿಗಳು, ಕೆಲವು ತಕ್ಷಣ ಮಾಡತಕ್ಕಂಥ ಕೆಲಸಗಳಿವೆ. ಪಹಣಿ ರಿಜಿಸ್ಟರನ್ನು ಕೂಡಲೇ ಸರಿಪಡಿಸಿ ಬರೆಸಬೇಕು. ಜೊತೆಗೆ ಇವತ್ತು ಹಳೆಯ ಮೈಸೂರಿನ ಭಾಗದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಗೇಣೀರೂಪದಲ್ಲಿ ವಸೂಲು ಮಾಡುತ್ತಾರೆ. ಆದ್ದರಿಂದ ಅದನ್ನಾದರೂ ತಕ್ಷಣ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಅರ್ಧಕ್ಕಿಂತ ಹೆಚ್ಚು ಕೊಡುವವರೂ ಇದ್ದಾರೆ. ಭೂಮಿಸಾಗುವಳಿ ನಾನಾ ತರಹವಾಗಿರುತ್ತದೆ. ಕೆಲವು ಕಡೆಗಳಲ್ಲಿ ಒಬ್ಬ ಬಿಟ್ಟು ಹೋದವರ ಇನ್ನೊಬ್ಬ ತಯಾರಾಗಿ ಕುಳಿತಿರುತ್ತಾನೆ. ನಾನು ಮಾಡುತ್ತೇನೆಂದು. ಮೇಲೊಬ್ಬನಿದ್ದಾನೆಂದು ನಾವು ತಿಳಿಯ ಬೇಕಾಗುತ್ತದೆ.

ಸಭಾಪತಿಯವರು.—ಈಗ ಟೀಟೈಂ ಆಗಿದೆ. ಅರ್ಧಗಂಟೆಯನಂತರ ಸಭೆ ಪುನಃ ಸೇರುತ್ತದೆ.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಸರ್ಕಾರದವರು ಮಾಡಲೇ ಬೇಕಾದ ಕೆಲವು ಕರ್ತವ್ಯಗಳನ್ನು ನಾನು ಹೇಳುತ್ತಾ ಇದ್ದೆ. ಈಗಾಗಲೇ ನಾನು ಹೇಳಿರುವಹಾಗೆ ನಮ್ಮ ಹಳೆಯ ಮೈಸೂರಿನ ಭಾಗದಲ್ಲಿ ಮತ್ತು ಮುಂಬೈ ಕರ್ಣಾಟಕದ ಹೊರತಾಗಿ ಬೇರೆ ಭಾಗಗಳಲ್ಲಿನ ಗೇಣೀದಾರರಿಗೆ ತಮ್ಮ ಹಕ್ಕನ್ನು ಸಾಧಿಸಿಕೊಳ್ಳುವುದಕ್ಕೆ ಯಾವ ಒಂದು ಕಾಗದವೂ ಇಲ್ಲ.

Mr SPEAKER.—What is the scope of the Debate? ಈ ಮಸೂದೆ ಗೇಣಿದಾರರಿಗೆ ಕೊಟ್ಟಿರತಕ್ಕ ತಾತ್ಕಾಲಿಕ ರಕ್ಷಣೆಯ ಅವಧಿಯ ವಿಸ್ತರಣಕ್ಕೆ ಸಂಬಂಧಪಟ್ಟದ್ದಾಗಿದೆ. ಈ ಅವಧಿಯನ್ನು ವಿಸ್ತರಣೆ ಮಾಡಬೇಕೇ, ಬೇಡವೇ ಎನ್ನುವುದು ಈ ಮಸೂದೆಯ ವ್ಯಾಪ್ತಿಯಲ್ಲಿ ಬರುತ್ತದೆ. But members should not go in to the merits of the Act.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ತಾವು ಇಲ್ಲದೇ ಇದ್ದಾಗ ಕೆಲವು ವಿಷಯಗಳನ್ನು ಹೇಳಿರುವುದರಿಂದ ಅವನ್ನೆಲ್ಲಾ ಮುಗಿಸ ಬೇಕಲ್ಲಾ!

ಅಧ್ಯಕ್ಷರು.—ಬೇಗನೆ ಮುಗಿಸಿ.

ಶ್ರೀ ಎಸ್. ಗೋಪಾಲಗೌಡ.—ಜತ್ತಿ ಸಮಿತಿಯವರು ಈ ವಿಚಾರದ ಬಗ್ಗೆ ವರದಿ ಮಾಡಿದಾಗ 1957ನೇ ಇಸವಿಯಲ್ಲಿ ಕಂದಾಯ ಮಂತ್ರಿಗಳು ಕೇಂದ್ರದಲ್ಲಿದ್ದರು ಎಂದು ಅವರು ಹೇಳುತ್ತಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

Mr. SPEAKER....How does that report come under this Bill?

ಶ್ರೀ ಎಸ್. ಗೋಪಾಲಗೌಡ.—ತಮ್ಮ ಸೂಚನೆಯನ್ನು ಗಮನಿಸುತ್ತೇನೆ. ಅವಧಿ ವಿಸ್ತರಿಸುವುದು ಸರಿಯೋ ತಪ್ಪೋ ಎಂದು ಮಾತ್ರ ಹೇಳುತ್ತೇನೆ. ಅದೇ ತಾವು ಅಪ್ಪಣೆ ಕೊಟ್ಟಿರುವುದು. ಸರಕಾರದವರು ಅವಧಿಯನ್ನು ಏತಕ್ಕೆ ವಿಸ್ತರಿಸುತ್ತಿದ್ದಾರೆ ಎನ್ನುವುದೇ ಬಹಳ ಮುಖ್ಯವಾದ ಪ್ರಶ್ನೆ. ಅವಧಿ ವಿಸ್ತರಿಸುವುದೆಂದರೆ ಏನು, ಗೇಣೀದಾರರಿಗೆ ರಕ್ಷಣೆ ಕೊಡುವುದು ಎಂದರೇನು, ಈ ಮಸೂದೆ ಯಾವಾಗ ಬಂತು, ಯಾವಾಗ ಅವಧಿಯನ್ನು ಮುಂದುವರಿಸುತ್ತೀರಾ?

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಸ್. ಗೋಪಾಲಗೌಡ.—ನಾನು ಹೇಳುವುದೇನೆಂದರೆ ಈಗ ನಮ್ಮ ರಾಜ್ಯದಲ್ಲಿ ಗೇಣೀದಾರರ ಹಕ್ಕುಗಳನ್ನು ಸಾಬೀತಾಗಿ ತೋರಿಸಿಕೊಡತಕ್ಕ ಯಾವ ಒಂದು ಕಾಗದವೂ ಇಲ್ಲ. ಪಹಣಿ ನಾನು ಮೊದಲೇ ಹೇಳಿದ ಹಾಗೆ ಶ್ಯಾನುಭೋಗರು ಜೀತಕ್ಕೆ ಬಿಟ್ಟಿದ್ದನ್ನು ಯಾರ ಹೆಸರಿಗೆ ಬೇಕಾದರೂ ಬರೆಯಬಹುದು. ನಾನು—ತಾವು ಕೆಲವಾರು ಗ್ರಾಮಗಳಿಗೆ ಹೋಗಿ ಅಲ್ಲಿ ಪರಿಶೀಲನೆ ಮಾಡುವುದಾದರೆ ಅಲ್ಲಿ ಯಾವನೊಬ್ಬ ಹೆಸರಿನಲ್ಲಿಯೂ ಪಹಣಿ ಇಲ್ಲ. ಸ್ವಂತ ಸಾಗುವಳಿದಾರನೆಂದು ಬರೆಸಿರುವ ನೂರಾರು ಗೇಣೀ ಭೂಮಿಗಳನ್ನು ತೋರಿಸಿ ಕೊಡುತ್ತೇನೆ. ಇದು ಈಗಿನ ಪರಿಸ್ಥಿತಿ. ಅದನ್ನು ಮನಗಂಡೇ ಭೂ ಆಯೋಗವನ್ನು ನೇಮಿಸಬೇಕಾಯಿತು. ಆ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

> "The Land Commission will require a period of about six months at least to do the work and the record of tenancies can also be got prepared during this period."

ಎಂದು 57ನೇ ಇಸವಿಯಲ್ಲಿಯೇ ಹೇಳಿದರು. ಸರ್ಕಾರ ಆ ಆಯೋಗವನ್ನು ನೇಮಿಸಿಲ್ಲ. ರಿಕಾರ್ಡು ಗಳನ್ನು ಬರೆಸಲಿಲ್ಲ. ಈಗ 17ನೇ ತಿದ್ದುಪಡಿ ಬಂದೊಡನೆಯೇ ನಾವು ಭೂಸುಧಾರಣೆಯ ಕಾನೂನು ಗಳನ್ನು ಜಾರಿಗೆ ತರುತ್ತೇವೆಂದು ಹೇಳುತ್ತಾರೆ. ಇದರಲ್ಲಿ ಏನು ಅರ್ಥವಿದೆ? ಹೇಗೆ ತರುತ್ತಾರೆ. ರೈತರಿಗೆ ಯಾವ ಆಧಾರದ ಮೇಲೆ ನೀವು ಪಟ್ಟಾ ಕನ್ಫರ್ಮ್ ಮಾಡುತ್ತೀರಿ? ಅಷ್ಟು ಹೊತ್ತಿಗೆ ಇವರ ಹೆಸರಿನಲ್ಲಿ ಯಾರಿಗೂ ಪಟ್ಟಾ ಇರುವುದಿಲ್ಲ. ಮೊದಲನೆಯದಾಗಿ ರಶೀದಿಗಳನ್ನೇ ಕೊಡುತ್ತಾ ಇರುವುದಿಲ್ಲ. ಸುಮಾರು ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಜಮೀನ್‌ದಾರ ಗೇಣೀದಾರನಿಗೆ ಬರೆದು ಕೊಡಬೇಕು, ಗೇಣೀದಾರನೂ ಸಹ ಜಮೀನುದಾರನಿಗೆ ಬರೆದು ಕೊಡಬೇಕು.

Mr. SPEAKER.—If the hon members want further legisl tion to make up the deficiencies, I welcome them. But the question is whether this Bill is wanted and whether it is to be passed in this House. If it is poin ed out that such and such a Legislation should be brought in the order to make this Act effective, I will allow it.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಕುಂಟು ನೆಪಗಳನ್ನು ಈ ಬಗ್ಗೆ ಇನ್ನು ಮುಂದೆ ಒಡ್ಡಬಾರದು. ಏಕೆಂದರೆ ವರ್ಷ ವರ್ಷವೂ ರೈತರಿಗೂ ಗೇಣೀದಾರರಿಗೂ ರಕ್ಷಣೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಈ ಮಾನ್ಯ ಸಭೆ ಅಂಗೀಕೃತ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಈ ಸರ್ಕಾರದವರು ಇದುವರೆಗೂ ಯಾವ ಒಬ್ಬ ಗೇಣೀದಾರನಿಗೂ ಯಾವುದೇ ರೀತಿಯ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗದೆ ವಿಫಲವಾಗಿದೆ. ಇದು ಬರೀ ಅವರ ಒಂದು ಸಂತೋಷಕ್ಕೆ ಮಾಡತಕ್ಕ ಕೆಲಸವೇ ಹೊರತು ಕಾರ್ಯತಃ ಯಾವ ಗೇಣೀದಾರನಿಗೂ, ರೈತನಿಗೂ ರಕ್ಷಣೆಯೇನೂ ದೊರಕುತ್ತಾ ಇಲ್ಲ. ಕಾರಣವೇನೆಂದರೆ ಇದುವರೆಗೂ ಪಹಣಿ ಬರೆಸಲಿಲ್ಲ, ಪಹಣಿ ಫಾರಂ ಬರೆಯದೆ ಹಾಗೆಯೇ ಇಟ್ಟಿದ್ದರೆ ರಶೀದಿಗಳನ್ನು ಕೊಡದೆಯೇ ಇದ್ದರೆ ಶಿಕ್ಷೆಮಾಡಬೇಕೆಂದು ಜತ್ತಿ ಸಮಿತಿಯವರು ಹೇಳಿದರೂ ಇದುವರೆಗೂ ಯಾರಿಗೂ ಯಾವ ರೀತಿಯಲ್ಲೂ ಶಿಕ್ಷೆ ಮಾಡಲಿಲ್ಲ.

ಅವರಿಗೆ ಗೇಣಿ ಕರಾರನ್ನು ಬರೆಸಿಕೊಡುವುದಕ್ಕೆ ಕಡ್ಡಾಯ ಮಾಡುತ್ತಿಲ್ಲ. ನೂರಾರು ಜನ ಗೇಣಿ ರೈತರನ್ನು ಬಲಿಷ್ಠರಾದ ಭೂ ಮಾಲಿಕರು ಭೂಮಿಯಿಂದ ಹೊರಗೆ ಹಾಕುತ್ತಿದ್ದಾರೆ. ಇಂಥಾ ಸಮಯದಲ್ಲಿ ಗೇಣೀದಾರರೂ ಯಾರಾದರು ಸರ್ಕಾರಕ್ಕೆ ದೂರು ಕೊಟ್ಟರೆ ಅಂಥವರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳದೆ ಇರತಕ್ಕ ನೂರಾರು ಕೇಸುಗಳನ್ನು ನಾನು ಕೊಡುತ್ತೇನೆ. ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಇದು ಪ್ರತಿನಿತ್ಯ ನಡೆಯುತ್ತಾ ಇರತಕ್ಕ ಒಂದು ಶೋಷಣೆಯಾಗಿದೆ, ಇದರಿಂದ ರೈತನನ್ನು ಹೇಗೆ ಸರ್ಕಾರದವರು ರಕ್ಷಣೆ ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ನಾನು ಸರಕಾರಕ್ಕೆ ನೇರವಾಗಿ ಹಾಕಬೇಕಾಗಿದೆ. ಒಬ್ಬ ಗೇಣೀದಾರ ಗದ್ದೆಯನ್ನು ಐದು ಖಂಡುಗ ಗೇಣಿಗೆ ಮಾಡಿದರೆ, ಅವನು ಜಮಿನ್ದಾರನಿಗೆ ಎಂಟು ಖಂಡುಗ ಬತ್ತವನ್ನು ಕೊಡುತ್ತಾನೆ. ಅಂದರೆ ಇಪ್ಪತ್ತು ಪಲ್ಲ ಬತ್ತವನ್ನು ಅವನು ಜಮೀನ್ದಾರನಿಗೆ ಕೊಡುತ್ತಾನೆ. ಅಂದರೆ 20 ಪಲ್ಲ ಬತ್ತವನ್ನು ಅವರು ಜಮಿನ್ದಾರನಿಗೆ ಕೊಡುವುದಾದರೆ ಒಂದು ಪಲ್ಲ ಬತ್ತಕ್ಕೆ ಇಪ್ಪತ್ತೈದು ರೂಪಾಯಿಗಳ ಬೆಲೆಯಂತೆ ಎಷ್ಟು ಹಣ ಜಮೀನ್ದಾರನಿಗೆ ಸಲ್ಲಬೇಕಾಗುತ್ತದೆ ? ಗೇಣಿದಾರನಿಗೆ ಎಷ್ಟು ಹಣ ಉಳಿಯುತ್ತದೆ ಎಂಬುದನ್ನು ನೋಡಿದರೆ ಅರ್ಧಕ್ಕಿಂತ ಕಡಿಮೆ ಹಣ ಅವನಿಗೆ ಉಳಿಯುತ್ತದೆ. ಈಗ ಯಾರಾದರೂ ಒಬ್ಬ ರೈತ ಒಂದು ಅಡಿಕೆ ತೋಟವನ್ನು ಗುತ್ತಿಗೆಗೆ ಮಾಡಿದರೆ ಅವನು 50 ಮಣ ಅಡಿಕೆಯನ್ನು ಆ ತೋಟದ ಮಾಲೀಕನಿಗೆ ಕೊಡಬೇಕಾಗುತ್ತದೆ. ಎಂದರೆ 3 ಸಾವಿರ ರೂಪಾಯಿಗಳನ್ನು ಅವನು ಆ ಮಾಲೀಕನಿಗೆ ಕೊಡಬೇಕಾಗುತ್ತದೆ. ಅವನು ಆ ತೋಟದಲ್ಲಿ ಎಷ್ಟು ಶ್ರಮಪಡಬೇಕಾಗುತ್ತದೆ, ಎಂಬುದನ್ನು ಯೋಚನೆ ಮಾಡಬೇಕು. ಆ ರೀತಿ ಅವನು ಶ್ರಮಪಟ್ಟು ಮಾಲೀಕನಿಗೆ ಗುತ್ತಿಗೆ ಕೊಟ್ಟು ಅವನಿಗೆ ಎಷ್ಟು ಉಳಿಯುತ್ತದೆ ? ಮಾತೆತ್ತಿದರೆ ಆಡಳಿತ ಪಕ್ಷದವರು ಭೂಮಿಯನ್ನು ಉಳುವವನನ್ನೇ ಭೂಮಿಯ ಒಡೆಯನನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಆ ರೀತಿ ಮಾಡಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. ಇಂಥ ಒಂದು ಕಠಿಣ ಪರಿಸ್ಥಿತಿಯಲ್ಲಿರತಕ್ಕ ಮತ್ತು ಪಶುಗಳಂತೆ ದುಡಿಯುವ ರೈತರಿಗೆ ಸರ್ಕಾರದವರು ರಕ್ಷಣೆ ಕೊಟ್ಟು ಅವರ ಸ್ಥಿತಿಗತಿಗಳನ್ನು ಅವರ ಜೀವನ ಕ್ರಮವನ್ನು ಉತ್ತಮ ಪಡಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹುಣ್ಣಿನ ಮೇಲೆ ಬರೆ ಎಳೆದಂತೆ ಸರ್ಕಾರದವರು ಆಡುವ ಮಾತುಗಳನ್ನು ಕೇಳಿ ನಮಗೆ ದುಃಖವಾಗುತ್ತಿದೆ. ಸರ್ಕಾರದವರು ಇಂಥ ಒಂದು ಅಸಹಾಯಕ ಪರಿಸ್ಥಿತಿಯಲ್ಲಿದ್ದು ತಮ್ಮ ಒಂದು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಈ ಒಂದು ಕಾನೂನನ್ನು ಮುಂದುವರಿಸಿಕೊಂಡು ಹೋಗುವುದನ್ನು ನೋಡಿದರೆ ಇವರು ದೇಶವನ್ನು ದುರ್ಗತಿಗೆ ಈಡು ಮಾಡುತ್ತಾರೆ ಎಂದು ನಾವು ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ಜತ್ತಿ ಸಮಿತಿಯವರು ಮಾಡಿರುವ ವರದಿಯನ್ನು ಮತ್ತೊಮ್ಮೆ ಓದಿ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಏನು ಅಡಚಣೆಗಳಿವೆ ಎಂಬುದನ್ನು ನೋಡಿ ಅದಕ್ಕೆ ತಕ್ಕ ಪರಿಹಾರ ಕ್ರಮವನ್ನು ತೆಗೆದುಕೊಳ್ಳಬೇಕು. ಇವೊತ್ತು ಕಾನ್ಸ್ಟಿಟ್ಯೂಷನ್ನಿನ 17ನೇ ಅಮೆಂಡ್‌ಮೆಂಟನ್ನು ಸ್ವತಂತ್ರ ಪಾರ್ಟಿಯವರು ಏತಕ್ಕೆ ವಿರೋಧಿಸುತ್ತಿದ್ದಾರೆಂದರೆ, ಅದರ ಮರ್ಮವೇನೆಂದರೆ ಆ ತಿದ್ದುಪಡಿ ಗೇಣೀದಾರನನ್ನು ರಕ್ಷಣೆಮಾಡುವುದಕ್ಕೆ, ದುಡಿಮೆಮಾಡತಕ್ಕ ರೈತರನ್ನು ರಕ್ಷಣೆ ಮಾಡುವುದಕ್ಕೋಸ್ಕರ ತಂದಿರತಕ್ಕದ್ದಾಗಿದೆ, ಆದ್ದರಿಂದ ಅವರು ಅದನ್ನು ವಿರೋಧಿಸುತ್ತಿದ್ದಾರೆ ಗೇಣಿದಾರರಿಗೆ ರಕ್ಷಣೆಯನ್ನು ಕೊಡತಕ್ಕ ವಿಷಯವನ್ನು ಸರ್ಕಾರದವರು ಪರಿಶೀಲನೆಮಾಡಿ ಗೇಣೀರೈತರಿಗೆ ಈ ವರ್ಷದ ಅಖೈರೊಳಗೆ ಅವರ ರೆಕಾರ್ಡುಗಳನ್ನು ಕೊಡಬೇಕು. ಅವರಿಗೆ ರಕ್ಷಣೆಯನ್ನು ಕೊಡಬೇಕು. ಮತ್ತು ಅವರು ಜಮೀನ್ದಾರನಿಗೆ ಕೊಡತಕ್ಕ ಗೇಣಿಯಲ್ಲಿ ಇನ್ನೂ ಕಡಿಮೆ ಮಾಡಬೇಕು ಯಾವ ಕಾರಣದಿಂದಲೂ ಗೇಣೀ ರೈತನನ್ನು ಒಕ್ಕಲನ್ನು ಹೊಲದಿಂದ ಎಬ್ಬಿಸದಂತೆ ನೋಡಿಕೊಳ್ಳಬೇಕು. ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಗೇಣೀದಾರ ಮಾಲೀಕನಿಗೆ 3 ವರ್ಷ ಗೇಣಿಯನ್ನು ಕೊಡದಿದ್ದರೆ ದಾವಾ ಹಾಕಬೇಕೆಂದು ಏನು ಒಂದು ಕಾನೂನು ಇದೆಯೋ ಅದನ್ನು ಹೋಗಲಾಡಿಸಬೇಕು. ಜಮೀನ್ದಾರನಿಗೆ ಗೇಣೀದಾರನಿಂದ ಗೇಣಿಯ ಭಾಗ ಆಯಾ ವರ್ಷ

ಬಾರದೆ ಹೋಗಿದ್ದರೆ ಅವನು ಆವರ್ಷದ ಅಕ್ಟೋಬರಿನೊಳಗಾಗಿ ಗೇಣೀದಾರನಿಗೆ ನೋಟೀಸು ಕೊಡಬೇಕು. ಒಂದುವೇಳೆ ಜಮೀನ್ದಾರ 3 ವರ್ಷ ಗೇಣೀ ಬಂದಿಲ್ಲ ಎಂದು ಹೇಳಿದರೆ ಗೇಣೀದಾರ ಗೇಣೀಭಾಗವನ್ನು ಜಮೀನ್ದಾರನಿಗೆ ಕೊಟ್ಟಿದ್ದಕ್ಕೆ ಅವನ ಹತ್ತಿರ ರಶೀತಿ ಇರುವುದಿಲ್ಲ. ಗೇಣೀದಾರ ಬೆಳೆದದ್ದನ್ನು ಜಮೀನ್ದಾರನಿಗೆ ಹಾಕಿ ಬರುತ್ತಾನೆ. ಒಂದು ವೇಳೆ ಜಮೀನ್ದಾರ ಏನಾದರೂ ಕೋರ್ಟಿಗೆ ಹೋದರೆ ಆಗ ಗೇಣೀದಾರ ಅಸಹಾಯಕನಾಗುತ್ತಾನೆ. ಇದರ ಮೇಲೆ ನಾನು ಹೆಚ್ಚು ಮಾತನಾಡಿದರೆ ನಾನು ಬಹಳ ಉದ್ದವಾಗಿ ಭಾಷಣ ಮಾಡುತ್ತೇನೆಂದು ಮಾನ್ಯ ಅಧ್ಯಕ್ಷರು ಬೇಸರ್‍ಪಡಬಹುದು.

ಅಧ್ಯಕ್ಷರು.—ನನಗೇನೂ ಬೇಸರವಿಲ್ಲ. ಆದರೆ ಈ ಬಿಲ್ಲಿನ ಮೇಲೆ ಮಾತನಾಡದೆ ಇರತಕ್ಕ ಮಾನ್ಯ ಸದಸ್ಯರು ತಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಲಿಲ್ಲ ಎಂದು ಬೇಸರಪಡಬಹುದು.

ಶ್ರೀ ಎಸ್. ಗೋಪಾಲ ಗೌಡ.—ಆ ರೀತಿ ಅವರು ಬೇಸರಪಡುವುದಿಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ಈ ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಇಂಥ ಒಂದು ಪರಿಸ್ಥಿತಿಯಲ್ಲಿ ಜನಗಳು ಏನು ಹೇಳುತ್ತಾರೆಂಬುದನ್ನು ಸರ್ಕಾರದವರು ನೋಡಬೇಕು. ಆಹಾರ ಧಾನ್ಯವನ್ನು ಹೆಚ್ಚು ಬೆಳೆಸಬೇಕು, ರೈತರು ಉದ್ಧಾರವಾಗಬೇಕು ಎಂದು ಸರ್ಕಾರದವರು ಹೇಳುತ್ತಾರೆ. ಆ ಮಾತಿನಲ್ಲಿ ನಂಬಿಕೆಯನ್ನು ಇಡಬೇಕಾದರೆ ಅದು ಕಾರ್ಯದಲ್ಲಿ ಬರಬೇಕು. ಅದರಲ್ಲಿ 100ಕ್ಕೆ 60 ಜನಗಳಿಗಾದರೂ ರಕ್ಷಣೆಯನ್ನು ಕೊಟ್ಟು ಆ ರೈತರಿಗೆ ಸಹಾಯವನ್ನು ಮಾಡಿ. ನೀವು ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಭೂಮಿ ಎಲ್ಲಿ ಉಳಿದಿದೆ? ಕಾಡುಗಳನ್ನೆಲ್ಲಾ ಕಡಿದು ಆ ಜಮೀನನ್ನು ಆಕ್ರಮಿಸಿಕೊಂಡು ಅವರಲ್ಲಿ ಸಾವಿರಾರು ಎಕರೆ ಜಮೀನನ್ನು ಜಮೀನು ಇರುವವರಿಗೇ ಕೊಟ್ಟಿದ್ದಾರೆ. ಅಂದಮೇಲೆ ಭೂಸುಧಾರಣೆಯನ್ನು ಮಾಡುವುದಕ್ಕೆ ಭೂಮಿ ಎಲ್ಲಿ ಉಳಿದಿದೆ? ಪ್ರೈವೇಟ್ ಸೆಕ್ಟಾರಿನಲ್ಲಿ ಭೂಮಿಯನ್ನೇನಾದರೂ ಸೃಷ್ಟಿ ಮಾಡುತ್ತಾರೆಯೇ? ಎಲ್ಲಾ ರೈತರಿಗೆ ಸೌಕರ್ಯವನ್ನು ಮಾಡುತ್ತೇವೆಂದು ಹೇಳಿ ರೈತನ ಹೆಸರಿನಲ್ಲಿ ಲಕ್ಷಗಟ್ಟಲೆ ಹಣವನ್ನು ವ್ಯರ್ಥಾ ಖರ್ಚು ಮಾಡುತ್ತಿದ್ದಾರೆ, ಇಂಥಾ ಡೋಲಾಯಮಾನವಾದ ನೀತಿಯನ್ನು ಸರ್ಕಾರದವರು ಅನುಸರಿಸುತ್ತಿದ್ದರೆ ದೇಶಕ್ಕೆ ಗಂಡಾಂತರ ಪರಿಸ್ಥಿತಿಯನ್ನು ತಂದೊಡ್ಡುತ್ತಾರೆ. ಆಗ ಇಂಥಾ ಒಂದು ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಯಾರಿಂದ ಸಾಧ್ಯವಿದೆ? ಇದರಿಂದ ಲಕ್ಷಾಂತರ ಕುಟುಂಬಗಳು ಜಮೀನಿಲ್ಲದೆ ಬೀದಿಯ ಭಿಕಾರಿಗಳಾಗುತ್ತವೆ. ಮತ್ತು ಅವರೆಲ್ಲರೂ ಕೂಲಿಗಾರರಾಗುತ್ತಾರೆ. ಈಗಾಗಲೇ ಸಾಗರ ಮತ್ತು ತೀರ್ಥಹಳ್ಳಿಯ ತಾಲ್ಲೂಕುಗಳಲ್ಲಿರತಕ್ಕ ಜನ ಕೂಲಿಯನ್ನು ಮಾಡುವ ಸ್ಥಿತಿಗೆ ಬಂದಿದ್ದಾರೆ. ಅವರ ಪೈಕಿ ಜಮೀನನ್ನು ಕಳೆದುಕೊಂಡ ಕೆಲವು ಗೇಣಿದಾರರು ಒಂದು ವೇಳೆ ಕೋರ್ಟಿಗೆ ಏನಾದರೂ ಹೋದರೆ ಆ ಜಮೀನಿಗೆ ಸಂಬಂಧಪಟ್ಟ ಕಾಗದಗಳೇನಾದರೂ ನಿಮ್ಮಲ್ಲಿ ಇವೆಯೇ ಎಂದು ಗೇಣಿದಾರರನ್ನು ಕೋರ್ಟಿನವರು ಕೇಳುತ್ತಾರೆ. ಅವರು ಆ ಜಮೀನನ್ನು ತಮ್ಮ ಅಜ್ಜ ಮುತ್ತಜ್ಜನ ಕಾಲದಿಂದಲೂ ಅನುಭವಿಸಿಕೊಂಡು ಬಂದಿದ್ದಾರೆ.

ಆದ್ದರಿಂದ ಕೊನೆಯದಾಗಿ ನಾನು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಕೃಷ್ಣಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಕೊನೆಯ ಪಕ್ಷ ಜತ್ತಿ ಸಮಿತಿಯವರದಿಯಲ್ಲಿ ಭೂಸುಧಾರಣೆಯ ವಿಷಯದಲ್ಲಿ ಏನು ಸಲಹೆ ಮಾಡಿದ್ದಾರೆಯೋ ಅದನ್ನಾದರೂ ಕಾರ್ಯಗತ ಮಾಡುತ್ತೀರಾ ಎಂದು. ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ 17ನೇ ತಿದ್ದುಪಡಿ ಅಡ್ಡಿ ಬರುವುದನ್ನು ಬಿಟ್ಟು ಬಾಕಿ ಗೇಣಿದಾರರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಭೂಸುಧಾರಣಾ ಕಾನೂನಿನಲ್ಲಿರತಕ್ಕ ವಿಧಿಗಳನ್ನು ಕಾರ್ಯಗತ ಮಾಡುವುದಕ್ಕೆ ತಮ್ಮ ಸಿಬ್ಬಂದಿಗೆ ಸೂಚನೆಯನ್ನು ಕೊಡಬೇಕು. ಮತ್ತು ಅಧಿಕಾರಿಗಳು ಎಷ್ಟರ ಮಟ್ಟಿಗೆ ಅದನ್ನು ಕಾರ್ಯಗತ ಮಾಡುತ್ತಾರೆ ಎಂಬುದನ್ನು ದಯವಿಟ್ಟು ಪರಿಶೀಲನೆ ಮಾಡಿ ರೈತರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಈ ಮಸೂದೆಯನ್ನು ವಿರೋಧಿಸುತ್ತಾರೋ ಅಥವಾ ಅನುಮೋದಿಸುತ್ತಾರೋ?

ಶ್ರೀ ಎಸ್. ಗೋಪಾಲಗೌಡ.—ಭೂಸುಧಾರಣೆಯ ಕಾನೂನನ್ನು ಜಾರಿಗೆ ತರುವುದರಲ್ಲಿ ವಿಳಂಬ ಮಾಡುವ ಸರ್ಕಾರದ ನೀತಿಯನ್ನು ವಿರೋಧಿಸುತ್ತೇನೆ. ಮತ್ತು ಉಗ್ರವಾಗಿ ಖಂಡಿಸುತ್ತೇನೆ. ಗೇಣಿ ರೈತರಿಗೆ ರಕ್ಷಣೆಯನ್ನು ಕೊಡಬೇಕೆಂದು ಮತ್ತೆ ಮತ್ತೆ ಒತ್ತಿ ಹೇಳುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಕಾಲಾವಕಾಶವಾಗಿದೆ. ಆದುದರಿಂದ ಹಿಂದೆ ಮಾತನಾಡಿದ ಸದಸ್ಯರು ಹೇಳಿದ ಯಾವ ಅಂಶಗಳನ್ನೂ ಹೇಳದೆ ಒಂದೆರಡು ಮುಖ್ಯವಾದ ಅಂಶಗಳನ್ನು ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಕೆಲವು ಮಾರ್ಮಿಕವಾದ

(ಶ್ರೀ ವಿ. ಎಂ. ದೇವ್)

ಮಾತುಗಳನ್ನು ಶ್ರೀ ಮುಕ್ಕಣ್ಣಪ್ಪನವರೂ, ಶ್ರೀ ಗೋಪಾಲಗೌಡರೂ ಹೇಳಿದರು. ಶ್ರೀಮಂತರ ಜೇಬಿಗೆ ಏಕೆ ಬೀಳುತ್ತೀರಿ, ಸ್ವತಂತ್ರ ಪಕ್ಷದವರು ವಿರೋಧ ಮಾಡುತ್ತಿದ್ದಾರೆಂದು ಏಕೆ ಹೇಳುತ್ತಿದ್ದೀರಿ, ಯಾವ ಯಾವ ಕಲಮುಗಳ ಬಗ್ಗೆ ರಾಜ್ಯಾಂಗದಲ್ಲಿ ತಿದ್ದುಪಡಿಯಾಗುವವರೆಗೂ ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೋ ಅವನ್ನು ಮಾತ್ರ ಬಿಟ್ಟು ಉಳಿದುದನ್ನು ಏಕೆ ಜಾರಿಗೆ ತರಲಿಲ್ಲ, ಗೇಣಿದಾರರಿಗೆ ಇದರಿಂದ ನಿಜವಾಗಿ ಏನೂ ರಕ್ಷಣೆ ಸಿಕ್ಕಿಲ್ಲ, ಅದರೂ ಸಹ ಈ ತಿದ್ದುಪಡಿಯನ್ನು ತಂದಿರುತ್ತೀರಿ ಎಂದು ಹೇಳಿದರು. ಈಗ ನಾವೆಲ್ಲರೂ ಬಹಳ ಆಳವಾಗಿ ಯೋಚನೆ ಮಾಡಬೇಕಾದ ಮುಖ್ಯ ಅಂಶ ಏನೆಂದರೆ ಇದು ಸಂಧಿಕಾಲ. ಸಂಧಿಕಾಲ ಎಂದರೆ ಮಾತು ಕೊಟ್ಟು ಮುರಿಯುವವರ ಮತ್ತು ಕೊಟ್ಟ ಮಾತನ್ನು ಉಳಿಸಿಕೊಳ್ಳದೆ ಇರುವವರ ಪರೀಕ್ಷೆ ಕಾಲ ಈಗ ಬಂದಿದೆ. ಈ ಸಭೆಯಲ್ಲಿ ಮುಂಚೆ ಮಾತು ಕೊಟ್ಟರು. ಜನಗಳು ಅದನ್ನು ನಂಬಿದರು. ಮಾನ್ಯ ಜತ್ತಿಯವರ ಮಂತ್ರಿ ಮಂಡಲ ಬಂತು. ಜನ ಎಚ್ಚೆತ್ತರು.

Mr. SPEAKER.—Is the Hon'ble member opposing or supporting the Bill.

Sri V. M. DEO.—I oppose the Bill in the sense it does not serve the purpose stated in the Statement of Objects and Reasons

ನಾನು ಹೇಳುವುದು ಇಷ್ಟು: ಕೆಲವು ಉದಾಹರಣೆಗಳನ್ನು ಕೊಡಬೇಕೆಂದು ಯೋಚನೆ ಮಾಡಿದ್ದೇನೆ. ಮಹಾರಾಷ್ಟ್ರದಲ್ಲಿ ಶ್ರೀ ನಾಯಕ ಅವರು ಇದೇ ತರಹ ಮಸೂದೆಯನ್ನು ತಂದರು. ಸರ್ಕಾರದ ಹತ್ತಿರ ಅಸಾಧ್ಯವಾದ ಭೂಮಿ ಉಳಿಯಿತು. ಆಗ ನೆಹರು ಅವರು ಕೇಳಿದರು, What are you going to do with all these lands ಎಂದು. ಮಂತ್ರಿಗಳಾಗಿದ್ದವರು ಹೋದರು. ಪುನಃ ಮಂತ್ರಿಗಳಾಗಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಮಾತು ಕೊಟ್ಟು ಅದನ್ನು ಮುರಿಯುವವರ ಅಂತ್ಯಕಾಲ ಸನ್ನಿಹಿತವಾಗುತ್ತಿದೆ. ಆ ದೃಷ್ಟಿಯಿಂದ ನಾವೆಲ್ಲ ಯೋಚನೆ ಮಾಡಬೇಕು.

Mr. SPEAKER.—That promise breakers will come to an end, is not found in the Bill.

ಶ್ರೀ ವಿ. ಎಂ. ದೇವ್.—ಯಾವ ಉದ್ದೇಶಕ್ಕಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಇದರಿಂದ ಉದ್ದೇಶ ನೆರವೇರುವುದಿಲ್ಲ ಎನ್ನುವುದು ಶತಸ್ಸಿದ್ಧ. ಇದು ಬಹಳ ಮುಖ್ಯವಾದ ವಿಷಯ. ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ. ಮೇಲೆ ಮಾತ್ರ ಖಾದಿ ಬಟ್ಟೆಯನ್ನೂ ಕಾಂಗ್ರೆಸ್ ಬಟ್ಟೆಯನ್ನೂ ಹಾಕಿಕೊಂಡು ಓಡಾಡುತ್ತೀರಿ.....

Mr. SPEAKER.—No personal motives should be attributed.

Sri V. M. DEO.—They draw certain inferences.

ಜನಗಳು ಏನು ಹೇಳುತ್ತಾರೆಂದರೆ ಕಾಂಗ್ರೆಸ್ಸಿನವರು light hearted people ಅವರು ಭೂಸುಧಾರಣೆಯನ್ನು ತರುವುದೇ ಆಗಲೀ ಸಾಮಾನ್ಯ ಜನತೆಗೆ ಅನುಕೂಲವಾಗುವ ಯಾವುದೇ ಕಾನೂನನ್ನು ಜಾರಿಗೆ ತರುವುದೇ ಆಗಲೀ ಎಂದಿಗೂ ಮಾಡುವುದಿಲ್ಲ ಎಂದು ಮಾತು ಮುರಿಯುವ ಜನ ಎಂದು ಖಂಡಿತವಾಗಿ ಅನ್ನಿಸಿಕೊಳ್ಳುತ್ತಾರೆ.

ನಿಜವಾಗಿ ಗೇಣಿದಾರರಿಗೆ ರಕ್ಷಣೆಯನ್ನು ಕೊಡಬೇಕು ಎಂಬ ಮನಸ್ಸಿದ್ದರೆ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತಕ್ಷಣ ಮಾಡಬೇಕು ಮತ್ತು ಅಲ್ಲಿಯವರೆಗೆ ರಾಜ್ಯಾಂಗಕ್ಕೆ ವಿರೋಧವಿಲ್ಲದೆ ಇರುವ ವಿಧಿಗಳನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ನನಗೆ ಐದು ನಿಮಿಷ ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Is it the desire of the House that the time allotted for this Bill should be extended by another one hour ?

HON' MEMBERS.—Yes.

Mr. SPEAKER.—The time allotted for this Bill is extended by one hour.

Before I call upon the next member to speak, I have something to say. I promised to give a ruling on the point raised by Sri G. Anna Rao. He is not present now. I shall give my ruling when he is present.

† ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ; ಪ್ರತಿ ವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಇಂಥ ಮಸೂದೆಯನ್ನು ತಂದು ನಾಲ್ಕು ಮಾತನ್ನು—ಪುನಿ ಮಾತು ಎಂದು ಹೇಳುತ್ತಾರೆ—ಕೇಳಿಬಿಟ್ಟು ಈ ಸಭೆಯ ಒಪ್ಪಿಗೆಯನ್ನು ತೆಗೆದುಕೊಳ್ಳುವುದರಲ್ಲಿ ನಮ್ಮ ಕಂದಾಯ ಮಂತ್ರಿಗಳು ಬಹಳ ಜಾಣರು. ನಾನು ಇವತ್ತು ಪ್ರಾರಂಭದಿಂದ ಇಲ್ಲಿಯವರೆಗೂ ಕೇಳಿದಂಥ ಭಾಷಣದಲ್ಲಿ ಒಂದೇ ಒಂದು ಅಭಿಪ್ರಾಯ ಕಂಡುಬರುತ್ತದೆ. ನಾನಾವರೂ ಜಮೀನ್ದಾರಿ ಪದ್ಧತಿ ಹೋಗಬೇಕು ಉಳತಕ್ಕವನಿಗೆ ಅನುಕೂಲವಾಗಬೇಕು ಎನ್ನುವುದರಲ್ಲಿ ಎರಡು ಅಭಿಪ್ರಾಯವಿರುವವನಲ್ಲ. ಅನೇಕ ನನ್ನ ಮಾನ್ಯ ಮಿತ್ರರು ಹೊಂದಿರುವ ಅಭಿಪ್ರಾಯವೇ ನನಗೂ ಇತ್ತು. ಆದರೆ ಇವತ್ತು ವಸ್ತುತಃ ನಮ್ಮಲ್ಲಿರತಕ್ಕ ಸ್ಥಿತಿಯನ್ನು ನಾವು ಯಾರೂ ಗಮನಕ್ಕೆ ತಂದುಕೊಂಡಹಾಗೆ ಕಾಣುವುದಿಲ್ಲ. ಚೀಪ್ ಪಾಪ್ಯುಲಾರಿಟಿ ಎಂದು ಏನು ಹೇಳುತ್ತಾರೆ ಹಾಗೆ ಜನ ಪ್ರತಿನಿಧಿಗಳಾಗಿರುವವರು ಹೆಚ್ಚು ಬಡವರು ಇರತಕ್ಕ ಈ ದೇಶದಲ್ಲಿ ಅವರ ಪರವಾಗಿ ಮಾತನಾಡತಕ್ಕದ್ದು ಒಂದು ಹವ್ಯಾಸವಾಗಿ ಬೆಳೆದುಬಂದಿದೆ. ಆದರೆ ಇನ್ನೊಂದು ಪಕ್ಷದವನಿಗೆ ಇದರಿಂದ ಆಗತಕ್ಕ ನೋವು ಏನು ಎಂದು ಸ್ವಲ್ಪವಾದರೂ ವಿಚಾರ ಮಾಡುತ್ತಾರೆಯೇ ಅಥವಾ ಆ ವಿಚಾರ ಶಕ್ತಿಯನ್ನು ಕಳೆದುಕೊಂಡಿದ್ದಾರೆಯೇ ಎಂದು ನನಗೆ ಅನುಮಾನ ಬಂದಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ವಿಷಯ ಮಾತ್ರ ನನಗೆ ಸ್ವಲ್ಪಮಟ್ಟಿಗೆ ಗೊತ್ತು. ಆ ವಿಚಾರವನ್ನು ಹೇಳಬೇಕಾದರೆ ನಾನಾ ಕಾರಣಗಳಿಗಾಗಿ ಸರ್ಕಾರಿ ಕೆಲಸದಲ್ಲಿದ್ದವರು, ವ್ಯಾಪಾರ ವಗೈರೆ ಇಟ್ಟುಕೊಂಡಿರತಕ್ಕವರು ತಮ್ಮ ಜಮೀನುಗಳನ್ನು ಗುತ್ತಿಗೆಗೆ ಅಥವಾ ವಾರಕ್ಕೆ ಕೊಟ್ಟಿರತಕ್ಕ ಪರಿಸ್ಥಿತಿ ಇತ್ತು. ಅದರಲ್ಲಿ ಈಗ ಐದಾರು ವರ್ಷಗಳಿಂದೀಚೆಗೆ ಧರ್ಮ, ನ್ಯಾಯ ಎಂದು ನಮ್ಮ ಸತ್ಯಶೀಲನಾದ ರೈತ ಪಾಲಿಸಿಕೊಂಡು ಬರುತ್ತಿದ್ದನೋ ಅದೆಲ್ಲ ಮಾಯವಾಗಿ ದಗಾ ಹಾಕತಕ್ಕ ರೀತಿ ನೀತಿಗಳನ್ನು ಸರ್ಕಾರದವರೇ ರೈತರಿಗೆ ಕಲಿಸಿದರು ಎಂದು ಹೇಳುವುದರಲ್ಲಿ ನನಗೆ ಬಹಳ ವ್ಯಸನವಾಗುತ್ತದೆ. ಅವರು ನನ್ನ ಜೊತೆಯಲ್ಲಿ ಬಂದರೆ ಇವತ್ತೂ ತೋರಿಸುತ್ತೇನೆ. ಆರು ವರ್ಷಗಳಿಂದ ಒಂದು ಕಾಳನ್ನೂ ಎಂಟನೆ ಒಂದು ಭಾಗ ಅಥವಾ ಯಾವುದೇ ಭಾಗವನ್ನು ಕೊಡತಕ್ಕ ಏರ್ಪಾಡು ಇಲ್ಲ. ಅವನು ಏನಿದ್ದರೂ ಆ ಜಮೀನನ್ನು ತಾನು ಪಡೆದುಕೊಳ್ಳಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುತ್ತಾನೆ. ಇಂಥವರು ಹೆಚ್ಚಿದ್ದಾರೆ. ಜಮೀನಿಗೆ ಏನು ಬೆಲೆ ಕೊಡಬೇಕೋ ಅದನ್ನು ಕೊಡು ಎಂದು ಕೇಳಿ ಪಡೆಯುವುದಕ್ಕೂ ಅವಕಾಶವಿಲ್ಲದಂತಾಗಿದೆ. ಕೇಸನ್ನು ತೀರ್ಮಾನ ಮಾಡುವವರು ತಹಸೀಲ್ದಾರರು ; ಅವರಿಗೇ ಕಾನೂನು ಸರಿಯಾಗಿ ಗೊತ್ತಿಲ್ಲದೆ ವರ್ಷಗಟ್ಟಲೆ ಕೇಸುಗಳು ತೀರ್ಮಾನವಾಗುವುದಿಲ್ಲ. ಅದರಲ್ಲಿಯೂ ಮೈನರುಗಳು, ವಿಧವೆಯರು ಹೆಣ್ಣುಮಕ್ಕಳು, ಭೂಮಿಯ ಮೇಲೆ ದುಡಿಯಲು ಸಾಧ್ಯವಿಲ್ಲದ ಅಶಕ್ತರು ಇಂಥವರಿಗೆ ಬಹಳ ಕಷ್ಟವಾಗುತ್ತಿದೆ. ಆದಕಾರಣ ಇದನ್ನು ಹೀಗೆ ಮುಂದುವರಿಸುತ್ತ ಹೋಗಬಾರದು. ಪರಿಹಾರವನ್ನು ನಾಲ್ಕರಲ್ಲಿ ಒಂದು ಭಾಗವೆಂದೋ ಎಂಟರಲ್ಲಿ ಒಂದು ಭಾಗವೆಂದೋ ಅಥವಾ ಕಂದಾಯದ ಐದುಪಟ್ಟು ಎಂದೋ ಹೇಗೋ ತೀರ್ಮಾನವಾಗುವುದಕ್ಕೆ ವ್ಯವಸ್ಥೆ ಮಾಡದೇಯಿದ್ದರೆ ಅನೀತಿ, ಅಧರ್ಮ ಹೆಚ್ಚಾಗಲು ಸರ್ಕಾರವೇ ಪಾಠ ಕಲಿಸಿದಂತಾಗುತ್ತದೆ. ರಾಮ ರಾಜ್ಯ ಕಟ್ಟುತ್ತೇವೆಂದು ಹೇಳಿ ಜನರು ಕಾನೂನಿನ ಮರೆಯಲ್ಲಿ ಮೋಸ, ದಗಲುಬಾಜಿತನದಿಂದ ನಡೆಯುವುದಕ್ಕೆ ಅವಕಾಶ ಮಾಡುವುದು ಒಳ್ಳೆಯದಲ್ಲ. ಇದರಿಂದ ದೇಶದಲ್ಲಿ ನೀತಿ ಬಹಳಮಟ್ಟಿಗೆ ಹಾಳಾಗುತ್ತದೆಂದು ಹೇಳುತ್ತೇನೆ. ರಾಜ್ಯಾಂಗದ 17ನೆಯ ತಿದ್ದುಪಡಿ ಬಂದಾಗ ನೋಡಿಕೊಳ್ಳೋಣ. ಯಾವರೀತಿ ಮಾಡಬೇಕೆಂಬುದನ್ನು ನಾನು ಬಜೆಟ್‌ನ ಮೇಲೆ ಮಾತನಾಡುವಾಗ ಅಥವಾ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಮುಸುಕಿನ ಮರೆಯಲ್ಲಿ ಕೆಲವರು ಅನಾಥರು ಮತ್ತು ಅಶಕ್ತರಾದ ಜನರಿಗೆ ಹಿಂಸೆ ಕೊಡುವ ಕ್ರಮ ಬೇಡ. ವರ್ಷ ವರ್ಷ ಆಗತಕ್ಕ ಬೆಳೆ ಅವರಿಗೆ ಸೇರುವ ರೀತಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

4.00 P.M.

† Sri K. S. SURYANARAYANA RAO (Mysore City).—Mr. Speaker, Sir, while speaking on this Bill I would like to draw the attention of this House and of the Hon'ble Minister to the several promises held out to this House so far as the extension of this Bill is concerned. When it was first introduced, it was said that this measure was necessary because otherwise something would happen by the time the Land Reforms Bill came into force. But unfortunately, for some reason or the other, the Land Reforms Bill does not seem to see the light of the day at all. I do

(SRI K. S. SURYANARAYANA RAO)

not know whether it will come back to this House in a modified form or in the form in which this House passed it.

We have heard in this House Members speaking on this Bill. I do not know for whose benefit this Bill is being introduced now. So far as the tenants are concerned, Sri, Gopala Gowda and others made vehement speeches; but that does not help them. There are also arguments in favour of the absentee landlords who have not been able to cultivate the lands themselves till now and who want to cultivate them personally now or at least to continue the present arrangement; they are also not benefited. So neither the landholder nor the tenant is benefited. Therefore, for whose benefit are we enacting this law? It only benefits a very small section of the people in the villages who are vocal and who can have their own way in dealing with these matters. They are a type of people who have risen in the society; they were never there before. Loud complaints were made againt the Shanbouges and Patels that they were not making out kathas. Are there no instances where in the claims of landlords or of even those persons who are actually cultivating the lands are not properly entered but that the claims of somebody else who have some pull in the village are entered? These things are happening. So, it is not the common man or the tenant or the weaker section of the community that is benefited. It is a very small section, the so-called influential community in the rural areas, that is benefited by it. They twist the law to their own advantage. They say that this man has never been in possession though he has been in possession.

Mr. SPEAKER.—That is not twisting the law but it is twisting the facts.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಶ್ಯಾನುಭೋಗರು ಬರೆಯಬೇಕಾದ ಪಹಣಿಯನ್ನು ಬೇರೆಯವರು ಬರೆಯುತ್ತಾರೆಂದು ಹೇಳಿದರು, ಅವರಲ್ಲದೆ ಇನ್ನಾರು ಬರೆಯುತ್ತಾರೆ ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಯಾರ್‍ಯಾರು ಬರೆಯುತ್ತಾರೆಂಬುದನ್ನು ಬೇಕಾದರೆ ಆಮೇಲೆ ಹೇಳುತ್ತೇನೆ. It is we who are responsible, for that. It is the responsible leaders who are responsible for allowing this lawlessness in the countryside; it is we who encourage them and wink at them and say, "Go on as you please and we will protect you". This has caused great harm and dis-advantage to the weaker section of the community who cannot by themselves assert. Take for example of a Class IV employee who had 2 acres of land and who wanted to settle on it after his retirement from service. It is not available to him because the tenant cannot be evicted. After 36 years of loyal service, with a small pension of Rs. 8 he wants to go to his village and settle down on his land for the rest of his life in peace and he cannot do that. It is not that I advocate eviction. I want to show how this causes hardship to the weaker section of the community. Supposing the tenant does not pay rent, what is he to do? I know hundreds of cases wherein the tenants are not paying rents and yet they cannot be evicted. But still the landholder will have to pay land revenue and go before the Revenue

Tahsildar and ask for his mercy and not right. That is the position. There has been inordinate delay in implementing the land reforms. Supposing they are introduced and the provisions are given effect to, all the uncertainties will not be there, and the man with 2 or 4 acres will know where he stands. We are not interested in implementing the land reforms. I am not interested in eviction or sponsoring the cause of the landlord.

So far as this amendment is concerned, I take it that, that will not come in the way of giving effect to the tenancy provisions of the Land Reforms Act. If the Supreme Court's decision has affected certain chapters, let those chapters not come into force.

SRI M. V. KRISHNAPPA.—That is the most important chapter in the Land Reforms Act.

SRI K. S. SURYANARAYANA RAO.—I ask the Revenue Minister i. the judgment has anything to do with tenancy rights in small holding and the relationship between landlords and tenants. No. It effects somebody else and for the sake of that somebody else who will be affected and whose rights are to be protected ? why should these people suffer ? Therefore, let us be clear as to whether we want reforms or whether we want to continue this indecisive policy that we are pursuing. I made an appeal during the last session when such a Bill was introduced on the ground that it caused hardship to the small holders and also to the small tenants. I am not holding brief only for the small holders ; I am speaking for the small tenants also because this is causing hardship to them also. Therefore in the interest of agricultural development and increased food production, we must introduce land reforms or let us say we will not introduce land reforms and let us repeal that Act and allow this system to continue. This extension of life was originally for one year. It started in 1961 and now it is extended for 4 years and is being extended year after year. I would like to know from the Government how many people are affected by it ? how many tenants have not paid rent ? And how many cases are still pending ? The tenant is protected since he is in occupation of the land and nobody can disturb him and therefore he says "I am not going to leave the land ; you do whatever you like to get your claim." If the owner proceeds against him he gets nothing. I do not like to impute motives to Government, but this is what this legislation leads to. They want to squeeze the small men, whether they be tenants or landlords. I would tell them "Please for heaven's sake don't continue this policy ; give effect to the Land Reforms Act if you are really serious about it or amend the Land Reforms Act in such a way as is acceptable to the people at large and implement it." If that is not done it causes hardship to every one. So I appeal to the Government to reconsider this issue and see whether it is advisable to extend the life or this Act up to 1965.

†ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರಿ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಗೆ ಪ್ರತಿ ವರುಷ ಜೀವದಾನ ಕೊಡುವಂಥ ನೀತಿ ಸರಕಾರ ಇಟ್ಟುಕೊಂಡಿರತಕ್ಕಂಥಾದ್ದು ಸರಿಯಿಲ್ಲ ಎಂದು ಹೇಳುತ್ತೇನೆ. ನಾನು ರೈತರಿಗೆ ವಿರೋಧವಾಗಿ ಹೇಳುತ್ತಿಲ್ಲ. ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು ಎಂಬುದು ನಮ್ಮ ಪಕ್ಷದ ಧ್ಯೇಯವಾಗಿದೆ. ರೈತರ ಹಕ್ಕು ಬಾಧ್ಯತೆ ರಕ್ಷಣೆ ಮಾಡತಕ್ಕದ್ದು

(ಶ್ರೀ ಎಸ್. ಗೋಪಾಲ ಸಾರೆನ್ನ)

ಅಗತ್ಯ. ರೈತರಿಗೆ ರಕ್ಷಣೆ ಕೊಡಬೇಕು. ಆದರೆ ಈ ರೀತಿ ಇಂಥ ಕಾನೂನನ್ನು ಮುಂದುವರಿಸುವುದು ಸರಿಯಲ್ಲ. ದೇಶದಲ್ಲಿ ಕೃಷಿ ಉತ್ತಮವಾಗಬೇಕು. ಭೂಸುಧಾರಣೆ ಆದಷ್ಟು ಬೇಗನೆ ಜಾರಿಗೆ ತರಬೇಕಾದುದು ಅಗತ್ಯವಾಗಿದೆ. ಏಕೆಂದರೆ ದೇಶದಲ್ಲಿ ಹೆಚ್ಚು ಉತ್ಪತ್ತಿಯಾಗುವಂತೆ ಮಾಡಬೇಕಾಗಿದೆ. ಇದು ನಮ್ಮ ಸ್ವತಂತ್ರ ಪಕ್ಷದ ಧ್ಯೇಯ. ಆದರೆ ಒಂದು ಕಾನೂನು ತಂದು ರೈತ ಮತ್ತು ಧಣಿಯ ನಡುವೆ ಗೊಂದಲ ಎಬ್ಬಿಸಿ ರೈತ ಮನೆ ಮಠ ಕಳೆದುಕೊಳ್ಳುವಂತೆ ಮಾಡುವುದು ಸರಿಯಲ್ಲ. ಇಂಥ ಮಸೂದೆಯನ್ನು ತಂದು ರೈತನಿಗೆ ವಂಚನೆ ಮಾಡುವುದು ಒಳ್ಳೆಯದಲ್ಲ. ರಾಷ್ಟ್ರದಲ್ಲಿ ಗಂಡಾಂತರ ಉಂಟು ಮಾಡುವುದು ಬೇಡ. ಭೂಸುಧಾರಣೆಯ ಕಾನೂನನ್ನು ಜಾರಿಗೆ ತಂದು ರಾಮ ರಾಜ್ಯ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಪರಿಸ್ಥಿತಿ ಬೇರೆಯಾಗಿದೆ. ರೈತರು ಭೂಮಿ ಬಿಟ್ಟು ಹೋಗುವಂತೆ ಮಾಡಬೇಡಿ. ದೇಶದಲ್ಲಿ ಸುಖೀ ಜೀವನವನ್ನು ಕಲ್ಪಿಸಿ ಕೊಡುವಂತೆ ಮಾಡುವುದೇ ನಮ್ಮ ಸ್ವತಂತ್ರ ಪಕ್ಷದ ಧ್ಯೇಯವಾಗಿದೆ. ಆದ್ದರಿಂದ ಇಂಥ ಮಸೂದೆಯನ್ನು ತಂದು ಜನರಿಗೆ ವಂಚನೆ ಮಾಡಬೇಡಿ ಎಂದು ಹೇಳುತ್ತೇನೆ. ಈ ಮಸೂದೆಗೆ ಜೀವದಾನ ಕೊಡುವುದರಿಂದ ಪರಿಣಾಮ ಒಳ್ಳೆಯದಾಗಲಾರದು. ಆದುದರಿಂದ ಜೀವದಾನ ಮಾಡಬೇಡಿ. ರೈತನಿಗೆ ರಕ್ಷಣೆ ಕೊಡದಿದ್ದರೆ ರಾಜಾಜಿಯವರು ಹೇಳಿದ ಹಾಗೆ ಹೋರಾಟ ನಡೆಸಬೇಕಾಗುತ್ತದೆ. ಅನ್ನ ಸತ್ಯಾಗ್ರಹ ಮಾಡಬೇಕಾಗುತ್ತದೆ. ಇದಕ್ಕೆ ಜನ ಮುಂದೆ ಬರುತ್ತಾರೆ. ಬರೀ ಓಟು, ಮತ ಗಳಿಸಲು ಭೂಸುಧಾರಣೆ ಕಾನೂನನ್ನು ಮಾಡುವುದು ಸರಿಯಲ್ಲ. ಆದರ್ಶ ಕಾನೂನು ಮಾಡಿ ಸುಖೀ ಜೀವನ ಉಂಟು ಮಾಡಬೇಕು. ಇಂಥ ಜೀವದಾನ ಕೊಡುವ ಮಸೂದೆಯನ್ನು ತರುವುದು ಒಳ್ಳೆಯದಲ್ಲ ಇನ್ನೊಂದು ಸಲ ಈ ರೀತಿಯಾಗದಂತೆ ನೋಡಿಕೊಳ್ಳಬೇಕು. ಏಕೆಂದರೆ ರೈತರು ಭೂಮಿ ಬಿಟ್ಟು ಹೋಗುವುದರಿಂದ ಅದು ಬಂಜರು ಬೀಳುತ್ತದೆ ಹಾಗೂ ಕೃಷಿಯಾಗುವುದಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†Sri V. S. PATIL (Belgaum I).—Sir, so far as this Bill is concerned, it is a very short Bill. I do not think any section of this House will ask the Hon'ble Minister not to press for it because it extends the life of the protection given to the tenants. The only thing which they are against is the delay that is being caused in enforcing the permanent measure for the protection of these tenants. They are fed up with these temporary measures. How long these temporary measures are to continue? There must be some time-limit and some reasonableness.

Mr. SPEAKER.—Is the member suggesting extension by another two years now only?

†Sri V. S. PATIL.—Sir, I do not know whether our Ministry is changing only in terms of temporary measures because it appears that they are also not quite sure that they will remain permanent. That is why this word 'temporary' is pervading in every sphere of their life. That should not be the case because we are dealing with a very important subject namely, land reforms for the purpose of increasing the national income. That must be the aim. These temporary matters as far as possible should be eliminated. They will not benefit either from the point of view of national income or from the point of view of tenants. Some of the Hon'ble Speakers said that tenants were not paying rent for about six years and still they could not be evicted by the landlords. I should like to say, Sir, that if the rents are not paid, the courts are open to the landlords and they can file suits and recover the rent. There is no prohibition under this Act for recovering the reasonable rent or legal rent allowed by law. So, landlords cannot complain that they are not receiving the rents. The courts are there to recover

their dues. The only thing is that protection is given that they cannot be evicted from the land till the permanent measure is brought into force. My submission is that the excuse put forth by the Government for the non-implementation of the permanent measure cannot be sustained. We have been told by the Government several times on the floor of this House that there is some lacuna here and there and that the Supreme Court has ruled in a particular way or the High Court has given a ruling about the interpretation of a particular clause which may come in the way of implementation of the permanent measure. If that is the case, one or two sections or a few provisions may have to be suspended so far as the particular area is concerned. That does not mean that the Supreme Court or the High Court is in any way over-ruling the whole Act or deciding that the whole of the Land Reforms Bill as passed by this Legislature *ultra vires*. There is no decision to that effect. I am suggesting to the Hon'ble Members on both sides that the permanent measure should be immediately brought into force and only the provisions which are likely to be declared as void may be kept in suspension. We have to establish a permanently the rights of the people so far as land is concerned. If these temporary measures are to continue, I do not think that either the tenant or the landlord or the Government or the general public in the country is going to be benefited. So, in the interest of the nation as such, the Government must see their way as to how the permanent measure can be brought into force immediately. It is no use coming before this Hon'ble House every year for extending the life of the measure. At the same time I do not say that this measure should be thrown out because it will have a very disastrous effect and that is why I should like to request the Hon'ble Minister in charge to see that permanent measure is brought into force immediately.

With these remarks I request him to see that we are out of this difficulty.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಅಧ್ಯಕ್ಷರೇ, ಈ ಅಲ್ಪಾವಧಿಯ ಒಕ್ಕಲುತನ ರಕ್ಷಣೆಯ ತಿದ್ದುಪಡಿಯ ಮಸೂದೆಯನ್ನು ನಾನು ಸ್ವಾಗತ ಮಾಡುವ ಹೊತ್ತಿಗೆ ಈ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ.

ಈ ತಿದ್ದುಪಡಿ ಮಸೂದೆಯನ್ನು ಮಂಡಿಸುವಾಗ ನಮ್ಮ ಕಂದಾಯ ಮಂತ್ರಿಗಳು ಹೇಳಿದರು: ಸ್ವತಂತ್ರಪಾರ್ಟಿಯವರು ರಾಜ್ಯಾಂಗಕ್ಕೆ ತಿದ್ದುಪಡಿ ತರಬೇಕಾಗಿ ಪ್ರಯತ್ನ ಮಾಡುತ್ತಿದ್ದಾರೆ ಎಂದು.

Mr. SPEAKER.—The Bill is not concerned with it.

Sri A. KRISHNA SHETTY.—He spoke about it and I am replying

Mr. SPEAKER.—The Hon'ble Member may finish his arguments firs and if there is time left, he may refer to other things.

ಶ್ರೀ ಎ. ಕೃಷ್ಣಶೆಟ್ಟಿ.—ಅದಕ್ಕೆ ಹೇಗೆ ವಿರೋಧವಾಗಿದೆಯೆಂದು ಹೇಳಿದರು.

ಕಾಫಿ ತೋಟಗಳಿಗೆ ಸ್ವಲ್ಪ ರಿಯಾಯಿತಿ ಕೊಡುತ್ತೇವೆ, ಸೀಲಿಂಗ ಕಡಿಮೆ ಮಾಡುವ ಹೊತ್ತಿಗೆ ಎಂದು ಹೇಳಿದರು. ಅಡಿಕೆ ತೋಟಕ್ಕೂ ರಿಯಾಯಿತಿ ಕೊಡಬೇಕಾಗುತ್ತದೆಂದು ಹೇಳಿದರು. ಸ್ವತಂತ್ರ ಪಾರ್ಟಿಯವರು ಹೊರಗೆ ಕೊಡುವ ಉಪದ್ರವಕ್ಕಿಂತಲೂ ಕಾಂಗ್ರೆಸ್ಸಿನವರೇ ಸ್ವತಂತ್ರ ಪಕ್ಷದ ಭಾವನೆ ಹಿಂದಿದ್ದು ಅದಕ್ಕೆ ಅವರು ಅಡ್ಡಿ ಬಂದಿದ್ದಾರೆ.

Mr. SPEAKER.—The Hon'ble Member must remember that we are dealing only with the Bill and not on any side remark thrown by others which should be ignored.

ಶ್ರೀ ಎ. ಕೃಷ್ಣಶೆಟ್ಟಿ.—ಮತ್ತೆ ಇದರಲ್ಲಿ 2 ತಿದ್ದುಪಡಿಗಳಿವೆ, ದೇವಸ್ಥಾನದ ಮಟ್ಟಿಗೆ ಮತ್ತು ಸರಕಾರದ ಮಟ್ಟಿಗೆ ಇದನ್ನು ಅನ್ವಯಿಸಬಾರದು ಎಂದು ನನಗೆ ಅನಿಸುತ್ತದೆ, ಹಾಗಾದರೆ ದೇವರು ಮನುಷ್ಯನಿಗಿಂತಲೂ ಕೆಟ್ಟವನೇ! ದೇವರ ಮಟ್ಟಿಗೆ ಹೇಳುವುದಾದರೆ, ಮನುಷ್ಯನಿಗಿಂತಲೂ ಹೆಚ್ಚಿನ ಒಳ್ಳೆಯ ಗುಣಗಳು ಇರಬೇಕು. ಮನುಷ್ಯರ ಭೂಮಿ ಒಕ್ಕಲು ತೆಗೆಯುವುದಕ್ಕೆ ಸಾಧ್ಯವಿಲ್ಲ. ದೇವರ ಭೂಮಿಯನ್ನು ಸರಕಾರದ ಭೂಮಿಯನ್ನು ತೆಗೆಯಬಹುದು ಅಂದರೆ ಇದರ ಅರ್ಥ ಏನಾಗುತ್ತದೆ ಎನ್ನುವುದನ್ನು ನಾವೂ ನೀವೂ ನೋಡುವುದು ಅಗತ್ಯ. ಈ ಒಂದು ಕಾನೂನಿನ ಉದ್ದೇಶ ಒಕ್ಕಲಿನ ರಕ್ಷಣೆ ಮಾಡಬೇಕೆಂಬುದು ಈ ಒಂದು ಕಾನೂನಿನ ಮೇರೆಗೆ ಒಕ್ಕಲಿನಿಂದ ಗೇಣಿ ವಸೂಲು ಮಾಡುವುದಕ್ಕೆ ಭೂಮಾಲೀಕರಿಗೆ ಬೇಕಾದಷ್ಟು ಅವಕಾಶವಿದೆ. ಆದರೆ ಅದಕ್ಕೆ ರಶೀತಿ ಕೊಡುವ ಅನುಕೂಲ ನಮ್ಮ ಜಿಲ್ಲೆಯಲ್ಲಿಲ್ಲ. ಇದೇ ಹೊತ್ತಿಗೆ ಲ್ಯಾಂಡ್ ರಿಕಾರ್ಡ್ಸ್ ರಿಜಿಸ್ಟರು ಇಲ್ಲ ಮತ್ತು ಧಣಿ-ಗೇಣಿ ಒಕ್ಕಲು ವಿವಾದ ದೊಡ್ಡ ರೀತಿಯಲ್ಲಿ ನಡೆಯುತ್ತಾ ಇದೆ. 1956 ನೆಯ ಇಸವಿಯ ಕಾನೂನಿಗಿಂತ ಮೊದಲು ನಮ್ಮ ಜಿಲ್ಲೆ ಅದು ಮದ್ರಾಸ್ ಪ್ರಾಂತ್ಯದಲ್ಲಿತ್ತು, ಹಾಗೆ ನಮ್ಮ ಜಿಲ್ಲೆ ಮದ್ರಾಸು ಪ್ರಾಂತ್ಯದಲ್ಲಿರುವಾಗ ಗೇಣಿ ರಕ್ಷಣೆ ಕಾನೂನ ಬಂದಿತು. ಈಗ್ಗೆ 8 ವರ್ಷ ಆಯಿತು. ಇಷ್ಟು ವರ್ಷಗಳಿಂದ ಗೇಣಿ ರಕ್ಷಣೆ ಕಾನೂನಿನ ವ್ಯಾಪ್ತಿಯೊಳಗೆ ನಮ್ಮ ಜಿಲ್ಲೆಯ ರೈತರು ಇದ್ದರು. ಆದರೆ ಇದರ ಮಧ್ಯೆ 10 ಸಾವಿರಕ್ಕಿಂತಲೂ ಮಿಗಿಲಾಗಿ ಗೇಣಿ ಒಕ್ಕಲನ್ನು ಎತ್ತಿ ಹಾಕಿದ್ದಾರೆ. ಇದರ ಬಗ್ಗೆ ರಕ್ಷಣೆ ಇದ್ದರೆ, ಗೇಣಿ ತೆಗೆದುಕೊಳ್ಳುವುದಕ್ಕೆ ಮಾತ್ರ ರಕ್ಷಣೆ ಇದೆ, ಬೇರೆ ರಕ್ಷಣೆ ಇಲ್ಲ. ಈ ರೀತಿ ಇದ್ದರೆ ಭೂಮಿಯಲ್ಲಿ ಉತ್ಪತ್ತಿ ಮಾಡಿ ಜೀವನ ಮಾಡುವುದಕ್ಕೆ ಸಾಧ್ಯವಿದೆಯೊ? ಭೂಮಿಯನ್ನು ಅವಲಂಬಿಸಿರುವ ರೈತ ಮುಂದುವರಿಯಲು ಅವಕಾಶವಿದೆಯೆ ಎಂಬುದನ್ನು ನೋಡಬೇಕಾಗಿದೆ. ಆದ್ದರಿಂದ ಹೆಚ್ಚಿನ ಜನರಿಗೆ ಅನ್ವಯಿಸಿ ಭೂಮಿ ಉತ್ಪಾದನೆ ಹೆಚ್ಚು ಮಾಡುವ ಪ್ರಯತ್ನವಿರುವ ಈ ಕಾಲದಲ್ಲಿ, ಹಿಂದುಳಿದ ಜನತೆಯ ಸ್ಥಿತಿಯನ್ನು ಸುಧಾರಿಸುವ ಈ ಒಂದು ಕಾನೂನು ಎಲ್ಲ ಕಾನೂನುಗಳಿಗೂ ಮೊದಲು ಬರಬೇಕಾಗಿತ್ತು.

4-30 P.M.

ಆದರೆ ಇದನ್ನು ಇನ್ನೂ ಹಿಂದಕ್ಕೆ ಹಾಕುವುದರಿಂದ ನಿಜವಾಗಿಯೂ ನಾವು ಒಂದು ಪ್ರಜಾಪ್ರಭುತ್ವ, ಸಮಾಜ ವಾದವನ್ನು ತರಲಿಕ್ಕೆ ಸಾಧ್ಯವಾಗುವುದಿಲ್ಲ, ಈ ವಿಷಯದಲ್ಲಿ ಸರ್ಕಾರ ಹಿಂದಕ್ಕೆ ಸರಿಯುತ್ತಾ ಇದೆ ಎಂದು ಹೇಳುವುದು ಇದರಿಂದ ಅರ್ಥವಾಗುತ್ತದೆ. ಆದ್ದರಿಂದ ನಾನು ಸರಕಾರದವರಿಗೆ ವಿನಂತಿ ಮಾಡುವ ಹೊತ್ತಿಗೆ ಈ ಮಸೂದೆಯನ್ನು ಬೇಗ ಜಾರಿಗೆ ತರಬೇಕೆಂದು ಹೇಳಿದಂತಹ ಅನೇಕ ಎಂ. ಎಲ್. ಎ. ಗಳು, ಗೋಪಾಲಗೌಡರು, ಮುಕ್ತಣ್ಣಪ್ಪನವರು ಮತ್ತು ಇನ್ನೂ ಇತರರು ಇದ್ದಾರೆ, ಅವರಿಗೆ ನಾನು ಹೇಳುವುದು ಇಷ್ಟೆ. ಆ ರೀತಿ ಇಲ್ಲಿ ಮಾತನಾಡುವುದು ಮಾತ್ರವಲ್ಲದೆ ಜನತೆಯನ್ನು—ಮೊನ್ನೆ ವಿದ್ಯಾರ್ಥಿಗಳು ಸಂಘಟನೆ ಮಾಡಿಕೊಂಡು ಯಾವ ರೀತಿ ತಮ್ಮ ಬೇಡಿಕೆಗಳನ್ನು ಪಡೆದರೋ ಅವರು ಕೇಳಿದ್ದುದಕ್ಕಿಂತ ಹೆಚ್ಚಿಗೆ ಅದೇ ರೀತಿಯಲ್ಲಿ ರೈತರನ್ನು ಸಂಘಟಿಸಿ ಅವರ ಕೇಳಿಕೆಗಳನ್ನು ಸರ್ಕಾರದ ಮುಂದೆ ಮೊರೆ ಇಟ್ಟು ಅದನ್ನು ಈಡೇರಿಸಿಕೊಳ್ಳುವಂತೆ ಸಹಾಯವಾಗುವಂತಹ ಕೆಲಸ ಮಾಡುವುದು ಬಹಳ ಅಗತ್ಯ ಉಂಟು, ಅದನ್ನು ಮಾಡದೇ ನಿರ್ವಾಹವೇ ಇಲ್ಲ. ಅವರೆಗೂ ನಾವು ಸುಮ್ಮನೆ ಕೂಡುವುದಿಲ್ಲ. ಆದ್ದರಿಂದ ಈ ಕಾನೂನನ್ನು ಈ ವರ್ಷದಲ್ಲೇ ಜಾರಿಗೆ ತರಬೇಕು ಜಾರಿಗೆ ತರಲು ಪ್ರಯತ್ನ ಮಾಡಬೇಕು, ಹಾಗೆ ಮಾಡದೇ ಯಾವ ಒಂದು ಸದುದ್ದೇಶದಿಂದ ಕಾನೂನನ್ನು ಮಾಡಿದೇಯೋ ಅದರ ಪ್ರಯೋಜನ ರೈತರಿಗೆ ಸಿಕ್ಕದೇ ಒಕ್ಕಲು ಎದ್ದು ಹೋಗುತ್ತಾ ಇದೆ. ಮತ್ತು ಭೂಮಿ ಭೂಮಾಲೀಕರ ವಶವಾಗುತ್ತಾ ಇದೆ. ಇಂತಹ ಒಂದು ಅನ್ಯಾಯವಾಗುತ್ತಾ ಇದೆ, ಅದು ನಿಧಾನವಾಗುವುದರಿಂದ. ಆದ್ದರಿಂದ ಭೂಸುಧಾರಣೆಯ ಕಾನೂನನ್ನು ಬೇಗ ಜಾರಿಗೆ ತರಬೇಕೆಂದು ಹೇಳಿ ಈ ಕಾನೂನನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಗೇಣಿದಾರರನ್ನು ಒಕ್ಕಲೆಬ್ಬಿಸಿದಂತೆ ತಾತ್ಕಾಲಿಕ ರಕ್ಷಣೆಯನ್ನು ಕೊಡುವ ಸಂಬಂಧವಾದ ಈ ತಿದ್ದುಪಡಿ ಬಿಲ್ಲು ಆಗಿಂದಾಗ್ಗೆ ಈ ಸಭೆಯ ಮುಂದೆ ಬರುತ್ತಾ ಇದೆ. ಈ ರೀತಿ ತಾತ್ಕಾಲಿಕವಾಗಿ ಮಾಡುವುದಕ್ಕೆ ಬದಲಾಗಿ ಲ್ಯಾಂಡ್ ರಿಫಾರಂಸ್ ಆಕ್ಟ್ ಜಾರಿಗೆ ತರುವ ತನಕ ಇದು ಜಾರಿಯಲ್ಲಿರತಕ್ಕದು ಎಂದು ಒಂದೇ ಸಾರಿ ಕಾನೂನನ್ನು ಮಾಡಿದರೆ ಪದೇ ಪದೇ ಸರ್ಕಾರಕ್ಕೂ ದೇಶಕ್ಕೂ ಈ ಬಗ್ಗೆ ಆಗತಕ್ಕ ಖರ್ಚು ಉಳಿಯುತ್ತದೆ. ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತವೆ. ಆದ್ದರಿಂದ ದಯಮಾಡಿ ಆ ರೀತಿ ಮಾಡಿ ಏಕೆಂದರೆ ಲ್ಯಾಂಡ್ ರಿಫಾರಂಸ್ ಆಕ್ಟನ್ನು ತರುತ್ತೀರೋ ಬಿಡುತ್ತೀರೋ ಅದು ಅನುಮಾನಾಸ್ಪದ ಮತ್ತು ವಿವಾದಾಸ್ಪದವಾದ ವಿಷಯವಾಗಿದೆ. ಹಾಗಿರುವಾಗ ಅದನ್ನು

ಯಾವಾಗ ಜಾರಿಗೆ ತರುತ್ತೀರೋ ಅಲ್ಲಿಯವರೆಗೂ ಈ ಬಿಲ್ಲು ಜಾರಿಯಲ್ಲಿರುತ್ತದೆ ಎಂದು ಈ ಕಾನೂನನ್ನು ಬದಲಾಯಿಸುವುದು ಒಳ್ಳೆಯದು. ನಮ್ಮಲ್ಲಿ ಒಂದು ಗಾದೆ: ಹಾವು ಸಾಯಬಾರದು, ಕೋಲು ಮುರಿಯಬಾರದು ಎಂದು ಇಂತಹ ನೀತಿ ಸರ್ಕಾರದ ನೀತಿಯಾಗಿದೆ. ಇದಕ್ಕೆ ಅವಕಾಶ ಕೊಡದಂತೆ ಲ್ಯಾಂಡ್ ರಿಫಾರಂಸ್ ಆಕ್ಟ್ ಜಾರಿಗೆ ತರುವುದಿಲ್ಲ ಎಂದು ಹೇಳಿ ಮಂತ್ರಿಗಳು ಹೇಳಿದರು, ಯಾವುದೋ ಒಂದು ಭಾಗಕ್ಕೆ ಎಂದರೆ ಮಂಗಳೂರೋ ಅಥವಾ ಸೌತ್ ಕೆನರಾಕ್ಕೋ ಅದು ಅನ್ವಯವಾಗುವುದಿಲ್ಲ, ಬಾಕಿ ಕಡೆ ಲ್ಯಾಂಡ್ ರಿಫಾರಂಸ್ ಜಾರಿಗೆ ತರಬಹುದು ಎಂದು 17 ನೇ ಸೆಕ್ಷನ್‌ನ್ನು ತಿದ್ದುಪಡಿ ಮಾಡದೇ ಜಾರಿಗೆ ತರುವುದಕ್ಕೆ ಅವಕಾಶವಿದೆ, ತರುತ್ತೇವೆ ಎಂದು ಇದೇ ಸಭೆಯಲ್ಲಿ ಹೇಳಿದರು. ಈಗ ಆ ಮಾತನ್ನು ಬದಲಾಯಿಸಿ ನಮ್ಮ ಮುಂದೆ ಈ ಮಸೂದೆಯನ್ನು ಇಟ್ಟಿದ್ದಾರೆ ಸರ್ಕಾರದವರು ಆಗಿಂದಾಗ್ಗೆ ತಮ್ಮ ಮಾತುಗಳನ್ನು ಬದಲಾಯಿಸಿಕೊಂಡು ಕಾಲಕ್ಕೆ ತಕ್ಕಂತೆ ಹೇಳುವುದು ಸರಿಯೇ ಎಂದು ಅವರನ್ನು ಪ್ರಶ್ನೆ ಮಾಡುತ್ತೇನೆ. ನೀವು ಯಾವ ಖಚಿತವಾದ ಅಭಿಪ್ರಾಯವನ್ನೂ ಹೇಳುತ್ತ ಇಲ್ಲ. ನಮ್ಮಲ್ಲಿ ಇನ್ನೊಂದು ಗಾದೆ ಹೇಳುತ್ತಾರೆ, ಮಕ್ಕಳನ್ನು ಒಂದು ಕೈಯಲ್ಲಿ ತೂಗುವುದು ಮತ್ತೊಂದು ಕೈಯಲ್ಲಿ ಚಿಗುಟುವುದು ಎಂದು. ಆ ರೀತಿ ಒಂದು ಕಡೆ ಜಮೀನ್‌ದಾರರಿಗೆ ನಿಮ್ಮ ಜಮೀನನ್ನು ಕಿತ್ತುಕೊಳ್ಳುವುದಿಲ್ಲ ಎಂದು ಹೇಳುವುದು ಮತ್ತೊಂದು ಕಡೆ ಟೆನೆಂಟುಗಳಿಗೆ ಆ ಜಮೀನನ್ನು ನಿಮಗೇ ಕೊಡಿಸುತ್ತೇವೆ ಎಂದು ಹೇಳುವುದು ಈ ರೀತಿ ಒಂದು ಕಡೆ ಅಳುತ್ತಾರೆ ಎಂದು ತೊಟ್ಟಿಲನ್ನು ತೂಗುವುದು ಮತ್ತೊಂದು ಕಡೆ ಅಳಲಿ ಎಂದು ಚಿಗುಟುವುದು ಇಂತಹ ಒಂದು ನೀತಿಯನ್ನು ಅನುಸರಿಸುತ್ತಾ ಇರುವುದು ಸರ್ಕಾರದವರಿಗೆ ನ್ಯಾಯವಲ್ಲ. ಖಚಿತವಾಗಿ ಹೇಳಿ, ಭೂಸುಧಾರಣೆಯನ್ನು ಜಾರಿಗೆ ತನ್ನಿ ಇಲ್ಲದೇ ಇದ್ದರೆ ಜಾರಿಗೆ ತರುವುದಿಲ್ಲ ಎಂದು ಹೇಳಿ ಯಾರಾದರೂ ಒಬ್ಬರು ಬದುಕುತ್ತಾರೆ. ಮುಂದೆ ಆದರೂ ತಾವು ಈಗ ಅನುಸರಿಸುತ್ತಾ ಇರುವಂತಹ ನೀತಿಯನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ತಾವು ಹೆರಿಡಿಟರಿ ವಿಲೇಜ್ ಆಫೀಸರ್ಸ್ ಆಕ್ಟನ್ನು ಜಾರಿಗೆ ತಂದರೆ ಎಷ್ಟೋ ಜನ ವಿಲೇಜ್ ಆಫೀಸರ್ಸ್ ಮನೆಗೆ ಹೋಗುತ್ತಾರೆ. ಅಂತಹವರು ಎಷ್ಟೋ ಜನ ತಮ್ಮ ಜಮೀನನ್ನು ಗುತ್ತಿಗೆ ವಾರಕ್ಕೆ ಕೊಟ್ಟಿರುತ್ತಾರೆ, ಇದನ್ನು ಜಾರಿಗೆ ತಂದರೆ ಅಂತಹವರಿಗೆ ತೊಂದರೆಯಾಗುತ್ತದೆ, ಅವರ ಜಮೀನನ್ನು ವಿಲೇವಾರಿ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅಷ್ಟು ಮಾಡಿ ಅದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಗೇಣಿ ರೈತರಿಗೆ ರಕ್ಷಣೆ ಕೊಡುವ ವಿಷಯಕ್ಕೆ ಮಾನ್ಯ ಸಭೆಯ ಸದಸ್ಯರು ಯಾರೊಬ್ಬರದೂ ವಿರೋಧ ಕಂಡುಬರಲಿಲ್ಲ. ಅವರ ಭಾಷಣಗಳಲ್ಲಿ ಗೇಣಿ ರೈತರಿಗೆ ಬಹಳ ಅನ್ಯಾಯವಾಗುತ್ತಾ ಇದೆ ಎಂದು ಹೇಳುತ್ತಾ ಇದ್ದಾರೆ, ಅದನ್ನು ತಡೆಯಬೇಕೆನ್ನುವುದೇ ಈ ಟೆಂಪೊರೆರಿ ರಕ್ಷಣಾ ಕಾನೂನಿನ ಮೂಲ ಉದ್ದೇಶ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದ್ದರಿಂದ ಈ ಮಸೂದೆಗೆ ಬೆಂಬಲ ಕೊಟ್ಟ ಮಾನ್ಯ ಸದಸ್ಯರನ್ನೆಲ್ಲಾ ವಂದಿಸುತ್ತೇನೆ. ಆದರೆ ಅವರು ಕೆಲವು ಟೀಕೆಗಳನ್ನು ಮಾಡಿದ್ದಾರೆ ಅವು ಎಷ್ಟು ಸಕಾರಣವೋ ಗೊತ್ತಿಲ್ಲ ಏಕೆಂದರೆ ಸಭೆಯ ಮುಂದೆ ಇರುವ ಬಿಲ್ಲೇ ಬೇರೆ, ಆ ಟೀಕೆಗಳೇ ಬೇರೆ. ಭೂಸುಧಾರಣೆ ನಿಧಾನ ಮಾಡಿದ್ದು ಹಾನಿಕರ ಎಂದು ಹೇಳಿದ್ದು ಒಂದು ಕಾರಣವಿದ್ದರೂ ಜವಾಬ್ದಾರಿಯಿಂದ ಸರ್ಕಾರದವರು ಸಕಾರಣಗಳನ್ನು ಕೊಟ್ಟಮೇಲೆ ಮಾನ್ಯ ಸದಸ್ಯರೆಲ್ಲಾ ಅದನ್ನು ಒಪ್ಪಲೇ ಬೇಕು. ಆಡಳಿತ ವಹಿಸಿ 10-15 ವರ್ಷ ಆಡಳಿತದಲ್ಲಿರುವ ಲೋಪದೋಷಗಳನ್ನೆಲ್ಲಾ ಅರಿವು ಮಾಡಿಕೊಂಡು ಏನಾದರೂ ಸಕಾರಣ ಇದ್ದು ನಿಧಾನವಾಗಿ ನಡೆದಿದ್ದರೆ ಅದು ಅನ್ಯಾಯವಾಗುವುದಿಲ್ಲ. ಏಕೆಂದರೆ ಆತುರ ಆತುರವಾಗಿ ಎಲ್ಲರಿಗೂ ಒಂದೇ ರೀತಿಯ ಕಂದಾಯವನ್ನು ಹಾಕುವುದಕ್ಕಿಂತಲೂ ಏನಾದರೂ ಸಕಾರಣವಿದ್ದರೆ ಸ್ವಲ್ಪ ನಿಧಾನವಾದರೆ ಅದರಿಂದ ದೇಶಕ್ಕೆ ಅನ್ಯಾಯವಾಗುವುದಿಲ್ಲ ಎಂದು ಮೊದಲೇ ಹೇಳಿದ್ದೇನೆ. ಭೂಸುಧಾರಣೆಯನ್ನು ನಾವು ಆದಷ್ಟು ಬೇಗ ಜಾರಿಗೆ ತರಬೇಕೆಂದು ಪ್ರಾರಂಭದಲ್ಲಿ ಹೊರಟೆವು. ಅದರಲ್ಲೂ ಮಾನ್ಯ ಮಂಜಪ್ಪನವರು ಪೂರ್ತಿ ಕೆಲಸ ಮಾಡಿ ಮುಗಿಸಿ ಅದು ಸಿದ್ಧವಾಗಿದ್ದುದರಿಂದ ನಾನು ಅವರಿಗಿಂತಲೂ ಯುವಕ ಜಾರಿಗೆ ತರುವುದರಲ್ಲಿ ಏನಾದರೂ ಬೇರೆ ಉದ್ದೇಶವಿದ್ದಿದ್ದರೆ ಅಥವಾ ಏನಾದರೂ ಬೇರೆ ಉದ್ದೇಶವಿಟ್ಟುಕೊಂಡು ನಿಧಾನ ಮಾಡಿದ್ದೇವೆ ಎಂದರೆ ಅದು ಬಹಳ ಅಪರಾಧವಾಗುತ್ತದೆ. ಏಕೆಂದರೆ ಅವರೆಲ್ಲಾ ಅಷ್ಟೊಂದು ಕಷ್ಟಪಟ್ಟು ಒಂದು ಮಸೂದೆಯನ್ನು ತಯಾರುಮಾಡಿ, ದೇಶಕ್ಕೆ ಬಹಳ ಅವಶ್ಯಕವಾದ ಒಂದು ಬದಲಾವಣೆ ಮಾಡುವುದು ಅಗತ್ಯ ಎಂದಾಗ ಅದನ್ನು ಸಕಾರಣವಿಲ್ಲದೇ ನಿಧಾನ ಮಾಡುವುದು ಅಕ್ಷಮ್ಯ ಅಪರಾಧ. ನಾನು ಬಹಳ ಬೇಗ ಜಾರಿಗೆ ತರುವುದಕ್ಕೆ ಪ್ರಯತ್ನ ಪಟ್ಟೆ ನಾನು ರೆವಿನ್ಯೂ ಮಂತ್ರಿಯಾಗಿ ಒಂದು ವರ್ಷ 11 ತಿಂಗಳು 20 ದಿವಸ ಆಯಿತು. ಕೇರಳದಲ್ಲಿ ಅಗ್ರಿಕಲ್‌ಚರಲ್ ರಿಲೀಫ್ ಆಕ್ಟ್ ಪ್ರಕಾರ ಅದನ್ನು ಕೋರ್ಟಿನಲ್ಲಿ ಹೊಡೆದು ಹಾಕಿದರು. ಅಂತಹ ಪರಿಸ್ಥಿತಿಯಲ್ಲಿ, ನಾವು ಈಗಾಗಲೇ ಇದ್ದಂತಹ ಒಂದು ಭದ್ರವಾದ ಪುರಾತನವಾದ ಪದ್ಧತಿಯನ್ನು ಬದಲಾವಣೆ ಮಾಡಬೇಕಾದರೆ ನಮ್ಮ ಅಡಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಪಾಯವೂ ಕೂಡ ಭದ್ರವಾಗಿರಬೇಕು. ರೈತರು ಭೂಮಿಯನ್ನು ಅನುಭವಿಸುತ್ತಾ ಇರುವವರು ಭೂಮಿಯ ಮಾಲೀಕರು ಬೇರೆ ಅವರಿಗೆ ಅದರಲ್ಲಿ ವೆಸ್ಟೆಡ್ ಇಂಟರೆಸ್ಟ್ ಇದೆ, ಆದ್ದರಿಂದ ಯಾವುದಾದರೂ ಒಂದು ಕಾನೂನನ್ನು ತಂದರೆ ತಮ್ಮ ಮೂಲಭೂತ ಹಕ್ಕನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನವನ್ನು ಮಾಡುತ್ತಾರೆ, ಸುಪ್ರೀಂ ಕೋರ್ಟ್ ಅಲ್ಲ ಇನ್ನಾವುದಾದರೂ ಕೋರ್ಟ್ ಇದ್ದರೆ ಅಲ್ಲಿಗೂ ಕೂಡ ಹೋಗುತ್ತಾರೆ. ಆದ್ದರಿಂದ ನಾವು ಅವರಲ್ಲಿದ್ದ ಭೂಮಿಯನ್ನು ಕಿತ್ತು ಬಡವರಿಗೆ ಕೊಡುವಾಗ ನಾವು ಉಪಯೋಗಿಸತಕ್ಕ ಸಾಧನಗಳೂ ಕೂಡ ಭದ್ರವಾಗಿರಬೇಕು. ಆ ದೃಷ್ಟಿಯಿಂದ ಕೇಂದ್ರದವರಿಗೆ ಇರುವ ಪರಿಸ್ಥಿತಿ ತಿಳಿಸಿ ಏನು ಮಾಡಬೇಕೆಂದು ಅವರನ್ನು ಕೇಳಿದ್ದೇವೆ. 1962ನೆಯ ಇಸವಿ ಜುಲೈನಲ್ಲಿ ನಿಜಲಿಂಗಪ್ಪನವರ ಸರ್ಕಾರವಿತ್ತು. ಸೆಪ್ಟಂಬರ್—ಅಕ್ಟೋಬರ್‌ನಲ್ಲಿ ಅಧಿವೇಶನ ನಡೆಯುವಾಗ ತಿದ್ದುಪಡಿ ತಂದು ರಾಜ್ಯಾಂಗದ 31ನೆ ಆರ್ಟಿಕಲ್ ಬದಲಾಯಿಸುತ್ತೇವೆ, ಬಹುಶಃ 1962ನೆ ನವೆಂಬರಿನಲ್ಲಿ ಭೂಸುಧಾರಣೆ ಜಾರಿಗೆ ತರಬಹುದು ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ಅದೇ ರೀತಿ ಆಗಬಹುದೆಂದು ನಾವು ನಿರೀಕ್ಷೆಯಲ್ಲಿದ್ದೆವು. ಆದರೆ ಅಕ್ಟೋಬರಿನಲ್ಲಿ ಎಮರ್ಜೆನ್ಸಿ ಪ್ರಾರಂಭವಾಯಿತು. ಆಗ ಇಂಡಿಯಾ ಪೂರ್ಣವಾಗಿ ಕಳೆದುಕೊಳ್ಳುವ ಸ್ಥಿತಿ ಇತ್ತು. 'ಸಾಬರೇ ಹೋಗುವಾಗ ಗಡ್ಡಕ್ಕೆ ಗುದ್ದಾಡಿದರು' ಎಂಬಂತಾಗಬಾರದು. ಮೊದಲು ದೇಶ ಉದ್ಧಾರಮಾಡೋಣ, ದೇಶದ ರಕ್ಷಣೆ ಬಹಳ ಮುಖ್ಯ ಎಂದು ಕೇಂದ್ರದವರೂ ರಕ್ಷಣಾ ಕಾರ್ಯಕ್ಕೆ ಹೆಚ್ಚು ಗಮನಕೊಟ್ಟರು. ಕೇಂದ್ರ ಸರ್ಕಾರ ಬಜೆಟ್ ಅಧಿವೇಶನದಲ್ಲಿ ರಾಜ್ಯಾಂಗದ ತಿದ್ದುಪಡಿಗೆ ಒಪ್ಪಿಗೆ ಪಡೆಯಲು ಸಾಧ್ಯವಾಗಲಿಲ್ಲ. ಸ್ವತಂತ್ರ ಪಕ್ಷ ವಿರೋಧಿಸಿತು. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದ ಮಾತಿಗೆ ಸರ್ಕಾರ ಗೌರವ ಕೊಡಬೇಕೆಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ನೇಮಿಸಿ ರಾಜ್ಯಾಂಗದ 17ನೆಯ ತಿದ್ದುಪಡಿಯನ್ನು ಆ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು. ಆದುದರಿಂದ ರಕ್ಷಣಾ ದೃಷ್ಟಿಯಿಂದ ಕೇಂದ್ರ ಸರ್ಕಾರವನ್ನು ಜಾಗ್ರತೆ ತಿದ್ದುಪಡಿ ಮಾಡಬೇಕೆಂದು ಒತ್ತಾಯ ಮಾಡುವುದಕ್ಕೆ ಅವಕಾಶವಿಲ್ಲ. ಆದಷ್ಟು ಜಾಗ್ರತೆ ತಿದ್ದುಪಡಿ ಅಂಗೀಕಾರ ಪಡೆಯುವುದಾಗಿ ಹೇಳುತ್ತಿದ್ದಾರೆ. ಖಂಡಿತವಾಗಿ ಬೇಕಾದ ತಿದ್ದುಪಡಿ ಮಾಡಿ ಭೂಸುಧಾರಣೆಯನ್ನು ಆದಷ್ಟು ಶೀಘ್ರವಾಗಿ ಜಾರಿಗೆ ತರುತ್ತೇವೆ. ಯಾರೂ ಆ ವಿಚಾರದಲ್ಲಿ ಅನುಮಾನಪಡಬೇಕಾಗಿಲ್ಲ. ಯಾರ ಹಿತದೃಷ್ಟಿಯಿಂದ ಕಾನೂನಾಗಿದೆಯೋ ಅವರಿಗೆ ರಕ್ಷಣೆ ಕೊಡಲು ಸರ್ವ ಪ್ರಯತ್ನ ಮಾಡಿದ್ದೇವೆ; ಅದಕ್ಕೆ ಸಾಕಷ್ಟು ಮಹತ್ವ ಕೊಟ್ಟಿದ್ದೇವೆಂಬುದನ್ನು ಮಾನ್ಯ ಸದಸ್ಯರು ತಿಳಿಯಬೇಕು. ಮಾನ್ಯ ಕಡಿದಾಳ್ ಮಂಜಪ್ಪನವರು ಕೇಂದ್ರ ಸರ್ಕಾರ ಸಿದ್ಧವಾಗಿದೆ. ನಮ್ಮ ಸರ್ಕಾರ ಸಿದ್ಧವಾಗಿಲ್ಲ ಎಂದು ಹೇಳಿದರು. ನಾವು ಬರೆದ ಪತ್ರಕ್ಕೆ 4 ತಿಂಗಳಾದರೂ ಖಚಿತವಾದ ಉತ್ತರ ಬಂದಿಲ್ಲ. ಅದು ಅವರಿಗೆ ಗೊತ್ತಿದೆ. ರಾಜ್ಯಾಂಗ ತಿದ್ದುಪಡಿಯಾಗುವವರೆಗೆ ಯಾರೂ ಕಾನೂನನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಆದುದರಿಂದ ಸ್ವಲ್ಪ ನಿಧಾನವಾಗಿದೆ. ನಮ್ಮಲ್ಲಿ ಸೀಲಿಂಗಿಗಿಂತ ಹೆಚ್ಚಾಗಿ ಜಮೀನುಳ್ಳವರಿಲ್ಲ. ಈಗ ಅಂಥವರ ಸಂಖ್ಯೆ ಕಡಮೆಯಾಗಿದೆ. ಮುಕ್ಕಣ್ಣಪ್ಪನವರು ಹೇಳಿದಹಾಗೆ ಜಮೀನನ್ನು ಯಾರ ಯಾರ ಹೆಸರಿಗೋ ವರ್ಗಾಯಿಸಿದ್ದಾರೆ. ಕೇಂದ್ರಕ್ಕೆ ಎಷ್ಟು ಆತುರವಿದೆಯೋ ನಮಗೂ ಕೂಡ ಅಷ್ಟೇ ಆತುರವಿದೆ. ಹಾಗಿಲ್ಲವೆಂದು ಹೇಳುವುದು ಸರಿಯಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕಲೆತು ಈ ಕಾರ್ಯವನ್ನು ಮಾಡಬೇಕಾಗಿದೆ. ಅದನ್ನು ಮಾಡುತ್ತಿದ್ದೇವೆ.

ಇನ್ನೊಂದು ವಿಚಾರವನ್ನು ಹೇಳಿದರು. ಕೇರಳದ ವಿಚಾರದಲ್ಲಿ ಸುಪ್ರೀಮ್ ಕೋರ್ಟ್ ತೀರ್ಮಾನಪಿದ್ದರೂ ಸಹ ಅದು ಅನ್ವಯವಾಗದಿರುವ ಭಾಗಗಳಲ್ಲಾದರೂ ಏಕೆ ಭೂಸುಧಾರಣೆಯನ್ನು ಜಾರಿಗೆ ತರಬಾರದೆಂದು ಅವರು ಪ್ರಶ್ನೆ ಮಾಡಿದರು. ಶ್ಯಾನುಭೋಗರು ತರಲೆ ಮಾಡುತ್ತಿದ್ದಾರೆ, ಪಹಣಿಯನ್ನು ಸರಿಯಾಗಿ ಬರೆಯದೆ ತೊಂದರೆಯಾಗಿದೆ, ಅವರು ಯಾರ ಮಾತನ್ನೂ ಕೇಳುತ್ತಿಲ್ಲ ಎಂದು ಹೇಳಿದರು. ಮೊದಲು ಮಾಡಿದ ಕಾನೂನು ಡಿಫೆಕ್ಟಿವ್ ಎಂದು ಕೇಸು ಹೈಕೋರ್ಟಿಗೆ ಹೋಯಿತು. ನಂತರ ಸುಪ್ರೀಂ ಕೋರ್ಟಿಗೆ ಹೋದಮೇಲೆ ಸ್ಟೇ ಆರ್ಡರು ಬಂತು. ಅದಿರುವಾಗ ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ಭದ್ರವಾದ ಕಾನೂನು ಮಾಡಬೇಕೆಂದು ಸ್ವಲ್ಪ ನಿಧಾನಮಾಡಿದ್ದೇವೆ. ಅದೇ ಮುಖ್ಯವಾದ ವಿಷಯ. ನಮ್ಮಲ್ಲಿ ಟೆನೆಂಟ್ಸ್ ಜಾಸ್ತಿ, ಅವರೇ ಮಾಲೀಕರಾಗಲಿ, ಉಳುವವನೇ ಹೊಲದ ಒಡೆಯನಾಗಲಿ ಎಂಬುದೇ ನಮ್ಮ ಆಶಯ.

Sri KADIDAL MANJAPPA.—I was telling that there has no legal impediment or constitutional impediment for enforcing the provisions relating to fixing quantum of rent or regulating the relationship between

the landlord and tenant, etc. There is absolutely no difficulty. In other States there are uniform laws of tenancy prevailing.

ಶ್ರೀ ಎಂ. ವಿ. ಕೃಷ್ಣಪ್ಪ.—ಕಡಿದಾಳ್ ಮಂಜಪ್ಪನವರು ಹೇಳಿದಹಾಗೆ ನಾವು ಕೋರ್ಟ್ ಶೀರ್ಷನದ ವ್ಯಾಪ್ತಿಗೊಳಪಡುವ ಭಾಗಗಳಲ್ಲಾದರೂ ಕಾನೂನನ್ನು ಜಾರಿಗೆ ತರೋಣ, ಮದ್ರಾಸು ಕರ್ಣಾಟಕ ಮತ್ತು ಇತರ ಕೆಲ ಭಾಗಗಳನ್ನು ಬಿಟ್ಟು ಉಳಿದ ಕಡೆ ಜಾರಿಗೆ ತರೋಣ ಎಂದಿದ್ದೆವು. ಆದರೆ ಬೇಗ ರಾಜ್ಯಾಂಗವು ತಿದ್ದುಪಡಿಯಾಗಬಹುದು, ಅದಾದಮೇಲೆ ಇಡೀ ದೇಶ ದಲ್ಲೆಲ್ಲಾ ಒಂದೇ ಸಲ ಜಾರಿಗೆ ತರೋಣ ಎಂದು ಸ್ವಲ್ಪ ನಿಧಾನಮಾಡಿದೆವು. ಅಷ್ಟೇ ವಿನಾ ಇನ್ನೇನೂ ಇಲ್ಲ.

ಟೆಂಪಲ್ ಲ್ಯಾಂಡ್ಸ್ ವಿಚಾರವನ್ನು ಕಡಿದಾಳ್ ಮಂಜಪ್ಪನವರು ಮತ್ತು ಗೋಪಾಲಗೌಡರು ಪ್ರಸ್ತಾಪಮಾಡಿದರು ; ಶ್ರೀಮಾನ್ ಕೃಷ್ಣಶೆಟ್ಟರೂ ಹೇಳಿದರು. ಗೇಣಿ ಮಾಡುವ ರೈತರಿಗೆ ಅನ್ಯಾಯ ವಾಗಿದೆ, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮರಕ್ಕೆ ಕಟ್ಟಿಹಾಕಿ ಹೊಡೆದಿದ್ದಾರೆ. ಆದರೆ ಎಲ್ಲರೂ ಟೆನೆಂಟ್ಸ್ ಎಂದು ಭಾವಿಸಬಾರದು. ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಇತ್ತೀಚೆಗೆ ವಿನಾಯಿತಿ ಕೋರಿಸಿರುವುದು ಎಲ್ಲಾ ದೇವಸ್ಥಾನಗಳಿಗೂ ಅನ್ವಯಿಸುವುದಿಲ್ಲ ಸರ್ಕಾರದಿಂದ ಮ್ಯಾನೇಜ್ ಮಾಡಲ್ಪಡುತ್ತಿರುವ ಮುಜರಾಯಿ ದೇವಸ್ಥಾನಗಳಿಗೆ ಮಾತ್ರ ಅನ್ವಯಿಸು ವುದು ; ಮಠಗಳಿಗೆ ಅನ್ವಯಿಸುವುದಿಲ್ಲ. ಹಾಗೆ ಮಾಡಿರುವುದಕ್ಕೆ ಕಾರಣವಿದೆ. 100-150 ದೇವಸ್ಥಾನ ಗಳು ಮಾತ್ರ ಸರ್ಕಾರದಿಂದ ಮ್ಯಾನೇಜ್ ಮಾಡಲ್ಪಡುತ್ತಿವೆ. ಒಟ್ಟು 300-400 ದೇವಸ್ಥಾನಗಳಿವೆ. ನಮ್ಮ ರಾಜ್ಯದಲ್ಲಿ 32 ಸಾವಿರ ಎಕರೆಗಳಷ್ಟು ಭೂಮಿಯಿರುವ ಒಂದು ದೇವಸ್ಥಾನ ಇದೆ. ಚಾಮರಾಜನಗರದಲ್ಲಿರುವ ದೇವಸ್ಥಾನಕ್ಕೆ ಹನ್ನೆರಡು ಗ್ರಾಮಗಳಿವೆ. ಹಾಗೆ ಬಿಳಿಗಿರಿರಂಗನ ಬೆಟ್ಟದ ದೇವಸ್ಥಾನಕ್ಕೆ ಸೇರಿದಂತೆ 32 ಸಾವಿರ ಎಕರೆಗಳಷ್ಟು ಭೂಮಿ ಇದೆ. ಇದು ಅಲ್ಲಿರುವ ಧರ್ಮದರ್ಶಿಗಳಿಗೆ ಸೇರಿದೆ. ಅಲ್ಲಿರುವ ಯಳಂದೂರಿನ ಜಹಗೀರುದಾರರು ಇದರ ಧರ್ಮದರ್ಶಿ ಗಳು ಇದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. He gets all the protection under the Tenancy Act ಬಡ ರೈತರ ಹೆಸರನ್ನು ಹೇಳಿಕೊಂಡು ಅವರಿಗೆ ರಕ್ಷಣೆ ಕೊಡಬೇಕು ಎಂದು ಹೇಳುವುದು ಸರಿಯೇ ? ಇಲ್ಲಿ ನೋಡಿದರೆ ಯಾರು ಬಡವರು ಎನ್ನುವುದು ತಮಗೆ ಗೊತ್ತಾಗುತ್ತದೆ. ಬೆಂಗಳೂರಿನ ಹತ್ತಿರವಲ್ಲೇ ಒಂದು ದೇವಸ್ಥಾನಕ್ಕೆ ಸೇರಿದಂತೆ ಎಂದರೆ ಬನಶಂಕರಿ ದೇವಸ್ಥಾನಕ್ಕೆ 136 ಎಕರೆಗಳಷ್ಟು ಜಮೀನು ಇದೆ. ಇದನ್ನು ಅಲ್ಲಿರುವ ಧರ್ಮದರ್ಶಿಗಳು ಅನುಭವಿಸಿಕೊಂಡು ಸರಕಾರಕ್ಕೆ 600 ರೂಪಾಯಿಗಳಷ್ಟು ಕಂದಾಯವನ್ನು ಕೊಡುತ್ತಿದ್ದಾರೆ. ಆದರೆ ಅವರು ಒಬ್ಬರು ಟೆನಂಟು ಅನುಭವಿಸಿಕೊಂಡು ನಾನೇ ಮಾಡುತ್ತಿದ್ದೇನೆಂದು ಹೇಳುತ್ತಿದ್ದಾರೆ. ಇದು ಬಸವನ ಗುಡಿಗೆ ಸೇರಿದಂತೆ ಇದೆ. ಇವೊತ್ತು ಈ ಜಮೀನನ್ನು ಸೈಟುಗಳಾಗಿ ಮಾಡಿಕೊಂಡು ಮಾರಿದರೆ ಸುಮಾರು 60 ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತದೆ. ಹಾಗೇನೇ ಬೆಂಗಳೂರಿಗೆ ಹತ್ತಿರದಲ್ಲಿ ಕುಮಾರ ಸುಬ್ರಹ್ಮಣ್ಯ ದೇವಸ್ಥಾನ ಎಂದಿದೆ ; ಇದಕ್ಕೆ ಸೇರಿದಂತೆ 140 ಎಕರೆಗಳಷ್ಟು ಭೂಮಿ ಇದೆ. ಇದನ್ನು ಯಾರು ಅನುಭವಿಸುತ್ತಿದ್ದಾರೆಂದರೆ ಅಲ್ಲಿರುವ ಶ್ಯಾನುಭೋಗರು ಅವರೇ ಅಲ್ಲಿಗೆ ಧರ್ಮ ದರ್ಶಿಗಳಾಗಿದ್ದಾರೆ. ಅವರೇ ಕಂದಾಯ ಕೊಡುತ್ತಿದ್ದಾರೆ ಮತ್ತು ಟೆನೆಂಟು ಎಂದೂ ಹೇಳುತ್ತಿ ದ್ದಾರೆ.

We have to give it up to that man because he is a tenant. He is paying rent to the temple and he wants protection under the Act. ಇದೇ ರೀತಿ ನಂಜನಗೂಡು ದೇವಸ್ಥಾನಕ್ಕೂ ನೂರಾರು ಎಕರೆಗಳಷ್ಟು ಭೂಮಿ ಇದೆ. ಅಲ್ಲಿರುವ ಧರ್ಮ ದರ್ಶಿಗಳೇ ಈ ಭೂಮಿಯನ್ನೆಲ್ಲಾ ಹೊಡೆದುಕೊಂಡು ಜೀವನ ನಡೆಸುತ್ತಿದ್ದಾರೆ. ನಂಜನಗೂಡಿನ ದೇವಸ್ಥಾನಕ್ಕೆ ಇನ್ನೂ ಹೆಚ್ಚಿನ ಆದಾಯ ಬರುವುದನ್ನು ಇವರುಗಳು ಕಡಿಮೆ ಮಾಡಿ ದೇವಸ್ಥಾನಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಇಂತಹ ಅನೇಕ ದೇವಸ್ಥಾನಗಳು ನಮ್ಮಲ್ಲಿವೆ. ಅಲ್ಲಿರುವ ಧರ್ಮ ದರ್ಶಿಗಳು ಭೂಮಿಯನ್ನು ಹಂಚಿಕೊಂಡು ಸುಖವಾಗಿ ಜೀವನ ನಡೆಸುತ್ತಿದ್ದಾರೆ. ಇದರ ಜೊತೆಗೆ ಸಬ್‌ಲೆಟ್ ಮಾಡಿಕೊಂಡು ಒಂದಕ್ಕೆ ಹತ್ತರಷ್ಟು ಸಂಪಾದನೆ ಮಾಡಿಕೊಂಡು ಜೀವನ ಮಾಡುತ್ತಿ ದ್ದಾರೆ.

ಶ್ರೀಮಾನ್ ಗೋಪಾಲ ಗೌಡರು ಮಾತನಾಡುತ್ತ, ಶ್ರೀಮಾನ್ ಕೃಷ್ಣಪ್ಪನವರು ಈಚೆಗೆ ಕಲ್ಲಿನ ದೇವರಾಗುತ್ತಿದ್ದಾರೆ. ಅವರಿಗೆ ಯಾವುದೂ ಕಣ್ಣಿಗೆ ಕಾಣುತ್ತಿಲ್ಲ ಎಂದು ಬಹಳ ಚೆನ್ನಾಗಿ ಒಂದು ಚಿತ್ರವನ್ನು ಚಿತ್ರಿಸಿದರು. ನಾನಾಗಲೇ ಹೇಳಿದಂತೆ ಶ್ಯಾನುಭೋಗರು ಒಬ್ಬರು ಟೆನಂಟಾಗಿದ್ದಾರೆ ಅವರನ್ನು ಬಿಟ್ಟುಬಿಡಿ ಎನ್ನುತ್ತಾರೆ. 32 ಸಾವಿರ ಎಕರೆಯವರೂ ಒಬ್ಬರು ಟೆನೆಂಟು ಹೀಗೆ ಎಲ್ಲ ರನ್ನೂ ಬಿಟ್ಟುಬಿಡಿ ಎಂದರೆ ಹೇಗೆ ? ಏನೋ ದೇವಸ್ಥಾನದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ ಎಂದು ಅಲ್ಲಿನ ಧರ್ಮದರ್ಶಿಗಳು ಅನುಭವಿಸಿಕೊಂಡು ನಾವೂ ಟೆನೆಂಟು ಎಂದು

(ಶ್ರೀ ಎಂ. ವಿ. ಕೃಷ್ಣಪ್ಪ)

ಹೇಳಿಕೊಂಡು ಬರುತ್ತಾರೆ. ಹೀಗೆ 150, 250 ಎಕರೆಗಳಷ್ಟು ಭೂಮಿಯನ್ನು ಅನುಭವಿಸು ದ್ದಾರೆ.

The Muzrai tamples managed by Government should be exempted from the purview of this Act ಎಂದು ಹೇಳುತ್ತಾರೆ. ನಾವು ಅವರಿಂದ ಜಮೀನನ್ನು ಕಿತ್ತುಕೊಳ್ಳುವುದಿಲ್ಲ.

We are not going to take the land but Government has the power to revise the rent. The Dharmadarsis are enjoying as Tenants.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲಿ ಒಂದು ಮಾತನ್ನು ತಮಗೆ ಹೇಳಬೇಕಾಗಿದೆ. ಮುಜರಾಯಿ ಜಮೀನುಗಳ ಕೆಳಗೂ ಟೆನೆಂಟುಗಳಿರುತ್ತಾರೆ. ಅವರುಗಳೆಲ್ಲ ಅಲ್ಲಿರುವ ಧರ್ಮದರ್ಶಿಗಳ ಕೈ ಕೆಳಗೆ ಒಳಪಟ್ಟಿರುತ್ತಾರೆ. ಅಂತಹ ರೈತರಿಗೆ ರಕ್ಷಣೆ ಕೊಡಬೇಡವೇ? ಭೂಮಿ ಸರಕಾರಕ್ಕೆ ಸೇರಿರುವುದೇ ಆಗಲೀ ದೇವರಿಗೆ ಸೇರಿದುದೇ ಆಗಿರಲಿ ಅದನ್ನು ಮಾಡುವವರು ಗೇಣಿದಾರರುಗಳು.

ಶ್ರೀ ಎಂ. ವಿ. ಕೃಷ್ಣಪ್ಪ.—ದೇವಸ್ಥಾನದ ಜಮೀನುಗಳನ್ನು ಧರ್ಮದರ್ಶಿಗಳೇ ಮಾಡುತ್ತಿದ್ದಾರೆ. ಅವರ ಕೈ ಕೆಳಗೆ ಸಬ್ ಟೆನೆಂಟ್ಸ್ ಇಲ್ಲ ಎನ್ನುತ್ತಾರೆ. ನಮಗೆ ಈ ಜಮೀನು ಸೇರಿದ್ದು, ನಮಗೆ ಕೊಡಿ ಎನ್ನುತ್ತಾರೆ. ಬಾಯಲ್ಲಿ ಹಾಗೆ ಹೇಳುತ್ತಾರೆಯೇ ವಿನಾ ಅಲ್ಲಿ ಹೋಗಿ ನೋಡಿದರೆ ಅವರು ನೂರಾರು ಜನಕ್ಕೆ ಗೇಣಿಗೆ ಕೊಟ್ಟಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಬಲಿಷ್ಠರಾದವರು ಕೆಲವರಿರಬಹುದು. ಅಂತಹವರು ಜಮೀನು ತೆಗೆದುಕೊಂಡಿರಬಹುದು. ಆದರೆ ಅನೇಕ ಕಡೆ ಬಡವರೂ ಗೇಣಿ ಮಾಡುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀಮಾನ್ ಮಂಜಪ್ಪನವರು ದೇವಸ್ಥಾನಗಳನ್ನು ಬೆಳೆಸಿ, ಅವರ ಅನುಭವದಿಂದ ಹೇಳುತ್ತಿದ್ದಾರೆ. ಅವರ ಭಾಗದಲ್ಲಿ ಕೆಲವು ಲ್ಯಾಂಡು ಲಾರ್ಡುಗಳಾದವರು ಬಡ ರೈತರಿಗೆ ಅನ್ಯಾಯ ಮಾಡಿದ್ದಾರೆ. ಬಡವರನ್ನು ನೋಡುವಾಗ ಧರ್ಮ, ನ್ಯಾಯ ಇರಬೇಡವೇ ಎನ್ನುತ್ತಾರೆ. ಆದರೆ ಈ ದೇಶದಲ್ಲಿ ಬಡವರು ಒಳ್ಳೆಯವರಾಗಿಯೂ ಇರುತ್ತಾರೆ. ಕೆಲವು ಕಡೆ ಕೆಟ್ಟವರೂ ಇರುತ್ತಾರೆ. ನಾನು ಆಗಲೆ ಹೇಳಿದ ಹಾಗೆ ಒಬ್ಬರು ಧರ್ಮದರ್ಶಿಗಳು ಸರಕಾರದ ದೇವಸ್ಥಾನಕ್ಕೆ ಸೇರಿದ ಎಲ್ಲ ಜಮೀನುಗಳನ್ನು ನಾನೇ ಮಾಡುತ್ತಿದ್ದೇನೆ ಎಂದು ಹೇಳುತ್ತಾ ಸರಕಾರಕ್ಕೆ ಕೊಡಬೇಕಾದ ಉತ್ಪತ್ತಿಯನ್ನು ಕೊಡದೇ ಹೋದರೆ ಏನು ಮಾಡುವುದು? ದೇವಸ್ಥಾನದ ಜಮೀನುಗಳನ್ನು ನಾವು ಕಿತ್ತುಕೊಳ್ಳಬೇಕೆಂದು ಹೇಳುತ್ತಿಲ್ಲ. ದೇವರಿಗೆ ಬರಬೇಕಾದ ಉತ್ಪತ್ತಿಯನ್ನು ಹೆಚ್ಚುಮಾಡಿಕೊಂಡು ಅಲ್ಲಿರುವ ಗೇಣಿದಾರರಿಗೂ ರಕ್ಷಣೆ ಕೊಡಬೇಕು ಎಂದು ಹೇಳಿದರೆ ಅದಕ್ಕೆ ಅಲ್ಲಿರುವವರು ಈ ಕಾನೂನಿನಿಂದ ವಿನಾಯಿತಿಯನ್ನು ನಮಗೆ ಕೊಡಬೇಕು ನಾವೇ ಟೆನೆಂಟುಗಳು ಎಂದು ಹೇಳುತ್ತಾರೆ.

We are not going to take the land but Government has the power to revise the rent. The Dharmadharsis are enjoying as tenants.
ಈಗ ಸರಕಾರಕ್ಕೆ ಕೊಡುತ್ತಿರುವ ಮಿತಿಯನ್ನು ಬದಲಾವಣೆ ಮಾಡಿ ಅದಕ್ಕೆ ತಕ್ಕಂತೆ ದೇವಸ್ಥಾನಕ್ಕೆ ಬರಬೇಕಾದ ರೆಂಟನ್ನೂ ನ್ಯಾಯವಾಗಿ ವಿಧಿಸಬೇಕಾಗುತ್ತದೆ. ಈ ದೇವಸ್ಥಾನಗಳಿಗೆ ಅನ್ಯಾಯ ಮಾಡಬೇಕು ಎನ್ನುವುದು ನಮ್ಮ ಉದ್ದೇಶವೂ ಅಲ್ಲ. ನಮ್ಮ ಗುರುಗಳು ಹಿಂದೆ ನನಗೆ ಹೇಳುತ್ತಿದ್ದರು 'ಬಡವರು ಎನ್ನುವ ದೇವರು ಅನ್ನದ ರೂಪದಲ್ಲಿ ಬರುತ್ತಾರೆ' ಎಂದು. (ನಗು) ಆದುದರಿಂದ ಬಡವರನ್ನು ಹೊಡೆದೋಡಿಸಬೇಕೆಂದು ಈ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಬಿಲ್ಲನ್ನು ಮಾಡುತ್ತಿಲ್ಲ. ಒಟ್ಟಿನಲ್ಲಿ ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಲ್ಯಾಂಡು ಲಾರ್ಡುಗಳಾದವರು ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬೇಕು. ಅಲ್ಲದೆ ಲ್ಯಾಂಡು ರಿಫಾರಂಸ್ ಆಕ್ಟನ್ನು ಸಾಧ್ಯವಾದಷ್ಟು ಬೇಗ ನಾವು ಜಾರಿಗೆ ತರಬೇಕು ಎಂದಿದ್ದೇವೆ. ಈಗಾಗಲೇ ಇದರ ಸಂಬಂಧವ ಮಸೂದೆ ಪಾರ್ಲಿಮೆಂಟಿನ ಮುಂದೆ ಬಂದಿದೆ. ಅದು ಪಾಸಾಗಿ ಬಂದಕೂಡಲೇ ಒಂದೇ ಸಾರಿ ನಾವು ಇಲ್ಲಿ ಈ ಮಸೂದೆಯನ್ನು ಜಾರಿಗೆ ಕೊಡಬಹುದು. ಇಷ್ಟು ಹೇಳಿ ಮಾನ್ಯ ಸದಸ್ಯರೆಲ್ಲರೂ ಈ ಬಿಲ್ಲಿಗೆ ಅನುಮೋದನೆ ಕೊಟ್ಟುದಕಾಗಿ ಅವರೆಲ್ಲರನ್ನೂ ವಂದಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಲ್ಯಾಂಡು ಕಮಿಷನ್ನು ಮಾಡಬೇಕೆಂದು ಮಸೂದೆಯಲ್ಲಿ ಹೇಳಿದೆ. ಅದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಈಗಿನಿಂದಲೇ ಮಾಡುವುದು ಸೂಕ್ತವಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಅದನ್ನೂ ಹೇಳಿದ್ದೀರಿ. ಅದನ್ನೂ ಯೋಚನೆ ಮಾಡಿ ಮಾಡೋಣ.

Mr. SPEAKER.—The question is :

"That the Mysore Tenants (Temporary Protection from Eviction) Amendment Bill, 1964, be taken into consideration."

The motion was adopted.

Mr. SPEAKER.—The question is :

"That clause 2 stand part of the Bill."

The motion was adopted.

Clause 2 was added to the Bill.

CLAUSE 3

Mr. SPEAKER.—The Hon'ble Member Sri H. R. Keshavamurthy may move his amendment.

Sri H. R. KESHAVA MURTHY.—Sir, I beg to move :

" That in the explanation after item (iv) the following item shall be added namely,-

" (v) for service inam lands."

Mr. SPEAKER.—Amendment moved :

"That in the explanation after item (iv) the following item shall be added namely,-

"(v) for service inam lands."

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸ್ವಾಮಿ, ನಾನು ನನ್ನ ಅಮೆಂಡುಮೆಂಟಿನಲ್ಲಿ ಇನಾಂತಿ ಭೂಮಿಗಳ ಬಗ್ಗೆ ಕೂಡ ಇದರಲ್ಲಿ ಅವಕಾಶವಿರುವುದು ಸೂಕ್ತ ಎಂದು ಸೂಚಿಸಿದ್ದೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಮಾತನಾಡುತ್ತ ದೇವರ ಹೆಸರಿನಲ್ಲಿ ಭೂಮಿಗಳನ್ನು ತಗೆದುಕೊಂಡು ಬಡ ಜನಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಈಗ ಅನುವಂಶಿಕ ಹಕ್ಕಿನ ಮಸೂದೆಯನ್ನು ತಂದು ಅದರಂತೆ ಈಗಿರುವ ಪಟೇಲರುಗಳ ಹಾಗೂ ಶಾನುಭೋಗರುಗಳ ಹಕ್ಕನ್ನು ತೆಗೆದು ಹಾಕುತ್ತಿರುವುದರಿಂದ ಎಷ್ಟೋ ಜನರು ಇದರಲ್ಲಿ ಭೂಹೀನರಾಗುತ್ತಾರೆ ಅವರಿಗೆ ಹಿಂದಿನಿಂದಲೂ ವಂಶಪಾರಂಪರ್ಯವಾಗಿ ಬರುತ್ತಿರತಕ್ಕ ಕೆಲವು ಜಮೀನುಗಳಿರುತ್ತಿದ್ದುವು. ಅಂತಹವರು ತಿರುಗಿ ತಮ್ಮ ಭೂಮಿಯ ಮೇಲೆ ಬಂದು ಜೀವನ ನಡೆಸಿಕೊಳ್ಳಬೇಕಾದರೆ ಇದರಲ್ಲಿರುವ ಕಾನೂನಿನಂತೆ ಅವಕಾಶ ಸಿಗುವುದು ಕಷ್ಟ ಎಂದು ನಾನು ಒಂದು ತಿದ್ದುಪಡಿ ತಂದು ಇದರಲ್ಲಿ ಇನಾಂತಿ ಭೂಮಿಯನ್ನೂ ಸೇರಿಸಬೇಕೆಂದು ಸೂಚನೆ ಮಾಡುತ್ತಿದ್ದೇನೆ. ಈಗ ಅವರು ಜಮೀನುಗಳನ್ನು ಟೆನೆಂಟುಗಳೇ ಮಾಡುತ್ತಿರುತ್ತಾರೆ. ಈಗಿರುವಂತೆ ಇದನ್ನು ಜಾರಿಗೆ ತಂದರೆ ಅಂತಹ ಜನಕ್ಕೆ ಬಹಳ ತೊಂದರೆಯಾಗುತ್ತದೆ. ಅಂತಹ ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದು ಇದಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸೂಚಿಸುತ್ತಿದ್ದೇನೆ. ಇದನ್ನು ತಾವೂ ಆಲೋಚನೆ ಮಾಡಿ ಸೇರಿಸಬಹುದು.

ಶ್ರೀ ಎಂ. ವಿ. ಕೃಷ್ಣಪ್ಪ.—ಇದನ್ನು ಒಪ್ಪುವುದಕ್ಕಾಗುವುದಿಲ್ಲ.

Mr. SPEAKER.—The question is;

"That in the explanation after item (iv) the following item shall be added, namely :-

"(v) for service inam lands."

The amendment was negatived.

5-00 P.M.

Mr. SPEAKER.—The question is:

"That clause 3 stand part of the Bill."

The motion was adopted.

Clauss 3 was added to the Bill.

Mr. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri M. V. KRISHNAPPA.—I beg to move:

"That the Mysore Tenants (Temporary Protection from Eviction) (Amendment) Bill, 1964, be passed."

Mr. SPEAKER.—The question is:

"That the Mysore Tenants (Temporary Protection from Eviction) (Amendment) Bill, 1964, be passed."

The motion was adopted.

MYSORE TENANCY LAWS (AMENDMENT) BILL, 1964.

Motion to consider.

Sri M. V. KRISHNAPPA.—I beg to move:

"That the Mysore Tenancy Laws (Amendment) Bill, 1964, be taken into consideration."

Mr. SPEAKER.—Motion moved:

"That the Mysore Tenancy Laws (Amendment) Bill, 1964, be taken into consideration."

† ಶ್ರೀ ಎಂ. ವಿ. ಕೃಷ್ಣಪ್ಪ.—ಇದರ ವಿಷಯದಲ್ಲಿ ಏನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ವಿಷಯ ಈಗಾಗಲೇ ಪಾಸಾಗಿರತಕ್ಕ ಈ ಒಂದು ಆಕ್ಟಿನಲ್ಲಿ ಏನು ಒಂದು ರಕ್ಷಣೆ ಕೊಡಬೇಕೆಂದಿತ್ತೋ ಆ ರಕ್ಷಣೆಯನ್ನು ಭೂಸುಧಾರಣೆ ಶಾಸನವು ಜಾರಿಗೆ ಬರುವ ತನಕ ಮುಂದುವರಿಸಬೇಕು ಎಂಬುದು ಇದರ ಮುಖ್ಯೋದ್ದೇಶ. ಆದ್ದರಿಂದ ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

†Sri G. V. GOWDA.—Sir, in the normal course this should have been taken up first. Unless tenancy laws are continued there is no

question of affording protection to the existing tenants. I have heard with rapt attention the reply given by the Minister in respect of the arguments advanced by several members with regard to the other Bill just now passed. The Minister says that there was just and sufficient reason for the postponement of the implementation of the Land Reforms Act. I would only ask whether the Government have lost sight of the primary objective with which the Land Reforms Act was adopted by this House. According to me, the object may the elimination of intermediaries, putting aud end to the relationship of landlord and tenant and ultimately making the tiller of the soil the absolute owner. The point is whether is this object could be achieved by implementing the Land Reforms Act after the adoption of the 17th Amendment to the Constitution. The Minister himself said that no surplus land was available. Unless there is surplus land there is no question of making any cultivating tenant the absolute owner because nobody would be possessing more than the ceiling limit. Such being the case, I ask whether it was not possible for the Government to bring an amendment to the Land Reforms Act stipulating a period subsequent to which any alienation made would be declared null and void. Since that has not been done, the very purpose for which Land Reforms Act has been passed is defeated. The question to be considered is whether it would not have been possible for the Government to bring in a comprehensive legislation to provide for security of tenure, for fixation of fair, rent, etc. That could have been easily done, but instead of that the existing tenancy laws are being extended year after year and the main object of the Land Reforms Act is lost sight of. Now that the 17th Amendment is before a Select Committee of the Lok Sabha it can be safely assumed that it is going to be adopted and accordingly the Government could, have brought this provision of the Land Reforms Act into force. In view of the fact that Parliament is seized of the matter, I do not think anybody would have gone to court challenging the implementation of this Act. After the passing of the 17th Amendment whatever lacuna is there, it could be regularised

MR. SPEAKER.—Why should the member suggest that nobody would go to court? In view of the Supreme Courts decision being in their favour, they would naturally rush to the court.

SRI G. V. GOWDA.—But the fact that Parliament is seized of the 17th Amendment and it is going to be adopted would have acted as a deterrent. Moreover, the Minister himself has said that this contingency would arise only if there is surplus land available which could be distributed to cultivating tenants. Even otherwise there is the question of security of tenure. So this problem would have arisen only if Government had taken surplus lands and distributed them to cultivating tenants and made them absolute owners thereof. When the Land Reforms Act was passed we were told that about 2 lakhs acres of lands were available for being distributed as surplus lands. But now as the Minister himself has said, where is the land available for distribution? What is the purpose for which the Land Reforms Act was passed? Why

(SRI G. V. GOWDA)

should this Bill not have been a comprehensive legislation for giving security of tenure and for fixation of fair rent? It is also said that some suggestions have been made by the Planning Commission and the Government of India about the Land Reforms Act and so the Government should have brought an amendment to the Act to achieve that object, but that has not been done. Why should we wait till the adoption of the 17th Amendment by Parliament? The Government should have brought in an amendment to the Land Reforms Act providing for the security of tenure and fixation of fair rent and stipulating a period after which any alienation made would be declared null and void. Instead of doing that, there is no use continuing the existing tenancy laws year after year. I have heard both sides of the case. Sri Kadidal Manjappa and Sri Gopal Gowda have given a clear picture of how small landlords and small tenants are being harassed. It shows clearly that the Government should have brought in a comprehensive legislation to achieve the objective of security of tenure and fixation of fair rent.

MR. SPEAKER.—I believe these arguments were advanced even 3 years ago.

SRI G. V. GOWDA.—Yes. That is why I said that a comprehensive legislation should have been brought in.

MR. SPEAKER.—What did Sri Kadidal Manjappa do then?

SRI G. V. GOWDA.—Even when he was the Revenue Minister the same arguments were advanced that there has no objection to bringing in a comprehensive legislation as we found it in Madras. There is the Madras Cultivating Tenants Protection Act, according to which only under one or two conditions, a tenant could be evicted and not otherwise. Unless there is a continuous default in the payment of rent, unless the court is satisfied that he has used the land for a different purpose or sub-let it, he could not be evicted. That could be simply copied and all these Acts avoided. I do not think any purpose will be served by the so-called Land Reforms Act or by the continuance of the Tenancy Law and the money spent on this piece of legislation would be a waste. We need not continue this Law. I request the Government at see that are long, a comprehensive legislation is adopted or they should see that such provisions which are not objectionable are implemented.

† SRI SANJEEVANATH AIKALA (Suratkal).—Sir, this is exactly, as the proverb goes, old wine in a new bottle, because year after year the same Act is extended by an amendment. When the Bill was first introduced in 1962 by the Hon'ble Minister Sri B. Rachaiah I said that it would not be the first amendment because the Government were not all willing to bring in a comprehensive land legislation, and that there would be a series of amendments to that Act. The Government is harping on Supreme Court decision. What is the genesis of the Supreme

Court decision ? It was in relation to the Kerala Agrarian Reforms Act. As far as 33 villages of South Kanara District are concerned, the Supreme Court's decision was binding as they are lands under raiyatwari system.

Mr. SPEAKER.—Were they in South Kanara District ?

Sri SANJEEVANATH AIKALA.—They were part of the Kerala State at that time.

Mr. SPEAKER.—It is designated as Cannanore District in Kerala State. Kerala Legislation cannot operate in South Kanara District.

Sri SANJEEVANATH AIKALA.—But they were originally part of South Kanara District and they were under the raiyatwari system. The Supreme Court's decision was binding only to a part of the South Kanara District as well as to a part of Kollegal.

Mr. SPEAKER.—It will bind not only the parties but the reasoning will be applied to every set of facts.

Sri SANJEEVANATH AIKALA.—The Raiyathwari system is prevailing only in South Kanara District and part of Kollegal.

Mr. SPEAKER.—So, the raiyathwari system prevails in the Madras State or Districts of Madras State and wherever they are, they will be governed by this decision. It is immaterial whether it is the Madras State or at the Mysore State.

Sri SANJEEVANATH AIKALA.—Logically, my conclusion is that as far as old Mysore or Bombay Karnatak area is concerned, that decision is not binding. As argued by some Hon'ble Members of this House, the Government could have brought into force this Land Reforms Act in all these areas. Consequently there should not have been any trouble in the old Mysore State because that decision is not binding on the old Mysore State. As clearly stated by Sri Gopala Gowda and Sri Kadidal Manjappa, most of the chapters of the Land Reforms Act could have been implemented in these areas and there would not have been any objection. The Government are simply dilly-dallying with this question. As observed by the Hon'ble Members who preceded me, the Government wanted that the Land Reforms Act should not be implemented immediately because there were some vested interests which the Government wanted to placate, because the Government depended upon poor man's vote and rich man's money. I presume the Ex-Hon'ble Revenue Minister wanted this defective measure to be implemented so that certain vested interests would go to the court and put a stop to it. In that way, they will have the advantage of both vote as well as the money. That is the concern of the Ruling Party and I believe that with this motive the Land Reforms Act which would have been implemented has now been put into cold storage ; because on a simple excuse the Supreme Court gave a decision. Sir, I emphatically say that there was no necessity of bringing this amendment now. If the Governm nt had the real intention of doing good to the tenants. All the arguments have

(SRI SANJEEVANATH AIKALA)

been advanced by the previous speakers and there is not much to be added to what has been already stated by the previous speakers, I only wish that the Government conld have taken a wise decision instead of bringing this amendment, by implementing the Land Reforms Act excluding the areas where the Supreme Court's decision is binding. With these words, I conclude my speech.

Sri V. S. PATIL.—So far as this Bill, is c ncerned, our part is governed by the definition of clause 2 and here the oniy wording that is changed is, for the words and figures ' thirty-first day of March 1964' the words and figures ' Thirty-first day of March 1965, instead of 1964 we are by this Bill changing it to 1965. So far as the suspension of our Bombay Tenancy Act is concerned or the relevant provisions of that Act are concerned, these suspensions have gone materially very deep. They are very deep-rooted and in the neighbouring areas of our part in Maharashtra, thousands of tenants have already become owners and they have paid the price; there is no question of landlord and tenants existing in the neighbouring area in which the Maharashtra Act is applicable. But, our tenants in the adjoining villages within this state are still tenants. According to the definition of landlords in the Act that is to be implemented, I think, Sir, all the tenants will have to be evicted. I do not think that the Government has thought of the difficulty of rehabilitating all these vast number of tenants who will be evicted if the Mysore Land Reforms Act comes into force. Thousands of tenants will have to be evicted and they will have to serve the landlords under a different capacity, not as tenants, but as servants So, as far the condition of the tenants when that Act comes into force, especially in our four districts, there will be a very very great change in their rights. As already admitted by the Hon'ble Minister for Revenue, there will be no surplus land remaining, and for that, they have delayed the implementation of the Bombay Act. That was the reason why our friends from North Karnatak were agitating in the Bombay Assembly and saying that they should be taken out of the Bombay State and thrown somewhere else where they could oust the tenants. That was their ambition and that has now been fulfilled. At least, let Government come forward with this retrograde measure and end this period of suspension period. This period of suspension is terrible. It is practically crushing or eliminating this class of tenants. They will be now servants of the landlords. And the other dire thing is, that by increasing the ceiling on various kinds of lands, Government have given a free hand to the landlords to get again benefits on account of the labour of others. It is a very bad thing they have done. If the Government really feels and if it is really a true follower of Socialism, it must amend the Act and bring down the ceiling to a reasonable limit. Otherwise, it will merely crush those who are actually labouring in the fields, and benefit those who are merely taking advantage of others. I have served on the Committee of Land Reforms Bill. I know the

Mr. SPEAKER.—When a similar situation arose in the Lok Sabha, it was disallowed on the simple ground that the scope of the Debate being comprehensive, it could be discussed during the Debate on Motion of Thanks, etc. If the Motion of thanks were not to be taken up by this House or if there would be no general debate on the Budget later, I would not have hesitated to admit it. I will give the Hon'ble Member an opportunity to speak and if I find later on its merits that it should be admitted, I shall allow it.

Sri ANGADI CHANNABASAPPA (Hadagalli).—Sir, time factor is very essential especially in such matters. People may think that we have raised the matter very late.

Mr. SPEAKER.—It has all gone into the records who will say that? That is why I permitted the Hon'ble Member to refer to that subject and the contents of adjournment motion and I have also made my observations.

Sri G. V. GOWDA (Palya).—Sir, importance should be attached to an adjournment motion.

Mr. SPEAKER.—Does the Hon'ble Member mean that the Debate on the Motion of Thanks is less important than the debate on an adjournment motion?

Sri G. V. GOWDA.—No, Sir; but it is more significant. By discussing an adjournment motion, we can pinpoint a subject immediately.

Mr. SPEAKER.—Who prevents anybody from pin pointing and concentrating on a subject in the course of the dobate...

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ)—ತಾವು ಇದನ್ನು ಒಪ್ಪಿಕೊಳ್ಳುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ. ಅವರೆ, ಇದು ಪ್ರಾಮುಖ್ಯತೆಯ ವಿಷಯವಲ್ಲ. ಈ ನಿಲುವಳಿ ಸೂಚನೆಗಳಿಗೆ ಒಂದು ವಿಶೇಷವಾದ ಮಹತ್ವವಿರುತ್ತದೆ; ಅವುಗಳಿಗೆ ವಿಶೇಷವಾದ ಸ್ಥಾನವಿರುತ್ತದೆ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯ ಮೂಲಕ ಅವಕಾಶವಿದೆಯೋ ಇಲ್ಲವೋ ಎನ್ನುವುದನ್ನ ನಾವು ಪರಿಶೀಲನೆ ಮಾಡಬೇಕು. ರಾಜ ಪಾಲರ ಭಾಷಣ ಅಥವಾ ಬಡ್ಜೆಟ್ ಮೇಲೆ ಚರ್ಚೆ ಇರುವುದರಿಂದ ನಾವು ಅಂಥ ಕೆಲವು ವಿಚಾರಗಳನ್ನು ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಹುದು, ಅದಕ್ಕೆ ಸರ್ಕಾರದವರು ಉತ್ತರ ಕೊಡುವುದಕ್ಕೆ ಅವಕಾಶವಿದೆ ಎನ್ನುವುದಾದರೆ ಆಗ ನಿಲುವಳಿ ಸೂಚನೆಗೆ ಇರುವ ಮಹತ್ವವನ್ನು ನಾವು ಗಮನಿಸಿದಂತೆ ಆಗಲಿಲ್ಲ ಎಂದು ನನ್ನ ಅಭಿಪ್ರಾಯ, ಸ್ವಾಮಿ.

Sri ANNA RAO GANAMUKHI (Afzalpur).—Sri, I would like to refer to sub-rules (2) and (3) of rule No. 21. Sub-rule (3) says: "the discussion on the Address shall be interrupted in the course of the sitting by an adjournment motion under rule 50." So, if an adjournment motion is admitted, then the rule is clear, provided this amendment is admitted. The Hon'ble Speaker himself said that it was important. If it is important, then, the reason that the Motion of Thanks coversa wider ground and that this may also be covered under that should not come in the way. When the rules are clear, I think, precedents to the contrary, if any should not be followed. It is only when the rule is not clear, that the precedent becomes a rule. That is my submission.

Mr. SPEAKER.—The Hon. member canvasses a ground which is reached after the motion is admitted and not before. That stage has not been reached. If I admit it, it means that, I must give an immediate chance. Till then no member can discuss it. Secondly, the reason for disallowing it, is that there is ample scope available for the matter being discussed.

Sri C. J. MUCKANNAPPA (Sira).—Sir, by means of an adjournment motion, attention of the Government will be drawn to a particular thing. Debate on the Motion of Thanks and General Discussion on Budget are general discussious and not discussion on a particular point. So, I request the Chair......

Mr. SPEAKER.—I will consider it.

Sri C. J. MUCKANNAPPA.—At least, within these seven years we have had no occasion......

Mr. SPEAKER.—Not on the ground of seven years, but on its own merit it will be considered.

Sri C. J. MUCKANNAPPA.—During these seven years only once Muniyamma came here and she went away......

Mr. SPEAKER.—Order, order. Now we will take up the other Business of the day.

MOTION OF THANKS TO THE GOVERNOR FOR HIS ADDRESS

Sri D. M. SIDDIAH (Biligere).—Sir, I beg to move:

"That we, the members of the Mysore Legislative Assembly assembled in this session, beg leave to thank the Governor for the Address delivered to the members of the Legislature on the 26th February 1964."

Mr. SPEAKER.—Motion moved:

"That we, the members of the Mysore Legislative Assembly assembled in this session, beg leave to thank the Governor for the Address delivered to the members of the Legislature on the 26th February 1964."

Sri A. P. APPANNA (Virajpet).—I second the motion, Sir.

Mr. SPEAKER.—Hon'ble Member will please recollect what they did on the last occasion so that they may use the time available to the maximum advantage. I then suggested:

"Instead of there being immediately a speech supporting it, formal seconding will be done and all the amendments will be also formally moved and the whole thing will be before the House. That may be a better way of using the time of the House to the maximum advantage."

Sri G. V. GOWDA.—I beg to move:

(i) "That The following words shall be added at the end of the motion:—

"but regret that-

(a) the Address makes no mention of the steps taken to solve the growing unemployment problem;

(b) there is no mention in the Address the extent of physical targets achieved so far as a result of the implementation of Plan schemes;

(c) the State Government have failed to admit that there is sharp rise in consumer prices and proper price is also not ensured to the producers of foodgrains;

(SRI G. V. GOWDA)

(*d*) there is no mention in the Address about the steps taken or proposed to be taken to effect economy in the administration, increase efficiency and to eradicate corruption, communalism and regionalism that is rampant ;

(*e*) there is also no mention in the Address about the steps taken to implement Prohibition, the Community Development and Panchayat Raj, as effectively as possible."

(ii) The following words shall be added at the end of the motion :—

"but regret that—

the Government have failed to maintain the progressive character of the State in that—

(*a*) adequate and proper Central assistance for the State's Plan schemes has not been obtained ;

(*b*) execution of several feasible medium irrigation projects have not been taken up ;

(*c*) arrear of loans and other amounts outstanding and due to Government have not been realised ;

(*d*) the economic improvement in rural parts, especially in more backward regions, has not been brought about ;

(*e*) to secure a sound and stable educational system in the State."

MR. SPEAKER.—Amendment moved :

(i) "That the following words shall be added at the end of the motion :—

" but regret that—

(*a*) the Address makes no mention of the steps taken to solve the growing unemployment problem ;

(*b*) there is no mention in the Address the extent of physical targets achieved so far as a result of the implementation of Plan schemes ;

(*c*) the State Government have failed to admit that there is sharp rise in consumer prices and proper price is also not ensured to the producers of foodgrains ;

(*d*) there is no mention in the Address about the steps taken or proposed to be taken to effect economy in the administration, increase efficiency and to eradicate corruption, communalism and regionalism that is rampant ;

(*e*) there is also no mention in the Address about the steps taken to implement Prohibition, the Community Development and Panchayat Raj, as effectively as possible."

" (ii) The following words shall be added at the end of the motion :

" but regret that—

the Government have failed to maintain the progressive character of the State in that—

(a) adequate and proper Central assistance for the State's Plan schemes has not been obtained;

(b) execution of several feasible medium irrigation projects have not been taken up;

(c) arrear of loans and other amounts outstanding and due to Government have not been realised;

(d) the economic improvement in rural parts, especially in more backward regions, has not been brought about;

(e) to secure a sound and stable educational system in the State."

Sri B. P. KADAM.—I beg to move :

" That the following words shall be added at the end of the motion :—

"but regret that—

(a) the Government has not demanded a speedy merger of the Marathi border areas in Maharashtra State and the Kannada border areas in Mysore State, taking definite principles like language, contiguity, village as a unit and public opinion;

(b) the Government has failed to take steps for the speedy and planned liquidation of the Marathi border people by not allowing them employment and denying them facilities to run the Marathi schools properly and all round neglect of the amenities to the rural population in the border areas;

(c) there is no reference in the Address regarding the falling of living standards of the middle class and poor agriculturists on account of heavy taxation and the steep rise in the basic necessities of life".

Mr. SPEAKER.—Amendment moved that :

"The following words shall be added at the end of the motion :

" but regret that—

(a) the Government has not demanded a speedy marger of the Marathi border areas in Maharashtra State and the Kannada border areas in Mysore State, taking definite principles like language, contiguity, village as a unit and public opinion;

(b) the Government has failed to take steps for the speedy and planned liquidation of the Marathi border people by not allowing them employment and denying them facilities to run the Marathi schools properly and all round neglect of the amenities to the rural population in the border areas;

(MR. SPEAKER)

(c) there is no reference in the Address regarding the falling of living standards of the middle class and poor agriculturists on account of heavy taxation and the steep rise in the basic necessities of life.'

Sri A. KRISHNA SHETTY.—I beg to move:

"The following words shall be added at the end of the motion:

" but regret that—

(a) the rise in prices and increased cost of living index is not seriously taken note of;

(b) there is no reference in the Address about the D.A. of State Government servants consequent on the increase in the Central Government D.A. rates;

(c) increasing unemployment, even among the technically educated is not considered and remedies suggested;

(d) there is no mention in the Address about the measures suggested to fight out increasing corruption;

(e) the Address fails to evolve measures—

(i) for emotional integration of different areas of the State;

(ii) to reduce increasing disparity in economic status of people of the state;

(iii) to bring democratic socialism;

(iv) to mention a programme of industrialisation of the State and the crisis facing the Plan;

(v) to solve the boundary disputes."

Mr. SPEAKER.—Amendment moved:

" That the following words shall be added at the end of the motion:—

" but regret that—

(a) the rise in prices and increased cost of living index is not seriously taken note of;

(b) there is no reference in the Address about the D.A. of State Government servants consequent on the increase in the Central Government D.A. rates;

(c) increasing unemployment, even among the technically educated is not considered and remedies suggested;

(d) there is no mention in the Address about the measures suggested to fight out increasing corruption—

(e) the Address fails to evolve measures—

(i) for emotional integration of different areas of the State;

(ii) to reduce increasing disparity in economic status of people of the State;

(iii) to bring democratic socialism·

(iv) to mention a programme of industrialisation of the State and the crisis facing the Plan ;

(v) to solve the boundary disputes."

Sri B. R. SUNTHANKAR.—I beg to move :

"That the following words shall be added at the end of the motion:—

"but regret that—

(*a*) the Address fails to indicate the way to reach the goal of democratic socialism;

(*b*) the Address fails to mention as to how the objectives of establishing agro-industrial society will be achieved ;

(*c*) the Address does not inspire confidence in the people as there is no mention about wiping out corruption, inefficiency and nepotism in the administration ;

(*d*) the Address fails to take note of the shooting prices of the foodstuffs and to mention the measures required to check the rising prices;

(*e*) the Government has failed to solve the border disputes of the State with the neighbouring States particularly the Mysore—Maharashtra border dispute and to implement its own assurances to bring in the Kannada speaking areas such as Kasargod, Madakasira, South Sholapur, etc., in the Mysore State ;

(*f*) the Government has failed to protect the interests of the linguistic minorities in the State particularly the Marathi speaking minority in the border areas of Belgaum, Karwar and Bidar."

Mr. SPEAKER.—Amendment moved :

"That the following words shall be added at the end of the motion:—

" but regret that—

(*a*) the Address fails to indicate the way to reach the goal of democratic socialism ;

(*b*) the Address fails to mention as to how the objectives of establishing agro-industrial society will be achieved ;

(*c*) the Address does not inspire confidence in the people as there is no mention about wiping out corruption, inefficiency and nepotism in the administration ;

(*d*) the Address fails to take note of the shooting prices of the foodstuffs and to mention the measures required to check the rising prices ;

(*e*) the Government has failed to solve the border disputes of the State with the neighbouring States particularly the Mysore—Maharashtra border dispute and to implement its own assurances to bring in the Kannada speaking areas such as Kasargod, Madakasira, South Sholapur, etc., in the Mysore State ;

(MR. SPEAKER)

(*f*) the Government has failed to protect the interests of the linguistic minorities in the State particularly the Marathi speaking minority in the border areas of Belgaum, Karwar and Bidar."

Sri SANJEEVANATH AIKALA.—I beg to move:

"That the following words shall be added at the end of the motion:—

"but regret that—

(*a*) the Adress fails to make a reference to the scrapping of prohibition;

(*b*) there is no mention in the Address about efforts and intention of the Government to solve the problem of unemployment, under-employment and utilisation of rural manpower;

(*c*) there is no reference as to the rehabilitation of the displaced persons, by the formation of all-weather port at Mangalore and laying of Ponamber— Mangalore Harbour Railways on a well conceived and co-ordinated plan;

(*d*) a distorted, controversial figure and picture has been made as to the price control of the foodgrains;

(*e*) there is no reference as to the reduction of Ministers and Deputy Ministers at least during the emergency."

Mr. SPEAKER.—Amendment moved that:

That the following words shall be added at the end of the motion:—

"but regret that—

(*a*) the Address fails to make a reference to the scrapping of prohibition;

(*b*) there is no mention in the Address about efforts and intention of the Government to solve the problem of unemployment, under-employment and utilisation of rural manpower;

(*c*) there is no reference as to the rehabilitation of the displaced persons by the formation of all-weather port at Mangalore and laying of Ponamber—Mangalore Harbour Railways on a well conceived and co-ordinated plan;

(*d*) a distorted, controversial figure and picture has been made as to the price control of foodgrains;

(*e*) there is no reference as to the reduction of Ministers and Deputy Ministers at least during the emergency."

Sri S. SIVAPPA.—I beg to move:

"That the following words shall be added at the end of the motion:—

"but regret that—

(*a*) the Address fails to mention the measures to combat the rising prices in essential articles which has resulted in the rising cost of living index;

(b) there is no mention about the constitution of vigilance commission to check the growing menace of corruption, nepotism and favouritism which has resulted in inefficiency in administration and execution;

(c) there is no mention about instituting a judicial enquiry into the affairs of the construction of the Sharavathy Valley Hydro electric Project and also publishing the white paper on the same as Promised by the Chief Minister on the floor of the House during the last session;

(d) there is no mention about the holding of elections to the Panchayats and Taluk Boards in the scheduled timings, *i.e.*, during March-April 1964 in our State."

Mr. SPEAKER.—Amendment moved:

"That the following words shall be added at the end of the motion:—

" but regret that—

(a) the Address fails to mention the measures to combat the rising prices in essential articles which has resulted in the rising cost of living index;

(b) there is no mention about the constitution of vigilance commission to check the growing menace of corruption, nepotism and favouritism which has resulted in inefficiency in administration and execution;

(c) there is no mention about instituting a judicial enquiry into the affairs of the construction of the Sharavathy Valley Hydro-electric Project and also publishing the white paper on the same as promised by the Chief Minister on the floor of the House during the last session;

(d) there is no mention about the holding of elections to the Panchayats and Taluk Boards in the scheduled timings, *i.e.*, during March-April 1961 in our State."

Sri K. LAKKAPPA.—I beg to move:

"That the following words shall be added at the end of the motion:—

" but regret that—

(a) the address fails to suggest to eradicate corruption, nepotism and favouritism in the State;

(b) there is no mention of any policy regarding prohibition;

(c) the Address does not contain any suggestion regarding drinking water facilities in the rural parts;

(d) the Address fails to mention the implementation of suggestions made by the Resources and Economy Committee;

(the Government has failed to eliminate economic disparity in the country;

(f) the Government has failed to solve the problem of un-employment in the State;

(SRI K. LAKKAPPA)

(g) the Government has failed to adopt permanent measure to solve famine problem in Tumkur, Chitradurga and Kolar Districts ;

(h) the Government has failed to solve the arrangements of loans to tenants in various fields in rural parts ;

(i) the Government has failed in contolling prices regarding essential commodities;

(j) the Government has failed to start village industries in Tumkur District ;

(k) the Address fails to mention the drastic steps to probe deep into misappropriation, corruption and other mismanagements in the Co-operative Societics in the State ;

(l) there is also no mention in the Address about providing land to the landless people in the State ;

(m) failure of Administration in the State due to inefficiency."

Mr. SPEAKER.—Amendment moved :

"That the following words shall be added at the end of the motion:—

" but regret that—

(a) the Address fails to suggest to eradicate corruption, nepotism and favouritism in the State ;

(b) there is no mention of any policy regarding prohibition ;

(c) the Address does not contain any suggestion regarding drinking water facilities in the rural parts ;

(d) the Address fails to mention the implementation of suggestions made by the Resources and Economy Committee ;

(e) the Government has failed to eliminate economic disparity in the country ;

(f) the Government has failed to slove the problem of un-employment in the State ;

(g) the Government has failed to adopt permanent measure to solve famine problem in Tumkur, Chitradurga and Kolar Districts ;

(h) the Government has failed to solve the arrangements of loans to tenants in various fields in rural parts ;

(i) the Government has failed in controlling prices regarding essential commodities ;

(j) the Government has failed to start village industries in Tumkur District ;

(k) the Address fails to mention the drastic steps to probe deep into misappropriation, corruption and other mismanagements in the Co-operative Societies in the State :

(l) there is also no mention in the Address about providing land to the landless people in the State ;

(m) failure of Administration in the State due to inefficiency."

Sri S. GOPALA GOWDA.—I beg to move :

"That the following words shall be added at the end of the motion:—

" but regret that—

the Government by levying new taxes and misusing the public money in the name of schemes, have given room for corruption, nepotism and maladministration and have failed completely in solving the basic problems of the people in regard to food, clothing, housing, employment and education."

Mr. SPEAKER.—Amendment moved :

"That the following words shall be added at the end of the motion:—

" but regret that—

the Government by levying new taxes and misusing the public money in the name of schemes, have given room for corruption, nepotism and maladministration and have failed completely in solving the basic problems of the people in regard to food, clothing, housing, employment and education."

† ಶ್ರೀ ಎಸ್. ಗೋಪಾಲಗೌಡ. ತಿದ್ದುಪಡಿಗಳೆಲ್ಲವನ್ನೂ ಸೂಚಿಸಿದ ಮೇಲೆ ಕೆಲವರು ಇದರ ಪರ ಮತ್ತೆ ಕೆಲವರು ವಿರೋಧವಾಗಿ ಮಾತನಾಡುವವರು ಮಾತನಾಡಿ ಕೊನೆಗೆ ಮುಗಿಸೋಣವೆಂದು ತಾವು ಸೂಚನೆ ಮಾಡಿದಿರಿ ಈ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಕನ್ನಡದಲ್ಲಿ ನಾನು ತಿದ್ದುಪಡಿಯನ್ನು ಕಳುಹಿದ್ದೆ, ಅದರಲ್ಲಿ ಸರ್ಕಾರ ಹೊಸ ಹೊಸ ತೆರಿಗೆಗಳನ್ನು ಹೇರುತ್ತಾ ಎಂದು ಇರುವುದನ್ನು 'by levying new taxes' ಎಂದು ತರ್ಜುಮೆ ಮಾಡಿದ್ದಾರೆ. ಅದು ಸರಿಯಾಗಿಲ್ಲ. 'by burdening with new taxes' ಎಂದಿರಬೇಕಾಗಿತ್ತು.

ಇನ್ನೊಂದು ವಿಷಯ, ಶ್ರೀಮಾನ್ ಸಿದ್ದಯ್ಯನವರು ತಮ್ಮ ಸೂಚನೆಯನ್ನು ಕನ್ನಡದಲ್ಲಿ ಮಾಡಬೇಕಾಗಿತ್ತು, ಏಕೆಂದರೆ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಅದಕ್ಕೆ ನಾವು ಇಂಗ್ಲೀಷಿನಲ್ಲಿ ಸೂಚನೆಗಳನ್ನು ಮಾಡಿದರೆ ತಪ್ಪಾಗುತ್ತದೆ.

ಕಾಲದ ಬಗ್ಗೆ ಹೇಳುವುದಾದರೆ, ಇದರ ಚರ್ಚೆಗೆ ಮೂರು ದಿವಸ ಎಂದು ಗೊತ್ತು ಮಾಡಲಾಗಿದೆ. ಇದರಲ್ಲಿ ರಾಯಚೂರು ಗಲಭೆಯ ವಿಷಯ ಬಂದರೆ ಅದರ ಮೇಲೆಯೇ ಹೆಚ್ಚು ಚರ್ಚೆ ನಡೆಯುತ್ತದೆ. ಅಲ್ಲದೆ ಒಂದೇ ಪಕ್ಷದಲ್ಲಿದ್ದುಕೊಂಡು ಶ್ರೀಮಾನ್ ಸಂಜೀವನಾಥ ಐಕಳ ಮತ್ತು ಶ್ರೀಮಾನ್ ಲಕ್ಕಪ್ಪನವರು ಬೇರೆ ಬೇರೆ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಅವನ್ನು ವೈಯಕ್ತಿಕವಾಗಿ ಸೂಚಿಸಿದ್ದಾರೋ ಅಥವಾ ಪಕ್ಷದ ಪರವಾಗಿ ಸೂಚಿಸಿದ್ದಾರೋ ಗೊತ್ತಿಲ್ಲ. ಆದರೆ ನನ್ನಂತಹ ಕಲವು ಸದಸ್ಯರೂ ಇದ್ದಾರೆ. ಇಂಥವರನ್ನು ಗಮನದಲ್ಲಿಟ್ಟುಕೊಂಡು ತಕ್ಕಷ್ಟು ಅವಕಾಶ ಕೊಡಬೇಕೆಂದು ನಾನು ಹೇಳುತ್ತೇನೆ. ಕಾಂಗ್ರೆಸ್ ಪಕ್ಷದಿಂದ ವಂದನಾರ್ಪಣೆಯನ್ನು ಒಬ್ಬರು ಮಾಡಿದರೆ ಸಾಕೆಂದು ಕಾಣುತ್ತದೆ. ಏನಾದರೂ ಬಿಟ್ಟು ಹೋಗಿದ್ದರೆ ಅಣ್ಣಾರಾಯರಂತಹ ಸದಸ್ಯರು ಅದನ್ನು ಸೂಚಿಸಲಿ. ಸಾಮಾನ್ಯವಾಗಿ ಸರಕಾರದ ಧೋರಣೆಗಳು ಹಾಗೂ ಅವರು ಕೈಕೊಂಡಿರುವ ಮತ್ತು ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಾಕಷ್ಟು ಚರ್ಚೆಯಾಗಲು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದನ್ನು ಮೊದಲೇ ಹೇಳಬೇಕಾಗಿತ್ತು.

ಎರಡನೆಯದಾಗಿ ಸದಸ್ಯರು ಕಳುಹಿಸಿದ ತಿದ್ದುಪಡಿಯನ್ನು ತಪ್ಪಾಗಿ ತರ್ಜುಮೆ ಮಾಡಿದ್ದಾರೆಂದು ಹೇಳಿದರು. ಅವರು ಕಳುಹಿಸಿರುವುದರಲ್ಲಿ 'ತೆರಿಗೆಗಳನ್ನು ಹಾಕುತ್ತಾ' ಎಂದಿದೆಯೇ ಹೊರತು 'ಹೊರಿಸುತ್ತಾ' ಎಂದಿಲ್ಲ. ಸುಮ್ಮನೆ ನೆನಪಿಲ್ಲದೆ ಏಕೆ ಹೀಗೆ ಹೇಳಬೇಕು ? ಮಿಕ್ಕವರಿಗೆ ಸಿಟ್ಟು ಬಂದ ಹಾಗೆ ನನಗೂ ಬರುತ್ತದೆ.

† ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸಭಾಪತಿಗಳೆ, ನಮ್ಮ ರಾಜ್ಯಪಾಲರು ಉಭಯ ಸಭೆಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಂದನಾರ್ಪಣೆ ಮಾಡುತ್ತಾ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಅನುಮೋದಿಸುತ್ತೇನೆ. ಹಳೆಯ ಮೈಸೂರಾಗಲಿ ಹೊಸ ವಿಶಾಲ ಮೈಸೂರಾಗಲಿ ಶಾಸನ ಸಭೆ ಹುಟ್ಟಿದ ಮೇಲೆ ಇಲ್ಲಿಯ ತನಕ ನೋಡಿದರೆ, ಮೊಟ್ಟ ಮೊದಲ

(ಶ್ರೀ ಡಿ. ಎಂ. ಸಿದ್ದಯ್ಯ)

ಸಾರಿಗೆ ಅವರು ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿದ್ದಾರೆ. ಇದಕ್ಕಾಗಿ ಪ್ರಥಮತಃ ರಾಜ್ಯಪಾಲರನ್ನು ಮನಸಾರೆ ವಂದಿಸುತ್ತೇನೆ. ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡುವುದನ್ನು ಈ ಸಭೆ ಸ್ವಾಗತಿಸಿತು. ಆದರೂ ಮಾನ್ಯ ಗೋಪಾಲಗೌಡರು ಹೆಚ್ಚಿನ ಕಾತುರತೆಯನ್ನು ತೋರಿಸಿ ಅವರ ಭಾಷಣ ಕನ್ನಡದಲ್ಲೇ ಆಗಬೇಕೆಂದು ರಾಜ್ಯಪಾಲರಿಗೆ ಪತ್ರವನ್ನು ಬರೆದು ಇಲ್ಲಿಯೂ ಕೂಡ ಈ ವಿಷಯದಲ್ಲಿ ಸದ್ಭಾವನೆಯನ್ನು ತೋರಿಸಿದುದಕ್ಕಾಗಿ ಅವರಿಗೂ ವಂದನೆಯನ್ನರ್ಪಿಸುತ್ತೇನೆ ವಂದನಾರ್ಪಣಾ ನಿರ್ಣಯ ಇಂಗ್ಲೀಷಿನಲ್ಲಿದ್ದುದರಿಂದ ಅದನ್ನೇ ಓದಬೇಕಾಯಿತು. ಅದು ಕನ್ನಡದಲ್ಲೇ ಇದಿದ್ದರೆ ಅದನ್ನೇ ಓದುತ್ತಿದ್ದೆ.

ರಾಜ್ಯಪಾಲರ ಭಾಷಣದಲ್ಲಿ ಅನೇಕ ಸಮಸ್ಯೆಗಳ ವಿಷಯವನ್ನೆತ್ತಿದ್ದಾರೆ. ಮೊದಲನೆಯದಾಗಿ ಈಗ ನಮ್ಮ ದೇಶಕ್ಕೆ ಒದಗಿರುವ ಚೀಣೀ ದುರಾಕ್ರಮಣದ ಪರಿಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ. ಇದರ ಜೊತೆಗೆ ಪಾಕಿಸ್ತಾನದ ಕೋಪಕ್ಕೆ ಪಾತ್ರರಾಗಿ ನೊಂದು ನಿರಾಶ್ರಿತರಾಗಿ ನಮ್ಮ ದೇಶಕ್ಕೆ ಬಂದಿರುವ ಸಹಸ್ರಾರು ಜನರಿಗೆ ಅನುಕೂಲ ಮಾಡಿಕೊಡಬೇಕಾದ ಹೊಸ ಸಮಸ್ಯೆ ನಮ್ಮ ದೇಶಕ್ಕೊದಗಿದೆ ಎಂದೂ ಸೂಚಿಸಿದ್ದಾರೆ. ಚೀಣೀ ಗಂಡಾಂತರದ ಜೊತೆಗೆ ಪಾಕಿಸ್ತಾನವು ಹಿಂದೂಸ್ತಾನದ ಸರಕಾರದ ಮೇಲೆ ಒಂದು ಕುಟಿಲವಾದ ಹಾಗೂ ಕೆಟ್ಟ ದೃಷ್ಟಿಯಿಂದ ಮಾಡತಕ್ಕ ದುಷ್ಪರಿಣಾಮಕಾರೀ ಕಾರ್ಯವನ್ನೂ ಭಾರತ ಸರಕಾರ ಎದುರಿಸಬೇಕಾಗಿದೆ. ಇವನ್ನು ನಮ್ಮ ಜನರೂ ಎದುರಿಸಬೇಕಾದುದು ಪ್ರಥಮ ಕರ್ತವ್ಯವಾಗಿದೆ. ಚೀಣೀ ದುರಾಕ್ರಮಣವನ್ನೆದುರಿಸಲು ನಮ್ಮ ಸರಕಾರದವರು ಹೋಂಗಾರ್ಡುಗಳು ಎನ್. ಸಿ. ಸಿ. ದಳಗಳನ್ನು ವ್ಯವಸ್ಥೆ ಮಾಡಿದ್ದಾರೆ. ಮತ್ತು ಬಿಜಾಪುರದಲ್ಲಿ ಸೈನಿಕ ಶಾಲೆಯನ್ನು ಪ್ರಾರಂಭ ಮಾಡಿ ದೇಶಕ್ಕೆ ಒದಗಿರುವ ದುಸ್ಥಿತಿಯನ್ನು ನಿವಾರಿಸುವುದಕ್ಕೆ ಮತ್ತು ನಾವು ಅನೇಕ ವರ್ಷಗಳ ಕಾಲ ತ್ಯಾಗ ಮತ್ತು ಬಲಿದಾನಗಳಿಂದ ಸಂಪಾದಿಸಿರುವ ಸ್ವಾತಂತ್ರವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅನುಕೂಲ ಮಾಡಿದ್ದಾರೆ. ಸರಕಾರ ಕೈಗೊಂಡಿರುವ ಈ ಕಾರ್ಯ ನಿಜವಾಗಿಯೂ ಸ್ತೋತ್ರಾರ್ಹವಾದುದು. ಇದಕ್ಕಾಗಿ ಸರಕಾರವನ್ನು ಅಭಿನಂದಿಸಬೇಕಾಗಿದೆ ರಾಷ್ಟ್ರ ರಕ್ಷಣೆಗಾಗಿ ಹಣ ಮತ್ತು ಚಿನ್ನ ವಸೂಲಾಗಿರುವುದಲ್ಲದೆ ರ್ಯಾಫಲ್ ಮೂಲಕ 10 ಲಕ್ಷದ 81 ಸಾವಿರ ರೂಪಾಯಿ ಶೇಖರವಾಗಿ ಅದರಲ್ಲಿ ಬಹುಮಾನಗಳನ್ನು ಕೊಡುವುದಕ್ಕಾಗಿ 80 ಸಾವಿರ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಜನತೆ ದೇಶದ ರಕ್ಷಣೆಯ ವಿಚಾರದಲ್ಲಿ ಮತ್ತು ದೇಶಕ್ಕೆ ಬಂದಿರುವ ಕಷ್ಟ ಪರಿಸ್ಥಿತಿಯನ್ನು ಪರಿಹಾರ ಮಾಡುವುದರಲ್ಲಿ ಎಷ್ಟುಮಟ್ಟಿಗೆ ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ಮರೆತು ಕಾರ್ಯೋನ್ಮುಖರಾಗಿದ್ದಾರೆಂಬುದನ್ನು ತೋರಿಸುತ್ತದೆ. ದೇಶ ರಕ್ಷಣೆ ಎಲ್ಲಕ್ಕಿಂತ ಮೊದಲ ಕರ್ತವ್ಯವೆಂದು ಪರಿಗಣಿಸಿರುವುದು ನಿಜವಾಗಿಯೂ ನಮ್ಮ ದೇಶದ ಸ್ವಾತಂತ್ರ ರಕ್ಷಣೆಗಾಗಿ ನಮ್ಮ ಜನರು ಎಷ್ಟು ಮಟ್ಟಿನ ನಿಷ್ಠೆಯಿಂದ ಕೆಲಸ ಮಾಡುತ್ತಾರೆಂಬುದಕ್ಕೆ ಸಾಕ್ಷಿಯಾಗಿದೆ.

ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮೂದು ಮಾಡಿರುವ ಹಾಗೆ ಮುಖ್ಯವಾಗಿ ಪಂಚಾಯಿತಿ ರಾಜ್ಯವನ್ನು ಸಾಧಿಸಬೇಕು. ಹೆಸರಿಗೆ ಮಾತ್ರ ಪಂಚಾಯಿತಿ ರಾಜ್ಯ ಎಂದಿರದೆ ಎಲ್ಲೆಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕೋ ಅಲ್ಲಿ ಆಗಿ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಅಧಿಕಾರವನ್ನು ಹಂಚಿಕೊಟ್ಟು ಚೆನ್ನಾಗಿ ಕೆಲಸ ಮಾಡಬೇಕೆಂದು ಒಂದು ಸಮಿತಿಯನ್ನು ನೇಮಕ ಮಾಡಿ, ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಅದು ಸಂಚಾರ ಮಾಡಿ, ಸ್ಥಳೀಯ ಸಂಸ್ಥೆಗಳು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿವೆ ಎಂಬ ಬಗ್ಗೆ ವರದಿಯನ್ನು ಕೊಟ್ಟಿದೆ. ಈ ಸಂಬಂಧವಾದ ಮಸೂದೆಯೊಂದು ಬರುತ್ತದೆ, ಅದರ ಮೇಲೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಪ್ರಜಾತಂತ್ರ ರಾಜ್ಯದಲ್ಲಿ ಅಧಿಕಾರವನ್ನು ಚಲಾಯಿಸುವಾಗ, ಪ್ರಜಾಸ್ವಾಮ್ಯ ದೃಷ್ಟಿಯಿಂದ ಅವರವರ ಅಂತಸ್ತಿನಲ್ಲಿ ಈ ಸಂಸ್ಥೆಗಳು ಯಾವ ರೀತಿಯಲ್ಲಿ ಕೆಲಸ ಮಾಡಬಹುದೆಂಬ ಬಗ್ಗೆ ಸುಧಾರಣೆಗಳನ್ನು ತರಬೇಕೆಂದಿದ್ದಾರೆ. ಅದು ನಿಜವಾಗಿಯೂ ಅಭಿನಂದನೀಯವಾದುದು. ಈ ತಾಲ್ಲೂಕ್ ಬೋರ್ಡುಗಳು ವಿಲೇಜ್ ಪಂಚಾಯಿತಿಗಳು ಮಾಡಬೇಕಾಗಿರತಕ್ಕಂಥ ಕೆಲಸ ನಿಜವಾಗಿಯೂ ಬಹಳ ಗುರುತರವಾದುದು. ಆದುದರಿಂದ ಈ ಬಾಬಿಗೆ ಸರಕಾರ ಹೆಚ್ಚು ಹಣ ಒದಗಿಸಬೇಕು ಎಂದು ಹೇಳುತ್ತೇನೆ. ಇದಲ್ಲದೆ ಜಿಲ್ಲಾ ಮಟ್ಟದಲ್ಲಾಗಲಿ ತಾಲ್ಲೂಕ್ ಮಟ್ಟದಲ್ಲಾಗಲಿ ಇಂಥ ಸಂಸ್ಥೆಗಳಿಗೆ ಖಾಸಗಿ ಜನರನ್ನು ಚುನಾಯಿಸಬೇಕು ಎಂದು ಇದಕ್ಕಾಗಿ ನೇಮಕ ಮಾಡಿದ ಸಮಿತಿಯವರು ವರದಿ ಮಾಡಿದ್ದಾರೆ. ಪ್ರಜಾಪ್ರಭುತ್ವದ ತತ್ವವನ್ನು ಅನುಸರಿಸಿಕೊಂಡು ರಾಜ್ಯಭಾರ ಮಾಡುವಾಗ್ಗೆ ಪೈಪೋಟಿ ಇರತಕ್ಕದ್ದು ಸಹಜ. ನಿಸ್ವಾರ್ಥ ಸೇವೆಯಿಂದ ಸಮಾಜದ ಪ್ರಗತಿ ಸಾಧಿಸುವುದು ದೇಶದ ಸಂಪತ್ತು ಹೆಚ್ಚಿಸುವುದು, ಜನರ ಕ್ಷೇಮ ಆಶಿಸುವುದು ಸಹಜವಾದುದು. ಈ ವಿಕೇಂದ್ರೀಕರಣದಿಂದ ಜಿಲ್ಲಾ ಮಟ್ಟದಲ್ಲಿ

ಕೆಲಸ ಮಾಡತಕ್ಕಂಥ ಮುಖಂಡರುಗಳಿಗೆ ಇದರಿಂದ ಒಂದು ಒಳ್ಳೆಯ ಅವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ. ಇಂಥ ಜನ ಮುಂದೆ ಬಂದು ಕೆಲಸ ಮಾಡುವುದರಿಂದ ಪೈಪೋಟಿ ಸಹ ಕಡಿಮೆಯಾಗುವುದು. ಇದರಿಂದ ಬಹಳ ಒಳ್ಳೆಯ ಪರಿಣಾಮ ಉಂಟಾಗುತ್ತದೆ. ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಗೆ ಅನುಗುಣವಾಗಿ ಒಂದು ಮಸೂದೆಯನ್ನು ಈ ಸಭೆಯಲ್ಲಿ ತಂದು ಅದನ್ನು ಪಾಸ್ ಮಾಡತಕ್ಕದ್ದು ಒಳ್ಳೆಯದು. ಏಕೆಂದರೆ ದೇಶದಲ್ಲಿ ಸುಖೀರಾಜ್ಯ ಸ್ಥಾಪನೆ ಮಾಡಿ ಜನ ಜೀವನ ಸುಖಮಯವಾಗುವ ಹಾಗೆ ಮಾಡಲು ಒಂದು ಅವಕಾಶ ಉಂಟಾಗುವುದರಿಂದ ಇದು ಸ್ವಾಗತಾರ್ಹವಾದುದು.

ದೇಶದಾದ್ಯಂತ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ಯೋಜನೆ ಜಾರಿಗೆ ಬಂದಿದೆ. ಇದು ಬಹಳ ಒಳ್ಳೆಯದು. ಈ ಯೋಜನೆಯು ಕೆಲಸ ಮಾಡತಕ್ಕಂಥ ವಿಧಾನದಲ್ಲಿ ಅಲ್ಪ ಸ್ವಲ್ಪ ಲೋಪ ದೋಷಗಳು ಕಂಡು ಬಂದಿವೆ. ಸಂಬಂಧಪಟ್ಟ ಅಧಿಕಾರಿಗಳು ನಿಜವಾಗಿಯೂ ಜನತೆಯ ಜೊತೆಗೆ ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಜನರ ಕಷ್ಟ ಸುಖ ಏನು ಎಂಬುದನ್ನು ಕಂಡು ಹಿಡಿದು ಜನರಿಗೆ ಅನುಕೂಲ ಕಲ್ಪಿಸುವುದಕ್ಕೆ ಈ ಯೋಜನೆಯ ಮೂಲಕ ಕಾರ್ಯಕ್ರಮ ಹೆಚ್ಚು ಫಲಕಾರಿಯಾಗುವ ಹಾಗೆ ಸರಕಾರ ಮಾಡಿರುವುದು ಒಳ್ಳೆಯದಾಗಿದೆ. ಇನ್ನೂ ಹೆಚ್ಚು ಪ್ರಚಾರ ಮಾಡಿ ಜನತೆಗೆ ತಿಳಿವಳಿಕೆ ಮಾಡಿಕೊಡುವ ಯೋಜನೆಯನ್ನು ಸರಕಾರ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಮಾಡುತ್ತೇನೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಖ್ಯವಾಗಿ ಸಹಕಾರ ಸಂಘಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸಹಕಾರ ಸಂಘಗಳ ಕ್ಷೇತ್ರದಲ್ಲಿ ಒಟ್ಟು 11 ಹೋಲ್‌ಸೇಲ್ ಸ್ಟೋರ್ಸ್, 185 ರಿಟೇಲ್ ಸ್ಟೋರ್ಸ್ ರಚಿತವಾಗಿವೆ ಎಂದು ಹೇಳಿ, ಇವುಗಳಲ್ಲಿ ಒಟ್ಟು 2.98 ಕೋಟಿ ರೂಪಾಯಿ ಮಾರಾಟದ ಸ್ಟೋರುಗಳಲ್ಲಿ ಮತ್ತು ಚಿಲ್ಲರೆ ಮಾರಾಟದ ಸ್ಟೋರುಗಳಲ್ಲಿ 6.52 ಕೋಟಿ ರೂಪಾಯಿ ವ್ಯಾಪಾರ ನಡೆದಿದೆ ಎಂದು ನಮೂದಿಸಿದ್ದಾರೆ. ಸಕ್ಕರೆ ಹಂಚಿಕೆಯು ಬಹುಮಟ್ಟಿಗೆ ಸಹಕಾರ ಸಂಘಗಳ ಮೂಲಕ ನಡೆಯುವ ಕಾರಣ ಬೆಲೆಯನ್ನು ತಡೆಗಟ್ಟಲು ಅತ್ಯಂತ ಅನುಕೂಲವಾಗಿದೆ ಎಂದು ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ದಳ್ಳಾಳಿಗಳಿಂದ ಸಾಗುವಳಿದಾರರ ಶೋಷಣೆ ಯಾಗದಂತೆ ನೋಡಿಕೊಳ್ಳುವ ಸಲುವಾಗಿ ಸಹಕಾರಿ ಸಂಘಗಳು ಭತ್ತವನ್ನು ಪೂರ್ತಿಯಾಗಿ ಕೊಂಡುಕೊಳ್ಳುವ ಯೋಜನೆಗೆ ರಾಜ್ಯದ ಎಲ್ಲೆಡೆಗಳಲ್ಲೂ ಸ್ವಾಗತ ದೊರೆತಿದೆ, ಆದುದರಿಂದ ಈ ಯೋಜನೆಯನ್ನು ಈ ವರ್ಷದಲ್ಲಿ ಮುಂದುವರಿಸುವ ಉದ್ದೇಶ ಇದೆ ಎಂದು ಹೇಳಿದ್ದಾರೆ. ಸಹಕಾರ ಸಂಘಗಳ ಮೂಲಕ ಕಾರ್ಯಸಾಧನೆ ಮಾಡಿ ಸುಖೀರಾಜ್ಯ ನಿರ್ಮಾಣವಾಗಬೇಕೆಂಬ ಧ್ಯೇಯ ಅತ್ಯಂತ ಆದರಣೀಯವಾಗಿದೆ, ಅನುಕರಣೀಯವೂ ಆಗಿದೆ. ಇದಲ್ಲದೆ ಸಹಕಾರಿ ವ್ಯವಸಾಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಗಣನೀಯವಾಗಿದೆ ಎಂದು ಹೇಳಿದ್ದಾರೆ. ಈವರೆಗೆ 173 ಸಂಘಗಳು ಸ್ಥಾಪಿತವಾಗಿವೆ, ಅವುಗಳ ಸದಸ್ಯ ಸಂಖ್ಯೆ 4,632, ಅವು ಸಾಗುವಳಿ ಮಾಡಿದ ಜಮೀನಿನ ವಿಸ್ತೀರ್ಣ 11,559 ಎಕರೆ ಇದೆ. ನಮ್ಮ ದೇಶದಲ್ಲಿ ಸಹಕಾರ ವ್ಯವಸಾಯ ಪದ್ಧತಿ ಜಾರಿಗೆ ಬಂದು ಬಹಳ ಒಳ್ಳೆಯ ಪರಿಣಾಮ ಉಂಟು ಮಾಡಿದೆ. ಇದೊಂದು ಕ್ರಾಂತಿಕಾರಕ ಯೋಜನೆಯಾಗಿದೆ. ಇದರಲ್ಲಿ ಕೆಲವು ಲೋಪದೋಷಗಳು ಕಂಡುಬಂದಿರಬಹುದು. ಆದರೆ ಅನೇಕ ಸಹಕಾರ ಸಂಘಗಳು ಆದರ್ಶ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಸ್ವಾರ್ಥಸಾಧನೆಯ ಮೂಲಕ ಕೆಲವು ಸಹಕಾರ ಸಂಘಗಳಲ್ಲಿ ಲೋಪ ದೋಷಗಳು ಕಂಡುಬಂದಿರುವುದು ಅಂಥ ಸ್ವಾರ್ಥಿಗಳ ತಪ್ಪು ಆಗಿದೆ. ಆದರೆ ಅದು ಈ ಆದರ್ಶ ಅಥವಾ ತತ್ವದ ತಪ್ಪು ಅಲ್ಲ. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಜನ ಹಳ್ಳಿಗಾಡಿನಲ್ಲಿ ವಾಸ ಮಾಡುತ್ತಾರೆ. ಶೇಕಡ 25 ರಷ್ಟು ಜನ ವಿದ್ಯಾವಂತರು ಇದ್ದಾರೆ. ದೇಶದಲ್ಲಿ ದಾರಿದ್ರ್ಯ ಹೆಚ್ಚಾಗಿದೆ. ಅನ್ನ, ವಸ್ತ್ರ ಮತ್ತು ವಸತಿಗಳನ್ನು ಜನರಿಗೆ ಒದಗಿಸಿಕೊಡಬೇಕಾಗಿದೆ. ಜನರ ಕಷ್ಟ ಪರಿಹರಿಸಲು ಒಂದೇ ಮಾರ್ಗವೆಂದರೆ, ಸಹಕಾರ ಪದ್ಧತಿ ಎಂದು ಈ ಸಭೆಯಲ್ಲಿ ಘಂಟಾ ಘೋಷವಾಗಿ ಹೇಳಲು ಬಯಸುತ್ತೇನೆ. ಬಹುಶಃ ಪ್ರಪಂಚದಲ್ಲಿ ಪ್ರಜಾ ಪ್ರಭುತ್ವ ಪದ್ಧತಿ ಜಾರಿಗೆ ಬಂದು ಇದನ್ನು ಇಷ್ಟುಮಟ್ಟಿಗೆ ಅನುಷ್ಠಾನಕ್ಕೆ ತಂದಿರುವುದು ನಮ್ಮ ಭಾರತ ದೇಶ ಒಂದೇ ಎಂದು ಹೇಳಬಹುದು. ರಷಿಯಾ ದೇಶದಲ್ಲಿ ಕೂಡ ಈ ತತ್ವ ಸರಿಯಾಗಿ ಅನುಷ್ಠಾನಕ್ಕೆ ಬಂದಿರುವುದಿಲ್ಲ ಎಂದು ಹೇಳಬಹುದು.

2-00 P.M.

ಅವರು ಬಹಳ ಉಗ್ರಗಾಮಿ ಕಮ್ಯೂನಿಸ್ಟ್ ತತ್ವವನ್ನು ಅನುಸರಿಸಿ ರಷ್ಯ ದೇಶದಲ್ಲಿದ್ದ ಕೊರತೆಯನ್ನು ಪರಿಹರಿಸಿಕೊಂಡು ಜನತೆಗೆ ಆದರ್ಶವಾದ, ಬಲಯುತವಾದ ರಾಷ್ಟ್ರವನ್ನು ಕೊಟ್ಟರು. ಇವತ್ತು ಚೀಣಿಯರು ದುರದೃಷ್ಟವಶಾತ್ ನಮ್ಮ ಮೇಲೆ ಆಕ್ರಮಣ ಮಾಡಿದ್ದರೂ ಸಹಸ್ರಾರು

(ಶ್ರೀ ಡಿ. ಎಂ. ಸಿದ್ದಯ್ಯ)

ವರ್ಷಗಳಿಂದ ಅವರೂ ನಾವೂ ಸ್ನೇಹದಿಂದ ಇದ್ದಂಥ ದೇಶ. ಅದೂ ವ್ಯವಸಾಯದಿಂದ ಕೂಡಿದ ದೇಶವಾದರೂ ಅನೇಕ ಪ್ರಯೋಗಗಳನ್ನು ಮಾಡಿ ಕೊನೆಗೆ ಸಮತಾವಾದ ತತ್ವದ ಮೇಲೆ ಕಮ್ಯೂನಿಸ್ಟ್ ಸರಕಾರವನ್ನು ಸ್ಥಾಪಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದಾರೆ. ಆದರೆ ಹಿಂದೂಸ್ಥಾನ ಒಂದು ಮಾತ್ರ ಕಮ್ಯೂನಿಸ್ಟ್ ಸರ್ಕಾರಕ್ಕೆ ಎಡೆಕೊಡದೆ, ವಾಕ್ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆ ಕೊಟ್ಟು, ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸಿ ಪ್ರಗತಿಯನ್ನು ಸಾಧಿಸಲು ಹೊರಟಿದೆ. ಬರೀ ಅನ್ನ ಹೆಚ್ಚಾಗಿದ್ದರೆ ಸಾಲದು, ಬುದ್ಧಿ ಶಕ್ತಿಯೂ ಜನರಲ್ಲಿ ಕುದುರಬೇಕೆಂಬ ಆಕಾಂಕ್ಷೆಯನ್ನಿಟ್ಟುಕೊಂಡು ರಾಷ್ಟ್ರವನ್ನು ಶ್ರೇಷ್ಠ ಮತ್ತು ಬಲಿಷ್ಠವಾಗಿ ಮಾಡುವಾಗ ವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯನ್ನಿಟ್ಟುಕೊಂಡು ಪ್ರಜಾಪ್ರಭುತ್ವ ವನ್ನು ಜಾರಿಗೆ ತಂದಿದೆ. ಇಂಥ ವ್ಯವಸಾಯದ ದೇಶದಲ್ಲಿ ಈ ಪ್ರಜಾಪ್ರಭುತ್ವ ತತ್ವವನ್ನು ಅನುಸರಿಸಿ ಕೊಂಡು ನಾವು ಸಮತಾವಾದ ಸಮಾಜವನ್ನು ನಿರ್ಮಿಸಬೇಕಾದರೆ ನಮಗೆ ಸಹಕಾರೀ ವ್ಯವಸಾಯ ವನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದು ಈ ಮಾನ್ಯ ಸಭೆಯಲ್ಲಿ ಸ್ಪಷ್ಟಪಡಿಸುತ್ತೇನೆ. ಮೊನ್ನೆ ನಡೆದ ಭುವನೇಶ್ವರ ಸೆಷನ್ನಿನಲ್ಲಿ ಸಮಾಜವಾದಿ ಪ್ರಜಾಪ್ರಭುತ್ವ ರೀತಿಯನ್ನು ಅನುಸರಿಸಬೇಕು ಎನ್ನತಕ್ಕಂಥ ನಿರ್ಣಯವನ್ನು ಕಾಂಗ್ರೆಸ್ ಮಹಾ ಸಂಸ್ಥೆ ಇವತ್ತು ಅಂಗೀಕರಿಸಿದೆ. ಕೇಂದ್ರ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳು ಆ ತತ್ವವನ್ನು ಆಧಾರವಾಗಿಟ್ಟುಕೊಂಡು, ನಾವು ಯಾವ ಕ್ಷೇತ್ರದಲ್ಲಿಯೇ ಕೆಲಸ ಮಾಡಲಿ ಕೈಗಾರಿಕೆ ಕ್ಷೇತ್ರವೇ ಆಗಿರಲಿ, ವ್ಯವಸಾಯ ಕ್ಷೇತ್ರವೇ ಆಗಿರಲಿ, ಮತ್ತೆ ಬೇರೆ ಯಾವ ಕ್ಷೇತ್ರ ಅಥವಾ ಸಂಪತ್ತನ್ನು ಹೆಚ್ಚಿಸತಕ್ಕಂಥ ಯಾವ ಒಂದು ಉದ್ಯಮವೇ ಆಗಿರಲಿ, ಅದರಲ್ಲಿ ಸಹಕಾರ ತತ್ವವನ್ನು ಮೂಲ ಮಂತ್ರವಾಗಿಟ್ಟುಕೊಂಡು ಹೊರಟರೆ ಮಾತ್ರ ಸಾಧ್ಯ ಎನ್ನುವುದು ಸಂಪೂರ್ಣ ವಿದಿತವಾದುದು. ಇವತ್ತು ಸಹಕಾರ ಸಂಘಗಳು ಕೆಲಸ ಮಾಡತಕ್ಕಂಥಾದ್ದು ಬಹಳ ಮುಖ್ಯವಾದ ವಿಚಾರ. ಸರ್ಕಾರದವರು ಒಂದು ಉಗ್ರ ತಿದ್ದುಪಡಿಯನ್ನು 1959 ನೇ ಕೋ-ಆಪರೇಟಿವ್ ಆಕ್ಟಿಗೆ ತಂದು ಆ ಮೂಲಕ ಸಹಕಾರ ಸಂಸ್ಥೆಗಳಲ್ಲಿ ಉಳಿದಿರುವ ಸಾಲವನ್ನು ವಸೂಲು ಮಾಡ ಲಾಗುತ್ತದೆ. ಆ ತಿದ್ದುಪಡಿಯನ್ನು ಸರ್ಕಾರದವರು ಈ ಮಾನ್ಯ ಸಭೆಯ ಮುಂದೆ ತಂದು, ಆಕ್ಟಿನಲ್ಲಿ ಒಂದು ಲೋಪದೋಷವೇನಿದೆಯೋ ಅದನ್ನು ಸರಿಪಡಿಸಿಕೊಂಡು, ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಹಾಗೆ ವ್ಯವಸ್ಥೆ ಮಾಡತಕ್ಕಂಥ ನಂಬಿಕೆ ಇದೆಯೆಂದು ನಾನು ಈ ಮಾನ್ಯ ಸಭೆಯಲ್ಲಿ ತಿಳಿಸಲು ಸಂತೋಷ ಪಡುತ್ತೇನೆ.

ಮತ್ತು ಈಗ ಮಳೆ ಸರಿಯಾಗಿ ಬಾರದೆಯೇ ಅನೇಕ ಕಡೆಗಳಲ್ಲಿ ಬೆಳೆಯಾಗ ದೆಯೇ ರೈತರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಚಿತ್ರದುರ್ಗ, ತುಮಕೂರು, ಕೋಲಾರ್, ಮಂಡ್ಯ, ಮೈಸೂರು, ಈ ಜಿಲ್ಲೆಗಳಲ್ಲಿ ರಿಲೀಫ್ ಕಾಂಗಾರಿಯನ್ನು ಕೈಗೊಳ್ಳಬೇಕೆಂದು, ತಕಾವಿ ಲೋನು, ಮತ್ತು ಭೂಮಿಯನ್ನು ಉತ್ತಮ ಪಡಿಸತಕ್ಕಂಥ ಸಾಲ ಗಳನ್ನು ಕೊಡಬೇಕೆಂದು ಇದರಲ್ಲಿ ನಮೂದಿಸಿದ್ದಾರೆ. ನಾನು ಮೊನ್ನೆ ಧಾರವಾಡ ಜಿಲ್ಲೆಗೆ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿ ನಾಲ್ಕಾರು ತಾಲ್ಲೂಕಿನಲ್ಲಿ ಮಳೆ ಆಗದೆಯೇ ಹೀಗೆಯೇ ಬಹಳ ತೊಂದರೆಯಾಗಿದೆ. ಅವರಿಗೆ ತಕಾವಿ ಲೋನು ಹಿಂದೆ ಏನು ಕೊಟ್ಟಿದ್ದರೋ ಅದನ್ನು ವಸೂಲು ಮಾಡುವುದನ್ನು ಮುಂದಕ್ಕೆ ಹಾಕಬೇಕೆಂದು ಸರ್ಕಾರಕ್ಕೆ ಮನವಿ ಕಳುಹಿಸಿದ್ದಾರೆ. ಇಲ್ಲಿಯೂ ರಿಲೀಫ್ ಕಾಂಗಾರಿಗಳು, ತಕಾವಿ ಮತ್ತು ಭೂಮಿ ಉತ್ಪಾದನೆಯನ್ನು ಜಾಸ್ತಿ ಮಾಡತಕ್ಕಂಥ ಸಾಲಗಳನ್ನು ಸರ್ಕಾರದವರು ಕೊಡತಕ್ಕಂಥ ಏರ್ಪಾಡು ಮಾಡಬೇಕು. ಬರೀ ಮೈದಾನ ಪ್ರದೇಶದ ಡಿಸ್ಟ್ರಿಕ್ಟುಗಳಿಗೇ ಅಲ್ಲದೆ ನಮ್ಮ ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ತರಹ ತೊಂದರೆಗಳು ಒದಗಿ ವೆಯೋ, ಅಲ್ಲೆಲ್ಲಾ ಈ ಸಹಾಯವನ್ನು ಸರ್ಕಾರದವರು ತಕ್ಷಣ ಮಾಡಬೇಕು, ಮತ್ತು ಮಾಡುತ್ತಾ ರೆಂಬ ನಂಬಿಕೆಯ ಈ ಮಾತನ್ನೂ ತಿಳಿಸುತ್ತೇನೆ.

ಮತ್ತೊಂದು ವಿಷಯವೇನೆಂದರೆ ಮೈನರ್ ಇರಿಗೇಷನ್ನಿಗೆ 40 ಕೋಟಿ ರೂಪಾಯಿಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಖರ್ಚು ಮಾಡಬೇಕೆಂದು ಉದ್ದೇಶಿಸಿ ದ್ದಾರೆಂಬುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ಇದರಲ್ಲಿ ಈ ವರ್ಷದಲ್ಲಿ 25 ಕೋಟಿ ರೂಪಾಯಿ ಖರ್ಚು ಮಾಡಬೇಕು ಮತ್ತು ಇನ್ನೂ ಒಂದು ಕೋಟಿ ರೂಪಾಯಿಯನ್ನು ಜಾಸ್ತಿ ಕೊಡತಕ್ಕಂಥ ಒಂದು ಸಲಹೆಯನ್ನು ರಾಜ್ಯಪಾಲರು ಭಾಷಣದಲ್ಲಿ ಸೂಚಿಸಿದ್ದಾರೆ. ಮುಂದೆ ಬರತಕ್ಕಂಥ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದವರು ನಮ್ಮ ನೆರವಿಗೆ ಬಂದು ಈ ಪರಿಹಾರದ ಯೋಜನೆಗೆ ಹೆಚ್ಚು ಸಹಾಯ ಮಾಡುತ್ತಾರೆನ್ನುವುದು ನಿಜವಾಗಿ ದೇಶದ ಕಲ್ಯಾಣದ ಕೆಲಸದಲ್ಲಿ ಶ್ರದ್ಧೆ, ಉತ್ಸಾಹ ತೋರಿಸುತ್ತಿರುವುದು ವಂದನಾರ್ಹವಾದ ವಿಚಾರ. ದೊಡ್ಡ ದೊಡ್ಡ ಪ್ರಾಜೆಕ್ಟು ಗಳಿಂದ ಲಕ್ಷಾಂತರ ಎಕರೆ ನೀರಾವರಿಗೆ ಸಹಾಯವಾಗುತ್ತದೆ. ಆದರೆ ಸಣ್ಣ ಸಣ್ಣ ನೀರಾವರಿ

ಯೋಜನೆಗಳಿಂದ ಸ್ವಲ್ಪ ಸ್ವಲ್ಪ ವ್ಯವಸಾಯ ಮಾಡತಕ್ಕಂಥ ರೈತರುಗಳಿಗೆ 2-4-5-10 ಎಕರೆ ಮಾಡತಕ್ಕಂಥ ಪ್ರತಿಯೊಬ್ಬ ರೈತನಿಗೂ ಅನುಕೂಲವಾಗುತ್ತದೆ. ಸಣ್ಣ ನೀರಾವರಿ ಯೋಜನೆಗಳಿಂದ 40 ಎಕರೆ, 100 ಎಕರೆ, 200 ಎಕರೆ, 500 ಎಕರೆ, ಕೆಲವು ಸಂದರ್ಭಗಳಲ್ಲಿ ಸಾವಿರ ಎಕರೆಗಳವರೆಗೆ ವ್ಯವಸಾಯ ಮಾಡಿ ದೇಶದ ಸಂಪತ್ತನ್ನು ಹೆಚ್ಚಿಸಿದ ನಿದರ್ಶನಗಳಿವೆ. ದೇಶದಲ್ಲಿರತಕ್ಕಂಥ ಪ್ರತಿ ಪ್ರಜೆಗೂ ಅತ್ಯವಶ್ಯಕವಾಗಿ ಬೇಕಾದುದು ಅನ್ನ. ಆ ಉದ್ದೇಶದಿಂದ ದೊಡ್ಡ ನೀರಾವರಿ ಯೋಜನೆಗೆ ಭಾರಿ ಗಮನ ಕೊಟ್ಟಿರುವುದು ಇನ್ನೂ ಪ್ರಶಂಸನೀಯವಾದುದು. ಇದರ ಜೊತೆಗೆ ನೀರಾವರಿಯ ಕೆಲಸದಲ್ಲಿ ಸರ್ಕಾರದವರು ಎಷ್ಟು ಶ್ರದ್ಧೆ, ಆಸಕ್ತಿ ವಹಿಸಿ ರೈತರಿಗೆ ಪ್ರೋತ್ಸಾಹ ಕೊಟ್ಟರೂ ಅದು ಕಡಮೆಯೇ ಆಗುವುದು ಎಂಬ ಮಾತನ್ನು ನಾನು ನಮ್ರತೆಯಿಂದ ಈ ಮಾನ್ಯ ಸಭೆಯಲ್ಲಿ ಸೂಚಿಸುತ್ತೇನೆ. ಇವತ್ತಿನ ದಿವಸ ಅಮೇರಿಕ ದೇಶದಲ್ಲಿ ಶೇಕಡ 12 ರಷ್ಟು ಜನ ವ್ಯವಸಾಯ ಮಾಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಎಷ್ಟು ಬೆಳೆಯುತ್ತಾರೆಯೋ ಅದಕ್ಕೆ 20 ರಷ್ಟು ಜಾಸ್ತಿ ಬೆಳೆಯುತ್ತಾರೆ. ಧಾನ್ಯವನ್ನು ಹೆಚ್ಚಾಗಿ ಬೆಳೆಯುವುದರಿಂದ, ಅವರ ಮಾರುಕಟ್ಟೆ ವ್ಯತ್ಯಾಸವಾಗುತ್ತದೆ; ಆ ದೃಷ್ಟಿಯಿಂದ ಅವರು ಹೆಚ್ಚಿಗೆ ಬೆಳೆದ ಆಹಾರ ಪದಾರ್ಥಗಳನ್ನು ಸಮುದ್ರಕ್ಕೆ ಹಾಕುತ್ತಾರೆ ಅಥವಾ ಸುಟ್ಟು ಹಾಕುತ್ತಾರೆ. ನಮ್ಮ ದೇಶದ ವ್ಯವಸಾಯ ಪದ್ಧತಿ ಅವರ ಮಟ್ಟದಲ್ಲಿದೆ. ಈ ಆಹಾರದ ಒಂದು ಕೊರತೆಯಿಂದ ಇಷ್ಟು ತೊಂದರೆಯಾಗಿದೆ. ಅದೂ ಅಲ್ಲದೆ ಹಿಂದೂಸ್ಥಾನದಲ್ಲಿ ವರ್ಷೇ ವರ್ಷೇ ಪ್ರಜಾ ಸಂಖ್ಯೆ ಅಧಿಕವಾಗಿ, ಆಹಾರದ ಉತ್ಪಾದನೆ ಅದಕ್ಕೆ ತಕ್ಕಂತೆ ಹೆಚ್ಚಿಲ್ಲ. ಇದೂ ಒಂದು ಸಮಸ್ಯೆಯಾಗಿದೆ, ಪ್ರಜಾಸಂಖ್ಯೆ ಹೆಚ್ಚಾದಂತೆ ಅದಕ್ಕೆ ಅನುಗುಣವಾಗಿ ಆಹಾರ ಉತ್ಪಾದನೆಯಾಗುವುದೂ ಅವಶ್ಯಕ. ಆದರೆ ಮಾಲ್ ತೂಸ್ ಥೀರಿ ಆಫ್ ಪಾಪ್ಯುಲೇಷನ್ ಪ್ರಕಾರ ಎಷ್ಟೇ ಆಹಾರವನ್ನು ಉತ್ಪಾದನೆ ಮಾಡಿದರೂ ಜನಸಂಖ್ಯೆ ಅದಕ್ಕಿಂತ ಶೀಘ್ರವಾದ ವೇಗದಲ್ಲಿ ಬೆಳೆಯುತ್ತದೆ. ಆದ್ದರಿಂದ ಪ್ರಪಂಚದಲ್ಲಿ ಜನಸಂಖ್ಯೆಯನ್ನು ಆಹಾರೋತ್ಪಾದನೆಯನ್ನು ಸರಿದೂಗಿಸುವುದು ಕಷ್ಟವೆಂದು ಅಭಿಪ್ರಾಯಪಟ್ಟಿದ್ದಾರೆ. ಆ ಪ್ರಿನ್ಸಿಪಲ್ ಏನೇ ಇರಲಿ ನಾವು ಅಹಾರೋತ್ಪಾದನೆಗೆ ಮಾಡಬೇಕಾದ ಎಲ್ಲಾ ಪ್ರಯತ್ನವನ್ನೂ ಅತ್ಯಧಿಕ ರೀತಿಯಲ್ಲಿ ಮಾಡಬೇಕು. ಈ ದೃಷ್ಟಿಯಿಂದ, ಅತ್ಯವಶ್ಯಕವಾದಂಥ ಈ ಒಂದು ಸಣ್ಣ ನೀರಾವರಿ ಯೋಜನೆಗೆ ಸರಕಾರದವರು ಇನ್ನೂ ಹೆಚ್ಚಿನ ಪ್ರೋತ್ಸಾಹ ಹಾಗೂ ಹೆಚ್ಚು ಸಹಾಯವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ನಾನು ನಮೂದಿಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಈ ನೀರಾವರಿ ಬಾವಿಗಳನ್ನು ತೆಗೆಸುವುದಕ್ಕೆ ಸರ್ಕಾರದವರು ಕೊಟ್ಟಿರತಕ್ಕಂಥ ಸಹಾಯದಲ್ಲಿ 1960ರ ಏಪ್ರಿಲ್ ನಿಂದ 1963ರ ಮಾರ್ಚಿ ತನಕ 27,500 ಬಾವಿಗಳಿಗೆ ಸರಕಾರದವರು ಮಂಜೂರು ಮಾಡಿದ್ದಾರೆ. ಅದರಲ್ಲಿ ಅರ್ಧ ಭಾಗ: ಎಂದರೆ ಸುಮಾರು 14 ಸಾವಿರ ಬಾವಿಗಳು ಪೂರ್ತಿಯಾಗಿದೆ; ಇನ್ನೂ 13½ ಸಾವಿರ ಬಾವಿಗಳು ಇನ್ನು ಕೇವಲ ಕೆಲವೇ ತಿಂಗಳುಗಳಲ್ಲಿ ಪೂರ್ತಿಯಾಗತಕ್ಕಂಥ ಆಶ್ವಾಸನೆಯನ್ನು ಸರಕಾರದವರು ಕೊಟ್ಟಿದ್ದಾರೆ. ಬಾವಿಗಳಿಗೆ ಹಣವನ್ನು ಕೊಡುವ ಕಾನೂನುಗಳನ್ನು ಸರಕಾರದವರು ಸಡಿಲಗೊಳಿಸಿ, ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ, ಆದರೆ ನಮ್ಮ ದೇಶದ ಪರಿಸ್ಥಿತಿ ಹೇಗಿದೆಯೆಂದರೆ ಯಾವ ಸೌಕರ್ಯಗಳನ್ನು ಸರಕಾರದವರು ಮಾಡಿದರೂ ಸಾಧಾರಣವಾಗಿ ಅನುಕೂಲ ಸ್ಥಿತಿಯಲ್ಲಿರುವ ಎಂದರೆ ಮಿಡಲ್ ಕ್ಲಾಸ್ ರೈತರಿಗೆ ಪ್ರಯೋಜನವಾಗುತ್ತದೆಯೇ ಹೊರತು, ಬಡವನಾಗಿ 4—5 ಎಕರೆ ಜಮೀನನ್ನು ವ್ಯವಸಾಯ ಮಾಡುತ್ತಿರುವವನಿಗೆ ಅವುಗಳ ಸಹಾಯ ಸಿಕ್ಕುತ್ತಿಲ್ಲ. ಏಕೆಂದರೆ ಅವನು ಯಾರಿಂದ ಸಾಲ ಪಡೆಯುತ್ತಾನೋ, ಅವನಿಗೆ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಒದಗಿಸಿದ್ದಿದ್ದರೆ, ಅವನು ಸಾಲ ಕೊಡುವುದಿಲ್ಲ. ಸಬ್‌ರಿಜಿಸ್ಟ್ರಾರ ಆಫೀಸಿನಿಂದ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು. ಸಾಲ ಬೇರೆ ಕಡೆ ಇದ್ದರೆ ಸಾಲವನ್ನು ಸರಕಾರದವರು ಕೊಡುವುದಕ್ಕಾಗುವುದಿಲ್ಲ. ಎಂದರೆ ಸರಕಾರದವರು ಮಾಡಿರತಕ್ಕಂಥ ನೀತಿಯಿಂದ ಬಹುಜನಕ್ಕೆ ಪ್ರಯೋಜನವಾದರೂ, 27 ಸಾವಿರ ಬಾವಿಗಳ ಅನುಕೂಲವನ್ನು ಇವತ್ತಿನ ದಿವಸ ಮಾಡಿಕೊಟ್ಟು ಬೇಕಾದಷ್ಟು ಆಹಾರ ಉತ್ಪಾದನೆ ಆಗತಕ್ಕಂಥ ಕೆಲಸ ಮಾಡಿರುವುದು ಸ್ತುತ್ಯರ್ಹವಾದರೂ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂಬ ನಿಯಮವನ್ನು ಸಡಿಲಗೊಳಿಸಿ ಬಡ ರೈತನಿಗೆ ಸಾಲ ಒದಗುವ ಸನ್ನಿವೇಶವನ್ನು ಸರ್ಕಾರದವರು ಮಾಡಿಕೊಡಬೇಕು. ಬಡ ಜನಗಳು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಕೊಡದೆ ಇದ್ದಾಗ್ಯೂ ಸರ್ಕಾರದವರು ಅವರ ಜಮೀನನ್ನು ಆಧಾರವಾಗಿಟ್ಟುಕೊಂಡು ಅವರಿಗೆ ಸಾಲ ಸಿಕ್ಕುವಂತೆ ಮಾಡಬೇಕು. ನಮ್ಮ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಅವನು ತೆಗೆದುಕೊಂಡ ಸಾಲವನ್ನು ವಾಪಸು ಕೊಡದೆ ಮೋಸ ಮಾಡುವುದಕ್ಕೆ ಹೋಗುವುದಿಲ್ಲ. ನಿಜವಾಗಿ ಅವನು ಜಮೀನಿನಲ್ಲಿ ಉತ್ಪಾದನೆ ಜಾಸ್ತಿ ಮಾಡಿದಾಗ, ತನ್ನಷ್ಟಕ್ಕೆ ತಾನೇ ಸಾಲ ತೀರಿಸುವುದಕ್ಕೆ ಸಿದ್ಧನಾಗಿರುತ್ತಾನೆ. ಮಾನವೀಯತೆಯ ದೃಷ್ಟಿಯಿಂದ ಸರ್ಕಾರದವರು ಕಾನೂನುಗಳನ್ನು ಸಡಿಲಿಸಿ, ಬಡರೈತರಿಗೆ ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ ಎನ್ನತಕ್ಕಂಥಾದ್ದು. ಯಾವುದೇ ಒಬ್ಬರಾಯನ ಕಾಲದಲ್ಲಿ, ಅನೇಕ ವರ್ಷಗಳ ಹಿಂದೆ ಯಾವುದೇ ಕಾಲದಲ್ಲಿ ಆಗಿರತಕ್ಕಂಥಾದ್ದು, ಅದನ್ನೇ ಇವತ್ತಿನ ದಿವಸದವರೆಗೂ ಕಂಟಿನ್ಯೂ ಮಾಡಿಕೊಂಡು ಬಂದಿದ್ದಾರೆ. ಭೂಮಿಯನ್ನು ಸರ್ವೆಮಾಡಿಸಿ, ಉತ್ಪಾದನೆಯನ್ನು ನೋಡಿ ಭೂಮಿಗೆ ಕಂದಾಯ ಹಾಕತಕ್ಕಂಥ, ಒಂದು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕಂಥ ಕೆಲಸವನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಆ ಕೆಲಸ 1964ರ ಹೊತ್ತಿಗೂ ಮುಗಿದಿಲ್ಲ. ಅದನ್ನು ಸುಮಾರು 1955-56ರಲ್ಲಿಯೇ ಸರಿಪಡಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅದು ನಿಜವಾಗಿಯೂ ಕೂಡ ಪ್ರಶಂಸನೀಯವಾದುದು. ಹಾಗಾದರೆ ಯಾವ ಜಮೀನು ಎಷ್ಟು ಉತ್ಪತ್ತಿ ಕೊಡುತ್ತದೆಯೋ ಅದಕ್ಕನುಗುಣವಾಗಿ ಕಂದಾಯವನ್ನು ನಿಗದಿ ಮಾಡುವುವಕ್ಕೆ ಅವಕಾಶವಾಗಿ ಅನೇಕ ರೈತರಿಗೆ ಸೌಕರ್ಯವಾಗುತ್ತದೆ ಎಂಬ ಮಾತನ್ನು ತಿಳಿಸುತ್ತೇನೆ.

ಭೂ ಸುಧಾರಣೆಯ ವಿಷಯದಲ್ಲಿ ಬಹಳ ಚರ್ಚೆಯಾಗುತ್ತಾ ಇದೆ. ಭೂ ಸುಧಾರಣೆಯನ್ನು ಮಾಡುವುದು ಕಾಂಗ್ರೆಸ್ ಸರ್ಕಾರದ ಮೂಲ ತತ್ವಗಳಲ್ಲಿ ಒಂದು. ಉಳುವವನೇ ಭೂಮಿಯ ಒಡೆಯನಾಗಬೇಕು, ಯಾವನು ಕಷ್ಟಪಟ್ಟು ಶ್ರಮಿಸುತ್ತಾನೆ, ಬೆವರು ಸುರಿಸುತ್ತಾನೆ, ಜಮೀನನ್ನು ಉಳುಮೆ ಮಾಡುತ್ತಾನೆ ಅವನಿಗೆ ಅದರ ಮೇಲೆ ಒಡೆತನ ಇಲ್ಲದೇ ಇದ್ದರೆ ಅವನಿಗೆ ಆತ್ಮಗೌರವವೂ ಇರುವುದಿಲ್ಲ, ಭೂಮಿಯಲ್ಲಿ ಕೆಲಸ ಮಾಡತಕ್ಕ ವಿಶ್ವಾಸವೂ ಕೂಡ ಬರುವುದಿಲ್ಲ ಎಂಬ ದೃಷ್ಟಿಯಿಂದ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದಿದೆ ಮೈಸೂರು ಸರ್ಕಾರದಲ್ಲಿ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ಮಂಜಪ್ಪನವರು ಶ್ರಮಿಸಿ, ಶ್ರದ್ಧೆವಹಿಸಿ ನಿಷ್ಠೆಯಿಂದ ಆ ಕೆಲಸವನ್ನು ತ್ವರಿತಗೊಳಿಸಿದ್ದರಿಂದ ಅಷ್ಟೇ ಶ್ರದ್ಧೆ ಮತ್ತು ಅಷ್ಟೇ ವಿಶ್ವಾಸ ರೈತರೆಲ್ಲಾ ಹೊಂದಿದ್ದಾರೆ. ಹದಿನೇಳನೇ ಅಮೆಂಡ್‌ಮೆಂಟ್ ಪಾರ್ಲಿಮೆಂಟಿನಲ್ಲಿ ತಿದ್ದುಪಡಿಯಾದ ಕೂಡಲೇ ನಮ್ಮ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುತ್ತಾರೆ. ಆಗ ಲ್ಯಾಂಡ್ ಲಾರ್ಡ್‌ಗಳಿಂದ ಆಗತಕ್ಕ ತೊಂದರೆ ತಪ್ಪುತ್ತದೆ. ಈಗ ಅವರಿಂದ ಟೆನೆಂಟುಗಳಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ನಿನ್ನೆತಾನೆ ಒಂದು ತಿದ್ದುಪಡಿ ಮಸೂದೆಯನ್ನು ತೆಗೆದುಕೊಂಡು ಬಂದು 1965ರವರೆಗೂ ಮುಂದುವರಿಸಿದ್ದಾರೆ. ಭೂಸುಧಾರಣೆಯನ್ನು ಜಾರಿಗೆ ತರುವ ವಿಷಯದಲ್ಲಿ ಸರ್ಕಾರದವರನ್ನು ಸಂಶಯದೃಷ್ಟಿಯಿಂದ ನೋಡಬೇಕಾಗಿಲ್ಲ. ಅವರಿಗೆ ಎಷ್ಟು ಶ್ರದ್ಧೆ ಇದೆಯೋ ಅವರಿಗಿಂತ ಹೆಚ್ಚಿನ ಶ್ರದ್ಧೆ ಸರ್ಕಾರದವರಿಗೆ ಇದೆ ಎಂದು ತಿಳಿಸುತ್ತೇನೆ. ಭೂಸುಧಾರಣೆ ಜಾಗ್ರತೆ ಬಂದು ಯಾವ ಮನುಷ್ಯ ಭೂಮಿಯನ್ನು ಉಳುತ್ತಾನೆಯೋ ಅವನೇ ಭೂಮಿಯ ಒಡೆಯನಾಗಿ ಅದರ ಸುಖವನ್ನು ಅನುಭವಿಸಲಿ ಎಂಬ ಮಾತನ್ನು ಈ ಸಭೆಯಲ್ಲಿ ತಿಳಿಸಲು ಸಂತೋಷಪಡುತ್ತೇನೆ.

ಭೂಮಿ ಇಲ್ಲದೇ ಇರತಕ್ಕವರಿಗೆ ಭೂಮಿಯನ್ನು ಕೊಡತಕ್ಕ ಕಾರ್ಯದಲ್ಲಿ ಸರ್ಕಾರದವರು ಒಂದು ಹೊಸ ಕಮಿಟಿಯನ್ನು ರಚನೆ ಮಾಡತಕ್ಕ ಸಲಹೆಯನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಸಬ್‌ಡಿವಿಜನ್ ಆಫೀಸರು ಅದಕ್ಕೆ ಅಧ್ಯಕ್ಷರು, ಫಾರೆಸ್ಟ್ ಇಲಾಖೆ, ಎಕ್ಸೈಜ್ ಇಲಾಖೆ, ಅನಿಮಲ್ ಹಸ್ಬೆಂಡರಿ ಇಲಾಖೆಯವರೆಲ್ಲರೂ ಅದರಲ್ಲಿ ಇರುತ್ತಾರೆ ಮತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷರೂ ಇರುತ್ತಾರೆ. ಆಯಾ ತಾಲ್ಲೂಕುಗಳಲ್ಲಿ ಯಾವ ಭೂಮಿಯನ್ನು ವ್ಯವಸಾಯಕ್ಕೆ ಕೊಡಬಹುದು, ಫಾರೆಸ್ಟ್‌ಗೆ ಯಾವುದನ್ನು ಉಳಿಸಿಕೊಳ್ಳಬಹುದು ಎಂಬ ವಿವೇಚನೆಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡುವುದರಿಂದ ನಿಜವಾಗಿಯೂ ಭೂಮಿ ಸರಿಯಾದವರಿಗೆ ಸಿಕ್ಕಬಹುದು, ಕೆಲವು ಸಂದರ್ಭಗಳಲ್ಲಿ ವ್ಯವಸಾಯ ಮಾಡದೇ ಇರತಕ್ಕ ಜನ ಭೂಮಿಯನ್ನು ಕೊಂಡು ಪುನಃ ವ್ಯವಸಾಯ ಮಾಡತಕ್ಕವರಿಗೆ ಮಾರತಕ್ಕ ಸಂದರ್ಭ ಉಂಟು, ಭೂಮಿ ಇಲ್ಲದ ಪ್ರತಿಯೊಬ್ಬರೂ ಅವರು ಅರ್ಜಿ ಹಾಕಿಕೊಂಡ ಕೂಡಲೇ ಸರ್ಕಾರದವರು ಬೆಂಗಳೂರಿನಲ್ಲಿ ಕುಳಿತುಕೊಂಡು ನೋಡಿ ಅವನು ಸರಿಯಾದ ಮನುಷ್ಯನೇ ಅಲ್ಲವೇ ಎಂಬುದನ್ನು ಪರೀಕ್ಷೆ ಮಾಡುವುದಕ್ಕೆ ಕಷ್ಟವಾಗುತ್ತದೆ, ಅದಕ್ಕೆ ಈಗ ಒಂದು ಹೊಸ ಯೋಜನೆಯನ್ನು ಮಾಡಿದ್ದಾರೆ. ಇದರ ಪ್ರಕಾರ ಸ್ಥಳದಲ್ಲಿರತಕ್ಕ ಅಧಿಕಾರಿಗಳು ವಿಮರ್ಶೆ ಮಾಡುವುದರಿಂದ ಯಾವ ರೈತನಿಗೆ ಭೂಮಿ ಅಗತ್ಯವಾಗಿದೆಯೋ ಅಂತಹವನಿಗೇ ಸಿಕ್ಕುತ್ತದೆ. ಇದು ನಿಜವಾಗಿಯೂ ಕಾರ್ಯಗತವಾಗುವುದು ಬಹಳ ಯೋಗ್ಯ. ಹಾಗಾದರೆ ಅಧಿಕಾರಿಗಳು ಸಾರ್ವಜನಿಕರಲ್ಲಿ ವಿಶ್ವಾಸವನ್ನಿಟ್ಟು ಹೆಚ್ಚು ವಿಳಂಬ ಮಾಡದೇ ಭೂಮಿ ಇಲ್ಲದವನಿಗೆ ಭೂಮಿಯನ್ನು ಒದಗಿಸಿ ಕೊಡತಕ್ಕ ಕೆಲಸವನ್ನು ಮಾಡುತ್ತಾರೆ ಎಂದು ನಂಬಿದ್ದೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಬಹಳ ಮುಖ್ಯವಾಗಿ ಹೇಳಿರುವುದು ದೊಡ್ಡ ನೀರಾವರಿ ಯೋಜನೆಯ ವಿಷಯ. ಇದು ಬಹಳ ಮುಖ್ಯವಾದುದು, ನಮ್ಮ ವಿಶಾಲ ಮೈಸೂರಿನಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿರುವ ಪ್ರಕಾರ ದೊಡ್ಡ ಪ್ರಾಜೆಕ್ಟುಗಳ ಮೇರೆಗೆ 6·91 ಲಕ್ಷ ಎಕರೆಗಳಷ್ಟು ಪ್ರದೇಶವು ನೀರಾವರಿಯಾಗುವಂತೆ ಏರ್ಪಡಿಸಲಾಗುವುದು ಎಂದು ಹೇಳಿದ್ದಾರೆ. 6·91 ಲಕ್ಷ ಎಕರೆ

ಈ ವರ್ಷದ ಕೊನೆಯಲ್ಲಿ ನೀರಾವರಿಗೆ ಬರುತ್ತದೆ, ಇದರ ಜೊತೆಗೆ ಭಾರತ ಸರಕಾರದವರು, ಮಲಪ್ರಭಾ ಹಾಗೂ ಮೇಲ್ಮಟ್ಟದ ಕೃಷ್ಣಾ ಯೋಜನೆಗಳನ್ನು ಕೈಕೊಳ್ಳುವುದಕ್ಕಾಗಿ ಅನುಮತಿಯನ್ನು ನೀಡಿದ್ದಾರೆ. ಇವುಗಳ ಕೆಲಸವೂ ಇಷ್ಟರಲ್ಲಿಯೇ ಪ್ರಾರಂಭವಾಗುವುದು ಎಂದು ಹೇಳಿದ್ದಾರೆ. ಮಲಪ್ರಭಾ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರ ಅನುಮತಿಯು ಬಂದಿದೆ. ಮತ್ತು ಕಾವೇರಿಯ ಬೇಸಿನ್‌ನಲ್ಲಿ ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟುಗಳನ್ನು ಜಾಗ್ರತೆ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಕಾವೇರಿ ನದಿಯಿಂದ ಆಗತಕ್ಕ ಯೋಜನೆಗಳು ಬಹಳ ತ್ವರಿತವಾಗಿ ಆಗಬೇಕು. ನಮಗೂ ಮದರಾಸ್ ಸರ್ಕಾರದವರಿಗೂ ಆಗಿರತಕ್ಕ ಒಪ್ಪಂದ 1972ನೇ ಇಸವಿಗೆ ಮುಗಿಯುತ್ತದೆ. ಅಷ್ಟರಲ್ಲಿ ನಾವು ಎಷ್ಟರ ಮಟ್ಟಿನ ಪ್ರಯೋಜನವನ್ನು ಹೊಂದಬಹುದೋ ಅಷ್ಟರಮಟ್ಟಿನ ಪ್ರಯೋಜನವನ್ನು ಹೊಂದಬೇಕಾದುದು ಬಹಳ ಅವಶ್ಯಕ ಮತ್ತು ಅದರ ಜೊತೆಗೆ ಮಲಪ್ರಭಾ ಅಪ್ಪರ್ ಕೃಷ್ಣಾ ಯೋಜನೆಗಳನ್ನು ಜಾಗ್ರತೆ ಮಾಡಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರದವರು ಹೇಳಿರುವುದು ಬಹಳ ಮುಖ್ಯವಾದ ವಿಚಾರ. ಮತ್ತು ಅದರ ಜೊತೆಗೆ ಕೃಷ್ಣಾ—ಗೋದಾವರಿಯಿಂದ ಬರತಕ್ಕ ನೀರು ತೃಪ್ತಿಕರವಾಗಿ ಬಂದಲ್ಲಿ—ನಮಗೆ ನ್ಯಾಯವಾಗಿ ಬರಬೇಕಾದ ನೀರಿನ ಹಕ್ಕನ್ನು ಪಡೆಯುವುದಕ್ಕೆ ಸರಕಾರದವರು ಮಾಡಬೇಕಾದ ಕಾರ್ಯವನ್ನು ಮಾಡುತ್ತಾ ಇದ್ದಾರೆ ಎಂಬ ಮಾತನ್ನು ಇವತ್ತು ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮೂದಿಸಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರ. ನೀರಿನ ಹಂಚಿಕೆ ಆಗದೇ ನಮಗೆ ಸಾಕಾದಷ್ಟು ನೀರು ಬಂದಿಲ್ಲ ಹೆಚ್ಚು ನೀರು ಬರಬೇಕೆನ್ನುವುದನ್ನು ಸರಕಾರದವರು ಸಾಕಾದಷ್ಟು ರೀತಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಿ ಅದನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಆರುನೂರು ಟಿ.ಎಂ.ಸಿ.ಎಫ್.ಟಿ. ಈಗ ಬಂದಿದೆ. ಅದರಂತೆ ನಾನಾ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಇನ್ನೂ ಎಷ್ಟು ಬರಬೇಕು ?

ಶ್ರೀ ಡಿ. ಎಂ. ಸಿದ್ದಯ್ಯ.—ಇನ್ನೂರು ಟಿ.ಎಂ.ಸಿ.ಎಫ್.ಟಿ. ಅಷ್ಟು ಬರಬೇಕೆಂದು ಸರ್ಕಾರದವರು ಅಂದಾಕೊಂಡಿದ್ದಾರೆ. ಈ ವಿಷಯದಲ್ಲಿ ಹೊರಗಡೆ ಅನೇಕ ಚಟುವಟಿಕೆಗಳು, ಪೇಪರ್ ಹೇಳಿಕೆಗಳು ಮತ್ತು ಸ್ಟೇಟ್‌ಮೆಂಟುಗಳು ಬರುತ್ತಾ ಇವೆ. ಇದರಿಂದ ಮಾನ ಸಭೆಯ ಸದಸ್ಯರು ಯಾರೂ ಗಾಬರಿಯಾಗಬೇಕಾಗಿಲ್ಲ. ನಮ್ಮ ಸರ್ಕಾರದವರು ನದೀ ನೀರನ್ನು ಪಡೆಯುವುದಕ್ಕೆ ಸಾಕಾದಷ್ಟು ಪ್ರಯತ್ನ ಮಾಡುತ್ತಿಲ್ಲ; ಅದನ್ನು ಬಿಟ್ಟು ಕೊಟ್ಟಿದ್ದಾರೆ, ಆಂಧ್ರ ಸರಕಾರಕ್ಕಾಗಲೀ, ಮಹಾರಾಷ್ಟ್ರ ಸರಕಾರಕ್ಕಾಗಲೀ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ, ಅವನ ಪ್ರೇರೇಪಣೆಯಿಂದ ಮಾರ್ಪಾಟು ಆಗುತ್ತಾ ಇದೆ ಎಂದು ಯಾರೂ ಭಾವಿಸಬಾರದು. ನಮಗೆ ಬರಬೇಕಾದ ನೀರನ್ನು ನಾವು ಪಡೆದುಕೊಳ್ಳಲು ನಿಜವಾಗಿಯೂ ನಮಗೆ ನ್ಯಾಯವಾಗಿ ಬರಬೇಕಾದ ನೀರನ್ನು ದೊರಕಿಸಿಕೊಳ್ಳಲು ನಮ್ಮ ಸರ್ಕಾರಕ್ಕೆ ಶಕ್ತಿ ಸಾಮರ್ಥ್ಯ ಇದೆ ಎಂಬ ಮಾತನ್ನು ಹೇಳಲು ಈ ದಿವಸ ಆಶಿಸುತ್ತೇನೆ. ಆ ಪ್ರಾಜೆಕ್ಟುಗಳನ್ನು ನೂರಾರು ಕೋಟಿ ಅಥವಾ 3—4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಬೇಕಾಗುತ್ತದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಪ್ರಸ್ತಾಪಿಸಿ ಮುಂದೆ ಬರತಕ್ಕ ಎರಡು-ಮೂರು ವರ್ಷಗಳಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಡತಕ್ಕಂತಹದ್ದಾಗಿದೆ ಎಂದು ಹೇಳಿದ್ದಾರೆ. ಆದರೂ ಈ ದೊಡ್ಡ ಪ್ರಾಜೆಕ್ಟುಗಳ ಕೆಲಸ ನಿಲ್ಲಬಾರದು, ಈ ಕಾರ್ಯವನ್ನು ಕೇಂದ್ರ ಸರಕಾರದವರು ವಹಿಸಿಕೊಳ್ಳಬೇಕೆಂಬ ಮಾತನ್ನು ಈ ಸಭೆಯಲ್ಲಿ ಸೂಚಿಸಲಿಚ್ಛಿಸುತ್ತೇನೆ. ಮತ್ತು ಮಂತ್ರಿ ಮಂಡಲದವರು ಕೇಂದ್ರ ಸರ್ಕಾರದವರಿಗೆ ಈ ವಿಷಯವನ್ನು ತಿಳಿಸಿದ್ದಾರೆ. ಅವರೂ ಈ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ನೆರವಾಗುತ್ತೇವೆ ಎಂದು ಮುಂದೆ ಬಂದಿದ್ದಾರೆ. ಸರ್ಕಾರದವರು ತಮ್ಮ ಸರ್ವ ಪ್ರಯತ್ನವನ್ನೂ ಮಾಡಿ ಈ ಕೆಲಸವನ್ನು ಕಾರ್ಯಗತ ಮಾಡಿ ಈ ಮಾನ್ಯ ಸಭೆಯ ಮತ್ತು ದೇಶದ ವಿಶ್ವಾಸಕ್ಕೆ ಪಾತ್ರರಾಗಿ ದೇಶದ ದೊಡ್ಡ ಜವಾಬ್ದಾರಿಯನ್ನು ಅವರು ನಿರ್ವಹಣೆ ಮಾಡಬೇಕು. ಇಂತಹ ಕೆಲಸದಲ್ಲಿ ಅವರು ಹೆಚ್ಚಾಗಿ ಕಷ್ಟಪಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಮತ್ತು ಕೃಷ್ಣಾ ನದಿಯ ನೀರಿನ ಆಶ್ರಯದಲ್ಲಿ ಕಟ್ಟತಕ್ಕ ಎರಡು ಯೋಜನೆಗಳು ಇವೆ—ಆಲಮಟ್ಟಿ ಮತ್ತು ನಾರಾಯಣಪುರ. ಆಲಮಟ್ಟಿ ಪ್ರಾಜೆಕ್ಟನ್ನು ಕಟ್ಟಿದ ಪಕ್ಷದಲ್ಲಿ ಬಿಜಾಪುರ ಮತ್ತು ಇತರ ಜಿಲ್ಲೆಗಳು ವಿಶೇಷ ಕ್ಷಾಮಕ್ಕೆ ಸಿಕ್ಕಿ ಕಷ್ಟಕ್ಕೀಡಾಗತಕ್ಕ ಪ್ರದೇಶಗಳಿಗೆ ಪ್ರಯೋಜನವಾಗುತ್ತದೆ. ಇವೊತ್ತು ಅನೇಕ ಪೇಪರುಗಳಲ್ಲಿ ಬರುತ್ತಾ ಇದೆ, ಜನ ಮಾತನಾಡುತ್ತಾ ಇದ್ದಾರೆ, ನಾರಾಯಣ ಪುರದಲ್ಲಿ ಪ್ರಾಜೆಕ್ಟ್ ಕಟ್ಟುತ್ತಾರೆ ಎಂದು. ಸರಕಾರದ ಅಭಿಪ್ರಾಯವಾದರೂ ಎರಡೂ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಇದೆ, ಆಲಮಟ್ಟಿಯಲ್ಲಿ ಮೊದಲು ಪ್ರಾರಂಭ ಮಾಡುವುದು ಬಹಳ ಅತ್ಯಗತ್ಯ ಎಂಬುದನ್ನು ಈ ಸಭೆಯಲ್ಲಿ ಸೂಚಿಸಲಿಚ್ಛಿಸುತ್ತೇನೆ. ನಾರಾಯಣ ಪುರದಲ್ಲಿ ಕಟ್ಟಿದರೆ ಬಹುಶಃ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಿಗೆ ಅನುಕೂಲವಾಗುವುದಿಲ್ಲ, ಆದರೆ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸೌಕರ್ಯ

(ಶ್ರೀ ಡಿ. ಎಂ. ಸಿದ್ದಯ್ಯ)

ವಾಗುತ್ತದೆ ಎಂದು ಹೇಳುವುದನ್ನು ಒಪ್ಪುತ್ತೇನೆ. ಇವತ್ತಿನ ದಿವಸ ಆಲಮಟ್ಟಿ ಮತ್ತು ನಾರಾಯಣ ಪುರ ಇವೆರಡರಲ್ಲಿ ಯಾವುದನ್ನು ಕಟ್ಟಬೇಕು ಎಂಬ ಒಂದು ಕ್ಲಿಷ್ಟ ಪರಿಸ್ಥಿತಿಯಲ್ಲಿ ಇರುವಾಗ ನಮ್ಮ ಸರಕಾರದವರು ತಮ್ಮ ಪ್ರಭಾವವನ್ನು ಕೇಂದ್ರ ಸರಕಾರದವರ ಮೇಲೆ ಬೀರಿ ಕೂಡಲೇ ಆಲಮಟ್ಟಿ ಅಣೆಕಟ್ಟನ್ನು ಪ್ರಾರಂಭಿಸಿ ಅದರ ಜೊತೆಗೇ ನಾರಾಯಣಪುರ ಅಣೆಕಟ್ಟನ್ನು ಕಟ್ಟಿಸಿ ಕೃಷ್ಣಾ ನದಿಯಿಂದ ನಮಗೆ ಏನು ಲಾಭವಾಗಬೇಕೋ ಅದನ್ನು, ಆ ಪೂರ್ಣ ಸೌಕರ್ಯವನ್ನು ವಿಶಾಲ ಮೈಸೂರಿನ ಪ್ರಜೆಗಳಿಗೆ ದೊರಕಿಸಿಕೊಡುವ ಒಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇದರ ಜೊತೆಗೆ ಮೊದಲೇ ಹೇಳಿದಹಾಗೆ ಇದಕ್ಕಾಗುವ ಖರ್ಚನ್ನು ಕೇಂದ್ರ ಸರ್ಕಾರದವರು ವಹಿಸುವಂತೆಯೂ, ಈಗ ಉಂಟಾಗಿರುವ ಕ್ಲಿಷ್ಟ ಪರಿಸ್ಥಿತಿಯನ್ನು ನಿವಾರಿಸುವಂತೆಯೂ ಸರ್ಕಾರ ದವರು ಮಾಡುತ್ತಿರುವ ಸತತ ಪ್ರಯತ್ನದಲ್ಲಿ ಎಲ್ಲರೂ ಸಹಕರಿಸಿ ದೇಶದ ಅಭ್ಯುದಯಕ್ಕಾಗಿ ತಮ್ಮ ಕೈಯಲ್ಲಾದ ನೆರವನ್ನು ನೀಡಬೇಕು, ಕೇಂದ್ರದ ಮೇಲೆ ಪ್ರಭಾವ ಬೀರಿ ನಮಗೆ ಅನುಕೂಲ ಒದಗುವಂತೆ ಮಾಡಲು ಶ್ರಮಿಸಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇನೆ.

ಆಮೇಲೆ ಬೆಂಗಳೂರಿನ ನೀರು ಸರಬರಾಯಿಯ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅದು ಬಹಳ ಮುಖ್ಯವಾದ ವಿಚಾರ. ವಿಶಾಲಕರ್ಣಾಟಕವಾದ ಮೇಲೆ ದಿವಾನ್ ಮಾಧವರಾಯರು ಒಂದು ಮಾಸ್ಟರ್ ಪ್ಲಾನ್ ಅನ್ನು ತಯಾರಿಸಿದ್ದಾರೆ. ಬೆಂಗಳೂರು ನಗರ ಬಹಳ ದೊಡ್ಡದಾಗಿ ಬೆಳೆಯುತ್ತಿರುವುದರಿಂದ ಆ ಪಟ್ಟಣಕ್ಕೆ ಸಾಕಾದಷ್ಟು ನೀರಿನ ಸೌಕರ್ಯ ಕಲ್ಪಿಸುವುದು, ಅದಕ್ಕಾಗಿ ಸೂಕ್ತವಾದ ಯೋಜನೆ ಮಾಡಿ ಕೇಂದ್ರ ಸರ್ಕಾರದ ನೆರವನ್ನು ಪಡೆದು ಕಾರ್ಯಕ್ರಮವನ್ನು ಕೈಕೊಳ್ಳುತ್ತಿರುವುದು ನಿಜವಾಗಿಯೂ ಪ್ರಶಂಸನೀಯವಾದುದು.

ಈಗ ವಿದ್ಯುಚ್ಛಕ್ತಿ ಉತ್ಪತ್ತಿಯು ಸಾಕಾಗದೆ ಬಹಳ ತೊಂದರೆಯಾಗುತ್ತಿದೆ. ಶರಾವತಿ ಯೋಜನೆಯ ಮೊದಲನೆಯ ಹಂತದ ಕೆಲಸ ಮುಗಿದಿದೆ. ಮೂರು ಹಂತಗಳಲ್ಲಿ ನಮ್ಮ ದೇಶಕ್ಕೆ ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಯೋಜನೆಗಳಿಗೆ ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುವ ನಿರೀಕ್ಷೆ ಇದೆ. ಈ ಕೆಲಸವನ್ನು ಸರ್ಕಾರದವರು ಬಹಳ ತೀವ್ರಗತಿಯಿಂದ ನಡೆಸಿ ಕೊಂಡು ಬಂದಿದ್ದಾರೆ. ಮೊನ್ನೆ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಕೆ.ಎಲ್. ರಾವ್ ಅವರು ಕೆಲಸ ನಡೆಯುವ ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿ ನಡೆಯುತ್ತಿರುವ ಕಾರ್ಯವನ್ನು ಪ್ರಶಂಸಿಸಿದ್ದಾರೆ. ಮತ್ತು ಒರಿಸ್ಸಾದ ಗವರ್ನರ್ ಕೋಸ್ಲಾರವರು ಕೂಡ ನಮ್ಮ ದೇಶಕ್ಕೆ ಬಂದಿದ್ದಾಗ ಶರಾವತಿಗೆ ಭೇಟಿ ಕೊಟ್ಟು ಎಷ್ಟು ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂಬುದನ್ನು ನೋಡಿದರು. ಅವರು ಗವರ್ನರ್ ಮಾತ್ರವಲ್ಲದೆ ದೊಡ್ಡ ಇಂಜನಿಯರು ಸಹ ಆಗಿದ್ದಾರೆ ಒಳ್ಳೆಯ ತಜ್ಞರು, ಸೂಕ್ತ ಸಲಹೆ ಕೊಡಲು ಅರ್ಹರು.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಕೃಷ್ಣ ಮತ್ತು ಗೋದಾವರಿ ನದಿಗಳ ನೀರಿನ ವಿಚಾರದಲ್ಲಿ ಸರಿಯಾದ ವಿವರಗಳನ್ನು ಕೊಡಲಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸದಸ್ಯರು ಸ್ವಲ್ಪ ತಾಳ್ಮೆಯಿಂದಿರಬೇಕು. ನಾನು ಹೇಳುವುದನ್ನು ಕೇಳಿ ಅವರಿಗೆ ಅವಕಾಶ ದೊರೆತಾಗ ಬೇಕಾದ್ದನ್ನು ಹೇಳಬಹುದು. ನಾನು ಉತ್ತರ ಹೇಳುವಾಗ ಅದಕ್ಕೆ ಸಮಂಜಸವಾದ ಜವಾಬನ್ನು ಅವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಕೊಡುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರು ದೇಶದ ಅಭ್ಯುದಯದ ವಿಚಾರದಲ್ಲಿ, ಸಂಪತ್ತನ್ನು ಹೆಚ್ಚಿಸುವ ವಿಚಾರದಲ್ಲಿ ತೀವ್ರತೆಯಿಂದ ಕೂಡಿದ್ದಾರೆಂಬುದನ್ನು ನಾನು ಒಪ್ಪುತ್ತೇನೆ. ಈ ದಿವಸ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರಬಹುದು, ಮುಂದೆ ವಿರೋಧಪಕ್ಷ ಅಧಿಕಾರಕ್ಕೆ ಬರಬಹುದು. ಯಾರೇ ಇರಲಿ, ದೇಶವನ್ನು ಅಭಿವೃದ್ಧಿಪಡಿಸುವ, ಸುಖಮಯವನ್ನಾಗಿ ಮಾಡುವ ಜವಾಬ್ದಾರಿ ಸರ್ಕಾರಕ್ಕೂ ಮತ್ತು ಇತರ ಪಕ್ಷಗಳವರಿಗೂ ಇದೆ. ವಿರೋಧ ಪಕ್ಷದವರು ಮುಂದೆ ಸರ್ಕಾರವನ್ನು ನಡೆಸುವಾಗ ಜವಾಬ್ದಾರಿಯಿಂದ ನಡೆಸಬೇಕೆಂಬುದನ್ನು ಮನವರಿಗೆ ಮಾಡಿ ಕೊಂಡು ರಚನಾತ್ಮಕವಾಗಿ ಸಲಹೆಮಾಡಿದರೆ ಅದರಿಂದ ದೇಶಾಭ್ಯುದಯವನ್ನು ಸಾಧಿಸಲು ಸಹಾಯ ವಾಗುತ್ತದೆ ಎಂದು ತಿಳಿಸಲಿಚ್ಛಿಸುತ್ತೇನೆ.

1963-64ರಲ್ಲಿ 127 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಇರಿಗೇಷನ್ ಪಂಪ್ ಸೆಟ್ಟುಗಳನ್ನು ಒದಗಿಸುವುದರಲ್ಲಿ ಸ್ವಲ್ಪ ನಿಧಾನವಾದ ಸನ್ನಿವೇಶ ಗಳು ವೈಯಕ್ತಿಕವಾಗಿ ನನಗೆ ಗೊತ್ತಿವೆ. ಆದರೆ ನಾನು ಸರ್ಕಾರದ ಗಮನಕ್ಕೆ ತರಬೇಕೆಂಬ ವಿಚಾರ ವೇನೆಂದರೆ ಇರಿಗೇಷನ್ ಪಂಪ್ ಸೆಟ್ಟುಗಳನ್ನು ಕೊಡುವಾಗ ಸ್ವಲ್ಪ ತ್ವರಿತವಾಗಿ ರೈತರಿಗೆ ಕೊಡು

ವಂತೆ ಅಧಿಕಾರಿಗಳಿಗೆ ತಿಳಿಸಬೇಕು. ರೈತರಿಗೆ ಹೆಚ್ಚು ತಿಳಿವಳಿಕೆ ಇರುವುದಿಲ್ಲ. ವ್ಯವಸಾಯದ ಇಲಾಖೆಯಿಂದ ಅಥವ ವಿದ್ಯುಚ್ಛಕ್ತಿ ಇಲಾಖೆಯಿಂದ ಪಂಪು ಪಡೆಯಬೇಕಾದರೆ ಅವರಿಗೆ ತೊಂದರೆ ಯಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ 2-3 ವರ್ಷಗಳ ಹಿಂದೆ ಅರ್ಜಿ ಹಾಕಿರುವವರಿಗೂ ಸಿಕ್ಕಿಲ್ಲ, ಬಹುಶಃ ಈಗ ಸರಬರಾಯಿಯಾಗುತ್ತಿದೆ. ಸರ್ಕಾರ ತೀವ್ರವಾಗಿ ಮಂಜೂರು ಮಾಡಿ ರೈತರಿಗೆ ಬೇಗ ಸಿಕ್ಕುವಂತೆ ವ್ಯವಸ್ಥೆಮಾಡಬೇಕು. ಅಧಿಕಾರಿಗಳಿಗೆ ಆ ಬಗ್ಗೆ ತಕ್ಕ ಸೂಚನೆ ನೀಡಬೇಕು. ಅಲ್ಲದೆ ಅಧಿಕಾರಿಗಳು ಎಷ್ಟುಮಟ್ಟಿಗೆ ಸರ್ಕಾರದ ಸೂಚನೆಯಂತೆ ಕೆಲಸ ಮಾಡುತ್ತಾರೆ, ಬೇಗನೆ ಸರಬರಾಯಿ ಮಾಡುತ್ತಿದ್ದಾರೆಯೆ ಎಂದು ನೋಡಬೇಕು ಎಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಸ್ವಾಮಿ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಂದೆ ಮುಖ್ಯವಾಗಿರುವ ಮಾರ್ಗ ಸೌಕರ್ಯ, ಬಂದರುಗಳು ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಮಂಗಳೂರು—ಹಾಸನ ರೈಲ್ವೆ ಮಾರ್ಗದ ಸರ್ವೆ ಆಗಿದೆ. ಅದಾಗಿ 120 ಮೈಲಿಗಳ ದೂರದ ರೈಲ್ವೆಯಾಗುವ ಭರವಸೆ ದೊರೆತಿದೆ. ಕಾರವಾರ ಬಂದರನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ, ಮಂಗಳೂರು ಬಂದರಿನ ಕಾರ್ಯವು ಪ್ರಗತಿ ಪಥದಲ್ಲಿದೆ. ಹೀಗೆ ಬಂದರು, ರೈಲ್ವೆ ಮಾರ್ಗ ಸೌಕರ್ಯ ಒದಗುವುದರಿಂದ ನಮ್ಮಲ್ಲಿ ದೊರೆಯುವ ಖನಿಜಗಳನ್ನು ಸಾಗಿಸಲು ಹಾಗೂ ವ್ಯಾಪಾರ ಸೌಕರ್ಯ ದೊರೆಯಲು ಮತ್ತು ನಮ್ಮ ದೇಶದ ಸಂಪತ್ತು ಹೆಚ್ಚಲು, ವಾಣಿಜ್ಯ ಅಭಿವೃದ್ಧಿಯಾಗಲು ಹೆಚ್ಚು ಅವಕಾಶವಾಗುತ್ತದೆ. ಇದಕ್ಕೆ ಮಾರ್ಗ ಸೌಕರ್ಯ ಮತ್ತು ಬಂದರು ಬಹಳ ಮುಖ್ಯವಾದುವು. ಈ ಸಂಬಂಧದಲ್ಲಿ ಸರ್ಕಾರದವರು ತ್ವರಿತ ವಾಗಿ ಕೆಲಸ ಮಾಡಿ ಮಂಗಳೂರು ಮತ್ತು ಕಾರವಾರ ಬಂದರುಗಳ ಕೆಲಸಗಳಲ್ಲಿ ಆಸಕ್ತಿವಹಿಸಿ ದೇಶದ ವ್ಯಾಪಾರ, ವಾಣಿಜ್ಯ ಮುಂತಾದುವುಗಳ ಅಭಿವೃದ್ಧಿಯಾಗಲು ಹೆಚ್ಚು ಶ್ರದ್ಧೆಯಿಂದ ಮತ್ತು ಜಾಗರೂಕತೆಯಿಂದ ಕೆಲಸ ಮಾಡಬೇಕೆಂದು ತಿಳಿಸಬಯಸುತ್ತೇನೆ.

ಮುಂದೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಸ್ತೆಗಳು ಮತ್ತು ಸೇತುವೆಗಳ ವಿಚಾರವನ್ನು ಹೇಳಿದ್ದಾರೆ. ಹಣದ ಕೊರತೆಯಿಂದ ರಸ್ತೆಗಳ ಕೆಲಸ ಸ್ವಲ್ಪ ನಿಧಾನವಾಗಿದೆ. ನೀರಾವರಿ ಯೋಜನೆ ಗಳಿಗೆ ಆದರಲ್ಲೂ ಸಣ್ಣಪುಟ್ಟ ಯೋಜನೆಗಳಿಗೆ ಹೆಚ್ಚು ಖರ್ಚು ಮಾಡುತ್ತಿರುವುದರಿಂದ, ಹಾಗೆ ಮಾಡಿ ಈ ದಿವಸ ಆಹಾರವಸ್ತುಗಳ ಉತ್ಪತ್ತಿ ಹೆಚ್ಚಿಸಬೇಕಾಗಿರುವುದರಿಂದ ರಸ್ತೆ ಕೆಲಸ ಸ್ವಲ್ಪ ನಿಧಾನ ವಾದರೂ ಬೇಸರಪಡುವ ಹಾಗಿಲ್ಲ. ಆದರೂ ಈ ದಿವಸ ರಸ್ತೆಯ ವಿಷಯದಲ್ಲಿ ತೀವ್ರಾಸಕ್ತಿ ಇದೆ. 12,726 ಮೈಲಿಗಳ ರಸ್ತೆ ಆಗಬೇಕಾಗಿರುವುದರಲ್ಲಿ 9,762 ಮೈಲಿಗಳ ರಸ್ತೆ ಆಗಿದೆ ಎಂದು ರಾಜ್ಯ ಪಾಲರು ತಿಳಿಸಿದ್ದಾರೆ. ಉಳಿದ ರಸ್ತೆಯನ್ನು ಕೂಡ ಆದಷ್ಟು ಬೇಗ ಮಾಡಲು ಸರ್ಕಾರ ಮನಸ್ಸು ಮಾಡುತ್ತದೆಂದು ನಂಬಿದ್ದೇನೆ.

ರಸ್ತೆ ಸಾರಿಗೆಯ ವಿಚಾರವನ್ನು ಸಹ ಸೂಚಿಸಿದ್ದಾರೆ. 1,964 ವಾಹನಗಳಿವೆ, 1,407 ಮಾರ್ಗ ಗಳಲ್ಲಿ ಸಂಚಾರವಿದೆ ಮತ್ತು ಇನ್ನೂ 10 ಭಾಗಗಳಲ್ಲಿ ಮತ್ತು ಬಳ್ಳಾರಿ ಪ್ರದೇಶದಲ್ಲಿ ರಾಷ್ಟ್ರೀಕರಣ ಮಾಡಬೇಕೆಂದಿದ್ದಾರೆ ಎಂದು ಹೇಳಿದ್ದಾರೆ. ಈ ರಾಷ್ಟ್ರೀಕರಣ ಮಾಡುವ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳದಿದ್ದರೆ ಲೋಪ ಮಾಡಿದಂತಾಗುತ್ತದೆ. ರಾಷ್ಟ್ರೀಕರಣ ಮಾಡಬೇಕಾದ್ದೇನೋ ಬಹಳ ಅಗತ್ಯ. ದೇಶದಲ್ಲಿರುವ ಸಂಪತ್ತು ಕೆಲವರ ಕೈಯಲ್ಲಿ ಸೇರಿದರೆ ಸಮತಾವಾದ ಸಮಾಜ ರಚನೆಯ ಗುರಿಗೆ ತೊಂದರೆಯಾಗುತ್ತದೆ. ಆ ಮೂಲಕ ಉತ್ಪತ್ತಿ ರಾಷ್ಟ್ರಕ್ಕೇ ಬರಬೇಕು, ವ್ಯಕ್ತಿ ಗಳಿಗೆ ಹೆಚ್ಚಾಗಿ ಸೇರಬಾರದು ಎಂಬ ದೃಷ್ಟಿಯಿಂದ ರಾಷ್ಟ್ರೀಕರಣ ಮಾಡಲಾಗಿದೆ. ಆದರೆ ಈ ಒಂದು ಪದ್ಧತಿಯಲ್ಲಿ ಕೆಲವು ಲೋಪದೋಷಗಳಿವೆ.

2-30 P.M.

ಸಾಧಾರಣವಾದ ಜನಗಳು ಬಸ್ ಕಂಡಕ್ಟರುಗಳಾಗಿ ಡ್ರೈವರುಗಳಾಗಿ ಕೆಲಸ ಮಾಡು ತ್ತಿದ್ದಾರೆ. ಅವರುಗಳು ಅಲ್ಲಿ ಇಲ್ಲಿ ಕೆಲಸ ಮಾಡುವಾಗ ಸಣ್ಣ ತಪ್ಪುಗಳನ್ನು ಮಾಡುತ್ತಾರೆ. ಇದು ಸ್ವಾಭಾವಿಕವಾದುದು. ಇದನ್ನೇ ದೊಡ್ಡ ದೋಷವಾಗಿ ತಿಳಿದುಕೊಂಡು ರಾಷ್ಟ್ರೀಕರಣ ಯೋಜನೆಯು ಸರಿಯಾಗಿಲ್ಲ ಎಂದು ಹೇಳುವುದು ಸರಿಯಲ್ಲ. ರಾಷ್ಟ್ರೀಕರಣ ಯೋಜನೆಯನ್ನು ಜಾರಿಗೆ ತರು ವುದು ಯುಕ್ತವಾದುದು. ಆದರೆ ಬಸ್ಸುಗಳ ಡ್ರೈವರುಗಳಾಗಲೀ ಕಂಡಕ್ಟರುಗಳಾಗಲಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ದೊಡ್ಡದಾದ ತಪ್ಪುಗಳನ್ನು ಮಾಡಿದ್ದರೆ, ಅಂಥವರನ್ನು ಕಾರ್ಪೊರೇಷನ್ನಿನವರು ಬಿಟ್ಟು ಬಿಡಬೇಕೆಂದು ನಾನು ಇಲ್ಲಿ ಹೇಳುತ್ತ ಇಲ್ಲ. ಅಂತಹ ತಪ್ಪುಗಳನ್ನು ಮಾಡಿರುವವರ ಮೇಲೆ ಸರಕಾರ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನೂ ಸಲಹೆ ಮಾಡುತ್ತೇನೆ. ಆದರೆ ಈ ಉದ್ಯೋಗಿಗಳು 24 ಗಂಟೆಗಳ ಕಾಲವೂ ವ್ಯವಹಾರ ಮಾಡುತ್ತಿರುವವರು ಕಂಡಕ್ಟರು ಏನು ಮಾಡುತ್ತಿರುತ್ತಾನೆ ಎನ್ನುವುದನ್ನು ಡ್ರೈವರಾದವನು ನೋಡಿಕೊಂಡು ಹೋಗು ವುದು ಕಷ್ಟ. ಅದರಲ್ಲೂ ಇದರ ವ್ಯವಹಾರ ಮಾಡತಕ್ಕದ್ದು ಬಹಳ ಕಷ್ಟ. ಇದು ಪ್ರಜಾಪ್ರಭುತ್ವದ

(ಶ್ರೀ ಡಿ. ಎಂ. ಸಿದ್ದಯ್ಯ)

ಸರಕಾರ. ಈ ಸರಕಾರವೇ ಇದಕ್ಕಾಗಿ ಒಂದು ಕಾರ್ಪೊರೇಷನ್ನನ್ನು ಮಾಡಿದೆ. ಇದರ ಬಗ್ಗೆ ಸರಕಾರ ಸ್ವಲ್ಪ ಹೆಚ್ಚಿನ ನಿಗಾವಹಿಸಿ ಈ ಎಂ. ಎಸ್. ಆರ್. ಟಿ. ಸಿ. ವ್ಯವಹಾರವನ್ನು ಸ್ವಲ್ಪ ಸರಿ ಪಡಿಸಬೇಕೆಂದು ಹೇಳುತ್ತೇನೆ. ಉತ್ಪತ್ತಿಯೂ ನೂರಕ್ಕೆ ನೂರರಷ್ಟು ಬರಬೇಕು ಎಂದರೆ ಅದೂ ಕೂಡ ಕಷ್ಟ. ನನ್ನ ಬಳಿಗೆ ಕೆಲವರು ಬಸ್ಸು ಡ್ರೈವರುಗಳು ಮತ್ತು ಕಂಡಕ್ಟರುಗಳು ಬಂದು ನಮ್ಮನ್ನು ಸಸ್ಪೆಂಡ್ ಮಾಡಿದ್ದಾರೆ, ನಮ್ಮನ್ನು ಡಿಸ್‌ಮಿಸ್ ಮಾಡಿದ್ದಾರೆಂದು ಹೇಳಿದರು. ಕಾರಣ ವೇನೆಂದು ಅವರನ್ನು ಕೇಳಿದಾಗ ಒಬ್ಬರು ನಾನು ಕೊಡುವ ಲೆಕ್ಕದಲ್ಲಿ 8 ನಯಾ ಪೈಸೆ ವ್ಯತ್ಯಾಸ ಬಂತು ಎಂದರು ಮತ್ತು ಇನ್ನೊಬ್ಬರು 12 ನಯಾ ಪೈಸೆ ತಪ್ಪಾಗಿದೆ ಎಂದು ಹೇಳಿದರೆ ಅದಕ್ಕಾಗಿ ನನ್ನನ್ನು ಸಸ್‌ಪೆಂಡು ಮಾಡಿದ್ದಾರೆಂದು ಹೇಳಿದರು. ಕಂಡಕ್ಟರುಗಳಾದವರು 24 ಗಂಟೆಗಳ ಕಾಲವೂ ನೂರಾರು ರೂಪಾಯಿಗಳ ವ್ಯವಹಾರ ಮಾಡುತ್ತ ಇರುವವರು. ಇವರು ಮಾಡುವ ಕೆಲಸವೂ ಕೂಡ ಕಷ್ಟ. ಆದರೆ ಏನಾದರೂ ದೊಡ್ಡ ತಪ್ಪು ಮಾಡಿ ಹಣ ದುರುಪಯೋಗ ಮಾಡಿದ್ದರೆ ಅಂತಹವರನ್ನು ಬಿಟ್ಟುಬಿಡಿ ಎಂದು ನಾನು ಹೇಳುತ್ತಿಲ್ಲ. ಅಂತಹವರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದು ಅಗತ್ಯ. ಇದರ ಬಗ್ಗೆ ಇರುವ ನಿಯಮಗಳನ್ನು ಸ್ವಲ್ಪ ಉದಾರವಾಗಿ ಜಾರಿಗೆ ತರುವುದು ಒಳ್ಳೆಯದು. ಒಟ್ಟಿನಲ್ಲಿ ರಾಷ್ಟ್ರೀಕರಣ ಮಾಡುವ ಯೋಜನೆಯನ್ನು ಜಾರಿಗೆ ತರುವುದು ಒಳ್ಳೆಯದು ಎಂದು ಹೇಳುವವರಲ್ಲಿ ನಾನೂ ಒಬ್ಬ. ಆ ರೀತಿಯಾಗಿ ಪೂರ್ಣವಾಗಿ ರಾಷ್ಟ್ರೀಕರಣ ವನ್ನು ಜಾರಿಗೆ ತರುವ ಪ್ರಯತ್ನ ಮಾಡಬೇಕೆಂದು ಸೂಚಿಸಲು ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಎರಡನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಬಳ್ಳಾರಿಯಲ್ಲಿನ ಮತ್ತಷ್ಟು ಪ್ರದೇಶ ಗಳಲ್ಲಿಯೂ ಮತ್ತು ಇನ್ನೂ ಹತ್ತು ಇತರ ವಿಭಾಗಗಳಲ್ಲಿಯೂ ಪೂರ್ತಿಯಾಗಿ ರಾಷ್ಟ್ರೀಕರಣ ಮಾಡ ಬೇಕೆಂದು ಇದ್ದಾರೆಂದು ಹೇಳಲಾಗಿದೆ. ಆ ರೀತಿ ಪೂರ್ತಿಯಾಗಿ ರಾಷ್ಟ್ರೀಕರಣ ಮಾಡಿದರೆ ನಮ್ಮ ದೇಶದ ಕಲ್ಯಾಣವಾಗುತ್ತದೆ ಎಂದು ನಾನು ಹೇಳುತ್ತೇನೆ :

ಇನ್ನು ಕೈಗಾರಿಕೆಗಳ ಉತ್ಪಾದನೆ ಹಾಗೂ ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ವಿದ್ಯಾಭ್ಯಾಸದಲ್ಲಿ ಕಂಪಲ್ಸರಿ ಎಜುಕೇಷನ್ನು ಎಂದು ಮಾಡಿರುವುದು ಬಹಳ ಒಳ್ಳೆಯದು. ಹಳ್ಳಿ ಗಾಡಿನಲ್ಲಿ ಈಗ ನೂರರಲ್ಲಿ 90—98ರಷ್ಟು ಹುಡುಗರು ಶಾಲೆಗೆ ಹೋಗುತ್ತಿದ್ದಾರೆಂದು ಕೇಳಿದ್ದೇನೆ. ಅವರುಗಳೆಲ್ಲ ಶಾಲೆಗೆ ಹೋಗಿ ಪಾಠ ಕಲಿಯುತ್ತಿದ್ದಾರೆ. ಇದರ ಜೊತೆಗೆ 'ಮಿಡ್‌ಡೇ ಮೀಲ್ಸ್' ಸ್ಕೀಂ ಜಾರಿಗೆ ತಂದಿರುವುದರಿಂದ ಎಷ್ಟೋ ಜನ ಬಡ ಮಕ್ಕಳಿಗೆ ಬಹಳ ಅನುಕೂಲವಾಗಿದೆ. ಹೊಟ್ಟೆ ಹಸಿದುಕೊಂಡು ಓದಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತಿತ್ತು. ಈಗ ಹೊಟ್ಟೆ ತುಂಬಾ ಊಟ ಹಾಕಿ ಪಾಠವನ್ನು ಕಲಿಸುವ ಏರ್ಪಾಡು ಮಾಡುತ್ತಿರುವುದರಿಂದ ವಿದ್ಯೆಯನ್ನು ಮಕ್ಕಳು ಆಸಕ್ತಿಯಿಂದ ಕಲಿಯಲು ಅನುಕೂಲವಾಗಿದೆ. ಇದರ ಜೊತೆಗೆ ಈಚೆಗೆ ವಿದ್ಯಾರ್ಥಿಗಳಿಗೆ ಕಾಲೇಜು ಫೀಸುಗಳನ್ನು ಹೆಚ್ಚು ಮಾಡುವುದರ ಬಗ್ಗೆ ಲಕ್ಷ್ಮಣಸ್ವಾಮಿ ಮೊದಲಿಯಾರ್ ಕಮಿಟಿ ಎಂದು ಮಾಡಿದ್ದಾರೆ. ಹಿಂದೆ ಫೀಜುಗಳನ್ನು ಹೆಚ್ಚು ಮಾಡಲಯಿತು ಎಂದು ವಿದ್ಯಾರ್ಥಿಗಳು ಮುಷ್ಕರ ಹೂಡಿದುದು ನಮಗೆಲ್ಲಾ ಗೊತ್ತಿದೆ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಏನೇನು ಬೇಡಿಕೆಗಳನ್ನು ಸರಕಾರದ ಮುಂದೆ ಇಟ್ಟಿದ್ದರೋ ಅವನ್ನೆಲ್ಲ ಸಂಪೂರ್ಣವಾಗಿ ಸರಕಾರ ಒಪ್ಪಿಕೊಂಡು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ವಿದ್ಯಾರ್ಥಿಗಳ ಕಷ್ಟವೇನು ಎನ್ನುವುದು ನಾನೂ ವಿದ್ಯಾರ್ಥಿಯಾಗಿದ್ದುದರಿಂದ ನನಗೂ ಗೊತ್ತು. ಅವರಿಗೆ ಇದು ಸರಿ, ಇದು ತಪ್ಪು ಎಂದು ವಿವೇಚನೆ ಮಾಡಿ ವಿಚಾರ ಮಾಡುವುದಕ್ಕೆ ಬರುವುದಿಲ್ಲ. ನಾನೂ ಕಾಲೇಜಿನಲ್ಲಿ ವಿದ್ಯಾರ್ಥಿ ಯಾಗಿದ್ದುದರಿಂದ ಫೀಸಿನ ಬಗ್ಗೆ ಹುಡುಗರಿಗೆ ಎಷ್ಟು ತೊಂದರೆಯಾಗುತ್ತಿತ್ತು ಎನ್ನುವುದೂ ನನಗೂ ಗೊತ್ತಿದೆ. ಇವೊತ್ತು ಇಲ್ಲಿ ಪ್ರಜಾಪ್ರಭುತ್ವ ಸರಕಾರ ಬಂದಿರುವುದರಿಂದ ನಾನೂ ಒಬ್ಬ ಸದಸ್ಯನಾಗಿ ಬಂದಿರಬಹುದು. ಕೆಲವರು ಮಂತ್ರಿಗಳಾಗಿಯೂ ಬಂದಿರ ಬಹುದು. ನನ್ನ ಅನುಭವದಿಂದ ಹೇಳುವುದರಿಂದ ಇದೇನೂ ಆಶ್ಚರ್ಯವಾಗಿ ಕಾಣಿಸ ಕೂಡದು. ವಿದ್ಯಾರ್ಥಿಗಳಿಗೆ ಸ್ಕಾಲರುಷಿಪ್ಪು ಸಕಾಲದಲ್ಲಿ ಬಾರದಿದ್ದರೆ ಅವರ ಪ್ರಾಣ ಹೋದಂತಾ ಗುತ್ತಿತ್ತು. ಒಂದು ಮಾತನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಸಿ. ರಾಜಗೋಪಾಲ ಚಾರ್ಯರು ಮೊದಲನೆಯ ಗವರ್ನರ್ ಜನರಲ್‌ರಾಗಿದ್ದಾಗ ಒಂದು ಬಾರಿ ಮೈಸೂರಿಗೆ ಬಂದಿದ್ದಾಗ ಅವರು ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಮೂರು ವರ್ಷಗಳ ಕಾಲ ಅವರಿಗೆ ಅರ್ಧ ಫ್ರೀಷಿಪ್ಪನ್ನು ಕೊಟ್ಟಿದ್ದರು ಎಂದು ಹೇಳಿದರು. ಆದರಿಂದ ನನಗೆ ಎಷ್ಟೋ ಅನುಕೂಲವಾಯಿತು ಎಂದು ಮಾನ್ಯ ಶ್ರೀ. ರಾಜಗೋಪಾಲಾಚಾರಿಯವರೇ ಹೇಳಿದಂತಹ ಮಾತುಗಳು ನಾವೂ ಕೂಡ ಒಪ್ಪುವಂತಹ ಮಾತುಗಳು. ಇಲ್ಲಿನ ವಿದ್ಯಾರ್ಥಿಗಳು ಕೂಡ ಫ್ರೀಷಿಪ್ಪುಗಳನ್ನು ಮತ್ತು ಸ್ಕಾಲರ್

W-31

ಷಿಪ್ಪುಗಳನ್ನು ಕೊಡಬೇಕೆಂದು ಕೇಳಿದರು. ಅವರಿಗೆ ಈಗಿರುವ ಯೋಜನೆ ತಿಳಿಯದೇ ಇದ್ದರೂ ಮತ್ತು ಸರಕಾರಕ್ಕೆ ಇದರಿಂದ ಇನ್ನೂ ಹೆಚ್ಚಾಗಿ 50 ಲಕ್ಷದಷ್ಟು ಖರ್ಚಾದರೂ ಚಿಂತೆಯಿಲ್ಲ ಎಂದು ನಮ್ಮ ದೇಶದ ಮಕ್ಕಳು ಸುಖವಾಗಿ ಓದಿಕೊಂಡು ಮುಂದಕ್ಕೆ ಬರಲಿ ಎಂದು ಕರುಣೆಯನ್ನು ತೋರಿ ಹಿಂದೆ ಇದ್ದಂತೆ ಫ್ರಿಷಿಪ್ಪುಗಳನ್ನೂ ಹಾಗೂ ಸ್ಕಾಲರುಷಿಪ್ಪುಗಳನ್ನೂ ಮುಂದುವರಿಸಿಕೊಂಡು ಬರಲಾಗಿದೆ ಎನ್ನುವ ಔದಾರ್ಯವನ್ನು ನಮ್ಮ ಸರಕಾರದವರು ತೋರಿದರು.

ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಷೆಡೂಲ್ಡ್ ಕ್ಯಾಸ್ಟ್ಸ್‌ಗೋಸ್ಕರ ಏನೇನು ಯೋಜನೆಗಳನ್ನು ಮಾಡಿದ್ದಾರೆಯೋ ಅದರಿಂದ ಈ ವರ್ಗದ ಜನಕ್ಕೆ ಎಷ್ಟೋ ಸಹಾಯ ಮಾಡಿದಂತಾಗಿದೆ. ಅದರಲ್ಲೂ ಅನುಸೂಚಿತ ಪಂಗಡದವರಿಗಾಗಿ ಇನ್ನೂ 20 ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚು ಮಾಡಬೇಕೆನ್ನುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂದು ಇದರಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಇದರಿಂದ ಕಾಡುಮೇಡುಗಳಲ್ಲಿದ್ದಂತಹ ಈ ಜನಕ್ಕೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಅವರುಗಳೂ ಇತರ ಜನಗಳ ಜೊತೆಗೆ ಸರಿಸಮಾನವಾಗಿ ಬರುವಂತೆ ಸರಕಾರ ಸಹಾಯ ಮಾಡುತ್ತಿರುವುದು ಬಹಳ ಪ್ರಶಂಸನೀಯವಾದುದು. ಯಾವ ಜನ ವಿದ್ಯಾಬುದ್ಧಿಗಳಲ್ಲಿ ಹಿಂದುಳಿದು ಬಹಳ ದುಸ್ಥಿತಿಯಲ್ಲಿದ್ದರೋ ಅಂತಹ ಜನರನ್ನು ಮುಂದಕ್ಕೆ ತರಲು ಸರಕಾರದವರು ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಡುತ್ತಲಿದ್ದಾರೆ. ಈ ಜನರು ಸಮಾಜದ ಇತರ ಜನರೊಂದಿಗೆ ಕೂಡಿ ಬಾಳುವಂತೆ ಜನತೆಯೊಡನೆ ಕಲೆತು ತಮ್ಮ ಜೀವನವನ್ನು ಮುಂದುವರಿಸಿಕೊಳ್ಳುವುದಕ್ಕೆ ಅನುಕೂಲಗಳನ್ನು ಸರಕಾರ ಕಲ್ಪಿಸುತ್ತಿರುವುದು ಬಹಳ ಯೋಗ್ಯವಾದ ಕೆಲಸ ಎಂದು ನಾನು ಭಾವಿಸುತ್ತೇನೆ.

ಕೊನೆಯದಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ದೊಡ್ಡ ಮಾತನ್ನು ಹೇಳಿದ್ದಾರೆ. ಈ ದೇಶದಲ್ಲಿ ಇನ್ನೂ ಕಷ್ಟದ ಪರಿಸ್ಥಿತಿ ಇದೆ. ಇದರಿಂದ ನಾವೆಲ್ಲ ಶಾಸಕರೂ ಈ ತುರ್ತು ಪರಿಸ್ಥಿತಿಯನ್ನು ಎದುರಿಸಲು ನಮ್ಮ ಎಲ್ಲ ಶಕ್ತಿಯನ್ನೂ ಒಟ್ಟುಗೂಡಿಸಲು, ಭಿನ್ನಾಭಿಪ್ರಾಯಗಳನ್ನೆಲ್ಲಾ ಮರೆತು ಈ ದೇಶದ ಕರ್ತವ್ಯಪಾಲನೆ ಎಂದು ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಒಟ್ಟಾಗಿ ಪ್ರಯತ್ನಿಸಬೇಕೆಂದು ಆಶಿಸಿದ್ದಾರೆ. ಅವರು ಹೇಳಿರುವ ಕೊನೆಯ ವಾಕ್ಯ ಹೀಗಿದೆ :

> "The state of National Emergency continues and we are still in a situation which demands that we sink our differences and put our shoulders together for the development of our nation and for the defence of our country."

ವಿಶೇಷ ಪರಿಸ್ಥಿತಿ ಏನಿದೆ ಎನ್ನುವುದು ತಮಗೆಲ್ಲರಿಗೂ ತಿಳಿದಿದೆ. ತಮ್ಮಲ್ಲಿರುವ ಎಲ್ಲ ಭಿನ್ನಾಭಿಪ್ರಾಯಗಳನ್ನೆಲ್ಲಾ ಮರೆತು ದೇಶದ ಅಭ್ಯುದಯಕ್ಕಾಗಿ, ದೇಶದ ಸ್ವಾತಂತ್ರ್ಯವನ್ನುಳಿಸುವುದಕ್ಕಾಗಿ ನಾವೆಲ್ಲರೂ ಒಂದೇ ಕುಟುಂಬದಂತೆ ಎಂದು ಭಾವನೆ ಮಾಡಿಕೊಂಡು ಅದರಿಂದ ನಮ್ಮ ಹಿಂದೂಸ್ಥಾನದ ಐಕ್ಯತೆಯನ್ನು ಕಾಪಾಡಿಕೊಂಡು ನಮ್ಮ ವಿಶಾಲ ಮೈಸೂರಿನ, ಮತ್ತು ಕರ್ಣಾಟಕ ರಾಜ್ಯದ ಅಭ್ಯುದಯಕ್ಕೆ ಅನುಕೂಲವಾಗುವಂತೆ ನಾವೂ ಶ್ರಮಿಸೋಣ ಎಂದು ಸೂಚಿಸಿರುತ್ತೇನೆ. ಅದರಲ್ಲೂ ಮಾನ್ಯ ರಾಜ್ಯಪಾಲರು ಈ ಸಭೆಗೆ ಕನ್ನಡದಲ್ಲಿ ಭಾಷಣವನ್ನು ದಯಪಾಲಿಸಿದುದು ಇಂದಿನ ವಿಶೇಷ ಸನ್ನಿವೇಶಗಳಿಗನುಗುಣವಾಗಿದೆ. ಅವರ ಭಾಷಣಕ್ಕಾಗಿ ವಂದನೆಯನ್ನು ಸಲ್ಲಿಸುವ ಅವಕಾಶವು ಪ್ರಥಮವಾಗಿ ನನಗೆ ದೊರೆತಿರುವುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ರಾಜ್ಯಪಾಲರು ನಮ್ಮ ಸರ್ಕಾರದ 1964ರ ನೀತಿ ನೇಮಗಳನ್ನು ಸಾರತಕ್ಕಂಥ ವಿಚಾರದಲ್ಲಿ ಅಪ್ಪಣೆ ಕೊಡಿಸಿರತಕ್ಕ ಭಾಷಣದ ಬಗ್ಗೆ ಈಗಾಗಲೇ ನನ್ನ ಮಾನ್ಯ ಮಿತ್ರರಾದ ಶ್ರೀ ಸಿದ್ದಯ್ಯನವರು ಹೇಳಿದಂತೆ, ನಮ್ಮ ರಾಜ್ಯಪಾಲರು ಪಪ್ರಥಮವಾಗಿ ಕನ್ನಡದಲ್ಲಿ ಭಾಷಣ ಮಾಡಿದರೆಂಬ ಒಂದು ಸಂತೋಷದ ವಿಚಾರವನ್ನು ಬಿಟ್ಟರೆ ಇನ್ನು ಆ ರಾಜ್ಯಪಾಲರ ಭಾಷಣದ ಬಗ್ಗೆ ಸಂತೋಷಪಡತಕ್ಕ ವಿಚಾರಗಳಾವುವೂ ಇರುವುದಿಲ್ಲ. ಈ ವಿಚಾರವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ರಾಜ್ಯಪಾಲರ ಭಾಷಣದಲ್ಲಿ ನ್ಯಾಯವಾಗಿ ನಮ್ಮ ಸರ್ಕಾರದ ಬಗ್ಗೆ ಯಾವ ನೀತಿ ನಿಯಮಗಳು, ರೂಪರೇಷೆಗಳನ್ನು ತಿಳಿಸಬೇಕಾಗಿತ್ತೋ ಅದನ್ನು ತಿಳಿಸದೆ, ಕೆಲವು ಸರ್ಕಾರಿ ಅಧಿಕಾರಿಗಳು ಯಾವ ಒಂದು ರಾಜ್ಯಾಡಳಿತದ ವರದಿಯನ್ನು ಬರೆದಿಟ್ಟಿದ್ದರೋ ಅದನ್ನು ರಾಜ್ಯಪಾಲರ ಬಾಯಿಯಲ್ಲಿ ಹೇಳುವಂತೆ ಮಾಡಿದ್ದಾರೆ. ಹೀಗಾಗಿ ರಾಜ್ಯಪಾಲರ ಭಾಷಣಕ್ಕೆ ಏನು ಒಂದು ಮೌಲ್ಯ ಘನತೆಗಳಿರಬೇಕಾಗಿದ್ದವೋ ಅದಿಲ್ಲದಂತೆ ಆಗಿದೆ ಎಂಬ ಅಂಶವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂದಿನ ಮಂತ್ರಿಮಂಡಲ ರಾಜ್ಯಾಧಿಕಾರ ವಹಿಸಿಕೊಂಡು ಇಲ್ಲಿಗೆ 2 ವರ್ಷಗಳ ಮೇಲಾಯಿತು. ಈ ಮಂತ್ರಿಮಂಡಲ ಅಧಿಕಾರಕ್ಕೆ

(ಶ್ರೀ ಎಸ್. ಶಿವಪ್ಪ)

ಬಂದಲಾಗಾಯ್ತುನಿಂದ ರಾಜ್ಯಪಾಲರು ಮಾಡಿರತಕ್ಕ ಭಾಷಣಗಳ ಪ್ರತಿಗಳನ್ನು ನೋಡಿರಿ. 1962 ರಲ್ಲಿ ಮಾಡಿರತಕ್ಕ ಭಾಷಣದ ಪ್ರತಿಯು ಪುಟಗಳು 26 ಇದ್ದುದು 1963ಕ್ಕೆ 28 ಪುಟಗಳಿಗೇರಿತು. ಈ ಸಾರಿ ಅದು 35 ಪುಟಗಳಿಗೇರಿದೆ. ಎಂದರೆ ಸರ್ಕಾರದವರು ಇಲ್ಲಿಯವರೆಗೆ ಸಾಧನೆ ಮಾಡಿರತಕ್ಕ ವಿಚಾರವೇನೆಂದರೆ ಅವರು ಕಾಲವನ್ನು ಈ ಪುಟಗಳನ್ನು ಜಾಸ್ತಿ ಮಾಡಿಕೊಂಡು ಬರುವುದರಲ್ಲೇ ಕಳೆದಿದ್ದಾರೆ. ಸರ್ಕಾರದವರು ಇಲ್ಲಿಯವರೆಗೂ ಸಾಧನೆ ಮಾಡಿರತಕ್ಕ ಕೆಲಸವೇನೆಂದರೆ ಇದೇ. ಇದನ್ನು ಬಿಟ್ಟರೆ ಬೇರಾವ ಹೊಸ ವಿಚಾರವೂ ಇಲ್ಲ. ಇಂಥ ಸತ್ವಹೀನ ಭಾಷಣವನ್ನು ನಮ್ಮ ಸರ್ಕಾರ ರಾಜ್ಯಪಾಲರ ಮುಖೇನ ಹೇಳಿಸಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಪ್ರಥಮವಾಗಿ ರಾಷ್ಟ್ರದ ಅಪಾಯಸ್ಥಿತಿಯನ್ನು ಮನನಮಾಡಿದ್ದಾರೆ. ಇಂಥ ಒಂದು ಗಂಡಾಂತರ ಪರಿಸ್ಥಿತಿಯಿಂದ ಇದನ್ನು ನಿರ್ಮೂಲಮಾಡಲು ಇಡೀ ದೇಶವೇ ಸೊಂಟ ಕಟ್ಟಿನಿಂತಿದೆ. ಆದರೆ ಇಂಥ ಒಂದು ಅಭೂತಪೂರ್ವ ಶಕ್ತಿಯನ್ನು ಕಾಂಗ್ರೆಸ್ಸು ತನ್ನ ಒಂದು ಪಾರ್ಟಿಯನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಳ್ಳಲು ಹವಣಿಸುತ್ತಿದೆ. ಹೀಗಾಗಿ ಈ ದಿವಸ ಈ ಶಕ್ತಿಯ ತಾಳ್ಮೆಯು ಕಡಮೆಯಾಗುತ್ತಿದೆ. ಇಂದು ನಮ್ಮ ದೇಶಕ್ಕೆ ಚೀನಾದೇಶದ ಒಂದು ರಾಕ್ಷಸೀ ಕೃತ್ಯವೇ ಅಲ್ಲದೆ ಇದರ ಜೊತೆಗೆ ಎಡಬಲಗಳೆರಡರ ಕಡೆಯಿಂದಲೂ ಆ ಪಾಕಿಸ್ಥಾನ ಹತಭಾಗ್ಯರಾದ ನಮ್ಮ ಸಹೋದರರನ್ನು ಓಡಿಸಿ ನಮ್ಮ ರಾಷ್ಟ್ರವನ್ನು ಕಬಳಿಸಬೇಕೆಂದು ಹವಣಿಸುತ್ತಿದೆ ಇಂಥ ಸಂದಿಗ್ಧ ಸಮಯದಲ್ಲಿ ನ್ಯಾಷನಲ್ ಎಮರ್ಜನ್ಸಿಯ ಕೂಗನ್ನು ಬಲಮಾಡಿ ಕಾಂಗ್ರೆಸ್ಸು ತನ್ನ ಒಂದು ವರ್ಚಸ್ಸನ್ನು ಬಲಪಡಿಸಿಕೊಳ್ಳಬೇಕೆಂದಿರುವುದನ್ನು ಜನತೆ ಕಂಡುಕೊಂಡಿರುವುದರಿಂದ ಇನ್ನೊಂದು ಕಡೆ ಜನರ ಉತ್ಸಾಹ ಕುಗ್ಗುತ್ತಿದೆ. ಇದನ್ನು ಬಲಪಡಿಸಲು ಕೇಂದ್ರ ಸರ್ಕಾರ ಒಂದು ಶಾಸನವನ್ನೇ ಮಾಡಿದೆ. ಆದರೆ ಇದರಿಂದ ಅಷ್ಟೇನೂ ಪ್ರಯೋಜನ ಆಗಲಾರದು. ಈ ಒಂದು ಹೊಸ ವಿಚಾರವನ್ನು ಈ ಭಾಷಣದಲ್ಲಿ ಹೇಳಿದ್ದಾರೆ. ಈ ದೇಶವಾತ್ಸಲ್ಯ, ದೇಶಪ್ರೇಮ, ಜನರ ಹೃದಯದಿಂದ ಉಕ್ಕಬೇಕು. ಹೀಗೆ ಹೇಳತಕ್ಕ ಸರ್ಕಾರ ಅಧಿಕಾರಕ್ಕೆ ಬಂದು ಇಲ್ಲಿಗೆ 17 ವರ್ಷಗಳಾಯಿತು. ಇಲ್ಲಿಗೆ 2 ಪಂಚವಾರ್ಷಿಕ ಯೋಜನೆಗಳು ಮುಗಿದು ಮೂರನೆಯದಕ್ಕೆ ಕಾಲಿಟ್ಟಿದ್ದೇವೆ. ಆದರೆ ಇದರಲ್ಲಿ ಒಂದು ವಿಚಾರವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅದೇನೆಂದರೆ:— ಈ ಯೋಜನೆಗಳ ವಿಚಾರದಲ್ಲಿ ನಮ್ಮ ಸರ್ಕಾರದವರು ಫೈನಾನ್ಷಿಯಲ್ ಟಾರ್ಗೆಟ್ಟನ್ನು ಮಾತ್ರ ಮುಟ್ಟಿರುವುದಾಗಿ ತಿಳಿಸಿದ್ದಾರೆ. ಆದರೆ ಇದೇ ವಿಚಾರವನ್ನು ಶಾಸನ ಸಭೆಯ ಹೊರಗಡೆಯಲ್ಲಿ ಅನೇಕ ವೇದಿಕೆಗಳ ಮೇಲೆ ಸರ್ಕಾರ ಈ ಯೋಜನೆಗಳ ಬಗ್ಗೆ ಒಂದು ದೊಡ್ಡ ರೂಪವನ್ನು ಮಾಡಿದೆ ಎಂಬ ಒಂದು ದೊಡ್ಡ ಕೂಗೇ ದೇಶಾದ್ಯಂತ ಎದ್ದಿದೆ. ಆದಾಗ್ಯೂ ನಮ್ಮ ಸರ್ಕಾರದವರು ಈ ಯೋಜನೆಗಳನ್ನೆಲ್ಲಾ ಸಕಾಲದಲ್ಲೇ ಜಾರಿಗೆ ತರುತ್ತೇವೆ, ದೇಶದಲ್ಲಿ ಸಂಪತ್ತನ್ನು ಜಾಸ್ತಿ ಮಾಡುತ್ತೇವೆ ; ಎಂದು ಹೇಳುತ್ತಿದ್ದರೂ ಈಗ ಮಾತ್ರ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ಸರ್ಕಾರ ಕೇವಲ ಫೈನಾನ್ಷಿಯಲ್ ಟಾರ್ಗೆಟ್ಟನ್ನು ಮಾತ್ರ ಮುಟ್ಟಿದೆಯೇ ವಿನಾ ಆ ಖರ್ಚಿಗೆ ತಕ್ಕಂತೆ ಕಾರ್ಯ ಸಾಧನೆಯಾಗಿಲ್ಲವೆಂಬುದನ್ನು ಈಗ ವ್ಯಕ್ತಪಡಿಸಿದ್ದಾರೆ.

[Mr. Deputy Speaker in the Chair.]

ಇದರಿಂದ ಈ ಯೋಜನೆಗಳ ಹೆಸರಿನಲ್ಲಿ ಹಣ ದುರುಪಯೋಗವಾಗಿದೆ ಎಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಹೀಗಾಗಿ ಇಂದು ದೇಶದಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಆಡಳಿತಪಕ್ಷದವರು ದೇಶಕ್ಕೆ ಇಂಥ ಒಂದು ಪರಿಸ್ಥಿತಿಯನ್ನು ತಂದೊಡ್ಡಿದ್ದಾರೆ. ಈ ವಿಚಕ್ಷಣೆಯಿಲ್ಲದ ಖರ್ಚುವೆಚ್ಚಗಳಿಗೆ ಹಣವನ್ನು ಗಳಿಸಲು ಕಂದಾಯದ ಹೊರೆಯನ್ನು 100ಕ್ಕೆ 100 ಭಾಗ ಏರಿಸಿದ್ದಾರೆ. ಈ ದಿವಸ ಈ ಆಡಳಿತ ಪಕ್ಷಕ್ಕೆ, ದೇಶಕ್ಕೆ ಬರತಕ್ಕ ಒಂದು ನೂರು ಕೋಟಿ ರೂಪಾಯಿಗಳ ಆದಾಯವನ್ನು ಬಿಟ್ಟುಕೊಟ್ಟಿದ್ದರೂ ದೇಶಕ್ಕೇನೂ ಪ್ರಯೋಜನವಾಗಿಲ್ಲ. ಸರ್ಕಾರದವರು ಕಾರ್ಯಗತ ಮಾಡಬೇಕಾದ ಅನೇಕ ಕೆಲಸಗಳು ಹಾಗೇ ನಿಂತಿವೆ. ಮೂರನೇ ಪಂಚವಾರ್ಷಿಕ ಯೋಜನೆಗೆ ಇಲ್ಲಿ ಸರ್ಕಾರದವರು ಹೇಳಿರತಕ್ಕ ರೀತಿಯಲ್ಲೇ ಮಂಜೂರಾಗಿದ್ದ 250 ಕೋಟಿ ರೂಪಾಯಿಗಳಲ್ಲಿ ಇಲ್ಲಿಯವರೆಗೆ 137 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿವೆಯೆಂದು ಹೇಳಿದ್ದಾರೆ. ಎಂದರೆ 100ಕ್ಕೆ 58 ಭಾಗದಷ್ಟನ್ನು ಖರ್ಚುಮಾಡಿದಂತಾಯಿತು. ಈ ಸಾಲಿಗೆ ಮತ್ತೆ ಕೇಂದ್ರ ಸರ್ಕಾರದವರಿಂದ 84 ಕೋಟಿ ರೂಪಾಯಿಗಳನ್ನು ಪಡೆದಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಇಲ್ಲಿ ಶರಾವತಿಯಂಥ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೈಗೊಂಡಿದ್ದೇವೆಂದು ಹೇಳಿ ಕೇಂದ್ರ ಸರ್ಕಾರದಿಂದ ಹಣ ಪಡೆಯುತ್ತಿದ್ದಾರೆ. ಮೈನರ್ ಇರಿಗೇಷನ್ನಿಗೂ ನಮ್ಮಲ್ಲಿ ಹಣವಿಲ್ಲ ಎಂದು ಹೇಳಿ ಅವರಿಂದ ಹಣವನ್ನು

ಪಡೆಯುತ್ತಿದ್ದಾರೆ. ಹೀಗೆ ಹಣ ಪಡೆದುಕೊಂಡು ದೇಶದಲ್ಲಿ ಇರಿಗೇಷನ್ ಮತ್ತು ಪವರನ್ನು ಹೆಚ್ಚಿಸುತ್ತೇವೆಂದು ಸರ್ಕಾರದವರು ಏನು ಹೇಳುತ್ತಿದ್ದಾರೆಯೋ ಅದನ್ನು ಇಲ್ಲಿಯ ತನಕ ಈಡೇರಿಸಲು ಸಾಧ್ಯವಾಗಿಲ್ಲ. 1962ನೇ ಡಿಸೆಂಬರ್ ಕೊನೆಗೆ ಕೊಡುತ್ತೇವೆಂದು ಹೇಳಿದ್ದ ಪವರನ್ನು ಇಲ್ಲಿಯವರೆಗೂ ಅವರಿಗೆ ಕೊಡಲು ಸಾಧ್ಯವಾಗಿಲ್ಲ. ಇದನ್ನು ನೋಡಿದರೆ ನಮ್ಮ ಸರ್ಕಾರ ಇಂಥ ಯೋಜನೆಗಳನ್ನು ಕೇವಲ ದೊಡ್ಡ ದೊಡ್ಡವರಿಗೆ ಒಂದು ಕಂಟ್ರಾಕ್ಟ್ ಉದ್ಯಮವನ್ನು ದೊರೆಕಿಸಿ ಕೊಡಲು ಮಾಡುತ್ತಿರುವಂತೆ ಭಾಸವಾಗುತ್ತಿದೆ. ಇದರಿಂದ ದೇಶಕ್ಕೆ ಸರ್ಕಾರದವರು ಕೊಟ್ಟ ವಾಗ್ದಾನ ಮಾತ್ರ ಈಡೇರಿರುವುದಿಲ್ಲ. ಆ ಸರ್ಕಾರ ಹೋಯಿತು. ಈಗ ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರ ಬಂತು. ಅವರೇ ರಾಜ್ಯ ಪಾಲರೇ ತಮ್ಮ 1962ನೇ ಇಸವಿಯ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈ ದೇಶದಲ್ಲಿ ಶರಾವತಿಯಿಂದ ವಿದ್ಯುಚ್ಛಕ್ತಿಯನ್ನು 1963ನೇ ಇಸವಿಯ ಕೊನೆಯೊಳಗೆ ಒದಗಿಸುತ್ತೇವೆಂದು. 1962ನೇ ಇಸವಿಯ ಭಾಷಣವಾಯಿತು. ಇನ್ನು 1963ನೇ ಇಸವಿಯಲ್ಲಿ ಮಾಡಿದಂಥ ಭಾಷಣದಲ್ಲಿ ಹೇಳಿದಂತೆ ನಡೆಯದೆ 1963ನೇ ಕೊನೆಯಲ್ಲಿಯೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ಈಗ 1964ನೇ ಇಸವಿ ಏಪ್ರಿಲ್ ತಿಂಗಳಲ್ಲಿ ವಿದ್ಯುಚ್ಛಕ್ತಿಯನ್ನು ಶರಾವತಿಯಿಂದ ಕೊಡುತ್ತೇವೆಂದು ಹೇಳಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಕೇಳಿದರೆ ಮೇ-ಜೂನ್‌ನಲ್ಲಿ ಬರುತ್ತದೆಂದೂ ಅವರು ಹೇಳಬಹುದು. ನಮ್ಮ ದೇಶದಲ್ಲಿ ಶರಾವತಿ ಯೋಜನೆಯ ಒಂದು ಕಾರ್ಯವನ್ನು ಕಾರ್ಯಗತ ಮಾಡುವುದರಲ್ಲಿ ಈ ಸರ್ಕಾರ ಎಷ್ಟರಮಟ್ಟಿಗೆ ಅಶ್ರದ್ಧೆವಹಿಸಿದೆ ಎಂಬುದೊಂದೇ ಉದಾಹರಣೆ ಸಾಕು. ಇತರ ಯೋಜನೆಗಳ ವಿಚಾರವನ್ನು ನಾನು ಹೇಳಬೇಕಾಗಿಲ್ಲ. ಇಷ್ಟು ವರ್ಷಗಳಿಂದಲೂ ಈ ಒಂದು ಕಾರ್ಯವನ್ನು ಕಾರ್ಯಗತ ಮಾಡಲಿಕ್ಕಾಗಲಿಲ್ಲ. ಇವತ್ತು ಶರಾವತಿ ಯೋಜನೆಯ ಕಾರ್ಯದ ಬಗ್ಗೆ ಈ ಶಾಸನ ಸಭೆಯಲ್ಲಿಯೂ ಮತ್ತು ಹೊರಗಡೆಯಲ್ಲಿಯೂ ಟೀಕೆಗಳು ಯಾವ ರೀತಿ ನಡೆದಿವೆ, ಈ ಕಾರ್ಯದಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ಮತ್ತು ದೊಡ್ಡ ದೊಡ್ಡ ಕಂಟ್ರಾಕ್ಟುದಾರರ ಪ್ರಭಾವಕ್ಕೆ ಸಿಕ್ಕಿ ಎಷ್ಟರ ಮಟ್ಟಿಗೆ ಖಜಾನೆಯ ಹಣವನ್ನು ಅವರಿಗೆ ಕೊಟ್ಟಿದ್ದಾರೆಂಬುದನ್ನು ಪರಿಶೀಲನೆ ಮಾಡಬೇಕೆಂದೂ ಮತ್ತು ಅನೇಕ ಸಾರಿ ಆ ಬಗ್ಗೆ ನಿರ್ದಿಷ್ಟವಾದ ಅಂಕಿ ಅಂಶಗಳನ್ನೂ ಸಹ ಈ ಸಭೆಯಲ್ಲಿ ಒದಗಿಸಬೇಕೆಂದೂ ನಾವು ಕೇಳಿದ್ದೇವೆ. ಈ ಬಗ್ಗೆ ಸರ್ಕಾರ ಒಂದು ನ್ಯಾಯಾಂಗ ವಿಚಾರ ಮಾಡಬೇಕೆಂದು ಹೇಳಿದರೂ ಅದು ಆ ಬಗ್ಗೆ ಏಕೆ ಉದಾಸೀನ ಮನೋಭಾವವನ್ನು ತಾಳುತ್ತಿದೆಯೋ ನನಗಂತೂ ಗೊತ್ತಾಗಲಿಲ್ಲ. ಮಾನ್ಯ ಮಿತ್ರರಾದಂಥ ಶ್ರೀಮಾನ್ ಸಿದ್ಧಯ್ಯನವರು ಸರ್ಕಾರದ ನೀತಿಯನ್ನು ಕುರಿತು ಬಹಳವಾಗಿ ಶ್ಲಾಘನೆ ಮಾಡಿದ್ದಾರೆ. ಕೇಂದ್ರದ ನೀರಾವರಿ ಮಂತ್ರಿಗಳಾದ ಶ್ರೀಮಾನ್ ಕೆ. ಎಲ್. ರಾವ್ ಅವರು ಇಲ್ಲಿನ ಈ ಯೋಜನಾ ಕಾರ್ಯಗಳ ಪ್ರಗತಿಯನ್ನು ನೋಡಿ ಶಬಾಸ್‌ಗಿರಿ ಕೊಟ್ಟಿದ್ದಾರೆ. ಅಂದ ಮೇಲೆ ಅವರ ಬುಜವನ್ನು ಅವರೇ ತಟ್ಟಿಕೊಳ್ಳುತ್ತಿದ್ದಾರೆ. ನಮ್ಮ ದೇಶದ ಮುಖ್ಯ ಮಂತ್ರಿಗಳು ಶ್ರೀ ರಾವ್ ಅವರು ಇಲ್ಲಿಗೆ ಬಂದಿದ್ದಾಗ ಕೃಷ್ಣಾ-ಗೋದಾವರಿ ನೀರಿನ ಬಗ್ಗೆ ನಮಗೆ ಹೆಚ್ಚು ಪಾಲು ಕೊಡಬೇಕು ಎಂಬುದಾಗಿ ಹೋರಾಟ ಮಾಡಲಿಲ್ಲ ಎಷ್ಟು ನಮಗೆ ಬರಬೇಕು ಎಂಬ ಬಗ್ಗೆ ಅವರೊಡನೆಯೂ ಯಾವ ವಿಚಾರವನ್ನೂ ಮಾಡಲಿಲ್ಲ. ಆದರೆ ಸುಮ್ಮನೆ ಭಾಷಣಗಳಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇದೇನು ಬನಪ್ಪಾ ಪಾರ್ಕ್ ಭಾಷಣವೋ ಅಥವಾ ಸರ್ಕಾರ ಮಾಡತಕ್ಕ ಗಂಭೀರ ಭಾಷಣವೋ ಅಥವಾ ನೀತಿ ನಿಯಮಗಳನ್ನನ್ನುಸರಿಸಿ ಸರ್ಕಾರ ಕೆಲಸ ಮಾಡುವ ರೀತಿಯೋ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಕೃಷ್ಣಾ ನದಿಗೆ ಎರಡು ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಈ ಸರ್ಕಾರದಲ್ಲಿ ದುಡ್ಡು ಎಲ್ಲಿದೆ, 600 ಟಿ. ಎಂ. ಸಿ. ಅಡಿಗಳಷ್ಟು ನೀರನ್ನು ಈ ಯೋಜನೆಗಳಿಂದ ಪಡೆಯುತ್ತೇವೆಂದು ಬೇರೆ ಹೇಳುತ್ತಾರೆ. ಶ್ರೀಮಾನ್ ಕೆ. ಎಲ್. ರಾವ್ ಅವರು ಬಂದಾಗ ದೇಶದ ಜನತೆಯ ಬಾಯಿಯನ್ನು ಮುಚ್ಚಿಸಿ ಇವರು ಅವರಿಂದ ಶರಾವತಿಯ ಬಗ್ಗೆ ಒಂದು ಸರ್ಟಿಫಿಕೇಟನ್ನು ತೆಗೆದುಕೊಂಡಿದ್ದಾರೆ. ಶರಾವತಿ ಯೋಜನೆ ಬಹಳ ಸೊಗಸಾಗಿದೆ, ಚೆನ್ನಾಗಿದೆ, ನಮಗೆ ಬೇಕಾದ್ದು ಈ ಯೋಜನೆಯಿಂದ ಸಿಕ್ಕುತ್ತದೆಂದು ಹೇಳಿ ಅವರಿಂದ ಶಾಬಾಸ್‌ಗಿರಿಯನ್ನು ಪಡೆದರು. ಹಿಂದೆ ಬೇಜವಾಬ್ದಾರಿ ಸರ್ಕಾರವಿದ್ದ ಕಾಲದಲ್ಲಿ ಮಿರ್ಜಾಸಾಹೇಬರು ಮತ್ತು ಇತರರು ದಿವಾನರು ಆಗಿದ್ದಾಗ ಹೊರಗಡೆಯಿಂದ ಅದರಲ್ಲೂ ಅಮೇರಿಕಾ ಮುಂತಾದ ಪ್ರದೇಶಗಳಿಂದ ದೊಡ್ಡ ದೊಡ್ಡ ತಜ್ಞರನ್ನು ಕರೆಸಿ, ಅವರ ಸಹಾಯದಿಂದ ಯೋಜನೆಗಳ ಕೆಲಸ ಕಾರ್ಯಗಳನ್ನು ಯಶಸ್ವಿಗೊಳಿಸಿ ಎಷ್ಟರಮಟ್ಟಿಗೆ ಜನತೆಯ ಕ್ಷೇಮವನ್ನು ಕಾಪಾಡಿದ್ದಾರೆಂಬುದನ್ನು ಇವರು ಮರೆತಿದ್ದಾರೆ. ಆದರೂ ಬೇಜವಾಬ್ದಾರಿ ಸರ್ಕಾರವಿದ್ದಾಗ ಅವರುಗಳನ್ನು ನಾನು ಆಗ ಆಕ್ಷೇಪಣೆ ಮಾಡುತ್ತಿದ್ದೆವು. ಅಯ್ಯೋ ಪಾಪ! ಅವರು ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡಿ ಹೋಗಿದ್ದಾರೆ. ಆದರೆ ಇವರು ಪ್ರತಿಯೊಂದು ಯೋಜನೆಗೂ ಚೌಕಾಸಿ ಮಾಡಿಕೊಂಡು ಬಹಳ ತಡವಾಗಿ ಯೋಜನಾಕಾರ್ಯಗಳನ್ನು ರೂಪಿಸಿಕೊಳ್ಳುತ್ತಾ ಅವರು ಇವರು ಯಾರಾದರೂ ಬಂದರೆ ಅವರಿಂದ ಸುಮ್ಮನೆ ಬಾಯಲ್ಲಿ ಸರ್ಟಿ

(ಶ್ರೀ ಎಸ್. ಶಿವಪ್ಪ)

ಪಿಕೇಟುಗಳನ್ನು ತೆಗೆದುಕೊಂಡು ತಮ್ಮ ಭುಜವನ್ನು ತಾವೇ ತಟ್ಟಿಕೊಳ್ಳುವುದರಲ್ಲಿ ಇವರು ಬಹಳ ಮುಂದೆ ಹೊರಟಿದ್ದಾರೆಂದು ಮಾತ್ರ ಹೇಳಬಹುದು. ಇದು ನೂರರಷ್ಟು ನಿಜ. ಶರಾವತಿಯ ಬಗ್ಗೆ ಶಾಸನ ಸಭೆಯಲ್ಲಿ ಒಂದು ಉನ್ನತಮಟ್ಟ ನ್ಯಾಯಾಂಗ ವಿಚಾರ ಮಾಡಬೇಕೆಂದು ಮೇಲಿಂದ ಮೇಲೆ ಕೇಳಿದಾಗ್ಯೂ ಮುಖ್ಯ ಮಂತ್ರಿಗಳು, ಆ ಬಗ್ಗೆ ಏನೂ ಆಗಿಲ್ಲ, ಎಷ್ಟೋ 50-60 ಲಕ್ಷ ರೂಪಾಯಿಗಳು ಹೋಗಿರಬಹುದು. ಈ ಬಗ್ಗೆ ಶಾಸನ ಸಭೆಯಲ್ಲಿ ಒಂದು ಶ್ವೇತ ಪತ್ರವನ್ನು ಹೊರಡಿಸುತ್ತೇನೆಂಬುದಾಗಿ ಬಹಳ ಉದಾರವಾಗಿ ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಶ್ವೇತ ಪತ್ರವೆಂದರೇನು ?

ಶ್ರೀ ಎಸ್. ಶಿವಪ್ಪ.—ಏನೋ ಒಂದು ದಾನ ಕೊಟ್ಟ ಹಾಗೆ ಮಾತನಾಡಿದ ಹಾಗೆ ಕಾಣುತ್ತದೆ. ಮುಖ್ಯ ಮಂತ್ರಿಗಳು ಈ ಉನ್ನತವಾದ ಶಾಸನ ಸಭೆಯ ಮುಂದೆ ಹೇಳಿದಂಥ ಒಂದು ಭರವಸೆಯನ್ನು ಒಂದೆರಡು ವರ್ಷಗಳೊಳಗೆ ಈಡೇರಿಸತಕ್ಕ ಶಕ್ತಿಯನ್ನು ಹೊಂದಿಲ್ಲದೆ ಇರುವಾಗ ಅವರು ಮುಖ್ಯ ಮಂತ್ರಿಗಳಾಗಿರುವುದಕ್ಕೆ ಲಾಯಕ್ಕಾಗಿಲ್ಲವೆಂದು ನಾನು ಹೇಳುತ್ತೇನೆ, ದೇಶದ ಜನತೆಯೂ ಹೇಳುತ್ತದೆ. ಅದಕ್ಕಾಗಿ ಅವರು ಕೂಡಲೇ ರಾಜೀನಾಮೆಯನ್ನು ಒಪ್ಪಿಸಬೇಕು. ಇಂತಹ ಉನ್ನತವಾದ ಸಭೆಯಲ್ಲಿ ನೀಡಿದ ಭರವಸೆಯನ್ನು ಈಡೇರಿಸದೆ ಇರುವಾಗ, ದೇಶದ ಜನತೆಗೆ ಮೋಸಮಾಡಿ ಸುಳ್ಳು ಸುಳ್ಳು ಭರವಸೆಯನ್ನು ಕೊಡುವುದರಿಂದ ಇಂತಹ ಯೋಜನೆಗಳನ್ನು ಅದರಲ್ಲೂ 100 ಕೋಟಿ ರೂಪಾಯಿಗಳ ಈ ಯೋಜನೆಯನ್ನು ಇವರ ಆಡಳಿತಕ್ಕೆ ಕೊಡುವುದಕ್ಕಾದರೂ ಜನತೆಗೆ ಹೇಗೆ ನಂಬಿಕೆ ಬರುತ್ತದೆ? ಒಂದು ವರ್ಷ, ಎರಡು ವರ್ಷ ಅಥವಾ ಇನ್ನಾರು ತಿಂಗಳೊಳಗೆ ಈ ಯೋಜನೆ ಪೂರ್ಣಗೊಳಿಸುತ್ತೇವೆಂದು ಹೇಳುವುದಕ್ಕೆ ಬದಲು ಏನು ಚೌಕಾಸಿ ಇದು ಎಂದು ನಾನು ಕೇಳುತ್ತೇನೆ. ಶರಾವತಿಯ ಬಗ್ಗೆ ಶಾಬಾಸ್‌ಗಿರಿಯನ್ನು ಅವರು ತೆಗೆದು ಕೊಳ್ಳುತ್ತಿದ್ದಾರೆಯೇ ಹೊರತು ಅದರಲ್ಲಿ ಅವರ ತಪ್ಪು ಏನಿದೆ, ಶಾಸನ ಸಭೆಗೆ ಕೊಟ್ಟಂಥ ಭರವಸೆಯೇನು, ಅದನ್ನು ಈಡೇರಿಸದೆ ಹೋದರೆ ಜನತೆ ಎಷ್ಟರ ಮಟ್ಟಿಗೆ ಈ ಸರ್ಕಾರದ ಮೇಲೆ ನಂಬಿಕೆ ಇಟ್ಟೀತು ಎಂಬ ಅಂಶವನ್ನಾದರೂ ಇವರು ವಿಚಾರ ಮಾಡಬೇಡವೇ! ಆ ಯೋಜನೆಯ ಬಗ್ಗೆ ನಿಜವಾದ ಅಂಕಿ ಅಂಶಗಳು ಇವರಲ್ಲಿ ಇದ್ದಿದ್ದರೆ ಎಂದೋ ಈ ಸಭೆಯಲ್ಲಿ ಶ್ವೇತಪತ್ರವನ್ನು ಕೊಡುತ್ತಿದ್ದರು. ಜನರಲ್ಲಿ ಆಗ ಒಂದು ರೀತಿಯ ನಂಬಿಕೆ ಬರುತ್ತಿತ್ತು. ಈಗ ಆ ನಂಬಿಕೆಯೇ ಹೋಗಿದೆ. ಇವರು ಅದನ್ನು ಕಳೆದುಕೊಂಡಿದ್ದಾರೆ. ಇಲ್ಲಿ ಕೊಟ್ಟಂಥ ಭರವಸೆಗನುಗುಣವಾಗಿ ಜವಾಬನ್ನು ಕೊಡತಕ್ಕ ಒಂದು ಎದೆಗಾರಿಕೆ ಇವರಲ್ಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇಂಥವರಲ್ಲಿ ಯಾವ ರೀತಿ ನಂಬಿಕೆ ಇಡೋಣ? ಹಿಂದೆ ಈ ವಿಚಾರದಲ್ಲಿ white paperನ್ನು ಈ ಸಭೆಯಲ್ಲಿ ಮಂಡಿಸುತ್ತೇನೆಂದು ವಾಗ್ದಾನ ಮಾಡಿದೊಡನೆಯೇ ಮುಖ್ಯ ಮಂತ್ರಿಗಳು ಆ ಕೆಲಸವನ್ನು ಮಾಡಬೇಕಾಗಿತ್ತು. ಇಷ್ಟು ತಡವಾಗಿರುವುದರಿಂದ, ಜನತೆ ಆ ವಿಚಾರದಲ್ಲಿ ಅನುಮಾನ ಪಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಜನತೆಯ ಮುಂದೆ ಆ ಯೋಜನೆಯ ಅಂಕಿ ಅಂಶಗಳನ್ನು ಇಡತಕ್ಕ ಧೈರ್ಯವಿಲ್ಲದೆ ಅಂಜಿಕೆ ತೋರ್ಪಡಿಸುತ್ತಿದ್ದಾರೆಂಬುದು ಇವರಿಂದಲೇ ವ್ಯಕ್ತವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಬಹುಶಃ Vigilance Commissionerಗೆ ಅದನ್ನು ಒಪ್ಪಿಸಿದರೆ ಅದರಲ್ಲಿ ಯಾರು ಸಿಕ್ಕಿಬೀಳ್ತಾರೋ ಗೊತ್ತಿಲ್ಲ. ಇದಕ್ಕೋಸ್ಕರ ನಿಧಾನವಾಗುತ್ತಿರಬಹುದು.

ಶ್ರೀ ಎಸ್. ಶಿವಪ್ಪ.—ದೇಶದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಈ ಸರ್ಕಾರ ಕೈಗೊಳ್ಳುವಾಗ, ಯಾವ ಯಾವ ಯೋಜನೆಗಳು ಇನ್ನೂ ಕಾರ್ಯಗತವಾಗಿಲ್ಲವೋ ಅವನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೋಸ್ಕರ ಕೇವಲ ಒಬ್ಬ ಅಧಿಕಾರಿ ಬೇಕಿಲ್ಲ, ಉನ್ನತವಾದ ಅಧಿಕಾರವಿರತಕ್ಕ ಒಂದು ವಿಜಿಲೆನ್ಸ್ ಕಮಿಷನ್ ಬೇಕು. ಆ ಕಮಿಷನ್ ಯಾರ ಒಂದು ದಾಕ್ಷಿಣ್ಯಕ್ಕೂ ಒಳಗಾಗದೆ ಸರ್ಕಾರದಲ್ಲಿರತಕ್ಕ ಲೋಪದೋಷಗಳನ್ನು ತೊಡೆದು ಹಾಕುವುದಕ್ಕಾಗಲೀ, ಈ ಶಾಸನ ಸಭೆಯ ಸದಸ್ಯರ ಮೇಲಾಗಲೀ ಅಥವಾ ಯಾರ ಮೇಲಾಗಲೀ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರಬೇಕು. ಆ ಒಂದು ಕಾರ್ಯವನ್ನು ಜಾರಿಮಾಡತಕ್ಕ ಅಧಿಕಾರ ಆ ಕಮಿಷನ್ನಿಗೆ ಕೊಡಬೇಕು. ಏಕೆಂದರೆ ಈಗ ಆಂಟಿಕರಪ್‌ಷನ್ ಎಂಬ ಒಂದು ಇಲಾಖೆ ಇದೆ. ಇದರಲ್ಲಿ ಸರ್ಕಾರದಿಂದ ನೇಮಿತವಾದ ಒಬ್ಬ ಅಧಿಕಾರಿ ಇದ್ದಾರೆ. ಆ ಒಬ್ಬ ಅಧಿಕಾರಿಯಿಂದ ನಿಜವಾಗಿ ಇಂತಹ ದೊಡ್ಡ ದೊಡ್ಡ ಪ್ರಾಜೆಕ್ಟುಗಳಲ್ಲಿ ನಡೆಯುತಕ್ಕ ಅನ್ಯಾಯಗಳ ಬಗ್ಗೆ ಹತೋಟಿಯನ್ನಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆತ ಈ ಯೋಜನೆಗಳ ಬಗ್ಗೆ ಯಾವ ರೀತಿ ಹತೋಟಿ ಇಡಬಲ್ಲ!

ಇದು ನಿಜವಾಗಿ ಸಂಶಯಾಕ್ಕೆಡೆಕೊಡುತ್ತದೆ. ಆ ತರಹ ಈ ವಿಜಿಲೆನ್ಸ್ ಕಮಿಷನ್ ಆಗಬಾರದು. ಹೆಚ್ಚಿನ ಅಧಿಕಾರವಿರತಕ್ಕ ಒಂದು ವಿಜಿಲೆನ್ಸ್ ಕಮಿಷನ್ ರಚನೆಯಾಗಬೇಕು. ಆಗ ಸರ್ಕಾರದಲ್ಲಿರ ತಕ್ಕ ಲೋಪದೋಷಗಳು ಮಾಯವಾಗುತ್ತವೆ. ದೇಶಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಸಾರಿಗೆ, ವಸತಿ ಮತ್ತು ಕಾರ್ಮಿಕ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳಿದ್ದು ಬರೀ ಶರಾವತಿ ಯೋಜನೆಗನ್ವಯಿಸುತ್ತದೆಯೋ ಅಥವಾ ಬೇರೆ ಯೋಜನೆಗಳಿಗೂ ಅನ್ವಯಿಸುತ್ತದೆಯೋ ?

ಶ್ರೀ ಎಸ್. ಶಿವಪ್ಪ.—ವಿಜಿಲೆನ್ಸ್ ಕಮಿಷನ್ ಬೇಕಾದುದು ಬರೀ ಈ ಯೋಜನೆ ಒಂದಕ್ಕಲ್ಲ. ಶರಾವತಿ ಯೋಜನೆಯೊಂದನ್ನು ಉದಾಹರಣೆಗಾಗಿ ತೆಗೆದುಕೊಂಡು ಹೇಳುತ್ತಿದ್ದೇನೆ. ಈ ಶರಾವತಿ ಯೋಜನೆಯ ಬಗ್ಗೆ ಏನು ವಿಚಾರಣೆಯಾಗಬೇಕೋ ಅದನ್ನು ಕೇವಲ ವಿಜಿಲೆನ್ಸ್ ಕಮಿಷನ್ನಿಗೆ ಕೊಟ್ಟರೆ ಸಾಲದು. ಇದರಲ್ಲಿ ಇನ್ನೂ ಉನ್ನತ ಮಟ್ಟ ನ್ಯಾಯಾಂಗ ವಿಚಾರಣೆಯಾಗಬೇಕು. ಏಕೆಂದರೆ ಈ ಶರಾವತಿ ಯೋಜನೆಯ ಕಾಮಗಾರಿಗಳಲ್ಲಿ ಇನ್ನೂ ಅನೇಕ ಲೋಪದೋಷಗಳಿವೆ. ಈ ದೇಶದಲ್ಲಿ ನೂರು ಕೋಟಿ ರೂಪಾಯಿಗಳನ್ನು ವೆಚ್ಚಮಾಡತಕ್ಕ ಒಂದು ದೊಡ್ಡ ಯೋಜನೆ, ಇದು ಇನ್ನೂ ಇತರ ಯೋಜನೆಗಳೂ ಇವೆ. ದೇಶದಲ್ಲಿರತಕ್ಕ ಲಂಚರುಷುವತ್ತು, ಭ್ರಷ್ಟಾಚಾರ ಇವೆಲ್ಲವನ್ನೂ ತೊಡೆದು ಹಾಕಲು ಉನ್ನತ ಮಟ್ಟದ ಹೆಚ್ಚಿನ ಅಧಿಕಾರವಿರತಕ್ಕ ಒಂದು ವಿಜಿಲೆನ್ಸ್ ಕಮಿಷನ್ ಅತ್ಯಗತ್ಯವೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ ವ್ಯವಸಾಯೋತ್ಪನ್ನಕ್ಕೆ ಹೇರಳವಾಗಿ ಹಣವನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ಆಹಾರೋತ್ಪತ್ತಿಗಾಗಿ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಿರುವ ಬಗ್ಗೆ ಅಂಕಿಅಂಶಗಳ ಬಗ್ಗೆ ಲೆಕ್ಕಹಾಕಿದರೆ ಇವೊತ್ತು ಆಹಾರೋತ್ಪತ್ತಿ ಎಷ್ಟಾಗಿದೆ ಯೆಂಬುದು ಸರ್ಕಾರಕ್ಕೆ ಸರಿಯಾಗಿ ಗೊತ್ತಿಲ್ಲ. ಆ ಬಗ್ಗೆ ಸರಿಯಾದ ವಿವರಗಳನ್ನು ಕೊಟ್ಟಿಲ್ಲ. ಶೇಕಡ 3·9 ರಷ್ಟು ಮಾತ್ರ ಆಹಾರೋತ್ಪತ್ತಿ ಹೆಚ್ಚಾಗಿದೆ.

3-00 P.M.

ಅದು 1960-61ನೇ ಸಾಲಿನಲ್ಲಿ 38.6 ಲಕ್ಷ ಟನ್ ಇತ್ತು. ಅದು 1961-62ನೇ ಸಾಲಿನಲ್ಲಿ 37 ಲಕ್ಷ ಟನ್ನಿಗೆ ಇಳಿಯಿತು. 1962-63ನೇ ಸಾಲಿನಲ್ಲಿ 40.8 ಲಕ್ಷ ಟನ್ನಿಗೆ ಬಂದಿದೆ. 1960-61ನೆಯ ಸಾಲಿನಲ್ಲಿ ಯೋಜನೆಯ ಪ್ರಕಾರ 4½ ಲಕ್ಷ ಟನ್ ಉತ್ಪತ್ತಿಯಾಗಬೇಕಾಗಿತ್ತು. ಆದರೆ 38 ಲಕ್ಷ ಟನ್ ಮಾತ್ರ ಉತ್ಪತ್ತಿಯಾಯಿತು. ಎಂದರೆ 2½ ಲಕ್ಷ ಟನ್ ಇನ್ನೂ ಖೋತಾ ಆಯಿತು. 1961-62ನೇ ಸಾಲಿನಲ್ಲಿ ಈ ದೇಶಕ್ಕೆ ಬೇಕಾಗಿದ್ದಂಥ ಆಹಾರ 42 ಲಕ್ಷ ಟನ್. ಆದರೆ ಬೆಳೆದದ್ದು 37·7 ಲಕ್ಷ ಟನ್ ಮಾತ್ರ. 1962-63ನೇ ಸಾಲಿನಲ್ಲಿ ನಮಗೆ ಬೇಕಾಗಿದ್ದಂಥ ಆಹಾರ ಪದಾರ್ಥಗಳು 41½ ಲಕ್ಷ ಟನ್. ಆದರೆ ಬೆಳೆದದ್ದು 40 ಲಕ್ಷ ಟನ್ ಮಾತ್ರ. ವರ್ಷೇ ವರ್ಷೇ ಏನು ಬೆಳೆಯಬೇಕೆಂದು ಯೋಚನೆ ಮಾಡಿದ್ದಾರೋ ಅದರಲ್ಲಿ 2-3 ಲಕ್ಷ ಟನ್ ಆಹಾರದ ಕೊರತೆ ಈ ದೇಶದಲ್ಲಿ ಆಗುತ್ತಿದೆ. ಮೂರನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ನಮ್ಮ ದೇಶದ ಆಹಾರೋತ್ಪತ್ತಿಯನ್ನು 48 ಲಕ್ಷ ಟನ್ನಿಗೆ ಏರಿಸುತ್ತೇವೆಂದು ಭಾಷಣದಲ್ಲಿ ಹೇಳುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವೆಲ್ಲ ಸರ್ಕಾರದವರುಕೊಟ್ಟಿರತಕ್ಕ ಆಹಾರದ ಅಂಕಿಅಂಶಗಳು ಅವೇನು ಆಹಾರವನ್ನು ಬೆಳೆದ ಅಂಕಿ ಅಂಶಗಳಲ್ಲ. ಅವು ಏನಿದ್ದರೂ ಕಾಗದದಲ್ಲಿ ಅಂಕಿ ಅಂಶಗಳು ಬೆಳೆದಿವೆ.

ಶ್ರೀ ಎಸ್. ಶಿವಪ್ಪ.—ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಕಾಗದದ ಮೇಲೆ ಬೆಳೆದಿರತಕ್ಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ನಮಗೆ ಯಾವುದು ಬೇಕೋ ಅದನ್ನು ಕೊಟ್ಟಿಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 10 ಲಕ್ಷ ಟನ್ ಆಹಾರ ಪದಾರ್ಥಗಳನ್ನು ಜಾಸ್ತಿ ಉತ್ಪತ್ತಿ ಮಾಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದಾಗ 10 ಲಕ್ಷ ಟನ್ ಆಹಾರ ಪದಾರ್ಥವನ್ನು ಯಾವ ಯಾವ ರೀತಿಯಲ್ಲಿ ಉತ್ಪಾದನೆ ಮಾಡಬೇಕು ಎನ್ನುವ ವಿಚಾರದಲ್ಲಿ, ಒಳ್ಳೆಯ ಬೀಜಗಳು, ಒಳ್ಳೆಯ ಗೊಬ್ಬರ ಮತ್ತು ಒಳ್ಳೆಯ ಹೋರಿಗಳನ್ನು ರೈತರಿಗೆ ಒದಗಿಸಿ ಅವುಗಳ ಮುಖಾಂತರ 6 ಲಕ್ಷ ಟನ್ ಆಹಾರ ಪದಾರ್ಥಗಳನ್ನು ಜಾಸ್ತಿ ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಸಾಯಿಲ್ ಕನ್‌ಸರ್‌ವೇಷನ್ ಮತ್ತು ಬಾವಿಗಳಿಗೆ ಪಂಪುಸೆಟ್ಟುಗಳನ್ನು ಒದಗಿಸುವುದು ಇತ್ಯಾದಿಗಳಿಂದ ಉಳಿದ ಆಹಾರವನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಸರ್ಕಾರದವರು ನಮಗೆ ಕೊಟ್ಟಿರುವ ರಿಪೋರ್ಟಿನ ಪ್ರಕಾರ ಈ ದೇಶದಲ್ಲಿ ಬೇರೆ ಬೇರೆ ಬಾಬುಗಳಿಗೆ ಹೆಚ್ಚಿಗೆ ಹಣ

(ಶ್ರೀ ಎಸ್. ಶಿವಪ್ಪ)

ವನ್ನು ಖರ್ಚುಮಾಡಿದ್ದರೂ ಸಾಯಿಲ್ ಕನ್‌ಸರ್‌ವೇಷನ್, ಅನಿಮಲ್ ಹಜ್ಬೆಂಡರಿ ಮತ್ತು ಫರ್ಟಿಲೈಜರ್ ಇವುಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡಿಲ್ಲ. ಯಾವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೋ ಅದಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಿಲ್ಲ. ಕೈಗಾರಿಕಾ ಇಲಾಖೆಯವರು ನಮಗೆ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ 1961-62ನೇ ಸಾಲಿನಲ್ಲಿ ಫರ್ಟಿಲೈಜರ್ಸ್ ಮತ್ತು ಕಾಪರ್ ಸಲ್ಫೇಟನ್ನು $1\frac{1}{3}$ ಸಾವಿರ ಟನ್ ಅಷ್ಟು ಉತ್ಪಾದನೆ ಮಾಡಿದ್ದಾರೆ. ಆದರೆ ಅದು 1962-63ನೇ ಸಾಲಿನಲ್ಲಿ ಒಂದು ಸಾವಿರ ಟನ್ನಿಗೆ ಇಳಿದಿದೆ. ಅಮೋನಿಯಂ ಸಲ್ಫೇಟನ್ನು 1960-61ನೇ ಸಾಲಿನಲ್ಲಿ $4\frac{1}{2}$ಸಾವಿರಟನ್‌ನಷ್ಟು ಉತ್ಪಾದನೆ ಮಾಡಿದ್ದಾರೆ 1962-63 ನೇ ಸಾಲಿನಲ್ಲಿ ಸೂಪರ್ ಫಾಸ್‌ಫೇಟು 9270 ಟನ್ ಉತ್ಪಾದನೆಯಾಗಿದೆ. ಈ ಕೆಮಿಕಲ್ ಫರ್ಟಿಲೈಜರ್ಸ್ ಏನಿದೆಯೋ ಅದು 1960-61-62 ಮತ್ತು 1963ನೇ ಸಾಲಿನಲ್ಲಿ ಶೇ 25 ರಷ್ಟು ಉತ್ಪಾದನೆ ಕಡಮೆಯಾಗಿದೆ ಯಾವದೇಶದಲ್ಲಿಯೇ ಆಗಲೀ ವಿದ್ಯುಚ್ಛಕ್ತಿಗಾಗಿ ಹೇರಳವಾಗಿ ಹಣವನ್ನು ಖರ್ಚುಮಾಡಿ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಹೆಚ್ಚು ಆಹಾರೋತ್ಪಾದನೆಯನ್ನು ಮಾಡುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟಿಲ್ಲ.

ಇನ್ನು ಮೈನರ್ ಇರಿಗೇಷನ್ ಕೆಲಸಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡುವುದು ಒಳ್ಳೆಯದು. ಆದರೆ ಆ ಬಗ್ಗೆ ಸರ್ಕಾರದವರು ಯಾವರೀತಿ ಹಣವನ್ನು ಖರ್ಚುಮಾಡುತ್ತಿದ್ದಾರೆಂಬುದನ್ನು ನಾನು ಹೇಳಬಯಸುತ್ತೇನೆ. ಈಗ ಬಾವಿಗಳನ್ನು ತೆಗೆಯುವುವಕ್ಕೋಸ್ಕರ ರೈತರಿಗೆ ಹಣವನ್ನು ಸಾಲಕೊಡುತ್ತಿದ್ದಾರೆ. ಅವರು ಬಾವಿಗಳನ್ನು ತೆಗೆಯುತ್ತಾರೆಯೋ ಬಿಡುತ್ತಾರೆಯೋ ಅಂತೂ ಅವರಿಗೆ ಬಾವಿಯನ್ನು ತೆಗೆಯುವುದಕ್ಕೋಸ್ಕರ ಎಂದು ಮೂರುಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಾರೆ. ಅದರ ಬಗ್ಗೆ ಅಂಕಿ ಅಂಶಗಳನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ 22 ಸಾವಿರ ಬಾವಿಗಳಿಗೆ ಹಣವನ್ನು ಕೊಟ್ಟಿದೆ ಅದರ ಪೈಕಿ 14 ಸಾವಿರ ಬಾವಿಗಳು ಕಂಪ್ಲೀಟಾಗಿವೆ ಎಂದು ಹೇಳಿದ್ದಾರೆ. ಆ ರೀತಿ ಬಾವಿಯನ್ನು ತೆಗೆಸುವುದಕ್ಕೋಸ್ಕರ ಸರ್ಕಾರದಿಂದ ಹಣವನ್ನು ತೆಗೆದುಕೊಂಡಿರುವವರ ಬಾವಿಗಳು ಕಾಗದದ ಮೇಲೆ ಮಾತ್ರ ಪೂರ್ತಿ ಆಗಿವೆ. ಆದರೆ ಆ ಬಾವಿಗಳಲ್ಲಿ ನೀರು ಬರಲಿಲ್ಲ. ಈ ಬಾವಿಗಳಿಗೋಸ್ಕರ ಸರ್ಕಾರದವರು ಕೊಟ್ಟಿರತಕ್ಕ ಹಣ ಬಾವಿಗಳಿಗೆ ಬದಲಾಗಿ ಸರ್ಕಾರದ ಪ್ರಭಾವಕ್ಕೊಳಗಾಗಿರತಕ್ಕ ಪ್ರತಿಭಾವಂತರ ಬಾಯಿಗೆ ಹೋಗಿದೆ. ಅದು ಬಾವಿಗಳಿಗೆ ಹೋಗಿಲ್ಲ. ಅದರ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ದೊಡ್ಡ ದೊಡ್ಡಬಾಯಿ ಜೋರಾಗಿರತಕ್ಕವರಿಗೆ ಆ ಹಣ ಹೋಗಿದೆಯೇ ಹೊರತು ಆ ಹಣ ಬಾವಿಗಳಿಗೆ ಮಾತ್ರ ಹೋಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—14ಸಾವಿರ ಬಾವಿಗಳು ಪೂರ್ತಿ ಆಗಿಲ್ಲ ಎಂದು ಹೇಳುತ್ತೀರಾ? ಮಾನ್ಯಸದಸ್ಯರಿಗೆ ಗೊತ್ತಿರುವ ಹಾಗೆ ಬಾವಿಗಳಿಗೆ ಕೊಟ್ಟಿರತಕ್ಕ ಹಣ ಎಲ್ಲಿ ದುರುಪಯೋಗವಾಗಿದೆ ಎಂದು ಹೇಳಿದರೆ ನಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಈಗ ತಾವು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ 14 ಸಾವಿರ ಬಾವಿಗಳು ಪೂರ್ತಿಯಾಗಿವೆ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಆ 14 ಸಾವಿರ ಬಾವಿಗಳಲ್ಲಿ ಎಷ್ಟುನೀರು ಉತ್ಪತ್ತಿಯಾಗಿದೆ, ಅದರಿಂದ ಎಷ್ಟು ಎಕರೆ ಜಮೀನು ಸಾಗುವಳಿ ಎನ್ನತಕ್ಕ ಅಂಕಿ ಅಂಶಗಳನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಕೊಟ್ಟರೆ ಒಳ್ಳೆಯದು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಬಹುಭಾಗ ರೈತರು ಈ ಬಾವಿಗಳಿಗೆ ಕೊಡತಕ್ಕ ಹಣವನ್ನು ತೆಗೆದುಕೊಂಡಿಲ್ಲ ಎಂದು.

Sri D. DEVARAJ URS.—I want to know whether the Hon'ble Member has been able to point out such misuse of funds and whether he has brought them to the attention of the concerned authorities.

Sri S. SIVAPPA.—I have represented on the floor of the House.

Sri D. DEVARAJ URS.—It is a vague charge. Let him quote specific instances.

Sri S SIVAPPA.—I am making specific charges. This Government has failed to implement the scheme because it is giving funds to

its pets and favourites who have enormous influence. I am prepared to give facts and figures. I am putting an interpellation also asking for information.

ಕೆಲವುಕಡೆ ನಾನು ಹೋಗಿದ್ದ ಜಾಗಗಳಲ್ಲಿ ನೋಡಿದ್ದೇನೆ. ಕೆಲವರು ಬಾವಿ ತೆಗೆಯುವುದ ಕ್ಕೋಸ್ಕರ ಹಣವನ್ನು ತೆಗೆದುಕೊಂಡಿದ್ದಾರೆಯೇ ಹೊರತು ಆದರೆ ಅವರು ಬಾವಿಯನ್ನು ತೆಗೆಸಿ ನೀರನ್ನು ಉತ್ಪತ್ತಿಮಾಡಿಕೊಂಡು ಅದರಿಂದ ಜಮೀನನ್ನು ಸಾಗುಮಾಡುತ್ತಿಲ್ಲ. ಶೇಕಡ 60 ರಷ್ಟು ಬಾವಿಗಳಲ್ಲಿ ನೀರುಬಂದಿಲ್ಲ, ಎಂದರೆ ಬಾವಿಗಳನ್ನು ತೆಗೆದಿಲ್ಲ, ಆದರೆ ಆ ಹಣವನ್ನು ಮಾತ್ರ ತೆಗದು ಕೊಂಡಿದ್ದಾರೆ. ಈಗ ಸರ್ಕಾರದವರು 14ಸಾವಿರ ಬಾವಿಗಳೇನು ಪೂರ್ತಿಯಾಗಿವೆ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಯೋ ಅವುಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಬಾವಿಗಳನ್ನು ತೆಗೆದಿಲ್ಲ ಅವು ಗಳಲ್ಲಿ ನೀರುಬಂದಿಲ್ಲ. ಆ ಬಾವಿಗಳ ನೀರಿನಿಂದ ಜಮೀನು ಸಾಗಾಗುತ್ತಿಲ್ಲ ಎಂದು ನಾನು ಹೇಳು ತ್ತೇನೆ. ನಮ್ಮ ತಾಲ್ಲೂಕಿನಲ್ಲಿಯೇ ಸುಮಾರು 100 ಬಾವಿಗಳಿಗೆ ಹಣವನ್ನು ಕೊಟ್ಟಿದ್ದಾರೆ. ಅದರ ಪೈಕಿ ಒಂದು ಬಾವಿಯನ್ನೂ ತೆಗೆದು ಅದರಿಂದ ನೀರನ್ನು ಉಪಯೋಗಿಸಿಕೊಂಡು ಜಮೀನನ್ನು ಸಾಗುಮಾಡುತ್ತಿಲ್ಲ. ಸುಮ್ಮನೆ ಹೆಚ್ಚು ಆಹಾರ ಉತ್ಪಾದನೆಗಾಗಿ ಹಣವನ್ನು ಖರ್ಚುಮಾಡಿದ ಮಾತ್ರಕ್ಕೆ ಆಹಾರೋತ್ಪಾದನೆಯಾಗುವುದಿಲ್ಲ. ಈ ದೇಶದಲ್ಲಿ ಆಹಾರದ ಕೊರತೆ ದಿನೇ ದಿನೇ ಜಾಸ್ತಿಯಾಗುತ್ತಿದೆ. Cost of living ಜೀವನದ ವೆಚ್ಚ ಇಂಡಿಯಾದೇಶದ ಎಲ್ಲಾ ಕ್ಷೇತ್ರಗಳಿ ಗಿಂತಲೂ ಮೈಸೂರು ದೇಶದಲ್ಲಿ ಬಹಳ ಜಾಸ್ತಿಯಾಗಿದೆ. ಇಂಡಸ್ಟ್ರಿಯಲ್ ಲೇಬರ್ ಏರಿಯಾ ತೆಗೆದುಕೊಂಡರೂ 1963ನೇ ಮಾರ್ಚಿ ತಿಂಗಳಿನಲ್ಲಿ Cost of living index ಬೆಂಗಳೂರಿನಲ್ಲಿ 154, ಡಿಲ್ಲಿಯಲ್ಲಿ 133, ಮದ್ರಾಸಿನಲ್ಲಿ 149, ಬೊಂಬಾಯಿನಲ್ಲಿ 143, ಅಹಮದಾಬಾದಿನಲ್ಲಿ 135, ಹೈದರಾಬಾದಿನಲ್ಲಿ 133 ಇತ್ತು. ಇಡೀ ಇಂಡಿಯಾ ದೇಶದ ಸರಾಸರಿಯನ್ನು ತೆಗೆದು ಕೊಂಡರೂ living index 136 ಇದೆ. ನಮ್ಮ ದೇಶದಲ್ಲಿ 154 ಇದೆ. ನಮ್ಮ ದೇಶದಲ್ಲಿ ಆಹಾರ ವಸ್ತುಗಳ ಬೆಲೆಗಳು, ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕ ವಸ್ತುಗಳ ಬೆಲೆಗಳು ದಿನ ದಿನಕ್ಕೂ ವಿಷ ಏರಿದ ಹಾಗೆ ಏರುತ್ತಿವೆ. ತಮಗೆ ಬೇಕಾದರೆ ಈ ಬಗ್ಗೆ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯಸದಸ್ಯರು ಈಗ ಹೇಳಿದಂತಹ ಅಂಶಗಳು ಯಾವುವು?

ಶ್ರೀ ಎಸ್. ಶಿವಪ್ಪ.—ನಾನು ಅಧಿಕೃತ ವರದಿಗಳಿಂದ ಈ ಅಂಕಿ ಅಂಶಗಳನ್ನು ಹೇಳು ತ್ತಿದ್ದೇನೆ.

ಮೈಸೂರು ದೇಶದಲ್ಲಿರತಕ್ಕದ್ದು ಇಂಡಿಯಾ ದೇಶದ ಎಲ್ಲ ಭಾಗಗಳಿಗಿಂತ ಹೆಚ್ಚಾದದ್ದು ಎಂದು ಸರ್ಕಾರದವರೇ ಹೇಳಿದ್ದಾರೆ. ಈ ರೀತಿಯಾಗಿ ನಮ್ಮ ಮೈಸೂರು ದೇಶದಲ್ಲಿ ಜೀವನದ ವೆಚ್ಚ ದಿನೇ ದಿನೇ ವಿಷ ಏರಿದ ಹಾಗೆ ಏರುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದ ಅಂಕಿಅಂಶಗಳನ್ನು ಯಾವ ವರದಿಯ ಆಧಾರದ ಮೇಲೆ ಹೇಳುತ್ತಿದ್ದೀರಿ ?

ಶ್ರೀ ಎಸ್. ಶಿವಪ್ಪ.—ಅಂಕ ಅಂಶಗಳ್ಳೆ ಇಲಾಖೆಯವರು ಒದಗಿಸಿರುವ ರಿಪೋರ್ಟಿನಿಂದ ಹೇಳುತ್ತಿದ್ದೇನೆ.

ಸಭಾಪತಿಯವರೇ, ನಮ್ಮ ದೇಶದಲ್ಲಿ ಆಹಾರಾಭಾವವನ್ನು, ಕೋಟಿಗಟ್ಟಲೇ ಹಣವನ್ನು ಯೋಜನೆಗಳಿಗಾಗಿ ಖರ್ಚುಮಾಡಿದ್ದರೂ ನೀಗುವುದಕ್ಕೆ ಈ ಸರ್ಕಾರ ಅಸಮರ್ಥವಾಗಿದೆ ಎನ್ನು ವುದು ಅವರು ಕೊಟ್ಟಿರುವ ಅಂಕಿ ಅಂಶಗಳಿಂದಲೇ ದೃಢವಾಗಿ ಗೊತ್ತಾಗುತ್ತದೆ. ನಮ್ಮ ದೇಶ ದಲ್ಲಿ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಬೇಕು ಎಂದು ನಾವು ತೀರ್ಮಾನ ಮಾಡಿರುವ ಕಾಲದಲ್ಲಿ ಈ ರೀತಿ ಆಹಾರದ ಕೊರತೆ ಮತ್ತು ಜೀವನದ ವೆಚ್ಚ ದಿನೇ ದಿನೇ ವಿಷವೇರಿದ ಹಾಗೆ ಏರು ತ್ತಿದ್ದರೆ ನಮ್ಮ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಸರ್ಕಾರ ದವರು ಒಂದು ವಾದವನ್ನು ಹೇಳುತ್ತಾರೆ. ಆಹಾರದ ಬೆಲೆ ಜಾಸ್ತಿಯಾಗಿದೆ, ಜೀವನದ ವೆಚ್ಚ ಜಾಸ್ತಿಯಾಗಿದೆ ಎಂದು ಹೇಳುವವರೂ ನೀವೇ, ಒಂದು ಪಕ್ಷ ರೈತನಿಗೆ ಕಡಮೆ ಬೆಲೆಯನ್ನು ಕೊಟ್ಟರೆ ಆಗ ರೈತನಿಗೆ ಸಿಕ್ಕುವ ಬೆಲೆ ಕಡಮೆಯಾಯಿತು ಎಂದು ಹೇಳುವವರೂ ಇವರೇ ಎಂದು ಒಂದು ವಾದವನ್ನು ಮಾಡುತ್ತಾರೆ. ಯಾವ ಸರ್ಕಾರವೇ ಆಗಲೀ ಜೀವನದ ವೆಚ್ಚವನ್ನು ಕಡಮೆ ಮಟ್ಟದಲ್ಲಿಟ್ಟು, ಸಾಮಾನ್ಯ ಜನರ ಮತ್ತು ಮಧ್ಯಮ ವರ್ಗದ ಜನರಿಗೆ ಎಟಕುವಂತೆ ಮಾಡುವಾಗ ಆಹಾರ ಪದಾರ್ಥಗಳನ್ನು ಬೆಳೆಯುವವನಿಗೆ ತೊಂದರೆಯಾದರೆ ಸರ್ಕಾರ ಸಬ್ಸಿಡಿಯನ್ನು ಕೊಡ

(ಶ್ರೀ ಎಸ್. ಶಿವಪ್ಪ)

ಬೇಕು. ದೇಶದಲ್ಲಿ ಜೀವನದ ವೆಚ್ಚ ಯಾವ ಮಟ್ಟದಲ್ಲಿರಬೇಕು. ಆಹಾರದ ಬೆಲೆ ಎಷ್ಟಿರಬೇಕು. ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ ಏನಿವೆ ಅವಕ್ಕೆ ಏನು ಮಾನ್ಯತೆ ಇರಬೇಕು ಎಂದು ವಿಮರ್ಶೆ ಮಾಡಿ ಶಾಸ್ತ್ರೀಯವಾಗಿ ಮಾಡತಕ್ಕದ್ದು ಸರ್ಕಾರದ ಜವಾಬ್ದಾರಿ. ಹೀಗೆಮಾಡುವಾಗ ಆಹಾರ ಬೆಳೆಯುವವನಿಗೆ ಹುಮ್ಮಸ್ಸಿರಬೇಕು, ತಿನ್ನತಕ್ಕ ಮನುಷ್ಯನಿಗೆ, ಅವನು ಕೂಲಿಗಾರನಾಗಲೀ ಮಧ್ಯಮವರ್ಗದವನಾಗಲೀ ಅದರಿಂದ ಅನುಕೂಲವಾಗಬೇಕು. ಇವೆರಡನ್ನೂ ಅನುಸರಣೆ ಮಾಡಿ ಕೊಂಡು ಈ ಯೋಜನೆಯನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡರೆ ಇವತ್ತು ಈ ಯೋಜನೆ ಶಾಸ್ತ್ರೀಯವಾಗಿಲ್ಲ ಎನ್ನುವುದು ಅಂಕಿ ಅಂಶಗಳಿಂದ ದೃಢೀಕರಿಸಲ್ಪಟ್ಟಿದೆ. ಈ ಯೋಜನೆಯನ್ನು ಮಾಡಿರತಕ್ಕ ಕ್ರಮದಲ್ಲಿ ಸ್ವಲ್ಪ ಲೋಪವಿದೆ, ಅದನ್ನು ಕಾರ್ಯಗತ ಮಾಡುವುದರಲ್ಲಿ ಲೋಪವಿದೆ ಎನ್ನುವುದು ಅರ್ಥವಾಗುತ್ತದೆ.

ನಾವು ಯೋಜನೆಗಳಿಗೆ ಏನು ಹಣವನ್ನು ಖರ್ಚುಮಾಡುತ್ತಿದ್ದೇವೆಯೋ ಅದು ಸರಿಯಾಗಿ ಖರ್ಚಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ಕಾಲಕಾಲಕ್ಕೆ ತಿಳಿಯಲು, ಅದರ ಮೇಲ್ವಿಚಾರಣೆ ಯನ್ನು ಮಾಡಲು ಒಂದು Evaluation Committee ಇದ್ದರೆ ಈ ದೆಸೆಯಲ್ಲಿ ರಿಪೋರ್ಟನ್ನು ತರಿಸಿಕೊಂಡು ಅದರ ಮುಖಾಂತರ ನಾವು ಅಳತೆಮಾಡುವುದಕ್ಕೆ ಅನುಕೂಲವಾಗುತ್ತದೆ. ಮೈಸೂರು ದೇಶಕ್ಕೆ ವ್ಯವಸಾಯಕ್ಕೆ ಇಷ್ಟು ಕೋಟಿ ರೂಪಾಯಿ, ನೀರಾವರಿಗೆ ಇಷ್ಟು, ವಿದ್ಯಾಭ್ಯಾ ಸಕ್ಕೆ ಇಷ್ಟು ಎಂದು ಒಂದು ಯೂನಿಟ್ಟು ಇಟ್ಟುಕೊಂಡು ಆ ಯೋಜನೆಗೆ ಏನು ಹಣವನ್ನು ಕೊಡು ತ್ತಿದ್ದೇವೆಯೋ ಅದು ತಪ್ಪು. We believe in democratic socialism. ಆದುದರಿಂದ ಸಮಾಜವಾದದ ತತ್ವದಲ್ಲಿ ನಿಜವಾದ ನಂಬಿಕೆ ಇರಬೇಕು. ಸಮಾಜವಾದದ ಅಡಿಗಲ್ಲು ಎಲ್ಲಿದೆ? ಅದು ಹಳ್ಳಿಯಲ್ಲಿ ಎಂಬುದನ್ನು ಮನಗಾಣಬೇಕು. ನಮ್ಮ ಯೋಜನೆಗಳಲ್ಲಿ ಹಳ್ಳಿಯ ಪಾತ್ರ ವೇನು ಯಾವ ಹಳ್ಳಿಗೆ ಯಾವ ಯೋಜನೆಯನ್ನು ಹಾಕಿದ್ದೀರಿ? ಒಂದು ಪಂಚವಾರ್ಷಿಕ ಯೋಜನೆ ಯನ್ನು ಹಾಕಬೇಕಾದರೆ ಹಳ್ಳಿಯಮಟ್ಟ ಅಥವಾ ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಅಲ್ಲಿ ಎಷ್ಟು ರಸ್ತೆ ಆಗಬೇಕು, ಎಷ್ಟು ಬಾವಿಗಳಾಗಬೇಕು, ನೀರಾವರಿ ಕೆಲಸ ಎಷ್ಟಾಗಬೇಕು, ವಿದ್ಯಾಭ್ಯಾಸದಲ್ಲಿ ಏನೇನು ಕೆಲಸಗಳಾಗಬೇಕು ಎಂದು ನೋಡಬೇಕು. ಒಂದೊಂದು ಪಂಚಾಯಿತಿ ಅಥವಾ ಹಳ್ಳಿಯನ್ನು ಒಂದು ಘಟಕವಾಗಿ ತೆಗೆದುಕೊಂಡು ನಮ್ಮ ಯೋಜನೆ ಗಳಲ್ಲಿ ಅಳವಡಿಸಿಲ್ಲ. ಯೋಜನೆಯಲ್ಲಿ 10 ಸಾವಿರ ಸ್ಕೂಲ್, 10 ಸಾವಿರ ಬಾವಿ ಮಾಡುತ್ತೇವೆ ಎಂದರೆ ಯಾರಿಗೆ ಬಾಯಿ ಇದೆಯೋ, ಅಂಥವರಿಗೆ ಮಾತ್ರ ಅನುಕೂಲವಾಗುತ್ತದೆ. ಅವರ ಕಡೆಯಲ್ಲಿ ಮಾತ್ರ ಈ ಕೆಲಸಗಳಾಗುತ್ತವೆ. ಹೆಚ್ಚು ಬಾಯಿ ಮಾಡತಕ್ಕ ಜನರ ಕಡೆಗೆ ಅನುಕೂಲವಾಗಿ ಅದರಿಂದ ಸಿಕ್ಕಿದವರಿಗೆ ಸೀರುಂಡೆ ಎಂಬಂತಾಗುತ್ತದೆ. ಯಾರು ಯಾರು ಎಷ್ಟೆಷ್ಟು ದುಡಿದುಕೊಳ್ಳುವ ಶಕ್ತಿಯನ್ನು ಹೊಂದಿರುತ್ತಾರೆಯೋ ಅಷ್ಟನ್ನೂ ಪಡೆದುಕೊಳ್ಳುತ್ತಾರೆ. ಅವರವರ ಹಳ್ಳಿಗಳಿಗೆ, ಅವರವರ ಜಿಲ್ಲೆಗಳಿಗೆ, ಅವರವರ ಕ್ಷೇತ್ರಗಳಿಗೆ ದೋಚಿಕೊಂಡು ಹೋಗತಕ್ಕ ಅವಕಾಶ ಈ ಯೋಜನೆಗಳಲ್ಲಿ ಅಡಕವಾಗಿದೆ. ಇದನ್ನು ತಪ್ಪಿಸಲು ಪ್ರತಿ ಹಳ್ಳಿಗೂ ಪ್ರತಿ ತಾಲ್ಲೂ ಕಿಗೂ, ಪ್ರತಿ ಜಿಲ್ಲೆಗೂ ಅನ್ವಯಿಸುವಂತೆ ಯೋಜನೆಯನ್ನು ಮಾಡಬೇಕಾಗಿದೆ.

ಇವತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಆಗುತ್ತಿವೆ ಎಂದು ಹೇಳಿದರು, ಬಹಳ ಸಂತೋಷ. ಈ ದೇಶದಲ್ಲಿ ಕೃಷ್ಣ ಮತ್ತು ಗೋದಾವರಿ ನದಿ ಅಣೆಕಟ್ಟುಗಳಿಗೆ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು ಬಹಳ ಶಹಭಾಸ್‌ಗಿರಿಯಿಂದ ಹೇಳಿದರು. ಕೃಷ್ಣ ಮಲಪ್ರಭ ಯೋಜನೆಗಳಿಗೆ ಟೆಕ್ನಿಕಲ್ ಮಂಜೂರಾತಿ ದೊರೆತಿವೆ ಎಂದು ಹೇಳಿದರು. ಹತ್ತಾರು ವರ್ಷಗಳಿಂದ ಏಕಪ್ರಕಾರವಾಗಿ ಈ ಸಭೆಯಲ್ಲಿ ಕೂಗು ಹಾಡುತ್ತ ಇರತಕ್ಕ ಹೇಮಾವತಿ, ಹಾರಂಗಿ, ಕಂಬದಕಟ್ಟ ಯೋಜನೆಗಳನ್ನು ನಿರ್ಲಕ್ಷಿಸಲಾಗಿದೆ. 1972ನೆಯ ಇಸವಿಯ ಒಳಗಾಗಿ ಕಾವೇರಿ ನದೀ ಪಾತ್ರದ ನೀರನ್ನು ಉಪಯೋಗಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಹೀಗಿದ್ದರೂ, ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಮುಂದೆ ಯೋಜನೆಗಳಿದ್ದರೂ ಅವುಗಳನ್ನು ತೆಗೆದುಕೊಳ್ಳದೆ ಕೃಷ್ಣ ನದಿ ಯೋಜನೆ ಮುಂತಾದುವುಗಳಿಗೆ ಟೆಕ್ನಿಕಲ್ ಮಂಜೂರಾತಿ ದೊರೆತಿದೆ ಎಂದು ಹೇಳುತ್ತಿರುವುದರಲ್ಲಿ ನಿಮ್ಮಲ್ಲಿ ಏನು ತಾರತಮ್ಯವಿದೆ, ಪಕ್ಷಪಾತವಿದೆ ಎಂದು ಸರ್ಕಾರಕ್ಕೆ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಕೃಷ್ಣ ನದಿ ಯೋಜನೆಯನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತೀರಾ ?

ಶ್ರೀ ಎಸ್. ಶಿವಪ್ಪ.—ಹಾಗೆ ಎಂದಿಗೂ ಹೇಳುವುದಿಲ್ಲ. ನಾನು ಮೊದಲನಿಂದಲೂ ಹೇಳುತ್ತಿದ್ದೇನೆ, ಈ ದೇಶದಲ್ಲಿ ಎಲ್ಲ ಕಡೆಗೂ ಅಭಿವೃದ್ಧಿ ಸಾಕಷ್ಟು ಆಗಬೇಕು ಎಂದು. ಹೀಗೆ ಅಭಿವೃದ್ಧಿ ಕೆಲಸಗಳಾಗಬೇಕು ಎಂದು ಹೇಳುವಾಗ ಆ ಕೆಲಸಗಳನ್ನು ಮಾಡುವುದರಲ್ಲಿ ಸಮತೂಕವಿರಬೇಕು, ಸಮಾನತೆ ಇರಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಎಲ್ಲ ದೃಷ್ಟಿಯಿಂದಲೂ ಚೆನ್ನಾಗಿ ನಡೆಯುತ್ತದೆ. ಆ ಬಗ್ಗೆ ತಮ್ಮ ದೃಷ್ಟಿ ಹೋಗಿಲ್ಲ. ಎಲ್ಲ ಕಡೆಗೂ ಸಮದೃಷ್ಟಿಯನ್ನು ಬೀರಿ ಪಕ್ಷಪಾತ ದೃಷ್ಟಿ ಬೇಡ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಇವತ್ತೂ ಕೂಡ ಅದನ್ನೇ ಹೇಳುತ್ತಿದ್ದೇನೆ.

ಸಭಾಪತಿಯವರೇ, ನೀರಾವರಿ ಯೋಜನೆಗಳನ್ನು ಮಾಡತಕ್ಕದ್ದರಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿಯಿಂದಾಗಿ ಆ ಯೋಜನೆಗಳಿಂದ ಎಷ್ಟು ಪ್ರಯೋಜನ ಆಗಬೇಕಾಗಿತ್ತೋ ಆ ಪ್ರಯೋಜನ ಇದೂವರೆಗೂ ಆಗಿಲ್ಲ. ನೀರಾವರಿ ಯೋಜನೆಗಳನ್ನು ಮಾಡುತ್ತಿರುವ ಕಾಲದಲ್ಲಿ cumulative utilisation, potential utilisation ಆಗಬೇಕು. ನಾವು ಒಂದು ಯೋಜನೆಯನ್ನು ಹಾಕಿದಾಗ ಈ ದೇಶದಲ್ಲಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕೊಡಬಹುದು ಎಂದು ಮೂರನೆಯ ಯೋಜನೆಯಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳಿಂದ ಏನು ಗೊತ್ತಾಗುತ್ತದೆ ಎಂದರೆ ನಮ್ಮ ದೇಶಕ್ಕೆ ಏನೊಂದು ಅಂದಾಜನ್ನು ಹಾಕಿಕೊಂಡಿದ್ದರೋ ಅದರಲ್ಲಿ ಅರ್ಧ ಭಾಗ ಮಾತ್ರ ಕಾರ್ಯಾಚರಣೆಯನ್ನು ಮಾಡತಕ್ಕ ಶಕ್ತಿಯಿದೆ. 1961ರಿಂದ 1966ರವರೆಗೆ ಅವರ ಅಂದಾಜು ಪ್ರಕಾರ 14 ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಪಡೆಯಬಹುದು ಮತ್ತು 6 ಲಕ್ಷ ಎಕರೆಯನ್ನು ತಕ್ಷಣ ಸಾಗುವಳಿ ಮಾಡಬಹುದು ಎಂದು ಹೇಳಿದ್ದರು. ಆದರೆ ಅಂಕಿ ಅಂಶಗಳನ್ನು ನೋಡಿದರೆ 14 ಲಕ್ಷಕ್ಕೆ ಬದಲು ಕೇವಲ 6 ಲಕ್ಷ ಮಾತ್ರ ನೀರಾವರಿಗೆ ಬರುವುದಾಗಿದ್ದು ಅದರ ಪೈಕಿ ಯುಟಿಲೈಜ್ ಮಾಡಿರುವುದು ಮೂರು ಲಕ್ಷ ಎಕರೆ ಮಾತ್ರ. ಇದರಿಂದ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಹೆಚ್ಚು ಕಾತುರತೆ ಇಲ್ಲ, ನಮ್ಮಲ್ಲಿ ಸಾಕಷ್ಟು ಕೆಲಸಮಾಡತಕ್ಕ ಹುಮ್ಮಸ್ಸಿಲ್ಲ, ಅಷ್ಟೇ ಅಲ್ಲದೆ ನಮ್ಮಲ್ಲಿ ಒಂದು ನಿಯೋಜಿತವಾದ ಕಾರ್ಯವಿಲ್ಲ ಎಂದು ಗೊತ್ತಾಗುತ್ತದೆ. ತುಂಗಭದ್ರ ಅಣೆಕಟ್ಟು ಆಗಿ 20 ವರ್ಷಗಳಾದಮೇಲೆ ಏನು ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ, ಆ ನೀರನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೀರಿ. ಹೀಗೆ ನಮ್ಮಲ್ಲಿ ಒಂದು ನಿಯತ ಕಾರ್ಯಕ್ರಮ ಮತ್ತು ಮುಂದಾಲೋಚನೆ ಇಲ್ಲದೆ ದೇಶದಲ್ಲಿ ಮಾಡಿರುವ ಯೋಜನೆಗಳಿಂದ ವ್ಯಥಾ ಹಣ ಖರ್ಚಾಯಿತು, ಈ ಹಣ ಸರಿಯಾಗಿ ಖರ್ಚಾಗಿಲ್ಲ, ಸಾಧನೆ ಹೆಚ್ಚಾಗಿಲ್ಲ ಎಂದು ಸರಕಾರದವರಿಗೆ ಹೇಳಬೇಕಾಗಿದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಹಾಗೂ ವಿಶ್ವವಿದ್ಯಾನಿಲಯದ ಶಿಕ್ಷಣದ ವಿಚಾರವನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಪ್ರಾಥಮಿಕ ವಿಧ್ಯಾಭ್ಯಾಸಕ್ಕೆ ಈಗಾಗಲೇ ಶೇಕಡ 90ರಷ್ಟು ಮಕ್ಕಳು ಶಾಲೆಗಳಿಗೆ ಹೋಗುತ್ತಿದ್ದಾರೆ. ಬಹಳ ಯಶಸ್ವಿಯಾಗಿ ಈ ಭಾಗವನ್ನು ಸರಕಾರ ನಡೆಸುತ್ತಿದೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬಂದಮೇಲೆ ಸುಮಾರು 20 ಸಹಸ್ರ ಜನ ಅಧ್ಯಾಪಕರು ಬೇಕಾಗಬಹುದೆಂಬುದು ತಜ್ಞರ ಅಭಿಪ್ರಾಯ. 1962—63ರಲ್ಲಿ ನೇಮಕ ಮಾಡಿರುವ ಎರಡು ಸಾವಿರ ಜನರೂ ಸೇರಿ ಸುಮಾರು ಎಂಟು ಸಾವಿರ ಜನರನ್ನು ನೇಮಕ ಮಾಡಲಾಗಿದೆ. ಬೇಕಾಗಿರುವುದು 20 ಸಾವಿರ ಜನ ಉಪಾಧ್ಯಾಯರು. ಎಂದರೆ 12 ಸಾವಿರದಷ್ಟು ಕೊರತೆಯಾಗಿದೆ. ಇಷ್ಟು ಉಪಾಧ್ಯಾಯರಿಲ್ಲದಿದ್ದರೂ ಇದು ಯಶಸ್ವಿಯಾಗಿ ನಡೆಯುತ್ತಿದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲಾದ ಈ ವಿದ್ಯಾಭ್ಯಾಸವನ್ನು ಕಾರ್ಯಗತ ಮಾಡುವುದರಲ್ಲಿ ಸರಕಾರ ವಿಫಲಗೊಂಡಿದೆ. ಈಗ ಒಂದು ಹಳ್ಳಿಯ ಶಾಲೆಯಲ್ಲಿ ನಾಲ್ಕು ತರಗತಿಗಳಿದ್ದರೆ ಒಬ್ಬನೇ ಉಪಾಧ್ಯಾಯ ಎಲ್ಲಕ್ಕೂ ಪಾಠ ಹೇಳಿಕೊಡಬೇಕಾಗಿದೆ. ಇದು ಎಂತಹ ವಿದ್ಯಾಭ್ಯಾಸ ಎಂಬುದನ್ನು ತಾವೇ ಹೇಳಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಜನರು ಒಳ್ಳೆಯ ಸ್ಕೂಲುಗಳನ್ನು ನೋಡಿ ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತನ ಮಕ್ಕಳಿಗೆ ಕೊಟ್ಟಿರುವ ಶಾಲೆಗಳು ಕುರಿ ದೊಡ್ಡಿಗಳಾಗಿವೆ. ಒಂದು ಶಾಲೆಯಲ್ಲಿ ಒಂದೇ ರೂಮು ಇರುತ್ತದೆ, ನಾಲ್ಕು ತರಗತಿಗಳಿರುತ್ತವೆ, ಒಬ್ಬರೇ ಉಪಾಧ್ಯಾಯರಿರುತ್ತಾರೆ. ಹೀಗಿದ್ದರೂ ಇದರಲ್ಲಿ ಒಳ್ಳೆಯ ಪ್ರಗತಿ ಸಾಧನೆ ಮಾಡಿದ್ದೇವೆಂದು ವರದಿ ಕೊಟ್ಟಿದ್ದಾರೆ.

ವಿಶ್ವವಿದ್ಯಾನಿಲಯದ ವಿಷಯವನ್ನು ಹೇಳುವುದಾದರೆ, ಅಲ್ಲಿನ ವಿದ್ಯಾರ್ಥಿಗಳು ಶಾಂತಿಯುತವಾದ ಚಳವಳಿಯನ್ನು ನಡೆಸಿದುದರಿಂದ ಅಲ್ಲಿ ಒಂದು ಹೊಸ ಹುರುಪು ಹಾಗೂ ಹೊಸ ಚೈತನ್ಯ ಬಂದಿದೆ. ಇದನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವವರೆಲ್ಲರೂ ಒಪ್ಪಬೇಕಾಗಿದೆ. ವಿದ್ಯಾರ್ಥಿಗಳಿಂದ ಪಾಠ ಕಲಿಯುವುದು ಬೇಕಾದಷ್ಟಿದೆಯೆಂಬುದನ್ನೂ ಒಪ್ಪಬೇಕು. ಮಹಾತ್ಮಾ ಗಾಂಧಿ

(ಶ್ರೀ ಎಸ್. ಶಿವಪ್ಪ)

ಯವರು ಜೀವಂತರಾಗಿರುವಾಗ ಸಂಯಮ, ಶಾಂತಿ ಮತ್ತು ಶಿಸ್ತಿನಿಂದ ಸತ್ಯಾಗ್ರಹವನ್ನು ನಡೆಸಬೇಕೆಂದು ಏನು ಹೇಳುತ್ತಿದ್ದರೋ ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದ ಕೀರ್ತಿ ವಿದ್ಯಾರ್ಥಿಗಳಿಗೆ ಸಲ್ಲಬೇಕಾಗಿದೆ. ಇವರು ಕೇವಲ ಚಳುವಳಿ ಮಾಡಬೇಕೆಂಬ ಮಾರ್ಗವನ್ನು ಹಿಡಿದಿಲ್ಲ ಹಿಂದೆ ಶ್ರೀಮಾನ್ ರಾಜಗೋಪಾಲಚಾರಿಯವರು ಇಲ್ಲಿಗೆ ಬಂದಾಗ ಮಹಾರಾಜಾ ಕಾಲೇಜಿನಲ್ಲಿ ಇಷ್ಟು ಫ್ರೀಷಿಪ್‌ಗಳು ಮತ್ತು ಸ್ಕಾಲರ್ ಷಿಪ್‌ಗಳನ್ನು ಕೊಟ್ಟಿದ್ದಾರೆ ಎಂತಹ ಒಳ್ಳೆಯ ಸರಕಾರ ಇದು ಎಂದು ಹೇಳಿದುದು ನಿಜ. ಎಲ್ಲರೂ ವಿದ್ಯಾಭ್ಯಾಸ ಪಡೆಯಲೆಂದು ಮಾಡಿದ್ದರು. ಆದರೆ ಈ ಸರಕಾರ ಬಂದಮೇಲೆ ಆ ವಿದ್ಯಾ ಸೌಲಭ್ಯಗಳನ್ನು ಕಿತ್ತುಹಾಕುವುದಕ್ಕೆ ಪ್ರಯತ್ನ ಮಾಡಿತು. ಪುನಃ ಅದನ್ನು ಹೊಂದ ಬೇಕಾದರೆ ವಿದ್ಯಾರ್ಥಿಗಳು ಚಳುವಳಿ ಹೂಡಬೇಕಾಯಿತು. ಅದರೇನೂ ಹೊಸದಾಗಿ ಕೊಡಬೇಕೆಂದು ಕೇಳಲಿಲ್ಲ, ಇದ್ದುದನ್ನು ಕೊಡಿ, ಮುಂದುವರಿಸಿ ಎಂದು ಹೇಳಿ ಚಳುವಳಿ ಮಾಡಬೇಕಾಯಿತು. ಇದರಲ್ಲಿ ಸರಕಾರ ತನ್ನ ಸೋಲನ್ನು ಒಪ್ಪಿಕೊಂಡಿದೆ. ನಾವು ಶಾಸನ ಸಭೆಗಳಲ್ಲಿ ಚರ್ಚೆ ಮಾಡುವಾಗ ವಿದ್ಯಾಭ್ಯಾಸದಲ್ಲಿ ಫೀ ಕಡಮೆ ಮಾಡಿ ಎಂದು ಹೇಳಿದರೆ ಸರಕಾರ ಅದನ್ನು ಮಾಡಲಿಲ್ಲ. ಆದರೆ ವಿದ್ಯಾರ್ಥಿಗಳು ತಮ್ಮ ಶಕ್ತಿ ಸಂಯಮಗಳಿಂದ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಸರಕಾರಕ್ಕೆ ಸೋಲಾಗಿದೆ. ಇದನ್ನೊಪ್ಪಿ ವಿದ್ಯಾಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿದೆ. ಕುರ್ಚಿಯಿಂದ ಕೆಳಗಿಳಿಯಿರಿ ಎಂದು ಅವರಿಗೆ ನಾನು ಹೇಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಇದು ಬಹಳ ಸೂಕ್ಷ್ಮವಾದ ವಿಚಾರ. ಅವರೇ ತಿಳಿದುಕೊಂಡು, ತಾವು ಮಾಡಿದ ನೀತಿ ಸರಿಯಿಲ್ಲವೆಂಬುದನ್ನರಿತು, ತಮ್ಮ ತಪ್ಪನ್ನೊಪ್ಪಿಕೊಂಡು ಮಾಡಬೇಕು. ಅವರನ್ನು ಮಂತ್ರಿಮಂಡಲದಲ್ಲಿಟ್ಟುಕೊಂಡಿರಬೇಕೆಂದರೆ ಅವರನ್ನು ಬೇಕಾದರೆ ಮುಖ್ಯ ಮಂತ್ರಿಯನ್ನಾಗಿ ಮಾಡಲಿ ಆದರೆ ಅವರನ್ನು ವಿದ್ಯಾ ಖಾತೆಯಿಂದ ಬದಲಾಯಿಸಬೇಕೆಂದು ದೇಶದ ಪರವಾಗಿ ಹೇಳುತ್ತೇನೆ.

ಸಭಾಪತಿಯವರೇ, ಈಗ ವಿಶ್ವವಿದ್ಯಾನಿಲಯದ ಸಂಬಂಧವಾಗಿ ಮೂರು ಜನರ ಸಮಿತಿಯೊಂದನ್ನು ನೇಮಕ ಮಾಡಿದ್ದಾರೆ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಚರಿತ್ರೆ ಒಂದು ದುರಂತ ಚರಿತ್ರೆ. ಕೇವಲ 20 ತಿಂಗಳಲ್ಲಿ ಮೂರು ನಾಲ್ಕು ಜನ ಉಪಕುಲಪತಿಗಳು ಬಂದು ಹೋದರು. ಎಂದಮೇಲೆ ಅವರ ಅಭಿಪ್ರಾಯ ಅಥವಾ ದೃಷ್ಟಿ ಏನಿದೆ ಎಂಬುದನ್ನು ನೋಡಬೇಕಾಗಿದೆ. ಹೀಗೆ ನೇಮಕ ಮಾಡಲ್ಪಟ್ಟವರಲ್ಲಿ ಇಬ್ಬರಿಗೆ ಕನ್ನಡ ಬರುತ್ತಿರಲಿಲ್ಲ. ಪಣಿಕರ್ ಅವರಿಗೆ ಕನ್ನಡ ಬರುತ್ತಲೇ ಇರಲಿಲ್ಲ ಇನ್ನೊಬ್ಬರಿಗೆ ಕನ್ನಡದಲ್ಲಿ ಮಾತನಾಡಲು ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಕನ್ನಡ ಅಧಿಕೃತ ಭಾಷೆಯಾಗಬೇಕು, ಕರ್ಣಾಟಕವಾಗಬೇಕೆಂದು ಚಳುವಳಿ ಮಾಡಿದ ದೇಶದಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯೂ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಮಾಡಬೇಕು ಎನ್ನುವ ಕೂಗು ಎಲ್ಲ ಕಡೆಯೂ ಕೇಳಿಬರುತ್ತಿದೆ. ಹೀಗಿದ್ದರೂ ಕನ್ನಡ ಬಾರದೇಯಿರುವವರನ್ನು ಏಕೆ ನೇಮಿಸಬೇಕು ? ಈ ಸ್ಥಾನವನ್ನು ಅಲಂಕರಿಸಲು ಅರ್ಹತೆಯುಳ್ಳ ಜ್ಞಾನಿಗಳೂ ಮೇಧಾವಿಗಳೂ ದಕ್ಷರೂ ನಮ್ಮ ರಾಜ್ಯದಲ್ಲೇ ಇದ್ದಾರೆ ಆದರೂ ಅವರನ್ನು ಬಿಟ್ಟು ಹೊರಗಿನವರನ್ನು ತಂದು ನೇಮಿಸಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಕಳಂಕ ತರಬಾರದು. ಇದನ್ನು ತೇಜೋಮಯವಾಗಿ ಅಲಂಕರಿಸುವ ಶಕ್ತಿ ಮೈಸೂರಿನವರಲ್ಲಿದೆ. ಆದಕಾರಣ ಆ ಸ್ಥಾನಕ್ಕೆ ಮೈಸೂರಿನವರನ್ನೇ ಆರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ರಾಜ್ಯದ ಎರಡೂ ವಿಶ್ವವಿದ್ಯಾನಿಲಯಗಳ ಪಠ್ಯ ಕ್ರಮಗಳಲ್ಲಿ ಏಕರೂಪತೆಯನ್ನು ತರಬೇಕೆಂಬ ಉದ್ದೇಶದಿಂದ ಮೂರು ಜನರ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಇದನ್ನು ಯಾವ ಕಾನೂನಿನ ಪ್ರಕಾರ ಮಾಡುತ್ತಾರೆಂದು ನಾನು ಕೇಳುತ್ತೇನೆ. ಎರಡು ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪವಾದ ಪಠ್ಯ ಕ್ರಮವಿರಬೇಕೆಂದು ಯಾವ ದೇಶದಲ್ಲಿಯೂ ನಿಯಮವಿಲ್ಲ. ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿರುವಾಗ, ಈ ಎರಡರಲ್ಲಿಯೂ ಸ್ಟ್ಯಾಚುಟರಿಯಾಗಿ ಅಕ್ಯಾಡೆಮಿಕ್ ಕೌನ್ಸಿಲ್‌ಗಳಿವೆ. ಅಲ್ಲಿನ ತಜ್ಞರ ಅಭಿಪ್ರಾಯ ಪಡೆದು ವಿಶ್ವವಿದ್ಯಾನಿಲಯದಲ್ಲಿ ಪಠ್ಯಕ್ರಮವನ್ನನುಸರಿಸಿಕೊಂಡು ಬರುತ್ತಿದ್ದಾರೆ. ಹೀಗಿದ್ದರೂ ಯಾವುದೋ ಉದ್ದೇಶವನ್ನಿಟ್ಟುಕೊಂಡು, ಏಕರೂಪತೆಯನ್ನು ತರಬೇಕೆಂದು ಹೇಳಿ ಯಾವುದೋ ಒಂದು ವಿಶ್ವವಿದ್ಯಾನಿಲಯದಲ್ಲಿರುವುದನ್ನು ಬೇರೊಂದು ವಿಶ್ವವಿದ್ಯಾನಿಲಯದಮೇಲೆ ಹೇರಬೇಕೆಂದು, ಹೀಗೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಈ ಸಲಹೆಯನ್ನು ತಿರಸ್ಕರಿಸಿದ್ದರೂ ಹಿಂದಿನ ಬಾಗಿಲಿನಿಂದ ಇದನ್ನು ಹೇರಬೇಕೆಂದು ಹೀಗೆ ಮಾಡಿದ್ದಾರೆಂದು ಸರಕಾರದಮೇಲೆ ಆರೋಪಣೆಯನ್ನು ನಾನು ಹೊರಿಸುತ್ತಿದ್ದೇನೆ. ಈಗ ರಚಿಸಿರುವ ಸಮಿತಿಯವರು ಈ ಬಗ್ಗೆ ಶಿಫಾರಸು ಮಾಡಬೇಕೆಂದು ಕೇಳಲಾಗಿದೆ. ಈ ಸಮಿತಿಯ ಸದಸ್ಯರು ಮೂವರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿರುವವರು ಇಲ್ಲಿಯವರೆಗೂ ಕರ್ನಾಟಕ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದು ಈಗ

ತಾನೆ ವೈಸ್‌ಚಾನ್ಸಲರಾಗಿರುವ ವ್ಯಕ್ತಿ. ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಿಚಾರವೇನು ಗೊತ್ತಿದೆ? ಪಿ. ಯು. ಸಿ. ನಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯದಲ್ಲಿ ಏನು ಪಠ್ಯ ಕ್ರಮವಿದೆಯೋ ಅದನ್ನೇ ಇಲ್ಲಿಯೂ ಅನುಸರಿಸಬೇಕೆಂದು ಸೂಚನೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂತು. ಅದನ್ನು ಮೈಸೂರು ವಿಶ್ವವಿದ್ಯಾನಿಲಯದವರು ತಿರಸ್ಕಾರ ಮಾಡಿದ್ದಾರೆ. ಆದರೂ ಈ ಹೊತ್ತು ಏಕರೂಪವಾದ ಪಠ್ಯ ಕ್ರಮವನ್ನು ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ. ಯಾವಾಗ ಇದು ಬೇಡವೆಂದು ಹೇಳಿದರೋ ಆಗ ಅದನ್ನು ಹಿಂದಿನ ಬಾಗಿಲಿನಿಂದ ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

3-30 P.M.

[MR. SPEAKER in the Chair.]

ಮಾನ್ಯ ಸಭಾಪತಿಗಳವರೇ, ನಮ್ಮ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪಂಚಾಯತಿ ರಾಜ್ಯದ ಬಗ್ಗೆ ಪ್ರಸ್ತಾಪ ಮಾಡಿ ಇದೊಂದು ದೊಡ್ಡ ಸಾಧನೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಪಂಚಾಯತಿ ರಾಜ್ಯ ನಿಜವಾಗಿಯೂ ಫಜೀತಿ ರಾಜ್ಯವಾಗಿದೆ ಎಂದು ಹೇಳಬಹುದು. ಈ ಪಂಚಾಯತಿ ರಾಜ್ಯದಿಂದ ಪ್ರತಿಯೊಂದು ಹಳ್ಳಿಯಲ್ಲಿ ಎರಡು ಪಾರ್ಟಿಗಳಾಗಿ ತೊಂದರೆಯಾಗಿರುವುದರಿಂದ ಪಂಚಾಯತಿ ರಾಜ್ಯ ಯೋಜನೆ ಯಶಸ್ವಿಯಾಗಿ ಸಾಕಷ್ಟು ಪರಿಣಾಮಕಾರಿಯಾಗಿ ಕೆಲಸಮಾಡಲು ಸಾಧ್ಯವಾಗಿಲ್ಲ. ಕೊಂಡಜ್ಜಿ ಬಸಪ್ಪ ಸಮಿತಿ ವರದಿ ಸರಕಾರಕ್ಕೆ ಬಂದಿದ್ದರೂ ಅದರಮೇಲೆ ಈ ಸಭೆಯಲ್ಲಿ ಚರ್ಚೆ ನಡೆದಿಲ್ಲ. ತಾಲ್ಲೂಕ್ ಬೋರ್ಡುಗಳ ಚುನಾವಣೆಗಳನ್ನು ಒಂದು ವರ್ಷದವುಟ್ಟಿಗೆ ಮುಂದಕ್ಕೆ ಹಾಕಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಚುನಾವಣೆಗಳನ್ನು ಸಕಾಲದಲ್ಲಿ ನಡೆಸಬೇಕಾಗಿತ್ತು ಈಗಾಗಲೇ ಈ ಮಸೂದೆಯನ್ನು ಸಭೆಯು ಮುಂದೆ ತಂದು ಪಾಸ್ ಮಾಡಿ ಚುನಾವಣೆಗಳನ್ನು ನಡೆಸಬೇಕಾಗಿತ್ತು. ಚುನಾವಣೆ ನಡೆಸದಿದ್ದರೆ ಜನತೆಯ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬರುತ್ತದೆ. ಚುನಾವಣೆಯ ಬಗ್ಗೆ ನಿಮಗೆ ಭಯ ಇದೆ. ಚುನಾವಣೆ ಎದುರಿಸತಕ್ಕ ಧೈರ್ಯ ನಿಮಗೆ ಇಲ್ಲ. ಏನಾದರೂ ಮಾಡಿ ಚುನಾವಣೆ ಮುಂದಕ್ಕೆ ಹಾಕಬೇಕೆಂಬ ಭಾವನೆ ನಿಮಗೆ ಇದೆ. ಈ ರೀತಿ ಮಾಡಿರುವುದರಿಂದ ಮೂಲಕ್ಕೆ ಕೊಡಲೀ ಪೆಟ್ಟು ಹಾಕಿದ್ದೀರಿ. ಇದು ಖಂಡಿತ ತಪ್ಪು. ನೀವು ಬಾಯಲ್ಲಿ ಹೇಳುವ ತತ್ವಕ್ಕೆ ತಿಲಾಂಜಲಿ ಕೊಡಬೇಡಿ. ಇದೇ ಅಧಿವೇಶನದಲ್ಲಿ ಮಸೂದೆಯನ್ನು ತಂದು ಪಾಸುಮಾಡಿ ಒಂದೆರಡು ತಿಂಗಳುಗಳಲ್ಲಿ ಚುನಾವಣೆ ನಡೆಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಸರಕಾರಕ್ಕೆ ತಿಳಿಸಲು ಬಯಸುತ್ತೇನೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ತತ್ವವನ್ನು ಅಂಗೀಕರಿಸಲಾಗಿದೆ. ಸಮಾಜವಾದ ತತ್ವದಲ್ಲಿ ನಂಬಿಕೆ ಇದ್ದು ಅನುಷ್ಠಾನಕ್ಕೆ ತರಲು ಮನಸ್ಸು ಇದ್ದರೆ ಮೊದಲು ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಬೇಕು. ಒಂದಿಲ್ಲೊಂದು ನೆಪದಿಂದ ಜಾರಿಗೆ ತರುವುದನ್ನು ಮುಂದೂಡುತ್ತಾ ಬಂದಿರುತ್ತೀರಿ. ಇದು ಸರಿಯಲ್ಲ. ಕಾಮರಾಜ ಸೂತ್ರ ಸಹ ಮೈಸೂರು ದೇಶಕ್ಕೆ ಅನ್ವಯಿಸಲಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮಂತ್ರಿಗಳ ಸಂಖ್ಯೆ ಕಡಿಮೆಯಾಗಲಿಲ್ಲ. ಬರೀ ಘೋಷಣೆ ಮಾಡುತ್ತೀರಿ ಆದರೆ ಅದು ಖಂಡಿತವಾಗಿ ಕಾರ್ಯರೂಪಕ್ಕೆ ಬರುವುದಿಲ್ಲ. ಏಕೆಂದರೆ ನಿಮಗೆ ಅದರಲ್ಲಿ ನಿಷ್ಠೆಯಿಲ್ಲ. ಇದೇ ರೀತಿಯಾಗಿ ರಾಷ್ಟ್ರೀಕರಣ ವಿಚಾರದಲ್ಲಿಯೂ ಹುಮ್ಮಸ್ಸು ಇದ್ದರೂ ಪ್ರಭಾವಶಾಲಿ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಎಲ್ಲ ಕಡೆ ಬಸ್ ರಾಷ್ಟ್ರೀಕರಣ ಮಾಡುತ್ತಿಲ್ಲ. ಇಂಥ ಕಾರ್ಯಗಳಲ್ಲಿ ಅಪಹಾಸ್ಯವಾಗುವ ಹಾಗೆ ಮಾಡಬೇಡಿ. ಪಾವಿತ್ರ್ಯ ಕಾಪಾಡಿಕೊಂಡು ಬರಬೇಕು. ಹೆಸರು ಕೆಡಿಸುವುದು ಬೇಡ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪಾರ್ಟಿ ವೈಮನಸ್ಸಿನಿಂದ ಹಳ್ಳಿಗಾಡಿನಲ್ಲಿ ಅನೇಕ ಅನಾಹುತಗಳು ನಡೆಯುತ್ತಿವೆ. ಹಗಲು ಹೊತ್ತಿನಲ್ಲಿ ಜನರನ್ನು ಮನೆಯಲ್ಲಿ ಸೇರಿಸಿ ಎಣ್ಣೆ ಸುರಿದು ಸುಟ್ಟು ಭಸ್ಮ ಮಾಡತಕ್ಕಂಥ ಅನಾಹುತಗಳು ಸಮಾಜದಲ್ಲಿ ನಡೆಯುತ್ತಿವೆ. ಅನಾಗರಿಕ ಕಾಲದಲ್ಲಿಯ ಹಾಗೆ ಪಶುಗಳಂತೆ ಜನ ವರ್ತಿಸುತ್ತಿದ್ದಾರೆ. ಇದು ಒಳ್ಳೆಯ ಲಕ್ಷಣವಲ್ಲ. ಪೋಲಿಸರು ಎಷ್ಟರ ಮಟ್ಟಿಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ದೇಶದಲ್ಲಿ ಇಂದು ನೆಪಾಟಿಜಂ ಹೆಚ್ಚಾಗಿದೆ. ಸಮಾಜ ರಕ್ಷಣೆ ಮಾಡುವ ಕಾರ್ಯದಲ್ಲಿ ಸರಕಾರ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ರಾಜ್ಯಪಾಲರವರ ಭಾಷಣದಲ್ಲಿ ಹೊಸ ಚೈತನ್ಯ ಹೊಸ ಬೆಳಕನ್ನು ಕಾಣಬಹುದೆಂಬ ಆಶೆ ನಿರಾಶೆಯಾಗಿದೆ. ಸರಕಾರದ ನೀತಿಯಿಂದ ಕಗ್ಗತ್ತಲಲ್ಲಿ ಎಡವಿಬೀಳುತ್ತಿದ್ದೇವೆ. ದೇಶದಲ್ಲಿ ಆಹಾರದ ಕೊರತೆ ಇದೆ. ಅವಿದ್ಯಾವಂತರು ಹೆಚ್ಚುತ್ತಿದ್ದಾರೆ. ಅಜ್ಞಾನ ನಿರುದ್ಯೋಗ ನಿವಾರಣೆಗಾಗಿ ಕಂಕಣಬದ್ಧರಾಗುವರೆಂಬ ನಮ್ಮ ನಿರೀಕ್ಷೆ ಬೂದಿಯಾಗಿದೆ. ಅಂಥ ಆಶೆ ಮಣ್ಣುಪಾಲು ಆಗಿದೆ.

(ಶ್ರೀ ಎಸ್. ಶಿವಪ್ಪ)

ನಮ್ಮ ಒಂದು ಉತ್ಸಾಹ ಮಣ್ಣುಪಾಲಾಗಿದೆ, ದೇಶದಲ್ಲಿ ಒಳ್ಳೆಯ ಕೀರ್ತಿ ತರುವ ಕೆಲಸಗಳು ಆಗುತ್ತಾ ಇಲ್ಲ. ಸರಕಾರದವರು ಏನು ಸಾಧನೆ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದಾರೊ, ಅದನ್ನು ಸಾಧಿಸುವುದರಲ್ಲಿಯೂ ವಿಫಲವಾಗಿದೆ, ನಮ್ಮ ದೇಶದ ಆಸೆಯನ್ನು ಭಗ್ನವಾಗಿ ಮಾಡಿದ್ದಾರೆ. ಅದಕ್ಕೆ ಸರಕಾರದವರೇ ಕಾರಣರು.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನು ಮುಗಿಸುತ್ತೇನೆ.

†ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಸಭಾಪತಿಗಳೆ, ಇವತ್ತು ಶ್ರೀಮಾನ್ ಸಿದ್ದಯ್ಯನವರು ಮಂಡಿಸಿರುವ ನಿರ್ಣಯವನ್ನು ಸಮರ್ಥಿಸುತ್ತಾ, ರಾಜ್ಯಪಾಲರು ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದ ವಿಚಾರವಾಗಿ ನಾಲ್ಕು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ರಾಜ್ಯಪಾಲರು ಸರಕಾರದ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಡೆಯುತ್ತಿರತಕ್ಕಂಥ ಆಗುಹೋಗುಗಳ ವಿಚಾರವಾಗಿ ಮಾತನಾಡಿದ್ದರೂ ಈ ಸಂದರ್ಭವನ್ನು ಉಪಯೋಗಿಸಿ ಸರಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ.

ನಮ್ಮ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಂದಿನಿಂದ ನಮ್ಮ ಜನತೆ ಯಾವ ರೀತಿ ಒಂದು ಸರಕಾರವನ್ನು ಕೊಟ್ಟರೋ, ಆ ಮನೋಭಾವ ದಿನೇ ದಿನೇ ಕಡಮೆಯಾಗುತ್ತಿರುವ ಪರಿಸ್ಥಿತಿ ಬಂದಿದೆ. ತುರ್ತುಪರಿಸ್ಥಿತಿಯಲ್ಲಿರತಕ್ಕಂಥ ಒಗ್ಗಟ್ಟು, ಮತ್ತು ಸಹಕಾರವನ್ನು ಮುಂದುವರಿಸಿಕೊಂಡು ಬರುವಂಥ ಕಾರ್ಯಕ್ರಮವನ್ನು ಸರಕಾರವು ಆಗಿಂದಾಗ್ಗೆ ತೆಗೆದುಕೊಳ್ಳಬೇಕಾಗಿದೆ. ನಾವು ನಮ್ಮ ದೇಶಕ್ಕೆ ಬರುವಂಥ ಅನೇಕ ಗಂಡಾಂತರಗಳನ್ನು ಎದುರಿಸಲು ಯಾವ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬ ದೃಷ್ಟಿಯಿಂದ ರಾಜ್ಯಪಾಲರು ಹೇಳಿದ್ದಾರೆ—ಅವು ಬರೀ ಮುಂದಿನ ಕೆಲವು ವರ್ಷಗಳಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮಗಳಾಗದೆ, ನಮ್ಮ ಮುಂದಿನ ಪೀಳಿಗೆಗಳು ದೇಶವನ್ನು ಸುಭದ್ರವಾಗಿ ಇಟ್ಟುಕೊಳ್ಳುವ ಕಾರ್ಯಕ್ರಮಗಳಾಗಿರುತ್ತವೆ. ಆ ದೃಷ್ಟಿಯಿಂದ ಅವರು ತಮ್ಮ ಭಾಷಣದಲ್ಲಿ ನಮ್ಮ ದೇಶದಲ್ಲಿ ಹೋಂ ಗಾರ್ಡ್, ಎನ್.ಸಿ.ಸಿ. ಮತ್ತಿತರ ಶಾಖೆಗಳನ್ನು ಬಲಪಡಿಸುತ್ತಿದ್ದೇವೆಂದು ಹೇಳಿದ್ದಾರೆ.

ಎನ್.ಸಿ.ಸಿ.ಯನ್ನು ಬಲಪಡಿಸುವಂಥ ಕಾರ್ಯಕ್ರಮದಲ್ಲಿ ಸರಕಾರ ಸಫಲತೆಯನ್ನು ಹೊಂದಿದೆ. ಅದೇ ರೀತಿ ಕಡ್ಡಾಯವಾಗಿ ಎನ್.ಸಿ.ಸಿ. ಟ್ರೇನಿಂಗ್ ಕೊಡುವಂಥ ವಿಚಾರವನ್ನು ಬರೀ ಕಾಲೇಜು ವಿದ್ಯಾರ್ಥಿಗಳಿಗೇ ಅಲ್ಲದೆ ಹೈಸ್ಕೂಲುಗಳಿಗೂ ಮುಂದುವರಿಸುವಂಥ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಇವತ್ತು ಬಂದಿರುವ ಪರಿಸ್ಥಿತಿ ಮುಂದಿನ ಯಾವ ಕಾಲದಲ್ಲಿಯೂ ಬಾರದಂತೆ ಮಾಡುವ ದಾರಿಯಲ್ಲಿ, ಸರಕಾರದವರು ಬಿಜಾಪುರದಲ್ಲಿ ಒಂದು ಸೈನಿಕ ಸ್ಕೂಲನ್ನ ತೆರೆದಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ಈ ಸೈನಿಕ ಸ್ಕೂಲು ಬರೀ ಒಂದರಲ್ಲಿಯೆ ಮುಕ್ತಾಯವಾಗದೆ ನಮ್ಮ ರಾಜ್ಯದಲ್ಲಿ ಸೈನಿಕ ಸ್ಕೂಲುಗಳನ್ನು ಇನ್ನೂ ಅತ್ಯಧಿಕವಾಗಿ ತೆರೆಯುವಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ಮಡಕೇರಿಯಲ್ಲಿ ಅದು ಆಗಬೇಕೊ ?

ಶ್ರೀ ಎ. ಪಿ. ಅಪ್ಪಣ್ಣ.—ಮಂಗಳೂರಿನಲ್ಲಿ ಆಗಬೇಕು. ನೀವು ಮಡಕೇರಿಗೆ ಸೈನಿಕ ಸ್ಕೂಲನ್ನು ಕೊಡದೆ ಇದ್ದರೂ ನಾವು ಇಡೀ ರಾಜ್ಯಕ್ಕಿಂತ ಹೈಯೆಸ್ಟ್ ಪರ್ಸೆಂಟೇಜ್ ಜನರನ್ನು ಸೈನ್ಯಕ್ಕೆ ಕಳುಹಿಸುತ್ತೇವೆಂದು ಭರವಸೆ ಕೊಡುತ್ತೇನೆ. ಈವರೆಗೆ ಅಥವಾ ಇನ್ನು ಮುಂದಕ್ಕೆ ಕೊಡಗು ಜಿಲ್ಲೆಯಿಂದ ಸೈನ್ಯಕ್ಕೆ ಸೇರಿರತಕ್ಕ ಅಥವಾ ಸೇರತಕ್ಕ ಸಂಖ್ಯೆಯಮೇಲೆ ಸೈನಿಕ ಸ್ಕೂಲನ್ನು ಕೊಡುವುದು ಅವಲಂಬಿಸಿದೆ ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. ನನ್ನ ಭಾವನೆ ಏನೆಂದರೆ ಎಲ್ಲೆಲ್ಲಿ ಸೈನ್ಯಕ್ಕೆ ಯೋಧರು ಹೋಗಲಿಕ್ಕೆ ಹಿಂಜರಿಯುತ್ತಾರೊ ಅಲ್ಲಿಗೆ ಸೈನಿಕ ಸ್ಕೂಲನ್ನು ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಮಂಗಳೂರಿಗೆ ಕೊಡಬೇಕೊ ?

ಶ್ರೀ ಎ. ಪಿ. ಅಪ್ಪಣ್ಣ.—ಮಂಗಳೂರಿನಲ್ಲಿ ಇರಬೇಕು ಎಂದು ಹೇಳುವುದಿಲ್ಲ. ಅಲ್ಲಿಯೂ ಒಳ್ಳೆಯ ಪರ್ಸೆಂಟೇಜಿನಲ್ಲಿ ಸೈನ್ಯಕ್ಕೆ ಸೇರಿದ್ದಾರೆ. ಆದರೆ ಅನೇಕ ಜಿಲ್ಲೆಗಳಲ್ಲಿ ಆ ಪರ್ಸೆಂಟೇಜು ಕಡಮೆ ಇದೆ. ಅಂಥ ಕಡೆಗಳಲ್ಲಿ ಸೈನಿಕ ಶಾಲೆಗಳನ್ನು ನಿರ್ಮಿಸಿ ಜನರಿಗೆ ಸರಿಯಾದ ತರಪೇತಿ ಕಾರ್ಯಕ್ರಮವನ್ನು ಕೈಗೊಂಡದ್ದೇ ಆದರೆ ನಾವು ನಮ್ಮ ಯೋಧರನ್ನು ಸೈನ್ಯಕ್ಕೆ ಸಿದ್ಧ ಮಾಡುವ

ಕಾರ್ಯಕ್ರಮದಲ್ಲಿ ಸಫಲರಾಗುತ್ತೇವೆ ಎಂಬ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಇಂಥ ಸೈನಿಕ ಸ್ಕೂಲುಗಳನ್ನು ಅನೇಕ ರಾಜ್ಯ ಸರಕಾರಗಳು ಪಡೆದಿವೆ, ಒಂದಲ್ಲ, 2 ಸೈನಿಕ ಸ್ಕೂಲುಗಳನ್ನು ಒಂದೆ ರಾಜ್ಯದಲ್ಲಿ ಪಡೆದಂಥ ನಿದರ್ಶನಗಳಿವೆ. ಆದ್ದರಿಂದ ನಾವು ಈಗ ಒಂದು ಪಡೆದಿದ್ದೇವೆ, ಇನ್ನೂ ಹೆಚ್ಚಿಗೆ ಪಡೆಯಲಿಕ್ಕೆ ಸಾಧ್ಯವಿಲ್ಲವೆಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. ಈ 3ನೆಯ ಯೋಜನೆಯಲ್ಲಿ ಇನ್ನೊಂದನ್ನು ಪಡೆಯುವ ಕಾರ್ಯಕ್ರಮವನ್ನು ರಾಜ್ಯ ಸರಕಾರ ಕೈಗೊಳ್ಳಬೇಕು ಎಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ.

ಮತ್ತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪಂಚಾಯಿತಿ ರಾಜ್ಯದ ವಿಚಾರವಾಗಿ ಮಾತ ನಾಡುತ್ತಾ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರು ಸರಕಾರಕ್ಕೆ ಈಗಾಗಲೇ ಒಂದು ವರದಿಯನ್ನು ಕಳುಹಿಸಿದ್ದಾರೆ. ಅದನ್ನು ಕಾರ್ಯಗತ ಮಾಡಲು ಈಗಾಗಲೇ ಒಂದು ಕರಡು ಮಸೂದೆ ತಯಾರಾಗಿದೆ ಎಂದು ಹೇಳಿದ್ದಾರೆ. "ಈ ಅಭ್ಯಾಸ ಮಂಡಲಿಯಿಂದ ಸೂಚಿತವಾದ ತಿದ್ದುಪಡಿಗಳುಳ್ಳ ಒಂದು ವಿಧೇಯಕವು ವಿಧಾನಮಂಡಲದಲ್ಲಿ ಮಂಡಿಸಲ್ಪಡುವುದು ; ದ್ರವ್ಯಾನುಕೂಲತೆಯನ್ನು ನೋಡಿಕೊಂಡು ಈ ಹೊಸ ಅಧಿನಿಯಮದ ಉಪಬಂಧಗಳನ್ನು ಹಂತಹಂತವಾಗಿ ಆಚರಣೆಗೆ ತರಲಾಗುವುದು..." ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಕೊಂಡಜ್ಜಿ ಬಸಪ್ಪನವರ ಅಭಿಪ್ರಾಯವನ್ನು ಒಳಗೊಂಡಿರತಕ್ಕ ಮಸೂದೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಅದನ್ನು ಪೂರ್ತಿಯಾಗಿ ಜಾರಿಗೆ ತರಬೇಕೇ ವಿನಾ ಅದನ್ನು ಹಂತ ಹಂತವಾಗಿ ಆಚರಣೆಗೆ ತರುವುದಾದರೆ ನಾವು ಯಾವ ಗುರಿಯನ್ನು ಮುಟ್ಟಬೇಕೆಂದು ಪ್ರಯತ್ನ ಪಡುತ್ತಿದ್ದೇವೆಯೋ ಅದನ್ನು ಸಾಧಿಸಲು ಸಾಧ್ಯವಿಲ್ಲ. ಕೊಂಡಜ್ಜಿ ಬಸಪ್ಪನವರ ಸಲಹೆಗಳು ಇಂಥಿಂಥ ಕಂದಾಯಗಳು ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಹೋಗುತ್ತವೆ, ಇಂಥಿಂಥ ಅಧಿಕಾರಿಗಳು ಅವುಗಳಿಗೆ ಹೋಗಬೇಕು, ಅವು ಯಾವ ಯಾವ ಕಾರ್ಯವನ್ನು ನಿರ್ವಹಿಸಬೇಕು ಎಂಬುದನ್ನು ಸೂಚಿಸುತ್ತವೆ. ಆಯಾ ಸಂಸ್ಥೆಗಳಿಗೆ ಕೊಡುವಂಥ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಲ್ಲಿ ದ್ರವ್ಯಾನುಕೂಲತೆಯ ಪರಿಸ್ಥಿತಿ ಬರುವುದಿಲ್ಲ. ಈ ದೃಷ್ಟಿಯಿಂದ ನಾವು ಪಂಚಾಯಿತಿ ರಾಜ್ಯಗಳಿಗೆ ಸರಿಯಾದ ಒಂದು ಹಕ್ಕನ್ನು, ಗಣ್ಯತೆಯನ್ನು ಕೊಡಬೇಕಾದರೆ ಆ ಟೀಮಿನವರು ತಮ್ಮ ವರದಿಯಲ್ಲಿ ಏನು ಸಲಹೆ ಮಾಡಿದ್ದಾರೋ ಅದನ್ನು ಪೂರ್ತಿಯಾಗಿ ಕಾರ್ಯಾಚರಣೆಗೆ ತರುವ ಕ್ರಮವನ್ನು ತೆಗೆದುಕೊಳ್ಳಬೇಕು, ಬರೀ ಹಂತಹಂತದಲ್ಲಿ ತೆಗೆದುಕೊಂಡರೆ ಅಷ್ಟು ಪ್ರಯೋಜನಕರವಾಗುವುದಿಲ್ಲ. ಯಾವ ಉದ್ದೇಶವನ್ನು ಸಾಧಿಸಬೇಕು ಎಂದು ಪ್ರಯತ್ನಪಟ್ಟಿದ್ದಾರೋ ಅದು ಸಾಧನೆಯಾಗಬೇಕು ಎಂಬ ದೃಷ್ಟಿಯಿಂದ ಸರಕಾರಕ್ಕೆ ಈ ಸಲಹೆಯನ್ನು ಸೂಚಿಸಲು ಇಷ್ಟಪಡುತ್ತೇನೆ. ಮುಂದೆ ತರತಕ್ಕ ಮಸೂದೆಯನ್ನು ಪೂರ್ತಿಯಾಗಿ ಆಚರಣೆಗೆ ಬರುವಂತೆ ಕ್ರಮ ಕೈಗೊಳ್ಳಬೇಕು, ಅದು ಹಂತಹಂತವಾಗಿ ಆಗಕೂಡದು.

ರಾಜ್ಯಪಾಲರು ವ್ಯವಸಾಯ ಉತ್ಪಾದನೆಯ ವಿಚಾರವಾಗಿ ಮಾತನಾಡುತ್ತಾ ಆ ಕಾರ್ಯಕ್ರಮಕ್ಕೆ ಪ್ರಾಶಸ್ತ್ಯ ಕೊಟ್ಟಿದೆಯೆಂದು ಹೇಳಿದ್ದಾರೆ. "ಪಂಚಾಯಿತಿ ವ್ಯವಸಾಯೋತ್ಪಾದನಾ ಯೋಜನೆಗಳನ್ನು ಸಕಲ ಪಂಚಾಯಿತಿಗಳಲ್ಲೂ ಸಿದ್ಧಪಡಿಸಲಾಗಿದೆ, ಸುಧಾರಿತ ಬೀಜಗಳು, ಗೊಬ್ಬರಗಳು, ರಾಸಾಯನಿಕ ಗೊಬ್ಬರಗಳು, ಸುಧಾರಿತ ಉಪಕರಣಗಳು, ನೀರಾವರಿ—ಇವೇ ಮೊದಲಾದವುಗಳ ಸಹಾಯತಿಂದ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತ್ನವೂ ಪ್ರಾರಂಭವಾಗಿದೆ."

ಇವತ್ತು ನಮ್ಮ ವ್ಯವಸಾಯ ಉತ್ಪನ್ನ ಹೆಚ್ಚಬೇಕಾದರೆ ಅವರು ಹೇಳಿದತಂಹ ಕಾರ್ಯಕ್ರಮಗಳು ಅವಶ್ಯಕ. ಇವತ್ತು ನಮ್ಮ ದೇಶದಲ್ಲಿ ನಾವು ನಿರ್ಧರಿಸಿದಂತಹ ಅಥವಾ ಇಚ್ಛೆಪಟ್ಟಂತಹ ಒಂದು ವ್ಯವಸಾಯದ ಅಭಿವೃದ್ಧಿ ಏಕೆ ಆಗಲಿಲ್ಲ ಎಂಬ ಒಂದು ಪ್ರಶ್ನೆಯನ್ನು ಹಾಕಿದ್ದೇ ಆದರೆ ನಮ್ಮ ದೇಶದಲ್ಲಿ ಇವತ್ತಿನ ಪರಿಸ್ಥಿತಿಯಲ್ಲಿ ಯಾವನು ಆಹಾರವನ್ನು ಬೆಳೆಯುತ್ತಾ ಇದ್ದಾನೆಯೋ ಅವನ ಆರ್ಥಿಕ ಪರಿಸ್ಥಿತಿ ಕುಂಠಿತವಾಗುತ್ತಾ ಇರುವುದನ್ನು ನಾವು ಕಾಣುತ್ತಾ ಇದ್ದೇವೆ. ಇದಕ್ಕೆ ಅನೇಕ ಕಾರಣಗಳು ಇವೆ. ಅವುಗಳನ್ನು ನಿವಾರಣೆ ಮಾಡುವಂತಹ ಮೊದಲನೆಯ ಕೆಲಸವನ್ನು ಸರಕಾರದವರು ಕೈಕೊಳ್ಳಬೇಕು. ಇವತ್ತು ಆಹಾರವನ್ನು ಬೆಳೆಸುವಂತಹ ಒಬ್ಬ ವ್ಯಕ್ತಿ ಮತ್ತು ಇತರ ವ್ಯಾಪಾರ ಬೆಳೆಗಳು ಎಂದರೆ ಕಮರ್ಷಿಯಲ್ ಕ್ರಾಪ್ಸ್, ಕಾಫಿ, ಎಲಕ್ಕಿ, ಕಬ್ಬು, ಅಡಿಕೆ ಇಂತಹ ಪದಾರ್ಥಗಳನ್ನು ಬೆಳೆಸತಕ್ಕ ವ್ಯಕ್ತಿಗಳನ್ನು ತೆಗೆದುಕೊಂಡದ್ದೇ ಆದರೆ ಆಹಾರ ಸಾಮುಗ್ರಿಗಳನ್ನು ಬೆಳೆಸುವಂತಹ ವ್ಯಕ್ತಿಯ ಆರ್ಥಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕುಂಠಿತವಾಗುತ್ತಾ ಇದೆ. ಆದ್ದರಿಂದ ಆಹಾರವನ್ನು ಅತ್ಯಧಿಕವಾಗಿ ಬೆಳೆಸುವಂತಹ ಒಂದು ಉತ್ತೇಜನವನ್ನು ಕೊಡಬೇಕಾದರೆ ಕಂದಾಯದ ರೂಪದಲ್ಲೋ ಬೇರೆ ರೂಪದಲ್ಲೋ ಅವರಿಗೆ ಯಾವುದಾದರೂ ಒಂದು ಸಹಾಯ ಪಡೆಯುವಂತಹ ಕಾರ್ಯಕ್ರಮಗಳನ್ನು ಸರಕಾರದವರು ಕೈಕೊಳ್ಳಬೇಕು. ಇವೊತ್ತು ಬತ್ತ, ರಾಗಿ ಇಂತಹ ಆಹಾರ ಸಾಮುಗ್ರಿಗಳಿಗೆ ವರ್ಷದ ಪ್ರತಿ ನಿಶ್ಚಿತವಾದ ಒಂದು ಬೆಲೆ ಬರುತ್ತದೆ ಎಂಬ ಅಭಿಪ್ರಾಯವನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಕೆಲವರು ಒಂದು ಮಾತನ್ನು ಹೇಳಬಹುದು

(ಶ್ರೀ ಎ. ಪಿ. ಅಪ್ಪಣ್ಣ)

ಆಹಾರ ಸಾಮಗ್ರಿಯ ಬೆಲೆಯನ್ನು ಹೆಚ್ಚಿಸಿದ್ದೇ ಆದರೆ ಅದನ್ನು ಕೊಂಡು ತಿನ್ನತಕ್ಕವನಿಗೆ ಕಷ್ಟವಾಗುತ್ತದೆ ಎಂದು ಅದನ್ನು ನಾನು ಒಪ್ಪುತ್ತೇನೆ. ಆದರೆ ಸರಕಾರದವರು ಯಾವುದಾದರೂ ಒಂದು ರೂಪದಲ್ಲಿ ಆ ಹೆಚ್ಚಿನ ಬೆಲೆಯನ್ನು ಸಬ್ಸಿಡೈಸ್ ಮಾಡುವಂತಹ ಕಾರ್ಯಕ್ರಮವನ್ನು ಮಾಡಬೇಕು. ಇವತ್ತು ನಮ್ಮ ದೇಶದಲ್ಲಿ ಆಹಾರ ಸಾಮಗ್ರಿಗಳನ್ನು ಸಹಕಾರ ಕ್ಷೇತ್ರದಲ್ಲಿ ಖರೀದಿ ಮಾಡುತ್ತಾರೆ ಎಂದು ಹೇಳುತ್ತೇವೆ, ಇವತ್ತು ಈ ಸಹಕಾರ ಸಂಸ್ಥೆಗಳು ಆ ಬತ್ತವನ್ನು ಅಥವಾ ರಾಗಿಯನ್ನು ಯಾರಿಗೆ ಮಾರುತ್ತಾ ಇದ್ದಾರೆ ಎಂದರೆ ಪುನಃ ದಳ್ಳಾಳಿಗಳಿಗೆ ಮಾರುತ್ತಾ ಇದ್ದಾರೆ. ನಮ್ಮ ಅನೇಕ ಸಹಕಾರಿ ಸಂಸ್ಥೆಗಳು ಕಳೆದ ವರ್ಷ ಈ ರೀತಿ ಬತ್ತವನ್ನು ತೆಗೆದುಕೊಂಡು ಅತ್ಯಧಿಕ ಬೆಲೆಗೆ ದಳ್ಳಾಳಿಗಳಿಗೆ ಮಾರಿ ಅವರು ಮಾರ್ಕೆಟ್ಟಿನಲ್ಲಿ ಆಹಾರ ಪದಾರ್ಥವನ್ನು ತೆಗೆದುಕೊಳ್ಳತಕ್ಕವರಿಗೆ ಹೆಚ್ಚಿನ ಬೆಲೆಗೆ ಮಾರುವಂತಹ ಕ್ರಮ ಕೈಕೊಂಡಿದ್ದಾರೆ ಮತ್ತು ಕೆಲವು ಸಹಕಾರ ಸಂಸ್ಥೆಗಳವರು ಬತ್ತವನ್ನು ಕೊಟ್ಟಂತಹ ಜನರಿಗೆ ಆಮೇಲೆ ಹೆಚ್ಚು ಹೆಚ್ಚಾಗಿ ಬೋನಸ್‌ನ್ನು ಕೂಡ ಕೊಟ್ಟಂತಹ ಸಂದರ್ಭಗಳೂ ಕೂಡ ಇವೆ. ರೈತರಿಗೆ ಒಂದು ನಿಶ್ಚಿತ ಬೆಲೆ ದೊರಕಬೇಕು ಅದಕ್ಕೆ ಸಹಕಾರ ಸಂಘಗಳು ಪಡೆದಂತಹ ಬತ್ತವನ್ನು ಅವರು ಕೊಂಡಂತಹ ಬೆಲೆಗೇ ಅದನ್ನು ಉಪಯೋಗ ಮಾಡುವಂತಹವರಿಗೂ ದೊರಕುವಂತಹ ಕಾರ್ಯಕ್ರಮವನ್ನು ಕೈಕೊಳ್ಳದಿದ್ದರೆ ಪುನಃ ಅದನ್ನು ದಳ್ಳಾಳಿಗಳು ತೆಗೆದುಕೊಂಡು ಬೆಲೆಯನ್ನು ಹೆಚ್ಚಿಸಿ, ಕೊಂಡು ತಿನ್ನತಕ್ಕವರು ಅತ್ಯಧಿಕ ಬೆಲೆ ಕೊಡಬೇಕಾದರೆ ಪ್ರಸಂಗ ಬರುತ್ತಾ ಇದೆ. ಅದ್ದರಿಂದ ಸಹಕಾರ ಸಂಘಗಳು ನಿಶ್ಚಿತ ಬೆಲೆಗೆ ಆಹಾರ ಸಾಮಗ್ರಿಗಳನ್ನು ಪಡೆದಂತಹ ಸಂದರ್ಭದಲ್ಲಿ ಕನ್‌ಸ್ಯೂಮರ್ ಕೋ-ಆಪರೇಟೀವ್ ಸೊಸೈಟಿಗಳವರು ಅತ್ಯಧಿಕವಾಗಿ ಅಂತಹ ಸಾಮಗ್ರಿಗಳನ್ನು ಖರೀದಿ ಮಾಡಿಕೊಂಡು ತಿನ್ನತಕ್ಕವರಿಗೆ ನಿಶ್ಚಿತವಾದ ಬೆಲೆಗೆ ದೊರೆಯುವಂತೆ ಮಾಡದಿದ್ದರೆ ಅದರಲ್ಲೂ ದಳ್ಳಾಳಿಗಳ ಹಾವಳಿಯನ್ನು ನಿರ್ಮೂಲ ಮಾಡಿದಂತಾಗುವುದಿಲ್ಲ ಎಂದು ಹೇಳಲು ಇಚ್ಛಿಸುತ್ತೇನೆ. ಆ ದೃಷ್ಟಿಯಿಂದ ಇವೊತ್ತು ನಮ್ಮ ದೇಶದಲ್ಲಿ ಆಹಾರ ಸಾಮಗ್ರಿಗಳ ಉತ್ಪನ್ನ ಅತ್ಯಧಿಕವಾಗಿ ಆಗಬೇಕಾದರೆ ಅವನ್ನು ಬೆಳೆಸುವಂತಹ ರೈತರಿಗೆ ನಿಶ್ಚಿತವಾದ ಬೆಲೆ ದೊರಕಬೇಕಾದ್ದು ಅವಶ್ಯಕ. ಯಾವ ಬೆಲೆಗೆ ಆಹಾರ ಸಾಮಗ್ರಿಯನ್ನು ಕೊಂಡುಕೊಳ್ಳುತ್ತಾರೆಯೋ ಅದೇ ಬೆಲೆಗೆ, ಕೊಂಡು ತಿನ್ನತಕ್ಕವರಿಗೂ ದೊರಕುವಂತಹ ಅವಕಾಶವನ್ನು ಸಹಕಾರ ಕ್ಷೇತ್ರದಲ್ಲಿ ಮಾಡಿದರೆ ಬಹಳ ಪ್ರಯೋಜನಕಾರಿಯಾಗುತ್ತದೆ.

ಕನ್‌ಸ್ಯೂಮರ್ಸ್ ಕೋ.ಆಪರೇಟೀವ್ ಸೊಸೈಟಿಗಳ ವಿಚಾರವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸಕ್ಕರೆ ಮೊದಲಾದಂತಹ ಸಾಮಗ್ರಿಗಳನ್ನು ಆ ಸಹಕಾರ ಸಂಸ್ಥೆಗಳ ಮೂಲಕ ಹಂಚಲಾಗಿದೆ ಆದರೆ ಕೆಲವು ಭಾಗವನ್ನು ಸಹಕಾರ ಸಂಸ್ಥೆಗಳ ಮೂಲಕ ಹಂಚಿದ್ದಾರೆ ಕೆಲವನ್ನು ಇತರ ವ್ಯಾಪಾರಿಗಳ ಮೂಲಕವಾಗಿ ಹಂಚಿದ್ದಾರೆ. ಸಹಕಾರ ಸಂಸ್ಥೆಗಳ ಮೂಲಕವಾಗಿ ಹಂಚಿದಂತಹ ಸಕ್ಕರೆ ಜನರಿಗೆ ತಲುಪಿದೆಯೋ ಹೊರತು ವ್ಯಾಪಾರಿಗಳ ಮೂಲಕ ಹಂಚಿದಂತಹ ಸಕ್ಕರೆ ಅನೇಕ ಭಾಗ ಕಳ್ಳಸಂತೆಗೆ ಹೋಗಿದೆ ಎಂದು ಹೇಳಿದರ ತಪ್ಪಾಗಲಾರದು. ಆದ್ದರಿಂದ ಇನ್ನುಮುಂದೆ ಸಕ್ಕರೆ, ಸಿಮೆಂಟು ಮೊದಲಾದ ಸಾಮಗ್ರಿಗಳನ್ನು ಸಹಕಾರ ಸಂಘಗಳ ಮೂಲಕವೇ ಹಂಚುವಂತಹ ಏರ್ಪಾಡನ್ನು ಮಾಡುವುದು ಉಚಿತ ಅದರಿಂದ ಯಾವ ತೊಂದರೆಯೂ ಆಗಲಾರದು, ಅದರಲ್ಲಿ ಅತ್ಯಧಿಕವಾಗಿ ಕಳ್ಳಸಂತೆ ಮಾಡುವಂತಹ ಅವಕಾಶ ಬರಲಾರದು, ಎಲ್ಲೋ ಅಲ್ಲಿ ಇಲ್ಲಿ ಕೆಲವು ಜನರು ಮಾತ್ರ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿ ಅಂತಹ ಕಳಸಂತೆ ಮಾಡುವುದಕ್ಕೆ ಅವಕಾಶ ವಿದೆಯೇ ವಿನಾ ಸಾಮಾನ್ಯವಾಗಿ ಸಹಕಾರ ಕ್ಷೇತ್ರದಲ್ಲಿ ಕಳ್ಳ ಸಂತೆಯಿಂದ ವ್ಯಾಪಾರ ಮಾಡುವಂತಹ ಅವಕಾಶ ಕಡಿಮೆ ಎಂದು ನನ್ನ ಭಾವನೆ.

ಶ್ರೀ ಸಂಜೀವನಾಥ ಐಕಳ.—ಕೆಲವು ಕಡೆ ಸಹಕಾರ ಸಂಸ್ಥೆಗಳು ಬ್ಲಾಕ್‌ಮಾರ್ಕೆಟ್ ಮಾಡಿದು ತಮಗೆ ಗೊತ್ತಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ಸಾಮಾನ್ಯ ಒಬ್ಬ ವ್ಯಾಪಾರಿ ಆ ರೀತಿ ಕಳ್ಳಸಂತೆ ಮಾಡಲಿಕ್ಕೆ ಅವಕಾಶವಿದೆ ಆದರೆ ಅದೇ ಒಂದು ಸಂಸ್ಥೆ ಮಾಡಲಿಕ್ಕೆ ಅಷ್ಟು ಸೌಲಭ್ಯವಿಲ್ಲ. ಬಹುಶಃ ಆ ಸಂಸ್ಥೆಯಲ್ಲಿ ಇರುವಂತಹ ಅಧಿಕಾರಿ ವರ್ಗದಲ್ಲಿರುವ ಜನರೆಲ್ಲರೂ ಕಳ್ಳರಾದರೆ ಆ ರೀತಿ ಮಾಡಲಿಕ್ಕೆ ಸಾಧ್ಯವಾಗಬಹುದೇ ಹೊರತು ಅದರಲ್ಲಿ ಒಬ್ಬ ನಿಷ್ಠಾವಂತ ವ್ಯಕ್ತಿ ಇದ್ದರೂ ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಈ ಸಾಮಗ್ರಿಗಳನ್ನು ಸಹಕಾರ ಸಂಸ್ಥೆಗಳ ಮೂಲಕ ಹಂಚಬೇಕೆಂದು ಹೇಳಲು ಇಚ್ಛಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ.—ತಮಗೆ ಅತಿ ಸಮೀಪದಲ್ಲಿರುವಂತಹ ಒಂದು ಅತಿ ದೊಡ್ಡ ಸಂಸ್ಥೆಯ ಅಧ್ಯಕ್ಷರು ಸಾವಿರ ಗಟ್ಟಲೆ ಸಿಮೆಂಟ್ ಚೀಲಗಳನ್ನು ಬ್ಲಾಕ್ ಮಾರ್ಕೆಟ್ ಮಾಡಿದ್ದು

ಸರ್ಕಾರದವರ ಗಮನಕ್ಕೆ ಬಂದಿದೆ ಎಂದು ನಾನು ತಿಳಿಯುತ್ತೇನೆ, ಆದರೆ ಅವರು ಏನೂ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ, ಅದು ತಮಗೆ ಗೊತ್ತಿರಬಹುದು.

ಶ್ರೀ ಎ. ಪಿ. ಅಪ್ಪಣ್ಣ.—ಕೆಲವು ಸಂಸ್ಥೆಗಳಲ್ಲಿ ಆ ರೀತಿ ಆಗಿರಬಹುದು. ಸಹಕಾರ ಸಂಸ್ಥೆ ಯಲ್ಲಿ ಅಂತಹ ಕಾರ್ಯ ನಡೆದಿಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಸಂಜೀವನಾಥ ಐಕಳ.—ಸರಕಾರದವರು ಅದಕ್ಕೆ ಅಪ್ರತ್ಯಕ್ಷವಾಗಿ ಬೆಂಬಲ ಕೊಟ್ಟಿದ್ದಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಅದು ಬೇರೆ ಮಾತು. ಇವತ್ತು ಸಹಕಾರ ಸಂಸ್ಥೆಗಳಲ್ಲಿ ದುರುಪ ಯೋಗ ನಡೆದಿದೆ ಎನ್ನುವುದಾದರೆ ಅದು ವ್ಯಕ್ತಿಯ ದೋಷದಿಂದ ಆಗಿದೆ ಎಂಬುದನ್ನು ತಿಳಿಸಲು ಇಚ್ಛಿಸುತ್ತೇನೆ. ಆದರೆ ಸಹಕಾರದವರು ಅದಕ್ಕೆ ಬೆಂಬಲ ಕೊಟ್ಟಿದ್ದಾರೆ ಎಂದು ಹೇಳುವುದನ್ನು ಒಪ್ಪಲಾರೆ. ಬಹುಶಃ ವಿರೋಧ ಪಕ್ಷದಲ್ಲಿರುವವರಿಗೆ ಕೆಲವರಿಗೆ ಗೊತ್ತಿರಬಹುದು; ಅವು ನಮಗೇ ಮೀಸಲಾಗಿ ಇಟ್ಟಿರುವುದು ಅಲ್ಲ. ಸಹಕಾರ ಸಂಸ್ಥೆಯಲ್ಲಿ ಪ್ರಜಾಪ್ರಭುತ್ವ ನೀತಿಯನ್ನು ಅನುಸರಿಸಿ ಕಾರ್ಯಕ್ರಮಗಳನ್ನು ನಡೆಸಬೇಕೆನ್ನುವುದನ್ನು ಒಪ್ಪುತ್ತೇನೆ. ಅಲ್ಲೇನಾದರೂ ದುರುಪಯೋಗವಾದ ಪಕ್ಷದಲ್ಲಿ, ವ್ಯಕ್ತಿ ದೋಷದಿಂದ ಅದು ನಡೆದಿದ್ದರೆ ಸರಕಾರದವರು ಸರಿಯಾದ ಕ್ರಮ ತೆಗೆದುಕೊಳ್ಳ ಬೇಕೆನ್ನುವುದನ್ನು ಒಪ್ಪುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ಇರಬಹುದು, ಸರಿಯಾದ ಕ್ರಮ ತೆಗೆದುಕೊಳ್ಳುವಂತೆ ಮಾಡಲಿಕ್ಕೇ ನಾವೆಲ್ಲಾ ಇಲ್ಲಿ ಬಂದು ಕುಳಿತದ್ದು. ಇದನ್ನೆಲ್ಲಾ ಸರಕಾರದವರ ಗಮನಕ್ಕೆ ತಂದು ಸರಿಯಾದ ರೀತಿಯಲ್ಲಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲಿಕ್ಕೆ ಅವಕಾಶವಿದೆ. ಸರಕಾರದ ಪ್ರೋತ್ಸಾಹದಿಂದ ಕಳ್ಳಸಂತೆ ನಡೆಯುತ್ತದೆ ಎಂದು ಹೇಳುವುದನ್ನು ನಾನು ಒಪ್ಪಲಾರೆ.

ಇನ್ನು ಕಂದಾಯದ ವಿಚಾರ. ಲ್ಯಾಂಡ್ ರೆವಿನ್ಯೂ ಕೋಡ್ ಪಾಸ್ ಆದಮೇಲೆ ಮುಂದಕ್ಕೆ ಕಂದಾಯವನ್ನು ಏಕರೂಪವಾಗಿ ವಿಧಿಸುವಂತಹ ಒಂದು ಕ್ರಮವನ್ನು ಸರಕಾರದವರು ಕೈಕೊಳ್ಳು ತ್ತೇವೆ ಎಂದು ಹೇಳಿದ್ದಾರೆ. ನಮ್ಮಲ್ಲಿ ಎರಡು ವರ್ಷ ನೂರಕ್ಕೆ ನೂರು ಹೆಚ್ಚು ಆದಂತಹ ಸರ್ಚಾರ್ಜ್‌ನ್ನು ಕೊಟ್ಟು ಅದರಿಂದ ಜನತೆ ಎಷ್ಟೋ ಬಡಕಲು ಆಗಿದೆ. ಅದನ್ನು ಸರಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು, ಅದೂ ಅಲ್ಲದೆ ಎರಡು ವರ್ಷ ಅವಧಿ ಇದ್ದಂತಹ ಆ ಮಸೂದೆಯನ್ನು ಇನ್ನೊಂದು ವರ್ಷ ಮುಂದುವರಿಸಬೇಕೆಂದು ಸರಕಾರದವರಿಗೆ ಇದ್ದರೂ ಅದನ್ನು ಈಗಲೇ ಮುಂದು ವರಿಸುವುದಿಲ್ಲ ಎಂಬ ಒಂದು ಅಭಿಪ್ರಾಯವನ್ನು ಸರಕಾರದವರು ಕೊಟ್ಟಿದ್ದಕ್ಕಾಗಿ ನಾನು ಸರಕಾರ ದವರನ್ನು ಅಭಿನಂದಿಸುತ್ತೇನೆ. ನೂರಕ್ಕೆ ನೂರು ಕಂದಾಯವನ್ನು ಹೆಚ್ಚಿಸಿದ್ದರಿಂದ, ಜನರಿಗೆ ತೊಂದರೆ ಯಾದದ್ದರಿಂದ ಮುಂದೆ ಹೊಸ ಲ್ಯಾಂಡ್ ರೆವಿನ್ಯೂ ಕೋಡಿನ ಆಧಾರದ ಮೇಲೆ ಮಾಡುವಂತಹ ಒಂದು ಕಾರ್ಯವನ್ನು ಯಾವ ರೀತಿ ಮಾಡಬೇಕೆನ್ನುವುದನ್ನು ಸರಕಾರದವರು ಗಮನದಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಅದರಲ್ಲಿ ಭೂಮಿಯ ವ್ಯತ್ಯಾಸ ಇದೆ, ವ್ಯವಸಾಯದಲ್ಲಿ ವ್ಯತ್ಯಾಸ ಇದೆ. ನೀರಿನ ಸರಬರಾಯಿ ಇದನ್ನೆಲ್ಲಾ ಅತ್ಯಧಿಕವಾಗಿ ಗಮನಕ್ಕೆ ತೆಗೆದುಕೊಂಡು ಇವೊತ್ತು ಜನತೆಯ ಕೂಗು ಏನಿದೆಯೋ ಅದನ್ನು ಗಮನಕ್ಕೆ ತೆಗೆದುಕೊಂಡು ಹೊಸ ರೀತಿಯ ಕಂದಾಯವನ್ನು ಸರಕಾರ ವಿಧಿಸು ವಂತಹ ಕಾಲದಲ್ಲಿ ಯಾರಿಗೂ ಅನನುಕೂಲವಾಗದಂತೆ ಮಾಡಬೇಕೆಂದು ಹೇಳಲು ಇಚ್ಛೆಪಡುತ್ತೇನೆ. ಕೆಲವು ಸ್ಥಳಗಳಲ್ಲಿ ಈಗಾಗಲೇ ಏನು ಭೀತಿಯುಂಟಾಗಿದೆ ಎಂದರೆ ಕಬ್ಬು ಬೆಳೆಸಿದರೆ ಎಕರೆಗೆ 80 ರೂಪಾಯಿ, ಕಾಫಿಗೆ ಎಕರೆಗೆ 100 ರೂಪಾಯಿ ಎಂಬ ಗುಲ್ಲು ಎದ್ದಿದೆ. ಆದರೆ ಇದನ್ನು ಶಾಸ್ತ್ರೀಯವಾದ ರೀತಿಯಲ್ಲಿ ನೋಡಬೇಕಾಗುತ್ತದೆ. ಇವತ್ತು ಒಂದು ಸ್ಥಳದಲ್ಲಿ ಒಂದು ಎಕರೆ ಜಮೀನಿನಲ್ಲಿ ಕಬ್ಬು ಎಷ್ಟು ಉತ್ಪನ್ನವಾಗುತ್ತಿದೆಯೋ ಅಷ್ಟೇ ಇನ್ನೊಂದು ಜಾಗದಲ್ಲಿ ಆಗುವುದಿಲ್ಲ ಎಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ಆದ್ದರಿಂದ ಎಲ್ಲಾ ಭಾಗವನ್ನೂ ಮತ್ತು ಅಲ್ಲಿ ಬರತಕ್ಕ ಉತ್ಪನ್ನವನ್ನೂ ಸಹ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಕೆಲವು ಸ್ಥಳಗಳಲ್ಲಿ 1912ರಲ್ಲಿ ಎಷ್ಟು ಉತ್ಪತ್ತಿ ಇತ್ತು ಎಂಬುದನ್ನು ಗಣನೆಗೆ ತೆಗೆದುಕೊಂಡು ಅದರ ಪ್ರಕಾರ ಕಂದಾಯ ಹಾಕಿದ್ದಾರೆ. ಅದೇ ರೀತಿ ಪರ್ಸೆಂಟೇಜ್ ಉತ್ಪತ್ತಿ ನೋಡಿ ಪರ್ಸೆಂಟೇಜ್ ಕಂದಾಯ ಹಾಕಬೇಕೆಂದು ಸರ್ಕಾರ ಉದ್ದೇಶಿಸಿರಬಹುದು. ಆದರೆ 1912ರಲ್ಲಿ ಆಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇರಲಿಲ್ಲ. ಈ ದಿವಸ ಉತ್ಪತ್ತಿಯಾದಮೇಲೆ ಕಂದಾಯ ವಿಧಿಸಿರು ವಾಗ ಅದು ಶಾಸ್ತ್ರೀಯ ರೀತಿಯಲ್ಲಿ ವಿಧಿಸಲ್ಪಟ್ಟಿದೆ ಎಂದು ಭಾವಿಸಬಾರದು. ಇಂಗ್ಲೀಷಿನಲ್ಲಿ 'ರಿಯಲ್ ಇನ್‌ಕಂ' ಎಂದು ಹೇಳುವುದು ಈಗ ಬಹಳ ಕಡಿಮೆಯಾಗಿದೆ. ಉತ್ಪತ್ತಿ ಮಾತ್ರ ಜಾಸ್ತಿ ಕಂಡರೂ ದಿನನಿತ್ಯ ಉಪಯೋಗಿಸುವ ಪದಾರ್ಥಗಳ ಬೆಲೆ ಬಹಳವಾಗಿ ಏರಿದೆಯೆಂಬುದನ್ನು ಗಮನಿಸ ಬೇಕು. ಆದುದರಿಂದ ಏಕರೀತಿಯ ಕಂದಾಯ ವಿಧಿಸುವುದಕ್ಕೆ ಕ್ರಮ ಕೈಕೊಳ್ಳಬೇಕು.

(ಶ್ರೀ ಎ. ಪಿ. ಅಪ್ಪಣ್ಣ)

4-00 P.M.

ಮತ್ತೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅದನ್ನು ಪ್ರಸ್ತಾಪ ಮಾಡಿರುವುದಿಲ್ಲ. ಅದು ಯಾವುದೆಂದರೆ ಕೇಂದ್ರ ಸರ್ಕಾರದ ಗೃಹಸಚಿವರು ದೇಶದಲ್ಲಿರುವ ಲಂಚಕೋರತನ, ದುರಾಡಳಿತ ಮುಂತಾದುವನ್ನು ತಡೆಗಟ್ಟಲು ಕ್ರಮ ಕೈಕೊಳ್ಳುತ್ತಿರುವಾಗ ರಾಜ್ಯ ಸರ್ಕಾರವೂ ಆ ವಿಚಾರದಲ್ಲಿ ಕ್ರಮ ಕೈಕೊಳ್ಳದಿದ್ದರೆ ಕೇಂದ್ರಸರ್ಕಾರ ಏನನ್ನು ನಿರ್ಮೂಲಮಾಡಲು ಪ್ರಯತ್ನ ಮಾಡುತ್ತಿದೆಯೋ ಅದಕ್ಕೆ ಬೆಂಬಲ ಸಿಕ್ಕುವುದಿಲ್ಲ. ಆದುದರಿಂದ ರಾಜ್ಯಪಾಲರ ಭಾಷಣದಲ್ಲಿ ಅದನ್ನು ನಮೂದು ಮಾಡದಿದ್ದರೂ ನಮ್ಮ ಸರ್ಕಾರ ಇದನ್ನು ಗಮನದಲ್ಲಿ ಇಟ್ಟುಕೊಂಡಿದೆಯೆಂದು ಭಾವಿಸುತ್ತೇನೆ. ಈ ದಿವಸ ನಮ್ಮ ಗೃಹ ಸಚಿವರು ಯಾವುದೇ ಕಾರ್ಯಕ್ರಮವನ್ನು ಈ ಸಂಬಂಧದಲ್ಲಿ ಕೈಕೊಳ್ಳುವಾಗ ವಿವಿಧ ಪಕ್ಷಗಳೊಡನೆ ವಿಚಾರ ವಿನಿಮಯ ಮಾಡಿ ಯಾವ ರೀತಿ ಮಾಡಬೇಕೆಂದು ಒಂದು ನಿರ್ಧಾರಕ್ಕೆ ಬಂದು ತಕ್ಕ ಕಾರ್ಯಕ್ರಮ ಕೈಕೊಂಡು ಕೇಂದ್ರ ಸರ್ಕಾರ ಯಾವುದನ್ನು ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆಯೋ ಅದಕ್ಕೆ ಸಹಕಾರ ಮಾಡಬೇಕು. ಇದಕ್ಕೆ ಸರ್ಕಾರ ಕಂಕಣ ತೊಡಬೇಕು. ಹಾಗೆ ಮಾಡಿ ರಾಜ್ಯದಲ್ಲಿರುವ ಲಂಚಕೋರತನ, ದುರಾಡಳಿತ ದುರಾಚಾರ ನಿರ್ಮೂಲ ಮಾಡಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು.

ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ರಾಜ್ಯಪಾಲರು ಹೇಳುತ್ತಾ ಈಗಾಗಲೆ ಅನೇಕ ಸ್ಥಳಗಳಲ್ಲಿ ನಿರ್ಮಿಸಬೇಕಾಗಿರುವ ಸೇತುವೆಗಳನ್ನು ನಿರ್ಮಿಸುವುದಕ್ಕೆ, ಬಾಕಿ ಇರುವುದನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಲಾಗಿದೆ ಎಂದು ಸೂಚನೆ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ರಾಷ್ಟ್ರೀಕರಣವನ್ನು ಪ್ರಭಾವಕ್ಕೊಳಗಾಗಿ ಮಾಡಿದ್ದಾರೆಂದು ರೇವಣ ಸಿದ್ದಪ್ಪನವರು ಮತ್ತು ಇತರರು ಕೆಲವರು ಹೇಳುತ್ತಿದ್ದಾರೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ. ಈ ಸಾರಿಗೆ ರಾಷ್ಟ್ರೀಕರಣವನ್ನು ದೇಶದ್ಯಾಂತ ಸಂಪೂರ್ಣವಾಗಿ ಮಾಡುವುದಾದರೆ ಇನ್ನು ಮುಂದೆ ವಿಸ್ತರಿಸುವುದಕ್ಕೆ ಮುಂದೆ ಮಾಡಿರುವುದನ್ನು ಸರಿಪಡಿಸಿ ಮುಂದುವರಿಯುವುದು ಉಚಿತ. ಏಕೆಂದರೆ ಇದುವರೆಗೆ ರಾಷ್ಟ್ರೀಕರಣ ಮಾಡಿರುವುದು ಜನರಲ್ಲಿ ಯಾವ ಅಭಿಪ್ರಾಯವನ್ನು ಮೂಡಿಸಿದೆ, ಜನರ ಮೇಲೇನು ಪರಿಣಾಮ ಮಾಡಿದೆ ಎಂಬುದನ್ನು ನೋಡಬೇಕಾಗಿದೆ. ಈ ದಿವಸ ರಾಷ್ಟ್ರೀಕರಣ ಮಾಡಿರುವ ಕಡೆ ನಡೆಯುತ್ತಿರುವ ದುರಾಚಾರ, ಹಣದ ಪೋಲು ನೋಡಿ ಅದು ಸರಿಯಾಗಿ ನಡೆಯುತ್ತದೆಯೇ ಎಂಬ ಅನುಮಾನ ಜನರಿಗೆ ಬಂದಿದೆ. ಆದುದರಿಂದ ಈಗಿರುವ ದುರಾಡಳಿತ, ದುರಾಚಾರ ನಿರ್ಮೂಲಮಾಡಿ ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡುವಂತೆ ಮಾಡಿ ಮುಂದುವರಿಯುವುದು ಅವಶ್ಯಕ. ಹಾಗೆ ಮಾಡಿದರೆ ಜನರ ಸಹಕಾರ, ಸಹಾಯ ಪಡೆಯಬಹುದು, ಜನರಲ್ಲಿ ನಂಬಿಕೆ ಮೂಡುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲವು ಕಡೆ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿ ಅನಂತರ ಸದ್ಯಕ್ಕೆ ಆಗುವುದಿಲ್ಲ ಎಂದು ಹೇಳುವುದು ಹೀಗೆಲ್ಲಾ ನಡೆಯುತ್ತಿದೆ,

ಶ್ರೀ ಎ.ಪಿ. ಅಪ್ಪಣ್ಣ.—ಬಹುಶಃ ಈಗ ರಾಷ್ಟ್ರೀಕರಣ ಮಾಡಿರುವ ಕಡೆ ಇರುವ ಲೋಪಗಳನ್ನು ಸರಿಪಡಿಸೋಣ ಎಂಬ ದೃಷ್ಟಿಯಿಂದ ನಿಧಾನ ಮಾಡಿರಬಹುದು. ಆದರೆ ಸರ್ಕಾರದ ಉದ್ದೇಶ ಪ್ರತಿಬಿಂಬಿಸುವ ಹಕ್ಕು ನನಗಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ, ಇವತ್ತು ಯಾವುದನ್ನು ಮಾಡಬೇಕಾದರೂ ಅದು ಸರಿಯಾಗಿ ನಡೆಯುತ್ತದೆ ಎಂಬ ಮನೋಭಾವನೆ, ಅದರಿಂದ ಸಹಾಯವಾಗುತ್ತದೆ ಎಂಬ ನಂಬಿಕೆ ಜನರಲ್ಲಿ ಉಂಟಾಗುವಂತೆ ಮಾಡಿ ಅನಂತರ ಮಾಡಿದರೆ ಜನರ ಸಹಕಾರ ಪಡೆಯುವುದಕ್ಕೆ ಸಾಧ್ಯವಿದೆ. ಟಿಕೆಟ್ ಇಲ್ಲದೆ ಬಸ್ಸುಗಳಲ್ಲಿ ಪ್ರಯಾಣ ಮಾಡುವವರನ್ನು ಹಿಡಿದು ಕೇಸು ಹಾಕುತ್ತಿದ್ದಾರೆಂದು ಈಗಾಗಲೆ ಕೆಲವರು ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಹಣ ತಿಂದು ಹಾಕುವವರಿಗೆ ಜವಾಬ್ದಾರಿ ಇರುವಷ್ಟೇ ಕೊಡುವವರಿಗೂ ಇದೆ. ಹಾಗಿಲ್ಲದಿದ್ದರೆ ಯಾವುದೂ ಜಯಪ್ರದವಾಗುವುದಿಲ್ಲ. ಟಿಕೆಟ್ ಪಡೆದುಕೊಳ್ಳದೆ ಪ್ರಯಾಣ ಮಾಡುವವರನ್ನು ಶಿಕ್ಷಿಸಲು ಸರ್ಕಾರ ತಕ್ಕ ಕ್ರಮ ಕೈಕೊಳ್ಳುವುದಕ್ಕೆ ನಿಯಮವನ್ನು ರಚಿಸಬೇಕು, ಈ ದೃಷ್ಟಿಯಲ್ಲಿ ಸರ್ಕಾರದವರು ಮುಂದುವರಿಯುತ್ತಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಟಿಕೆಟ್ ಕೇಳಿದರೂ ಕೊಡದಿದ್ದರೆ ಆಗ ಏನು ಮಾಡಬೇಕು?

ಶ್ರೀ ಎ ಪಿ. ಅಣ್ಣಪ್ಪ.—ಅದನ್ನು ಸಂಬಂಧಪಟ್ಟವರಿಗೆ ತಿಳಿಸಬೇಕು. ಹಳೆಯ ಟಿಕೆಟ್ ಕೊಟ್ಟಾಗ ಅವಿದ್ಯಾವಂತರು ತಮಗೆ ಅದು ಗೊತ್ತಾಗುವುದಿಲ್ಲ ಎಂದು ಹೇಳಬಹುದು. ಹಾಗೆ ಕೇಳು

ವುದಾದರೆ ಯಾವ ಕಾನೂನನ್ನು ಮಾಡಲು ಸಾಧ್ಯವಿಲ್ಲ. ಅದನ್ನು ತಪ್ಪಿಸಲು ಯಾವರೀತಿ ಕಾನೂನನ್ನು ಮಾಡಬೇಕೆಂಬುದು ಸರ್ಕಾರಕ್ಕೆ ಬಿಟ್ಟಿದೆ. ಇದರಲ್ಲಿ ಜಾರಿಕೊಳ್ಳುವ ಸಂದರ್ಭಗಳು ಅನೇಕ ಇರಬಹುದು. ಈ ಲೋಪಗಳನ್ನು ಸರಿಪಡಿಸುವ ವಿಷಯವನ್ನು ಸರ್ಕಾರಕ್ಕೆ ಬಿಡೋಣ. ಈ ದೃಷ್ಟಿಯಿಂದ ಮುಂದೆ ರಾಷ್ಟ್ರೀಕರಣ ಮಾಡಬೇಕು ಎನ್ನುವ ಯೋಜನೆ ಇಟ್ಟುಕೊಂಡಿರುವುದರಿಂದ ಅದನ್ನು ಸುವ್ಯವಸ್ಥೆಯಿಂದ ನಡೆಸಬೇಕು ಮತ್ತು ಜವಾಬುದಾರಿಯಿಂದ ಜನಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಲು ಇಚ್ಛಿಸುತ್ತೇನೆ.

ಕಡೆಯದಾಗಿ ರೂರಲ್ ಎಲೆಕ್ಟ್ರಿಫಿಕೇಷನ್ನಿನ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. 1963-64ನೇ ವರ್ಷದ ಅವಧಿಯಲ್ಲಿ 127 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಸದ್ಯಕ್ಕೆ ಸರಕಾರದವರು 127 ಗ್ರಾಮಕ್ಕೆ ಕೊಟ್ಟಿರುವುದೇ ಜಾಸ್ತಿಯಾಗಿರಬಹುದು. ಏಕೆಂದರೆ ಅವರಲ್ಲಿ ಅದಕ್ಕೆ ತಕ್ಕ ಹಣ ಇತ್ತು ಎಂದು ತೋರುತ್ತದೆ, ಅದಕ್ಕನುಸಾರವಾಗಿ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿಯನ್ನು ಕೊಡುವಾಗ ಯಾವ ಒಂದು ಯೋಜನೆ ಪ್ರಕಾರವೂ ಹಂಚಿಕೆ ಮಾಡಿಕೊಟ್ಟಿಲ್ಲ ಎಂದು ಹೇಳಬೇಕಾಗಿದೆ. ಎಲ್ಲೆಲ್ಲಿ ದೊಡ್ಡ ನೀರಾವರಿ ಯೋಜನೆಗಳಿಗೆ ಅವಕಾಶವಿಲ್ಲವೋ ಅಲ್ಲಿ ಲಿಫ್ಟ್ ಇರಿಗೇಷನ್ನು ಮಾಡಲು ಅನುಕೂಲಗಳಿವೆ. ಅಂತಹ ಗ್ರಾಮಗಳಲ್ಲಿ ವಿದ್ಯುಚಕ್ತಿಯನ್ನು ಕೊಟ್ಟಿರುವಂತೆ ನನಗೆ ತೋರುತ್ತಿಲ್ಲ. ಹಳೆಯ ಮೈಸೂರಿನ ಭಾಗಗಳ ಪರಿಸ್ಥಿತಿಯೇ ಬೇರೆ. ಆದರೆ ನಮ್ಮ ಕೊಡಗು ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ನು ಮಾಡಲು ಇರುವ ಅವಕಾಶಗಳಿಗಿಂತ ಬೇರೆ ಜಿಲ್ಲೆಗಳಲ್ಲಿ ಅಷ್ಟಿಲ್ಲ ಎಂದು ಹೇಳಲು ಇಷ್ಟಪಡುತ್ತೇನೆ. ಇಡೀ ಕೊಡಗು ಜಿಲ್ಲೆಯಲ್ಲಿ ಹರಿಯುವ ನದಿಗಳ ಆಧಾರದಿಂದ ಇಲ್ಲಿ ಯಾವ ಮೇಜರು ಇರಿಗೇಷನ್ನು ಪ್ರಾಜೆಕ್ಟುಗಳು ಆಗಿಲ್ಲ. ಅಲ್ಲದೆ ಮೈನರು ಇರಿಗೇಷನ್ನು ಪ್ರಾಜೆಕ್ಟುಗಳ ಬಗ್ಗೆ ಸರಿಯಾದ ಲೆಕ್ಕಾಚಾರವೇ ಇಲ್ಲ. ಇಂತಹ ಗ್ರಾಮಗಳಲ್ಲಿ ಎಲೆಕ್ಟ್ರಿಫಿಕೇಷನ್ನು ಆಗಲಿಲ್ಲ. ಈವೊತ್ತು ನಮ್ಮ ಕೊಡಗು ಜಿಲ್ಲೆಯಲ್ಲಿ ಆಹಾರದ ಉತ್ಪತ್ತಿಯನ್ನು ಜಾಸ್ತಿ ಮಾಡಲು ಲಿಫ್ಟ್ ಇರಿಗೇಷನ್ನಿನ ಸೌಲಭ್ಯಗಳನ್ನು ಜಾಸ್ತಿ ಮಾಡುವ ಅವಕಾಶಗಳು ಬೇಕಾದಷ್ಟಿವೆ. ಇದು ಇನ್ನೂ ಸರಕಾರದ ಗಮನಕ್ಕೆ ಬಂದಿಲ್ಲ. ಮೇಜರು ಹಾಗೂ ಮೈನರು ಇರಿಗೇಷನ್ನುಗಿಂತ ಲಿಫ್ಟ್ ಇರಿಗೇಷನ್ನು ಮಾಡುವುದು ನಮ್ಮ ಭಾಗದಲ್ಲಿ ಬಹಳ ಲಾಭದಾಯಕವಾಗಿರುತ್ತದೆ. ಆದುದರಿಂದ ರೂರಲ್ ಎಲೆಕ್ಟ್ರಿಫಿಕೇಷನ್ನನ್ನು ಮಾಡುವಾಗ ಎಲ್ಲಿ ಲಿಫ್ಟ್ ಇರಿಗೇಷನ್ನು ಮಾಡಲು ಸಾಧ್ಯವೋ ಅಲ್ಲಿಗೆ ವಿದ್ಯುತ್ತನ್ನು ಕೊಡಬೇಕೆ ವಿನಾ ಮನಸ್ಸಿಗೆ ಬಂದಹಾಗೆ ಕೊಡುವುದು ಒಳ್ಳೆಯದಲ್ಲ. ಮೈನರು ಇರಿಗೇಷನ್ನಿಗಾಗಿ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಕಟ್ಟಿ ಅವುಗಳ ಮೂಲಕ ಲಿಫ್ಟ್ ಇರಿಗೇಶನ್ನಿಗೆ ಅವಕಾಶ ಮಾಡಿ ಕೊಟ್ಟಿದ್ದರೆ ಬಹುಶಃ ಇದರ ಉದ್ದೇಶ ಸಾರ್ಥಕವಾಗುತ್ತಿತ್ತು ಎಂದು ನನಗನಿಸುತ್ತದೆ. ಈ ದೃಷ್ಟಿಯಿಂದ ಇನ್ನುಮುಂದಾದರೂ ಇಂತಹ ಸಣ್ಣ ನೀರಾವರಿ ಯೋಜನೆಯನ್ನು ಕೈಕೊಳ್ಳುವುದಕ್ಕೆ ಸಹಾಯವಾಗುವಂತೆ ರೂರಲ್ ಎಲೆಕ್ಟ್ರಿಫಿಕೇಷನ್ನು ಕಾರ್ಯಗಳನ್ನು ಕೈಗೊಳ್ಳುವುದು ಉತ್ತಮ ಎಂದು ಸಲಹೆ ಮಾಡುತ್ತಿದ್ದೇನೆ.

ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ 750 ಮೈಲಿಗಳಷ್ಟು ರೋಡುಗಳನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ಎನ್ನುವುದನ್ನು ಇದರಲ್ಲಿ ಹೇಳಿದ್ದರೆ ಸರಿಯಾಗಿರುತ್ತಿತ್ತು. ಜಿಲ್ಲೆಯಿಂದ ಜಿಲ್ಲೆಗೆ ಹಂಚಿದ್ದಾರೆಯೇ ಅಥವಾ ತಾಲ್ಲೂಕುವಾರಾಗಿ ಹಂಚಿದ್ದಾರೆಯೇ ಎನ್ನುವುದನ್ನು ನೋಡುವಾಗ ಬಹಳ ವ್ಯತ್ಯಾಸಗಳಾಗಿರುವುದು ಕಂಡುಬರುತ್ತದೆ. ಆದುದರಿಂದ ಹಂಚಿಕೆಯನ್ನು 750 ಮೈಲುಗಳಷ್ಟೇ ಮಾಡಲಿ ಅಥವಾ 600 ಮೈಲಿಗಳಷ್ಟೇ ಮಾಡಲಿ ಅದು ಸರಕಾರದ ಬೊಕ್ಕಸದಲ್ಲಿ ಎಷ್ಟು ಹಣವಿದೆಯೋ ಅದಕ್ಕೆ ತಕ್ಕಂತೆ ಮಾಡುತ್ತಾರೆ. ಆದರೆ ದೇಶದ ಹಿತದೃಷ್ಟಿಯಿಂದ ಒಂದು ಭಾಗದಲ್ಲಿ ಅಧಿಕವಾಗಿ ಖರ್ಚು ಮಾಡುವುದು ಇನ್ನೊಂದು ಭಾಗದಲ್ಲಿ ಕಡಮೆ ಖರ್ಚು ಮಾಡುವುದು ಸರಿಯಲ್ಲ. ಸೈಂಟಿಫಿಕ್ ಬೇಸಿಸ್ ಮೇಲೆ ಎಂದರೆ ಶಾಸ್ತ್ರೀಯವಾದ ರೀತಿಯಲ್ಲಿ ಹಂಚಿರುವಿಕೆಯನ್ನು ಮಾಡಿದರೆ ಸರಿಯಾಗಿರುತ್ತದೆ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಗಂಗಾಧರ ನಾಮೋಶಿ (ಗುಲ್ಬರ್ಗ) :- ಸ್ವಾಮೀ, ಸರಕಾರದವರು ಒಂದು ರಿಪೋರ್ಟನ್ನು ಬರೆದು ಅದನ್ನು ರಾಜ್ಯಪಾಲರ ಬಾಯಿಂದ ಓದಿಸಿದ್ದಾರೆಂದು ನನಗನಿಸುತ್ತದೆ. ಈ ಭಾಷಣದಲ್ಲಿ ಸೈನಿಕ ಶಾಲೆಯನ್ನು ಸ್ಥಾಪಿಸುವುದರ ಬಗ್ಗೆ ಯಾವ ವಿಚಾರವೂ ಇಲ್ಲ. ಈಗಾಗಲೇ ಬಿಜಾಪುರದಲ್ಲಿ ಸೈನಿಕ ಶಾಲೆಯೊಂದನ್ನು ತೆರೆದಿದ್ದಾರೆ. ಇದರಲ್ಲಿ ಶೇಕಡ ಎಂಬತ್ತರಷ್ಟು ಹೊರಗಿನಿಂದ ಬಂದ ಹುಡುಗರಿಗೇ ಸೀಟುಗಳು ಸಿಕ್ಕಿವೆಯೇ ಹೊರತು ಮೈಸೂರು ಸ್ಟೇಟಿನವರಿಗೆ ಶೇಕಡ 20 ರಷ್ಟೂ ಕೂಡ ಸೀಟುಗಳು ಸಿಕ್ಕಿಲ್ಲ. ಮಾನ್ಯ ಸದಸ್ಯರಾದ ಅಪ್ಪಣ್ಣನವರು ಶೇಕಡಾ ಅರವತ್ತರಷ್ಟು ಮಂದಿಗೆ ಸ್ಕಾಲರಶಿಪ್ಪುಗಳನು ವಿದ್ಯಾಭ್ಯಾಸಕ್ಕಾಗಿ ಕೊಡುತ್ತಿದ್ದಾರೆಂದು ಹೇಳಿದರು. ಇದರಲ್ಲಿ ಮಿಲಿಟರಿ ಶಿಕ್ಷಣಕ್ಕಾಗಿ ಎಷ್ಟು ಜನರನ್ನು ಕಳುಹಿಸಿದ್ದಾರೆನ್ನುವುದನ್ನು ಅವರು ಹೇಳಲಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಈಗಿರುವ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಯಾವ ಜಿಲ್ಲೆಯಲ್ಲಿ ಜಾಸ್ತಿಯಾಗಿ ಮಿಲಿಟರಿಗೆ ಹೋಗಿದ್ದಾರೆನ್ನುವುದನ್ನು ತಾವು ನೋಡಿದ್ದರೆ ತಮಗೇ ಗೊತ್ತಾಗುತ್ತಿತ್ತು.

†ಶ್ರೀ ಗಂಗಾಧರ ನಾಮೋಷಿ.—ತಾವು ಕಾಂಗ್ರೆಸ್ಸು ಪಾರ್ಟಿಯಲ್ಲಿದ್ದರೂ ಸ್ಪಷ್ಟವಾಗಿ ಹೇಳಲಿಲ್ಲ, ಆದರೆ ಪರಪ್ರಾಂತದಲ್ಲಿ ಇತರ ಪಾರ್ಟಿಯವರು ದೇಶದ ಪರಿಸ್ಥಿತಿಗನುಸಾರವಾಗಿ ಹೆಚ್ಚಿನ ಪ್ರಚಾರ ಮಾಡಿ ಸೈನ್ಯಕ್ಕೆ ಹೆಚ್ಚು ಜನರನ್ನು ಸೇರಿಸುವಂತೆ ಎಷ್ಟು ಮಟ್ಟಿಗೆ ಪ್ರಯತ್ನ ಮಾಡಿದರೋ ಅಷ್ಟುಮಟ್ಟಿಗೆ ನಿಮ್ಮ ಪಕ್ಷದವರು ಜನರನ್ನು ಸೈನ್ಯಕ್ಕೆ ಕಳುಹಿಸಲು ಪ್ರಯತ್ನ ಮಾಡಲಿಲ್ಲ. ಇದು ಬಹು ದುಃಖದ ವಿಷಯ ಎಂದು ನನಗನಿಸುತ್ತದೆ.

ಎರಡನೆಯದಾಗಿ ಪ್ಲಾನು ಪ್ರೋಗ್ರಾಂಗಳನ್ನು ನೋಡುವುದಾದರೆ, ಸುಮಾರು 110 ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚು ಮಾಡಲಾಗಿದೆ ಎಂದು ಇದರಲ್ಲಿ ಹೇಳುತ್ತಾರೆ. ಇದರಲ್ಲಿ ಎಷ್ಟೋ ಅಗ್ರಿಕಲ್ಚರಲ್ ಅಂಡ್ ಪವರು ಸ್ಕೀಮುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಈಗಿರತಕ್ಕ ಆಹಾರ ಪದಾರ್ಥಗಳ ಬೆಲೆ ಎಷ್ಟುಮಟ್ಟಿಗೆ ಏರುತ್ತಿದೆ ಎನ್ನುವುದು ನಿಮಗೆಲ್ಲ ತಿಳಿದಿರುವ ವಿಚಾರ. ಬೆಂಗಳೂರಿನಲ್ಲೇ ಪವರು ಬೇಕು ಎಂದು ಹೇಳುತ್ತಾರೆ ಮತ್ತು ಇದಕ್ಕಾಗಿ ಯೋಜನೆಗಳನ್ನು ಮಾಡುತ್ತಿದ್ದೇವೆಂದು ಹೇಳುತ್ತ ಈಗ್ಗೆ ಮೂರು ವರ್ಷಗಳಿಂದಲೂ ಕೇವಲ 110 ಕೋಟಿ ರೂಪಾಯಿಗಳಷ್ಟು ಹಣವನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು ಎಂದರೆ ನಿಮ್ಮ ಯೋಜನೆಗಳೆಲ್ಲ ನಿಷ್ಫಲವಾದುದು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಅಗ್ರಿಕಲ್ಚರಲ್ ಮಾತ್ರವಲ್ಲ. ಮತ್ತು ಇನ್ನಿತರ ಯೋಜನೆಗಳಲ್ಲಿ ಎಷ್ಟು ಪ್ರಗತಿ ಸಾಧಿಸಬೇಕೆಂದು ಮಾಡಿಕೊಂಡಿದ್ದರೋ ಅದರಂತೆ ಆಗಿಲ್ಲ ಎನ್ನುವ ಅಂಕಿ ಸಂಖ್ಯೆಗಳನ್ನು ಇದರಲ್ಲಿ ಸೂಚಿಸಬೇಕಾಗಿತ್ತು. ಇಷ್ಟೇ ಅಲ್ಲದೆ, ನಮ್ಮ ಬಡಜನಕ್ಕೆ ಬೇಕಾಗಿರುವ ತೊಗರೆ ಬೇಳೆಯ ಬೆಲೆಯನ್ನು ನೋಡುವುದಾದರೆ, ಅದು ಇಂದು ಒಂದು ಕಿಲೋವಿಗೆ ಒಂದು ರೂಪಾಯಿ, ಒಂದು ರೂಪಾಯಿ ಎರಡಾಣೆಯಂತೆ ಮಾರಾಟ ವಾಗುತ್ತಿದೆ. ಇದು ಬಡ ಜನಕ್ಕೆ ಆಧಾರವಾದ ಪದಾರ್ಥ. ಈಗ ತೊಗರೆ ಬೇಳೆಯ ಸುಗ್ಗಿಯ ಕಾಲ ಮತ್ತು ಹೊಸದಾಗಿ ತೊಗರೆ ಕಾಳು ಬರುವ ಈ ಕಾಲದಲ್ಲಿ ತೊಗರೆ ಬೇಳೆಯನ್ನು ಒಂದು ಕಿಲೋವಿಗೆ 1-3-0 ಎಂದು ಮಾರುತ್ತಿದ್ದರೆ ಜನ ಇದನ್ನು ಹೇಗೆ ಕೊಳ್ಳಬೇಕು? ಇದೇ ಸೀಸನ್ನಿನಲ್ಲಿ ಹೋದ ಸಾರಿ ಶೇಕಡಾ ಇಪ್ಪತ್ತರಷ್ಟು ಬೆಲೆ ಹೆಚ್ಚಾಗಿತ್ತು. ಆಗ ಇದ್ದುದಕ್ಕಿಂತಲೂ ಈಗಲೂ ಇದರ ಬೆಲೆ ಹೆಚ್ಚಾಗುತ್ತಿದ್ದರೆ ಅಗ್ರಿಕಲ್ಚರಿನಲ್ಲಿ ನೀವೇನು ಹೆಚ್ಚಿನ ಪ್ರಗತಿ ಸಾಧಿಸಿದಂತಾಯಿತು ? ಈ ವಿಚಾರವನ್ನು ಸರಿಯಾಗಿ ಸರಕಾರ ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ನನಗನಿಸುತ್ತದೆ.

ನಾವು ಇಷ್ಟೆಲ್ಲಾ ಹೇಳಿದರೂ ಈ ಬೆಂಗಳೂರಿನಲ್ಲಿ ಜನ ಯಾವಾಗ್ಲೂ ಈ ಪವರನ್ನು ಪಡೆಯುವುದರಲ್ಲೇ ಇರುತ್ತಾರೆ. ನಮ್ಮ ಬಿಜಾಪುರ, ಬೀದರೆನಂಥ ಜಿಲ್ಲೆಗಳಲ್ಲಿ—ಜಿಲ್ಲಾ ಹೆಡ್‌ಕ್ವಾರ್ಟರ್ಸಿನಲ್ಲೂ ಪವರಿಲ್ಲದೆ ಅಲ್ಲಿ ಪೆಟ್ರೋಮ್ಯಾಕ್ಸ್ ಲೈಟುಗಳನ್ನು ಅಂಟಿಸಬೇಕಾದ ಪರಿಸ್ಥಿತಿ ಬಂದಿದೆ. ಇಲ್ಲಿಯ ತನಕ ರಾಜ್ಯದಲ್ಲಿ ಎಲ್ಲಿ ಎಲ್ಲಿ ಇಂಪ್ರೂವ್‌ಮೆಂಟಾಗಿದೆಯೋ ಅಲ್ಲಿಯೇ ಇದು ಆಗುತ್ತಿದೆಯೇ ವಿನಾ ಬೇರೆ ಭಾಗಗಳಲ್ಲೇನೂ ಆಗುತ್ತಿಲ್ಲ. ಹೀಗೆ ಈ ವಿದ್ಯುಚ್ಛಕ್ತಿ ಬಾಬಿಗೆ ಕಳೆದ 2 ವರ್ಷಗಳಲ್ಲಿ 110 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾಗ್ಯೂ ನಮ್ಮ ಭಾಗಕ್ಕೇನೂ ಪ್ರಯೋಜನವಾಗಿಲ್ಲ.

ಇನ್ನು ಕಮ್ಯುನಿಟಿ ಡೆವಲಪ್‌ಮೆಂಟ್ ಬಾಬಿಗೆ ಬಂದರೆ,—ಭಾಷಣದಲ್ಲಿ ಪಂಚಾಯತ್ ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ಲಾನ್ ತಯಾರಾಗಿ, ಇದರ ಸಹಾಯದಿಂದ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತ್ನವೂ ಪ್ರಾರಂಭವಾಗಿದೆಯೆಂದು ಹೇಳಿದ್ದಾರೆ. ಇದು ಒಂದು ಶುದ್ಧ ಫಾಲ್ಸ್ ರಿಪೋರ್ಟ್ ಎಂದು ನಾನು ತಿಳಿಸಬೇಕಾಗಿದೆ. ಇನ್ನೂ ಮೊನ್ನೆ ತಾನೆ ಒಂದು ಮೀಟಿಂಗ್ ನಡೆದಾಗ ಈ ಪ್ಲಾನ್ ಎಷ್ಟು ಕೆಲಸಗಳಾಗಿವೆ ಎಂದು ಒಂದು ಪ್ರಶ್ನೆ ಬಂದಿದ್ದಾಗ ಒಂದಾಣೆಭಾಗ ಕೂಡ ಕೆಲಸಗಳಾಗಿಲ್ಲವೆಂದು ತೀರ್ಮಾನವಾಗಿದೆ. ಮೀಟಿಂಗಿನಲ್ಲಿದ್ದವರೆಲ್ಲರೂ ಇದನ್ನು ಒಪ್ಪಿದ್ದಾರೆ. ಹಾಗಿದ್ದರೂ ಇಲ್ಲಿ ಇದನ್ನು ಯಾವ ಆಧಾರದಮೇಲೆ ಹೀಗೆ ಹೇಳಿದ್ದಾರೋ ನನಗೆ ತಿಳಿಯದು.

ಇನ್ನು ಕನ್‌ಸ್ಯೂಮರ್ ಸೊಸೈಟಿಯ ವಿಚಾರಕ್ಕೆ ಬಂದರೆ :—11 ಸ್ಟೋರುಗಳೂ, 158 ಚಿಲ್ಲರೆ ಸ್ಟೋರುಗಳೂ ರಚಿತವಾಗಿವೆಯೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳಬೇಕಾದ ವಿಚಾರವೇನೆಂದರೆ—ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಒಟ್ಟು ಮಾರಾಟದ ಸ್ಟೋರ್ ಒಬ್ಬ ಡಿಸ್ಟ್ರಿಕ್ಟ್ ಕಾಂಗ್ರೆಸ್ ಛೇರ್ಮನ್ನಿನ ಆಧಿಪತ್ಯದಲ್ಲಿ ಸ್ಥಾಪಿತವಾಗಿದೆ. ಇದರಿಂದ ಸಾಮಾನುಗಳನ್ನು ಚಿಲ್ಲರೆ ಸೊಸೈಟಿಗಳಿಗೆ ಸರಬರಾಯಿ ಮಾಡುತ್ತಿಲ್ಲ. ಎಲ್ಲಾ ಬ್ಲ್ಯಾಕ್ ಮಾರ್ಕೆಟ್ಟಾಗುತ್ತಿದೆ. ಯಾವ ಸೊಸೈಟಿಗಳಲ್ಲೂ ಲೆಕ್ಕಗಳನ್ನು ಸರಿಯಾಗಿ ಆಡಿಟ್ ಮಾಡಿರುವುದಿಲ್ಲ. ಎಲ್ಲೆಲ್ಲೂ ಕನ್‌ಸ್ಯೂಮರ್ ಸೊಸೈಟಿಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಈ ಅಂಗಡಿಗಳಲ್ಲಿ ಎಲ್ಲೂ 1 ರೂ, 24 ನ.ಪೈ. ಗಳಿಗೆ ಸಕ್ಕರೆ ಸಿಕ್ಕುವುದಿಲ್ಲ. ಎರಡೂವರೆ ಅಥವಾ ಮೂರೂವರೆ ರೂಪಾಯಿಗಳನ್ನು

ಕೊಟ್ಟರೆ ಸಕ್ಕರೆ ಎಲ್ಲಿಬೇಕಾದರೂ ಸಿಕ್ಕುತ್ತದೆ. ಇವು ಸರ್ಕಾರದವರು ಸ್ಥಾಪಿಸಿರತಕ್ಕ ಕನ್‌ಸ್ಯೂಮರ್ಸ್ ಕೋ-ಆಪರೇಟೀವ್‌ಗಳು. ಕಾಂಗ್ರೆಸ್ ಪಾರ್ಟಿಯನ್ನು ಬಿಟ್ಟರೆ ಬೇರೆಯವರಿಗೆ ಈ ಸೊಸೈಟಿಗಳನ್ನು ತೆರೆಯಲು ಲೈಸೆನ್ಸ್‌ಸೇ ಸಿಕ್ಕುವುದಿಲ್ಲ. ಯಾರಾದರೂ ಅರ್ಜಿಕೊಟ್ಟರೆ ಅದು ಮೇಲಕ್ಕೂ ಕೆಳಕ್ಕೂ ಓಡಾಡಿ ಎಲ್ಲೋ ಮೂಲೆಯಲ್ಲಿ ಬಿದ್ದುಹೋಗುತ್ತದೆ. ಅದೇ ಅರ್ಜಿಯನ್ನು ಮೊನ್ನೆ ಒಬ್ಬ ಕಾಂಗ್ರೆಸ್‌ಮೆಂಬರು ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಕೊಟ್ಟ 15 ದಿನಗಳಲ್ಲೇ ಲೈಸೆನ್ಸ್‌ನ್ನು ಪಡೆದರು. ಸಕ್ಕರೆ ಕಂಪೆನಿಗಳನ್ನು ತೆರೆಯತಕ್ಕವಿಚಾರದಲ್ಲೂ ಅಷ್ಟೇ. ಈ ಸಕ್ಕರೆ ಕಂಪೆನಿಗಳನ್ನು ಸ್ಥಾಪನೆ ಮಾಡತಕ್ಕ ವಿಚಾರದಲ್ಲಿ ಸರ್ಕಾರದವರು ಹಿಂದಿನಿಂದಲೂ ಇದೇ ಮಾತನ್ನು ಹೇಳುತ್ತಾ ಬಂದಿದ್ದಾರೆ. 1962 ರಿಂದಲೂ ಇದನ್ನೇ ಹೇಳುತ್ತಿದ್ದಾರೆ. ಹೀಗೆ ಇವರು ತರಿಸತಕ್ಕ ಪರವಾನಿಗೆ ಬರತಕ್ಕ ದಾರಿಯಲ್ಲಿ ಎಲ್ಲೋ ಲೈನು ತಪ್ಪಿ ಆಕ್ಸಿಡೆಂಟಾಗಿ ಉಳಿದು ಹೋಗಿದೆ. ಅದು ಎಲ್ಲಿ ನಿಂತುಹೋಗಿದೆಯೆಂಬುದು ಇನ್ನು ಯಾರಿಗೂ ಗೊತ್ತಾಗಲಿಲ್ಲ. ಇದೇ ಸಂದರ್ಭದಲ್ಲಿ ನಾನು ಮೊನ್ನೆ ಬೀದರಿಗೆ ಹೋಗಿದ್ದೆ, ಸರ್ಕಾರದವರು ಹೀಗೆ ಸುಮ್ಮನೆ ಅಷ್ಯೂರೆನ್ಸ್‌ಗಳನ್ನು ಕೊಡುತ್ತಿದ್ದಾರೆ, ಇಲ್ಲಿಗೆ ಮೂರು ವರ್ಷಗಳಿಂದ ಸರ್ಕಾರದವರು ಅವರು ಕೊಟ್ಟ ಭರವಸೆಗಳೊಂದನ್ನೂ ಈಡೇರಿಸಿಲ್ಲ, ಆದ್ದರಿಂದ ಅವರ ಬಗ್ಗೆ ನಮಗೆ ಈಗ ಏನೇನೂ ವಿಶ್ವಾಸವುಳಿದಿಲ್ಲ ಎಂದು ಅಲ್ಲಿಯ ಜನ ಹೇಳುತ್ತಿದ್ದಾರೆ. ಸರ್ಕಾರ ಹೀಗೆ ಈ ಸಕ್ಕರೆ ಕಂಪೆನಿಗಳ ವಿಚಾರದಲ್ಲಿ ಹೇಗೆ ಸುಳ್ಳು ಭರವಸೆಗಳನ್ನು ಕೊಡುತ್ತಿದೆಯೋ, ಈ ಸ್ಪಿನ್ನಿಂಗ್ ಮಿಲ್ಲುಗಳ ವಿಷಯದಲ್ಲೂ ಹಾಗೆಯೇ ಮಾಡುತ್ತಿದೆ.

ಇನ್ನು ಸೀಜನಲ್ ಕಂಡೀಷನ್‌ಗಳ ವಿಚಾರವನ್ನು ಹೇಳಿದ್ದಾರೆ:—ಇದರಲ್ಲಿ ಅವರಿಗೆ ಯಾರು ವಿಚಾರಗಳನ್ನು ತಿಳಿಸಿದರೋ ಗೊತ್ತಿಲ್ಲ, ಇಲ್ಲಿ ಕೇವಲ ಚಿತ್ರದುರ್ಗ, ತುಮಕೂರು ಕೋಲಾರ, ಮಂಡ್ಯ ಮೈಸೂರುಗಳಲ್ಲಿ ಮಾತ್ರ ಬೆಳೆಗಳು ಕೆಟ್ಟಿರುತ್ತವೆಂದು ಹೇಳಿದ್ದಾರೆ. ಹೀಗೆಯೇ ನಮ್ಮ ಬಿಜಾಪುರ ಮತ್ತು ಬೀದರ್ ಜಿಲ್ಲೆಗಳಲ್ಲೂ ಬೆಳೆ ಪೂರ್ಣವಾಗಿ ಫೇಲಾಗಿದೆ. ಅಲ್ಲಿ ಜನಗಳಿಗೆ ತಿನ್ನಲಿಕ್ಕೆ ಅನ್ನವಿಲ್ಲ. ನನಗೆ ಗೊತ್ತಿರುವ ಹಾಗೆ ತೊಗರೆ ಮತ್ತು ಗೋಧಿ ಬೆಲೆ ಎಂದೂ ಇಷ್ಟು ಜಾಸ್ತಿ ಏರಿರಲಿಲ್ಲ. ಎಂಥಾ ಕ್ಷಾಮಗಾಲದಲ್ಲೂ ರೂಪಾಯಿಗೆ ಎರಡೂವರೆ ಸೇರಿಗಿಂತ ಕಡಮೆ ಇರಲಿಲ್ಲ. ಆದರೆ ಈ ದಿವಸ ಸುಗ್ಗಿಯಲ್ಲಿಯೇ ಧಾನ್ಯಗಳು ರೂಪಾಯಿಗೆ ಒಂದು ಸೇರಾಗಿವೆ. ಆದ್ದರಿಂದ ಇಲ್ಲಿ ಇನ್ನೂ ಅನೇಕ ಜಿಲ್ಲೆಗಳ ಹೆಸರನ್ನು ಸೇರಿಸಬೇಕಾಗಿತ್ತು. ಆದ್ದರಿಂದ ಮಾನ್ಯ ರೆವಿನ್ಯೂಮಂತ್ರಿಗಳು ಈ ಸೀಜನಲ್ ಕಂಡೀಷನ ಕಾಲಂನಲ್ಲಿ ಇನ್ನೂ ಅನೇಕ ಜಿಲ್ಲೆಗಳನ್ನು ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ನೀರಾವರಿ ಬಾವಿಗಳ ವಿಚಾರವನ್ನು ಹೇಳಿದ್ದಾರೆ. ಇಲ್ಲಿಯತನಕ ಈ ಬಾಬಿನಲ್ಲಿ ಹಣವನ್ನು ಯಾರಿಗೆ ಭಾವಿ ತೆಗೆಯಲು ಶಕ್ತಿಯಿದೆಯೋ ಅಂಥವರಿಗೇ ಕೊಟ್ಟಿದ್ದಾರೆ. ಬಡವರಿಗೇನೂ ಇದರಿಂದ ಸಹಾಯವಾಗಿಲ್ಲ. ಈ ಬಾಬಿನಲ್ಲಿ ಹೆಚ್ಚು ಅನುಕೂಲ ಪ್ರಸಕ್ತ ಕಾಂಗ್ರೆಸ್ ಸದಸ್ಯರಿಗೂ ಮತ್ತು ಎಕ್ಸ್ ಎಂ. ಎಲ್. ಎ. ಗಳಿಗೂ ದೊರೆಯುತ್ತಿದೆ. ಈ ಪೈಕಿ ಒಬ್ಬ ಎಕ್ಸ್ ಎಂ. ಎಲ್. ಎ. ಒಂದಾವರ್ತಿ ಪಡೆದ ತಕಾವಿ ಸಾಲವನ್ನು ತೀರಿಸದೆ ಇದ್ದಾಗ್ಯೂ ಮತ್ತೆ ಅದೇ ವ್ಯಕ್ತಿಗೆ ಮೂರಾವರ್ತಿ ತಕಾವಿ ಸಾಲವನ್ನು ಕೊಟ್ಟಿದ್ದಾರೆ. ನಾವು ಸ್ಥಳೀಯ ಅಧಿಕಾರಿಗಳನ್ನು ಹೀಗೇ ಮಾಡುತ್ತೀರೇಂದು ಕೇಳಿದರೆ ಅವರು ನಾವೇನು ಮಾಡೋಣ ಅವರು ಮಂತ್ರಿಗಳಿಂದಲೂ, ಎಂ. ಎಲ್. ಎ. ಗಳಿಂದಲೂ ಶಿಫಾರಸುಗಳನ್ನು ತರುತ್ತಾರೆಂದು ಹೇಳುತ್ತಿದ್ದಾರೆ. ಹೀಗೆ ಅಲ್ಲಿ ಈ ದಿವಸ ಯಾರ್ಯಾರು ಅಕ್ರಮ ಅನುಕೂಲಗಳನ್ನು ಪಡೆಯುತ್ತಿದ್ದಾರೋ ಅವರೆಲ್ಲರೂ ಈ ಹಿಂದೆ ಕಾಗ್ರೆಸ್ಸಿನವರಿಗೆ ಎಲೆಕ್ಷನ್‌ಗಳಲ್ಲಿ ಕ್ಯಾನ್ವಾಸ್ ಮಾಡಿರತಕ್ಕ ಜನರಾಗಿದ್ದಾರೆ. ಇದರ ಹೊರತಾಗಿ ನ್ಯಾಯವಾಗಿ ನಿಜವಾದ ರೈತರಿಗೆ ಯಾರಿಗೂ ಇದರಿಂದ ಅನುಕೂಲವಾಗಿಲ್ಲ. ನಾನು ಇವರೆಲ್ಲರ ಹೆಸರುಗಳನ್ನೂ ಹೇಳುತ್ತಿದ್ದೆ. ಆದರೆ ಅಧ್ಯಕ್ಷರು ಹೆಸರುಗಳನ್ನು ಹೇಳಬಾರದೆಂದು ಹೇಳುತ್ತಾರೆ; ಒಟ್ಟಿನಲ್ಲಿ ಹೇಳುವುದಾದರೆ ಈ ಯುಗದಲ್ಲಿ ಕಾಂಗ್ರೆಸ್ಸಿನವರು ಒಂದು ಕರಪ್ಷನ್ ಕ್ಲಾಸನ್ನೇ ತಯಾರು ಮಾಡಿದ್ದಾರೆಂದು ಅವರ ಬಗ್ಗೆ ನನ್ನ ಒಂದು ಛಾರ್ಜ್ ಇದೆ. ಹೀಗೆ ದೇಶದಲ್ಲಿ ಎಲ್ಲಿ ನೋಡಿದರೂ ಲಂಚಗೂಳಿತನ ತನ್ಮಯವಾಗಿರುವುದರಿಂದಲೇ ಈ ವಿಚಾರದಲ್ಲಿ ಶ್ರೀ ನಂದಾ ಅವರು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಒಂದು ಕರಪ್ಟ್ ಕ್ಲಾಸನ್ನು ಸೃಷ್ಟಿಮಾಡಿರತಕ್ಕ ಜವಾಬ್ದಾರಿ ಕಾಂಗ್ರೆಸ್ಸಿನಮೇಲೆ ಬಹಳವಾಗಿ ಬಿದ್ದಿದೆ. ನಮ್ಮ ಗುಲ್ಬರ್ಗದಲ್ಲಿ ಕೋ-ಆಪರೇಟೀವ್ ಸೊಸೈಟಿಯಲ್ಲಿ ಹಣ ದುರುಪಯೋಗ ಮಾಡಿರತಕ್ಕ ಒಬ್ಬ ವ್ಯಕ್ತಿಯನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು. ಅಂಥ ವ್ಯಕ್ತಿಯನ್ನು ಇವರು ಮತ್ತೆ ರೀಎಂಪ್ಲಾಯಿ ಮಾಡಿಕೊಂಡಿದ್ದಾರೆ. ಹೀಗೆ ಕಾಂಗ್ರೆಸ್ಸಿನವರ ಅಭಿಮಾನವೆಲ್ಲಾ ತಪ್ಪಿತಸ್ಥರಮೇಲೆಯೇ ವಿನಾ ಒಳ್ಳೆಯವರ ಬಗ್ಗೆ ಇಲ್ಲ. ಅದ್ದರಿಂದಲೇ ನಾನು ಇವರೇ ಈ ಕರಪ್ಟ್ ಕ್ಲಾಸನ್ನು ತಯಾರುಮಾಡಿದ್ದಾರೆಂದು ಹೇಳುತ್ತಿರುವುದು. ಇಂದಿನ ಸರ್ಕಾರ ಯಾರು ತಮ್ಮ ತನುಮನಧನಗಳನ್ನು ತೆತ್ತು ಕೆಲಸ ಮಾಡುತ್ತಿದ್ದಾರೆ ಅಂಥವರ ಬಗ್ಗೆ ಏನೂ ಸಹಕಾರ ನೀಡುತ್ತಿಲ್ಲ. ಮಹಾತ್ಮ ಗಾಂಧಿಯವರು ಸ್ಥಾಪಿಸಿದಂಥ ಖಾದೀ ಬೋರ್ಡಿನಲ್ಲೇ ದುರುಪಯೋಗ ನಡೆದು ಅನೇಕರು ಶ್ರೀಮಂತರಾಗಿದ್ದಾರೆ. ಇದನ್ನು ಅಕ್ಷರಶಃ ರುಜುವಾತು ಮಾಡಬಲ್ಲೆ;

(ಶ್ರೀ ಗಂಗಾಧರ ನಾಮೋಶಿ)

ಇನ್ನು ಮೇಜರ್ ಇರಿಗೇಷನ್ ವಿಚಾರಕ್ಕೆ ಬಂದರೆ :—ಸರಕಾರದ ಬಳಿ ಅಂದಾಜೇನು, ಎಷ್ಟು ಕೆಲಸವಾಗಬೇಕು, ಹಣವೆಷ್ಟಿದೆ ಎಂಬ ಒಂದೂ ಅಂದಾಜುಗಳಿಲ್ಲ ಎಷ್ಟು ಪ್ರದೇಶ ನೀರಾವರಿಯಾಗುತ್ತದೆ ಎಂದು ಹೇಳಲು ಇವರಿಗೆ ಸಾಧ್ಯವಿಲ್ಲ. ಕೃಷ್ಣ ಗೋದಾವರಿ ನೀರಿಗೆ ಅಲಮಟ್ಟಿ ಬಳಿ ಒಂದು ಡ್ಯಾಮನ್ನು ಹಾಕುವುದಾಗಿ 6-7 ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. ಅದರೆ ಈಗ ಅದನ್ನು ಹಿಂದಿಟ್ಟು ನಾರಾಯಣಪುರದ ಬಳಿ ಕಟ್ಟಬೇಕೆಂದು ಹೇಳುತ್ತಿದ್ದಾರೆ.

ಸಭಾಪತಿಯವರು.—ಇನ್ನು ತಮಗೆ ಮಾತನಾಡಲು ಕೊಟ್ಟಿದ್ದ ವೇಳೆಯಲ್ಲಿ ಒಂದು ನಿಮಿಷ ಮಾತ್ರ ಉಳಿದಿದೆ. ಅಷ್ಟರಲ್ಲಿ ತಾವು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಗಂಗಾಧರ ನಾಮೋಶಿ.—ಮೊದಲು ಆಲಮಟ್ಟಿಯ ಬಳಿಯಲ್ಲೇ ಕಟ್ಟಬೇಕೆಂದು ನಾನು ಒತ್ತಾಯಮಾಡಿ ಹೇಳುತ್ತೇನೆ. ಅನಂತರ ಬೇಕಾದರೆ ನಾರಾಯಣಪುರದ ಬಳಿಯಲ್ಲೂ ಕಟ್ಟಲಿ.

ಆದರೆ ಅದನ್ನು ಕೂಡ ಸರಿಯಾಗಿ ನೋಡಬೇಕು.

4.30 P.M.

ನಾನು ಹೇಳುವುದೇನೆಂದರೆ ನಮ್ಮಲ್ಲಿ ಸಾಕಷ್ಟು ಪವರ್ ಇಲ್ಲ. ಮದ್ರಾಸ್ ಸಂಸ್ಥಾನದಲ್ಲಿ ಪವರ್ ಸಾಕಷ್ಟು ಇದೆ. ಕೇಂದ್ರ ಸರ್ಕಾರದವರು ಅವರಿಗೆ ಈ ವಿಷಯದಲ್ಲಿ ಬೇಕಾದಷ್ಟು ಸಹಾಯಮಾಡುತ್ತಿದ್ದಾರೆ. ಈಗ ನಮ್ಮ ದೇಶದಲ್ಲಿ ಶರಾವತಿಯಿಂದ ಇನ್ನು ನಾಲ್ಕೈದು ವರ್ಷಗಳೊಳಗೆ 10 ಲಕ್ಷ ಕಿಲೋವಾಟ್ಸ್ ಪವರ್ ಉತ್ಪತ್ತಿಯಾಗುತ್ತದೆಂದು ಹೇಳಿದರು. ಅದನ್ನೇನೋ ನಾನು ಒಪ್ಪಿಕೊಳ್ಳುತ್ತೇನೆ. ಆಂಧ್ರದಲ್ಲಿ ಶೇಕಡ 47ರಷ್ಟು ಇರಿಗೇಷನ್ ಮಾಡಿ ನಮ್ಮಲ್ಲಿ ಶೇಕಡ 4ರಷ್ಟು ಆಗುತ್ತದೆ. ಈಗ ಆಂಧ್ರದವರು ನಮ್ಮಲ್ಲಿರತಕ್ಕ ಸರ್ಪ್ಲಸ್ ಪವರ್ ಬೇಕೆಂದು ಕೇಳುತ್ತಿದ್ದಾರೆ. ಅವರು ನಾಗಾರ್ಜುನಸಾಗರ ಕಡಮೆ ಮಾಡಲು ನಮಗಿಂತಲೂ ಹೆಚ್ಚಿಗೆ ಪತಕ್ಕೆ ತೆಗೆದುಕೊಳ್ಳುತ್ತಾರೆಂದು ಕೇಂದ್ರ ಸರ್ಕಾರದವರನ್ನು ಕೇಳಬಾರದು ? ತುಂಗಭದ್ರಾ ಪ್ರಾಜೆಕ್ಟಿನಿಂದ ಸ್ವಲ್ಪ ಪವರ್ ಅವರಿಗೆ ಹೋಗುತ್ತದೆ. ನಾವು ಈ ವಿಚಾರದಲ್ಲಿ ಕೇಂದ್ರದವರನ್ನು ಕೇಳದೆ ಇರುವುದು ದೊಡ್ಡ ತಪ್ಪು ಎಂದು ಹೇಳುತ್ತೇನೆ.

ಇನ್ನು ಬಂದರು ಹಾಗೂ ರೈಲ್ವೆಗಳ ವಿಚಾರದಲ್ಲಿ ಹೇಳುವುದಾದರೆ ಮಂಗಳೂರು ರೈಲ್ವೆ ಲೈನನ್ನು ಬ್ರಾಡ್‌ಗೇಜ್ ಲೈನನ್ನಾಗಿ ಕೈಕೊಳ್ಳುವ ಬಗ್ಗೆ ನಮ್ಮ ಸರ್ಕಾರದವರು ಸುಮ್ಮನೆ ಕುತೂಹಲವುಳ್ಳವರಾಗಿದ್ದರೆ ಸಾಕಾಗದು. ಮಹಾರಾಷ್ಟ್ರ ಸರ್ಕಾರಕ್ಕಿಂತಲೂ ಹೆಚ್ಚಿಗೆ ಈ ಬಗ್ಗೆ ಮುತುವರ್ಜಿ ವಹಿಸಿ ನಮ್ಮ ಸರ್ಕಾರ ನಮ್ಮ ರಾಜ್ಯದ ವ್ಯಾಪಾರಕ್ಕೆ ಅನುಗುಣವಾಗುವಂತೆ ರೈಲ್ವೆ ಸೌಕರ್ಯಗಳನ್ನು ಕೇಂದ್ರದವರಿಂದ ಪಡೆಯಬೇಕು. ಇತರರಿಗೆ ರೈಲ್ವೆ ಸೌಕರ್ಯಗಳು ಹೆಚ್ಚಿಗೆ ದೊರಕುತ್ತಿರುವಾಗ ಇಲ್ಲಿ ಏಕೆ ಆಗುವುದಿಲ್ಲ ? ಅದರ ಸಲುವಾಗಿಯೇ ಕರ್ಣಾಟಕದಿಂದ ಆಗತಕ್ಕ ವ್ಯಾಪಾರವೆಲ್ಲಾ ಹಾಳಾಗುತ್ತಿದೆ. ನಮ್ಮಲ್ಲಿ ಈಗಿರತಕ್ಕ ರೈಲ್ವೆ ಸೌಕರ್ಯಗಳು ನಿಜವಾಗಿಯೂ ಬಹಳ ಕಡಮೆ. ಏಕೆಂದರೆ ನಮ್ಮಲ್ಲಿ ಒಳ್ಳೆಯ ಸಾರಿಗೆಗಳಿಲ್ಲ. ಉತ್ತರ ಕರ್ಣಾಟಕದ ನಾಲ್ಕು ಜಿಲ್ಲೆಗಳಲ್ಲಿ ಬಹಳ ಬೆಲೆಯಾದಂಥ ಸರಕುಗಳು ದೊರೆಯುವುದರಿಂದ ಅಲ್ಲಿ ಒಳ್ಳೆಯ ಬೆಲೆ ಸಿಗಬೇಕು. ಅದರೂ ಅಲ್ಲಿ ಅಷ್ಟು ಸಿಕ್ಕುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಗುಲ್ಬರ್ಗಾ ಬ್ರಾಡ್‌ಗೇಜ್ ಲೈನ್ ಆಗಿರುವುದರಿಂದ ಅಲ್ಲಿಂದಲೂ ಮತ್ತು ಮದ್ರಾಸಿನಿಂದಲೂ ಎಷ್ಟೋ ದೂರದಲ್ಲಿರತಕ್ಕ ಸೋಲಾಪುರ ಮತ್ತು ಬಧ್ನೇಯಂತಾದ ಪ್ರದೇಶಗಳಲ್ಲಿ ಆಹಾರ ಧಾನ್ಯಗಳನ್ನು ಸಾಗಿಸುವುದರಿಂದ ಅಲ್ಲೆಲ್ಲಾ ಹೆಚ್ಚಿಗೆ ವ್ಯಾಪಾರ ನಡೆಯುತ್ತಿದೆ. ಆದ್ದರಿಂದ ಸರ್ಕಾರದವರು ನಮ್ಮ ರಾಜ್ಯದಲ್ಲಿಯೂ ಹೆಚ್ಚು ಹೆಚ್ಚು ದೊಡ್ಡ ದೊಡ್ಡ ರೈಲ್ವೆ ಮಾರ್ಗಗಳ ಸೌಕರ್ಯವನ್ನು ಪಡೆಯಲು ತಕ್ಕ ಪ್ರಯತ್ನಗಳನ್ನು ಬೇಗನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮೈಸೂರು ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಇದೇ ಸಭೆಯಲ್ಲಿ ಹಿಂದೆ ಪ್ರಶ್ನೆಗಳನ್ನು ಕೇಳಿದಾಗ ಮಾನ್ಯ ಮಂತ್ರಿಗಳು ನಮ್ಮಲ್ಲಿ ಅದಕ್ಕಾಗುವಷ್ಟು ದುಡ್ಡು ಇಲ್ಲವೆಂದು ಹೇಳಿದರು. ಎಲೆಕ್ಟ್ರಿಸಿಟಿ ಕಾರ್ಪೊರೇಷನ್ನಿನವರು ಹೇಗೆ ಸಾಲ ತಗೆದುಕೊಂಡು ತಮ್ಮ ಇಲಾಖೆಯನ್ನು ಅಭಿವೃದ್ಧಿಪಡಿಸಲು ಪ್ರಯತ್ನ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನವರು ಬೇಕಾದ ಸಾಲವನ್ನು ತೆಗೆದು ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಇಡೀ ದೇಶದಲ್ಲೆಲ್ಲಾ ರೋಡ್ ಟ್ರಾನ್ಸ್‌ಪೋರ್ಟನ್ನು ರಾಷ್ಟ್ರೀಕರಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರಾಷ್ಟ್ರೀಕರಣ ಮಾಡುವಾಗ

ಎಲ್ಲಾ ಕಡೆಗಳಲ್ಲೂ ಮಾಡದೆ ಕೆಲವು ಕಡೆ ಮಾಡುತ್ತಾರೆ. ಗುಲ್ಬರ್ಗಾದಲ್ಲಿ ಇಂತಹ 50 ಉದಾಹರಣೆಗಳು ಸಿಕ್ಕಬಹುದು. ಯಾರೋ ಒಬ್ಬ ಖಾಸಗಿಯವರಿಗೆ ತಮಗೆ ಬೇಕಾದವರಿಗೆ ಲೈಸೆನ್ಸ್ ಕೊಡುವುದು. ಅಂಥ ಕಡೆ 80 ಮೈಲಿ ಟಾರ್ ರಸ್ತೆ ಇರುತ್ತದೆ. ಮುಂದೆ ಕಚ್ಚಾ ರಸ್ತೆ ಇರುತ್ತದೆ ಎಂದು ಬೇರೆಯವರಿಗೆ ಕೊಡುವುದು. ಆ ಪ್ರಕಾರ ರಾಷ್ಟ್ರೀಕರಣವಾಗತಕ್ಕ ಸ್ಕೀಮುಗಳು ಇರುವುದರಿಂದ ಇದರಲ್ಲಿ ಎಲ್ಲೋ ಎಂ.ಎಲ್.ಎ. ಗಳ ಕೈವಾಡ ಇದೆಯೆಂಬುದು ವ್ಯಕ್ತವಾಗುತ್ತದೆಂದು ಹೇಳಬಹುದು. ಆದ್ದರಿಂದ ಇಂತಹ ನ್ಯೂನತೆಗಳನ್ನು ಸರಿಪಡಿಸಬೇಕೆಂದು ನಾನು ಸರ್ಕಾರದವರಿಗೆ ಹೇಳುತ್ತೇನೆ.

[MR. SPEAKER in the Chair.]

ಇನ್ನು ಪ್ರೊಹಿಬಿಷನ್ ಪಾಲಿಸಿಯ ವಿಚಾರದಲ್ಲಿ ಮಹಾರಾಷ್ಟ್ರದ ಗವರ್ನರ್ ಆದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ಮಾತನಾಡುತ್ತಾ, ನಾಯಕರು ಯಾವ ರೀತಿ ಒಂದು ನಿರ್ಣಯ ತೆಗೆದುಕೊಂಡಿದ್ದಾರೋ, ಆ ರೀತಿ ಅತಿ ಶೀಘ್ರದಲ್ಲಿಯೇ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಆದರೆ ಇಲ್ಲಿ ಆ ರೀತಿ ಏನೂ ಅಭಿಪ್ರಾಯ ವ್ಯಕ್ತಪಡಿಸಿಲ್ಲವೆಂದು ನಾನು ಹೇಳಬೇಕಾಗಿದೆ.

ಇನ್ನು ತುಟ್ಟಿಭತ್ಯದ ವಿಷಯವಾಗಿ ಹೇಳುವುದಾದರೆ ಪಂಜಾಬಿನಲ್ಲಿ ಸುಮಾರು 12 ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ಟನ್ನು ತೋರಿಸಿದರೂ ಅಲ್ಲಿನ ಸರ್ಕಾರೀ ಆಫೀಸಿನಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಡಿ. ಎ. ಜಾಸ್ತಿ ಮಾಡಿರುತ್ತಾರೆ. ಕೇಂದ್ರ ಸರ್ಕಾರದವರೂ ತಮ್ಮ ನೌಕರರೆಲ್ಲರಿಗೂ ಡಿ.ಎ. ಯನ್ನು ಜಾಸ್ತಿ ಮಾಡಿರುತ್ತಾರೆ. ಮದ್ರಾಸ್ ಮತ್ತು ಮಹಾರಾಷ್ಟ್ರದವರೂ ಆ ರೀತಿ ಮಾಡಿರುತ್ತಾರೆ. ಅಂದಮೇಲೆ ನಮ್ಮ ಸರ್ಕಾರದವರು ಈ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಆ ವಿಷಯವನ್ನು ಸೇರಿಸಬೇಕಾಗಿತ್ತು. ಅದನ್ನು ಅವರ ಭಾಷಣದಲ್ಲಿ ಸೇರಿಸದೆ ಇರುವುದನ್ನು ನೋಡಿ ನಾನು ಬಹಳ ವ್ಯಥೆಪಡಬೇಕಾಗಿದೆ.

ಅಧ್ಯಕ್ಷರು ನನಗೆ ಕಾಲಾವಕಾಶವನ್ನು ಜಾಸ್ತಿಯಾಗಿ ಕೊಡದೇ ಇರುವುದಕ್ಕಾಗಿ ನಾನು ಇಲ್ಲಿಗೆ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸೂಚಿಸಬೇಕೆಂದು ನಾನು ಇಷ್ಟಪಡುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರು ತಮ್ಮ ಭಾಷಣದೊಳಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅವರು ಇನ್ನು ಸ್ವಲ್ಪ ಯೋಚನೆ ಮಾಡಿ ಭಾಷಣ ಮಾಡಿದ್ದರೆ ಬಹಳ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಮೊದಲನೆಯದಾಗಿ ನಾನು ಹೇಳುವುದು ಆಹಾರ ಪರಿಸ್ಥಿತಿಯ ವಿಷಯ. ರಾಜ್ಯಪಾಲರು ಆಹಾರ ಧಾನ್ಯಗಳ ಬೆಲೆಗಳು ಸಾಮಾನ್ಯವಾಗಿ ಹತೋಟಿಯಲ್ಲಿ ಉಳಿದಿವೆ ಎಂದು ಭಾಷಣ ಮಾಡಿದ್ದಾರೆ. ಆ ಬಗ್ಗೆ ಬಹುಶಃ ನಾನು ಹೆಚ್ಚಿಗೆ ಹೇಳದೇ ಇರುವುದೇ ಒಳ್ಳೆಯದು ಎಂದು ನನಗನ್ನಿಸುತ್ತದೆ. ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳು ಆದಿಯಾಗಿ ಒಪ್ಪಿಕೊಂಡು ಧಾರಣೆವಾಸಿಗಳನ್ನು ಹತೋಟಿಗೆ ತರಬೇಕೆಂದು ಹೇಳುತ್ತಿರುವಾಗ ಇವರು ಆಹಾರ ಧಾನ್ಯಗಳ ಬೆಲೆಗಳು ಸಾಮಾನ್ಯವಾಗಿ ಹತೋಟಿಯಲ್ಲಿ ಉಳಿದಿದ್ದು ಅದರಲ್ಲಿ ಯಾವ ಅನಧಾರಣ ಹೆಚ್ಚಳವೂ ಉಂಟಾಗಿರುವುದಿಲ್ಲವೆಂಬುದಾಗಿ ಹೇಳಿರುವುದನ್ನು ನೋಡಿದರೆ ಇಂತಹ ವಿಷಮ ಪರಿಸ್ಥಿತಿಯಲ್ಲಿ ಏತಕ್ಕೆ ಈ ವಿಚಾರವನ್ನು ಸರಿಯಾಗಿ ಅವರು ಅರಿತುಕೊಳ್ಳಲಿಲ್ಲವೋ ಎಂದು ನನಗನ್ನಿಸುತ್ತದೆ. ಆದರೆ ನಾನು ಆ ವಿಚಾರದಲ್ಲಿ ಹೆಚ್ಚು ಹೇಳುವುದಿಲ್ಲ. ಆ ರೀತಿ ಅವರು ಭಾಷಣವನ್ನು ಮಾಡುವುದಕ್ಕೆ ನಮ್ಮ ಸರ್ಕಾರದವರು ಏತಕ್ಕೋಸ್ಕರ ಅವಕಾಶ ಮಾಡಿಕೊಟ್ಟರೋ ಎಂದು ನನಗನ್ನಿಸುತ್ತದೆ. ಧಾರಣೆವಾಸಿಗಳು ದಿನೇ ದಿನೇ ಏರುತ್ತಿದ್ದರೂ stabilise ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಬೆಲೆಗಳನ್ನು ಹತೋಟಿಗೆ ತರುವುದರಲ್ಲಿ ಸ್ವಲ್ಪಮಟ್ಟಿಗೆ ಹಿಂದುಳಿದಿದ್ದಾರೆ. ಸುಗ್ಗಿ ಕಾಲದಲ್ಲಿಯೇ ಒಂದು ಪಲ್ಲಾ ಬತ್ತವನ್ನು 100 ರೂಪಾಯಿಗಳಂತೆ ಮಾರತಕ್ಕ ಪರಿಸ್ಥಿತಿ ಈಗ ಒದಗಿದೆ. ಇದಕ್ಕೆ ಕಾರಣವೇನೆಂಬುದನ್ನು ಅವರು ಏತಕ್ಕೆ ವಿಮರ್ಶೆ ಮಾಡಲಿಲ್ಲವೋ ಗೊತ್ತಾಗಲಿಲ್ಲ. ಈಗ ಅಕ್ಕಿಯ ಒಂದು ಧಾರಣೆಯ ವಿಷಯವನ್ನು ಹೇಳುತ್ತೇನೆ. ಇದು ಒಂದು ವಿಷಿಯಲ್ ಸರ್ಕಲ್ ಮಾನನ್ನು ಜಾಸ್ತಿ ಮಾರ್ಕೆಟ್ ಮೇಲೆ ಬಿಟ್ಟರೆ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಸಿಕ್ಕುವ ಏರ್ಪಾಡು ಮಾಡಿದರೆ ಆಗ ಧಾರಣೆವಾಸಿ ಕಮ್ಮಿಯಾಗುತ್ತದೆ. ಇದನ್ನು ಆರ್ಥಿಕ ತಜ್ಞರು ಒಪ್ಪಿಕೊಂಡಿದ್ದಾರೆ. ದೇಶದಲ್ಲಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಕಂತುಗಳ ಮೇಲೆ ದುಡ್ಡು ಹಂಚಿದರೆ ಧಾರಣೆಗಳು ಸ್ವಲ್ಪಮಟ್ಟಿಗೆ ಕಡಮೆಯಾಗುತ್ತವೆ.

ಶ್ರೀ ಪಿ. ಎಂ. ದೇವ್ (ಗುಬ್ಬಿ):—ಆಚೆ ವರ್ಷಕ್ಕಿಂತ ಈ ವರ್ಷ ಮುಂಚೆ ಬೆಲೆ ಕಡಮೆ ಇದೆ. ಅಕ್ಕಿ ಬೆಲೆಯೊಂದು ಜಾಸ್ತಿಯಾಗುತ್ತಿದೆ. ಆ ಒಂದು ದೃಷ್ಟಿಯಿಂದ ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಯಾವ ದೃಷ್ಟಿಯಿಂದ ನೋಡಿದರೂ ಆಹಾರ ಪದಾರ್ಥಗಳ ಧಾರಣೆ ಹೆಚ್ಚಿಹೋಗಿದೆ. ಆಹಾರ ಪದಾರ್ಥಗಳನ್ನು ಕೊಂಡು ತಿನ್ನುವವರಿಗೆ ಅದರ ಕಷ್ಟ ಗೊತ್ತಾಗುತ್ತದೆ. ಈ ವಿಚಾರವನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ಇದು ಜನ ಸಾಮಾನ್ಯರಿಗೆ ಸಂಬಂಧಪಟ್ಟ ಒಂದು ಸಮಸ್ಯೆಯಾಗಿದೆ. ಆದ್ದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಇದಕ್ಕೆ ಕಾರಣಗಳನ್ನು ಹೇಳುತ್ತಾ ಹೋದರೆ ನಾನಾ ಕಾರಣಗಳನ್ನು ಹೇಳಬಹುದು. ಧಾರಣೆ ವಾಸಿಗಳು ಏರಿದ ಪದಾರ್ಥಗಳಮೇಲೆ ರಿಜರ್ವ್ ಬ್ಯಾಂಕಿನವರ ಒಂದು ಹತೋಟಿ ಇದೆ. ಅದೇನೆಂದರೆ ರಿಜರ್ವ್ ಬ್ಯಾಂಕಿನವರ ಪಾಲಿಸಿಯ ಪ್ರಕಾರ ಅವರು ವರ್ತಕರಿಗೆ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಸಾಲವಾಗಿ ದುಡ್ಡನ್ನು ಕೊಡಕೂಡದು ಎಂದು. ಅದು ಬಹಳ ಒಳ್ಳೆಯದು. ಆದರೆ ವೇರ್‌ಹೌಸ್‌ನಲ್ಲಿರತಕ್ಕ ಪದಾರ್ಥಗಳ ಬೆಲೆಯ ಶೇಕಡ 90 ರಷ್ಟು ಹಣವನ್ನು ಕೆಲವು ಷೆಡ್ಯೂಲ್ ಬ್ಯಾಂಕುಗಳಲ್ಲಿ ವರ್ತಕರಿಗೆ ಸಾಲವನ್ನು ಕೊಡುತ್ತಾರೆ. ಅಲ್ಲಿ ಅಂಥಾ ಒಂದು ಕಾನ್‌ಸ್ಟೆಂಟ್ ಪಾಲಿಸಿ ಇದೆ.

ಇನ್ನು ಎರಡನೆಯದಾಗಿ ಕೋ-ಆಪರೇಟೀವ್ ಸೊಸೈಟಿಗಳೆಂದು ಸ್ಥಾಪನೆ ಮಾಡಿದ್ದಾರೆ. ಕೆಲವು ಸೊಸೈಟಿಗಳನ್ನು ಹೊಸದಾಗಿ ಸ್ಥಾಪನೆ ಮಾಡಿ ಅವುಗಳಿಗೆ ದುಡ್ಡಿನ ಚೀಲಗಳನ್ನು ಕೊಡುತ್ತಿದ್ದಾರೆ. ನೀವು ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಿ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರಿಂದ ಆಹಾರ ಪದಾರ್ಥಗಳ ಧಾರಣೆವಾಸಿಗಳು ದಿನೇ ದಿನೇ ಹೆಚ್ಚುತ್ತಾ ಇವೆ. ಸರ್ಕಾರದವರು ಆಹಾರ ಪದಾರ್ಥಗಳಿಗೆ ಹೆಚ್ಚಿನ ದಾರಣೆಯನ್ನು ಕೊಟ್ಟು ದಾಸ್ತಾನು ಮಾಡುತ್ತಿದ್ದಾರೆ. ಆಹಾರದ ಅಭಾವ ಬಂದಾಗ ಅದನ್ನು ಜನಗಳಿಗೆ ಮಾರ್ಕೆಟ್ ರೇಟಿಗೆ ಹಂಚುತ್ತಾರೆ. ಆಗ ಅದು ಜನಗಳಿಗೆ ಸರಿಯಾಗಿ ಸಿಕ್ಕುತ್ತದೆಯೇ? ಆಗ ಹೆಚ್ಚಿನ ಧಾರಣೆಯನ್ನು ಕೊಡುವುದಕ್ಕೆ ಬರುತ್ತವೆಯೇ? ಇವೊತ್ತಿನ ದಿವಸ ಯಾವುದೇ ಒಂದು ಆಹಾರ ಪದಾರ್ಥವನ್ನು ತೆಗೆದುಕೊಂಡರೂ ಅವರ ಬೆಲೆಗಳು ದಿನೇ ದಿನೇ ಏರುತ್ತಿವೆ. ಇವರು ಆಹಾರ ಧಾನ್ಯಗಳ ಬೆಲೆಯನ್ನು ಹತೋಟಿಗೆ ತರುತ್ತಾರೆಯೇ? ಈ ದೃಷ್ಟಿಯಿಂದ ನಾವೆಲ್ಲರೂ ಆಹಾರ ಧಾನ್ಯಗಳ ಧಾರಣೆಯನ್ನು ಕಡಮೆ ಮಾಡಬೇಕು ಎಂದರೆ ಹೆಚ್ಚಿನ ಧಾರಣೆಯನ್ನು ಕೊಟ್ಟು ಕೊಂಡು ಸಾಮಾನುಗಳನ್ನು ಅವರು ಸಂಗ್ರಹಣೆ ಮಾಡಿದ್ದಾರೆ; ಅದನ್ನು ಸಬ್‌ಸಿಡೈಜ್ ಮಾಡಿ ಕಡಮೆ ದರದಲ್ಲಿ ಹಂಚಿಕೆ ಮಾಡಿ ಬಿಟ್ಟರೆ ಅದು ಕಡಮೆ ಧಾರಣೆಗೆ ದೊರೆಯುತ್ತದೆಯೇ? ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾದ ಒಂದು ಯೋಚನೆಯನ್ನು ಮಾಡಬೇಕಾಗಿತ್ತು ಎಂದು ನನ್ನ ಆಶೆ.

ಆಹಾರ ಧಾನ್ಯಗಳ ಬಗ್ಗೆ ಇನ್ನೊಂದು ವಿಚಾರವನ್ನು ನಾನು ಹೇಳುತ್ತೇನೆ. ಅದೇನೆಂದರೆ, ಈಗ ರಾಜ್ಯಪಾಲರು ತಮ್ಮ ಭಾಷಣದಲ್ಲಿ ದಳ್ಳಾಳಿಗಳಿಂದ ಸಾಗುವಳಿದಾರರ ಶೋಷಣೆಯಾಗದಂತೆ ನೋಡಿಕೊಳ್ಳುವ ಸಲುವಾಗಿ ಸಹಕಾರ ಸಂಘಗಳು ಭತ್ತವನ್ನು ಪೂರ್ತಿಯಾಗಿ ಕೊಂಡುಕೊಳ್ಳುವ ಯೋಜನೆಗೆ ರಾಜ್ಯದ ಎಲ್ಲೆಡೆಗಳಲ್ಲೂ ಸ್ವಾಗತ ದೊರೆತಿರುವುದರಿಂದ ಈ ಯೋಜನೆಯನ್ನು ಈ ವರ್ಷದಲ್ಲಿಯೂ ಮುಂದುವರಿಸುವ ಉದ್ದೇಶವಿದೆ ಎಂದು ಹೇಳಿದ್ದಾರೆ. ಇವರು ದಳ್ಳಾಳಿಗಳನ್ನು ತೆಗೆಯುತ್ತೇವೆಂದರೆ ಆಗ ಸೊಸೈಟಿಗಳೇ ದಳ್ಳಾಳಿಗಳಾಗಿದ್ದುಕೊಂಡು ವ್ಯಾಪಾರ ಮಾಡುತ್ತವೆ. ಹಾಗಾದರೂ ಆಹಾರ ಧಾನ್ಯಗಳು ಜನಗಳಿಗೆ ನೇರವಾಗಿ ದೊರೆಯುತ್ತವೆಯೇ? ಇದರಿಂದ ಏನಾಗುತ್ತದೆ ಎಂದರೆ ಮಧ್ಯಸ್ಥಗಾರರು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅವರು ದೊಡ್ಡವರಾಗುತ್ತಾರೆ. ಆಗಲಿ, ಅದಕ್ಕೆ ನನ್ನ ವಿರೋಧವಿಲ್ಲ. ಅವರು ವ್ಯಾಪಾರವನ್ನು ಮಾಡಿಕೊಳ್ಳಲಿ. ಆದರೆ ಅದರಲ್ಲಿ ಏನು ನ್ಯೂನತೆಗಳಿವೆಯೋ ಅದನ್ನು ಮಾತ್ರ ನಾನು ಹೇಳಬಯಸುತ್ತೇನೆ. ಆಹಾರ ಧಾನ್ಯಗಳ ಬೆಲೆ ಹತೋಟಿಗೆ ಬರಬೇಕಾದರೆ ಅದು ಸರಿಯಾದ ಮಾರ್ಗವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕಾಗಿತ್ತು. ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಪ್ರಸ್ತಾಪವನ್ನು ಮಾಡಬೇಕಾಗಿತ್ತು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಸಕ್ಕರೆಯ ಹಂಚಿಕೆಯ ವಿಚಾರವನ್ನು ನಾನು ಹೇಳುತ್ತೇನೆ. ಇದರೊಳಗೆ ಬಹಳ ಮಟ್ಟಿಗೆ ಜನಗಳಿಗೆ ನ್ಯಾಯ ದೊರೆಯುತ್ತಾ ಇಲ್ಲ. ಎಲ್ಲಿ ಸಕ್ಕರೆ ಸಿಕ್ಕಬೇಕೋ ಅಲ್ಲಿ ಸಿಕ್ಕುತ್ತಿಲ್ಲ. ಯಾರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಿಲ್ಲ. ಸೊಸೈಟಿಗಳ ಮೂಲಕ ಸಕ್ಕರೆಯನ್ನು ಹಂಚುವುದರಲ್ಲಿ ಅನೇಕ ಸಂದರ್ಭಗಳಲ್ಲಿ ಜನಗಳಿಗೆ ಸಕ್ಕರೆ ಸಿಕ್ಕುತ್ತದೆ. ಸಾಮಾನ್ಯವಾಗಿ ಈ ಸಕ್ಕರೆಯನ್ನು ಹಂಚುವುದಕ್ಕೆ ಯಾರಿಗೆ ಕೊಟ್ಟಿದ್ದಾರೆಂದರೆ ತಮಗೆ ಬೇಕಾದವರಿಗೆ ಮತ್ತು ನಾಳೆ ಮುಂದೆ ತಮಗೆ ಯಾರು ಬೇಕಾಗಬಹುದು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಮುಂದಿನ ದೂರಾಲೋಚನೆಯನ್ನು ಇಟ್ಟುಕೊಂಡು ಹೊಸಬರಿಗೆ ಸಕ್ಕರೆ ಹಂಚಿಕೆಯ ಲೈಸನ್ಸ್ ಅನ್ನು ಕೊಟ್ಟಿದ್ದಾರೆ. ಹೀಗಾಗಿ ಯಾರಿಗೆ ಸಕ್ಕರೆ ಬೇಕೋ ಅವರಿಗೆ ದೊರಕುತ್ತಾ ಇಲ್ಲ. ಆದ್ದರಿಂದ ದಯವಿಟ್ಟು ವಿಮರ್ಶೆ ಮಾಡಿ ನೋಡಿ ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಯಾರಿಗೆ ಸಕ್ಕರೆ ಹಂಚಿಕೆಯ ಲೈಸನ್ಸ್ ಅನ್ನು ಕೊಟ್ಟಿದ್ದಾರೆ

ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ರಾಜ್ಯದಲ್ಲಿ ಲಂಚ ಇದೆ, ದುರಾಚಾರ ಇದೆ ಎಂದು ಹೇಳುವ ಜನ, ಮುಖ್ಯ ಮುಖ್ಯವಾದ ಸ್ಥಾನದಲ್ಲಿರತಕ್ಕ ಜನ, ಸರಿಯಾದ ಮಾರ್ಗದಲ್ಲಿ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಲಂಚ ತನ್ನಷ್ಟಕ್ಕೆ ತಾನೇ ಕಡಮೆಯಾಗುತ್ತದೆ. ಸಮಾಜದಲ್ಲಿರತಕ್ಕ ದುಷ್ಟಶಕ್ತಿಗಳು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅದರಿಂದ ಎಲ್ಲರಿಗೂ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಅಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು. ಸಕ್ಕರೆ ಹಂಚಿಕೆಯ ವಿಚಾರದಲ್ಲಿ ಸಾಮಾನ್ಯವಾದ ಒಂದು ಟ್ರೇಡ್ ಚಾನಲ್‌ನಲ್ಲಿ ಹಂಚಿಕೆಯಾಗಿದ್ದರೆ ಆದರಿಂದ ಅಷ್ಟೊಂದು ತೊಂದರೆಯೇನೂ ಆಗುತ್ತಾ ಇರಲಿಲ್ಲ. ಆದಕ್ಕೆ ಕಂಟ್ರೋಲ್ ಹಾಕುವುದರಿಂದ ಕಷ್ಟ ಬರುತ್ತದೆ. ಆದ್ದರಿಂದ ಕಾರ್ಖಾನೆಗಳಲ್ಲಿ ಎಷ್ಟು ಸಕ್ಕರೆ ಉತ್ಪತ್ತಿಯಾಗುತ್ತದೆ ಎಂಬುದನ್ನು ಲೆಕ್ಕ ತೆಗೆದುಕೊಂಡು ಸಕ್ಕರೆ ಮಾರಾಟ ಮಾಡುವುದಕ್ಕೆ ಎಷ್ಟು ಜನಗಳಿಗೆ ಲೈಸನ್ಸ್ ಕೊಟ್ಟಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಸಕ್ಕರೆಯ ಹಂಚಿಕೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಸ್ವಲ್ಪ ಯೋಚನೆ ಮಾಡಿ, ಇನ್ನೂ ಸ್ವಲ್ಪ ಹೆಚ್ಚಿನ ಪ್ರಸ್ತಾಪವನ್ನು ಮಾಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಆದರಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ರಾಷ್ಟ್ರೀಕರಣದ ವಿಚಾರವನ್ನು ಹೇಳಿದ್ದಾರೆ. ಇನ್ನೂ ಅನೇಕ ಕಡೆಗಳಲ್ಲಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದಾರೆ. ಈಗ ನಾನು ಹೇಳತಕ್ಕ ವಿಚಾರ ತಪ್ಪು ಎಂದು ಮಾನ್ಯ ಮಂತ್ರಿಗಳು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಈಗ್ಗೆ ಕೆಲವು ದಿವಸಗಳ ಹಿಂದೆ ಸರ್ಕಾರದವರು ಏನು ಹೇಳಿದ್ದಾರೆಂದರೆ ಈ ರೋಡ್ ಟ್ರಾನ್ಸ್‌ಪೋರ್ಟ್‌ನಿಂದ ಜನಗಳಿಗೆ ಉಪಯೋಗವಾಗಿಲ್ಲ ಎಂದು ಹೇಳಿದರೆ ಅದನ್ನು ಬೇರೆ ಯಾರಿಗಾದರೂ ವಹಿಸಿ ಕೊಡತಕ್ಕ ಯೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಬಸ್ ರೂಟುಗಳನ್ನು ರಾಷ್ಟ್ರೀಕರಣ ಮಾಡಿ ಅದನ್ನು ಯಶಸ್ವಿಯಾಗಿ ನಡೆಸುತ್ತಾರೆ, ಅದರ ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡುತ್ತಾರೆ ಎನ್ನುವ ನಂಬಿಕೆ ಜನತೆಗೆ ಇದ್ದ ಹಾಗೆ ಕಾಣುವುದಿಲ್ಲ. ಎಲ್ಲಿ ಪ್ರಜಾಸರ್ಕಾರ ಜನಗಳ ಉಪಯೋಗಕ್ಕೋಸ್ಕರ ರಾಷ್ಟ್ರೀಕರಣವನ್ನು ಮಾಡುತ್ತಾರೆಯೋ ಅಲ್ಲಿ ಅದು ಜನಗಳಿಗೆ ಉಪಯೋಗವಿಲ್ಲದಿದ್ದರೆ ರಾಷ್ಟ್ರೀಕರಣ ಮಾಡುವುದು ಏತಕ್ಕೆ ಎಂದು ನಾನು ಕೇಳುತ್ತೇನೆ. ಈ ದೃಷ್ಟಿಯಿಂದ ಎಲ್ಲಿ ರಾಷ್ಟ್ರೀಕರಣದಿಂದ ಜನಗಳಿಗೆ ಉಪಯೋಗವಾಗುವುದಿಲ್ಲವೋ ಅಂಥ ಕಡೆ ಸರ್ಕಾರದವರು ಜನಗಳಿಗೆ ಉಪಯೋಗವಾಗುವಂತೆ ವ್ಯವಸ್ಥೆ ಮಾಡುವ ತನಕ ಆ ರೀತಿ ತಯಾರಾಗುವ ತನಕ ರಾಷ್ಟ್ರೀಕರಣ ಮಾಡದೆ ಈಗ ಹಾಲಿ ಇರತಕ್ಕದ್ದನ್ನೇ ಮುಂದುವರಿಸಿಕೊಂಡು ಹೋಗುವುದು ಒಳ್ಳೆಯದು. ರಾಷ್ಟ್ರೀಕರಣವನ್ನು ಮಾಡಿ ಜನಗಳಿಗೆ ಸೌಲಭ್ಯವನ್ನು ದೊರಕಿಸಿ ಕೊಡದಿದ್ದರೆ ಆದರಿಂದ ಪ್ರಯೋಜನವಾಗುವುದಿಲ್ಲ. ಆದ್ದರಿಂದ ರಾಷ್ಟ್ರೀಕರಣದ ವಿಚಾರದಲ್ಲಿ ಒಂದು ನಿಶ್ಚಿತವಾದ ಧೋರಣೆಯನ್ನು ಇಟ್ಟುಕೊಳ್ಳಬೇಕು. ಯಾರೋ ಬೇರೆಯವರು ಹಣವನ್ನು ಸಂಪಾದನೆ ಮಾಡುತ್ತಾರೆಂದು ಬಸ್ ರೂಟನ್ನು ರಾಷ್ಟ್ರೀಕರಣ ಮಾಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇದರಿಂದ ದ್ವೇಷಾಸೂಯೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಬಸ್ ರಾಷ್ಟ್ರೀಕರಣದಿಂದ ಜನರಿಗೆ ಉಪಯೋಗವಾಗುವುದಾದರೆ ಮಾತ್ರ ಅದನ್ನು ರಾಷ್ಟ್ರೀಕರಣ ಮಾಡಬೇಕು. ಈ ವಿಚಾರದಲ್ಲಿ ಸರ್ಕಾರದವರು ಯೋಚನೆ ಮಾಡತಕ್ಕದ್ದು ಬಹಳ ಒಳ್ಳೆಯದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದ ಮೇಲೆ ನಡೆದಂಥ ಚರ್ಚೆಗೆ ಉತ್ತರವನ್ನು ಕೊಡುವಾಗ ತಮ್ಮ ಉತ್ತರವನ್ನು ಹೇಳುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಚಾರವನ್ನು ನಾನು ಹೇಳಬಯಸುತ್ತೇನೆ. ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ನನ್ನ ಮಟ್ಟಿಗೆ ಹೇಳುವುದಾದರೆ ಇದನ್ನು ಸ್ವಲ್ಪ ಪುನರ್‌ವಿಮರ್ಶೆ ಮಾಡುವುದು ಅಗತ್ಯ ಎಂದು ನಾನು ಹೇಳುತ್ತೇನೆ. ಈಗಾಗಲೇ ಎರಡು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಿ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಅರ್ಧ ಕೆಲಸಗಳನ್ನು ಮಾಡಿದ್ದಾರೆ. ಆದರೆ ಈ ಯೋಜನೆಗೆ ಸಂಬಂಧಪಟ್ಟ ಅನೇಕ ಕೆಲಸ ಕಾರ್ಯಗಳಿಗೆ ಅಡಿಗಲ್ಲನ್ನು ಹಾಕಿದ್ದಾರೆ. ಆದರೆ ಆ ಕೆಲಸಗಳು ಪ್ರಾರಂಭವಾಗದೆ ಹಾಗೆಯೇ ಉಳಿದಿವೆ. ಸುಮ್ಮನೆ ಅಡಿಪಾಯವನ್ನು ಹಾಕಿ ಭಾಷಣ ಮಾಡಿ ಬಂದರೆ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ಕೆಲಸಗಳನ್ನು ತೆಗೆದುಕೊಂಡು ಪೂರ್ತಿ ಮಾಡಬೇಕು. ಯೋಜನೆಗಳನ್ನು ಮಾಡಿ ಅದರಿಂದ ಜನಗಳಿಗೆ ಸೌಲಭ್ಯಗಳು ದೊರೆಯದೆ ಇದ್ದರೆ ಯಾವ ಯೋಜನೆಗಳು ಬಂದರೂ ನಮಗೆ ಉಪಯೋಗವಾಗುವುದಿಲ್ಲ. ಯೋಜನೆಗಳು ಬರತ್ತವೆ, ಹೋಗುತ್ತವೆ ಎನ್ನುವ ಮನೋಭಾವನೆ ಜನಗಳಲ್ಲಿ ಬೆಳೆಯಲು ಆಸ್ಪದವಾಗಿದೆ.

ಆದುದರಿಂದ ಇವತ್ತಿನ ದಿವಸ ಜನರಿಗೆ ಪ್ರಯೋಜನವನ್ನು ದೊರಕಿಸಿಕೊಡತಕ್ಕ ರೀತಿಯಲ್ಲಿ ಯೋಜನೆಗಳನ್ನು ಪುನರ್ವಿಮರ್ಶೆ ಮಾಡತಕ್ಕ ಕಾಲ ಬಂದಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಸಾಲವನ್ನು ಎತ್ತಿದ್ದೇವೆ, ದೇಶದ

(ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್)

ಮೇಲೆ ಹೊರೆಯನ್ನು ಹಚ್ಚಿಸಿದ್ದೇವೆ. ಆದರೂ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ ಬಹಳ ಉತ್ಕಟ ಪರಿಸ್ಥಿತಿ ಉಂಟಾಗುತ್ತದೆ ಎಂದು ಹೇಳುತ್ತಾರೆ. ಇದನ್ನು ಸರಿತೂಗಿಸಲು ಇನ್ನೂ ಎಷ್ಟು ತೆರಿಗೆಯನ್ನು ಹಾಕುವುದು ? ತೆರಿಗೆ ಹೆಚ್ಚಿದಷ್ಟೂ ಸಾಮಾನುಗಳ ಧಾರಣೆಗಳೂ ಹೆಚ್ಚುತ್ತ ಹೋಗುತ್ತಿವೆ. ಇದರಿಂದ ಯಾರಿಗೂ ಸುಖ ದೊರೆಯುವುದಿಲ್ಲ. ಹೀಗಿರುವಾಗ ಯಾರಿಗೋಸ್ಕರ ಈ ತತ್ವವನ್ನು ಪ್ರತಿಪಾದನೆ ಮಾಡಬೇಕು ಎಂದು ಯೋಜನೆ ಮಾಡಬೇಕು. ಆದುದರಿಂದ ಯೋಜನೆಗಳಿಂದ ನೇರವಾಗಿ ಜನಗಳಿಗೆ ಉಪಯೋಗ ಆಗುವಹಾಗೆ ಮಾಡಬೇಕು.

ಅನೇಕ ದೊಡ್ಡ ಯೋಜನೆಗಳನ್ನು ಕೈಕೊಂಡು ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುವುದಕ್ಕಿಂತ ತಾತ್ಕಾಲಿಕವಾಗಿ, ಬೇಗ ಪ್ರಯೋಜನವನ್ನು ಕೊಡತಕ್ಕ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಸ್ವಲ್ಪಮಟ್ಟಿಗೆ ಯೋಜನೆಯನ್ನು ಪುನರ್ವಿಮರ್ಶೆ ಮಾಡಿ ತೆರಿಗೆಯ ಭಾರವನ್ನು ಕಡಮೆ ಮಾಡಿದರೆ ಅದರಿಂದ ಜನತೆಗೆ ಅನುಕೂಲವಾಗುತ್ತದೆ. ನಾನು ಯಾರನ್ನೂ ದೂಷಣೆ ಮಾಡಿ ಹೇಳುತ್ತ ಇಲ್ಲ. ಹಳೆಯ ಮೈಸೂರಿನಲ್ಲಿ, ಹೊಸ ರಾಜ್ಯ ರೂಪುಗೊಳ್ಳುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯದಲ್ಲಿ ಆರು ಕೋಟಿ ರೂಪಾಯಿ ಆದಾಯವಿತ್ತು. ಆಗ ಇದ್ದಷ್ಟು ಸೌಖ್ಯ ಈಗ ನೂರು ಕೋಟಿ ರೂಪಾಯಿ ಆದಾಯವಿರುವ ಕಾಲದಲ್ಲಿ ಇಲ್ಲ. ಇದಕ್ಕೆ ಕಾರಣವೇನು ? 25 ರೂಪಾಯಿ ಕೊಡುತ್ತಿದ್ದ ಕಡೆ 75 ರೂಪಾಯಿ ಕೊಟ್ಟರೂ ಕೂಡ ನೆಮ್ಮದಿ ಇಲ್ಲ ಇದಕ್ಕೆ ಕಾರಣವೇನು ಎನ್ನುವುದನ್ನು ವಿಮರ್ಶೆ ಮಾಡಬೇಕು.

ಸ್ವಾಮಿ, ಸಾಮಾನ್ಯ ಜನಗಳಿಗೆ ಪ್ರಯೋಜನವಾಗಬೇಕಾಗಿದೆ. ಇವತ್ತಿನ ಪರಿಸ್ಥಿತಿಯೊಳಗೆ ಫಿಕ್ಸೆಡ್ ಇನ್‌ಕಂ ಗ್ರೂಪ್ ಯಾರಿದ್ದಾರೆ, ಮಧ್ಯಮ ವರ್ಗದ ಜನರು ಯಾರಿದ್ದಾರೆ ಅವರಿಗೆ ಬಹಳ ತೊಂದರೆಯಾಗಿದೆ. ತಿಂಗಳಿಗೆ 75 ರೂಪಾಯಿ ಬರತಕ್ಕವನಿಗೆ ಇವತ್ತಿನ ಧಾರಣೆವಾಸಿಗಳಲ್ಲಿ ಜೀವನವನ್ನು ನಿರ್ವಹಿಸುವುಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರೇ ಅಂಥ ಜನರ ವೇತನವನ್ನು ವಿಮರ್ಶೆ ಮಾಡುತ್ತೇವೆ ಎಂದು ಹೇಳುವಾಗ ನಮ್ಮ ರಾಜ್ಯ ಸರ್ಕಾರವೂ ಕೂಡ ಈ ವರ್ಗದ ಜನರಿಗೆ ಕೊಡತಕ್ಕ ವೇತನಗಳನ್ನು ಪುನರ್ವಿಮರ್ಶೆ ಮಾಡತಕ್ಕ ಕಾಲ ಬಂದಿದೆ. ಇದನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿಯ ವಿಚಾರವನ್ನು ತೆಗೆದುಕೊಂಡರೆ ಇವತ್ತು ಶೇಕಡ 33 ರಷ್ಟು ತೆರಿಗೆಯನ್ನು ಹಾಕುತ್ತಿದ್ದಾರೆ ಇದು ಯಾರ ಅನುಕೂಲಕ್ಕೋಸ್ಕರ ಆಗುತ್ತಿದೆ ಎಂದು ಕೇಳುತ್ತೇನೆ. ಇದು ಸ್ವರಾಜ್ಯವೇ ಅಥವಾ ಪ್ರಜಾರಾಜ್ಯವೇ ಎಂದು ಕೇಳುತ್ತಿದ್ದೇನೆ. ಈ ರೀತಿ ಹೆಚ್ಚು ತೆರಿಗೆಯ ಭಾರವನ್ನು ಹಾಕುತ್ತಿರುವಾಗ ನಮಗೆ ವಿದ್ಯುಚ್ಛಕ್ತಿ ಬೇಡ ಎಂದು ಜನರು ಹೇಳತಕ್ಕ ಅವಕಾಶ ಬರುತ್ತದೆ. ಇಷ್ಟು ಹೆಚ್ಚಾಗಿರುವ ತೆರಿಗೆಯಲ್ಲಿ ರೂಪಾಯಿಗೆ ಅರ್ಧ ನಯೇಪೈಸೆ ರಿಲೀಫ್ ಕೊಡುತ್ತೇವೆ ಎಂದು ದೊಡ್ಡದಾಗಿ ಹೇಳುತ್ತಾರೆ. ಇದರಿಂದ ಲಕ್ಷಾಂತರ ರೂಪಾಯಿ ಕೊಡತಕ್ಕ ದೊಡ್ಡ ದೊಡ್ಡ ಕಾರ್ಖಾನೆಗಳವರಿಗೆ ಉಳಿತಾಯವಾಗಬಹುದೇ ಹೊರತು ಸಣ್ಣಪುಟ್ಟ ಬಳಕೆದಾರರಿಗೆ ಇದರಿಂದ ಏನೂ ಅನುಕೂಲವಾಗುವುದಿಲ್ಲ. ಅವನಿಗೆ ನೂರಕ್ಕೆ 33 ರಂತೆಯೇ ತೆರಿಗೆ ಬೀಳುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೀಗೆಯೇ ಆಗುತ್ತದೆ.

ವಿದ್ಯಾಭ್ಯಾಸದ ಕ್ಷೇತ್ರದೊಳಗೆ ನಮ್ಮಲ್ಲಿ ಪ್ರಗತಿ ಎಷ್ಟಾಗಬೇಕಾಗಿತ್ತೋ ಅದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಿದ್ದಾರೆ. ಹೆಚ್ಚು ಶಾಲೆಗಳನ್ನು ಪ್ರಾರಂಭ ಮಾಡುವುದರಲ್ಲಿ ಪ್ರಗತಿ ಆಗುತ್ತಿದೆ ಅದರ ಜೊತೆಗೆ ಮಕ್ಕಳಿಗೆ ವ್ಯಾಸಂಗ ಮಾಡಲು ಸರಿಯಾದ ಶಾಲಾ ಕಟ್ಟಡಗಳಿಲ್ಲ, ಸ್ಥಳವಿಲ್ಲ. ಇದನ್ನೆಲ್ಲ ಕೊಡತಕ್ಕ ವ್ಯವಸ್ಥೆ ಮಾಡಿಲ್ಲ. ವಿದ್ಯಾಭ್ಯಾಸ ಚೆನ್ನಾಗಿ ಆಗಬೇಕು ಎಂಬ ಇಚ್ಛೆ ಇದ್ದರೆ ಅದಕ್ಕೆ ಬೇಕಾದ ಸೌಕರ್ಯಗಳನ್ನೆಲ್ಲ ಒದಗಿಸಿಕೊಡಬೇಕು. ಇಲ್ಲದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ನಾವು ಆಗಾಗ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಹುಡುಗರಿಗೆ ಮಧ್ಯಾಹ್ನದ ಊಟಕ್ಕಾಗಿ ಕೊಡುವ ಪದಾರ್ಥಗಳು ದುರುಪಯೋಗವಾಗುತ್ತಿವೆ ಎಂದು 'ಕೇರ್' ಸಂಸ್ಥೆಯವರು ಇದಕ್ಕಾಗಿ ಕಳಿಸಿಕೊಟ್ಟ ಹಾಲಿನಪುಡಿ ಮುಂತಾದುವು ದುರುಪಯೋಗವಾಗಿ ಪೋಲೀಸರು ಅವನ್ನು ಪತ್ತೆ ಹಚ್ಚಿ ಕೇಸುಗಳನ್ನು ಹಾಕುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬರುವುದನ್ನು ನಾವು ನೋಡಿದ್ದೇವೆ. ಇದು ಯಾರಿಗೂ ಕೀರ್ತಿಯನ್ನು ತರುವಂಥದಲ್ಲ. ಇದೇ ರೀತಿಯಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಡೆಯುತ್ತಿದೆ. ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ.

ಭ್ರಷ್ಟಾಚಾರ ನಿರ್ಮೂಲನೆಗೆ ಕೇಂದ್ರದ ಮಂತ್ರಿಗಳಾದ ಶ್ರೀ ನಂದಾ ಅವರು ಕ್ರಮ ತೆಗೆದುಕೊಂಡು ರಾಜ್ಯಮಟ್ಟದಲ್ಲಿಯೂ ಅದರ ನಿವಾರಣೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿರುತ್ತಾರೆ. ಈ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳ

ಬಹುದಾಗಿತ್ತು. ಬರೀ ಅಧಿಕಾರಿಗಳ ವಿಚಾರವಲ್ಲ, ಖಾಸಗಿ ಜನಗಳ ವಿಚಾರ ಮಾತ್ರವಲ್ಲ ಮಂತ್ರಿಗಳ ವಿಚಾರ ಮಾತ್ರವಲ್ಲ ಎಲ್ಲರಿಗೂ ಅನ್ವಯಿಸುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಯಾವ ರೀತಿಈ ಸಮಸ್ಯೆಯನ್ನು ನಿರ್ಮೂಲ ಮಾಡಬೇಕು, ಎಂದು ನೋಡಬೇಕು. ಯಾರೋ ಕೆಲವು ವ್ಯಕ್ತಿಗಳನ್ನು ಹಿಡಿದು ಅವರನ್ನು ಶಿಕ್ಷೆ ಮಾಡತಕ್ಕ ಪ್ರಶ್ನೆಯಲ್ಲ. ಅದಕ್ಕೆ ಇರತಕ್ಕ ಕಾರಣಗಳೇನು ಎನ್ನುವುದನ್ನು ಕೂಡ ಗೊತ್ತು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಕೆಲಸ ಕಾರ್ಯಗಳಾಗ ಬೇಕಾಗುತ್ತವೆ.

ಪಂಚವಾರ್ಷಿಕ ಯೋಜನೆಗಳ ಪುನರ್ವಿಮರ್ಶೆಯಾಗಬೇಕು ಎಂದು ಹೇಳುವಾಗ ಒಂದು ವಿಷಯವನ್ನು ಮರೆತಿದ್ದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರಾಗಿರುವವರ ಸಂಖ್ಯೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟೆಷ್ಟಿದೆಯೋ ಅವರಿಗೆ ಕೆಲಸವನ್ನು ಒದಗಿಸಿಕೊಡು ತ್ತೇವೆಂದು ಯೋಜನೆಯನ್ನು ಹಾಕಿದ್ದೇವೆ. ಆದರೆ ಆ ಮಟ್ಟದಲ್ಲಿ ಫಲವನ್ನು ಸಾಧಿಸಿದ್ದೇವೆಯೋ ಎಂದರೆ ಇಲ್ಲ. ಎಷ್ಟು ಮಟ್ಟಿಗೆ ಜನಗಳಿಗೆ ಸೌಲಭ್ಯಗಳು ದೊರೆಯುವಂತೆ ಮಾಡಬೇಕಾಗಿತ್ತೋ ಅಥವಾ ಕೆಲಸವನ್ನು ದೊರಕಿಸಿಕೊಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ಆಗುತ್ತ ಇಲ್ಲ. ಇದರಿಂದ ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದನ್ನು ಕೂಡ ಗಮನದಲ್ಲಿಟ್ಟು ಕೊಂಡು ಯೋಜನೆಗಳ ಪುನರ್ವಿಮರ್ಶೆ ಮಾಡಬೇಕಾಗಿದೆ.

ಕಡೆಯದಾಗಿ ಕೃಷ್ಣ ಗೋದಾವರಿ ನೀರಿನ ವಿಚಾರದಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿ ದ್ದಾರೆ. ಈ ಬಗ್ಗೆ ನಿನ್ನೆ ಪಾರ್ಲಿಮೆಂಟಿನಲ್ಲಿ ಕೂಡ ಹೇಳಿದ್ದಾರೆ. ಇದರ ಬಗ್ಗೆ ಅಸೆಂಬ್ಲಿಯೊಳಗೆ ಭಾಷಣಗಳನ್ನು ಮಾಡಿದರೆ ಏನೂ ಸಾಧ್ಯವಾಗುವುದಿಲ್ಲ. ಕೆಲಸವಾಗಬೇಕು. ಅದಕ್ಕೆ ಖಚಿತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಶ್ರೀ ಗಂಗಾಧರ ನಾಮೋಶಿಯವರು ಹೇಳಿದ ಹಾಗೆ ಎಲ್ಲಿ ಕಟ್ಟೆ ಕಟ್ಟಬೇಕು ಎನ್ನುವ ಜಿಜ್ಞಾಸೆ ಇದೆ. ಆಲಮಟ್ಟಿಯಲ್ಲಿ ಕಟ್ಟಬೇಕೇ ಅಥವಾ ನಾರಾಯಣಪುರ ದಲ್ಲಿ ಕಟ್ಟಬೇಕೇ ಎಂಬ ಜಿಜ್ಞಾಸೆ ಇದೆ. ನಾವು ಹೀಗೆ ಜಿಜ್ಞಾಸೆ ಮಾಡುತ್ತ ಕುಳಿತುಕೊಂಡರೆ ಎರಡನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ, ಮತ್ತು ಇದರಿಂದ ಇನ್ನೊಬ್ಬರಿಗೆ ಉಪಯೋಗ ವಾಗುತ್ತದೆ. ಇದನ್ನು ಗಮನಿಸಿ ಬೇಗ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

1972 ರ ಒಳಗಾಗಿ ಕಾವೇರಿ ನದಿ ನೀರಿನ ಬಗ್ಗೆ ಆಗಿರುವ ಒಪ್ಪಂದ ಮುಗಿಯುತ್ತದೆ. ಅಷ್ಟರೊಳಗಾಗಿ ಅದರಿಂದ ನಮಗೆ ಬರುವ ನೀರನ್ನೂ ಉಪಯೋಗ ಮಾಡಿಕೊಳ್ಳಬೇಕು. ಆದರೆ ರಾಜಕೀಯ ಗೊಂದಲಗಳಿಗೆ ಸಿಕ್ಕಿ, ಪ್ರಭಾವಗಳಿಗೆ ಸಿಕ್ಕಿ ಯಾವ ನದಿ ನೀರನ್ನು ಉಪಯೋಗಿಸಿ ಕೊಳ್ಳುವ ಕಾರ್ಯಗಳು ನಡೆಯದೆ ಹೋಗಬಹುದು ಎಂದು ನನಗನ್ನಿಸುತ್ತದೆ. ಕಾವೇರಿ ಪಾತ್ರದ ಕೆಲಸಗಳೂ ಆಗುವುದಿಲ್ಲ, ಕೃಷ್ಣ ಗೋದಾವರಿ ಕೆಲಸಗಳೂ ಆಗುವುದಿಲ್ಲ, ಮತ್ತು ನಾವು ನಮ್ಮ ಹಕ್ಕುಗಳನ್ನು ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ಒಪ್ಪಿಕೊಂಡ ಕಾರ್ಯಕ್ರಮವನ್ನು ಮಾಡುವುದಿಲ್ಲ. ಎಲ್ಲಿ ಸಾವಿರದ ಐನೂರು ಎಕರೆ ಕಾಫಿತೋಟ ಮುಳುಗಡೆ ಯಾಗುತ್ತದೆಂಬೋ ಅದೇ ಮುಖ್ಯವಾಯಿತು. ಒಂದು ಲಕ್ಷದ ಐದ ನೂರು ಎಕರೆ ನೀರಾವರಿಗೆ ಬರುತ್ತದೆಂಬ ವಿಷಯವನ್ನು ಮರೆತರು. ಇದೀ ದೇಶ ಪ್ರಗತಿಯಾಗುವುದು ಮುಖ್ಯ, ಇಂತಹ ಕೆಲಸ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಬೇಕು ಅದನ್ನು ಬಿಟ್ಟು ಕೆಲವು ಜನರ ಹಿತವನ್ನು ಮಾತ್ರ ನೋಡಿ ಕೆಲಸ ಮಾಡಿಕೊಂಡು ಹೋದರೆ ಪ್ರಯೋಜನವಿಲ್ಲ. ಇದೇ ರೀತಿಯ ದೃಷ್ಟಿಯಿದ್ದರೆ ಕಾವೇರಿ ಯೋಜನೆಯನ್ನೂ ಕೈಬಿಡಬೇಕಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿ ಅನುಕೂಲ ವಾಗಿಲ್ಲ, ಅಲ್ಲದೆ ಜನರ ಪ್ರಭಾವವೂ ಹೆಚ್ಚಾಗಿದೆ. ಹೀಗಾದರೆ ಒಟ್ಟಿನಲ್ಲಿ ತೊಂದರೆಯಾಗುತ್ತದೆ. ಯಾರ ಪ್ರಭಾವದ ಬಲಗೂ ಬಲಿಯಾಗದೆ ಕಂಬದ ಕಡೆ ಜಲಾಶಯವನ್ನು ಯಾವುದಾದರೊಂದು ಕಡೆ ಕಟ್ಟಬೇಕು. ಕಾಫಿತೋಟದ ಮಾಲೀಕರಾದ ಕೆಲವರ ಹಿತ ದೇಶದ ಹಿತಕ್ಕಿಂತ ದೊಡ್ಡದಲ್ಲ. ಇಂತಹ ಪರಿಸ್ಥಿತಿ ದೇಶದಲ್ಲಿ ಬರಬಾರದು. ಇಷ್ಟು ಹೇಳಲು ನನಗೆ ಅವಕಾಶವಿತ್ತುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

5-00 P.M.

†ಶ್ರೀ ಪಿ. ಎಂ. ದೇವ್.—ಸ್ವಾಮಿ, ಇದಕ್ಕೆ ಗವರ್ನರ್ಸ್ ಅಡ್ರೆಸ್ ಎಂಬ ಹೆಸರಿದೆ, ಇದು ತಪ್ಪು ಹೆಸರು ಎಂದು ಕಾಣುತ್ತದೆ, ತಪ್ಪು ಪದವನ್ನು ಪ್ರಯೋಗಿಸಿದ್ದಾರೆ. ಕಾರಣವೇನೆಂದರೆ, ಯಾರೋ ಸೆಕ್ರೆಟರಿ ಮೈಸೂರು ರಾಜ್ಯದ ಹಿಸ್ಟಾರಿಕಲ್ ರೆಕಾರ್ಡ್ ಬರೆದು ಮಂತ್ರಿಗಳ ಮುಂದಿಟ್ಟಿದ್ದಾರೆ, ಆದಕ್ಕೆ ಅವರು ಆಸ್ತು ಎಂದಿದ್ದಾರೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಯಾವ ಪುಸ್ತಕವನ್ನು ಓದಿದರೂ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿಯೂ ಒಂದು ಭಾವನೆ ಬರುತ್ತದೆ.

(ಶ್ರೀ ವಿ. ಎಂ. ದೇವ್)

ಈ ದೃಷ್ಟಿಯಿಂದ ನೋಡಿದರೆ ಸರಕಾರದ ಪರಿಸ್ಥಿತಿಯ ಅರಿವಿನಿಂದ ಯಾವ ಭಾವನೆಯೂ ಉದ್ಭವವಾಗುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ವಿಶಾಲದೃಷ್ಟಿಯಿಂದ ತಾತ್ವಿಕವಾಗಿ ಮುಂದೆ ಸರಕಾರ ಮಾಡಬೇಕಾದ ಕರ್ತವ್ಯದ ರೂಪರೇಷೆಗಳು ಸೂಕ್ಷ್ಮವಾಗಿಯೂ ಸಂಕ್ಷೇಪವಾಗಿಯೂ ಬರಬೇಕು. ಮಂತ್ರಿ ಮಂಡಲದ ವಿಷಯದಲ್ಲಿ ಶ್ರೀ ಮಾನ್ ಶಿವಪ್ಪನವರು ಹೇಳಿದುದು ಸತ್ಯವೆಂದು ಕಾಣುತ್ತದೆ. ದೇಶದ ತುರ್ತುಪರಿಸ್ಥಿತಿಯಲ್ಲಿ ಆಡಳಿತ ದಕ್ಷತೆಯಿಂದ ನಡೆಯಬೇಕು. ಎರಡು ವರ್ಷಗಳ ಹಿಂದೆ ನಾನು ಈ ಸಭೆಗೆ ಬಂದೆ. ಮೊದಲು ಈ ಸಭೆಯಲ್ಲಿ ಮೂರು ಮತ್ತೊಂದು ಜನ ಮಂತ್ರಿಗಳು ಇಲ್ಲಿ ಇರುತ್ತಿದ್ದರು. ಒಂದು ವಿಷಯವನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ನಾನು ಹೇಳುವ ವಿಷಯದ ಬಗ್ಗೆ ಮಂತ್ರಿ ಮಂಡಲದ ತೀರ್ಮಾನವಾಗಬೇಕಾಗುತ್ತದೆ. ನಾನು ಹೇಳುವ ಕೆಲವು ವಿಷಯಗಳನ್ನು ಚೆನ್ನಾಗಿ ಕೇಳಬೇಕು. ಈ ದೃಷ್ಟಿಯಿಂದ ತಮ್ಮನ್ನು ಗಂಭೀರವಾಗಿಯೂ ಗೌರವಯುತವಾಗಿಯೂ ಕೇಳಿಕೊಳ್ಳುತ್ತಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವ ಕಾಲದಲ್ಲಿ ಮಂತ್ರಿಗಳು ಸಭೆಯಲ್ಲಿರಬೇಕು. ಅವರು ಇನ್ನೂ ಸ್ವಲ್ಪ ಹೆಚ್ಚು ಶ್ರಮವಹಿಸಲಿ. ರಾಜ್ಯಪಾಲರ ಭಾಷಣದಲ್ಲಿ ವಿಶಾಲದೃಷ್ಟಿಯಿಂದ ತಾತ್ವಿಕ ಮಾರ್ಗದಲ್ಲಿ ರೂಪುರೇಷಗಳನ್ನು ನಿರೂಪಿಸಬೇಕಾಗಿತ್ತು ಎಂದು ಹೇಳಿದೆನಷ್ಟೆ. ಇದನ್ನು ಮಂತ್ರಿಗಳು ತಿಳಿದುಕೊಳ್ಳಬೇಕಾಗಿತ್ತು. ನಮ್ಮ ದೇಶದ ರಾಜಕೀಯ ಮೈಲಿಗಲ್ಲುಗಳಲ್ಲಿ ಇಷ್ಟು ದಿವಸವಾದ ಮೇಲೆ ವಿಚಾರ ಮಾಡಿ, ಮಥನ ಮಾಡಿ ಸೋಷಿಯಲಿಸ್ಟಿಕ್‌ಪ್ಯಾಟರ್ನ್ ಸೊಸೈಟಿ ಎಂದು ತಂದರು, ಆಮೇಲೆ ಡೆಮೋಕ್ರ್ಯಾಟಿಕ್ ಸೋಷಿಯಲಿಸಂ ಎಂದಾಯಿತು. ಆದರೆ ಈಗ ಏನೂ ಸಿಕ್ಕದೇ ಹೋಗಿದೆ. ಇದೊಂದು ಮುಖ್ಯ ಪ್ರಶ್ನೆ, ಒಂದು ತಾತ್ವಿಕವಾದ ತೀರ್ಮಾನಕ್ಕೆ ಬಂದಿದ್ದೇವೆ. ಈ ಎರಡು ಹೆಸರುಗಳು ಏಕೆ ಬಂದವೋ ಗೊತ್ತಿಲ್ಲ. ಸೋಷಿಯಲಿಸಂ ಎಂದರೆ ಡಿಕ್ಟೇಟರ್‌ಷಿಪ್ ಎಂದು ಕೆಲವರ ಅಭಿಪ್ರಾಯವಾಗಿದೆ; ಆದರೆ ಏನಾದರೂ ಡೆಮೋಕ್ರೆಸಿಯನ್ನು ಕೈಬಿಡುವುದಿಲ್ಲವೆಂದು ತೋರಿಸಲು ಹೀಗೆ ಬದಲಾವಣೆ ಮಾಡಿದ್ದಾರೆಂದು ಕಾಣುತ್ತದೆ. ಸಮಾಜವಾದದ ರೀತಿ ಎರಡು ಕೆಲಸ ಮಾಡಬೇಕಾಗಿದೆ. ಸೋಷಿಯಲಿಸಂ ಹಾಗೂ ಡೆಮೋಕ್ರೆಸಿಯನ್ನು ಉಳಿಸಿಕೊಳ್ಳಬೇಕು. ಸತ್ವಹೀನ ಮಂತ್ರಿ ಮಂಡಲವೆಂದು ನಾನು ಹಿಂದೆ ಒಂದು ಸಾರಿ ಹೇಳಿದ್ದೆ. ದೊಡ್ಡ ಮನಸ್ಸು ಮಾಡಿ ಮಂತ್ರಿಗಳಿಗೆ ಹೇಳಿ ಕಳುಹಿಸಿ ಅವರು ಇಲ್ಲಿರುವಂತೆ ಮಾಡಬೇಕು. ನಾನಾಗಲೇ ಹೇಳಿದಂತೆ ರಾಜ್ಯಪಾಲರ ಭಾಷಣ ಮೈಸೂರು ಸರಕಾರದ ಒಂದು ಹಿಸ್ಟಾರಿಕಲ್ ರಿಕಾರ್ಡ್ ಆಗಿದೆ. ಯಾರೋ ಸೆಕ್ರೆಟರಿ ಬರೆದಹಾಗಿದೆ. ಹೀಗಿರುವಾಗ ಇದು ಗವರ್ನರರ ಭಾಷಣವಲ್ಲ. ಹಿಸ್ಟಾರಿಕಲ್ ರಿಕಾರ್ಡ್ ಎಂದರೆ, ಎಷ್ಟು ಖರ್ಚಾಗಿದೆ, ಎಷ್ಟು ಹಣ ವಸೂಲಾಗಿದೆ ಎಂಬ ಬಗ್ಗೆ ವರದಿ ಕೊಟ್ಟಿದ್ದಾರೆ. ಒಂದು ಸಮ್ಮರಿ, ಎಂದರೆ ಸಂಕ್ಷಿಪ್ತ ವರದಿಯಂತಿದೆ. ಮಂತ್ರಿಗಳಾಗಿ ಅವರ ಕೆಲಸವನ್ನು ಅವರು ಮಾಡಬೇಕು; ಅವರು ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳಾಗಬಾರದು. ಈ ಭಾಷಣದಲ್ಲಿ ನೀತಿಯ ವಿಚಾರವೇ ಇಲ್ಲ. ಏನೋ ಗವರ್ನರರ ಅಡ್ರೆಸ್ ಎಂದು ಬರೆದಿದ್ದಾರೆ. ಈ ಚರ್ಚೆಯ ಕಾಲದಲ್ಲಿ ಇಲ್ಲಿ ಮಂತ್ರಿಗಳೇ ಇಲ್ಲ; ಹೀಗಿರುವಾಗ ವಿರೋಧಪಕ್ಷದವರು ಗಂಟಲು ಕಿತ್ತುಕೊಂಡರೇನು ಪ್ರಯೋಜನ? ಮಂತ್ರಿಗಳು ಪಕ್ಷಭಾವನೆಯನ್ನು ಬಿಟ್ಟು ಕಾರ್ಯಕ್ಕೆ ಇಳಿಯಬೇಕು. ತಿಳಿದವರು ಹೇಳುತ್ತಾರೆ ದೇಶದ ಗಂಡಾಂತರದ ಸಮಯದಲ್ಲಿ ತುರ್ತು ಪರಿಸ್ಥಿತಿ ಹೆಚ್ಚಾಗಿದೆ; ಚೈನ ಮತ್ತು ಪಾಕಿಸ್ತಾನ ಒಟ್ಟುಗೂಡಿ ಕಾರ್ಯಾಚರಣೆ ನಡೆಸುತ್ತಿವೆ. ಈ ದೃಷ್ಟಿಯಿಂದ ನೋಡಿದರೆ ಈ ರಾಜ್ಯಪಾಲರ ಭಾಷಣ ನೋಡಿದರೆ ಇದು ಆದರ್ಶವಾದ ರಾಜ್ಯಪಾಲರ ಭಾಷಣವಲ್ಲವೆಂದು ಹೇಳಬೇಕಾಗಿದೆ. ಇದನ್ನು ನಾನು ವಾಪಸ್ ತೆಗೆದುಕೊಂಡು ಮತ್ತೆ ಬೇರೆ ಭಾಷಣ ಮಾಡಬೇಕೆಂದು, ಹೋದ ಸಾರಿ ಹೇಳಿದೆ; ಆದರೆ ಅಧ್ಯಕ್ಷರು ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು, ಆಗಬಾರದುದಾದರೆ ಮಾಡಬಾರದುದನ್ನು ಮಾಡಬೇಕಾಗುತ್ತದೆ. ಹೆಚ್ಚು ಆಹಾರ ಉತ್ಪತ್ತಿ ಮಾಡುವುದಕ್ಕೋಸ್ಕರ ಏನು ಕಾರ್ಯಕ್ರಮ ಕೈಕೊಂಡಿದ್ದಾರೆ? ಯಾವ ರೀತಿ ಕಾರ್ಯಗತ ಮಾಡಿದ್ದಾರೆ? ಬರೀ ಪುಸ್ತಕದಲ್ಲಿ ಬರೆದಿದ್ದಾರೆಯೇ ವಿನಾ ಯಾವ ರೀತಿಯಿಂದಲೂ ಕಾರ್ಯಗತವಾಗಿಲ್ಲ. ಈ ವಿಚಾರದಲ್ಲಿ ಪ್ರಗತಿ ಶೂನ್ಯವಾಗಿದೆ ಎಂದು ಹೇಳಬಹುದು. ಇದು ಸರಿಯಲ್ಲ. ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಇವತ್ತಿನ ದಿವಸ ಅತ್ಯಗತ್ಯವಾಗಿದೆ.

ಇನ್ನು ಎರಡನೇ ಪ್ಯಾರಾದಲ್ಲಿ ಹೋಂ ಗಾರ್ಡ್ಸ್ ಬಗ್ಗೆ ನಮ್ಮ ರಾಜ್ಯಪಾಲರವರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯ ಸರಕಾರದ ಹತ್ತಿರ ಫೈಟಿಂಗ್‌ಫೋರ್ಸ್ ಇಲ್ಲ. ಕಾನೂನು ಮತ್ತು ಶಿಸ್ತು ರಕ್ಷಣೆಗಾಗಿ ಪೋಲೀಸ್ ಇಲಾಖೆ ಇದೆ. ಈ ತುರ್ತು ಪರಿಸ್ಥಿತಿಯಲ್ಲಿ ಸಾಮಾನ್ಯ ಜನರಿಗೆ ಮಿಲಿಟರಿ ಶಿಕ್ಷಣ ಕೊಡಬೇಕಾದುದು ಅಗತ್ಯ. ಇದಕ್ಕಾಗಿ ಒಂದು ಯೋಜನೆ ಮಾಡಿ ಸಾಮಾನ್ಯ ಜನರಿಗೆ ಕೂಡ ಶಿಕ್ಷಣ ದೊರೆಯುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ

ಸೂಚಿಸ ಬಯಸುತ್ತೇನೆ. ಏಕೆಂದರೆ ಹೋರಾಟದ ಬಗ್ಗೆ ಜನರಿಗೆ ಟ್ರೇನಿಂಗ್ ಕೊಡಬೇಕಾದುದು ಅವಶ್ಯಕ.

ಸಹಕಾರ ಸಂಘಗಳ ವಿಚಾರದಲ್ಲಿ ಸರಕಾರದವರು ಒಳ್ಳೇ ಕೆಲಸ ಮಾಡಿದ್ದಾರೆಂದು ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಈ ಬಗ್ಗೆ ನಾನು ಅವರನ್ನು ವಂದಿಸುತ್ತೇನೆ ಆದರೆ ಕಳೆದ ಎರಡು ವರ್ಷಗಳಿಗಿಂತಲೂ ಇಂದು ಆಹಾರ ಧಾನ್ಯಗಳ ಬೆಲೆ ಆದರಲ್ಲೂ ಬತ್ತದ ಬೆಲೆ ಜಾಸ್ತಿಯಾಗಿದೆ. ಅದರಿಂದ ಅಕ್ಕಿಯ ಬೆಲೆ ಜಾಸ್ತಿಯಾಗಿದೆ. ಬೆಲೆ ಏರಿಕೆಯ ಕಡೆ ಸರಕಾರ ಗಮನ ಕೊಟ್ಟು ಬೆಲೆ ಏರಿಕೆಯನ್ನು ತಡೆಗಟ್ಟಬೇಕಾದುದು ಅತ್ಯಗತ್ಯವಾದುದು. ರೈತರಿಗೆ ಜಮೀನು ಕೊಡುವುದು, ಸಾಲ ಕೊಡುವುದು ಇದರಿಂದ ಅಷ್ಟು ಪ್ರಯೋಜನವಾಗಿರುವುದಿಲ್ಲ. ಈ ಬಗ್ಗೆ ತಜ್ಞರ ಸಲಹೆ ತೆಗೆದು ಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರಕಾರಕ್ಕೆ ಸೂಚಿಸ ಬಯಸುತ್ತೇನೆ.

ಇನ್ನು ಡಿಸ್ಪೋಜಲ್ ಆಫ್ ಕಲ್ಟಿವೆಬಲ್ ಲ್ಯಾಂಡ್ಸ್ ಬಗ್ಗೆ ನಮ್ಮ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಭಾಷಣದಲ್ಲಿ ಹೇಳಿರುವ ಹಾಗೆ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಈ ವಿಚಾರದಲ್ಲಿ ಆಳವಾಗಿ ಯೋಚನೆ ಮಾಡಿ ವಿಶಾಲ ದೃಷ್ಟಿಯಿಂದ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ನಮ್ಮ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಮಾವತಿ ಪ್ರಾಜೆಕ್ಟ್ ಬಗ್ಗೆ ಪ್ರಸ್ತಾಪ ಮಾಡಿ ಈ ಯೋಜನೆಯನ್ನು ಬೇಗನೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯ ದೃಷ್ಟಿಯಿಂದ ಈ ಯೋಜನೆ ಬಹಳ ಮಹತ್ವದ್ದಾಗಿದೆ. ನಮ್ಮ ಜಿಲ್ಲೆಯ ಜನರಿಗೆ ಈ ಯೋಜನೆಯಿಂದ ನೀರಿನ ಅನುಕೂಲವಾಗುವುದು. ಈ ಹೇಮಾವತಿ ಯೋಜನೆಯ ಕಟ್ಟೆಯ ಎತ್ತರ ಹೆಚ್ಚು ಮಾಡಿ ಜನರಿಗೆ ಅನುಕೂಲ ಒದಗಿಸಿ ಕೊಡಬೇಕೆಂದು ನಾನು ಹೇಳಲು ಇಚ್ಛಿಸುತ್ತೇನೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಒಂದು ಮಾತನ್ನು ಖಚಿತವಾಗಿ ಹೇಳುತ್ತೇನೆ. ಭೂ ಸುಧಾರಣೆ ಕಾನೂನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಒತ್ತಾಯ ಪೂರ್ವಕ ಹೇಳುತ್ತೇನೆ.

ಇದುವರೆಗೆ ನಾನು 50 ರೂಪಾಯಿಯನ್ನು ನ್ಯಾಷನಲ್ ಡಿಫೆನ್ಸ್ ಫಂಡಿಗೆ ಕೊಡುತ್ತಾ ಇದ್ದೆ. ಇಷ್ಟು ಮಾಡದೆ ಹೋದರೆ ನನ್ನ ಕರ್ತವ್ಯ ಮಾಡಿದ ಹಾಗಾಗುವುದಿಲ್ಲ. ಆದ್ದರಿಂದ ಆ ಹಣವನ್ನು ಕೊಡುವುದಿಲ್ಲ ಎಂದು ಹೇಳಲು ಪ್ರಾಣ ಹೋದ ಹಾಗೆ ಅನ್ನಿಸುತ್ತದೆ. ಈ ರಾಷ್ಟ್ರದ ಗಂಡಾಂತರ ಸಮಯದಲ್ಲಿ ಎನ್. ಡಿ. ಎಫ್. ಗೆ ಕೊಡುವುದನ್ನು ನಿಲ್ಲಿಸುವುದರಿಂದ ಕರ್ತವ್ಯ ವಿಮುಕ್ತನಾಗಿ ನನ್ನ ವ್ಯಕ್ತಿತ್ವಕ್ಕೆ, ರಾಷ್ಟ್ರೀಯ ತತ್ವಕ್ಕೆ ಧಕ್ಕೆ ತರುತ್ತೇನೇನೋ ಎಂದು ಯೋಚನೆ ಮಾಡಿದಾಗ ನನ್ನ ಮನಸ್ಸಿಗೆ ನೋವಾಗುತ್ತದೆ. ಇನ್ನೊಂದು ಸಾರಿ ಇಷ್ಟು ಮಾಡಿದರೂ, ನೀವು ಸರಿಯಾದ ಡಿಸಿಷನ್ ತೆಗೆದುಕೊಳ್ಳದೇ ಹೋದರೆ ರಾಷ್ಟ್ರದ ಗಂಡಾಂತರವನ್ನು ಗೆಲ್ಲುವುದಕ್ಕೆ ಸಾಧ್ಯವೆ ಎಂದೆನಿಸುತ್ತದೆ. ನಾನು ವಾಮ ಮಾರ್ಗ ಹಿಡಿದರೂ, ನಾನು ಇದುವರೆಗೆ ಪ್ರತಿ ತಿಂಗಳೂ N. D. F. ಗೆ ಕೊಡುತ್ತಿದ್ದ 50 ರೂಪಾಯಿಯನ್ನು ನಿಲ್ಲಿಸಿಬಿಡುತ್ತೇನೆ. ನೀವು ಯಾವಾಗ ಡಿಸಿಷನ್ ತೆಗೆದುಕೊಳ್ಳುತ್ತೀರೋ, ಆಗ ಆ ಹಣವನ್ನು ನಿಮಗೆ ಕೊಡುತ್ತೇನೆ. ಅಲ್ಲಿಯವರೆಗೆ ಅ ಹಣವನ್ನು ಹಾಗೆಯೇ ಇಟ್ಟಿರುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಸಮರ್ಥಿಸುತ್ತೇನೆ; ಮತ್ತು ಅವರು ಸಂಪ್ರದಾಯದಂತೆ ಇಂಗ್ಲೀಷಿನಲ್ಲಿ ಭಾಷಣ ಮಾಡದೆ ರಾಜ್ಯ ಭಾಷೆಯಾದ ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕೆ ಅವರಿಗೆ ವಿಶೇಷ ಅಭಿನಂದನೆಗಳನ್ನು ಕೊಡುತ್ತೇನೆ. ಅಷ್ಟು ಮಾತ್ರವಲ್ಲದೆ ಹೀಗೆಯೇ ಕನ್ನಡದ ಬಳಕೆಯು ರಾಜ್ಯದಲ್ಲಿ ಅಧಿಕಾರ ಮಟ್ಟದಲ್ಲಿಯೂ ಮತ್ತು ಪ್ರತಿ ಇಲಾಖೆಯಲ್ಲಿಯೂ ಹೆಚ್ಚು ಹೆಚ್ಚಾಗಿ ದಿನೇ ದಿನೇ ಶೀಘ್ರವಾಗಿ ಬೆಳೆದು ಬರಲಿ ಎಂದು ಅಪೇಕ್ಷಿಸುತ್ತೇನೆ.

ಈ ಭಾಷಣವನ್ನು ಕುರಿತು ಕೆಲವು ಸ್ನೇಹಿತರು ಕೆಲವೊಂದು ವಿಚಾರಗಳ ಮೇಲೆ ಮಾತನಾಡಿದರು. ಮುಖ್ಯವಾಗಿ ಇರುವ ಸಮಯ ಅಲ್ಪ ಸ್ವಲ್ಪವಾದ ಕಾರಣ, ನಾನು ಒಂದು ವಿಷಯದಲ್ಲಿ ಮಾತ್ರ ಒಂದೆರೆಡು ಮಾತುಗಳನ್ನಾಡಬೇಕಾಗಿದೆ. ಷೆಡ್ಯೂಲ್ಡ್ ಟ್ರೈಬ್ಸ್ ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಸಂಬಂಧದ ವಿಚಾರದಲ್ಲಿ ಭಾಷಣದ 32 ನೇ ಪೇಜಿನಲ್ಲಿ ವಿವರವಾಗಿ ಹೇಳಿದ್ದಾರೆ. ನಾನು ಒಂದು ಮಾತು ಹೇಳುವುದೇನೆಂದರೆ, ಎಷ್ಟೋ ವರ್ಷಗಳಿಂದ ಕಾಡು ಗುಡ್ಡಗಳಲ್ಲಿದ್ದು, ಕಾಡು ಗುಡ್ಡವನ್ನು ಕಡಿದು, ಗುಡ್ಡವನ್ನು ಬಯಲು ಮಾಡಿದ ಗುಡ್ಡಗಾಡು ಜನರಿಗೆ ಇನ್ನೂ ಸಹ ಸ್ವಂತ ಭೂಮಿ ಇಲ್ಲದೆ, ವಿದ್ಯಾವಂತರಾಗದೆ ಗುಲಾಮಗಿರಿಯಲ್ಲಿದ್ದಾರೆ. ಅವರನ್ನು ಮಾನವೀಯತೆಯ ದೃಷ್ಟಿಯಿಂದ ನೋಡದೆ ಕಡೆಗಣ್ಣಿನಿಂದ ನೋಡಲಾಗುತ್ತಿದೆ. ಅವರ ಬಗ್ಗೆ ಹಾಕಿಕೊಂಡ ಕಾರ್ಯಕ್ರಮ ಅಥವಾ ಅಳವಡಿಸಿದ ತತ್ವ ಚೆನ್ನಾಗಿದ್ದರೂ, ಅದರ ನಿರ್ವಹಣೆಯಲ್ಲಿ ಅವು ಸರಿಯಾಗಿ ಪರಿಪಾಲನೆಯಾಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅಷ್ಟು ಮಾತ್ರವಲ್ಲದೆ ಭಾಷಣದ 32 ನೇ ಪುಟದಲ್ಲಿ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಹೇಳಿದ್ದಾರೆ: "ರಾಜ್ಯದ ವಿವಿಧ ಭಾಗಗಳಲ್ಲಿರುವ ಅನುಸೂಚಿತ ಹಾಗೂ ಪಂಗಡದವರ ವರ್ಗೀಕರಣದ ಸಂಬಂಧದಲ್ಲಿರುವ ವ್ಯತಿ ಕ್ರಮಗಳನ್ನು ನಿವಾರಿಸಲು ಅನುಸೂಚಿತ ಜಾತಿ ಮತ್ತು ಪಂಗಡದವರ ಸಂಬಂಧದಲ್ಲಿ ಏಕಪ್ರಕಾರವಾದ ಒಂದು ಪಟ್ಟಿಯನ್ನು ತಯಾರಿಸಿ ಅದನ್ನು ಅನುಸರಿಸುವ ವಿಚಾರದಲ್ಲಿ ಭಾರತ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ." ಇಲ್ಲಿ ಒಂದು ಸೂಚನೆ ಹೇಳಿದ್ದಾರೆ, ಅದು ಒಳ್ಳೆಯದು. ಅವರಲ್ಲಿ ನಿಜವಾಗಿ ಮುಂದುವರಿದವರಿದ್ದರೆ, ಅವರನ್ನು ಸ್ಥಾನಮಾನದಲ್ಲಿ ಏರಿಸುವುದು ಒಳ್ಳೆಯದು. ಆದರೆ ಈ ನೆಲೆಯಿಂದ ಸರ್ಕಾರ ನ್ಯಾಯವಾದ ಒಂದು ಕ್ರಮವನ್ನು ಅನುಸರಿಸದೆ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಾಕಷ್ಟು ನ್ಯಾಯವನ್ನು ದೊರಕಿಸಲು ಅವಕಾಶವಿದ್ದರೂ, ಅದನ್ನು ಸದುಪಯೋಗ ಪಡಿಸಿಕೊಳ್ಳದೆ, ಕಲಹ ಮಾಡುವ ಹಂಚಿಕೆ ಕಂಡುಬರುತ್ತದೆ. ಈ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಲ್ಲಿ ಹಾಗೂ ಪ್ರಜಾಪ್ರತಿನಿಧಿಗಳಲ್ಲಿ ಸಾಕಷ್ಟು ವಿಮರ್ಶೆ ನಡೆಸಿ, ಅವರಿಗೆ ತಿಳಿಯಪಡಿಸಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಧರ್ಮ, ಕ್ರಮ. ಅದರ ಬದಲು ಏಕಪಕ್ಷೀಯವಾಗಿ ಇಡೀ ತೀರ್ಮಾನವನ್ನು ತೆಗೆದುಕೊಳ್ಳುವುದು ದೇಶದಲ್ಲಿರುವ ಒಂದು ಸಮಾಜಕ್ಕೆ ಮಾಡಿದಂಥ ಒಂದು ದೊಡ್ಡ ವಂಚನೆ ಎಂದು ಹೇಳಬೇಕಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, All India Commissioner for Sheduled Castes and Tribes and linguistic Minorities, ಶ್ರೀ ಎ.ಕೆ. ಚಂದಾ ಅವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 22-1-1964 ರಿಂದ 24-1-1964 ರ ವರೆಗೆ ಸಂಚಾರ ಮಾಡಿದರು; ಸಂಚಾರದ ಕೊನೆಗೆ ಮಂಗಳೂರಿನಲ್ಲಿ ತಾ॥ 24-1-1964 ರಂದು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಷೆಡ್ಯೂಲ್ಡ್ ಟ್ರೈಬಿಗೆ ಸೇರಿರುವ ಮರಾಠಿಗರನ್ನು ಡಿಶೆಡ್ಯೂಲ್ ಮಾಡಬೇಕೆಂದು ಮೈಸೂರು ಸರ್ಕಾರ ಅಡ್‌ವೈಸ್ ಮಾಡಿದೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು 25 ನೇ ಜನವರಿ "ಡೆಕ್ಕನ್ ಹೆರಾಲ್ಡ್" ಪತ್ರಿಕೆಯಲ್ಲಿ ಬಂದಿದೆ. ಅದನ್ನು ಕೇಳಿ ನಿಜವಾಗಿ ಅಲ್ಲಿಯ ಗುಡ್ಡಗಾಡು ಜನರೇ ಅಲ್ಲದೆ ಅವರಲ್ಲಿ ಸಹಾನುಭೂತಿಯುಳ್ಳ ಪ್ರಜೆಗಳೂ, ಪ್ರಜಾಪ್ರಭುತ್ವದಲ್ಲಿ ಹಂಬಲವನ್ನು ಇಟ್ಟುಕೊಂಡವರೂ ಬಹಳ ಕಂಗಾಲು ಬಿದ್ದವರಾಗಿದ್ದಾರೆ. ಹೀಗೆ ಹೇಳಬೇಕಾದರೆ ಯಾರಲ್ಲಿ ವಿಚಾರಿಸಿದರು, ಏನು ವಿಮರ್ಶೆ ನಡೆಸಿದರು, ಸಂಬಂಧಪಟ್ಟವರಿಗೆ ತಿಳಿಯ ಪಡಿಸಿದರೇ? ಅಥವಾ ಹೀಗೆ ಒಂದು ಸಲಹೆ ಮಾಡಲಿಕ್ಕೆ ಏನು ಆಧಾರ ಎಂದು ನನಗೆ ಗೊತ್ತಾಗಲಿಲ್ಲ. ಯಾವ ಆಧಾರವೂ ಇಲ್ಲದೆ, ಕೆಲವರು ಯಾವುದೋ ಗುಂಪು ರಾಜಕೀಯವನ್ನು ಇಟ್ಟುಕೊಂಡು, ಸ್ವಾರ್ಥಲೋಲುಪತೆಯಿಂದ ಹೀಗೆ ಮಾಡಿದ್ದರೆ ಇದು ಖಂಡನೀಯ ಎಂದು ಹೇಳಬೇಕಾಗಿದೆ. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಮರಾಠಿಗರು ಶಿಕ್ಷಣ ಮಟ್ಟದಲ್ಲಿ ಉದ್ಯೋಗ ಮಟ್ಟದಲ್ಲಿ, ಅಥವಾ ಆರ್ಥಿಕ ನಿಲುವಿನಲ್ಲಿ ಅಥವಾ ಸಾಮಾಜಿಕ ನಿಲುವಿನಲ್ಲಿ ಎಷ್ಟು ಮುಂದಿದ್ದಾರೆ ಎನ್ನುವುದು ಬಲ್ಲವರಿಗೇ ಗೊತ್ತು. ಆದರೆ ಕೆಲವರುಗಳು ಈ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕಾಗಿ ಈ ಮರಾಠಿಗರನ್ನು, ಬೇಕಾದ ಅಂತಸ್ತಿಗೆ, ಇನ್ನೂ ಮೇಲ್ಮಟ್ಟಕ್ಕೆ ಏರಿಸಿ ಎಂದು ಹೇಳುತ್ತಾ ಇರಬಹುದು. ಸರ್ಕಾರಿ ಲೆಕ್ಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 40 ಸಾವಿರ ಮರಾಠಿ ಜನರಿದ್ದಾರೆ. ನನ್ನ ತಿಳಿವಳಿಕೆಯಲ್ಲಿ ಅವರು ಸುಮಾರು 70-80 ಸಾವಿರ ಜನರಿದ್ದಾರೆ. ಸರ್ಕಾರಿ ಲೆಕ್ಕದಲ್ಲಿಯೇ ಹೇಳುವುದಾದರೂ ಈ 40 ಸಾವಿರದಲ್ಲಿ ಇಬ್ಬರು ಪದವೀಧರರಿದ್ದಾರೆ; ಇವರ ವಿದ್ಯಾ ಮಟ್ಟ ಎಷ್ಟರಮಟ್ಟಿಗೆ ಇದೆಯೆಂದು ತಿಳಿದುಕೊಳ್ಳಬಹುದು. ಅವರಲ್ಲಿ ಕೇವಲ ಒಬ್ಬರು ಗೆಜೆಟೆಡ್ ಅಧಿಕಾರಿಗಳಿದ್ದಾರೆ. ಅದೂ ಇತ್ತೀಚೆಗೆ ಆದವರು. ವಿದ್ಯಾ ಮಟ್ಟದಲ್ಲಿ ಇವರ ಪಾರಿ ಸುಧಾರಣೆಯಾಯಿತೆ? ಆರ್ಥಿಕವಾಗಿ ನೋಡಿದರೂ ಈ ಎರಡು ಗೆಜೆಟೆಡ್ ಉದ್ಯೋಗವಲ್ಲದೆ, 100-200 ರೂ. ಸಂಬಳ ಬರುವಂಥ ಇತರ ಖಾಸಗಿ ಉದ್ಯೋಗಗಳಲ್ಲಿಯೂ ಅವರು ಇಲ್ಲ. ಅವರ ಆರ್ಥಿಕ ಸ್ಥಿತಿ, ವ್ಯವಹಾರ ನೋಡಿದರೆ ಚೆನ್ನಾಗಿಲ್ಲ ಇನ್ನು ಅವರಿಗೆ ಇರುವುದು ಒಂದು ವೃತ್ತಿ, ಕೃಷಿ ನೂರಾರು ವರ್ಷಗಳಿಂದ ಕಾಡುಗುಡ್ಡಗಳಲ್ಲಿ ಕೃಷಿಮಾಡಿಕೊಂಡು ಗುಡ್ಡವನ್ನು ಕಡಿದು ಬಯಲು ಮಾಡಿದರೂ ಇನ್ನೂ ಅವರ ಹೆಸರಿಗೆ ಜಮೀನಾಗಿಲ್ಲ; ಅವರು ಸ್ವಂತ ವರ್ಗದಾರರಾಗಿಲ್ಲ. ಕೃಷಿ ಕೂಲಿ ಇಲ್ಲವೇ ಗೇಣಿದಾರ. ಸ್ವಂತ ಜಮೀನು ಇರುವವರನ್ನು ಬೆರಳಿನ ಮೇಲೆ ಎಣಿಕೆ ಮಾಡಬಹುದು. ಬರೇ ಸ್ವಲ್ಪ ಮಂದಿಗೆ 3-4 ಎಕರೆ ಇರಬಹುದು ಎನ್ನುವ ದೃಷ್ಟಿಯಲ್ಲಿ ಅವರನ್ನು ಮೇಲ್ಮಟ್ಟದ ಜನರಲ್ಲಿ ಸೇರಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೋ ಏನೋ ತಿಳಿಯಲಿಲ್ಲ. ಅವರನ್ನು ಡಿಷೆಡ್ಯೂಲ್ ಮಾಡಿ ಅವರಿಗೆ ಈಗಿರುವ ಸವಲತ್ತುಗಳನ್ನು ತಪ್ಪಿಸುವ ಹಂಚಿಕೆ ಇದು. ಆಗ ಅವರನ್ನು ಶಾಶ್ವತವಾಗಿ ಧಣಿಯರು ಕೆಲಸಕ್ಕೆ ಇಟ್ಟುಕೊಳ್ಳಬಹುದು; ತಮ್ಮ ಚಾಕರಿಗೆ, ತಮ್ಮ ಮದುವೆ ಪಲ್ಲಕ್ಕಿಯನ್ನು ಹೊರಲಿಕ್ಕೆ ತಮ್ಮ ಹೆಂಗಸರು ಮಕ್ಕಳು ಚಾಕರಿ ಮಾಡಲಿಕ್ಕೆ, ಗೊಬ್ಬರ ಹೊರಲಿಕ್ಕೆ, ಬೇಕೆಂದು ಯತ್ನಿಸುವುದು ಮೇಲ್ವರ್ಗದವರ ಸ್ವಾರ್ಥಪರ ಯತ್ನವಾಗಿದೆ. ಅವರ ಸೇವೆ ಎಲ್ಲಿ ತಪ್ಪಿ ಹೋದೀತು ಎಂಬ ಭಯದಿಂದ ಈ ಹವಣಿಕೆಯನ್ನು ಹೂಡಿದ್ದಾರೆಂದು ನಾನು ಬೇಸರದಿಂದ ಹೇಳಬೇಕಾಗಿದೆ.

ಅದಕ್ಕಾಗಿ, ಮರಾಠಿಗರು ಬಹಳ ಹೀನಾವಸ್ಥೆಯಲ್ಲಿದ್ದರೂ ಅವರನ್ನು ಡಿಷೆಡ್ಯೂಲ್ ಮಾಡಿ, ಅವರು ಈಗ ಪಡೆಯುತ್ತಿರುವ ಸರ್ವ ಸವಲತ್ತುಗಳನ್ನೂ ಕಿತ್ತು ತೆಗೆದು ಅವರು ಸುಧಾರಿತ ಪ್ರಜೆಗಳಾಗದಂತೆ, ಅವರ ಹಿತಾಸಕ್ತಿಗಳಿಗೆ ಅಡ್ಡಿಬರುವಂಥ ಧೋರಣೆಯಾಗಿದೆ, ಇಂತಹ ಒಂದು ಕಾರ್ಯಕ್ರಮ ಖಂಡನೀಯ ಎಂದು ಹೇಳಬೇಕಾಗಿದೆ.

ಆದರೆ ಒಂದು ವಿಷಯವನ್ನು ಹೇಳಬಹುದು ನನ್ನ ಸ್ನೇಹಿತರು ಹೇಳಿದ್ದಾರೆ—ನಾವು ನೋಡಲಿಕ್ಕೆ ಚೆನ್ನಾಗಿದ್ದೇವೆ ಎಂದು. ನೋಡಲಿಕ್ಕೆ ಚರ್ಮ ನುಣ್ಣಗೆ ಇರಬಹುದು, ಸಾಮಾನ್ಯವಾಗಿ ಬಡವರು ಚೆನ್ನಾಗಿ ಬೆವರು ಸುರಿಸುತ್ತಾರೆ ಆದ್ದರಿಂದ ಅವರು ಬೆಳ್ಳಗೆ ಆಗಲಿಕ್ಕೆ ಸಾಧ್ಯವಿಲ್ಲ ಅದರೂ ಕೆಲವರು ಬೆಳ್ಳಗೆ ಇದ್ದ ಮಾತ್ರಕ್ಕೆ ಅವರನ್ನು ಮೇಲೆ ಮಟ್ಟದ ಜನರು ಎಂದು ಭಾವಿಸಿ ಅವರಿಗೆ ಸಿಕ್ಕಬೇಕಾದ ಸೌಲಭ್ಯವನ್ನು ತಪ್ಪಿಸುವುದು ಸರಿಯಲ್ಲ. ಉದಾಹರಣೆಗೆ ಕೇರಳದಲ್ಲಿ ಹೋಗಿ ನೋಡಿ ಅಲ್ಲಿ ಎಲ್ಲಾ ಭಾಗದಲ್ಲೂ ಜನರು ದಿನಕ್ಕೆ ಒಮ್ಮೆ ಸ್ನಾನ ಮಾಡುತ್ತಾರೆ, ಅಂಗಿ ಬಟ್ಟೆಯನ್ನು ಸ್ವಚ್ಛವಾಗಿ ಇಟ್ಟುಕೊಂಡಿರುತ್ತಾರೆ, ಅಷ್ಟು ಮಾತ್ರದಿಂದಲೇ ಅವರು ಮೇಲ್ಮಟ್ಟದವರು ಎಂದು ಹೇಳಿ ಯಾವುದೋ ಒಂದು ರೀತಿಯಲ್ಲಿ ಅವರನ್ನು ಡೀಷೆಡ್ಯೂಲ್ ಮಾಡುವ ಗೋಜಿಗೆ ಹೋಗುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

5–30 P.M.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷೆಡ್ಯೂಲ್ ಟ್ರೈಬ್ಸ್‌ನ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪಕ್ಷಪಾತವನ್ನು ಮಾಡಿದ್ದಾರೆ ಎಂದು ಹೇಳಬೇಕಾಗಿದೆ. ಕಳೆದ ಅಕ್ಟೋಬರ್ ತಿಂಗಳು 27, 28, ಮತ್ತು 29ನೇ ತಾರೀಖು "ಆಲ್ ಇಂಡಿಯಾ ಷೆಡ್ಯೂಲ್ ಟ್ರೈಬ್ಸ್ ಸೆಮಿನಾರ್ ಮೈಸೂರಿನ ಇಲವಾಲದಲ್ಲಿ ಆಯಿತು. ಅದಕ್ಕೆ ಸಂಬಂಧಪಟ್ಟಂತೆ ಒಂದು ಪ್ಯಾಂಫ್ಲೆಟ್‌ನ್ನು ಕೊಟ್ಟಿದ್ದಾರೆ, ಅದರಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಸರ್ಕಾರದ 1961ನೇ ಇಸವಿಯ ಖಾನೇಷುಮಾರಿಯ ಪ್ರಕಾರವೇ ಮೈಸೂರು ಜಿಲ್ಲೆಯಲ್ಲಿ 16,805 ಷೆಡ್ಯೂಲ್ ಟ್ರೈಬ್ಸ್ ಇರುವಲ್ಲಿ ಪ್ಯಾಂಫ್ಲೆಟ್ಟಿನಲ್ಲಿ 25,000 ಎಂದು ಕೊಟ್ಟಿದ್ದಾರೆ, ಕೊಡಗು ಜಿಲ್ಲೆಯಲ್ಲಿ 22,000 ಇರುವಲ್ಲಿ 30,000 ಸಾವಿರ ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 48,628ಕ್ಕೆ 40,000 ಕೊಟ್ಟಿದ್ದಾರೆ. ಇದಕ್ಕೆ ಕಾರಣ ಇದೆ. ನಮ್ಮ ರಾಜ್ಯದಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಡೆವಲಪ್‌ಮೆಂಟ್ ಬ್ಲಾಕ್ಸ್ ಎಂದು ಎರಡು ಬ್ಲಾಕ್‌ಗಳು ಇವೆ, ಒಂದು ಹೆಗ್ಗಡದೇವನ ಕೋಟೆ. ಇನ್ನೊಂದು ನಾಗರ ಹೊಳೆ. ಈ ಬ್ಲಾಕನ್ನು ಹೆಚ್ಚಿನ ಜನ ಸಂಖ್ಯೆ ಇರುವ ಕಡೆ ಕೊಡಬೇಕಾಗುತ್ತದೆ. ಹೆಚ್ಚಿನ ಜನ ಸಂಖ್ಯೆ ಇರುವ ಕಡೆ ಕೊಟ್ಟರೆ ಅದನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಬೇಕಾಗುತ್ತದೆ, ಆ ರೀತಿ ಕೊಡಬೇಕಾದ್ದನ್ನು ಕೊಡದೇ ನಿಧಾನ ಮಾಡುತ್ತಾ ಇದ್ದಾರೆ ಇನ್ನೂ ಮೀನ, ಮೇಷ ಮಾಡುತ್ತಾ ಇದ್ದಾರೆ. ಆದ್ದರಿಂದ ಅತಿ ಪ್ರಾಮುಖ್ಯವಾದ ಮತ್ತು ಅತಿ ಹೆಚ್ಚಿನ ಜನ ಸಂಖ್ಯೆ ಇರತಕ್ಕ ದಕ್ಷಿಣ ಕನ್ನಡ ಜಿಲ್ಲೆಗೆ ಷೆಡ್ಯೂಲ್ಡ್ ಟ್ರೈಬ್ಸ್ ಡೆವಲಪ್‌ಮೆಂಟ್ ಬ್ಲಾಕ್‌ನ್ನು ಕೊಡಬೇಕೆಂದು ಹೇಳುತ್ತೇನೆ. ಆ ಜಿಲ್ಲೆಯ ಪುತ್ತೂರು ತಾಲ್ಲೂಕು, ಬಂಟವಾಳ, ಬೆಳತಂಗಡಿ ಭಾಗಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗಿರಿಜನರು ಇರುವುದರಿಂದ ಅಲ್ಲಿ ಹೆಚ್ಚಿನ ಆಶ್ರಮಗಳು, ಶಾಲೆಗಳು, ಹಾಸ್ಟೆಲು ಗಳನ್ನು ಕೊಟ್ಟರೆ ಅವರಿಗೆ ಹೆಚ್ಚು ಪ್ರಯೋಜನವಾದೀತು. ಎಲ್ಲಿ ಜೀಪುಗಳು ಹೋಗುತ್ತವೆ ಅಂತಹ ಕಡೆ ಮಾತ್ರ ಸೌಲಭ್ಯಗಳನ್ನು ಕೊಡುವುದು ಸೂಕ್ತವಲ್ಲ. ಈ ರೀತಿ ಆಗಬಾರದು ಎಂದು ಹೇಳುತ್ತೇನೆ.

ಇನ್ನು ಸಾಗುವಳಿ ಭೂಮಿಯ ವಿಚಾರವನ್ನು ಈ ಭಾಷಣದಲ್ಲಿ ಹೇಳಿದ್ದಾರೆ. ಸರಕಾರದ ತತ್ವದ ಪ್ರಕಾರ ಈ ಕಾರ್ಯ ಸರಿಯಾಗಿ ನೆರವೇರುವಂತೆ ಮಾಡಲು ತಕ್ಕ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮತ್ತು ಅದಕ್ಕೆ ತಕ್ಕ ನಿಗಾ ಕೊಡಬೇಕೆಂದು ಹೇಳುತ್ತೇನೆ. ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ವಿಲೇವಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ ಇದರಲ್ಲಿ ಒಂದು ನೀತಿ ಏನೆಂದರೆ ಅರಣ್ಯ ಪ್ರದೇಶಗಳನ್ನು ಸಾಗುವಳಿಗೆ ಕೊಡುತ್ತಾರೆ. ಇದನ್ನು ನಿರ್ಧರಿಸುವುದಕ್ಕಾಗಿ ಸಬ್-ಡಿವಿಜನಲ್ ಆಫೀಸರು ಮತ್ತು ಅರಣ್ಯ, ಅಬ್ಕಾರಿ ಹಾಗೂ ಪಶುಸಂಗೋಪನ ಇಲಾಖೆಗಳ ಒಬ್ಬೊಬ್ಬ ಸ್ಥಳೀಯ ಪ್ರತಿನಿಧಿ ಮತ್ತು ಸಂಬಂಧಪಟ್ಟ ತಾಲ್ಲೂಕು ಬೋರ್ಡಿನ ಅಧ್ಯಕ್ಷರು—ಇವರುಗಳನ್ನೊಳಗೊಂಡ ಒಂದು ಸ್ಥಳೀಯ ಸಮಿತಿಯನ್ನು ಪ್ರತಿಯೊಂದು ತಾಲ್ಲೂಕಿನ ಸಂಬಂಧದಲ್ಲಿಯೂ ರಚಿಸಲಾಗಿದೆ ಎಂದು ಹೇಳಿದ್ದಾರೆ. ಇದರಿಂದ ಕೃಷಿಗೆ ಯೋಗ್ಯವಾದ ಜಮೀನು ಭೂ ರಹಿತರಿಗೂ ಗುಡ್ಡಗಾಡು ಜನರಿಗೂ ದೊರಕಲು ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಸಕ್ಕರೆ ವಿತರಣೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಸಹಕಾರ ಸಂಘಗಳಿಗೆ ಮತ್ತು ವ್ಯಾಪಾರಿಗಳಿಗೆ ಈ ಕೆಲಸವನ್ನು ಹಂಚಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ ಸಹಕಾರ ಸಂಘಗಳವರು ನಾಮ್ಕೇವಾಸ್ತೆ ಈ ಪದಾರ್ಥಗಳನ್ನು ಕೆಲವರಿಗೆ ಕೊಟ್ಟು ಬಾಕಿ ಎಲ್ಲಾ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ದುರುಪಯೋಗ ಮಾಡಿಕೊಂಡಿರತಕ್ಕ ಸಂದರ್ಭಗಳು ಇವೆ, ಆದ್ದರಿಂದ ಸಹಕಾರ ಸಂಘಗಳ ಮೂಲಕವೇ ಈ ಪದಾರ್ಥಗಳು ವಿತರಣೆಯಾದರೂ ಅವು ಸರಿಯಾಗಿ ವಿನಿಮಯವಾಗಬೇಕಾದ್ದು ಅವಶ್ಯಕ. ಈಗ ಆ ರೀತಿ ಆಗುತ್ತಾ ಇಲ್ಲದೇ ಇರುವುದು ಬಹಳ ಬೇಸರದ ಸಂಗತಿ.

ರಾಜ್ಯಪಾಲರ ಭಾಷಣದಲ್ಲಿ ಕೃಷಿಯ ವಿಚಾರವಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡದೇ ಇರುವುದು ಬಹಳ ಬೇಸರದ ಸಂಗತಿ. ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು, ನೂರಕ್ಕೆ 80 ಭಾಗ ಕೃಷಿಗಾರರು ಇದ್ದರೂ ಅವರಿಗೆ ಒಂದು ಗಣನೀಯವಾದ ಸ್ಥಾನವನ್ನು ಕೊಟ್ಟಿಲ್ಲ. ವ್ಯವಸಾಯದ ಉಪಕರಣಗಳನ್ನು ಕೊಟ್ಟಿದ್ದಾರೆ ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ ಆದರೆ ಅದು ಸಾಲದು, ಬೇಸಾಯದ ವಿವರವಾದ ಸರ್ವೇ ನಡೆಸಿ ಇಂಥಾ ಮಣ್ಣಿನಲ್ಲಿ ಇಂಥಾ ಬೆಳೆ ಬೆಳೆಯಬಹುದು ಅಥವಾ ಇಂತಹ ಗೊಬ್ಬರ ಹಾಕಬೇಕು ಎಂಬುದನ್ನು ತಿಳಿಸಬೇಕು. ಆ ರೀತಿ ತಿಳಿಸಿದ್ದರೆ ವ್ಯವಸಾಯದ ಉತ್ಪನ್ನ ಹೆಚ್ಚಾಗಬಹುದೇ ಹೊರತು ಇಲ್ಲದೇ ಇದ್ದರೆ ಆಗುವುದಿಲ್ಲ, ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ವಿಷಯಗಳ ಮೇಲೆ ನಾವು ಈಗಾಗಲೇ ಎರಡು ವರ್ಷಗಳಿಂದ ಭಾಷಣ ಮಾಡಿ ಬೇಸತ್ತಿದ್ದೇವೆ. ಈ ಕಾಂಗ್ರೆಸ್‌ನ ಅರ್ಥನಾರಿ ನೀತಿ ಏನಿದೆ ಈ ನೀತಿ ಬಹುಮಟ್ಟಿಗೆ ಸಮಾಜವಾದವನ್ನು ತರುವುದರಲ್ಲಿ ವಿಫಲವಾಗಿದೆ ಎಂಬುದನ್ನು ಈ ಸರಕಾರ ಬಂದ ರಾಗಾಯ್ತು ವಿರೋಧಪಕ್ಷದವರು ಒಂದೇ ಕೂಗಿನಿಂದ ಹೇಳುತ್ತಾ ಇದ್ದರೂ ಅದನ್ನು ಸರಿಪಡಿಸಿಕೊಳ್ಳಲು ಈ ಸರಕಾರಕ್ಕೆ ಯಾವ ಮನಸ್ಸೂ ಬರಲಿಲ್ಲ. ಈ 'ಸರ್ಕಾರ ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದರಲ್ಲಿ ವಿಫಲವಾಗಿದೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿದೆ. ಸ್ವಾಮಿ, ಈ ರಾಜ್ಯಪಾಲರ ಭಾಷಣದಲ್ಲಿ ಸರಕಾರದಿಂದ ರಚಿತವಾದ ಯಾವ ನೀತಿಯೂ ಸ್ಪಷ್ಟವಾಗಿಲ್ಲ ಎನ್ನುವುದನ್ನು ಇದುವರೆಗೂ ಭಾಷಣ ಮಾಡಿದಂತಹ ಅನೇಕ ಭಾಷಣಕಾರರು ಕೂಡ ಈ ಸಭೆಯ ಮುಂದೆ ಹೇಳಿದ್ದಾರೆ. ಈ ರಾಜ್ಯಪಾಲರ ಭಾಷಣದಲ್ಲಿ ಮುಂದೆ ಆಗಬೇಕಾದಂತಹ ಕೆಲಸಕಾರ್ಯಗಳ ಧೋರಣೆ, ನೀತಿ, ಈ ಸರಕಾರ ಏನೇನನ್ನು ಜನತೆಗಾಗಿ ಮಾಡಿದೆ ಎನ್ನತಕ್ಕ ವಿಚಾರವನ್ನು ಸ್ಪಷ್ಟವಾಗಿ ಹೇಳಿಲ್ಲ. ಸ್ವಾಮಿ, ಈಗಾಗಲೇ ಕಾಂಗ್ರೆಸ್ ಜನತೆಗೆ ಎಷ್ಟೋ ಅನ್ಯಾಯವನ್ನು, ಭ್ರಷ್ಟಾಚಾರವನ್ನು ಮಾಡಿ, ದೇಶದಲ್ಲಿ ಹೆಸರನ್ನು ಪಡೆದಿರತಕ್ಕ ಕೀರ್ತಿ ಕಾಂಗ್ರೆಸ್‌ಗೆ ಸೇರಬೇಕಾಗಿದೆ. ಈ ಸರಕಾರದ ಧೋರಣೆ ಏನು ಎಂದು ಹೇಳಿದರೆ ನಾವೇ ಅಧಿಕಾರದಲ್ಲಿ ಇರಬೇಕು, ನಾವೇ ಬಹಳ ದಿವಸ ಅಧಿಕಾರ ಮಾಡಬೇಕು, ಕಾಂಗ್ರೆಸ್ ಸರಕಾರ ಉರುಳಬಾರದು, ಜನಗಳು ಎಲ್ಲಾದರೂ ಹಾಳಾಗಿ ಹೋಗಲಿ, ಏನಾದರೂ ಮಾಡಿಕೊಳ್ಳಲಿ ಎನ್ನತಕ್ಕ ಒಂದು ನಿಲುವನ್ನು ಮಾತ್ರ ಇಟ್ಟುಕೊಂಡಿದ್ದಾರೆಯೇ ಹೊರತು ಜನತೆಗೆ, ಪ್ರಜಾ ಪ್ರಭುತ್ವಕ್ಕೆ ಈ ಸರಕಾರ ಇಲ್ಲ ಎನ್ನತಕ್ಕದ್ದು ಖಚಿತವಾಗಿದೆ. ಏಕೆಂದರೆ ಎಷ್ಟೋ ಸಾರಿ ಹೇಳಿದರೂ ಯಾವ ಅಪಾದನೆಯನ್ನು ಖಚಿತವಾಗಿ ಮಾಡಿದರೂ ಸರಕಾರ ನೇರವಾದ ಕ್ರಮವನ್ನು ಇದುವರೆಗೂ ಕೈಕೊಂಡಿಲ್ಲ. ಈ ಕಾಂಗ್ರೆಸ್‌ನ ಆಡಳಿತವನ್ನು ನೋಡುವುದಾದರೆ ಯಾವ ಅಧಿಕಾರಿಗಳ ಹತ್ತಿರ ಹೋಗಲಿ, ಯಾವ ಆಫೀಸುಗಳಿಗೆ ಹೋಗಲಿ ಸರಿಯಾದ ರೀತಿಯಲ್ಲಿ ಅಧಿಕಾರವನ್ನು ನಡೆಸತಕ್ಕ ಏರ್ಪಾಡನ್ನು ಮಾಡಿರತಕ್ಕ ನಿದರ್ಶನ ಈ ವರೆಗೂ ಕಂಡು ಬರುತ್ತಿಲ್ಲ. ಈ ಕಾಂಗ್ರೆಸ್ ಸರಕಾರ ಬಂದರಾಗಾಯ್ತು ಜನಗಳ ಮೇಲೆ ತೆರಿಗೆಯ ಮೇಲೆ ತೆರಿಗೆಯನ್ನು ಹಾಕಿ ಜನಗಳಿಂದ ತೆರಿಗೆಯನ್ನು ಪಡೆದು ಸರಕಾರದ ಬೊಕ್ಕಸಕೆ ಹಣವನ್ನು ತುಂಬಿಕೊಂಡು ಇವತ್ತಿನ ದಿವಸ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಅವನು ಉಪಯೋಗಿಸಿಕೊಳ್ಳುವುದರಲ್ಲಿ ಅವರು ನಿರತರಾಗಿದ್ದಾರೆ.

ಈ ಸರ್ಕಾರ ಈಗಲಾದರೂ ರಾಜಿನಾಮೆ ಕೊಟ್ಟು ಸೂಕ್ತವಾದ ರೀತಿಯಲ್ಲಿ ಪ್ರಜಾಪ್ರಭುತ್ವಕ್ಕನುಗುಣವಾಗಿ ಚುನಾಯಿತರಾಗಿ ಮತ್ತೆ ಬಂದು ಬೇರೆ ಸರ್ಕಾರ ರಚಿಸುವುದು ಒಳ್ಳೆಯದೆಂದು ಕಾಣುತ್ತದೆ. ಏಕೆಂದರೆ ಮುಖ್ಯ ಮಂತ್ರಿಗಳ ಆರೋಗ್ಯ ಸರಿಯಾಗಿಲ್ಲ. ವಿರೋಧ ಪಕ್ಷದವರು ಮಾಡುವ ಟೀಕೆಗಳನ್ನು ಕೇಳಲು, ಸೂಚಿಸುವ ಆಡಳಿತದ ಲೋಪಗಳನ್ನರಿಯಲು 27 ಜನ ಮಂತ್ರಿಗಳಲ್ಲಿ ಬಹುಮಂದಿ ಇಲ್ಲದೆ ಅವರ ಸ್ಥಾನಗಳೆಲ್ಲಾ ಖಾಲಿ ಇವೆ. ಇದನ್ನು ಕೇಳುವ ಸಾಮರ್ಥ ಮಂತ್ರಿಮಂಡಲವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಶಕ್ತಿ ಇನ್ನೂ ನಮ್ಮ ಮುಖ್ಯ ಮಂತ್ರಿಗಳಿಗೆ ಬರಲಿಲ್ಲ. ಅವರಿಗೆ ವಯಸ್ಸಾಗಿದೆ. ಈಗಲಾದರೂ ಅವರು ಪದವಿ ತ್ಯಜಿಸಿ ಸುಖವಾಗಿರಬಹುದು ಅವರ ಮೂಳೆ ಭದ್ರವಿಲ್ಲ, ಜಾರಿ ಜಾರಿ ಬಚ್ಚಲಲ್ಲಿ ಬೀಳುತ್ತಿದ್ದಾರೆ.

(B) 4808
ಪ್ರಾಪ್ತಿ ಪ್ರಮಾಣ Accession No.......
ದಿನಾಂಕ Date.......

Mr. SPEAKER.—The Hon. member must confine his speech to the points. Let him not make personal references. The Hon. members should speak without casting personal reflection and without making personal references. There must be decorum. What do as the member you mean by saying "ಮೂಳೆ ಭದ್ರವಿಲ್ಲ ?"

Sri K. LAKKAPPA.—I want a ruling from the Chair whether it is unparliamentary.

Mr. SPEAKER.—The ruling is that the Member must use decorous languages. If he violates it, I will not permit it.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನಾನು ಯಾವಾಗಲೂ ಯಾವ ವ್ಯಕ್ತಿಯ ಮೇಲೂ ಆರೋಪ ಮಾಡುವುದಿಲ್ಲ. ಸರ್ಕಾರವನ್ನು ನಡೆಸುವ ಯಂತ್ರ ಅಂದರೆ ಮುಖ್ಯಮಂತ್ರಿಗಳಿಗೆ ಶಕ್ತಿಸಾಮರ್ಥ್ಯವಿರಬೇಕು. ಏಕೆಂದರೆ ದೇಶದ ಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರದ ಆಡಳಿತ ಸರಿಯಾಗಿ ನಡೆಯದಿರುವಾಗ ಯಾವ ಬಡವನ ಕೂಗೂ ಸರ್ಕಾರಕ್ಕೆ ಕೇಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲಿಯವರೆಗೆ ಅದು ಕೇಳುವುದಿಲ್ಲವೋ ಅಲ್ಲಿಯವರೆಗೆ ಪ್ರಜೆಗಳ ಕಷ್ಟ ಪರಿಹಾರವಾಗುವುದಿಲ್ಲ. ಆಡಳಿತ ಯಂತ್ರ ಸರಿಯಾಗಿ ನಡೆಯದಿರುವಾಗ ಬೇರೆ ಪರಿಹಾರ ಮಾರ್ಗವಿಲ್ಲ. ಈ ಸಭೆಯ ಮಾನ್ಯ ಸದಸ್ಯರು ಚುನಾವಣೆಯಲ್ಲಿ ಗೆದ್ದುಬಂದು ಬರೀ ಭಾಷಣ ಮಾಡಿ ಅದರಿಂದೇನೂ ಪ್ರಯೋಜನವಾಗದಿದ್ದರೆ, ಸರ್ಕಾರದ ಲೋಪದೋಷಗಳನ್ನು ತಿದ್ದದಿದ್ದರೆ ನಾವು ಮಾಡುವ ಕೆಲಸ ಸಫಲವಾಗುವುದಿಲ್ಲ. ನಾವು ಹೇಳುವ ಯಾವ ಮಾತನ್ನು ಕೂಡ ಸರ್ಕಾರ ಕೇಳದಿರುವಾಗ ನಮ್ಮ ಜವಾಬ್ದಾರಿ ಕೂಡ ನಿರ್ವಹಿಸಿದಂತಾಗುವುದಿಲ್ಲ. ಎಷ್ಟು ಉಗ್ರವಾಗಿ ಟೀಕೆ ಮಾಡಿದರೂ ಯಾವ ಲೋಪದೋಷಗಳನ್ನೂ ಸರ್ಕಾರ ಇದುವರೆಗೆ ತಿದ್ದಿಕೊಂಡಿಲ್ಲ. ಇದು ಸರಿಯಲ್ಲ. ಖಾದಿ ಬೋರ್ಡಿನ ಹಣ ಎಷ್ಟು ದುರುಪಯೋಗವಾಗಿದೆ ಎಂಬುದನ್ನು ಆಡಿಟ್ ವರದಿಯಲ್ಲಿ ನಮೂದಿಸಲಾಗಿದೆ, ಮಾನ್ಯ ಸದಸ್ಯರೂ ಈ ಸಭೆಯಲ್ಲಿ ಹೇಳಿದ್ದಾರೆ. ಆದಾಗ್ಯೂ ಇದುವರೆಗೂ ಆ ಬಗ್ಗೆ ಯಾವ ವ್ಯವಸ್ಥಿತವಾದ ಕ್ರಮವನ್ನು ಕೈಗೊಂಡಿಲ್ಲ. ಸರ್ಕಾರ ಬಡಬೋರೇಗೌಡನ ಬೊಕ್ಕಸ ಖಾಲಿ ಮಾಡುತ್ತಿದೆ, ಹಣ ದುರುಪಯೋಗ ಮಾಡುತ್ತಿದೆ. ಖಾದಿ ಬೋರ್ಡಿನ ದುರ್ವ್ಯವಹಾರ ಇದಕ್ಕೆ ನಿದರ್ಶನವಾಗಿದೆ. ಖಾದಿ ಬೋರ್ಡಿನ ಅಧ್ಯಕ್ಷರು ಒಂದು ನಾಯಿಮರಿಯನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಬೋರ್ಡಿನ ಹಣದಿಂದ ತೆಗೆದುಕೊಂಡಿದ್ದಾರೆಂದು ಆಡಿಟ್ ವರದಿಯಲ್ಲಿದೆ. ಇದಕ್ಕಿಂತ ಹೇಯವಾದ ಹೀನಕೃತ್ಯ ಮಾಡುವ ಸರ್ಕಾರ ಮುಂದುವರಿಯುವುದು ಉಚಿತವೆ ಎಂಬುದನ್ನು ಯೋಚನೆ ಮಾಡಬೇಕು. ವಿಜಿಲೆನ್ಸ್ ಕಮಿಟಿಯನ್ನು ರಚಿಸಿ ಲಂಚಕೋರತನವನ್ನು ನಿಲ್ಲಿಸುವುದಾಗಿ ಹೇಳಿದ ಸರ್ಕಾರ ಇದುವರೆಗೂ ಅದನ್ನು ಮಾಡಿಲ್ಲ. ಲಂಚ ರುಷುವತ್ತನ್ನು ನಿಲ್ಲಿಸಲು ಶಕ್ತಿಯುತವಾದ ಯಾವ ಸಮಿತಿಯನ್ನೂ ಇದುವರೆಗೆ ಮಾಡಿಲ್ಲ. ಯಾವುದಾದರೂ ಅಧಿಕಾರಿಯ ಮೇಲೆ ಆರೋಪ ಮಾಡಿದರೆ, ನಾವು ಆತನ ಅಕ್ರಮ ವ್ಯವಹಾರವೇನಿದೆಯೆಂದು ಹೇಳಿದರೆ ತಕ್ಷಣ ವಿಚಾರಿಸಿ ಉಗ್ರ ಶಿಕ್ಷೆ ವಿಧಿಸುವುದಾಗಿ ಸರ್ಕಾರದವರು ತಿಳಿಸಿದ್ದರು; ಅದು ಅವರಿಗೆ ಜ್ಞಾಪಕವಿರಬಹುದು. ಮುಖ್ಯಮಂತ್ರಿಗಳಾಗಿ, ಈ ದೇಶದ ಉನ್ನತ ಅಧಿಕಾರದಲ್ಲಿ ಇದ್ದು ಅವರು ಒಬ್ಬ ಡೆಪ್ಯುಟಿ ಕಮೀಷನರು ದುರ್ಮಾರ್ಗದಲ್ಲಿದ್ದಾರೆ, ಆತನ ನಡತೆ, ಶೀಲ ಸರಿಯಾಗಿಲ್ಲ, ಅವರನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಅವರ ದಕ್ಷತೆಗೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಸರ್ಕಾರ ಹೀಗೆ ಭ್ರಷ್ಟಾಚಾರ ನಡೆಸುವ ತಮ್ಮ ಅಧಿಕಾರಿಗಳ ಮೇಲೆ ಸಹ ಉಗ್ರಕ್ರಮ ಕೈಕೊಂಡಿಲ್ಲ. ಇದು ಸರ್ಕಾರದ ಅಸಾಮರ್ಥ್ಯವನ್ನು ತೋರಿಸುತ್ತದೆ. ಇಂಥ ಸರ್ಕಾರ ಇನ್ನೂ ಇರುವುದು ಸೂಕ್ತವೆ ಎಂಬುದನ್ನು ವಿಚಾರ ಮಾಡಬೇಕು. ಮಂತ್ರಿಗಳು ಪ್ರವಾಸ ಮಾಡುವಾಗ ಮಾಡುವ ಅನ್ಯಾಯ, ಬಹಿರಂಗವಾಗಿ ಮಾಡುವ ಪ್ರಚಾರ, ಅವರ ಜನಂಗೆ ಮಾಡುವ ಸಹಾಯ ಮುಂತಾದ್ದೆಲ್ಲವನ್ನೂ ನೋಡುವುದಾದರೆ ವಿಷಾದವಾಗುತ್ತದೆ. ಬೇರೆ ಬೇರೆ ಕ್ಷೇತ್ರಗಳಿಂದ ಬಂದಿರುವ ಪ್ರತಿನಿಧಿಗಳ ಮಾತಿಗೆ ಬೆಲೆಯೇ ಇಲ್ಲ. ಪ್ರವಾಸ ಹೋದಾಗ ಅಲ್ಲಿನ ಪ್ರತಿನಿಧಿಗಳನ್ನು ಕರೆಸಿ ಕಷ್ಟ ಸುಖ ವಿಚಾರಿಸದೆ ಕಾಂಗ್ರೆಸ್‌ನವರನ್ನು, ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಇತರ ಪಕ್ಷದವರಾಗಿದ್ದರೆ ಅವರನ್ನು ಕಂಡು ಮಾತನಾಡಿಕೊಂಡು ಹೊರಟು ಹೋಗುತ್ತಾರೆ. ಅದಕ್ಕಾಗಿ ಜನರು ಕಾಂಗ್ರೆಸ್ಸಿನವರು ಮೂರೂ ಬಿಟ್ಟ ಜನರೆಂದು ಆಕ್ಷೇಪಿಸುತ್ತಾರೆ. ಜುಟ್ಟು ಬಿಟ್ಟವರು ಜನಸಂಘ, ಮೀಸೆ ಬಿಟ್ಟವರು ಕಮ್ಯೂನಿಸ್ಟ್, ಗಡ್ಡ ಬಿಟ್ಟವರು ಪಿ.ಎಸ್.ಪಿ., ಮೂರೂ ಬಿಟ್ಟವರು ಕಾಂಗ್ರೆಸ್ ಎಂದು ಜನರು ವರ್ಣಿಸುತ್ತಿದ್ದಾರೆ. ವಿರೋಧಪಕ್ಷದವರಲ್ಲಿ ಒಂದು ನೀತಿಯಿದೆ, ಏನಾದರೂ ಒಳ್ಳೆಯ ಕೆಲಸ ಮಾಡಬೇಕೆಂಬ ಧ್ಯೇಯವಿದೆ. ಆದರೆ ಕಾಂಗ್ರೆಸ್ಸಿನವರದು ಅರ್ಧನಾರೀಶ್ವರ ನೀತಿ, ಅವರಲ್ಲಿ ಒಂದೂ ತತ್ವವಿಲ್ಲ. ದೇಶದಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿದೆ. ಗೋಮಾಳದ ಜಮೀನಿನ ವಿಲೇವಾರಿ ನೋಡಿದರೆ ಎಲ್ಲಾ ಕಾಂಗ್ರೆಸ್ಸಿನವರಿಗೇ ಹೊರೆ

(ಶ್ರೀ ಕೆ. ಲಕ್ಕಪ್ಪ)

ಯುತ್ತಿದೆ. ಎಲ್ಲಿ ನೋಡಿದರೂ ದೇಶಕ್ಕಾಗಿ ತ್ಯಾಗಮಾಡಿದ ಇತರರಿಗೆ ಈ ದಿವಸ ಭೂಮಿ ಕೊಟ್ಟಿಲ್ಲ. ಅದೆಲ್ಲಾ ಶ್ರೀಮಂತರ ಪಾಲಾಗಿದೆ. ಒಬ್ಬ ಬಡವ ಅರ್ಜಿ ಹಾಕಿದರೆ ಗೋಮಾಳದಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದು, ಅದೇ ಕಾಂಗ್ರೆಸ್ಸಿನವರು ಅರ್ಜಿ ಹಾಕಿದರೆ ಗೋಮಾಳದಲ್ಲೇ ಕೊಡುವುದು. ಇದಕ್ಕಿಂತ ಬೇರೆ ನಿದರ್ಶನ ಸರ್ಕಾರದ ನೀತಿಯನ್ನು ತಿಳಿಯಲು ಬೇಕೆ? ರಾಜ್ಯಪಾಲರ ಭಾಷಣದಲ್ಲಿ ತುಮಕೂರು ಜಿಲ್ಲೆಯಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳು ಆಗಾಗ್ಗೆ ಅಭಾವಕ್ಕೊಳಗಾಗಿರುತ್ತವೆ ಎನ್ನುವುದನ್ನು ಅಸೆಂಬ್ಲಿಯಲ್ಲಿ ಪ್ರತಿ ಸಾರಿಯೂ ಕೇಳುತ್ತಲೇ ಇರುತ್ತೇವೆ. ಮಂತ್ರಿಗಳೂ ಅದಕ್ಕಾಗಿ ಯೋಚನೆ ಮಾಡುತ್ತಿದ್ದೇವೆ ಮತ್ತು ಕನ್‌ಸಿಡರು ಮಾಡುತ್ತಿದ್ದೇವೆಂದು ಹೇಳುತ್ತಲೇ ಇದ್ದಾರೆ. ಆದರೆ ಏನಾದರೂ ಕೆಲಸ ಮಾಡಿದ್ದಾರೆಯೇ ಅಥವಾ ಯಾವುದಾದೂ ಪರ್ಮನೆಂಟು ಕೆಲಸಗಳನ್ನು ಮಾಡಿದ್ದಾರೆಯೇ ಎಂದರೆ ಯಾವುದೂ ಕಾಣುತ್ತಿಲ್ಲ. ಆದರೆ ರೂರಲ್ ಇಂಡಸ್ಟ್ರೀಸ್ ಮಾಡುತ್ತೇವೆಂದು ಹೇಳಿ ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿಕೊಂಡು ಎಷ್ಟುಮಟ್ಟಿಗೆ ರಾಜಕೀಯ ಮಾಡುತ್ತಿದ್ದಾರೆನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂಡಸ್ಟ್ರೀಸ್‌ಗಾಗಿ ಸೆಕ್ಯೂರಿಟಿ ಇಲ್ಲದೇ ಸಾಲಗಳನ್ನು ಕೊಡುತ್ತಿದ್ದಾರೆ. ಇದರಲ್ಲಿ ತಮಗೆ ಬೇಕಾದವರಿಗೆ ಅದರಲ್ಲೂ ಅಂತಹ ಹೆಸರುಗಳು ಅಲ್ಲಲ್ಲದಿದ್ದರೂ ಅಂತಹವರಿಗೆ ಹೆಚ್ಚಿನ ಸಾಲಗಳನ್ನು ಕೊಡುತ್ತಿರುವುದು ನಮಗೆ ಗೊತ್ತಿದೆ. ಹಾಗ ಕೊಟ್ಟ ಸಾಲದ ಹಣ ವಾಪಸು ಬರುತ್ತೋ ಇಲ್ಲವೋ ಅದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿ ತುಮಕೂರಿನಲ್ಲಿ ಕೆಲವರು ಸಾಲಗಳನ್ನು ಪಡೆದುಕೊಂಡು ಲಕ್ಷಗಟ್ಟಲೆ ಹಣವನ್ನು ಹೊಡೆದುಕೊಳ್ಳುತ್ತಿದ್ದಾರೆ. ಯಾರು ನ್ಯಾಯವಾಗಿ ಸಾಲ ಬೇಕು ಎಂದು ಅರ್ಜಿ ಹಾಕುತ್ತಾರೋ ಅಂತಹವರಿಗೆ ಏನೂ ಸಾಲ ಕೊಡುವುದಿಲ್ಲ. ಸುಮ್ಮನೆ ರೂರಲ್ ಇಂಡಸ್ಟ್ರೀಸು ಡೆವಲಪ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದರಿಂದ ಹಳ್ಳಿಗಾಡಿನಲ್ಲಿರುವ ಜನಕ್ಕೆ ಸಾಕಷ್ಟು ಸಾಲದ ಸೌಲಭ್ಯಗಳು ದೊರಕುತ್ತಿಲ್ಲ. ಇಂತಹ ವಿಚಾರಗಳನ್ನೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಕೂಡ ಪ್ರಸ್ತಾಪ ಮಾಡಲಿಲ್ಲ.

ಇನ್ನು ಪೋಲೀಸು ಇಲಾಖೆಯ ವಿಚಾರ. ಇದನ್ನು ಬಿಡಿ. ನಮ್ಮ ಮಂತ್ರಿಗಳು ಕೂಡ ಇದರ ಬಗ್ಗೆ ಪ್ರಶ್ನೆ ಈ ಕಡೆ ಕೇಳಿದರೆ ಆ ಕಡೆಗೆ ಉತ್ತರ ಹೇಳುತ್ತಾರೆ (ನಗು) ಅವರು ಈ ಸಭೆಗೆ ನಡೆಯುತ್ತ ಬರುವಾಗ ಎಲ್ಲರೂ ನೋಡಲಿ ಎಂದು ಬಹಳ ನಿಧಾನವಾಗಿ ಬರುತ್ತಾರೆ. ಯಾವ ಯಾವ ಅಧಿಕಾರಿಗಳು ಏನೇನು ಕೆಲಸ ಮಾಡುತ್ತಿದ್ದಾರೆ ಈ ಪೋಲೀಸು ಇಲಾಖೆಯಲ್ಲಿ ಎಷ್ಟು ಅನ್ಯಾಯಗಳು ನಡೆಯುತ್ತಿವೆ; ಎಷ್ಟು ಅಕೃತ್ಯಗಳು ನಡೆಯುತ್ತಿವೆ ಎನ್ನುವುದನ್ನು ಸರಕಾರ ಗಮನಕ್ಕೆ ತೆಗೆದುಕೊಂಡಂತೆ ಕಾಣುತ್ತಿಲ್ಲ. ಈಗತಾನೇ ಇಲ್ಲಿ ಒಂದು ನಿಲುವಳಿ ಸೂಚನೆ ತಂದು ಆ ಮೂಲಕ ಪೋಲೀಸು ಇಲಾಖೆಯವರಿಂದ ಎಂತಹ ಅನ್ಯಾಯಗಳು ನಡೆಯುತ್ತಿವೆ; ಹಗಲು ದರೋಡೆ, ಲೂಟಿ, ಕೊಲೆಗಳು ಎಷ್ಟುಮಟ್ಟಿಗೆ ನಡೆಯುತ್ತಿವೆ ಎನ್ನುವುದನ್ನು ಸರಕಾರಕ್ಕೆ ಹೇಳುತ್ತಿದ್ದರೂ ಕೇಳಿದರೂ ಕೇಳದಂತೆ ಇರುತ್ತಾರೆ. ಈ ಕಾಂಗ್ರೆಸ್ಸು ಸರಕಾರ ಬಂದ ಮೇಲೆ ದೇಶದಲ್ಲಿ ಎಷ್ಟು ಹಗಲು ದರೋಡೆಗಳು, ಖೂನಿಗಳು ಮತ್ತು ಇನ್ನಿತರ ಅಕೃತ್ಯಗಳು ನಡೆಯುತ್ತಿವೆ ಎನ್ನುವುದನ್ನು ನೋಡಿದರೆ ಈ ಸರಕಾರ ಅಧಿಕಾರದಲ್ಲಿರಲು ಲಾಯಕ್ಕಾಗಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಮತ್ತು ಈ ಮಂತ್ರಿಗಳು ಕೂಡ ಅಧಿಕಾರದಲ್ಲಿರಲು ಸರಿಯಾಗಿಲ್ಲ ಎಂದು ಹೇಳಬಹುದು. ಯಾವ ಕಡೆ ಏನಾಗುತ್ತಿದ್ದರೂ ಸರಿಯೇ ಈ ಕಾಂಗ್ರೆಸ್ಸು ಸರಕಾರ ಪಟ್ಟಭದ್ರವಾಗಿ ಕುಳಿತುಕೊಂಡು ಅಧಿಕಾರ ನಡೆಸುತ್ತಿದೆ. ಇದರಲ್ಲಿ ಯಾವ ತರಹದ ಸಮಾಜವಾದವನ್ನು ಕಟ್ಟಬೇಕೆಂದು ಹೊರಟಿದ್ದಾರೋ ನನಗೊಂದೂ ತೋರುತ್ತಿಲ್ಲ. ಸರಕಾರದ ಆಡಳಿತ ದಿನೇ ದಿನೇ ಬಹಳವಾಗಿ ಕೆಡುತ್ತಾ ಹೋಗುತ್ತಿದೆ. ದೇಶದಲ್ಲಿ ಜನತೆಗಾಗುತ್ತಿರುವ ನ್ಯೂನತೆಗಳನ್ನು ನೋಡಿ ಸರಿಪಡಿಸುತ್ತಿಲ್ಲ. ಜನತೆಗೆ ಭದ್ರತೆ ಇಲ್ಲದಿರುವ ಇದೆಂತಹ ಸಮಾಜವಾದ ಎಂದು ನಾನು ಕೇಳಬೇಕಾಗಿದೆ ಹೇಗಾದರೂ ಸರಿ ಮಂತ್ರಿಮಂಡಲದಲ್ಲಿ ಅವರು ಮಂತ್ರಿಗಳಾಗಿಯೇ ಉಳಿಯಬೇಕೆಂಬ ನಿಲುವನ್ನು ತೆಗೆದುಕೊಂಡಿರುವಂತೆ ತೋರುತ್ತದೆ.

ಇನ್ನು ಕೋ-ಆಪರೇಟೀವ್ ಸೊಸೈಟಿಗಳ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ನಾವು ಏನೇ ಹೇಳಿದರೂ ಈ ಸರಕಾರ ಅದನ್ನು ಒಪ್ಪುವುದಿಲ್ಲ. ಸಹಕಾರ ತತ್ವ ಏನಿದೆ ಅದಕ್ಕೆ ತಕ್ಕಂತೆ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ. ಎಷ್ಟೋ ಅನ್ಯಾಯಗಳಾಗುತ್ತಿದ್ದರೂ ಅದನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ರಿಜಿಸ್ಟ್ರಾರವರಾದ ಶ್ರೀಮಾನ್ ಭರಣಯ್ಯನವರು ತುಮಕೂರಿಗೆ ಬಂದಿದ್ದಾಗ ಸಹಕಾರ ತತ್ವ ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತ ಬಂದಿದೆ;

ಇಂತಹ ಸಹಕಾರ ತತ್ವವನ್ನು ತಾವೆಲ್ಲರೂ ಸೇರಿ ನಡೆಸಿಕೊಂಡು ಬರಬೇಕೆಂದು ಹೇಳಿದರು. ಆದರೆ ಈ ಸಹಕಾರ ತತ್ವ ಏನಾಗಿದೆ ಎಂದು ನೋಡಿದರೆ ಎಲ್ಲ ತರಹದ ಬಿಸಿನೆಸ್ಸುಗಳನ್ನು ಮಾಡಲು ಅನುಕೂಲವಾಗಿದೆ. ನಮ್ಮ ತುಮಕೂರು ಜಿಲ್ಲೆಯಲ್ಲೇ ನಡೆಯುತ್ತಿರುವ ಸೊಸೈಟಿಗಳ ಅನ್ಯಾಯಗಳನ್ನು ಕೇಳುವುದಕ್ಕೆ ಯಾವತರಹದ ಶಿಕ್ಷೆಗಳೂ ಐ. ಪಿ. ಸಿ. ಕೋಡಿನಲ್ಲೂ ಇಲ್ಲ ಎಂದು ಕಾಣುತ್ತದೆ. ಅಂತಹ ಅಪಚಾರಗಳು ಮತ್ತು ಭ್ರಷ್ಟಾಚಾರಗಳು ನಡೆಯುತ್ತಿದ್ದರೂ ಇಲ್ಲ ದೊಡ್ಡದಾಗಿ ಸ್ಟೇಟುಮೆಂಟು ಹೇಳುತ್ತಾರೆ. ಇದರ ಬಗೆಗೆ ಒಂದೇ ಒಂದು ನಿದರ್ಶನವನ್ನು ತಮ್ಮ ಮುಂದೆ ಇಲ್ಲಿಡಬೇಕಾಗಿದೆ. ನಮ್ಮ ತುಮಕೂರಿನಲ್ಲಿ ಲಕ್ಷಗಟ್ಟಲೆ ಹಣ ಸೊಸೈಟಿಗಳಲ್ಲಿ ದುರುಪಯೋಗವಾಗುತ್ತಿದ್ದರೂ ಯಾವ ಜಿಲ್ಲಾ ಮ್ಯಾಜಿಸ್ಟ್ರೇಟರುಗಳೂ ಬಂದು ಅವರ ಮೇಲೆ ಚಾರ್ಜ್ ಷೀಟು ಹಾಕಿ ತನಿಖೆ ಮಾಡುವ ಪ್ರಯತ್ನವನ್ನು ಮಾಡಲಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು 174 ಸೊಸೈಟಿಗಳಲ್ಲಿ ಬಹಳ ಅವ್ಯವಸ್ಥೆಗಳು ನಡೆಯುತ್ತಿವೆ ಎಂದು ಹೇಳಿದಾಗ ಅವುಗಳ ಹೆಸರುಗಳನ್ನು ಸರಕಾರ ಕೊಡಬೇಕೆಂದು ಹೇಳಿದರು. ನಾವು ಅದರ ವಿವರಗಳನ್ನೆಲ್ಲಾ ಕೊಟ್ಟರೂ ಅದರ ಬಗ್ಗೆ ಯಾವ ಕ್ರಮವನ್ನೂ ಕೂಡ ತೆಗೆದುಕೊಂಡಂತೆ ಕಾಣಲಿಲ್ಲ. ಇವರಿಂದ ನಾವು ಏನು ಸರಕಾರಕ್ಕೆ ಹೇಳಿದರೂ ಸರಕಾರ ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ನಮ್ಮ ಡಿಸ್ಟ್ರಿಕ್ಟು ಬ್ಯಾಂಕಿನಲ್ಲಿ ಹಣ ದುರುಪಯೋಗವಾಗಿದೆ ಎಂದು ಸಹಕಾರ ಮಂತ್ರಿಗಳಿಗೆ ಹೇಳಿದ್ದರೂ ಅವರು ಏನನ್ನೂ ಗಮನಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಅವರಿಗೆ ಇನ್ಯಾವ ಭಾಷೆಯಲ್ಲಿ ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ಇದಕ್ಕಾಗಿ ನಾವು ಸರಕಾರದ ಮುಂದೆ ಮುಷ್ಕರ ಹಾಗೂ ದಂಗೆಯನ್ನು ಮಾಡಲು ಅವಕಾಶ ಮಾಡುತ್ತಾರೋ ಏನೋ ಎಂದು ಕಾಣುತ್ತಿದೆ. ಸರಕಾರ ಇದೇ ರೀತಿ ತನ್ನ ನಡೆವಳಿಕೆಗಳನ್ನು ನಡೆಸಿಕೊಂಡು ಹೋಗುವುದಾದರೆ ಮುಂದೆ ನಾವು ಏನು ಮಾಡಬೇಕು ಎನ್ನುವುದಕ್ಕೆ ಖಚಿತವಾದ ರೂಪುರೇಖೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದೇವೆ. ಅದನ್ನು ಮುಂದೆ ಸರಕಾರಕ್ಕೆ ತೋರಿಸಿಕೊಡುತ್ತೇವೆ.

ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮೀ, ಈಗ ಇಲ್ಲಿ ನಮ್ಮ ಮುಂದಿಟ್ಟಿರುವ ರಾಜ್ಯಪಾಲರ ವಂದನಾ ನಿರ್ಣಯವನ್ನು ಸಮರ್ಥಿಸುತ್ತ ಕೆಲವು ಮಾತುಗಳನ್ನು ಇಲ್ಲಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ರಾಜ್ಯಪಾಲರ ಭಾಷಣವನ್ನು ಏಳು ವರ್ಷಗಳಿಂದ ನಾವು ಕೇಳುತ್ತಲಿದ್ದೇವೆ. ಹಾಗೂ ಅವರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುತ್ತಿದ್ದೇವೆ. ಆದರೆ ಈ ಸಾರಿಯ ಭಾಷಣಕ್ಕಾಗಿ ವಂದನೆ ಸಲ್ಲಿಸಲು ಒಂದು ಬಗೆಯ ಹೆಚ್ಚಿನ ಸಂತೋಷವೆನಿಸಿದೆ. ಕಾರಣ ಏನು ಅಂದರೆ ನಮ್ಮ ರಾಜ್ಯಪಾಲರು ಈ ಸಾರಿ ಭಾಷಣವನ್ನು ಕನ್ನಡದಲ್ಲಿಯೇ ಮಾಡಿದರು. ಈ ಕಾರಣದಿಂದ ಈ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಕೆಲವು ಮಾತುಗಳನ್ನು ಇಲ್ಲಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಈ ಮೊದಲೇ ಅನೇಕ ಸ್ನೇಹಿತರುಗಳು ಬೇರೆ ಬೇರೆ ಪಕ್ಷದವರು ಇಲ್ಲಿ ಮಾತನಾಡಿದ್ದಾರೆ. ನಮ್ಮ ವಿರೋಧ ಪಕ್ಷದವರು ಅನೇಕ ರೀತಿಯಿಂದ ಸರಕಾರದ ಮೇಲೆ ದೋಷಗಳನ್ನು ಹೇಳಿ ಮಾತನಾಡಿದ್ದಾರೆ. ಸರಕಾರದಲ್ಲಿ ದೋಷಗಳಿಲ್ಲ ಎಂದು ನಾನೂ ಹೇಳುತ್ತಿಲ್ಲ. ಆದರೆ ದೋಷಗಳನ್ನು ಹೇಳುವಾಗ ರಾಜಕೀಯದ ಕನ್ನಡಕ ಹಾಕಿಕೊಂಡು ನೋಡಿ ಮಾತನಾಡುತ್ತ ಅನೇಕ ಬಗೆಯ ಬಣ್ಣಗಳನ್ನು ಅದಕ್ಕೆ ಕೊಡುತ್ತಿದ್ದಾರೆ. ಆ ದೃಷ್ಟಿಯಿಂದ ನಾನು ವಿಚಾರ ಮಾಡುತ್ತಿಲ್ಲ. ಇವೊತ್ತು ಇಲ್ಲಿ ನಾವು ಕಾಂಗ್ರೆಸ್ಸಿನವರು ಅಧಿಕಾರದಲ್ಲಿ ಇರಬಹುದು ನಾಳೆ ಪಿ. ಎಸ್. ಪಿ. ಯವರು ಅಥವಾ ಕಮ್ಯುನಿಸ್ಟರು ಆಡಳಿತದಲ್ಲಿ ಇರಬಹುದು ಯಾರೇ ಇರಲಿ ಘನತೆ, ಗೌರವಗಳಿಂದ ದೇಶದ ಜನರನ್ನು ಮತ್ತು ಅವರ ಅಭ್ಯುದಯವನ್ನು ತರುವಂತಹ ಕಾರ್ಯಗಳನ್ನು ಮಾಡಬೇಕೆನ್ನುವ ದೃಷ್ಟಿಯಿಟ್ಟುಕೊಂಡು ಇಲ್ಲಿ ಮಾತನಾಡುವುದು ಉತ್ತಮ ಎಂದು ನಾನಿಲ್ಲಿ ಒತ್ತಿ ಹೇಳಬೇಕಾಗಿದೆ. ಈ ಸಮಯದಲ್ಲಿ ನಮ್ಮ ರಾಜ್ಯಪಾಲರು ಇವರೊಳಗೆ ಮುಖ್ಯವಾಗಿ ಎರಡು ಮಾತುಗಳನ್ನು ಉಲ್ಲೇಖ ಮಾಡಬೇಕಾಗಿತ್ತು ಎಂದು ನನ್ನ ಅಭಿಪ್ರಾಯ. ಅದೇಕೆ ಬಿಟ್ಟು ಹೋಗುತ್ತೋ ನನಗೆ ಗೊತ್ತಿಲ್ಲ. ಇವು ಅತಿ ಮುಖ್ಯವಾದದ್ದು. ಇಡೀ ದೇಶದಲ್ಲೆಲ್ಲ ಎಲ್ಲರ ಲಕ್ಷ್ಯವನ್ನೂ ಸೆಳೆದಿರತಕ್ಕ ವಿಷಯ ಇಂದು ಕೇಂದ್ರ ಸರಕಾರದವರೂ ಬಹು ಪ್ರಾಶಸ್ತ್ಯ ಕೊಟ್ಟಿರಲಿಲ್ಲ. ಪಕ್ಷಗಳವರೂ ಲಕ್ಷ್ಯ ಕೊಡುತ್ತಲಿರುವ, ಹಾಗೂ ರಾಜ್ಯದ ಶಾಸನ ಸಭೆಯಲ್ಲಿಯೂ ಕೂಡ ಎರಡು ಮೂರು ದಿವಸಗಳಿಂದ ಒಂದೇ ಸಮನೆ ಚರ್ಚೆಯಾದ ಭ್ರಷ್ಟಾಚಾರದ ನಿರ್ಮೂಲನದ ವಿಚಾರವಾಗಿ ಏನಾದರೂ ಒಂದು ಸ್ಪಷ್ಟವಾದ ಧೋರಣೆಯನ್ನು ಹೇಳಿದ್ದರೆ ನಮಗೆಲ್ಲ ಬಹಳ ಸಂತೋಷವಾಗುತ್ತಿತ್ತು. ಇದರೊಳಗೆ ನಮ್ಮ ರಾಜ್ಯದ ಧೋರಣೆ ಯಾವ ನಿರ್ದಿಷ್ಟವಾದ ರೂಪದಲ್ಲಿರುತ್ತದೆ ಎನ್ನುವುದೂ ಇನ್ನೂ ಗೊತ್ತಾಗಲಿಲ್ಲ.

MYSORE LEGISLATIVE ASSEMBLY

THIRD DAY.

Saturday, 29th February 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Construction of the Road from Bidar to Bangalore via Shorapur.

**Q.*—7 Sri R. PID NAIK (Shorapur).—

Will the Government be pleased to state :—

(a) when the work of construction of the road from Bidar to Bangalore *via* Shorapur is likely to be taken up and completed ;

(b) which are the other Taluk Headquarters of Gulbarga District that are likely to be served by the proposed road ?

A.—Sri G. B. SHANKAR RAO (Parliamentary Secretary to the Minister for Public Works).—

(a) The road already exists, except for the portion between Bidar and Humnabad which is under construction.

(b) The road serves the following Taluk Headquarters of Gulbarga District :—

1. Gulbarga.
2. Jevargi.
3. Shahpur.
4. Shorapur.

Sri R. PID NAIK.—May I know whether the existing road passes through Shorapur town ? How long will it take to open the road for traffic ?

Sri G. B. SHANKAR RAO.—The road is already completed. Only some major bridges have to be completed and it may take about a year.

Sri R. PID NAIK.—What is the road mileage under construction to connect Shorapur and Shahpur ? Is the construction work in progress ?

Sri G. B. SHANKAR RAO.—I have already replied that the road is completed.

Sri J. P. SARWESH.—May I know the roads which are in progress and when they will be completed ?

Sri G. B. SHANKAR RAO.—Out of six bridges to be constructed, for the construction of two buildings, agencies have been fixed and for the other four bridges, the agencies have to be finalised.

ಶ್ರೀ ವೀರಭದ್ರಪ್ಪ ಈರಪ್ಪ.—ಬೀದರ್-ಬೆಂಗಳೂರು ರಸ್ತೆಯಲ್ಲಿ ನಿರ್ಮಿಸಿರುವ ಮತ್ತು ನಿರ್ಮಿಸಬೇಕಾದ ಸೇತುವೆಗಳು ಯಾವುವು ?

Sri G. B. SHANKAR RAO.—In addition to these six bridges between Bidar and Humnabad, there are two major bridges, one across the Krishna and the other across the Tunbaghadra. The bridge across the Tungabadra is completed the other bridge across the Krishna is to be completed. It is near Gorapalli.

ಶ್ರೀ ಎಸ್. ಭೀಮಣ್ಣ.—ಈ ರಸ್ತೆ ಈಗಾಗಲೆ ಇದ್ದರೂ ಹೊಸದಾಗಿ ಇದರ ಕೆಲಸ ಕೈಕೊಂಡಿರುವ ಉದ್ದೇಶವೇನು ?

Sri G. B. SHANKAR RAO.—This road is taken up only to avoid the circuitous road from Humnabad to Bidar.

Sri R. P D NAIK.—May I know the reason for delay in constructing the road at Shorapur ?

Sri G. B. SHANKAR RAO.—There is no delay ; it is under construction.

Sri J. P. SARWESH.—May I know when all these works will be completed ?

Mr. SPEAKER.—That was answered.

ಶ್ರೀ ಬಿ. ವಿ. ಗೌಡ.—ಬಿದರೆಯಿಂದ ಬೆಂಗಳೂರಿನವರೆಗಿನ ರಸ್ತೆಯ ಉದ್ದ ಮತ್ತು ಅಗಲ ವೆಷ್ಟು ?

†Sri VEERENDRA PATIL.—I cannot off-hand say the length of the road. There is already a road. Prior to the reorganistation by States, there was no direct road connection between Gulbarga and Raichur and Gulbarga and Bidar. After the reorganisation, it was found necessary to connect Bidar to the capital of the State. Bidar being a border district it should be directly connected to Bangalore. That is why this work has been taken up and we have already constructed major bridges across the Krishna. There is already a direct connection from Bidar except from Humnabad and Bidar. It is true to reach Bidar we had to go 20 miles into Andhra Pradesh and that is why we have taken up this work. So far road portion is concerned, there are some bridges to be constructed. For two bridge works, agencies have been fixed up and for the remaining four works we have invited tenders and we have asked our engineers to fix up contractors. We have provided for temporary diversions and they have been made fair weather roads. Afrer construtcing the four masonry works and one work *i.e.*, Gorapalli bridge—that also we exect to complete by the end of May 1961—the entire length of the road from Bidar to Bangalore will be completed. It is too early for me to say how much time it will take in each case. There is no question of forming a road ; it already exists and it is a standard P.W.D. road.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ರಸ್ತೆ ಮಾಡುವಾಗ ಸೇತುವೆ ಇಲ್ಲದೆ ಮಾಡಿದಿರಾ ? ಟೆಂಡರ್ ಕರೆಯುವಾಗ ಸೇತುವೆ ಕೆಲಸವನ್ನೂ ಸೇರಿಸಿ ಕರೆಯಲಾಯಿತೆ ?

† Indicates that the remarks or speeches have not been revised by the member concerned.

ಶ್ರೀ ವೀರೇಂದ್ರ ಪಾಟೀಲ್.—ಆ ರಸ್ತೆ ಈಗಾಗಲೆ ಇದೆ ಗುಲ್ಬರ್ಗ-ರಾಯಚೂರು ಭಾಗ ಹಿಂದೆ ಹೈದರಾಬಾದ್ ಸರ್ಕಾರಕ್ಕೆ ಸೇರಿತ್ತು. ಆಗ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗಲು ರಸ್ತೆಯಿತ್ತು ಆದರೆ ಈಗ ಆ ರಸ್ತೆ ಆಂಧ್ರ ಪ್ರದೇಶಕ್ಕೆ ಸೇರಿದೆ. ಆದುದರಿಂದ ಆಂಧ್ರ ಪ್ರದೇಶಕ್ಕೆ ಹೋಗಿ ಮುಂದೆ ಪ್ರಯಾಣಮಾಡಬೇಕಾಗಿದೆ, ಡೈರೆಕ್ಟ್ ಕನೆಕ್ಷನ್ ಇಲ್ಲ. ರೀಆರ್ಗನೈಜೇಷನ್ ಆದ ಮೇಲೆ ಡೈರೆಕ್ಟ್ ಕನೆಕ್ಷನ್‌ಗೆ ಅವಕಾಶಮಾಡಬೇಕಾಯಿತು. ಸುಮಾರು 20 ಮೈಲಿ ಆಂಧ್ರ ಪ್ರದೇಶದಲ್ಲಿ ಹಾದುಹೋಗುವುದನ್ನು ತಪ್ಪಿಸಲು ಒಂದು ಹೊಸ ರಸ್ತೆಯನ್ನು ಮಾಡಬೇಕಾಯಿತು, ತಿಂಕಿಣಿ ಮತ್ತು ದೇವಪುರಗಳ ಬಳಿ ಸೇತುವೆ ನಿರ್ಮಿಸಲಾಗಿವೆ, ದೊಡ್ಡ ದೊಡ್ಡ ಸೇತುವೆಗಳ ಕೆಲಸವಾಗಿದೆ. ನಮ್ಮದೇ ಆದ ಪ್ರದೇಶದಲ್ಲಿ ಹಾದಿ ಮಾಡಲು ಕೆಲವು ಸೇತುವೆಗಳನ್ನು ಕಟ್ಟಬೇಕಾಯಿತು. ಆ ಬಗ್ಗೆ 30–40 ಲಕ್ಷ ರೂಪಾಯಿಗಳ ಖರ್ಚಾಗಿ ಸೇಕಡ 90 ಭಾಗ ಕೆಲಸವಾಗಿದೆ, ಗೋರಪಲ್ಲಿ ಸೇತುವೆ ಕೆಲಸ ಸ್ವಲ್ಪ ನಿಧಾನವಾಗಿದೆ ಮಾನ್‌ಸೂನ್ ಪ್ರಾರಂಭವಾಗುವುದರೊಳಗೆ ಅದನ್ನು ಮುಗಿಸಿ ನೇರವಾದ ಮಾರ್ಗ ಸೌಕರ್ಯವನ್ನು ಕಲ್ಪಿಸಬೇಕೆಂಬ ಉದ್ದೇಶವಿದೆ.

Sri G. V. GOWDA.—The existing width of the road is narrow. May I know whether it is proposes to widen the road?

Sri VEERENDRA PATIL.—It is P. W. D. standard road. If the Hon'ble member makes a reference to a particular road which is narrow, it is may be possible to find out and furnish the information.

Mr. SPEAKER.—In view of the fact that it is a direct road, there must be space for two-way traffic with a little space for pedestrians.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಟೆಂಡರು ಕರೆದಿದ್ದರೆ? ಅಗ್ರಿಮೆಂಟ್ ಪ್ರಕಾರ ಎಷ್ಟು ದಿವಸಗಳಲ್ಲಿ ಕೆಲಸ ಮುಗಿಸಬೇಕು?

ಶ್ರೀ ವೀರೇಂದ್ರ ಪಾಟೀಲ್.—ಟೆಂಡರ್ ಕರೆದೇ ಕೆಲಸಮಾಡುವುದು, ಟೆಂಡರಿಲ್ಲದೆ ಯಾವ ಕೆಲಸವೂ ಮಾಡಲ್ಪಡುವುದಿಲ್ಲ. ಇಲ್ಲಿ ಲಕ್ಷಗಟ್ಟಲೆ ಬೆಲೆ ಬಾಳುವ ದೊಡ್ಡ ದೊಡ್ಡ ಕೆಲಸಗಳಿರುವುದರಿಂದ ಟೆಂಡರ್ ಕರೆಯದೆ ಯಾವುದನ್ನೂ ಮಾಡಿಲ್ಲ. ಈ ಕೆಲಸ ಬಹಳ ದಿವಸಗಳ ಹಿಂದೆಯೇ ಪ್ರಾರಂಭವಾಗಿದೆ.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಯಲ್ಲಿ ಭಾಲ್ಕಿಯಿಂದ ಹ್ಯುಮನಾಬಾದು ಬಳಿ ಒಂದು ಸೇತುವೆಯನ್ನು ಕಟ್ಟಿದರೆ 15 ಮೈಲಿಯೊಳಗೆ ನೇರವಾಗಿ ಬೀದರ್ ಜಿಲ್ಲೆಗೆ ಹೋಗಬಹುದು ಮತ್ತು ಈಗ ಇರುವ 80 ಮೈಲಿಗಳಷ್ಟು ದೂರ ಕಡಿಮೆಯಾಗುತ್ತದೆ. ಇಂತಹ ರೋಡನ್ನು ಸರಕಾರ ಬೇಗ ಮಾಡಲು ಏನಾದರೂ ಕ್ರಮ ತೆಗೆದುಕೊಂಡಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುವ ಪ್ರಶ್ನೆ ಪ್ರತ್ಯೇಕವಾದದ್ದು, ಅದು ಇದಕ್ಕೆ ಸಂಬಂಧಿಸಿದುದಲ್ಲ. ಅವರು ಭಾಲ್ಕಿಗೆ ಸೇರಿದವರಾದುದರಿಂದ ಇದನ್ನು ಕೇಳುತ್ತಿದ್ದಾರೆ. ನಾನು ಹೇಳುತ್ತಿರುವುದು ರೀ ಆರ್ಗನೈಜೇಷನ್ನು ಆದ ಮೇಲೆ ಬೀದರ್ ಜಿಲ್ಲೆಗೆ ನೇರವಾಗಿ ಹೋಗುವ ಸಂಪರ್ಕವಿರಲಿಲ್ಲ. ಇದಕ್ಕಾಗಿ ಕೇಂದ್ರ ಸರಕಾರದವರಿಗೆ ಬರೆದು ಅವರಿಂದ ಸ್ವಲ್ಪ ಸಹಾಯವನ್ನೂ ಪಡೆದು ನಮ್ಮ ಸರಕಾರದವರೂ ಸ್ವಲ್ಪ ಹಣ ಸಹಾಯ ಮಾಡಿ ಇಲ್ಲಿಗೆ ಬೇಕಾಗಿರುವ ನೇರ ಮಾರ್ಗಗಳನ್ನು ಪೂರೈಸಲು ತಕ್ಕ ಪ್ರಯತ್ನ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳುವ ಮಾರ್ಗವನ್ನೂ ಇವರಂತೆ ಬೇಗನೆ ಮಾಡಬೇಕೆಂದು ಪ್ರಯತ್ನ ನಡೆಸುತ್ತಿದ್ದೇವೆ. ಅಲ್ಲಿಯೂ ಕೆಲಸವನ್ನು ಪ್ರಾರಂಭ ಮಾಡಲು ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿದೆ. ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ.

— —

Closure of Sadashivagad—Londa Road for Bus Traffic.

*Q.—25. **Sri B. P. KADAM** (Karwar).—

Will the Government be pleased to state :—

(a) whether it is a fact that the Sadashivgad-Londa road is closed or Bus traffic ;

(b) if so, since how many years ;

(SRI B. P. KADAM)

(c) wheter it is not a fact that the public are put to much inconvenience thereby and have also sent many representations to Government in this behalf:

(d) the decision taken by Government on such representations?

A.—Sri G. B. SHANKAR RAO (Parliamentary Secretary to the Minister for Public Works).—

(a) The road is closed only during monsoon, but in the remaining period of the year, the buses are passing on this road up to Kumbharwada.

(b) This does not arise *vide* (a) above.

(c) In view of the improvement works going on along the length of the road, some inconvenience to the public during this period is unavoidable to some extent.

(d) *Vide* (c) above.

Sri B. P. KADAM.—Since how long the road has been under repair and the service buses from Sadashivgad to Londa are suspended?

Sri G. B. SHANKAR RAO.—On this road the service buses are plying during fair weather and they are not plying only during the rainy season.

Sri B. P. KADAM.—Since how long the service buses have been suspended from Sadashivgad to Londa?

Sri G. B. SHANKAR RAO.—They are suspended only during monsoon.

Sri B. R. SUNTHANKAR.—Supplementary to (a): The buses are plying only between Londa and Kumbharwada. But what about the bus service between Kumbharwada and Sadashivgad? We want a specific answer.

Sri G. B. SHANKAR RAO.—The buses cannot ply between Kumbharwada and Sadashivgad because the road is under repair.

Sri B. P. KADAM.—Since how many years the road between Kumbharwada and Sadashivgad has been closed for bus traffic?

Sri G. B. SHANKAR RAO.—Since the road is under repairs.

Sri B. P. KADAM.—From what year?

Sri G. B. SHANKAR RAO.—Those details are not with me.

Sri B. P. KADAM.—Is it not a fact that buses have been suspended from 1957 and without providing diversion routes?

Sri G. B. SHANKAR RAO.—It is very difficult to form diversion roads here.

Sri B. P. KADAM.—Is it not afact that private trucks and cars are plying on this road throughout the year?

Sri G. B. SHANKAR RAO.—That information is not available.

Sri B. P. KADAM.—Is it not a fact that a private transport company from Goa has requested permission to ply buses on this road?

Sri G. B. SHANKAR RAO.—We are not aware of it.

Sri B. P. KADAM.—How much amount was sanctioned for this road and how much has been spent?

Sri G. B. SHANKAR RAO.—There is an estimate sanctioned for Rs. 102.5 lakhs.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೆ ಇಲ್ಲಿಯ ಜನರು ಸಂಚಾರ ಸೌಲಭ್ಯಕ್ಕಾಗಿ ಕಷ್ಟಗಳನ್ನು ಅನುಭವಿಸುತ್ತಿರುವುದರಿಂದ ಇನ್ನು ಮುಂದಾದರೂ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿ ಕೊಡಲು ತಕ್ಕ ಕಾರ್ಯಕ್ರಮಗಳನ್ನು ಸರಕಾರ ಕೈಕೊಳ್ಳುತ್ತದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಈಗಾಗಲೇ 1 2·5 ಲಕ್ಷ ರೂಪಾಯಿಗಳಷ್ಟು ಅಂದಾಜಿನ ಕೆಲಸ ನಡೆಯುತ್ತಲಿದೆ. The work is divided and given to several contractors.

Mr. SPEAKER.—These are minor details.

Sri B. P. KADAM.—Is it not a fact that this is a life link to the entire public of Karwar, Supa and Haliyal and that the Government is deliberately neglecting this road ?

Sri G. B. SHANKAR RAO.—That is an insinuation. It is an important road and Government is anxious about the early completion of its improvement.

Number of Persons working as Temporary Officials in Class III Posts in several Departments as on 1st January 1960 and subsequently.

*Q —53. **Sri K. H. RANGANATH** (Mudigere).—

Will the Government be pleased to state :—

(*a*) the total number of persons that were working in the Revenue, Education and Social Welfare Departments as purely temporary officials in Class III Posts as on 1st January 1960 and subsequently up-to-date (Departmental-wise list to be furnished) ;

(*b*) out of the said temporary officials in Class III Posts, the total number of officials whose appointments have been made permanent and the date on which they were made permanent ;

(*c*) the total number of such temporary officials whose appointments have yet to be made permanent ;

(*d*) out of the total number of temporary officials working in Class III Posts, how many belong to Scheduled Caste/Tribes and whether their appointments have been made permanent ; and

(*e*) if so, how many and when (Departmentalwise list to be furnished) ?

A.—**Sri S. R. KANTHI** (Minister for Education) [on behalf of SRI S. NIJALINGAPPA (Chief Minister].—

(*a*) These figures are not readliy available. However, according to Census of Government Servants conducted by the Directorate of Statistics, there were as on 31st March 1962, 81,752 permanent employees and 31,831 temporary employees in Class III.

(*b*) Government have imposed a general ban that in Statewide Cadres and Divisional Cadres, no confirmation should be effected until the Inter-State Seniority Lists are finalised. In Districtwide cadres also, this ban applies to vacancies arising after 1st November 1956.

(SRI S. R. KANTHI)

(c) Does not arise in view of reply to Clause (b) above.

(d) and (e) This information is not available. It is not possible to say, without making elaborate and time consuming enquiries, as to how many of the temporary officials working in Class III Posts belong to Scheduled Castes/Scheduled Tribes in all Departments in the State.

ಶ್ರೀ ಕೆ. ಹೆಚ್. ರಂಗನಾಥ್.— 31,831 ಜನರು ಟೆಂಪರರಿ ಅಫಿಷಿಯಲ್ಸ್‌ಗಳು ಇದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಷೆಡ್ಯುಲ್ಡ್ ಕ್ಯಾಸ್ಟ್ ಪಂಗಡಕ್ಕೆ ಸೇರಿದವರು ಎಷ್ಟು ಜನರಿದ್ದಾರೆ?

†ಶ್ರೀ ಎಸ್. ಆರ್. ಕಂಠಿ.—ಇದರ ವಿವರಗಳು ಸಿಕ್ಕುವುದು ಬಹಳ ಕಷ್ಟ ಎಂದು ಉತ್ತರದಲ್ಲಿ ತಿಳಿಸಲಾಗಿದೆ.

Sri G. V. GOWDA.—In what way does the confirmation of temporary officials come in the way of the finalisation of the Inter-State Seniority List?

Sri S. R. KANTHI.—That is the opinion of the experts. If the officials who are already confirmed do not find a place in the I. S. S. list, an anomalous position will arise.

Sri G. V. GOWDA.—May I know whether these temporary officials are appointed against permanent vacancies?

Sri S. R. KANTHI.—Some of them are.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ದಿನಗಳ ಕಾಲ ಟೆಂಪರರಿಯಾಗಿ ಕೆಲಸ ಮಾಡಿರುವ 31,831 ಜನರನ್ನು ರೆಗ್ಯುಲರೈಸು ಮಾಡಿ ಖಾಯಂ ಮಾಡುತ್ತಿದ್ದಾರಲ್ಲವೇ!

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆ ರೆಗ್ಯುಲರೈಸ್ ಮಾಡಿ ಖಾಯಂ ಮಾಡಿರಬಹುದು.

ಶ್ರೀ ಕೆ. ಎಚ್ ರಂಗನಾಥ್.—22 9-61ರ ಸರಕಾರಿ ಆರ್ಡರಿನ ಪ್ರಕಾರ 1-1-60 ಕ್ಕಿಂತ ಹಿಂದೆ ಟೆಂಪರರಿಯಾಗಿದ್ದು ಅವರುಗಳು ಇನ್ನೂ ಟೆಂಪರರಿಯಾಗಿ ಕೆಲಸ ಮಾಡುತ್ತಿದ್ದರೆ ಅಂತಹವರ ಕೇಸುಗಳನ್ನು ರೆಗ್ಯುಲರೈಸ್ ಮಾಡಬೇಕೆಂದಿದೆಯಲ್ಲವೇ?

ಶ್ರೀ ಎಸ್. ಆರ್. ಕಂಠಿ.—ರೆಗ್ಯುಲರೈಸ್ ಮಾಡಬೇಕೆನ್ನುವ ಇನ್‌ಫರ್‌ಮೇಷನ್ನು ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೆಗ್ಯುಲರೈಸ್ ಮಾಡಿಲ್ಲ, ಕನ್‌ಫರ್ಮ್ ಮಾಡಿಲ್ಲ. ಇಂಟರ್ ಸ್ಟೇಟ್ ಸೀನಿಯಾರ್ಟಿ ಲಿಸ್ಟ್ ಫೈನಲೈಸ್ ಆಗಿಲ್ಲ ಎಂದು ಹೇಳುತ್ತಿರುವ ಕಾರಣ ಗೋಕುಲಾಷ್ಟಮಿಗೂ ಇಮಾಂ ಸಾಬರಿಗೂ ಸಂಬಂಧ ಕಲ್ಪಿಸಿದಂತೆ ಅಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಇದಕ್ಕಾಗಲೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ಫೈನಲೈಜ್ ಮಾಡುವುದಕ್ಕೆ ಇನ್ನೂ ಎಷ್ಟು ದಿವಸಬೇಕು?

ಶ್ರೀ ಎಸ್. ಆರ್. ಕಂಠಿ.—ಆದಷ್ಟು ಬೇಗ ಮಾಡುತ್ತೇವೆ.

Sri C. J. MUCKANNAPPA.—Who advised the State Government that there was legal difficulty in finalising the Inter-State Seniorty List because there are 31,831 temporary officials in the State? What is the legal opinion?

ಶ್ರೀ ಎಸ್. ಆರ್. ಕಂಠಿ.—ಇದಕ್ಕಾಗಲೇ ಉತ್ತರ ಹೇಳಿದ್ದೇನೆ. ಗೊತ್ತಿದ್ದವರು ಹೇಳುತ್ತಾರೆ, ಇದನ್ನು ಹಾಗೆ ಮಾಡುವುದಕ್ಕಾಗುವುದಿಲ್ಲ ಎಂದು.

ಒಬ್ಬ ಮಾನ್ಯ ಸದಸ್ಯರು.—ಯಾವ ಇನ್ಸ್ಟಿಯಲ್ಲಿ ಇದಕ್ಕೆ ಬ್ಯಾನ್ ಹಾಕಿದರು?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿಬೇಕಾದರೆ ಅದನ್ನು ಆನಂತರ ತರಿಸಿಕೊಡುತ್ತೇನೆ.

Sri G. V. GOWDA.—Even after regularising the services of these temporary officials, will the services put in by them during the temporary period be taken into account for fixing seniority?

Sri S. R. KANTHI.—That will be considered according to rules.

ಶ್ರೀ ಎಸ್. ಗೋಪಾಲ ಸಾರಂಗ.—ಈ ತ್ರಿಶಂಕು ಸ್ವರ್ಗದಲ್ಲಿರತಕ್ಕವರಗೆ ಕಷ್ಟನಿವಾರಣೆಗೇನು ಪರಿಹಾರ ಕಂಡುಹಿಡಿದಿದ್ದೀರಿ?

V-31'M64
M64.4.1-4
(B) 4808

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ರೂಲ್ಸ್ ಪ್ರಕಾರ ಪರಿಹಾರ ನೀಡುತ್ತಾರೆ.

Sri J. P. SARWESH.—Will the Government see that the information about Scheduled Castes and Scheduled Tribes is made available ?

Sri S. R. KANTHI.—The labour involved is not commensurate with the value of the information.

ಶ್ರೀ ಎಸ್. ಶಿವಪ್ಪ.—ಇಲ್ಲಿಗೆ ಸುಮಾರು 8 ವರ್ಷಗಳಿಂದಲೂ ಇದನ್ನು ಮಾಡದಿರುವುದು ಸರ್ಕಾರದವರ ತಪ್ಪು. ಈ ತಪ್ಪಿನಿಂದ ಆ ಜನರ ಹಕ್ಕುಬಾಧ್ಯತೆಗಳಿಗೆ ತೊಂದರೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇದು ಸ್ವಲ್ಪ ಕಾಂಪ್ಲಿಕೇಟೆಡ್ ಪ್ರಶ್ನೆ. ಅದರಿಂದ ಲೇಟಾಗಿದೆ.

Sri S. RAJAGOPAL.—When they remain as temporary officials, are they not losing certain facilities of Government servants ?

Sri S. R. KANTHI.—No.

ಶ್ರೀ ಬಿ. ಎಲ್. ಗೌಡ.—ಸಕಾಲದಲ್ಲಿ ಸೂತ್ರ ಕ್ರಮ ಕೈಗೊಳ್ಳದಿರುವುದರಿಂದ 8-10 ಜನ ಷೆಡ್ಯೂಲ್ಡ್ ಕಾಸ್ಟಿನವರಿಗೆ ತೊಂದರೆಯಾಗಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆಗಿಲ್ಲ.

ಶ್ರೀ ಬಿ. ಎಲ್. ಗೌಡ.—1956ಕ್ಕೆ ಹಿಂದೆ ಇದ್ದವರಿಗೆ ಈ ಬ್ಯಾನ್ ಅಪ್ಲೈಯಾಗುವುದಿಲ್ಲ. 1956ಕ್ಕೆ ಇತ್ತೀಚಿನವರಿಗೆ ಮಾತ್ರ ಇದು ಅಪ್ಲೈ ಆಗುತ್ತದೆ. 1956ಕ್ಕೆ ಹಿಂದಿದ್ದ ಎಷ್ಟು ಜನಗಳಿಗೆ ಕನ್‌ಫರ್ಮ್ ಆಗಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಹಿಂದಿನವರ ಹೆಸರನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇದರಿಂದ ಸರ್ಕಾರದ ಕೆಲಸಕ್ಕೆ ತೊಂದರೆಯಾಗುತ್ತದೆಂಬುದು ಸರ್ಕಾರದವರಿಗೆ ತಿಳಿದಿದೆಯೇ ?

Mr. SPEAKER.—That question has already been answered.

Construction of a Project across Arkavathi river near Harobele in Kanakapura Taluk.

Q.*—93. **Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether an estimate for the construction of a Project across Arkavathi River near Harobele, Uyyamballi Hobli, Kanakapura taluk has been received by them for sanction ;

(*b*) if so, when the concerned records were received by them ;

(*c*) the difficulties in the way of the Government sanctioning the said project ?

A.—**Sri VEERENDRA PATIL** (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) July 1963.

(*c*) The project is under consideration of Government.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಪರಿಶೀಲನ ಮುಗಿಯಲು ಇನ್ನೆಷ್ಟು ದಿವಸಬೇಕು ?

†ಶ್ರೀ ವೀರೇಂದ್ರ ಪಾಟೀಲ್.—ಚೀಫ್ ಇಂಜಿನಿಯರಿಂದ ಸರ್ಕಾರಕ್ಕೆ ತಾ|| 27-7-63ರಲ್ಲಿ ರೆಕಾರ್ಡ್ಸ್ ಬಂದಿದೆ. ಇದಕ್ಕೆ 85 ಲಕ್ಷ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಹೇಳಿದ್ದೇವೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈಗ ಹರಿದು ವೇಸ್ಟಾಗಿ ಹೋಗುತ್ತಿರುವ ನೀರನ್ನು ನಾವು ಉಪಯೋಗ ಮಾಡಿಕೊಳ್ಳದಿದ್ದರೆ ಮುಂದೆ ಈ ನೀರೆಲ್ಲಾ ಮದ್ರಾಸಿನವರ ಪಾಲಾಗುತ್ತದೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದವರಿಗೆ ಎಲ್ಲಾ ವಿಚಾರಗಳೂ ಗೊತ್ತಿವೆ. ಆದರೆ ದುಡ್ಡಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಇದೊಂದೇ ಮೀಡಿಯಂ ಪ್ರಾಜೆಕ್ಟಾದ್ದರಿಂದ ಇದನ್ನು ಬೇಗ ಕೈಗೊಳ್ಳುತ್ತೀರಾ?

ಅಧ್ಯಕ್ಷರು.—ಹಣ ಬಂದ ನಂತರ ಬೇಗ ಮಾಡಬಹುದು.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ದೇಶದಲ್ಲಿ ಇತರ ಕಡೆಗಳಿಗೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿರುವಾಗ ಇಲ್ಲಿಗೆ ದುಡ್ಡಿಲ್ಲ ಎಂದರೆ ಹೇಗೆ? ಇದಕ್ಕೂ ಸ್ಪೆಷಲ್ ಗ್ರ್ಯಾಂಟನ್ನು ಪಡೆದು ಬೇಗ ಕೈಗೊಳ್ಳುವಂತೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈ ಕೆಲಸ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೂ ಇದೆ. ಇಲ್ಲ ಎಂದೇನೂ ನಾನು ಹೇಳಲಿಲ್ಲ. ಕಾವೇರಿ ಅಗ್ರಿಮೆಂಟಿನ ಪ್ರಕಾರ ನಾವು ನೀರನ್ನು ಉಪಯೋಗ ಮಾಡಿಕೊಳ್ಳಲೇ ಬೇಕು. ದುಡ್ಡಿಗಾಗಿ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇದರಿಂದ ಜನಗಳಿಗೂ ಅನುಕೂಲವಾಗಬೇಕು. ಸರ್ಕಾರಕ್ಕೂ ಸಾಕಷ್ಟು ರಿಟರ್ನ್ಸ್ ಬರಬೇಕು. ಇದನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರಪ್ರದೇಶದಲ್ಲೂ ಮದ್ರಾಸ್ ಪ್ರಾಂತದಲ್ಲೂ ನೀರಾವರಿ ಕಾಂಗಾರಿಗಳು ಹೆಚ್ಚಿನ ಸಂಖ್ಯೆಯಲ್ಲಾಗಿರುವುದರಿಂದ ಇಲ್ಲಿಷ್ಟು ಜನ ಮಂತ್ರಿಗಳು ಸುಮ್ಮನೆ ಕುಳಿತುಕೊಳ್ಳುವ ಬದಲು ಡೆಲ್ಲಿಗೆ ಹೋಗಿ ಅಲ್ಲೇ ಕುಳಿತು ಹೆಚ್ಚು ಹಣ ಪಡೆಯಲು ಏಕೆ ಪ್ರಯತ್ನ ಮಾಡಬಾರದು?

ಅಧ್ಯಕ್ಷರು.—ಈ ಉಪ ಪ್ರಶ್ನೆಯನ್ನು ಡಿಸಲೋ ಮಾಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೃಷ್ಣಾ ಗೋದಾವರಿ ನೀರನ್ನು ಉಪಯೋಗಿಸಿಕೊಳ್ಳಲು ತೋರಿಸುತ್ತಿರ ವಷ್ಟು ಕಾತುರತೆಯನ್ನು ಈ ಕಾವೇರಿ ನೀರಿನ ಬಗ್ಗೆ ಏಕೆ ತೋರಿಸುತ್ತಿಲ್ಲ?

ಶ್ರೀ ವೀರೇಂದ್ರ ಪಾಟೀಲ್.—1924ರ ಕಾವೇರಿ ಅಗ್ರಿಮೆಂಟಿನಲ್ಲಿ ಯಾವ ಯಾವ ಜೋನಿನಲ್ಲಿ ಯಾವ ಯಾವ ನದಿಗಳು ಹರಿಯುತ್ತಿವೆಯೆಂಬುದನ್ನು ಹೇಳಿದ್ದಾರೆ. ಅಗ್ರಿಮೆಂಟಿನ ಅವಧಿ ಮುಗಿಯುವುದರೊಳಗಾಗಿ ಆ ನೀರನ್ನೆಲ್ಲಾ ನಾವು ಉಪಯೋಗ ಮಾಡಿಕೊಳ್ಳಲು ನಾವು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ವಾಯಿದೆ ಮುಗಿದು ಹೋಗತಕ್ಕ ನೀರು ಯಾವುದಿದೆಯೋ ಅದಕ್ಕೆ ಟಾಪ್ ಪ್ರಯಾರಿಟಿಯನ್ನು ಕೊಟ್ಟಿದ್ದೇವೆ. ಇನ್ನು ಎಲ್ಲಿ ನಮಗೆ ನೀರಿನ ಸಂಪೂರ್ಣ ಅಧಿಕಾರ ನಮ್ಮ ಕೈಯ್ಯಲ್ಲಿಯೇ ಇರುತ್ತದೋ ಅಂಥ ಕಡೆಗಳಲ್ಲಿ ಮಾತ್ರ ಹಣದ ಅಭಾವದಿಂದ ಅದನ್ನು ಹಿಂದಕ್ಕೆ ಇಟ್ಟಿದ್ದೇವೆ. ಈಗ ಈ ಅರ್ಕಾವತಿ ನದಿಯು ನಾನ್ ಷೆಡ್ಯೂಲ್ಡ್ ರಿವರ್ ಲಿಸ್ಟಿನಲ್ಲಿದೆ. ಇದರ ನೀರನ್ನು ಉಪಯೋಗಿಸಿಕೊಳ್ಳತಕ್ಕ ಯಾವ ಸ್ಟೇಟೂ ನಮಗೆ ಅಡ್ಡಿ ಬರುವಂತಿಲ್ಲ. ಷೆಡ್ಯೂಲ್ಡ್ ರಿವರ್‌ಗಳ ನೀರನ್ನು ಮೊದಲು ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲಾ ನೀರನ್ನೂ ಏಕ ಕಾಲಕ್ಕೆ ಬುಕ್ ಮಾಡುವಷ್ಟು ದುಡ್ಡು ನಮ್ಮಲ್ಲಿಲ್ಲ. ಆದಾಗ್ಯೂ ನಾವು ಈ ಕೆಲಸವನ್ನು ಕೈಬಿಟ್ಟಿದ್ದೇವೆಂದೇನೂ ಹೇಳಲಿಲ್ಲ.

9-00 A.M.

ಶ್ರೀ ಸಿ. ಆರ್. ರಂಗೇಗೌಡ.—ಈಗ ತಾನೇ ಮಾನ್ಯ ಮಂತ್ರಿಗಳು ಮೀಡಿಯಮ್ ಇರಿಗೇಷನ್ನಿಗೆ ನಿರೀಕ್ಷಿಸದಷ್ಟು ಹಣ ಸಿಗುತ್ತಾ ಇಲ್ಲವೆಂದು ಹೇಳಿದರು. ಕೇಂದ್ರ ನೀರಾವರಿ ಸಚಿವರು ಪಾರ್ಲಿಮೆಂಟ್ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಮೈಸೂರಿಗೆ ಎಷ್ಟು ಹಣ ಒದಗಿಸಿದರೂ ಅದನ್ನು ಅವರು ಸರಿಯಾಗಿ ಉಪಯೋಗಿಸುತ್ತಾ ಇಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

† ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪ ಮಂತ್ರಿಗಳು).—ಮೈಸೂರಿನವರಿಗೆ ಹಣವನ್ನೇನೋ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸುತ್ತಾ ಇಲ್ಲವೆಂಬುದಾಗಿ ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ.

Number of Applicants applied for Cashew Cultivation in Tumkur District.

*Q.—92. Sri K. LAKKAPPA (Hebbur).—

Will the Government be pleased to state :—

(a) the number of applicants who have applied for cashew cultivation in Tumkur District;

(b) since how long those applications are pending ;

(c) why those applications are pending even though the lands are available ;

(d) the action that Government propose to take for the speedy disposal of these applications ?

A.—Sri M. V. KRISHNAPPA (Minister for Revenue).—

(a) 51.

(b) Out of the 51 applications recived, 20 applications were rejected. The remaining 31 applications are pending for different periods as shown bellow :—

More than 2 years	...	1
One year	...	2
Six months	...	3
Three months	...	6
Two months	...	9
One month	...	10

(c) These applications are pending for the following reasons :—

(1) 6 cases are pending as the lands applied for, are date groves and orders for their release are awaited.

(2) 2 cases are pending for the release of lands in Amruth Mahal Kavals.

(3) 18 cases are pending as records are to be built up.

(4) 5 cases are at different stages of correspondence.

(d) The local officers will be instructed to dispose of these pending applications as quickly as possible.

ಶ್ರೀ ಕೆ. ಲಕ್ಕಪ್ಪ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ 20 ಅರ್ಜಿಗಳನ್ನು ತಿರಸ್ಕರಿಸಲಾಯಿತು ಎಂದು ಹೇಳಿದ್ದಾರೆ. ಯಾವ ಅಧಿಕಾರಿಗಳು ಈ ರೀತಿ ತಿರಸ್ಕಾರ ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಮಲ್ದಾರರು, ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿಕಮಿಷನರ್, ಇವರು ತಿರಸ್ಕಾರ ಮಾಡಿದ್ದಾರೆ. ಈಗ ಕಾನೂನಿಗೆ ವಿರುದ್ಧವಾಗಿರುವುದರಿಂದ ಒಂದು ಗ್ರಾಮದಲ್ಲಿ ಸರ್ಪ್ಲಸ್ ಲ್ಯಾಂಡ್ ಇದ್ದರೆ ಕೊಡುತ್ತೇವೆ. ಆದರೆ ಅಮೃತ ಮಹಲ್ ಕಾವಲಿನ ಕೆರೆಯ ಅಂಗಳದಲ್ಲಿ ಕಾಡಿಗೆ ಸಂಬಂಧಪಟ್ಟಿದ್ದಾಗಿದ್ದರೆ ಅದನ್ನು ತಿರಸ್ಕಾರ ಮಾಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಸಂಬಂಧಪಟ್ಟ ಗ್ರಾಮಗಳಿಗೆ ಇಷ್ಟು ಮೈಲಿಗಳ ಸುತ್ತಳತೆಯಲ್ಲಿ ಜಮೀನು ಇದ್ದರೆ ಕೊಡಬೇಕೆಂಬುದಾಗಿ ಸರ್ಕಾರದವರು ರೂಲ್ಸ್ ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪ್ರಶ್ನೆ ಗೇರುಬೀಜ ಸಾಗುವಳಿಗೆ ಸಂಬಂಧ ಪಟ್ಟಿದ್ದು. ಇದಕ್ಕೆ ಸಾಮಾನ್ಯವಾಗಿ ಬೇಕಾದಷ್ಟು ಕಾಯಿದೆಗಳಿವೆ.

ಶ್ರೀ ಎಸ್. ಎಂ. ಕೃಷ್ಣ.—ಈ ಗೇರುಬೀಜದ ಸಾಗುವಳಿ ಯೋಗ್ಯವಾಗಿಲ್ಲವೆಂಬ ಕಾರಣದ ಮೇಲೆ ಈ ಅರ್ಜಿಗಳು ತಿರಸ್ಕಾರವಾಯಿತು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅರ್ಜಿಗಳು, ಆಯಾ ಗ್ರಾಮದವರಿಂದ ಬಂದಿರಬೇಕು. ಹೊರಗಡೆಯಿಂದ ಅಥವಾ ದೂರದ ಪ್ರದೇಶಗಳಿಂದ ಅರ್ಜಿಗಳು ಏನಾದರೂ ಬಂದಿದ್ದರೆ ಅಂತಹವುಗಳನ್ನು ಕೆಲವು ಸಂದರ್ಭಗಳಲ್ಲಿ ರಿಜಕ್ಟ್ ಮಾಡುವ ಸಂದರ್ಭವೂ ಉಂಟು.

ಶ್ರೀ ಕೆ. ಲಕ್ಕಪ್ಪ.—ಬೇರೆ ಊರಿನವರ ಅರ್ಜಿಗಳನ್ನು ಗ್ರಾಂಟುಮಾಡಿ ಕೇವಲ 7 ಮೈಲಿಗಳ ದೂರದಲ್ಲಿರುವವರ ಅರ್ಜಿಗಳನ್ನು ತಿರಸ್ಕಾರ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದ್ದ 51 ಅರ್ಜಿಗಳ ಪೈಕಿ 20 ಅರ್ಜಿಗಳನ್ನು ತಿರಸ್ಕರಿಸ ಲಾಗಿದೆ. ಉಳಿದ 31 ಅರ್ಜಿಗಳು various stages ನಲ್ಲಿವೆ. ಯಾರಿಗೂ ಗ್ರಾಂಟು ಮಾಡಿರುವ ಬಗ್ಗೆ ನನ್ನಲ್ಲಿ ಯಾವ ಮಾಹಿತಿಯೂ ಇಲ್ಲ. ಶಿಫಾರ್ಸಿಗೂ ಗ್ರಾಂಟಿಗೂ ವ್ಯತ್ಯಾಸವಿದೆ. Amildar may recommend, but the Deputy Commissioner may reject it. Recommendation is not a grant.

ಶ್ರೀ ಬಿ. ಚನ್ನಬೈರೇಗೌಡ.—ಈ ಗೇರು ಬೀಜದ ಸಾಗುವಳಿ ಈ ಜಿಲ್ಲೆಯಲ್ಲಿ ಚೆನ್ನಾಗಿ ನಡೆಯು ತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಸಂದರ್ಭಗಳಲ್ಲಿ ಮಲೆನಾಡಿನಲ್ಲಿ ಬೋಳು ಗುಡ್ಡಗಳು ಇರು ತ್ತವೆ. ಅಲ್ಲಿ ಈ ಗೇರು ಬೀಜದ ಸಾಗುವಳಿ ಚೆನ್ನಾಗಿ ಆಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಜಮೀನು ಇದ್ದರೂ ತಹಸೀಲ್ದಾರ್ ಮತ್ತು ಸಬ್ ಡಿವಿಜನ್ ಆಫೀಸರು ದುರುದ್ದೇಶದಿಂದ ಅರ್ಜಿದಾರರಿಗೆ ಕೊಡದೇ ಇರುವುದು ಗೊತ್ತಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಸರ್ಕಾರದ ಗಮನಕ್ಕೆ ತಂದರೆ ಯೋಚನೆ ಮಾಡುವರು.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಗೇರು ಬೀಜದ ಸಾಗುವಳಿಗೆ ಜಮೀನು ಇರುವವರಿಗೆ ಕೊಡುತ್ತಿರೋ ಅಥವಾ ಇಲ್ಲದೇ ಇರುವವರಿಗೆ ಕೊಡುತ್ತಿರೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೇರು ಬೀಜ ಸಾಗುವಳಿಯ ಸಂಬಂಧದಲ್ಲಿ ಕಾಯಿದೆಗಳನ್ನು ಮಾಡಿ ದ್ದಾರೆ. ಭೂಮಿ ಇರುವವರಿಗೂ ಗೇರು ಬೀಜದ ಸಾಗುವಳಿ ಜಮೀನನ್ನು ಕೊಡುವುದು ರೂಲ್ಸ್ ನಲ್ಲಿದೆ.

Sri S. SIVAPPA.—There are applications pending in office for more than 2 years and one year. May I know from the Government which is the time limit fixed for disposing of any application of darkhasts?

ಶ್ರೀ ಎಂ. ವಿ. ಕೃಷ್ಣಪ್ಪ.—ಇದಕ್ಕೆ ಟೈಂ ಲಿಮಿಟ್ ಇಟ್ಟಿಲ್ಲ. ಇಷ್ಟೇ ದಿವಸಗಳಲ್ಲಿ ಕೊಡ ಬೇಕೆಂದೇನೂ ಇಲ್ಲ. ಕಾಯಿದೆಗಳ ಪ್ರಕಾರ ಜಮೀನು ಕೊಡುವುದರಲ್ಲಿ ಏನೂ ಅನುಮಾನವಿಲ್ಲ. ಕೆಲವು ಕಾರಣಗಳಿಂದ ಬಹಳ ಬೇಗನೆಯೂ ಕೊಡುತ್ತೇವೆ. ಜಮೀನು ಕಡಮೆ ಇದ್ದರೆ ಅರ್ಜಿದಾರ ರಿಂದ ಕೆಲವು ಸಂದರ್ಭಗಳಲ್ಲಿ ಡಿಮ್ಯಾಂಡ್ ಜಾಸ್ತಿ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಕೆರೆಯ ಅಂಗಳದ ಜಮೀನನ್ನು ರಿಜರ್ವ್ ಮಾಡಿರುತ್ತಾರೆ. ಆಯಾ ಇಲಾಖೆಯ ಲೆಕ್ಕಗಳು ಆಯಾ ಆಫೀಸಿ ನಲ್ಲಿರುತ್ತವೆ. ಇದರಲ್ಲಿ ಎಷ್ಟೋ ತಕರಾರುಗಳೂ ಸಹ ಇರುತ್ತವೆ. ರೆವಿನ್ಯೂ ಇಲಾಖೆಗೆ ಸಂಬಂಧ ಪಟ್ಟ ಹಾಗೆ date groves ಬೇರೆ ಇರುತ್ತದೆ. If that land belongs to the Forest Department, they have to ask the Forest Department; if there are date groves, they have to ask the Excise Department. ಕೆರೆಗಳ ವಿಷಯವಾದರೆ ಪಿ. ಡಬ್ಲ್ಯು. ಡಿ. ಯವರನ್ನು ಕೇಳಬೇಕು. ಅಮೃತಮಹಲ್ ಕಾವಲಿನ ವಿಚಾರದ ಬಗ್ಗೆ ಅನಿಮಲ್ ಹಸ್ಬೆಂಡ್ರಿ ಡೈರೆಕ್ಟರ್ ಅವರನ್ನು ಕೇಳಬೇಕು, ವೆಟರಿನರಿ ಇಲಾಖೆಗೆ ಕಳುಹಿಸಬೇಕು. ಹೀಗೆ ಅನೇಕ ಕಾರಣಗಳಿಂದ marginal cases ನಲ್ಲಿ ತಡವಾಗುತ್ತದೆ. ಆದರೆ ತಕರಾರು ಏನೂ ಇಲ್ಲದಿದ್ದರೆ ಕೊಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಬಯಲು ಸೀಮೆಗಳಲ್ಲಿ ಅದರಲ್ಲೂ ಬೆಂಗಳೂರು, ಕೋಲಾರ, ತುಮಕೂರುಗಳಲ್ಲಿರತಕ್ಕ ಕಾಡುಗಳ ಸರ್ವೆ ಮಾಡಿದಂತೆ ಮಲೆನಾಡಿನಲ್ಲಿ ಅದರಲ್ಲೂ ಬೆಟ್ಟ ಗುಡ್ಡ ಗಳಲ್ಲಿರತಕ್ಕ ಕಾಡನ್ನೂ ಸರ್ವೇ ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಸಲಹೆ ಏನೋ ಒಳ್ಳೆಯದು. ಬೆಟ್ಟಗುಡ್ಡಗಳಲ್ಲಿ ಗೋಮಾಳ insufficient ಆಗಿದ್ದರೆ ಕೊಡುವುದಕ್ಕೆ ನಿಧಾನ ಮಾಡುತ್ತಾರೆ. ಅದು ಸರ್ಕಾರಕ್ಕೆ ಬರುತ್ತದೆ.

ಶ್ರೀ ಕೆ. ಲಕ್ಕಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಎರಡು ವರ್ಷಗಳಿಗೆ ಮೇಲ್ಪಟ್ಟು ಒಂದು ಅರ್ಜಿ ಇದೆ ಎಂದು ಹೇಳಿದ್ದಾರೆ. ಯಾವ ಕಾರಣಕ್ಕೋಸ್ಕರ ಎರಡು ವರ್ಷಗಳಿಂದ ಅದನ್ನು ಇಟ್ಟು ಕೊಂಡಿದ್ದೀರಿ? ಅದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾವುದೋ ಒಂದು ಅರ್ಜಿಮಾತ್ರವಿತ್ತು. ಅದನ್ನು ಬೇರೆ ಒಂದು ಡಿಪಾರ್ಟ್‌ಮೆಂಟಿಗೆ ಕಳುಹಿಸುತ್ತಿರುವುದರಿಂದ ಸ್ವಲ್ಪ ನಿಧಾನವಾಗಿದೆ. ಅದು ಹಾಗೆಯೇ ಪೆಂಡಿಂಗ್ ಆಗಿ ಉಳಿದಿದೆ. ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸ್ಥಳೀಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅರಣ್ಯ ಇಲಾಖೆಯ ಗೇರುಬೀಜದ ಪ್ಲಾಂಟೇಷನ್ಸ್ ಖಾತೆ ಮಾಡಬಾರದು.

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಕೂಡ ಅರಣ್ಯ ಇಲಾಖೆಯವರು ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಅರ್ಜಿದಾರರ ಸಂಖ್ಯೆ ಜಾಸ್ತಿ ಇದ್ದರೆ ಆ ರೀತಿ ಮಾಡುತ್ತಾರೆ

Construction of a new Bridge across Bhadra river near Bhadravathi.

*Q.—156. Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that they have sanctioned the construction of a new bridge across Bhadra River in Bhadravathi town ;

(*b*) the reasons for not commencing the construction of the Bridge ?

A.—Sri VEERENDRA PATIL (Minister for Public Works).—

(*a*) No.

(*b*) Does not arise in view of reply to clause (*a*) above.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾನದಿಗೆ ಸೇತುವೆ ಕಟ್ಟುವ ಕಾಮಗಾರಿಯನ್ನು ಮಂಜೂರು ಮಾಡಿರುವುದು ನಿಜವಲ್ಲವೆಂದು ಹೇಳಿದ್ದಾರೆ. ಮಂತ್ರಿಗಳು ಕೆಲವು ದಿವಸಗಳ ಹಿಂದೆ 3 ಸ್ಥಳಗಳ ಪೈಕಿ ಒಂದು ಸ್ಥಳವನ್ನು ಅಜಮಾಯಿಷಿ ಮಾಡಿ ಒಂದನೇ ಸೈಟಿನ ಬಗ್ಗೆ ಆಗತಕ್ಕ ಮೌಲ್ಯವನ್ನು ಕಟ್ಟಬಹುದೆಂದು ನಮಗೆಲ್ಲಾ ಪತ್ರ ಬರೆದಿರುವುದು ನಿಜವೇ ?

Mr. SPEAKER.—Whatever correspondence takes place cannot be disclosed. Merely visiting a place and approving of a site does not amount to sanction. The Members should take a little more care. If they disclose any conversation that has taken placo, it will be embarrassing to every body. ಖಾಸಗೀ ವಿಷಯಗಳ ಬಗ್ಗೆ ಮಂತ್ರಿಗಳಿಗೂ, ಸದಸ್ಯರಿಗೂ ನಡೆದಿರುವ ಮಾತುಕತೆಗಳ ಅಂಶವನ್ನು ಈ ಸಭೆಯಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಂತಹ ಸಂದರ್ಭದಲ್ಲಿ ಅವರು ಆಶ್ವಾಸನೆ ಕೊಟ್ಟರೆ ಆಗ ಏನು ಮಾಡಬೇಕು ?

ಅಧ್ಯಕ್ಷರು.—ಖಾಸಗಿಯಾಗಿ ಮಾತನಾಡಿದ್ದ ವಿಷಯವನ್ನು ಆ ರೀತಿ ನಮಗೆಲ್ಲಾ ಮಂತ್ರಿಗಳು ಪತ್ರ ಬರೆದಿರುತ್ತಾರೆಂದು ಹೇಳಬೇಡಿ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಂತ್ರಿಗಳು ಇಲ್ಲಿಗೆ ಬಂದಿದ್ದಾಗ ಸ್ಥಳವನ್ನು ಚುನಾಯಿಸಿ ದುಡ್ಡು ಕಟ್ಟಬೇಕೆಂದು ನಮಗೆ ಹೇಳಿದ್ದನ್ನು ತೀರ್ಮಾನಮಾಡಿ, ಸೈಟು ನಂಬರ್ ಒಂದರಲ್ಲಿ ನಿಮಗೆ ಸೇತುವೆ ಕಟ್ಟಿಕೊಡುತ್ತೇವೆಂದು ಹೇಳಿದ್ದು ನಿಜವೇ ?

ಅಧ್ಯಕ್ಷರು.—ಅದನ್ನು ಸ್ಯಾಂಕ್ಷನ್ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆಯೇ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೌದು. ಸೇತುವೆ ಕಟ್ಟುತ್ತೇವೆಂದು ಹೇಳಿದರೆ ಮಂಜೂರು ಮಾಡಿದ ಹಾಗೆಯೇ.

†ಶ್ರೀ ವೀರೇಂದ್ರ ಪಾಟೀಲ್.—ಭದ್ರಾವತಿಯಲ್ಲಿ ಈಗಾಗಲೇ ಒಂದು ಸೇತುವೆ ಇದೆ. ಟ್ರಾಫಿಕ್ ಅಲ್ಲಿ ಬಹಳ ಹೆಚ್ಚಾಗಿರುವುದರಿಂದ ಅದನ್ನು ಪ್ರೊಟೆಕ್ಟ್ ಮಾಡಲು ಮತ್ತು ಸುಲಭ ಮಾಡಲು ಮತ್ತೊಂದು ಸೇತುವೆ ಕಟ್ಟುವುದು ಅವಶ್ಯ. ಹಾಗೆಯೇ ಭದ್ರಾವತಿಯ ಹತ್ತಿರ ಇನ್ನೊಂದು ಸೇತುವೆ ಕಟ್ಟುವ ಪ್ರೊಪೋಸಲ್ ಇದೆ. ಅದಕ್ಕಾಗಿ ಈಗಾಗಲೇ ಎರಡು ಮೂರು ಜಾಗಗಳಿವೆ. ಒಂದೇಕಡೆ ಕಟ್ಟಬೇಕೆಂದು ನಾನೇ ಖುದ್ದು ಹೋಗಿ ಸ್ಥಳವನ್ನು ನಿರ್ಧಾರ ಮಾಡಿದ್ದೇನೆ. ಅದನ್ನು ಅಂದಾಜು ಆಗಬೇಕು. ಅಡ್ಮಿನಿಸ್ಟ್ರೇಟಿವ್ ಕಮಿಟಿಯವರು ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಾಗ್ಗೆ ವರ್ಕ್ ಮಂಜೂರಾಯಿತು ಎಂಬುದಾಗಿ ಹೇಳಬಹುದು. ಹಾಗೆಯೇ ಇನ್ನೊಂದು ಜಾಗವೂ ಸಲೆಕ್ಟ್ ಆಯಿತು. ಅದು ಸುಮಾರು 15ಲಕ್ಷ ರೂಪಾಯಿಗಳು ಖರ್ಚಾಗುವ ಯೋಜನೆ. ಇದಕ್ಕೆ ಸ್ವಲ್ಪ ಕೇಂದ್ರ ಸರ್ಕಾರದಿಂದ ಸಹಾಯ ಬರಬಹುದು. 1960—61ರಲ್ಲಿ ಇಂಟರ್‌ಸ್ಟೇಟ್ ಇಕನಾಮಿಕ್ ಇಂಪ್ರೂವ್‌ಮೆಂಟ್ ರೋಡ್ ಪ್ರೋಗ್ರಾಮನ್ನು ಕೇಳಿದ್ದರು. ಅವರು 15 worksನ್ನು

(ಶ್ರೀ ವೀರೇಂದ್ರ ಪಾಟೀಲ್)

ಇಂಕ್ಲೂಡ್ ಮಾಡಿದ್ದಾರೆ 4 ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 15 worksನ್ನು ತೆಗೆದುಕೊಂಡು ಮಾಡಿದ್ದಾರೆ. ಇದು ಅದರಲ್ಲಿ ಸೇರಿದೆ. ಈಗ ಕೇಂದ್ರ ಸರ್ಕಾರದವರು ತುರ್ತು ಪರಿಸ್ಥಿತಿ ಬಂದಿರುವುದರಿಂದ ಫೈನಾನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದರೂ ನಾವು pursue ಮಾಡುತ್ತಾ ಇದ್ದೇವೆ.

ನಾವು ಮುನಿಸಿಪಾಲಿಟಿಯವರನ್ನೂ ಕೇಳಿದ್ದೇವೆ. ಆದರೂ ಅದಕ್ಕೆ ಹಣ ಸಹಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅದೂ ಅಲ್ಲದೆ ಆ ಸೇತುವೆಯನ್ನು ಕಟ್ಟುವುದರಿಂದ ಸಂಚಾರಕ್ಕೆ ಹೆಚ್ಚಿಗೆ ಅನುಕೂಲವಾಗುವುದಿಲ್ಲ ಎನ್ನುವಂಥಾದ್ದೂ ಕೂಡ ಅವರು ಹೇಳಿದ್ದಾರೆ. ಈಗ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆಯುವುದು ಬಹಳ ಕಷ್ಟವಾಗಿದೆ. ಶ್ರೀಮಾನ್ ದೇವೇಂದ್ರಪ್ಪನವರು ಹೇಳಿದರು 25 ಪರ್ಸೆಂಟ್ ಹಣವನ್ನು ಮುನಿಸಿಪಾಲಿಟಿಯವರಿಂದ ನಾನು ಕೊಡಿಸುತ್ತೇನೆಂದು ಮೊದಲು ಮುಂದೆ ಬಂದು ಈಗ ಅವರು ಹಿಂದೆ ಹೋಗಿದ್ದಾರೆ. ಮುನಿಸಿಪಾಲಿಟಿಯವರಿಗೆ ನಾವು ಕಾಗದವನ್ನು ಬರೆದು, ನೀವು 25 ಪರ್ಸೆಂಟ್ ಕಾಸ್ಟ್ ಅನ್ನು ಆ ಸೇತುವೆಗೆ ಕೊಡುತ್ತೀರಾ ಎಂದು ಕೇಳಿದ ಮೇಲೆ. ಅವರು ನಮ್ಮಿಂದ ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಈ ತುರ್ತು ಪರಿಸ್ಥಿತಿಯಲ್ಲಿ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಅದನ್ನು ಕೈಬಿಟ್ಟಿದ್ದೇವೆ

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿಗೆ ತರೀಕೆರೆ ತಾಲ್ಲೂಕಿನಿಂದ ಈ ಸೇತುವೆ ಮುಖಾಂತರ ಕಬ್ಬು ಮತ್ತು ಇತರ ಸಾಮಾನುಗಳ ಸಾಗಾಣಿಕೆ ಇರುವುದರಿಂದ ಷುಗರ್ ಕೇನ್ ಸೆಸ್ಸಿನಿಂದ ಈ ಸೇತುವೆಯನ್ನು ಕಟ್ಟುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಈಗ ಷುಗರ್ ಕೇನ್ ಸೆಸ್ ವಸೂಲು ಮಾಡುವ ಕ್ಷೇತ್ರದಲ್ಲಿ, ಸೇಲ್ಸ್ ಟ್ಯಾಕ್ಸ್, ಇಂಕಂಟ್ಯಾಕ್ಸ್ ಎಲ್ಲಾ ಟ್ಯಾಕ್ಸ್‌ಗಳನ್ನು ವಸೂಲು ಮಾಡುತ್ತೇವೆ. ನಾವು ಎಲ್ಲಿ ಟ್ಯಾಕ್ಸನ್ನು ವಸೂಲು ಮಾಡುತ್ತೇವೆಯೋ ಅಲ್ಲಿಯೇ ಆ ಎಲ್ಲಾ ಹಣವನ್ನು ಖರ್ಚುಮಾಡುತ್ತೇವೆ ಎನ್ನುವ ನೀತಿಯನ್ನು ಅನುಸರಿಸುವುದಕ್ಕಾಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿಯಲ್ಲಿ ಈಗಾಗಲೇ 60 ಸಾವಿರ ಜನಸಂಖ್ಯೆ ಇದೆ. ಅದು ಹೀಗೆಯೇ ಬೆಳೆಯುತ್ತಾ ಒಂದು ಲಕ್ಷ ಜನಸಂಖ್ಯೆ ಆಗುತ್ತದೆ. ಆ ದೃಷ್ಟಿಯಿಂದ ಈ ಸೇತುವೆ ಬಹಳ ಮುಖ್ಯವಾಗಿ ಆಗಲೇಬೇಕಾಗಿದೆ. ಆದ್ದರಿಂದ ಯಾವ ರೀತಿಯಿಂದಲಾದರೂ ಇದಕ್ಕೆ ಹಣವನ್ನು ಒದಗಿಸಿಕೊಂಡು ಅದರ ಜೊತೆಗೆ ಭದ್ರಾವತಿಯ ಕಾರ್ಖಾನೆಯವರಿಂದಲೂ ಸ್ವಲ್ಪ ಹಣವನ್ನು ತೆಗೆದುಕೊಂಡು ಈ ಸೇತುವೆಯನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಸೇತುವೆಯೇನೋ ಬಹಳ ಮುಖ್ಯವಾಗಿದೆ. ಅಲ್ಲಿ ಸಂಚಾರ ಕೂಡ ಹೆಚ್ಚಾಗಿದೆ. ಆದ್ದರಿಂದ ಅಲ್ಲಿ ಇನ್ನೊಂದು ಸೇತುವೆಯನ್ನು ಕಟ್ಟತಕ್ಕ ಅವಶ್ಯಕತೆ ಇದೆ. ಆ ಕ್ಷೇತ್ರದ ಮಾನ್ಯ ಸದಸ್ಯರು ಹೇಳಿದ ಹಾಗೆ ಭದ್ರಾವತಿಯ ಕಾರ್ಖಾನೆಯವರನ್ನೂ ಸಹ ಹಣ ಸಹಾಯವನ್ನು ಕೇಳಿದ್ದೇವೆ. ಅವರು ನಮಗೆ ಆ ಸೇತುವೆ ಬೇಕಾಗಿಲ್ಲ. ನಾವೂ ಅದಕ್ಕೆ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆ ಮೇಲೆ ಮುನಿಸಿಪಾಲಿಟಿಯವರೂ ಅದಕ್ಕೆ ದುಡ್ಡು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಈಗ ಎಮರ್ಜೆನ್ಸಿ ಬಂದಿದೆ ನಾವು ಅದಕ್ಕೆ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಅದು ಸಣ್ಣ ಸೇತುವೆಯಾದರೂ ಅದಕ್ಕೆ 15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಈಗ ಸದ್ಯದಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Publishing of the Seniority Lists of Non-Gazetted and Gazetted Officers of Education Department.

*Q.—186. Smt. B. L. SUBBAMMA (Chickmagalur).—

Will the Government be pleased to state :—

(a) the reasons for not publishing the Seniority Lists of non-Gazetted Officers and Gazetted Officers of Education Department so far ;

(b) the principles that are taken into consideration while determining the seniority ;

(c) whether it is a fact that injustice has been done to old Mysore Officials in connection with the promotions made till now in the Education Department after the Reorganisation of the State ;

(d) the time required to finalise and publish the said list ?

A.—SRI S. R. KANTHI (Minister for Education) [on behalf of SRI S. NIJALINGAPPA (Chief Minister)].—

(a) *Gazetted Officers.*—As regards the Gazetted Officers, the provisional I. S. S List has already been published. The final list can be issued only after the Government of India communicate their decisions on the representations of the aggrieved officers against the provisional list.

Non-Gazetted Officers.—Provisional lists of non-Gazetted Officers of the Education Department have been circulated. The revised list is being prepared in accordance with the decision of Government in January 1964. The revised list will be published after scrutiny of the objections from the officials.

(b) *Vide* O. M. No. SS. 7081-7181/SRD, dated 8th November 1956 and O. M. No. GAD 47 IDI 59, dated 21st December 1959 (copies placed on the Table).‡

(c) No.

(d) It is expected that the lists should be finalised within the course of the year.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ತಾತ್ಕಾಲಿಕವಾಗಿ ನೌಕರರಿಗೆ ಬಡ್ತಿಗಳನ್ನು ಕೊಡತಕ್ಕ ಸೀನಿಯಾರಿಟಿ ಪಟ್ಟಿಗಳನ್ನು ತಯಾರುಮಾಡುವಾಗ ನೌಕರರು ಕೆಲಸಕ್ಕೆ ಸೇರಿದ ತಾರೀಕನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರೋ ಅಥವಾ ಅವರ ಸಂಬಳವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರೋ ?

†ಶ್ರೀ ಎಸ್. ಆರ್. ಕಂಠಿ.—ಬರೀ ಸಂಬಳವನ್ನೇ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವ ಸಂಬಂಧದಲ್ಲಿ ಎರಡು ನೋಟಿಫಿಕೇಷನ್‌ಗಳಿವೆ. ಅವುಗಳ ಪ್ರಕಾರ ಅನೇಕ ವಿಚಾರಗಳನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ. ಅನಂತರ ಅವರ ಸಂಬಳವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಭಾರತ ಸರ್ಕಾರದವರ ಕೊನೆಯ ತೀರ್ಮಾನವನ್ನು ಪಡೆದ ನಂತರ ಮಾತ್ರವೇ ಈ ಸೀನಿಯಾರಿಟಿ ಪಟ್ಟಿಯನ್ನು ಫೈನಲೈಸ್ ಮಾಡಬೇಕಾಗುತ್ತದೆ ಎಂದು ಹೇಳಿದ್ದೀರಿ, ಈಗಾಗಲೇ ಮೈಸೂರು ಸರ್ಕಾರದವರು ಒಂದು ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿ ಅದನ್ನು ಭಾರತ ಸರ್ಕಾರಕ್ಕೆ ಕಳುಹಿಸಿ ಕೊಟ್ಟು ಎಷ್ಟು ವರ್ಷಗಳಾಯಿತು, ಅದು ಇನ್ನೂ ಫೈನಲೈಜ್ ಆಗದೆ ಇರುವುದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಕಂಠಿ.—ಈಗ ಕೆಲವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಇನ್ನು ಕೆಲವು ಉಳಿದಿವೆ. ಮಾನ್ಯ ಸದಸ್ಯರಿಗೆ ಈಗ ಯಾವ ಇನ್‌ಫರ್‌ಮೇಷನ್ ಬೇಕು ಎಂದು ಹೇಳಿದರೆ ಅದನ್ನು ಕೊಡುತ್ತೇವೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಈ ಸೀನಿಯಾರಿಟಿ ಲಿಸ್ಟು ತಯಾರುಮಾಡುವುದನ್ನು ರಾಜ್ಯ ಸರ್ಕಾರದವರು ಇಂಡಿಯಾ ಸರ್ಕಾರದವರ ಮೇಲೆ ಹಾಕಿ, ಇಂಡಿಯಾ ಸರ್ಕಾರದವರು ರಾಜ್ಯ ಸರ್ಕಾರದವರ ಮೇಲೆ ಹಾಕಿ ಹಾಗೆಯೇ ಎಷ್ಟು ವರ್ಷಗಳ ಕಾಲ ಅದನ್ನು ಮುಂದುವರಿಸುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ನಾವು ಕೇಂದ್ರ ಸರ್ಕಾರದವರ ಮೇಲೆ ಹಾಕುವ ಪ್ರಶ್ನೆ ಅಲ್ಲ. ಗೆಜೆಟೆಡ್ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯಾಗಿದ್ದರೆ ಅದನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆ. ನಾನ್ ಗೆಜೆಟೆಡ್ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯನ್ನು ನಾವು ಮಾಡುತ್ತೇವೆ.

‡ Placed in the Mysore Legislature library, *vide* No. 1/CA—Budget Session, 1964.

ಶ್ರೀ ಸಿ. ಆರ್. ರಂಗೇಗೌಡ.—(ಬಿ) ಗೆ ಉತ್ತರವಾಗಿ ಗೆಜೆಟೆಡ್ ಅಧಿಕಾರಿಗಳ ವಿಷಯದಲ್ಲಿ ಹೇಳುವುದಾರೆ, ತಾತ್ಕಾಲಿಕ ಅಂತರ-ರಾಜ್ಯ ಸೀನಿಯಾರಿಟಿ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ತಾತ್ಕಾಲಿಕ ಪಟ್ಟಿಯ ವಿರುದ್ಧವಾಗಿ ಭಾದಿತ ಅಧಿಕಾರಿಗಳು ಮಾಡಿಕೊಂಡಿರುವ ಮನವಿಗಳ ಸಂಬಂಧದಲ್ಲಿ ಭಾರತ ಸರ್ಕಾರದವರು ತಮ್ಮ ತೀರ್ಮಾನಗಳನ್ನು ತಿಳಿಸಿದನಂತರವೇ ಈ ಪಟ್ಟಿಯನ್ನು ಅಖೈರಾಗಿ ಸಾದರ್ಮಾಡಬೇಕಾಗುತ್ತದೆ ಎಂದು ಹೇಳಿದ್ದೀರಿ, ಆ ಪಟ್ಟಿಯಲ್ಲಿ ಈಗಾಗಲೇ ದೇಶದ ವಿವಿಧ ಭಾಗಗಳಿಂದ ಹಳೆಯ ಮೈಸೂರಿಗೆ ಬಂದಿರತಕ್ಕ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಅನೇಕ ಕಡೆಗಳಿಗೆ ಕಳುಹಿಸಿದ್ದೀರಿ, ಈಗಾಗಲೇ ಆ ಭಾಗದ ಎಷ್ಟು ಜನಗಳಿಗೆ ಪ್ರಮೋಷನ್ ಕೊಟ್ಟು ಅವರನ್ನು ಎಲ್ಲೆಲ್ಲಿಗೆ ಕಳುಹಿಸಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಇನ್‌ಫರ್‌ಮೇಷನ್ ಅನ್ನ ಕೊಡುವುದಕ್ಕಾಗುವುದಿಲ್ಲ. ಈಗ ನಾವು ಒಂದು ಪ್ರೊವಿಜನಲ್ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡಿದ್ದೇವೆ ಆ ಪ್ರಕಾರ ಅವರಿಗೆ ಪ್ರಮೋಷನ್ ಕೊಡುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕೆಲವು ಅಧಿಕಾರಿಗಳಿಗೆ ಅನ್ಯಾಯವಾಗಿದೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ಈಗ ಅದರಲ್ಲಿ ಯಾರಿಗೆ ಅನ್ಯಾಯವಾಗಿದೆ ಎಂದು ಸೀನಿಯಾರಿಟಿ ಪಟ್ಟಿಯನ್ನು ತಮ್ಮ ಮುಂದೆ ಇಟ್ಟರೆ ಅದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದರಿಂದ ಈಗ ಯಾರಿಗೂ ಅನ್ಯಾಯವಾಗಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಆ ಸೀನಿಯಾರಿಟಿ ಪಟ್ಟಿಗಳು ಇನ್ನೂ ಫೈನಲೈಜ್ ಆಗಿಲ್ಲ. ಈಗ ಎಲ್ಲವನ್ನೂ ನೋಡುತ್ತಿದ್ದೇವೆ.

ಶ್ರೀಮತಿ ನಾಗರತ್ನಮ್ಮ (ಹಿರೇಮಠ).—ಕೆಲವು ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದ್ದೀರಿ, ಎಲ್ಲವನ್ನು ಫೈನಲ್ಲಾಗಿ ಸರಿಮಾಡುತ್ತೇವೆ ಎಂದು ಹೇಳಿದರೆ ಅದರ ಅರ್ಥವೇನು ?

ಶ್ರೀ ಎಸ್. ಆರ್. ಕಂಠಿ.—ಈಗ ಒಂದು ಪ್ರೊವಿಜನಲ್ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿದ್ದೇವೆ. ಅದರ ಬಗ್ಗೆ ಏನಾದರೂ ಮನವಿಗಳಿದ್ದರೆ ಅದನ್ನು ಕೊಟ್ಟರೆ ನಾವು ಅದನ್ನು ನೋಡುತ್ತೇವೆ. ಅದು ನಾನ್ ಗೆಜೆಟೆಡ್ ನೌಕರರಿಗೆ ಸಂಬಂಧಪಟ್ಟದ್ದಾಗಿದ್ದರೆ ನಾವೇ ಅದನ್ನು ಫೈನಲೈಜ್ ಮಾಡುತ್ತೇವೆ. ಗೆಜೆಟೆಡ್ ನೌಕರರಿಗೆ ಸಂಬಂಧಪಟ್ಟದ್ದಾಗಿದ್ದರೆ ಅದನ್ನು ಇಂಡಿಯಾ ಸರ್ಕಾರದವರು ಫೈನಲೈಜ್ ಮಾಡುತ್ತಾರೆ.

ಶ್ರೀ ಬಿ. ಎಲ್. ಗೌಡ.—ಹಂಗಾಮಿ ಸೀನಿಯಾರಿಟಿ ಲಿಸ್ಟ್ ಇಟ್ಟುಕೊಂಡು ಮೆಣಸಿನಕಾಯಿ, ಉಳ್ಳಾಗಡ್ಡಿ, ಆಕರ್, ಈಕರ್ ಮೊದಲಾದವರಿಗೆ ಖಾಯಂ ಆಗಿ ಬಡ್ತಿ ಕೊಡುತ್ತಿದ್ದೀರೇ ವಿನಾ ಹಳೇ ಮೈಸೂರಿನವರಿಗೆ ಯಾರಿಗೂ ಬಡ್ತಿ ಸಿಕ್ಕುತ್ತಾ ಇಲ್ಲ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನನಗೆ ಗೊತ್ತಿರುವ ಹಾಗೆ ವಿದ್ಯಾ ಇಲಾಖೆಯಲ್ಲಿ ಮೆಣಸಿನಕಾಯಿ, ಉಳ್ಳಾಗಡ್ಡಿ ಎನ್ನುವವರು ಯಾರೂ ಇಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈ ಸೀನಿಯಾರಿಟಿ ಪಟ್ಟಿಯ ಬಗ್ಗೆ ಸಂಬಂಧಪಟ್ಟ ನೌಕರರುಗಳಿಂದ ಬರತಕ್ಕ ಆಕ್ಷೇಪಣೆಗಳನ್ನು ಪರಿಶೀಲಿಸಿ ಅದನ್ನು ಪ್ರಕಟಿಸಲಾಗುವುದು ಎಂದು ಹೇಳಿದ್ದೀರಿ, ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಉತ್ತರದಲ್ಲಿ ಹೇಳಿದ್ದೇನೆ. ಈ ವರ್ಷದಲ್ಲಿಯೇ ಸದರಿ ಪಟ್ಟಿಗಳನ್ನು ಅಖೈರುಗೊಳಿಸುತ್ತೇವೆ ಎಂದು.

ಶ್ರೀ ಇ. ನಾರಾಯಣ ಗೌಡ.—ಇದುವರೆಗೆ ಎಷ್ಟು ಜನ ಅಧಿಕಾರಿಗಳು ತಮಗೆ ಅನ್ಯಾಯವಾಗಿದೆ ಎಂದು ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಅನ್ಯಾಯವಾಗಿದೆಯೆಂದು ಎಷ್ಟು ಜನ ಅಪ್ಲಿಕೇಷನ್‌ಗಳನ್ನು ಕೊಟ್ಟಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ವಿದ್ಯಾ ಇಲಾಖೆಯಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕ, ಸೌತ್ ಕೆನರಾ, ಹಳೆಯ ಮೈಸೂರು ಪ್ರದೇಶ, ಮುಂಬೈ ಕರ್ನಾಟಕ ಎಲ್ಲಾ ಕಡೆಗಳಿಂದಲೂ ಅನ್ಯಾಯವಾಗಿದೆ ಎಂದು ಅಪ್ಲಿಕೇಷನ್‌ಗಳು ಬಂದಿವೆ.

Sri S. SIVAPPA.—Pending the finalisation of the Inter Seniority lits what prompted the Government to give promotions to certain persons whom the Minister favours or persons coming from the region of the Minister ?

ಶ್ರೀ ಎಸ್ ಆರ್. ಕಂಠಿ.—ಅದು ಎಲ್ಲಾ ಸುಳ್ಳು. ಯಾವ ರೀಜನ್ನೂ ಇಲ್ಲ. ಮಾನ್ಯ ಸದಸ್ಯರು ತಿಳಿದ ಕೊಂಡಿರುವುದು ತಪ್ಪು. ಆ ಲಿಸ್ಟ್ ಅನ್ನು ಮೊದಲೇ ಮಾಡಿದ್ದಾರೆ. ನಾನು ವಿದ್ಯಾ ಖಾತೆಯ ಮಂತ್ರಿಗಳಾಗಿ ಬಂದು-ಎರಡು ವರ್ಷಗಳಾಯಿತು. ನಾನು ಈ ಸ್ಥಾನಕ್ಕೆ

ಬರುವುದಕ್ಕಿಂತ ಮುಂಚೆಯೇ ಆ ಲಿಸ್ಟನ್ನು ತಯಾರು ಮಾಡಿದ್ದರು. ಈಗ ನಾವು ಆ ಲಿಸ್ಟಿನ ಪ್ರಕಾರ ಫಾಲೋ ಮಾಡುತ್ತಿದ್ದೇವೆ.

ಶ್ರೀ ಜೆ. ಎಚ್. ಕಡಾಡಿ.—ಕೇವಲ ರೀಜನ್‌ಪ್ರೈಸ್ ಮಾಡಿದ್ದಾರೆ ಎಂದು ಮಂತ್ರಿಗಳ ಮೇಲೆ ಅಪವಾದ ಬರುವ ರೀತಿ ಮಾನ್ಯ ಸದಸ್ಯರು ಮಾತನಾಡಿದರು. ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯನ್ನು ಪ್ರೊವಿಷನಲ್ ಆಗಿ ಮಾಡಿರುವುದರ ಮೇಲೆ ಏನೇನು ತಕರಾರುಗಳು ಬಂದಿವೆಯೋ ಅವುಗಳನ್ನು ಕೂಲಂಕಷವಾಗಿ ವಿಚಾರ ಮಾಡಲಿಕ್ಕೆ ಏನಾದರೂ ಒಂದು ಕಮಿಟಿಯನ್ನು ಮಾಡಿದೆಯೋ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಅಪವಾದ ಕೊಡಬೇಕು ಎಂದರೆ ಯಾರಿಗಾದರೂ ಕೊಡುವುದಕ್ಕೆ ಬರುತ್ತದೆ. ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಿದರೆ ಅಪವಾದ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಯುತ್ತದೆ. ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯನ್ನು ಸರ್ಕಾರದವರು ಪ್ರೊವಿಷನಲ್ ಆಗಿ ಮಾಡಿದ್ದಾರೆ. 1964ನೇ ಜನವರಿಯಲ್ಲಿ ಸರ್ಕಾರದವರು ಒಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ಯಾರದಾದರೂ ಆಕ್ಷೇಪಣೆಗಳಿವೆಯೇ ಎಂದು ಕೇಳುತ್ತಿದ್ದೇವೆ. ಆ ತರಹ ಅಬ್ಜೆಕ್ಷನ್‌ಗಳು ಬಂದ ಮೇಲೆ ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಎಚ್. ಶಿವಪ್ಪ.—ಈ ಇಲಾಖೆಯಲ್ಲಿ ಪ್ರಮೋಷನ್ನುಗಳನ್ನು ಕೊಡುವ ವಿಚಾರದಲ್ಲಿ ಬಹಳವಾಗಿ ಅತೃಪ್ತಿ ಇದೆ ಎಂದು ಗೊತ್ತಾಗಿದೆ. ಸರ್ಕಾರದವರು ಈ ಬಗ್ಗೆ ವಿಚಾರಣೆ ನಡೆಸಿ ಎಲ್ಲಿ ಅನ್ಯಾಯವಾಗಿದೆಯೋ ಅದನ್ನು ಪರಿಹಾರ ಮಾಡತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಸ್. ಆರ್. ಕಂಠಿ.—ಬರೀ ಅತೃಪ್ತಿಯ ವಿಚಾರ ಹೇಳಿದರೆ ಆಗುವುದಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಅತೃಪ್ತಿಯುಂಟಾಗಿದೆ ಎಂದು ಹೇಳಿದರೆ ನಾನು ಕೇಳುವುದಕ್ಕೆ ಸಿದ್ಧನಾಗಿದ್ದೇನೆ.

Sri B. L. GOWDA.—Shall I mention the names of persons who have been affected?

Mr. SPEAKER.—Not now. Let him pass on the names to the chair and the same will be sent to the Minister.

Sri S. M. KRISHNA.—Sir, on a point of order. When the Leader of the Opposition made a categorical assertion that certain persons have been given promotions pending the finalisation of the Inter-State seniority list, the Minister refuted it with all the force at his command. Now there is another ho'nble Member Sri B. L. Gowda who would like to quote an example wherein promotions have been given. May I know what prevents that information being given?

Mr. SPEAKER.—It is because of lack of time during the question hour. He must remember that it is not possible to make a distinction between one member and another. If instances are to be mentioned they should be brought to my notice first.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನನ್ನ ಕೈಯಲ್ಲಿ ಅನ್ಯಾಯವಾಗಿಲ್ಲ ಎಂದು ಮಂತ್ರಿಗಳು ತಿಳಿಸಿದರು. ಒಬ್ಬ ಗೆಜೆಟೆಡ್ ಅಧಿಕಾರಿಗಳು ಇನ್ನೂ ಹೆಚ್ಚಿನ ಹುದ್ದೆಗೆ ಹೋಗತಕ್ಕ ಸಂದರ್ಭದಲ್ಲಿ ಅವರು ಆ ಹುದ್ದೆಗೆ ಏರಬಾರದೆಂದು ರಿಟೈರ್ ಆಗತಕ್ಕ ಒಬ್ಬ ಅಧಿಕಾರಿಗೆ, ವಿದ್ಯಾ ಇಲಾಖೆಯಲ್ಲಿ ನಾಲ್ಕು ತಿಂಗಳ ಕಾಲ ಎಕ್ಸ್‌ಟೆನ್ಷನ್ ಕೊಟ್ಟು ಅವರನ್ನು ಮುಂದುವರಿಸಿದ್ದು ನಿಜವೇ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಎಕ್ಸ್‌ಟೆನ್ಷನ್ ಕೊಡುತ್ತಾರೆ.

Construction of a Tank near Sasalapura in Sathanoor Hobli, Kanakapura Taluk.

*Q.—89. **Sri K. L. SHIVALINGE GOWDA** (Virupakshipura).—Will the Government be pleased to state:—

(a) whether it is a fact that Survey has been made some years back to cocstruct a Tank near Sasalapura, Sathanoor Hobli, Kanakapura Taluk;

(SRI K. L. SHIVALINGE GOWDA)

(b) whether it is also a fact that the Government has ordered not to construct the said tank as it would affect the supply of water under the "Bheema Anekat" and that the lands of Sasalapura Village will be submerged;

(c) whether it has come to their notice that the ryots of this area are alarmed due to the re-survey of the said tank:

(d) whether they intend to take immediate steps to stop this Survey work ?

A.—Sri ALUR HANUMANTHAPPA (Deputy Minister for Minor Irrigation).—

(a) Yes.

(b) No such order was issued.

(c) No.

(d) Not necessarily.

ಶ್ರೀ ಕೆ. ಎಲ್. ಶಿವಲಿಂಗೇ ಗೌಡ.—ಸಾಸಲಾಪುರದ ಬಳಿ ಒಂದು ಕೆರೆಯನ್ನು ಕಟ್ಟಲು ಸರ್ವೆ ಕಾರ್ಯ ನಡೆದಿದೆ. ಇದಕ್ಕೆ ಒಂದು ಮೈಲಿ ಕೆಳಗಡೆ 10 ಲಕ್ಷ ರೂಪಾಯಿ ಖರ್ಚಿನಲ್ಲಿ ಭೀಮಾ ಅಣೆಕಟ್ಟನ್ನು ಕಟ್ಟುವ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಹೀಗಿರುವಾಗ ಇದಕ್ಕೆ ಒಂದು ಮೈಲಿ ಮೇಲ್ಗಡೆ ಸಾಸಲಾಪುರ ಬಳಿ ಒಂದು ಪ್ರಾಜೆಕ್ಟ್‌ಗಾಗಿ ಸರ್ವೆ ನಡೆಸುವ ಉದ್ದೇಶವಾದರೂ ಏನು ?

† ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ರೀಸರ್ವೆ ಮಾಡತಕ್ಕ ಪರಿಸ್ಥಿತಿ ಈಗ ಇಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಒಂದು ವೇಳೆ ಅದನ್ನು ತಮ್ಮ ಗಮನಕ್ಕೆ ತಂದರೆ ಮುಂದಿನ ಕ್ರಮ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಮಾಡಬೇಕಾದ ಅವಶ್ಯಕತೆ ಸದ್ಯದಲ್ಲಿ ಕಾಣುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿ ಸರ್ವೆ ಮಾಡುತ್ತಿದ್ದಾರೆಂದು ಸ್ಥಳೀಯ ಸದಸ್ಯರು ಹೇಳುತ್ತಾರೆ, ಮಾನ್ಯ ಮಂತ್ರಿಗಳು ಸರ್ವೆ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಹಾಗಾದರೆ ಅಧಿಕಾರಿಗಳು ಅಲ್ಲಿಗೆ ಹಾವಸೂಲಿಗೇನಾದರೂ, ಹೋಗಿದ್ದರೇ ! ಏನು ಕಾರಣದಿಂದ ಹೋಗಿದ್ದರು ?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಮಾಡಿದೆ, ಫೀಸಿಬಲ್ ಅಲ್ಲ ಎಂದು ಕೈಬಿಟ್ಟಿದೆ.

Mr. SPEAKER.—Qustion hour is over.

Member's Representations.

ಶ್ರೀ ಬಿ. ಎಲ್. ಗೌಡ.—ಸಭಾಪತಿಗಳೇ, ಮೊನ್ನೆಯ ದಿವಸ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಬಿಲ್ಲನ್ನು ಈ ಸಭೆಯಲ್ಲಿ ಮಂಡಿಸಲು ಸದ್ಯಕ್ಕೆ ಇಚ್ಛಿಸುವುದಿಲ್ಲ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು. ಆದರೆ ಇವತ್ತು ಪತ್ರಿಕೆಗಳಲ್ಲಿ ಓದಿದ್ದರಲ್ಲಿ ಮುಂದಿನವರ್ಷದಿಂದ ಸರ್ಚಾರ್ಜ್ ಇರುವುದಿಲ್ಲ ಎಂದು ತಿಳಿದುಬಂತು. ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ ಅನೇಕ ಸಂದರ್ಭಗಳಲ್ಲಿ ಇಂಥ ಮುಖ್ಯವಾದ ನಿರ್ಧಾರಗಳನ್ನು ಈ ಸಭೆ ನಡೆಯುತ್ತಿರುವಾಗಲೂ ಸಭೆಯ ಗಮನಕ್ಕೆ ತರದೆ, ಪತ್ರಿಕೆಗಳಲ್ಲಿ ಪ್ರಕಟವಾಗುವುದು ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಲೋಪ ತಂದಂತಾಗುವುದಿಲ್ಲವೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಅದು ಪತ್ರಿಕಾ ಪ್ರಕಟಣೆಯೇ ಅಥವಾ ಮೇಲ್‌ಮನೆಯಲ್ಲಿ ಹೇಳಿಕೆ ಕೊಟ್ಟದ್ದೋ ?

ಶ್ರೀ ಬಿ. ಎಲ್. ಗೌಡ.—ಈ ಸಭೆ ನಡೆಯುತ್ತಿರುವಾಗ ಆ ವಿಚಾರವನ್ನು ಇಲ್ಲಿಯೂ ಏಕೆ ತಿಳಿಸಬಾರದಾಗಿತ್ತು ?

Mr. SPEAKER.—The Chair will deal with it.

MOTION OF THANKS TO THE GOVERNOR'S ADDRESS.

(Debate continued)

ಶ್ರೀ ಎ. ಜಿ. ದೊಡ್ಡಮೇಟಿ (ರೋಣ).—ಸ್ವಾಮಿ, ನಿನ್ನೆ ನಾನು ಮಾತನಾಡುವ ಕಾಲಕ್ಕೆ, ರಾಜ್ಯಪಾಲರು ಭ್ರಷ್ಟಾಚಾರದ ನಿವಾರಣೋಪಾಯದ ಬಗ್ಗೆ ಏನೂ ನಿರ್ದಿಷ್ಟವಾದ ಸೂಚನೆಯನ್ನು ತಮ್ಮ ಭಾಷಣದಲ್ಲಿ ಮಾಡಲಿಲ್ಲ ಎಂದು ಹೇಳಿದೆ. ನಮ್ಮ ದೇಶದಲ್ಲಿ ಈ ಭ್ರಷ್ಟಾಚಾರದ ನಿವಾರಣೆಯ ಬಗ್ಗೆ ಸಾಕಷ್ಟು ಉಪಾಯಗಳು ಕೇಂದ್ರದಿಂದ ಕೈಗೊಳ್ಳಲ್ಪಟ್ಟಿವೆ. ಭ್ರಷ್ಟಾಚಾರದ ನಿವಾರಣೋಪಾಯಗಳನ್ನು ಕೇಂದ್ರದವರು ಕೈಗೊಂಡಿದ್ದಾರೆ. ಕೇಂದ್ರದವರು ಕೈಗೊಂಡ ಈ ನಿವಾರಣೋಪಾಯಗಳು ಸಾಕಷ್ಟು ತೃಪ್ತಿಕರವಾಗಲಿಲ್ಲ ಎನ್ನುವ ಮಾತನ್ನು ಅವರು ಹೇಳಬಹುದಾಗಿತ್ತು. ಸರ್ಕಾರದವರು ಈ ದಿಶೆಯಲ್ಲಿ ಯಾವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನುವುದು ನಿಶ್ಚಿತವಿಲ್ಲ. ನಿನ್ನೆ ಪ್ರಶ್ನೋತ್ತರ ಕಾಲದಲ್ಲಿ ಗೃಹ ಮಂತ್ರಿಗಳು ರಾಜಕೀಯ ಭ್ರಷ್ಟಾಚಾರದ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆಂದು ಹೇಳಿದರು. ಅಧಿಕಾರಿಗಳ ಭ್ರಷ್ಟಾಚಾರಕ್ಕಿಂತಲೂ ಅಧಿಕಾರೇತರ ಭ್ರಷ್ಟಾಚಾರ ಬೃಹತ್ ಸ್ವರೂಪ ತಾಳಿದೆ ಎಂದು ಹಲವು ಸಲ ಈ ಸಭೆಯಲ್ಲಿ ನಾನು ಹೇಳಿದ್ದೇನೆ. ಅಧಿಕಾರೇತರರು ಸ್ಪಷ್ಟವಾಗಿ, ನಿರ್ಮಲಚಿತ್ತರಾಗಿ, ಸಚ್ಚಾರಿತ್ರರಾಗಿ ರಾಜಕೀಯ ಭ್ರಷ್ಟಾಚಾರವನ್ನು ನಿವಾರಿಸಿದರೆ ಅಧಿಕಾರಿಗಳ ಭ್ರಷ್ಟಾಚಾರವನ್ನು ನಿವಾರಿಸುವುದರಲ್ಲಿ ವೇಳೆ ಹಿಡಿಯುವುದಿಲ್ಲ ಎನ್ನುವ ಮಾತನ್ನು ಹೇಳುವುದು ಸಹ ತಮಗೆಲ್ಲರಿಗೂ ಒಪ್ಪಿಗೆಯ ಮಾತಾಗಿದೆ. ಆ ಬಗ್ಗೆ ಸಹ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು.

ಈ ಬಗ್ಗೆ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು. ಇದನ್ನೇಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದ ಹೊರಗಿರುವ ನಮ್ಮ ಶತ್ರುಗಳಾದ ಚೈನ ಮತ್ತು ಪಾಕಿಸ್ತಾನಗಳಿಂದ ನಮಗಾಗಬಹುದಾದ ತೊಂದರೆಗಿಂತ ಹೆಚ್ಚಾಗಿ ನಮ್ಮದೇಶದೊಳಗಿರುವ ಅನಾಚಾರ ಮತ್ತು ಭ್ರಷ್ಟಾಚಾರಗಳಿಂದ, ಅಶುದ್ಧ ನಡವಳಿಕೆಯಿಂದ ಹೆಚ್ಚಿನ ಅನಾಹುತ ಆಗುವ ಸಂಭವವಿದೆ. ಈ ಕಾರಣಕ್ಕಾಗಿ ಇದಕ್ಕೆ ಹೆಚ್ಚು ಗಮನ ಕೊಡಬೇಕು. ನಾವು ಎಷ್ಟೋವೇಳೆ ಭ್ರಷ್ಟಾಚಾರದ ವಿಷಯವನ್ನು ಮಾತನಾಡುತ್ತೇವೆ, ಆದರೆ ಸಾಧಾರಣವಾಗಿ ನಮಗೆ ತಿಳಿದೋ ತಿಳಿಯದೆಯೋ ಇದನ್ನು ತಡೆಗಟ್ಟುವ ಪ್ರಯತ್ನದಲ್ಲಿ ನಮಗೆ ಸೋಲಾಗಿದೆ. ನಾವು ನಮ್ಮ ದೇಶವನ್ನು ರಕ್ಷಣೆ ಮಾಡುವುದಕ್ಕಾಗಿ ದೇಶದಲ್ಲಿ ಭ್ರಷ್ಟಾಚಾರವನ್ನು ನಿವಾರಿಸಲು ಒಂದು ಸರಿಯಾದ ವ್ಯವಸ್ಥೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಪ್ರಯತ್ನ ಮಾಡಿದರೆ ಇನ್ನು ಕೆಲವು ದಿವಸಗಳಲ್ಲಿ ಯಾವುದೇ ಪಕ್ಷ ಅಥವಾ ವ್ಯಕ್ತಿ ಎಂಬ ಭೇದವಿಲ್ಲದೆ ರಾಜಕೀಯದಲ್ಲಿ ಭ್ರಷ್ಟಾಚಾರಕ್ಕೆ ತುತ್ತಾಗಲು ಅವಕಾಶವಿಲ್ಲದಾಗುವುದು...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಸದಸ್ಯರು ನಾವು ನಾವು ಎನ್ನುತ್ತಾರೆ. ಈ ಸಭೆಯ ಸದಸ್ಯರೆಲ್ಲರಿಗೂ ಅನ್ವಯಿಸಿ ಹಾಗೆ ಹೇಳುತ್ತಾರೋ ಅಥವಾ ಬರಿಯ ಕಾಂಗ್ರೆಸ್‌ನವರಿಗೆ ಅದು ಅನ್ವಯಿಸುತ್ತದೆಯೊ ಗೊತ್ತಿಲ್ಲ. ನಾನಂತೂ ಆ ಗುಂಪಿಗೆ ಸೇರಿಲ್ಲ. ಈ ಸಭೆಯ ಸದಸ್ಯರಲ್ಲಿ ನಾನೂ ಸೇರಿದ್ದೇನೆಂದು ಅಧ್ಯಕ್ಷರು ಹೇಳಿದರು. ನಾನು ಎನ್ನುವ ಪದದ ವ್ಯಾಪ್ತಿ ಬಹಳವಾಗಿದೆ. ನಾವು ಎಂದರೆ ಅಧಿಕಾರದಲ್ಲಿರುವವರಲ್ಲದೆ ಈ ಸಭೆಯ ಸದಸ್ಯರು ಎಂದಾದರೆ ಅವರಲ್ಲಿ ಅಧ್ಯಕ್ಷರೂ ಸೇರುತ್ತಾರೆ. ಆದುದರಿಂದ ಈಗ ಮಾತನಾಡುತ್ತಿರುವ ಸದಸ್ಯರು ಸ್ವಲ್ಪ ಎಚ್ಚರಿಕೆಯಿಂದ ಮಾತನಾಡಬೇಕು.—ಇಂಥವರಿಗೇ ಅನ್ವಯಿಸುತ್ತದೆ ಎಂದು ಹೇಳಬೇಕು.

9-30 A.M.

ಶ್ರೀ ಎ. ಜಿ. ದೊಡ್ಡಮೇಟಿ.—ಇಂಥವರಿಗೇ ಅನ್ವಯಿಸುತ್ತಿದೆ ಎಂದು ಹೇಳುವುದು ಶಿಷ್ಟಾಚಾರವಲ್ಲ. ನನ್ನ ಮನಸ್ಸಿನಲ್ಲಿ ಯಾವುದೇ ವ್ಯಕ್ತಿಯಿಲ್ಲ. ಸಮಾಜದಲ್ಲಿ ಭ್ರಷ್ಟಾಚಾರ ಬಹಳವಾಗಿದೆ. ಇದರಲ್ಲಿ ಕಾಂಗ್ರೆಸ್‌ನವರಿರಬಹುದು, ಅಧಿಕಾರಿಗಳಿರಬಹುದು, ಇತರರೂ ಇರಬಹುದು. ಸರಳ ಸ್ವಭಾವದ ಪ್ರಾಮಾಣಿಕರು ಮೂಲೆಗುಂಪಾಗುವ ಸಂಭವವಿದೆ. ಹಿಂದೆ ಆದಿಕರ್ಣಾಟಕರು ಮತ್ತು ಆದಿದ್ರಾವಿಡರನ್ನು ನಮ್ಮ ಸಮಾಜದಲ್ಲಿ ಕೆಲವರು ದೂರವಿಟ್ಟಿದ್ದರು, ಹಿಂದೆ ಬೀಳಿಸಿದ್ದರು. ಆ ರೀತಿ ಸರಳ ಸ್ವಭಾವದ ಪ್ರಾಮಾಣಿಕರು ಹೀನಸ್ಥಿತಿಗೆ ಬರುವ ಸಂಭವವಿದೆ. ಆದುದರಿಂದ ಈಗಲೇ ಇದನ್ನು ತಪ್ಪಿಸಲು ತಕ್ಕ ಪ್ರಚಾರ ಕೆಲಸ ಮಾಡಬೇಕು. ಎಚ್ಚೆತ್ತು ಕೆಲಸ ಮಾಡಬೇಕು. ಬೇರೆ ಬೇರೆ ಪಕ್ಷಗಳಲ್ಲಿರುವ ಇಂಥ ಭ್ರಷ್ಟಾಚಾರೀ ಜನರು ಸಂಘಟನೆಗೊಂಡು ಪ್ರಾಮಾಣಿಕರನ್ನು ಎದುರಿಸುವ ಸಂಭವವಿದೆ. ಆದಕಾರಣ ದೂರದೃಷ್ಟಿಯಿಂದ ಇದನ್ನು ವಿಚಾರ ಮಾಡಿ ಈ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿತ್ತು.

(ಶ್ರೀ ಎ. ಜಿ. ದೊಡ್ಡಮೇಟಿ)

ಬೇರೆ ವಿಷಯಗಳನ್ನು ಹೇಳಬೇಕಾದರೆ, ಸಹಕಾರದ ಬೆಳವಣಿಗೆಯ ಬಗ್ಗೆ ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಮಂತ್ರಿಗಳು ಬೇರೆ ಬೇರೆ ಕಡೆ ಈ ಬಗ್ಗೆ ಹೇಳಿದ್ದಾರೆ. ಸಹಕಾರಿ ಚಳುವಳಿಯಲ್ಲಿ ಸಂಪೂರ್ಣವಾಗಿ ಸರಕಾರಿ ನಿಯಂತ್ರಣವನ್ನು ತಪ್ಪಿಸಿ ಇದು ಪ್ರತ್ಯೇಕವಾಗಿರುವಂತೆ ಮಾಡಬೇಕೆಂದು ಹೇಳಿದ್ದಾರೆ. ಅವರೆ ಸರಕಾರಿ ಶಾಖೆ ಅಥವಾ ಆಡಳಿತದಲ್ಲಿ ಈಗಾಗಲೇ ಏನು ನಡೆದಿವೆ ಎನ್ನುವುದನ್ನು ಅವರು ವಿಚಾರ ಮಾಡಬೇಕು. ಇದುವರೆಗೆ ಸಹಕಾರ ಕ್ಷೇತ್ರದಲ್ಲಿ ಸಹಕಾರದ ಹಾಗೂ ಶಾಸನಸಭೆಗಳ ನಿಯಂತ್ರಣವಿದ್ದರೂ ಅಲ್ಲಿ ಅನೇಕ ಅನ್ಯಾಯಗಳು ನಡೆಯುತ್ತವೆಂದು ಹೇಳುತ್ತಾರೆ. ಹೀಗಿರುವಾಗ ಸಹಕಾರ ಕ್ಷೇತ್ರದಲ್ಲಿ ಯಾವ ವಿಧವಾದ ಸರಕಾರಿ ನಿಯಂತ್ರಣವಿಲ್ಲವಾದರೆ ಅದು ಯಾವ ಗತಿ ಮುಟ್ಟೀತು ಎಂಬುದನ್ನು ಯೋಚನೆ ಮಾಡಬೇಕು. ಏನೋ ಭಾವಾವೇಶವಲ್ಲ ತಾತ್ವಿಕವಾದದ ಮೇಲೆ ಈ ಕ್ಷೇತ್ರವನ್ನು ಪ್ರತ್ಯೇಕ ಪಡಿಸುವುದು ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ನೀರಾವರಿ ಬಾವಿಗಳ ಬಗ್ಗೆ ಸರಕಾರದವರು ಅನೇಕ ಉಪಾಯಗಳನ್ನು ಕೈಗೊಂಡಿದ್ದಾರೆ. 250 ಲಕ್ಷ ರೂಪಾಯಿಗಳಲ್ಲಿ 40 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿವೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಎರಡೂವರೆ ಅಥವಾ ಮೂರು ಸಾವಿರ ರೂಪಾಯಿಗಳನ್ನು ಒಂದೊಂದು ಬಾವಿಗೆ ಸರಕಾರದವರು ಸಾಲ ಕೊಡುತ್ತಿದ್ದಾರೆ. ಇದಕ್ಕೆ ಬಡ್ಡಿ ಹಾಕಿ ಹತ್ತು ಕಂತುಗಳಲ್ಲಿ ವಸೂಲು ಮಾಡುತ್ತಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಈ ಬಾವಿಗಳಲ್ಲಿ ಎಷ್ಟು ಪೂರ್ತಿಯಾಗಿದೆ, ಎಷ್ಟು ಕೆಟ್ಟು ಹೋಗಿದೆ ಎಂದು ವಿಚಾರ ಮಾಡಿದರೆ ಶೇಕಡ 25 ರಷ್ಟಾದರೂ ನಿರುಪಯೋಗವಾಗಿವೆ ಎನ್ನುವುದಕ್ಕೆ ಏನೂ ಅಡ್ಡಿ ಇಲ್ಲ. ಸರಕಾರ ಒಂದು ಕ್ರಮವನ್ನನುಸರಿಸಬೇಕು. ಸರಕಾರ ಈ ಹಣವನ್ನು ಸಾಲವೆಂದು ಕೊಡಬಾರದು. ದೊಡ್ಡ ದೊಡ್ಡ ನೀರಾವರಿ ಜಲಾಶಯಗಳನ್ನು ಕಟ್ಟಿದಾಗ ಹೇಗೆ ಬೆಟರ್‌ಮೆಂಟ್ ಲೆವಿ ಎಂದು ಹಾಕುತ್ತಾರೋ ಹಾಗೆ ಹಾಕಬೇಕು. ಐದಾರು ಎಕರೆ ತೋಟ ಮಾಡುವುದಕ್ಕೆ ಒಂದು ಬಾವಿಗೆ ಧನ ಸಹಾಯ ಮಾಡುತ್ತೀರಿ. ದೊಡ್ಡ ನೀರಾವರಿಗೆ ಬೆಟರ್‌ಮೆಂಟ್ ಲೆವಿ ಹೇಗೆ ಹಾಕುತ್ತಾರೆ ಹಾಗೆ ಆರು ಎಕರೆ ತರಿ ಅಥವಾ ತೋಟ ಮಾಡಿದರೆ ಒಂದು ಎಕರೆಗೆ 500 ರೂಪಾಯಿಗಳಂತೆ ಬೆಟರ್‌ಮೆಂಟ್ ಲೆವಿ ಹಾಕಿ ಅದನ್ನು 25 ಕಂತುಗಳಲ್ಲಿ ವಸೂಲು ಮಾಡುವ ಮಾರ್ಗವನ್ನು ಏಕೆ ಸಣ್ಣ ನೀರಾವರಿಗೆ ಅನುಸರಿಸಬಾರದೆಂಬುದನ್ನು ಯೋಚನೆ ಮಾಡಬೇಕು. ಇದರಿಂದ ಬಡ್ಡಿ ಉಳಿತಾಯವಾಗುವುದಲ್ಲದೆ ಹಣದ ಸದುಪಯೋಗವಾಗುತ್ತದೆ. ಯಾರು ಮಾಡಿದ್ದಾರೆ ಯಾರು ಮಾಡಿಲ್ಲ ಎನ್ನುವುದನ್ನು ತನಿಖೆ ಮಾಡುವುದಕ್ಕೂ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಸರಕಾರ ಈ ಸೂಚನೆಯನ್ನು ನಿಜವಾಗಿಯೂ ಆಲೋಚನ ಮಾಡಬೇಕಾಗಿದೆ. ಪಂಪ್‌ಸೆಟ್ಟುಗಳನ್ನು ಹಂಚುವ ವಿಚಾರದಲ್ಲಿ ಸಾಮಾನ್ಯವಾಗಿ ಉದಾರವಾದ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಆದರೆ ಪಂಪ್‌ಸೆಟ್ಟುಗಳನ್ನು ನಾವೇ ಕೊಡುತ್ತೇವೆ, ಬೇಕಾದವರು ತೆಗೆದುಕೊಳ್ಳಬಹುದು ಎಂದು ಅಧಿಕಾರ ವರ್ಗದ ಮೂಲಕ ಡಂಗುರ ಸಾರಿದರು. ಎಷ್ಟನ್ನು ಹಂಚಿದ್ದಾರೆಂದು ನೋಡಬೇಕು. ಹಂಚಿರುವುದು ಏನೂ ಸಾಲದು. ಮತ್ತು ವಿಳಂಬ ಬಹಳವಾಗಿದೆ. ಇದಕ್ಕೆ ಕಾರಣವೇನೆಂದು ಶೋಧನೆ ಮಾಡಬೇಕು. ಮತ್ತು ವಿಳಂಬವಿಲ್ಲದಂತೆ ವ್ಯವಸ್ಥೆ ಮಾಡಬೇಕು. ಪಂಪುಸೆಟ್ಟುಗಳು ಬೇಗ ರೈತರ ಕೈಸೇರುವಂತೆ ಮಾಡಬೇಕು.

ಭೂಸುಧಾರಣೆಯ ಕಾಯಿದೆಯ ವಿಚಾರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಕೇಂದ್ರ ಸರಕಾರದಲ್ಲಿ ಇದಕ್ಕಿರುವ ಕೆಲವು ಅಡ್ಡಿ ಆತಂಕಗಳನ್ನು ದೂರಮಾಡುವ ಪ್ರಶ್ನೆ ಇದೆ, ಬೇಗ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದಾರೆ. ಬೇಗ ಎನ್ನುವುದು ಯಾರ ಕೈಗೂ ಸಿಕ್ಕದೇಯಿರುವ ವಸ್ತುವಾಗಿದೆ. ಬೇಗ ಎನ್ನುವ ಪದ ಸರಕಾರಕ್ಕೆ ಒಂದು ಶಾಪ ಎಂದು ಕಾಣುತ್ತದೆ. ಈ ಬಗ್ಗೆ ಒಂದು ರೀತಿಯಲ್ಲಿ ಜನರಲ್ಲಿ ಸಂಶಯ ಮೂಡಿರುವುದು ನಿಜ. ಇದನ್ನು ರಾಜಕೀಯ ಕಾರಣಗಳಿಂದ ಉತ್ಪ್ರೇಕ್ಷೆ ಮಾಡುವುದು ಬೇಡ. ವಿಚಾರ ಮಾಡಿ ನೋಡಿದರೆ ಭೂಸುಧಾರಣೆ ಜಾರಿಗೆ ಬರುತ್ತದೆಯೋ ಇಲ್ಲವೆ, ಬಂದರೂ ಯಾವಾಗ ಬರುತ್ತದೆ ಎಂಬ ಸಂಶಯ ಜನತೆಯಲ್ಲಿ ಮೂಡಿದೆ. ಗೇಣಿದಾರರ ರಕ್ಷಣೆ ಕಾನೂನಿಗೆ ವರ್ಷ ವರ್ಷಕ್ಕೆ ಜೀವದಾನ ಕೊಡುತ್ತಿರುವುದಾಗಿದೆ. ಇಂತಹ ಜೀವದಾನ ಕೊಡುವ ಕಾನೂನನ್ನು ಮತ್ತೊಂದು ಸಾರಿ ತರುವುದಿಲ್ಲ, ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂಬ ಆಶ್ವಾಸನೆಯನ್ನು ಜನರಿಗೆ ಕೊಡಬೇಕು.

ಕಂದಾಯ ಶಾಖೆಯಲ್ಲಿ ಇನಾಂ ಸೆಕ್ಷನ್ ಎಂದು ಇದೆ. ಅಲ್ಲಿ ವಿಲಕ್ಷಣವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಸೆಕ್ರೆಟೇರಿಯೆಟ್‌ನಲ್ಲಿ ಈ ಇಲಾಖೆಯ ಸಂಘಟನೆ ಮಾಡಿ ಬಹಳ ಬುದ್ಧಿವಂತಿಕೆಯಿಂದ ಕೆಲಸ ನಡೆಯಬೇಕಾಗಿದೆ. ನಿಷ್ಠೆಯಿಂದ ಜಾಗರೂಕತೆಯಿಂದ ಸತತ ಪರಿಶ್ರಮದಿಂದ ಕೆಲಸ

ಮಾಡತಕ್ಕಂಥ ಸೀನಿಯರ್ ಅಧಿಕಾರಿಗಳು, ಸೆಕ್ರಟರಿ, ಅಂಡರ್ ಸೆಕ್ರೆಟರಿಗಳು ಇರಬೇಕು ಎಂದು ಹೇಳಬೇಕಾಗಿದೆ. ಇನಾಮು ಸೆಕ್ಷನ್ನಿನಲ್ಲಿ ಇನಾಮು ಗ್ರಾಮಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಅನೇಕ ಪ್ರಶ್ನೆಗಳು ಸರಕಾರದ ಮುಂದೆ ಬಂದಿವೆ. ಆದರೆ ಯಾವುದೂ ಇದುವರೆಗೆ ಪರಿಹಾರವಾಗಿಲ್ಲ. ಉತ್ತರ ಕರ್ನಾಟಕದಲ್ಲಿರುವ ದೇವಸ್ಥಾನಗಳ ಇನಾಮು ಭೂಮಿಗಳ ಪ್ರಶ್ನೆ ಸರಕಾರದ ಮುಂದೆ ಬಂದಿದೆ. ಆದರೂ ಈ ಸಂಬಂಧದಲ್ಲಿ ಒಂದು ಮಸೂದೆಯನ್ನು ಸಭೆಯ ಮುಂದೆ ಇದುವರೆಗೆ ಮಂಡಿಸಿಲ್ಲ. ಯಾವುದೋ ಒಂದು ವೆಸ್ಟೆಡ್ ಇಂಟರೆಸ್ಟ್ ಮೂಲಕ ಇವೆಲ್ಲ ವಿಳಂಬಗೊಳ್ಳುತ್ತಿವೆ ಎಂದು ಕಾಣುತ್ತದೆ. ಆದುದರಿಂದ ಇನಾಂ ಸೆಕ್ಷನ್ನಿನಲ್ಲಿ ವಿಶೇಷ ಕಾಳಜಿಯಿಂದ ಅತ್ಯಂತ ಅಂತಃಕರಣಪೂರ್ವಕವಾಗಿ ಕೆಲಸ ಮಾಡತಕ್ಕಂಥ ಜನರನ್ನು ನೇಮಿಸಬೇಕೆಂದು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ಕೃಷ್ಣಾ ಗೋದಾವರಿ ನದಿ ನೀರು ಹಂಚಿಕೆಯ ಬಗ್ಗೆ ಪ್ರಸ್ತಾಪ ಮಾಡಿರುವುದಕ್ಕಾಗಿ ರಾಜ್ಯಪಾಲರವರನ್ನು ಅಭಿನಂದಿಸುತ್ತೇನೆ. ಕಾರವಾರ ರೈಲು ಮಾರ್ಗ ವಿಚಾರವಾಗಿ ಹೇಳುವಾಗ್ಗೆ ಇನ್ನೂ ಕೆಲವು ರೈಲುಮಾರ್ಗ ಪ್ರಸ್ತಾಪ ಮಾಡುತ್ತಾರೆಂದು ನಿರೀಕ್ಷಿಸಲಾಗಿತ್ತು. ಕಾರವಾರ-ಹುಬ್ಬಳ್ಳಿ, ಗದಗ್-ರಾಯಚೂರು ರೈಲು ಮಾರ್ಗ ತೆಗೆದುಕೊಳ್ಳುವ ಬಗ್ಗೆ ಯಾವ ಸಲಹೆ ಇಲ್ಲ. ಈ ವಿಚಾರದಲ್ಲಿ ಈ ಶಾಸನ ಸಭೆಯಲ್ಲಿ ಒಂದು ನಿರ್ಣಯ ಮಂಜೂರು ಆಗಿದೆ. ಈ ಕೆಲಸ ಕೈಕೊಳ್ಳಲು ಕೇಂದ್ರ ಸರಕಾರದ ಮೇಲೆ ನಮ್ಮ ರಾಜ್ಯ ಸರಕಾರ ಒತ್ತಾಯ ಮಾಡಿದ್ದಾರೆಯೋ ? ಈ ವಿಚಾರ ಪ್ರಸ್ತಾಪ ಮಾಡಿ ಸರಕಾರದ ಅಭಿಪ್ರಾಯ ಹೇಳಿದ್ದರೆ ಚೆನ್ನಾಗಿತ್ತು. ಇನ್ನೂ ಅನೇಕ ಮಾತುಗಳನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಸ್ತೆ ಸಾರಿಗೆ ವಿಷಯ ಪ್ರಸ್ತಾಪ ಮಾಡಿದ್ದರೂ ಈ ಬಗ್ಗೆ ಸರಕಾರದ ನಿಶ್ಚಿತ ಧೋರಣೆ ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿರುವುದಿಲ್ಲ. ಈ ರೀತಿ ಇರುವುದರಿಂದ ಮೂಲಭೂತ ಧೋರಣೆಗೆ ಎಲ್ಲಿ ಕೊಡಲಿ ಪೆಟ್ಟು ಬೀಳುತ್ತದೆಯೋ ಎಂಬ ಭಾವನೆ ಬರುತ್ತದೆ. ಆದುದರಿಂದ ಸರಕಾರದ ನಿಶ್ಚಿತ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಬರೀ ಬಸ್ ರಾಷ್ಟ್ರೀಕರಣ ಮಾಡುವುದರಿಂದ ಸಮಾಜವಾದೀ ಸಮಾಜ ರಚನೆಯ ಕಾರ್ಯ ಪೂರ್ತಿಯಾಗುವುದಿಲ್ಲ. ಏಕೆಂದರೆ ಸಮಾಜದಲ್ಲಿ ಒಬ್ಬನಿಗೆ ತಿಂಗಳಿಗೆ 30 ರೂಪಾಯಿ ಸಂಪಾದನೆ ಇದ್ದು ಇನ್ನೊಬ್ಬನಿಗೆ 3000 ರೂ. ಸಂಪಾದನೆ ಇರುವವಾದರೆ ಯಾವ ರಾಷ್ಟ್ರೀಕರಣದಿಂದಲೂ ಧ್ಯೇಯ ಸಾಧನೆಯಾಗಲಾರದು. ಸಂಬಳದಲ್ಲಿಯ ಅಂತರ ಹೆಚ್ಚಿಗೆ ಇರಕೂಡದು. ಈ ಮೂಲಭೂತ ತತ್ವವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಇನ್ನು ಶಿಕ್ಷಣ. ಇದು ಸಹ ರಾಷ್ಟ್ರೀಕರಣವಾಗಬೇಕು. ಶ್ರೀಮಂತರ ಮೇಲೆ ಕರ ಹಾಕಿ ಹಣ ಪಡೆದು ಶಿಕ್ಷಣ ಸೌಲಭ್ಯ ಎಲ್ಲರಿಗೂ ದೊರೆಯುವ ಹಾಗೆ ಮಾಡಬೇಕಾದುದು ಅತ್ಯಗತ್ಯ. ಎಲ್ಲ ಮಟ್ಟದ ಶಿಕ್ಷಣ ಉಚಿತವಾಗಿ ಎಲ್ಲರಿಗೆ ದೊರೆಯುವಂತಾಗಬೇಕು.

ರಾಜ್ಯಪಾಲರವರ ಭಾಷಣದಲ್ಲಿ ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಹೇಳಬೇಕಾಗಿತ್ತು. ಭ್ರಷ್ಟಾಚಾರದ ವಿಚಾರದಲ್ಲಿ ಸರಕಾರದವರು ಅನಿರ್ದಿಷ್ಟ ಧೋರಣೆಯನ್ನು ಬಿಟ್ಟುಕೊಡಬೇಕು. ಧೈರ್ಯದಿಂದ ಇದನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕಾದುದು ಅಗತ್ಯ.

ನವ ಮೈಸೂರು ರಾಜ್ಯ ರಚನೆಯಾಗಿ ಏಳು ವರ್ಷಗಳಾದವು. ರಾಜ್ಯದ ಹೆಸರು ಕರ್ನಾಟಕ ಎಂದು ಆಗಬೇಕಾಗಿದೆ. ರಾಜ್ಯದ ಹೆಸರು ಕರ್ನಾಟಕ ಎಂದು ಮಾಡುವ ಬಗ್ಗೆ ನಿರ್ಧಾರವಾಗಿ ಹೇಳಬೇಕಾಗಿತ್ತು. ಏಕೆಂದರೆ ನಮ್ಮ ರಾಜ್ಯಪಾಲರವರು ನಮ್ಮ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾಗಿದ್ದಾರೆ." ಅವರು ಏನು ಆಲೋಚನೆ ಮಾಡಿದ್ದಾರೆ ಎಂಬುದನ್ನು ಭಾಷಣದಲ್ಲಿ ಹೇಳಿದ್ದರೆ ಇನ್ನೂ ಹೆಚ್ಚು ಸಂತೋಷವಾಗುತ್ತಿತ್ತು.

ಇದಲ್ಲದೆ ಪಾನನಿರೋಧದ ಬಗ್ಗೆ ಸರಕಾರದ ಸ್ಪಷ್ಟ ಧೋರಣೆ ಏನು ಎಂಬುದನ್ನು ಹೇಳಬೇಕಾಗಿತ್ತು. ಈ ವಿಚಾರದಲ್ಲಿ ಸಂದೇಹ ಇರಕೂಡದು. ಒಂದು ಸಮಿತಿ ರಚನೆಯಾಗಿದೆ. ಆದರೂ ಸರಕಾರದ ನಿಶ್ಚಿತ ಧೋರಣೆಯನ್ನು ಹೇಳಬೇಕಾಗಿತ್ತು. ಸರಕಾರದ ಸ್ಪಷ್ಟವಾದ ನೀತಿ ಏನು ಎಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು. ಭ್ರಷ್ಟಾಚಾರ ನಿರ್ಮೂಲನ ಬಗ್ಗೆ ತೀವ್ರ ಕ್ರಮ ಕೈಕೊಳ್ಳಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Before the Hon'ble Member Sri S. M. Krishna begins, I would like to refer to the matter of the adjournment motion because it is he who has given notice of it. I have already referred to one or two rulings. I have got more rulings exactly to the same effect which pertains to the House of Commons as also the Lok Sabha. They are almost identical, hundred per cent similar. I just wanted to inform him

(MR. SPEAKER)

about this before he begins his speech so that he may know the position exactly and make his speech, bearing that point in mind.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಹೌಸ್ ಆಫ್ ಕಾಮನ್ಸ್ ರೂಲ್ಸ್ ಕೋಟ್ ಮಾಡುತ್ತೀರಿ. ಆದರೆ ಇನ್ನೂ ಬೇರೆ ಅನೇಕ ವಿಷಯಗಳಿವೆ, ಅವುಗಳನ್ನು ಏಕೆ ಹೇಳವುದಿಲ್ಲ?

Mr. SPEAKER.—Order, order.

†**Sri S. M. KRISHNA** (Maddur).—Sir, the keynote of the Address of the Governor seems to be that inertia and a sense of deep despair seem to be the order of the day.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಅವರು ಕನ್ನಡದಲ್ಲಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—It must be left to the discretion of the Hon'ble Member. Since has begun in English, I will not permit him to switch on to Kannada.

Sri S. M. KRISHNA.—This Government suffers from a lack of sence of direction. We have been repeatedly drawing the attention of the Government......

[MR. DEPUTY SPEAKER in the Chair].

Sri T. D. DEVENDRAPPA.—On a point of order, Sir, ಈ ಸಲ ಬಡ್ಜೆಟ್ ಅಧಿವೇಶನ ಪ್ರಾರಂಭ ಮಾಡುತ್ತಾ ನಮ್ಮ ರಾಜ್ಯಪಾಲರವರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಅದೇ ರೀತಿ ಸದಸ್ಯರೂ ಕನ್ನಡದಲ್ಲಿ ಮಾತನಾಡತಕ್ಕದ್ದು ಸೂಕ್ತ ಎಂದು ನಾನು ಹೇಳುತ್ತೇನೆ.

Sri V. S. PATIL (Belgaum I).—On a point of order, Sir. The Hon'bleM ember has said that since the Governor was pleased to address this House in Kannada, the members also must speak in Kannada, Is it in order to compel any member to speak in a particular language and to deprive him of his legitimate right to speak in any language which he likes?

Mr. DEPUTY SPEAKER.—There is no point of order.

Sri V. S. PATIL.—One more thing I would like to bring to the notice of the Chair. We had a discussion with the Speaker and we have divided the time allotted party-wise, but since yesterday only one member from my party has been allowed to participale, and that too only for 15 minutes. This is rather unjust. Today also when the Congress member finished, the chance should have been given to this group rather than to the P. S. P. I am not against the P. S. P., but our legitimate rights must be safeguarded. That is why I should like to bring it to the notice of the chair, that the Members from this side must be given their opportunity.

Mr. DEPUTY SPEAKER.—Sri, Patil will be given an opportunity.

Sri S. M. KRISHNA.—Much has been said in the last few months about the Sharavathi scandal. It does not become of an honourable Government to committee to this House in solemn terms that a white paper shall be issued. In the first instance, it was to be issued within 8 or 10 days. Then it was amended that before the end of the last session, the White Paper would find the light of the day. Sir, it is more than

2 months now. Still, the white paper by no means seems to be in the offing. This necessarily strengthens our own suspicions, our own doubts about the bona fides of the people who are preparing the white paper. We have made responsible, weighty and serious allegations against this Government and it is not fario that this should be put off indefinitely. Even on the very day when the Governor made his Address to the Joint Session of the Legislature I expected the Government also to come out with a white paper From the way things have been going on in this State, we have every reason to believe that after all it is not going to be a white paper but it is going to be the blackest paper that the Government is going to ever come out with. The Leader of the Opposition has mentioned th s particular point and I would not like to dilate on this any more, but this I would like to say that we will still wait for the white paper before deciding our future course of action.

I would like to concentrate mainly on the Department of Education in our State. By now, it has be become proverbial that the Education Ministry in our State is shrouded in confusion and controversies. We have not forgotten the student's agitation that took place a few days back in the State. We have also not forgotten the stout defence put up by the Education Minister. It is still vivid in our memory. His voice is still ringing in our ears. At one point some time last year, the Education Minister asserted that when it came to a question of convictions, when it came to a question of prin iples, he would stand like a rock and he would not budge an inch. Sir, I would like to recall it to the memory of the Education Minister; unfortunately, his memory seems to be too short at his convenience. This Education Minister by temperament by training in all respects and humility, may I submit Sir, has failed to give the correct lead to our educational set up. It pains me very much that I have to speak in such specific strong terms when it comes to the Education Minister. I like him as a person. But, Sir, my likes about a person should be quite different from my likes of the same person in the shape of an Education Minister. Sir, the student agitation has a few lessons to every one of us. The organised student community was able to bring down the Government to its knees. I do not think that any one in the Treasury Benches today can say with any amount of honesty and integrity that they did not come to their knees. The Education Minister was so vociferous in denouncing the student's demands; there were frantic press statements issued in the mornings, in the afternoons and in the evenings; and sometimes at midnight, the Education Minister woke up the Press Correspondents to issue a press statement. We were not unaware of it; the antics of the Education Minister has to be seriously questioned to lay and decisively questioned today. The Education Minister has been responsible for the disintegration of the somewhat integration that was developing in the Mysore State. I said before and I recpeat it with all the force that I can command that he has forfeited the confidence of the people of the Mysore State. The damage that he has done to the Mysore State in general and to old Mysore in particular and to the posterity also cannot be weighed

(SRI S. M. KRISHNA)

in words. It can only be felt and I hope the Education Minister will pause for a while and think about the two years that he has been at the helm of affairs. Right since the day he took up the Education portfolio, controversies, differences dissensions and indecision—these have been the characteristics of the Education Minister and I wonder how the Congress Party with a strength of 138 members excluding the Education Minister, could own him; how they could tolerate him and how they could put up with him. I make this challenge to the Members of the Congress Party. Has he brought honour to their Party? Has he added lustre to their Government? He hasn't. On the other hand, he has done everything to damage the prestige of this Government and this Party. Sir, from the way the educational set up is being worked in the Mysore State, I am pained to say, there is no vigorous action, there is no fresh thinking and there is no dynamic endeavour. We expect that the educational set up of a State should be to inspire the younger generation. May I in all humility ask; will the younger generation be ever inspired by the present lead, by the present set up? I am afraid, not. The Education Minister, simply because he becomes the head of the portfolio in the Ministry, becomes an expert overnight. He does not get the right to experiment with our younger generation. I hate to see our youngsters becoming guinea pigs of the present day styled educational experts. Day in and day out every one of us has been talking in terms of reforms in the Educational set up; day in and day out every one of us have been trying to bring in some improvement in the educational standards. In the ultimate analysis it comes down to this, that three has not been any educational improvement, there has not been improvement in the standards and there has not been any advance in the sphere of education. But on the other hand, it has resulted in serious damages being caused to the present educational set up.

I for one believe that the present set up ought to be given a complete and full trial before it is meddled with. Some years back, we thought that the two-year intermediate course was not enough and so we introduced the pre-university course. And, today again, we want to experiment on it and we would like to go back. What is it all about? Is everybody aware of what he is talking about? Hence, I call upon a halt to this indiscreet and indiscriminate talk and action about educational reforms. Even this morning, I read a statement of the Hon'ble Minister for Education about a perspective plan for education, which he made while speaking in the Upper House of the Legislature. I for one just cannot think of it, of any perspective plan being sincerely implemented by the present set-up.

10-00 A.M.

We have two universities in the Mysore State, the Karnataka University and the Mysore University. Representing the old Mysore area and speaking on behalf of the Mysore University, I have reason to

believe that, consciously and unconsciously, directly or indirectly, the Education Minister is out to undermine the prestige of the Mysore University. I am making this accusation to his very face. His actions in the past few months and his pronouncements in the past few months have not left any hopes in us. In the matter of allocation of funds, the Education Minister shows a favourite son treatment to the Karnataka University and a step-motherly treatment to the Mysore University. When it is a question of appointment or when it is a question of ......

SRI S. R. KANTHI (Minister for Education).—May I intervene to say that so far as the allocation of funds between the two universities is concerned, a conference was held, and the representatives of both the universities had been invited and to attend the same. They have suggested a certain pattern of help that they want and that is being implemented. This is an agreed solution between the Education Ministry, the Finance Department and the two universities.

SRI G. V. GOWDA (Palya).—Would the Government provide whatever the universities want?

SRI S. R. KANTHI.—I said that it has an agreed solution. If the Karnataka University or the Mysore University want more funds, of course, Government will consider it.

SRI S. M. KRISHNA.—It is natural for the Education Minister to have a soft corner for the Karnataka university. I do not blame him for that. But he ought to know his limitations, beyond which he should not go.

SRI S. R. KANTHI.—It is not correct to say that I have not been fair.

SRI S. M. KRISHNA.—When it comes to the Mysore University, we say that there is disorganisation, that the University administration has gone to the dogs and so naturally we will have to tune up the whole thing. Very recently, we got a very distinguished educationalist to preside over the destinies of the Mysore University. Unfortunately, he died. Now we have an *ad hoc* arrangement, the Collegiate Director being made the Vice Chancellor. Now we are fishing to find a Vice-Chancellor. I wonder why there has been such delay.

SRI S. R. KANTHI.—He has come............

SRI S. M. KRISHNA.—Are there no Mysoreans who can give a correct lead to the Mysore University? If the Karnataka University can find a Pavate, the Mysore University can find a better one than that. Why should you go to Delhi or Uttar Pradesh? A person who is shunted out of the Central Cabinet under the Kamraj Plan—you want to bring that person and instal him as the Vice-Chancellor of the Mysore University.

SRI S. R. KANTHI.—He is the best man.

SRI S. M. KRISHNA.—Yes. He is the best man. Time will prove and we will know.

MR. DEPUTY SPEAKER.—Let him not bring in any controversy by naming persons.

Sri S. M. KRISHNA.—I am dealing with the Education Ministry It is not a controversy. Besides, I cannot help it. Now, do our universities afford places for all those disgruntled and disgruntled congressmen? Is it going to be the shelter for all those political refugees? I do not think that this ought to be the state of affairs.

Sri S. R. KANTHI.—He is an educationalist.

Sri S. M. KRISHNA.—Yes. In fact, he has been the cause for all the damage that has been caused in our educational set up. Just, as soon as the present Central Education Minister took charge, he cancelled all the fifty committees set up by his predecessor in office. I, as a proud Mysorean, protest, register my emphatic protest against this attitude of the Government of Mysore in trying to bring and instal an outsider as Vice-Chancellor of the Mysore University.

With reference to the students' agitation, I have one point to make. The Government have appointed a committee to go into the fee structure of the two universities. The Committee consists of the Vice-Chancellors of the Karnataka University and the Mysore University and Dr. Lakshmanaswamy Mudaliar. Now, old Mysore is not represented there also. The entire students' agitation started in the old Mysore area. Privately the Education Minister has expressed his satisfaction at the outcome of the students' agitation, because it ended in getting some more benefits to the North Karnatak area people and I am happy that the Education Minister privately expressed his great happiness and satisfaction at the thirty-day strike and, he can own that.

Mr. DEPUTY SPEAKER.—Private matters should not be brought in.

Sri S. M. KRISHNA.—Now, a committee has been appointed. Even now, I call upon the Government to place an old Mysorean also in the committee. I would suggest the leader of the Opposition to that Committee so that it could take an objective view of the entire situation and come to certain responsible and sensible conclusion. Much can be said about the Education Ministry and I would reserve the rest of my comments on the Education Ministry when I will again get an opportunity.

I had tabled an adjournment motion about what happened in Raichur District. It is scandalous that such a thing should happen in our State. I wonder whether there was any law and order.

Sri R. M. PATIL (Minister for Home).—Is the Hon'ble Leader of the Opposition an expert in Education? If so, may we know when he became an educational expert?

Sri S. SIVAPPA (Sravanabelagola).—I am a better educationist than any of the Ministers.

Sri S. M. KRISHNA.—I thought the hon'ble Home Minister was intervening to make a statement about the Raichur incident. I expect him to maintain the law and order situation in Raichur District and in Mandya District rather than traversing on education. His colleague thinks that he can take care of that

I am submitting that many of us are deeply perturbed and disturbed to a very great extent at the fact that law and order situation in some of the districts seems to be deteriorating. I think the time has come

for the Home Minister to assert and put down such antisocial elements. I wonder how the police were not able to prevent the occurrence of such an uncivilised and ghastly activity as that. Even now I have not completely lost faith in the police administration of the State. I still have some faith in that administration and I hope the Government will take a very serious note and see that such occurrences do not happen elsewhere. I would have been very happy if the Home Minister had rushed to the spot. If he had done that he would have got first hand information as to what happened. He did not even make a statement about this incident. So, the law and order situation not only in Raichur District but also elsewhere seems to be going out of control. My own information is that proceedings under section 107 have been on the increase in the past few months. I wonder what is the reason for situation like this and I call for a judicial enquiry into what has happened in Raichur District and failure of the police to prevent the occurrence of such an incident.

†ಶ್ರೀ ಜಿ. ವಿ. ಗೌಡ (ಪಾಳ್ಯ).—ರಾಜ್ಯಪಾಲರ ಭಾಷಣವು ಖಚಿತವಾದ ಧ್ಯೇಯ, ಧೋರಣೆ ನೀತಿ ನಿಯಮಗಳನ್ನು ಸ್ಪಷ್ಟಪಡಿಸುತ್ತದೆಂದು ದೇಶದ ಜನರು ನಿರೀಕ್ಷಿಸುತ್ತಿದ್ದರು. ಆದರೆ ಅದೇನೂ ಕಾಣಲಿಲ್ಲ. ಸಿದ್ದಯ್ಯನವರೇನೋ ಇದು ಆದರ್ಶ ಭಾಷಣವೆಂದು ತಮ್ಮ ಅಭಿಪ್ರಾಯ ವನ್ನು ಸೂಚಿಸಿದ್ದಾರೆ. ಬಹುಶಃ ಅವರು ಉಪಯೋಗಿಸಿದ ಭಾಷೆ ಆದರ್ಶವಾಗಿರಬಹುದು. ಇದನ್ನು ಎಲ್ಲರೂ ವಿಮರ್ಶೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಅಭಿಪ್ರಾಯ ದಲ್ಲಿ ಇದು ನೀರಸವಾದ ನಿಸ್ಸಾರವಾದ ಒಂದು ದೊಡ್ಡದಾದ ವರದಿಯಂತಿದೆ. ಅಲ್ಲದೆ ಸುಮಾರು ಎರಡು ವರ್ಷಗಳಿಂದ ಸರ್ಕಾರದ ಕಡೆಯಿಂದ ಏನೊಂದು ವಿಚಾರಗಳು ಪ್ರಸ್ತಾಪ ಮಾಡಲ್ಪಟ್ಟಿ ದ್ದುವೋ ಅವೇ ಪುನಃ ಪ್ರಸ್ತಾಪಿಸಲ್ಪಟ್ಟಿವೆ. ಮತ್ತೆ ಕೆಲವು ವಿಚಾರಗಳು ಸತ್ಯಾಂಶಕ್ಕೆ ದೂರ ವಾಗಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ಮೊಟ್ಟಮೊದಲನೆಯದಾಗಿ ಯೋಜನಾ ಕಾರ್ಯಕ್ರಮಗಳನ್ನು ರಾಜ್ಯಪಾಲರು ಪ್ರಸ್ತಾಪಿ ಸಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಗೆ ಎಷ್ಟು ಖರ್ಚಾಗಿದೆಯೆಂಬುದನ್ನು ತಿಳಿಸಿ ದ್ದಾರೆ. ಉಳಿದಿರುವ ಎರಡು ವರ್ಷಗಳಲ್ಲಿ ಶೇಕಡ 56ರಷ್ಟು ಖರ್ಚಾಗಬೇಕಾಗಿದೆ. 1.0 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಅವಧಿಯಲ್ಲಿ ಅದಕ್ಕೇನು ಪ್ರತಿಫಲ ದೊರೆತಿದೆ ಎಂಬ ವಿವರ ತಿಳಿ ಸಿರುವುದಿಲ್ಲ. ಇನ್ನೂ ಸುಮಾರು 140 ಕೋಟಿ ರೂಪಾಯಿಗಳನ್ನು ಎರಡು ವರ್ಷಗಳಲ್ಲಿ ಯಾವ ರೀತಿ ಖರ್ಚು ಮಾಡಲು ಸಾಧ್ಯ ಅಥವಾ ಖರ್ಚು ಮಾಡಿದರೂ ಅದಕ್ಕನುಗುಣವಾಗಿ ಪ್ರತಿಫಲ ಪಡೆ ಯಲು ಸಾಧ್ಯ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾಗಿದೆ. 1964-65ನೆಯ ಸಾಲಿನಲ್ಲಿ ಬಹುಶಃ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು, ಕೊನೆಯ ವರ್ಷ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಹಣ ಖರ್ಚು ಮಾಡಬಹುದು. ಆದರೆ ಅದಕ್ಕನುಗುಣ ವಾಗಿ ಫಿಸಿಕಲ್ ಟಾರ್ಜೆಟ್ ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಮರೆಯಬಾರದು. ಮೊನ್ನೆ ಮದ್ರಾಸ್ ಅಸೆಂಬ್ಲಿಯಲ್ಲಿ ಮುಖ್ಯಮಂತ್ರಿಗಳು ಗೊತ್ತು ಮಾಡಿದ್ದ 291 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಬಹಳ ಭಾಗ ಖರ್ಚಾಗಿದೆ, ಸುಮಾರು 325 ಕೋಟಿಯಷ್ಟು ಪರಮಾವಧಿ ಹೋಗ ಬೇಕಾಗುತ್ತದೆ, ಆಗಬೇಕಾದ ಕೆಲಸ ಬಹಳವಿದೆ ಎಂದು ಹೇಳಿದ್ದಾರೆ. ಅದೇ ನಾವು 3 ವರ್ಷಗಳಲ್ಲಿ 110 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಇದೇಕೆ ಹೀಗೆ ಮಾಡಿದ್ದಾ ರೆಂಬುದು ನನಗೆ ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ಪಡೆಯಬೇಕಾಗಿದ್ದಷ್ಟು ನೆರವು ಸಿಕ್ಕಿಲ್ಲ; ಇದು ಸರ್ಕಾರಕ್ಕೆ ಗೊತ್ತಿದೆ. ಎರಡನೆಯ ಯೋಜನೆಯಲ್ಲಿ ಎಷ್ಟು ನೆರವು ಸಿಕ್ಕಿದೆಯೋ ಅದಕ್ಕಿಂತ ಕಡಮೆ ಸಿಕ್ಕಿದೆಯೆಂದರೆ ಎಷ್ಟು ಸಾಮರ್ಥ್ಯದಿಂದ ನೆರವು ಪಡೆದಿದ್ದಾರೆಂಬುದು ಅರ್ಥ ವಾಗುತ್ತದೆ. ಆದುದರಿಂದ ಯೋಜನೆಯ ಕಾರ್ಯಕ್ರಮವನ್ನು ಪರಿಶೀಲಿಸಿ ಸ್ವಲ್ಪ ವಿಮರ್ಶೆ ಮಾಡುವುದಾದರೆ ಎಷ್ಟು ತೃಪ್ತಿಕರವಾಗಿ, ಯಶಸ್ವಿಯಾಗಿ ಆಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಆಗಿಲ್ಲ, ಆಗುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಹಣವನ್ನು ಹೆಚ್ಚಾಗಿ ನೀರಾವರಿ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಸರಬರಾಜಿಗೆ ಖರ್ಚು ಮಾಡುತ್ತಿದೇವೆಂದು ಹೇಳಿ ದ್ದಾರೆ. ಸುಮಾರು 12 ಗ್ರಾಮಗಳಿಗೆ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಪೂರೈಸಲಾಯಿತು ಎಂದು ಸೂಚಿಸಿದ್ದಾರೆ; ಬಹುಶಃ ಮೂರನೆಯ ಯೋಜನೆಯ ಅವಧಿಯೊಳಗಾಗಿ ಸುಮಾರು 300

(ಶ್ರೀ ಜಿ. ವಿ. ಗೌಡ)

ಹಳ್ಳಿಗಳಿಗೆ ಪೂರೈಕೆ ಮಾಡಬಹುದು. ಆದರೆ ಮದ್ರಾಸು, ಮಹಾರಾಷ್ಟ್ರ ಅಥವಾ ಆಂಧ್ರ ದೇಶಗಳನ್ನು ನೋಡಿದರೆ ಮದ್ರಾಸಿನಲ್ಲಿ 3ನೇ ಯೋಜನೆಯಲ್ಲಿ ಎಲ್ಲಾ ಹಳ್ಳಿಗಳಿಗೂ ಬಹುಶಃ ವಿದ್ಯುಚ್ಛಕ್ತಿ ಪೂರೈಕೆಯಾಗಬಹುದೆಂಬ ಸೂಚನೆಯಿದೆ. ನಾವು ದಕ್ಷಿಣ ವಲಯಕ್ಕೆ ಸೇರುವಂತೆ ಒಂದು ತೀರ್ಮಾನ ಮಾಡಿಕೊಂಡಿರುವುದು ಶೋಚನೀಯ ವಿಚಾರವಾಗಿದೆ. ಈ ದಿವಸ ಪತ್ರಿಕಾ ವರದಿಯ ಪ್ರಕಾರ ದಕ್ಷಿಣ ವಲಯಕ್ಕೆ ಬಂದು ಪವರ್ ಬೋರ್ಡ್ ರಚಿಸಲು ಕೇಂದ್ರ ಸರ್ಕಾರ ಮಂಜೂರಾತಿಯನ್ನು ಕೊಟ್ಟಿದೆಯೆಂದು ತಿಳಿದು ಬರುತ್ತದೆ. ಇದರಿಂದ ಎಷ್ಟು ಮಟ್ಟಿಗೆ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬಳಕೆಯನ್ನು ಹೆಚ್ಚಿಸುವುದಕ್ಕೆ ಅವಕಾಶವಾಗಬಹುದೆಂಬುದನ್ನು ಸರ್ಕಾರ ವಿಚಾರ ಮಾಡಬೇಕಾಗಿದೆ, ಇದರಿಂದ ಬಹಳ ಅನ್ಯಾಯವಾಗುತ್ತದೆ. ಈ ದಿವಸ ಶರಾವತಿ ಯೋಜನೆ ಪೂರ್ಣವಾದರೆ 9 ಲಕ್ಷ ಕಿಲೋವ್ಯಾಟಿನಷ್ಟು ಪವರ್ ಉತ್ಪತ್ತಿಯಾಗಬಹುದು. ಇದಲ್ಲದೆ ಬರಾಪೊಳೆ ಯೋಜನೆ, ಕಾಳೀ ನದಿ ಯೋಜನೆ ಮುಂತಾದುವು ಬೇರೆ ಇವೆ. ಅವುಗಳ ಕೆಲಸ ಆಗಬೇಕಾಗಿದೆ. ಅವೆಲ್ಲಾ ಕಾರ್ಯಗತವಾದ ಮೇಲೆ ಉತ್ಪತ್ತಿಯಾಗುವ ಪವರನ್ನು ಬಳಸಲು ಸಾಧ್ಯವಿಲ್ಲದ ಪರಿಸ್ಥಿತಿ ಯೊದಗಿತಲ್ಲಾ ಎಂದು ವಿಷಾದ ಪಡಬೇಕಾಗಿದೆ.

ವ್ಯವಸಾಯದ ಉತ್ಪತ್ತಿಯ ವಿಚಾರವನ್ನು ಶ್ರೀಮಾನ್ ಶಿವಪ್ಪನವರು ಹೇಳಿರುವುದರಿಂದ ಅದನ್ನು ಮತ್ತೆ ಹೇಳಬೇಕಾದ ಪ್ರಸಂಗವಿಲ್ಲ. 32 ನೀರಾವರಿ ಯೋಜನೆಗಳಿವೆ. ಅವುಗಳ ಪೈಕಿ 25 ಯೋಜನೆಗಳು ಒಂದನೆಯ ಮತ್ತು ಎರಡನೆಯ ಯೋಜನೆಗಳಿಂದ ಮುಂದುವರಿಸಲ್ಪಟ್ಟಿವೆ. ಅವುಗಳಿಂದ ಸಾಕಷ್ಟು ಪ್ರತಿಫಲ ದೊರೆತಿಲ್ಲ. 1974ನೆಯ ಇಸವಿಯೊಳಗೆ ಕಾವೇರಿ ನದಿಯ ನೀರಿನಲ್ಲಿ ನಮಗೆ ಸಲ್ಲಬೇಕಾದ 75 ಟಿ. ಎಂ. ಸಿ. ಎಫ್. ಟಿ. ಯನ್ನು ಉಪಯೋಗಿಸಿಕೊಳ್ಳಬೇಕಾಗಿದೆ, ಹಾಗೆ ಆ ಅವಧಿಯಲ್ಲಿ ಉಪಯೋಗ ಮಾಡಿಕೊಳ್ಳದಿದ್ದರೆ ಆ ಸಂಬಂಧದಲ್ಲಿ ನಮಗಿರುವ ಹಕ್ಕು ಹೋಗಲು ಅವಕಾಶವಿದೆಯೆಂದು ವೀರೇಂದ್ರ ಪಾಟೀಲ್‌ರವರು ಹೇಳಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳಲು ಯಾವ ಯೋಜನೆ ಕೈಕೊಳ್ಳಬೇಕು, ಅದಕ್ಕೆ ಹಣ ಹೇಗೆ ಒದಗಿಸಿಕೊಳ್ಳಬೇಕು ಎಂದು ವಿಚಾರ ಮಾಡಿ ಸಮಗ್ರವಾದ ಯೋಜನೆ ಮಾಡಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ. ನಾನ್ ಷೆಡ್ಯೂಲ್ಡ್ ರಿವರ್ಸ್ ನೀರನ್ನು ಯಾವಾಗ ಬೇಕಾದರೂ ಉಪಯೋಗಿಸಿಕೊಳ್ಳಬಹುದು, ಷೆಡ್ಯೂಲ್ಡ್ ರಿವರ್ಸ್ ನೀರನ್ನು ಬೇಗ ಉಪಯೋಗಿಸಬೇಕು ಎಂದು ಸಹ ಹೇಳಿದ್ದಾರೆ; ಅದು ನಿಜ. ಆದರೆ ಈ ದಿವಸ ಹಾರಂಗಿ ಯೋಜನೆ ಏನಿದೆ ಅದಕ್ಕೆ ಮಂಜೂರಾತಿಯನ್ನು ಸರ್ಕಾರ ನೀಡಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದು ನಾನ್ ಷೆಡ್ಯೂಲ್ಡ್ ರಿವರ್‌ಗೆ ಸಂಬಂಧಪಟ್ಟಿದೆ. ಅದಕ್ಕೆ ತೀವ್ರವಾಗಿ ಮಂಜೂರಾತಿ ಸಿಕ್ಕಿದೆಯೆಂದರೆ ಮಂತ್ರಿಗಳ ಮಾತಿಗೆ ಬೆಲೆ ಕೊಡಲು ಹೇಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇವೊತ್ತಿನ ದಿನ ನಮ್ಮಲ್ಲಿರುವ ಕಾವೇರಿ ನದಿ ಯೋಜನೆ, ಯಗಚಿ ಯೋಜನೆ, ಹೇಮಾವತಿ ಯೋಜನೆ, ಕಬಿನಿ ಯೋಜನೆ ಹೀಗೆ ಹತ್ತಾರು ಯೋಜನೆಗಳನ್ನು ಮಾಡಬೇಕೆಂದಿದೆ. ಇವೊತ್ತು ಮೈಸೂರಿನಲ್ಲಿ ಯಾವ ಒಂದು ಪ್ರಾಜೆಕ್ಟೂ ಆಗಿಲ್ಲ. ನಮ್ಮಲ್ಲಿ ಆಗಬೇಕಾಗಿರುವ ಕಬಿನಿ ಪ್ರಾಜೆಕ್ಟು ಹದಿನೈದು ವರ್ಷಗಳಿಂದಲೂ ಆಗುತ್ತಲೇ ಇದೆ. ಇದು ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೂಡ ಬರುತ್ತಿದೆ. ಇದರಿಂದ ಎಷ್ಟು ಪ್ರಯೋಜನ ಪಡೆಯಬೇಕಾಗಿತ್ತೋ ಅಷ್ಟು ಪಡೆಯಲಾಗಲಿಲ್ಲ. ಕಾವೇರಿ ನದಿ ಯೋಜನೆಯನ್ನು ಮಾಡಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವೋ ಅದನ್ನು ಅಷ್ಟು ಬೇಗ ಉಪಯೋಗಿಸಿಕೊಳ್ಳುವುದು ಅಗತ್ಯ. ಆದರೆ ಇದಕ್ಕೆ ಮೂರನೇ ಯೋಜನೆಯಲ್ಲಿ ಹಣವಿಲ್ಲ, ಆದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕಿಂತ ಕೇಂದ್ರದ ಮೇಲೆ ಒತ್ತಾಯ ಮಾಡಿಯಾದರೂ ಇದನ್ನು ಮಾಡುವುದರ ಕಡೆಗೆ ಪ್ಲಾನಿಂಗ್ ಕಮಿಷನ್ನಿನವರ ಗಮನವನ್ನು ಸೆಳೆಯಬೇಕು. ಅಲ್ಲದೆ ಈಚೆಗೆ ಪ್ಲಾನಿಂಗ್ ಕಮಿಷನ್ನಿನವರೂ ಅದಷ್ಟು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಿಂತ ಮಧ್ಯವರ್ತಿ ಪ್ರಮಾಣದ ಯೋಜನೆಗಳನ್ನು ಮೊದಲು ಮಾಡಿಕೊಂಡು ಅದರಿಂದ ತಕ್ಕ ಪ್ರತಿಫಲ ಬೇಗನೆ ಪಡೆಯಬಹುದು ಎಂದೂ ಹೇಳಿದ್ದಾರೆ. ಅದರಂತೆ ಈ ಕಾವೇರಿ ನದಿ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ವ್ಯವಸಾಯದ ಉತ್ಪನ್ನವನ್ನೂ ಜಾಸ್ತಿ ಮಾಡಲು ಸಾಧ್ಯವಿದೆ. ನಾವು ಸ್ವಲ್ಪ ವಿಚಾರ ಮಾಡುವುದಾದರೆ, ಪ್ರತಿ ವರ್ಷವೂ ಉತ್ಪನ್ನವು ಕಡಮೆಯಾಗುತ್ತಿದೆಯೇ ವಿನಾ ಹೆಚ್ಚಾಗುವುದಕ್ಕೆ ಸಾಧ್ಯವಿಲ್ಲ, ಎನ್ನುವುದು ಗೊತ್ತಾಗುತ್ತದೆ. ವ್ಯವಸಾಯದ ಉತ್ಪನ್ನ, ವಿದ್ಯುಚ್ಛಕ್ತಿ ಉತ್ಪನ್ನಗಳು ಕಷ್ಟು ಪ್ರಮಾಣದಲ್ಲಿ ಆಗಿದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಇದರಲ್ಲಿ ಯಾವ ಅಂಕಿ ಸಂಖ್ಯೆಗಳನ್ನೂ ಹೇಳಲಿಲ್ಲ.

ಇನ್ನು ಅರಣ್ಯವನ್ನು ಎಲ್ಲೆಲ್ಲಿ ಬೆಳೆಸಬೇಕು ಎನ್ನುವ ವಿಚಾರದಲ್ಲಿ ಅರಣ್ಯ ಪ್ರದೇಶವನ್ನು ಸಾಗುವಳಿಗೆ ಎಲ್ಲೆಲ್ಲಿ ಕೊಡಬಹುದು ಎನ್ನುವ ಪ್ರಸ್ತಾಪ ಈ ಭಾಷಣದಲ್ಲಿದೆ. ಇದನ್ನು ಸ್ವಾಗತ ಮಾಡುವುದು ಅವಶ್ಯಕ. ಅದಷ್ಟು ತೀವ್ರವಾಗಿ ಎಲ್ಲೆಲ್ಲಿ ಕಾಡುಗಳನ್ನು ಬೆಳೆಸಲಿಕ್ಕೆ ಸಾಧ್ಯವೋ ಅಂತಹ

V-31'N64
N64.4.1-4
(B)4808

ಕೆಲಸಗಳನ್ನು ಬೇಗನೆ ತೆಗೆದುಕೊಳ್ಳಬೇಕು, ಮತ್ತು ಎಲ್ಲಿ ಹೆಚ್ಚಿನ ಕಾಡು ಪ್ರದೇಶಗಳು ಇದ್ದು ಸಾಗುವಳಿಗೆ ಅನುಕೂಲವಾಗಿವೆಯೋ ಅಂತಹ ಪ್ರದೇಶಗಳನ್ನು ಸಾಗುವಳಿಗಾಗಿ ಬಿಡಿಸಿಕೊಡಬೇಕು. ಈ ವ್ಯವಸ್ಥೆಯನ್ನು ಸರಕಾರ ಆದಷ್ಟು ಬೇಗ ಮಾಡಲು ಒಂದು ಸಮಿತಿ ರಚನೆ ಮಾಡುತ್ತೇವೆ ವರದಿ ಬರುತ್ತದೆ, ಆನಂತರ ಪರಿಶೀಲನೆ ಮಾಡುತ್ತೇವೆ ಎನ್ನುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಈ ಬಗ್ಗೆ ಆದಷ್ಟು ಬೇಗ ಸರಕಾರ ತೀರ್ಮಾನ ತೆಗೆದುಕೊಂಡು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಸಕ್ಕರೆ ಕಾರ್ಖಾನೆಗಳ ಬಗ್ಗೆ ಒಂದೆರಡು ಮಾತುಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಮೈಸೂರಿನಲ್ಲಿರುವ ಸಕ್ಕರೆ ಕಾರ್ಖಾನೆಗಳ ಈವರೆಗಿನ ಪ್ರಗತಿಯನ್ನು ನೋಡಿದರೆ ವಿಷಾದವಾಗುತ್ತದೆ. ಮಹಾರಾಷ್ಟ್ರದವರು ನಲವತ್ತು ಸಕ್ಕರೆ ಕಾರ್ಖಾನೆಗಳು ಬೇಕೆಂದು ಕೇಂದ್ರದವರನ್ನು ಕೇಳಿದರೆ ಹದಿನೈದು ಕಾರ್ಖಾನೆಗಳಿಗಾದರೂ ಅವರಿಗೆ ಲೈಸನ್ಸು ಸಿಕ್ಕುತ್ತದೆ. ಇವೊತ್ತಿನ ದಿವಸ ಮೂರು ಸಕ್ಕರೆ ಕಾರ್ಖಾನೆಯ ವಿಸ್ತರಣೆಗಾಗಿ ಮಂಜೂರಾತಿ ಬಂದಿವೆ ಎಂದೂ, ಎಂಟು ಸಕ್ಕರೆ ಕಾರ್ಖಾನೆ ತೆರೆಯಲು ಶಿಫಾರಸು ಮಾಡಿದ್ದಕ್ಕೆ ಮಾರಕ್ಕೆ ಮಂಜೂರಾತಿ ಬರುತ್ತದೆ ಎಂದೂ ರಾಜ್ಯಪಾಲರಿಂದ ಹೇಳಿಸಿದ್ದೀರಿ. ಆದರೆ ಯಾವ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲಿಕ್ಕೆ ಸಾಧ್ಯವಿದೆಯೋ ಅಲ್ಲಿಗೆ ಲೈಸನ್ಸನ್ನು ದೊರಕಿಸಿಕೊಡುವ ವಿಚಾರ ಯಾವುದನ್ನೂ ಮಾಡಿಲ್ಲ. ಪ್ರತಿ ವರ್ಷವೂ ಇದನ್ನು ಮಾಡುತ್ತೇವೆ, ಅದನ್ನು ಮಾಡುತ್ತೇವೆ ಎಂದು ಹೇಳುತ್ತಾರೆಯೇ ವಿನಾ ಹೇಳಿದ್ದನ್ನು ಕಾರ್ಯರೂಪಕ್ಕೆ ತಂದಿದ್ದರೆ ಜನಕ್ಕೆ ಹೆಚ್ಚಿನ ಅನುಕೂಲವಾಗುತ್ತಿತ್ತು ಮತ್ತು ತಾವು ಹೇಳುವ ವಿಷಯಗಳಿಗೂ ಸಾಕಷ್ಟು ಪುಷ್ಟೀಕರಣ ಸಿಗುತ್ತಿತ್ತು ಎಂದು ನಾನಾದರೂ ತಿಳಿಸಬಿಚ್ಛಿಸುತ್ತೇನೆ.

ಇನ್ನು ಹಿಂದುಳಿದಂತಹ ಪ್ರದೇಶಗಳನ್ನು ಅಭಿವೃದ್ಧಿಗೆ ತರಬೇಕು, ಅನುಕೂಲ ಮಾಡಿಕೊಡಬೇಕು ಎನ್ನುವುದು ಎಲ್ಲರೂ ಬಯಸತಕ್ಕ ವಿಚಾರ. ಯೋಜನೆಯಲ್ಲಿ ಮುಖ್ಯವಾಗಿ imbalance ಅನ್ನು ಆದಷ್ಟು ಕಡಮೆ ಮಾಡಬೇಕೆಂದಿದೆ. ಎಷ್ಟರಮಟ್ಟಿಗೆ ಇದು ಸಾಧನೆಯಾಗಿದೆ ಎನ್ನುವುದನ್ನು ಸರಕಾರ ತೀವ್ರವಾಗಿ ಯೋಚನೆ ಮಾಡಬೇಕಾದ ಅಂಶ. ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡಿದ್ದಾರೆ. ಇದಕ್ಕೆ ಸುಮಾರು ನಲವತ್ತು ಕೋಟಿಯಷ್ಟು ಹಣ ವೆಚ್ಚವಾಗುತ್ತದೆ. ಇಂತಹ ಒಂದು ಯೋಜನೆಯನ್ನು ಕೇಂದ್ರ ಸರಕಾರದ ಮುಂದಿಟ್ಟು ಅವರಿಂದ ಹೆಚ್ಚಿನ ನೆರವನ್ನು ಪಡೆಯಲೂ ಸಾಧ್ಯವಿದೆ. ನಲವತ್ತು ಕೋಟಿ ರೂಪಾಯಿಗಳ ಯೋಜನೆಯಲ್ಲಿ ಇದುವರೆಗೆ ಎಷ್ಟು ಖರ್ಚಾಗಿದೆ ಎನ್ನುವುದೂ ನಮಗೆ ಗೊತ್ತಿಲ್ಲ. ಈ ಯೋಜನೆಯನ್ನು ವಿಮರ್ಶೆ ಮಾಡಿ ಯಾವ ಯಾವ ಪ್ರದೇಶಗಳು ಹಿಂದುಳಿದಿವೆ. ಯಾವ ಯಾವ ಭಾಗದಲ್ಲಿ ಏನೇನು ಕೆಲಸಗಳನ್ನು ಮಾಡಬೇಕೆಂದು ಸರಕಾರ ಯೋಚನೆ ಮಾಡಿದೆ ಎನ್ನುವುದನ್ನೂ ಈ ಮಾನ್ಯ ಸಭೆಗೆ ತಿಳಿಸಿಲ್ಲ. ಇದು ಇನ್ನೂ ಕಾರ್ಯರೂಪಕ್ಕೆ ಯಾವಾಗ ಬರುತ್ತದೆಯೋ ನಮಗಂತೂ ಗೊತ್ತಿಲ್ಲ. ನೀರು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಮತ್ತು ಇನ್ನೂ ಅನೇಕ ವಿಚಾರಗಳಲ್ಲಿ ಸಾಕಷ್ಟು ಹಣವನ್ನು ಒದಗಿಸಿಲ್ಲ ಎನ್ನುವ ಪ್ರಲಾಪವನ್ನು ನಾವು ಕೇಳುತ್ತಲೇ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆಂಧ್ರದ ಮುಖ್ಯ ಮಂತ್ರಿಗಳು ಸೇರಿಕೊಂಡು ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವ ಯೋಜನೆಗಳನ್ನು ಮತ್ತು ಅದರ ಉಸ್ತುವಾರಿಯನ್ನು ಕೇಂದ್ರ ಸರಕಾರದವರೇ ತೆಗೆದುಕೊಂಡು ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆಂದು ಕೇಳಿದೆವು. ಇದರಿಂದ ಯಾವರೀತಿ ಪ್ರತಿಫಲ ದೊರೆಯುತ್ತದೋ ನೋಡಬೇಕು. ಕೇಂದ್ರದವರು ಬೇರೆ ಪ್ರಾಂತಗಳ ನೆರವಿಗೆ ಬರುವಂತೆ ನಮ್ಮ ಪ್ರಾಂತದ ನೆರವಿಗೆ ಬರುತ್ತಿಲ್ಲ ಎನ್ನುವುದನ್ನು ಮೊದಲೇ ತಿಳಿಯಬೇಕಾಗಿತ್ತು. ಆ ರೀತಿ ಕೇಂದ್ರದಲ್ಲಿ ಒತ್ತಾಯ ಮಾಡಿದರೆ, ನಿಜವಾಗಿಯೂ ಕೃಷ್ಣಾ—ಗೋದಾವರಿ ಹಾಗೂ ಕಾವೇರಿ ನದಿ ನೀರನ್ನು ಕೇಂದ್ರದವರು ಸೂಚಿಸಿರುವ ರೀತ್ಯಾ, ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದರೆ ಅವರೂ ಒಪ್ಪಿಕೊಳ್ಳುತ್ತಿದ್ದರು. ಈಗ ಮೊಟ್ಟಮೊದಲನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ—ಗೋದಾವರಿ ನದಿ ನೀರಿನ ಪ್ರಮಾಣವನ್ನು ನಾವು ಒಪ್ಪದೇ ತಿರಸ್ಕರಿಸಿದ್ದೇವೆಂದು ತಿಳಿಸಿದ್ದಾರೆ. ಈ ಹಿಂದೆ ಇಲ್ಲಿ ಕೃಷ್ಣಾ—ಗೋದಾವರಿ ನದಿ ನೀರಿನ ವಿಚಾರ ಚರ್ಚೆಗೆ ಬಂದಿದ್ದಾಗ, ಇದನ್ನು ತಿರಸ್ಕಾರ ಮಾಡಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಕೇಂದ್ರಕ್ಕೆ ಹೇಳಬೇಕೆಂದು ಹೇಳಿದಾಗ, ನಾವು ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ. ಕ್ಲಾರಿಫಿಕೇಷನ್ನಿಗಾಗಿ ಯಾವ ಆಧಾರದ ಮೇಲೆ ಮಾಡಲಾಗಿದೆ ಎಂದು ಕೇಳಿದ್ದೇವೆ. ಅದಕ್ಕೆ ಉತ್ತರ ಬರಲಿ ಎಂದು ಹೇಳುತ್ತಿದ್ದರು. ಇವೊತ್ತು ಅದನ್ನು ತಿರಸ್ಕರಿಸುತ್ತಿದ್ದೇವೆಂದು ಹೇಳಿರುವುದನ್ನು ನೋಡಿದರೆ ನಮಗೆ ನ್ಯಾಯವಾಗಿ ಸಿಕ್ಕಬೇಕಾದ ನೀರಿನ ಪಾಲು ಸಿಕ್ಕಲಿಲ್ಲ ಎನ್ನುವುದು ಖಚಿತವಾಗಿ ತಿಳಿದುಕೊಳ್ಳಲು ಅವಕಾಶವಾಯಿತು. ಮಹಾರಾಷ್ಟ್ರದವರು ಇದರ ಬಗ್ಗೆ ಯಾವ ರೀತಿ ವಿಚಾರ ಮಾಡುತ್ತಿದ್ದಾರೆ ಎಂಬುದೂ ನಮಗೆ ಗೊತ್ತಿಲ್ಲ.

(ಶ್ರೀ ಜಿ. ಪಿ. ಗೌಡ)

ಶಿಕ್ಷಣದ ವಿಚಾರದಲ್ಲಿ ರಾಜ್ಯಪಾಲರು ಬಹಳ ದೀರ್ಘವಾಗಿ ಪ್ರಸ್ತಾಪಮಾಡಿದ್ದಾರೆ. ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಹಾಗೂ ಅಲ್ಲಿನ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳ ವಿಚಾರಗಳಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿ ಸಮನ್ವಯ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಮಹತ್ವವಾದ ಸಮಿತಿಗೆ ಯಾವ ವಿಚಾರಗಳನ್ನು ಪರಿಶೀಲನೆಮಾಡಿ ಏಕರೂಪತೆಗೆ ತರಲು ಸಾಧ್ಯವಾಗುತ್ತದೆ ಎನ್ನುವುದರಲ್ಲಿ ನಮಗೆ ಅನುಮಾನ ಬಂದಿದೆ. ಇವರಲ್ಲಿ ಎರಡು ವಿಷಯಗಳಿವೆ. ಮೊದಲನೆಯದು ಒಂದೇ ಕಾನೂನಿನ ಕೆಳಗೆ ಏತಕ್ಕೆ ಕೆಲಸ ಮಾಡಬಾರದು. ಈಗ ಎರಡು ವಿಧವಾದ ಯೂನಿವರ್ಸಿಟಿ ಆಕ್ಟುಗಳಿವೆ. ಇವೆರಡನ್ನು ಸಮನ್ವಯ ಮಾಡಿ ಅಲ್ಲಿರುವ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳನ್ನು ಸಮನ್ವಯಮಾಡಬೇಕು. ಹೀಗೆ ಪ್ರತಿಯೊಂದರಲ್ಲಿ ಸಮನ್ವಯಮಾಡಲು ಬರುತ್ತದೆಯೇ ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ಇನ್ನೊಂದು, ವಿದ್ಯಾರ್ಥಿಗಳು ಕೊಡುತ್ತಿರುವ ಫೀಜು ಕೂಡ ನಾನಾ ವಿಧವಾಗಿವೆ. ಇಲ್ಲಿ ಒಂದು ತರಹ ಶುಲ್ಕವಿದೆ. ಬೇರೆ ಕಡೆ ಒಂದು ರೀತಿಯಲ್ಲಿವೆ. ಇವನ್ನೆಲ್ಲಾ ಏಕರೂಪತೆಗೆ ತಂದಿಲ್ಲ. ಇವೆಲ್ಲ ವಿಷಯಗಳನ್ನು ಪರಿಶೀಲನೆ ಮಾಡಿ ಒಂದೇ ಶಾಸನದ ಮೇರೆಗೆ ಎರಡು ಯೂನಿವರ್ಸಿಟಿಗಳೂ ಕೆಲಸಮಾಡುವಂತೇಕೆ ವ್ಯವಸ್ಥೆ ಮಾಡಬಾರದು ? ಸಮಿತಿಯವರು ಇವೆಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ಸರಕಾರದವರು ಅವರಿಗೆ ತಿಳಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ಕರ್ನಾಟಕ ಯೂನಿವರ್ಸಿಟಿಯಲ್ಲಿ ಎಲೆಕ್ಟೆಡ್ ವೈಸ್‌ಛಾನ್ಸಲರಿದ್ದಾರೆ. ಇಲ್ಲಿ ಅಪಾಯಿಂಟೆಡ್ ವೈಸ್‌ಛಾನ್ಸಲರಿದ್ದಾರೆ. ಇಲ್ಲಿರುವ ಪ್ರೊಫೆಸರುಗಳಿಗೆ ನಾಲ್ಕುನೂರು ರೂಪಾಯಿಗಳು ಬರುತ್ತಿದ್ದರೆ ಅಲ್ಲಿರುವ ಪ್ರೊಫೆಸರುಗಳಿಗೆ ಎಂಟುನೂರು ರೂಪಾಯಿ ಸಂಬಳ ಬರುತ್ತದೆ. ಈ ರೀತಿಯಾದ ತಾರತಮ್ಯಗಳಿರುವುದು ಸರಿಯೇ ? ಇದರಲ್ಲಿ ಏಕರೂಪತೆ ತರುವ ವಿಷಯವನ್ನು ಸರಕಾರ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಪ್ರಾಥಮಿಕ ವಿದ್ಯಾಭ್ಯಾಸವೂ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿವೆ. ಇವುಗಳನ್ನೆಲ್ಲ ಸಮನ್ವಯ ಮಾಡಬೇಕೆಂದು ಹಲವು ವರ್ಷಗಳಿಂದಲೂ ಜನರು ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೂ ಇದನ್ನು ಸಮನ್ವಯ ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಉಚಿತವಾದ ಹಾಗೂ ಕಡ್ಡಾಯವಾದ ಶಿಕ್ಷಣ ಕೊಡುತ್ತಿರುವುದರಿಂದ ನೂರಕ್ಕೆ 90 ರಷ್ಟು ಮಕ್ಕಳು ಶಾಲೆಗೆ ಬರುತ್ತಿವೆ ಎಂದು ಇದರಲ್ಲಿ ಹೇಳಿದ್ದಾರೆ. ವಾಸ್ತವವಾಗಿ ನೋಡುವುದಾದರೆ ಇರುವ ಮಾಡಿರುವ ಅಂದಾಜು ನೂರಕ್ಕೆ 90 ರಷ್ಟು ಮಕ್ಕಳು ಎನ್ನುವುದು ರಿಜಿಸ್ಟರಿನಲ್ಲಿರುತ್ತದೆಯೇ ಹೊರತು ಅವರ ಅರ್ಧದಷ್ಟು ಮಕ್ಕಳು ಕೂಡ ಶಾಲೆಗಳಿಗೆ ಬರುತ್ತಿಲ್ಲ. ಇದನ್ನು ಸರಕಾರ ಮನಗಾಣಬೇಕು. ಗ್ರಾಮಾಂತರ ಪ್ರದೇಶದವರಿಗೆ ಸರ್ಕಾರದವರೇನು ಸೌಕರ್ಯಗಳನ್ನೊದಗಿಸಿಕೊಟ್ಟಿದ್ದಾರೆ, ಅದನ್ನು ತಿಳಿಸಿಲ್ಲ. ಎಷ್ಟೋ ಗ್ರಾಮಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳೇ ಶಾಲೆಗೆ ಬರುತ್ತಿಲ್ಲ. ಇವರ ಗೈರ್‌ಹಾಜರಿಯೇ ಜಾಸ್ತಿಯಾಗುತ್ತಿರುವಾಗ ಇನ್ನು ಬಾಲಕರ ಹಾಜರಿ ವಿಚಾರಮಾಡುವುದೆಲ್ಲಿ ಬಂತು ಆದ್ದರಿಂದ ಇಲ್ಲಿ ಹೇಳಿರತಕ್ಕದ್ದೆಲ್ಲಾ ಅರ್ಥವಿಲ್ಲದ ಬರವಣಿಗೆಯೆಂದು ಹೇಳುತ್ತೇನೆ.

10-30 A.M.

ಸ್ವಾಮಿ, ಹಿಂದುಳಿದವರ ಹಿತರಕ್ಷಣೆಗಾಗಿ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆಯೆಂದು ಹೇಳಿದ್ದಾರೆ. ಆದರೆ ಇದರಿಂದೇನು ಅನುಕೂಲವಾಗಬೇಕೋ ಅದಾಗುತ್ತಿಲ್ಲ. ಈ ಬಾಬಿನಲ್ಲಿ ಸರ್ಕಾರ ಬೇಕಾದಷ್ಟು ದುಡ್ಡನ್ನು ಖರ್ಚುಮಾಡುತ್ತಿದೆ. ಆದರೆ ಯಾವ ಯಾವ ಬಾಬಿಗೆಷ್ಟು ಎಂಬುದನ್ನು ಇಲ್ಲಿ ತಿಳಿಸಿಲ್ಲ.

ಇನ್ನು ಆಹಾರಧಾನ್ಯಗಳ ಬೆಲೆ ಹತೋಟಿಯ ಬಗ್ಗೆ ಹೇಳಿದ್ದಾರೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತ, ಆಹಾರಧಾನ್ಯಗಳ ಬೆಲೆಗಳು ಸಾಮಾನ್ಯ ಹತೋಟಿಯಲ್ಲಿರುವುದರಿಂದ ಇದೊಂದು ಸಂತೋಷದ ಹಾಗೂ ಸಮಾಧಾನಕರವಾದ ಸುದ್ದಿಯಾಗಿರುತ್ತದೆಂದು ಹೇಳಿದ್ದಾರೆ. ಆದರೆ ಇದು ಸತ್ಯಾಂಶಕ್ಕೆ ಬಹಳ ದೂರವಾದ ವಿಚಾರ. ರೈತರಿಗೂ ಸರಿಯಾದ ಬೆಲೆ ಸಿಕ್ಕುತ್ತಿಲ್ಲ, ಕೊಳ್ಳತಕ್ಕವರಿಗೂ ಸರಿಯಾದ ಬೆಲೆಗಳಿಲ್ಲ. ಇದರ ಲಾಭವೆಲ್ಲಾ ಮಧ್ಯವರ್ತಿ ಜನರ ಪಾಲಾಗುತ್ತಿದೆ. ಇಲ್ಲಿ ಸಹಕಾರ ಸಂಘಗಳ ಮೂಲಕ ಆಹಾರಸಾಮಗ್ರಿಗಳನ್ನು ಜನರಿಗೆ ಒದಗಿಸುವಂತೆ ಮಾಡಲಾಗುತ್ತದೆಂದು ಹೇಳಿದ್ದಾರೆ. ಆದರೆ ಕೊಳ್ಳತಕ್ಕ ಜನರಿಗೆ ಕೊಳ್ಳುವ ಶಕ್ತಿಯನ್ನು ಮಾತ್ರ ಒದಗಿಸತಕ್ಕ ಪ್ರಯತ್ನಗಳನ್ನು ಮಾಡಿಲ್ಲ. ಇಂದು ಈ ಏರುತ್ತಿರುವ ಬೆಲೆಗಳಲ್ಲಿ ಸಾಮಗ್ರಿಗಳನ್ನು ಕೊಳ್ಳಲು ಜನಸಾಮಾನ್ಯರಿಗೆ ಶಕ್ತಿಯಿರುವುದಿಲ್ಲ. ಜನರಲ್ಲಿ ಈ ಕೊಳ್ಳುವ ಶಕ್ತಿಯನ್ನು ಜಾಸ್ತಿ ಮಾಡದ ವಿನಾ ಈ

ಯೋಜನೆಯಿಂದ ಜನರಿಗೆ ಸುಖವಿಲ್ಲ. ಇಲ್ಲಿ ನಾನು ಸೂಚಿಸಲಿಚ್ಛಿಸುವುದೇನೆಂದರೆ : ಈ ಸಹಕಾರ ಸಂಘಗಳನ್ನೂ ಜಾಸ್ತಿಯಾಗಬೇಕು. ಇದರ ಜೊತೆಗೆ ಧಾನ್ಯ ಬೆಳೆಸತಕ್ಕವರ ಸಹಕಾರ ಸಂಘಗಳೂ ಜಾಸ್ತಿಯಾಗಬೇಕು. ಮಧ್ಯವರ್ತಿ ಜನರ ಕಾಟ ಎಂದ ತಪ್ಪುತ್ತದೆಯೋ ಅಂದೇ ಜನಗಳಿಗೂ ಮತ್ತು ರೈತನಿಗೂ ಅನುಕೂಲ ಉಂಟಾಗುತ್ತದೆ. ಇನ್ನು ಇಲ್ಲಿ ರೈತನಿಗೆ ಉತ್ತಮ ದರ್ಜೆಯ ಬಿತ್ತನೆ ಬೀಜ ಮತ್ತು ಗೊಬ್ಬರ ಇತ್ಯಾದಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದನ್ನು ಎಷ್ಟರಮಟ್ಟಿಗೆ ಜಾರಿಗೆ ತರಬೇಕಾಗಿತ್ತೋ ಅಷ್ಟರ ಮಟ್ಟಿಗೆ ತಂದಿಲ್ಲವೆಂದು ತಿಳಿಸಲಿಚ್ಛಿಸುತ್ತೇನೆ. ಜನರಿಗೆ ಸಕಾಲದಲ್ಲಿ ಸಾಕಷ್ಟು ಸಾಲಗಳು ದೊರೆಯುತ್ತಿಲ್ಲ. ಈಗ ಹಣವನ್ನು ರಿಜರ್ವ್ ಬ್ಯಾಂಕಿನಿಂದ ಪಡೆದ ಏಪೆಕ್ಸ್ ಬ್ಯಾಂಕಿನ ಮೂಲಕ ಜಿಲ್ಲಾ ಮಟ್ಟದಲ್ಲೂ ತಾಲ್ಲೂಕು ಮಟ್ಟದಲ್ಲೂ ಒದಗಿಸಬಹುದು. ಆದರೆ ಬಡ್ಡಿಯ ದರ ಶೇಕಡ 7-8 ಬೀಳುತ್ತದೆ ಇದು ಬಹಳ ಜಾಸ್ತಿಯಾಯಿತು. ಇದನ್ನು ಇಳಿಸಿ ರೈತರಿಗೆ ಶೇಕಡ 3-4ರಂತೆ ಬಡ್ಡಿ ದೊರೆಯುವಂತೆ ಏಕೆ ಪ್ರಯತ್ನ ಮಾಡಬಾರದೆಂದು ಕೇಳುತ್ತೇನೆ. ಇದನ್ನೆಲ್ಲಾ ನೋಡಿದರೆ ಈ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕದ್ದೆಲ್ಲ ಒಂದು ಅಸಂಬದ್ಧ ಪ್ರಲಾಪವಾಗಿದೆಯೆಂದು ನಾನು ಹೇಳದೆ ವಿಧಿಯಿಲ್ಲ. ಈ ಕಾರಣದಿಂದ ನಾನು ಈ ವಂದನಾರ್ಪಣ ನಿರ್ಣಯಕ್ಕೆ ನನ್ನ ಒಪ್ಪಿಗೆಯನ್ನು ಕೊಡಲು ಸಾಧ್ಯವಿಲ್ಲ. ಇಲ್ಲಿ ಹೇಳಿರುವಂತೆ ಯಾವ ವಿಷಯದಲ್ಲೂ ಯಾವ ಒಂದು ಬದಲಾವಣೆಯೂ ಆಗಿಲ್ಲ. ಇಲ್ಲಿ ಹರಿಜನ-ಗಿರಿಜನರ ಹಾಗೂ ಇನ್ನಿತರೆ ಹಿಂದುಳಿದ ಜನರ ಅಭಿವೃದ್ಧಿಯ ವಿಚಾರವನ್ನು ಹೇಳಿದ್ದಾರೆ. ಆದರೆ ಇಲ್ಲಿ ಇವುಗಳಿಂದ ಅನುಕೂಲ ಆಗುವ ಬದಲು ಜನರ ಶೋಷಣೆ ಜಾಸ್ತಿಯಾಗುತ್ತಿದೆ. ಇಲ್ಲಿ ಹೇಳಿರುವಂತೆ ಯಾವ ಒಂದು ಅನುಕೂಲವಾಗಲೀ ಆಗಿರುವುದಿಲ್ಲ. ಈ ಎಲ್ಲಾ ಬಾಬುಗಳಲ್ಲಿಯೂ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ. ಇನ್ನೆರಡು ಮೂರು ವರ್ಷಗಳಲ್ಲೇ ನಮ್ಮ ಹಣಕಾಸಿನ ವಿಚಾರ ಬಹಳ ಹದಗೆಡಬಹುದಾದ ಸಂದರ್ಭಗಳು ಕಾಣುತ್ತಿರುವುದರಿಂದ ಆಗ ನಮ್ಮ ಸಹಾಯಕ್ಕೆ ಕೇಂದ್ರದವರು ಬರಬೇಕಾಗುತ್ತಾರೆಂದು ಹೇಳಿದ್ದಾರೆ. ಅದಕ್ಕೆ ತಕ್ಕಹಾಗೆ ನಮ್ಮ ಸರ್ಕಾರ ಒಂದು ಪ್ರೈಮಾಫೇಷಿಯಾ ಕೇಸನ್ನು ತಯಾರು ಮಾಡಿಲ್ಲ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಆದರೆ ಈ ಬಾಬಿನಲ್ಲಿ ಕೇಂದ್ರದಿಂದ ಹೆಚ್ಚು ಹಣವನ್ನು ಪಡೆಯುವಂಥ ಒಂದು ಶಕ್ತಿಯನ್ನು ದೇವರು ನಮ್ಮ ಸರ್ಕಾರಕ್ಕೆ ಕೊಡಲೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).— ಸ್ವಾಮಿ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಇನ್ನೂ ಪ್ರಮಾಣ ವಚನವನ್ನು ಸ್ವೀಕರಿಸಿದಂತೆ ಕಾಣಲಿಲ್ಲವಲ್ಲಾ ?

Mr. SPEAKER.—Members must exercise some restraint. The hon'ble Member may go to the Office and ascertain.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಅದು ನನಗೆ ಗೊತ್ತಿಲ್ಲ.

Mr. SPEAKER. The hon'ble member must make enquiries before he gets up. It has appeared in news papers

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ತಾವೇ ಅನೇಕ ಸಂದರ್ಭಗಳಲ್ಲಿ ಪೇಪರಿನಲ್ಲಿ ಬರತಕ್ಕ ಸಮಾಚಾರವನ್ನು ನಂಬಬಾರದೆಂದು ಹೇಳಿದ್ದೀರಲ್ಲವೇ ?

Mr. SPEAKER.—The hon'ble member should not raise it without ascertaining it first. He should not waste the time of the House like **this**

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಸ್ವಾಮಿ, ನಾನು ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತೇನೆ ಮತ್ತು ಸಮರ್ಥನೆ ಮಾಡುತ್ತೇನೆ. ಹೀಗೆ ಸಮರ್ಥನ ಮಾಡುವಾಗ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ನಾನಾವ ಬ್ರೇಕನ್ನೂ ಹಾಕಲಿಲ್ಲ. ಆದರೆ ನಾನು ಮಾತನಾಡತಕ್ಕ ಕಾಲದಲ್ಲಿ ಅವರು ಹೀಗೆ ಬ್ರೇಕ್ ಹಾಕಲು ಪ್ರಯತ್ನ ಮಾಡುವುದು ಉಚಿತವಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ಕಳೆದ ವರ್ಷ ಆಕಸ್ಮಿಕವಾಗಿ ಚೈನಾ ದೇಶದವರು ನಮ್ಮ ದೇಶದಮೇಲೆ ಧಾಳಿಮಾಡಿದ್ದರಿಂದ ಇಲ್ಲಿ ಒಂದು ತುರ್ತುಪರಿಸ್ಥಿತಿಯುಂಟಾಯಿತು. ಆ ಪರಿಸ್ಥಿತಿಯನ್ನು ಎದುರಿಸಿ, ಪರಕೀಯರನ್ನು ನಮ್ಮ ದೇಶದಿಂದ ಹೊಡೆದು ಹೊರಕ್ಕಟ್ಟಲು ಜನತೆ ತುಂಬಾ ಸಹಕಾರ ನೀಡಿತು. ಇದು ನಿಜವಾಗಿಯೂ ಬಹಳ ಸಂತೋಷದ ವಿಚಾರ. ಈ ವಿಚಾರವಲ್ಲಿ ನಮ್ಮ ದೇಶದ ಜನತೆ ತುಂಬಾ ಎಚ್ಚರದಿಂದಿರಲು ಎಲ್ಲಾ ಪ್ರಯತ್ನಗಳನ್ನೂ ನಡೆಸಲಾಗಿದೆ ಎಂದು ರಾಜ್ಯಪಾಲರು ಹೇಳಿರತಕ್ಕದ್ದು ತುಂಬಾ ಸ್ವಾಗತಾರ್ಹವಾದ ಸಂಗತಿಯಾಗಿದೆ. ಇದಕ್ಕನುಗುಣವಾಗಿ ದೇಶವಾದ್ಯಂತವೂ ಗೃಹರಕ್ಷಣಾ ದಳಗಳನ್ನು ವಿಸ್ತರಿಸಲು ಕಾರ್ಯಕ್ರಮವನ್ನು ಕೈಗೊಳ್ಳಲಾ

(ಶ್ರೀ ಎಸ್ ವಿ ಅಗ್ನಿಹೋತ್ರಿ)

ಗಿದೆ. ಈಗ ಈ ಗೃಹರಕ್ಷಣಾ ದಳಗಳು ಅನೇಕ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ಹಿಂದಕ್ಕೆ ಇವು ಕೇವಲ ಮುಂಬೈ ಕರ್ನಾಟಕ ಜಿಲ್ಲೆಗಳಲ್ಲಿ ನಾಲ್ಕು ಕಡೆಗಳಲ್ಲಿ ಮಾತ್ರ ಇದ್ದವು. ಆದರೆ ಇನ್ನು ಮುಂದೆ ಈ ದಳಗಳನ್ನು ಮೈಸೂರು ರಾಜ್ಯದಾದ್ಯಂತವೂ ಹರಡಲು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಬ್ಬ ಉನ್ನತ ಅಧಿಕಾರಿಗಳನ್ನು ನೇಮಕ ಮಾಡಿರತಕ್ಕದ್ದು ಬಹಳ ಶ್ಲಾಘನೀಯವಾದ ವಿಚಾರ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ.

ಇನ್ನು ಎರಡನೆಯದಾಗಿ, ನಮ್ಮ ವಿದ್ಯಾಶಾಲೆಗಳಲ್ಲೂ ಕಾಲೇಜುಗಳಲ್ಲೂ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳಿಗೆಲ್ಲಾ ಎನ್. ಸಿ. ಸಿ. ಟ್ರೈನಿಂಗ್‌ನಲ್ಲಿ ಪ್ರೋತ್ಸಾಹ ನೀಡಲು ಶೇಕಡ 60 ಕ್ಕೂ ಮೀರಿದ ವಿದ್ಯಾರ್ಥಿಗಳಿಗೆ ವೇತನ ಕೊಡುತ್ತಿರುವುದು ಶ್ಲಾಘನೀಯವಾದ ವಿಚಾರ. ನಮ್ಮ ಮುಂದಿನ ಪೀಳಿಗೆಯು ದೇಶ ರಕ್ಷಣೆಯನ್ನು ಸುಲಭವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಒಂದು ಉತ್ತಮ ವ್ಯವಸ್ಥೆ ಎನ್ನು, ಒಂದು ಯೋಗ್ಯವಾದ ಕಾರ್ಯವನ್ನು ಮಾಡಿದ್ದಾರೆಂದು ನಾನು ತಿಳಿಸಬಯಸುತ್ತೇನೆ. ಆದರೆ ನಮ್ಮ ಸರ್ಕಾರದವರು ಈ ದಳಗಳು ಒಂದು ಉತ್ತಮರೀತಿಯಲ್ಲಿ ದೇಶಕ್ಕೆ ಸೇವೆಯನ್ನು ಸಲ್ಲಿಸುವಂತಾಗಲೀ ಎಂಬ ಒಂದು ಘನೋದ್ದೇಶದಿಂದ ಇವುಗಳನ್ನು ಹುಟ್ಟುಹಾಕಿದರೋ ಅದೇ ರೀತಿಯ ಉತ್ಸಾಹದಿಂದ ಅವುಗಳನ್ನು ಬೆಳೆಸಿಕೊಂಡು ಬರಬೇಕೆಂದು ನಾನು ಸೂಚಿಸಬಯಸುತ್ತೇನೆ

ಇನ್ನೂ ಮೂರನೆಯದಾಗಿ. –ನಮ್ಮ ಯೋಜನಾ ಕಾರ್ಯಕ್ರಮದಲ್ಲಿ 250 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 110 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಇದು ತುಂಬಾ ಯೋಗ್ಯವಾಗಿದೆ. ಇನ್ನುಳಿದ ಹಣವನ್ನು ಅಧಿಕಾರಿಗಳ ಕೈಗೆ ಕೊಟ್ಟು ಅದೂ ಕೂಡ ದೇಶಕ್ಕೆ ಸದ್ವಿನಿಯೋಗವಾಗುವಂತೆ ಮಾಡಬೇಕೆಂದು ತಿಳಿಸಬಯಸುತ್ತೇನೆ. ಆದರೆ ಇದರ ಮೇಲ್ವಿಚಾರಣೆಯನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕಾದ್ದು ಅತ್ಯಗತ್ಯ.

ಇನ್ನು ಪಂಚಾಯಿತಿ ರಾಜ್ಯದ ವಿಷಯವಾಗಿ ಹೇಳುವುದಾದರೆ, ನಾವು ಸ್ವಾತಂತ್ರ್ಯದ ನಂತರ ಯಾವ ತರಹ ಸರ್ಕಾರ ಬೇಕು ಎಂಬುದಾಗಿ ಆರಿಸಿಕೊಂಡೆವೋ ಅಂತಹ ಪ್ರಜಾರಾಜ್ಯವು 1 5 ರಿಂದ 1961 ರವರೆಗೂ ಕೆಲಸ ಮಾಡುತ್ತಿದೆ. ದೇಶದ ಕಲ್ಯಾಣ ಯಾವರೀತಿ ಆಗಬೇಕು, ದೇಶದ ಜನತೆಗೆ ಯಾವ ಸುಖ ಸೌಲಭ್ಯಗಳು ದೊರಕಬೇಕು ಎಂಬುದಾಗಿ ವಿಚಾರ ಮಾಡುವಾಗ ಪ್ರಜಾಪ್ರಭುತ್ವಕ್ಕನುಗುಣವಾಗಿ ಗ್ರಾಮ ಪಂಚಾಯಿತಿ ಟಿ. ಡಿ. ಬೋರ್ಡ್, ಜಿಲ್ಲಾ ಬೋರ್ಡುಗಳಿಗೆ ಅಧಿಕಾರಗಳನ್ನೆಲ್ಲಾ ವಿಕೇಂದ್ರೀಕರಣ ಮಾಡಿ ಎಲ್ಲರೂ ಕೆಲಸದಲ್ಲಿ ಭಾಗವಹಿಸಿ ಜನತೆಯ ಹಿತರಕ್ಷಣೆ ಮಾಡಿಕೊಂಡು ಹೋಗುವುದು ಬಹಳ ಉತ್ತಮ ಕೆಲಸ. ಈಗ ಸರ್ಕಾರದವರು ಕೊಂಡಜ್ಜಿ ಬಸಪ್ಪ ಕಮಿಟಿಯೊಂದನ್ನು ರಚನೆಮಾಡಿ ಅವರಿಂದ ಒಂದು ವರದಿಯನ್ನು ತರಿಸಿಕೊಂಡಿರುವುದಾಗಿ ಹೇಳಿದ್ದು ಬಹಳ ಒಳ್ಳೆಯದು. ಆ ವರದಿ ಬಹಳ ಯೋಗ್ಯವಾದುದಾಗಿದ್ದರೂ ಅದು ಕಾರ್ಯಾಚರಣೆಯಲ್ಲಿ ಬರಬೇಕಾದರೆ ಎಲ್ಲರೂ ಬಹಳ ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ. ಪ್ರಜಾಪ್ರಭುತ್ವ ನಿಜವಾಗಿ ಬಲಗೊಳ್ಳಬೇಕಾದರೆ, ಗ್ರಾಮ ಪಂಚಾಯಿತಿಗಳಿಗೆ, ಟಿ ಡಿ. ಬೋರ್ಡುಗಳಿಗೆ, ಜಿಲ್ಲಾ ಮಂಡಲಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಈಗ ಟಿ.ಡಿ. ಬೋರ್ಡುಗಳಿಗೆ ಸರ್ಕಾರದವರು ಕೇವಲ 2 ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಕೊಡುತ್ತಿದ್ದಾರೆ. ನಿಜವಾಗಿಯೂ ಅಷ್ಟು ಹಣ ಸಾಕಾಗುವುದಿಲ್ಲ. ಹೆಚ್ಚು ಹಣವನ್ನು ಕೊಟ್ಟು ಅವುಗಳನ್ನು ಬಲಪಡಿಸಿದ್ದೇ ಆದರೆ ನಿಜವಾಗಿ ಜಿಲ್ಲಾಮಟ್ಟದಲ್ಲಿ ಹೆಚ್ಚು ಕೆಲಸಗಳನ್ನು ಯೋಗ್ಯ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆಂದು ನನ್ನ ಭಾವನೆ.

ಇನ್ನು ಮುಂಬೈ ಸಹಕಾರ ಸಂಘಗಳ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿನ ಸಹಕಾರ ಸಂಘದ ಸದಸ್ಯರೆಲ್ಲರೂ ಸೇರಿಕೊಂಡು ತಮ್ಮಲ್ಲೊಬ್ಬರನ್ನು ಚೇರ್‌ಮನ್ನರನ್ನಾಗಿ ಮಾಡಿ ಒಂದು ವರ್ಕಿಂಗ್ ಕಮಿಟಿಯನ್ನು ರಚನೆಮಾಡಿದ್ದಾರೆ. ಆದರೆ ಆ ಕಮಿಟಿಯಲ್ಲಿ ನಡೆದಂಥ ಕಾರ್ಯಕಲಾಪಗಳ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಿದ್ದೂ ಉಂಟು. ಮೊನ್ನೆ ಸಹಕಾರಿ ಕಾಯಿದೆ ಇಲ್ಲಿ ಪಾಸ್ ಆದ ನಂತರ ಒಬ್ಬ ರಿಟರ್ನಿಂಗ್ ಆಫೀಸರನ್ನು ನೇಮಿಸಿ ಅವರ ನೇತೃತ್ವದಲ್ಲಿ ಚುನಾವಣೆಗಳನ್ನು ನಡೆಸಿ ತಮ್ಮದೇ ಆದ ಒಂದು ಸಹಕಾರ ಸಂಘವನ್ನು ರಚಿಸಿಕೊಂಡಿದ್ದಾರೆ. ಸಹಕಾರ ಸಂಘಗಳ ಆಡಳಿತದಲ್ಲಿರತಕ್ಕ ನ್ಯೂನತೆಗಳನ್ನು ತೊಡೆದು ಹಾಕುವುದಕ್ಕೆ ಇದು ಬಹಳ ಯೋಗ್ಯವಾಗಿದೆ. ಸಹಕಾರೀ ತತ್ವಗಳ ಮೇರೆಗೆ ಈ ದೇಶದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಭಾವನೆ. ಯಾವುದೇ ಒಂದು ಕೆಲಸವನ್ನು ಅಥವಾ ಒಂದು ಪ್ರಯೋಗವನ್ನು ಮಾಡುವಾಗ ಅನೇಕ ತೊಂದರೆಗಳು ನ್ಯೂನತೆಗಳು ಆಗುವುದು ಉಂಟು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆಡಳಿತದಲ್ಲಿರತಕ್ಕ ಎಲ್ಲಾ ನ್ಯೂನತೆಗಳ ಬಗ್ಗೆ ವಿಧಾನಸಭೆಯಲ್ಲೂ, ವಿಧಾನಪರಿಷತ್ತಿನಲ್ಲೂ ಯೋಗ್ಯ ರೀತಿಯಿಂದ ವಿಚಾರ ಮಾಡಿ ತೀರ್ಮಾನ

ಗಳನ್ನು ಕೈಗೊಳ್ಳುವುದಕ್ಕಾಗಿ ನಾವು ಇಲ್ಲಿ ಕುಳಿತಿದ್ದೇವೆಂಬುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಇನ್ನು ಸರ್ಕಾರ ಹೀಗೆ ಮಾಡಿದೆ, ಹಾಗೆ ಮಾಡಿದೆ ಎಂಬುದಾಗಿ ಟೀಕೆ ಮಾಡುವುದಾದರೆ ಪ್ರಜಾಪ್ರಭುತ್ವ ಖಂಡಿತವಾಗಿ ಯಶಸ್ವಿಯಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಕೆಲಸ ಮಾಡುವುದಕ್ಕೆ ಅನುಕೂಲವಾಗುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಮಳೆ ಬೆಳೆಗಳ ಪರಿಸ್ಥಿತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಎಲ್ಲವನ್ನೂ ಮಾಡಬಹುದು, ಆದರೆ ನಿಸರ್ಗದ ಮೇಲೆ ಸರ್ಕಾರವಾಗಲೀ, ಜನತೆಯಾಗಲೀ ಹಿಡಿತ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲವೆಂದು ಹೇಳಿದ್ದಾರೆ. ಅವರು ಧಾರವಾಡ ಬಿಜಾಪುರ, ಬೆಳಗಾಂ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ಅವನ್ನು ಏಕೆ ಬಿಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ.

ಇನ್ನು ಆಹಾರ ಧಾನ್ಯಗಳ ಪರಿಸ್ಥಿತಿ ಚೆನ್ನಾಗಿಲ್ಲ, ಬೆಳೆಗಳು ಒಣಗುತ್ತಾ ಇವೆ, ಆಹಾರ ಧಾನ್ಯಗಳ ಉತ್ಪಾದನೆ ಸಾಕಷ್ಟು ಆಗುತ್ತಿಲ್ಲವೆಂಬುದಾಗಿ ಗೊತ್ತಿದ್ದು ಉತ್ಪಾದನೆಯನ್ನು ಸಾಕಷ್ಟು ಹೆಚ್ಚಿಸಬೇಕೆಂದು ಸರಕಾರದವರು ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನೀರಾವರಿ ಯೋಜನೆಗಳು ಎಲ್ಲಿಯವರೆಗೆ ಪೂರ್ತಿಯಾಗುವುದಿಲ್ಲವೋ ಅಲ್ಲಿಯವರೆಗೂ ಆಹಾರೋತ್ಪಾದನೆ ಹೆಚ್ಚಾಗುವುದಿಲ್ಲ. ಕೇವಲ ಮಳೆ ಬೆಳೆಗಳ ಅವಲಂಬನದಿಂದ ಇದು ಸಾಧ್ಯವಾಗಲಾರದು. ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸದೆ ಇದ್ದರೆ ನಿಜವಾಗಿ ಆಹಾರ ಧಾನ್ಯಗಳ ಉತ್ಪನ್ನ ಹೆಚ್ಚಾಗುವುದಿಲ್ಲ. ಅವು ಹೆಚ್ಚಾಗಬೇಕಾದರೆ ದೊಡ್ಡ ದೊಡ್ಡ ಯೋಜನೆಗಳು ಕಾರ್ಯ ರೂಪದಲ್ಲಿ ಬರಬೇಕು. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ದಿಷ್ಟವಾದ ಹಣವನ್ನು ದೊಡ್ಡ ನೀರಾವರಿ ಯೋಜನೆಗಳಿಗೆ ಮತ್ತು ಚಿಕ್ಕ ನೀರಾವರಿ ಯೋಜನೆಗಳಿಗೆ ಮೀಸಲಾಗಿಡಬೇಕು. ಬೇರೆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸ್ವಲ್ಪಮಟ್ಟಿಗೆ ಹಣ ಕಡಿಮೆ ಮಾಡಿದರೂ ಅಡ್ಡಿ ಇಲ್ಲ. ಆದ್ದರಿಂದ ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಉಪಯೋಗ ಮಾಡಿ ಅದರಿಂದ ಪೂರಾ ಫಲ ಪಡೆಯಬೇಕೆಂಬುದು ನನ್ನ ಭಾವನೆ.

ಇನ್ನು ಮುಂಬೈಯಲ್ಲಿ ಟೆನೆನ್ಸಿ ಕಾನೂನು ಪಾಸಾಗಿದೆ. ಕಾಂಗ್ರೆಸ್ ಸರ್ಕಾರ ಬಂದನಂತರ ಅದು ರೈತರಿಗಾಗಿ ದುಡಿಯುತ್ತಿದೆ ಎಂಬುದಾಗಿ ಒಂದು ವಿಶ್ವಾಸವಿತ್ತು. ಆದರೆ ಈವರೆಗೆ ಈ ಸಭೆಯಲ್ಲಿ ಮೈಸೂರು ಟೆನೆನ್ಸಿ ಕಾನೂನು ಪಾಸಾಗಿಲ್ಲ, ನಿಜ. ಪಾರ್ಲಿಮೆಂಟಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿಯಾಗದ ಹೊರತು ಈ ಟೆನೆನ್ಸಿ ಕಾಯಿದೆಯನ್ನು ಇಲ್ಲಿ ಜಾರಿ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಆ ರೀತಿ ತಿದ್ದುಪಡಿಯಾದ ನಂತರ ಜತ್ತಿ ಸಮಿತಿಯ ವರದಿಯ ಆಧಾರದ ಮೇಲೆ ಮತ್ತು ಪ್ಲಾನಿಂಗ್ ಕಮಿಷನ್ನಿನವರ ಮಾರ್ಗದರ್ಶನವನ್ನನುಸರಿಸಿ ಈ ಮೈಸೂರು ಟೆನೆನ್ಸಿ ಕಾನೂನನ್ನು ರಾಜ್ಯದಲ್ಲಿ ಏಕರೂಪತೆಯಿಂದ ಜಾರಿಗೆ ತರಬೇಕು. ಅದನ್ನು ಈ ಸರಕಾರದವರು ಜಾಗ್ರತೆಯಾಗಿ ತರುತ್ತಾರೆಂದು ನನಗೆ ವಿಶ್ವಾಸವಿದೆ.

ಇನ್ನು ಘಟಪ್ರಭಾ, ಮಲಪ್ರಭಾ, ಅಪ್ಪರ್ ಕೃಷ್ಣಾ ಮತ್ತು ಕಾಳೀ ನದಿ ಮುಂತಾದ ದೊಡ್ಡ ದೊಡ್ಡ ಯೋಜನೆಗಳ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇವನ್ನು ಮಾಡುವಾಗ ಎಷ್ಟೇ ಅಡ್ಡಿ ಅತಂಕಗಳು ಬಂದರೂ ಅವನ್ನೆಲ್ಲಾ ಸಹಿಸಿಕೊಂಡು ಜನತೆಯ ಬೆಂಬಲವನ್ನು ಹೆಚ್ಚಿಗೆ ಪಡೆದು ಈ ಕಾರ್ಯಗಳನ್ನು ಮುಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಸರ್ಕಾರ ಈ ಬಗ್ಗೆ ಯೋಗ್ಯ ರೀತಿಯಿಂದ ವಿಚಾರ ಮಾಡಿ ತನ್ನ ಹಕ್ಕನ್ನು ಕಳೆದುಕೊಳ್ಳದಂತೆ ಪ್ರಯತ್ನ ಮಾಡುವುದು ಬಹಳ ಯೋಗ್ಯವಾದ ಸಂಗತಿ. ಇಂತಹ ಕೆಲಸಗಳನ್ನು ಸರ್ಕಾರ ಕೈಗೊಳ್ಳುವಾಗ ಸ್ವಲ್ಪಮಟ್ಟಿಗೆ ವಿಳಂಬವಾಗುವುದೇನೋ ಸ್ವಾಭಾವಿಕ. ಕೃಷ್ಣಾ ಹಾಗೂ ಗೋದಾವರಿ ನೀರಿನ ಉಪಯೋಗದ ಸಂಬಂಧದಲ್ಲಿ ಮತ್ತು ಆ ನೀರಿನ ಹಂಚಿಕೆಯಲ್ಲಿ ನಮಗೆ ದೊರಕಬಹುದಾದಂಥ ಒಂದು ಹಕ್ಕಿನ ಪಾಲಾಂಶವನ್ನು ಪಡೆಯಲು ನಮ್ಮ ಸರ್ಕಾರದವರು ಈಗಲೇ ಒಂದು ನಿಲುವನ್ನು ಕೈಗೊಳ್ಳುವ ಪ್ರಯತ್ನ ಮಾಡಬೇಕೆಂಬುದೇ ನನ್ನ ಇಚ್ಛೆ.

ಇನ್ನು ಬಾವಿಗಳ ವಿಚಾರ. ಯಾವ ಊರಿನಲ್ಲಿ ಬಾವಿಗಳು ಇಲ್ಲವೋ ಮುಂದೆ ಅಂತಹ ಕಡೆಗಳಲ್ಲಿ ಬಾವಿಗಳನ್ನು ತೋಡಿಸಬೇಕು. ಎಲ್ಲೆಲ್ಲಿ ಬಾವಿಗಳು ಇವೆಯೋ ಅಲ್ಲಲ್ಲಿ ಅವು ಜನತೆಗೆ ಚೆನ್ನಾಗಿ ಉಪಯೋಗವಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಇನ್ನು ಚಿಕ್ಕ ನೀರಾವರಿ ಯೋಜನೆಗಳನ್ನು ಯೋಗ್ಯ ರೀತಿಯಿಂದ ಕಾರ್ಯಗತ ಮಾಡಬೇಕು. ಸಣ್ಣ ಮತ್ತು ದೊಡ್ಡ ಹಳ್ಳಿಗಳಿರುವ ಕಡೆಗಳಲ್ಲಿ ಸಂಚಾರ ಮಾರ್ಗಗಳನ್ನು ನಾಡ ವಾಗ ನ್ಯಾಷನಲ್ ಹೈವೇಸ್ ಆಗಲೇಬೇಕೆಂದು ನಾನು ಹೇಳುತ್ತೇನೆ. ಸಣ್ಣ ರಸ್ತೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಲಕ್ಷ್ಯ ಮಾಡಿದರೆ ಸ್ಥಳದಿಂದ ಸ್ಥಳಕ್ಕೆ

(ಶ್ರೀ ಎಸ್.ವಿ. ಅಗ್ನಿಹೋತ್ರಿ)

ಮಾಲುಗಳನ್ನು ತರುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಾಬಿಗೆ ಪ್ರಥಮಪ್ರಾಶಸ್ತ್ಯ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಣ್ಣಸಣ್ಣ ಸಂಚಾರ ಮಾರ್ಗಗಳನ್ನು ಕೂಡಲೇ ಮಾಡಬೇಕೆಂಬು ನಾನು ಸರ್ಕಾರದವರಿಗೆ ಸೂಚಿಸ ಬಯಸುತ್ತೇನೆ.

ಇನ್ನು ಬಂದರಿನ ವಿಚಾರವಾಗಿ, ನಮ್ಮ ರಾಜ್ಯಪಾಲರು ಕರ್ಣಾಟಕದಲ್ಲಿ ಇದು ಬಹಳ ಅಭಿವೃದ್ಧಿಯಾಗ ಬೇಕಾಗಿದೆ ಎಂದು ಪ್ರಸ್ತಾಪಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಮಂಗಳೂರು ಬಂದರನ್ನೂ ಕಾರವಾರ ಬಂದರನ್ನೂ ಅಭಿವೃದ್ಧಿಗೊಳಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಆದರೂ ನಮ್ಮ ರಾಜ್ಯದಲ್ಲಿ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಲ್ಪೆ ಮತ್ತು ಭಟ್ಕಳ ಬಂದರುಗಳನ್ನು ಸಹಾಯಕ ಬಂದರುಗಳಾಗಿ ಮತ್ತಷ್ಟು ಅಭಿವೃದ್ಧಿಗೊಳಿಸುವುದು ಯೋಗ್ಯವಾದುದಾಗಿದೆ. ಆದರೆ ಕಾರವಾರ ಬಂದರನ್ನು ಜಾಗ್ರತೆಯಾಗಿ ಪ್ರಾರಂಭಿಸಿದರೆ ಯಥಾಪ್ರಕಾರ ನಮಗೆ ಹೆಚ್ಚಿನ ಅನುಕೂಲ ದೊರೆಯುವುದರಿಂದ ಆ ಕಾರ್ಯವನ್ನು ಸರ್ಕಾರದವರು ತ್ವರಿತವಾಗಿ ಮಾಡಬೇಕೆಂದು ನಾನು ಸೂಚಿಸ ಬಯಸುತ್ತೇನೆ.

ಇನ್ನು ಕೈಗಾರಿಕೆಗಳ ವಿಷಯವಾಗಿ ಹೇಳುವುದಾದರೆ ನಮ್ಮ ಮೈಸೂರು ದೇಶದಲ್ಲಿ ಕೈಗಾರಿಕೆಗಳು ಮುಂದೆ ಬರಬೇಕು, ಹೆಚ್ಚು ಬೆಳವಣಿಗೆಯಾಗಬೇಕು. ಒಕ್ಕಲುತನಕ್ಕೆ ಅನುಗುಣವಾಗಿ ಕೈಗಾರಿಕೆಗಳೂ ಬೆಳೆದರೆ ಆಗ ನಮ್ಮ ಜನಗಳಿಗೆ ಯೋಗ್ಯವಾದ ಕೆಲಸಗಳು ದೊರಕುತ್ತವೆ. ಆದರೆ ನಮ್ಮ ದೇಶದಲ್ಲಿ ಅನೇಕ ಬಾರಿ ಅನೇಕರು ಬೇರೆ ಕಡೆಯವರು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೂ ಅವರಿಗೆ ಬೇಕಾದ ಕಚ್ಚಾ ಮಾಲುಗಳನ್ನು ಪೂರೈಸದೆ, ಅವರಿಗೆ ಕಚ್ಚಾ ಮಾಲುಗಳು ಸಿಕ್ಕದೆ ಇರುವುದರಿಂದ ಅವರು ಬೇರೆ ಪ್ರಾಂತಗಳಿಗೆ ಹೋಗಿ ಅಲ್ಲಿ ಅವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಸಂದರ್ಭ ಬರುತ್ತದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಯೋಗ್ಯ ರೀತಿಯಿಂದ ವಿಚಾರ ಮಾಡಿ ಅವರಿಗೆ ಕಚ್ಚಾ ಮಾಲುಗಳನ್ನು ಒದಗಿಸಿಕೊಟ್ಟು ಅವರಿಗೆ ಯಾವ ರೀತಿಯ ಸೌಲಭ್ಯಗಳು ಬೇಕೋ ಅವುಗಳನ್ನು ಒದಗಿಸಿಕೊಟ್ಟು ಕೈಗಾರಿಕೆಗಳು ನಮ್ಮ ಪ್ರಾಂತವನ್ನು ಬಿಟ್ಟು ಹೋಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಶಿಕ್ಷಣದ ವಿಷಯವಾಗಿ ಇದುವರೆಗೂ ಸರ್ಕಾರದವರು ಎಲ್ಲಾ ರೀತಿಯ ಸವಲತ್ತುಗಳನ್ನೂ ಪ್ರಾಥಮಿಕ ಶಿಕ್ಷಣಕ್ಕೆ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಕೊಡುತ್ತಿರತಕ್ಕದ್ದು ಬಹಳ ಶ್ಲಾಘನೀಯವಾಗಿದೆ. ಈ ಸಂದರ್ಭದಲ್ಲಿ ಅವರಿಗೆ ತ್ರಿವಿಧ ಸೌಲಭ್ಯವನ್ನೂ ಸಹ ಒದಗಿಸಿ ಕೊಟ್ಟಿದ್ದು ಒಳ್ಳೆಯ ಕೆಲಸ. ಆದರೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲ್ಪಟ್ಟಿವೆ. ಆದರೆ ಮುಂಬೈ ಪ್ರಾಂತದಲ್ಲಿ ಆ ಶಿಕ್ಷಕರನ್ನು ಬೋರ್ಡ್ ನೌಕರರೆಂದು ಪರಿಗಣಿಸಲ್ಪಟ್ಟಿದೆ. ಇದು ಯೋಗ್ಯವಲ್ಲ. ಸಂಸ್ಥಾನಕ್ಕೆಲ್ಲಾ ಏಕರೂಪವಾದ ಕಾಯಿದೆಗಳನ್ನು ತರುವಾಗ ಸಂಸ್ಥಾನದ ಎಲ್ಲಾ ಶಿಕ್ಷಕರನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಇಲ್ಲದಿದ್ದರೆ ಎಲ್ಲಾ ಶಿಕ್ಷಕರನ್ನೂ ಬೋರ್ಡ್ ನೌಕರರೆಂದು ಪರಿಗಣಿಸಬೇಕು. ಆ ರೀತಿ ಒಂದು ನಿರ್ಣಯ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಿ ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ರಾಜ್ಯಪಾಲರು ಈ ಸದನದ ಚರಿತ್ರೆಯಲ್ಲೇ ಮೊದಲನೇ ಬಾರಿ ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿ ಒಂದು ಸತ್ ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದಾರೆ. ಅಲ್ಲದೆ ಕನ್ನಡ ನಾಡು ಮತ್ತು ಕನ್ನಡ ನುಡಿಗೆ ಗೌರವ, ಆದರ ಮತ್ತು ಅಭಿಮಾನವನ್ನು ತೋರಿಸಿದ್ದಾರೆ. ಅದಕ್ಕಾಗಿ ನಾನು ನನ್ನ ಮತ್ತು ಈ ಸದನದ ಹಾಗೂ ಕನ್ನಡ ನಾಡಿನ ಎಲ್ಲಾ ಜನರ ಪರವಾಗಿ ಕೃತಜ್ಞತಾಪೂರ್ವಕವಾಗಿ ಅಭಿನಂದನೆಗಳನ್ನು ನಮ್ಮ ಮಾನ್ಯ ರಾಜ್ಯಪಾಲರಿಗೆ ಅರ್ಪಿಸಲು ಇಚ್ಛಿಸುತ್ತೇನೆ. ಒಂದು ವಿಷಯವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ರಾಜ್ಯಪಾಲರು ಕನ್ನಡೇತರರಾಗಿದ್ದರೆ ಆಗ ಅವರು ಈ ಸದನದಲ್ಲಿ ಯಾವ ಭಾಷೆಯಲ್ಲಿ ಮಾತನಾಡಬಹುದು ಎನ್ನತಕ್ಕ ಪ್ರಶ್ನೆ. ಅವರು ಹಿಂದಿ ಬರತಕ್ಕವರಾಗಿದ್ದರೆ ಅವರು ಹಿಂದಿಯಲ್ಲಿ ಭಾಷಣ ಮಾಡುತ್ತಾರೆ. ಅದನ್ನು ತಕ್ಷಣ ಕನ್ನಡದಲ್ಲಿ ಭಾಷಾಂತರ ಮಾಡುತ್ತಾರೆ. ಹಿಂದಿ ಬಾರದೆ ಇರುವವರು ಇದ್ದರೆ ಅವರು ತಮ್ಮದೇ ಆದ ಭಾರತೀಯ ಭಾಷೆಯಲ್ಲಿ, ಅವರ ಮಾತೃಭಾಷೆಯಲ್ಲಿ ಭಾಷಣವನ್ನು ಮಾಡುತ್ತಾರೆ. ಅದನ್ನು ಕನ್ನಡಕ್ಕೆ ತಕ್ಷಣ ಭಾಷಾಂತರ ಮಾಡತಕ್ಕ ವ್ಯವಸ್ಥೆಯನ್ನು ಮಾಡಬಹುದು. ಆದ್ದರಿಂದ ನಮ್ಮ ರಾಜ್ಯಪಾಲರು ಈ ಸದನದಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ ಒಂದು ಕಾರಣಕ್ಕಾಗಿಯೇ ಅವರು ಈ ರಾಜ್ಯದಲ್ಲಿ ರಾಜ್ಯಪಾಲರಾಗಿ ಮುಂದುವರಿಯಬೇಕು ಎಂದು ನಾನು ಒಪ್ಪಿಕೊಂಡವನಲ್ಲ. ನಮ್ಮ ಮಾನ್ಯ ಸದಸ್ಯ

ರಾದ ಶ್ರೀ ಶಿವಪ್ಪನವರು ಮತ್ತು ಶ್ರೀ ಎಸ್. ಎಂ. ಕೃಷ್ಣಾ ಅವರು, ನಮ್ಮ ರಾಜ್ಯಪಾಲರ ಭಾಷಣ ಸಪ್ಪೆಯಾಗಿತ್ತು, ನೀರಸವಾಗಿತ್ತು ಎಂದು ಹೇಳಿದ್ದಾರೆ. ಮತ್ತು Inertia, despondency, despair ಆಗಿತ್ತು ಎಂದು ಹೇಳಿದ್ದಾರೆ. ಈ ಭಾಷಣವನ್ನು ನೋಡುವುದಾದರೆ ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ, ಪ್ರತಿವರ್ಷವೂ ಈ ಭಾಷಣದ ಉದ್ದವನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ರಾಜ್ಯಪಾಲರ ಭಾಷಣವು ಒಂದು ದೊಡ್ಡ ಕರಟು ಪುರಾಣ ಇದ್ದ ಹಾಗೆ ಇದೆ. ನಾನು ಈ ಭಾಷಣವನ್ನು ಕುಳಿತು ಓದಿ ನೋಡಿದೆನು. ಭುವನೇಶ್ವರದ ಬೆಳಕು ಏನಾದರೂ ಇದರಮೇಲೆ ಬಿದ್ದಿದೆಯೋ ಏನೋ ಎಂದು ಕಾಣುತ್ತದೆ. ಸಮಾಜವಾದದ ಕೃತಿ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ನನಗೆ ಕಂಡುಬರಲಿಲ್ಲ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಮೇಲೆ ಒಂದು ದೊಡ್ಡ ಅಭ್ಯಾಸ ಏನಾಗಿದೆ ಎಂದರೆ, ಪ್ರತಿ 5 ವರ್ಷಕ್ಕೊಂದು ಸಲ ಗುರಿಯನ್ನು ಬದಲಾಯಿಸುವುದು ಮತ್ತು ಅದೇ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದು ಈ ರೀತಿ ಮಾಡುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಬದಲಾವಣೆ ಮಾಡದೆ ಕೇವಲ ತನ್ನ ಗುರಿಯನ್ನು ಕಾಲಾಕಾಲಕ್ಕೆ ಬದಲಾಯಿಸುವುದರಿಂದ ಯಾವ ಸಾರ್ಥಕತೆಯೂ ಆಗುವುದಿಲ್ಲ. ಅದಕ್ಕೆ ಈ ಭಾಷಣವೇ ಸಾಕ್ಷಿಯಾಗಿದೆ ಎಂದು ಹೇಳಬಹುದು. ಈಗ ನಮ್ಮ ಮುಂದೆ ಕೆಲವು ಭಾವನಾತ್ಮಕವಾದ ಸಮಸ್ಯೆಗಳಿವೆ. ಅವು ಏನೆಂದರೆ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕು ಎನ್ನತಕ್ಕ ಒಂದು ಆಶೆ ಇದೆ. ಇದರ ಬಗ್ಗೆ ನಿರ್ಣಯ ಕೂಡ ಈ ಸಭೆಯಲ್ಲಿ ಬಂದು ಚರ್ಚೆ ಆಯಿತು. ಅದನ್ನು ಮತಕ್ಕೆ ಹಾಕುವ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರಿ ನಿಜಲಿಂಗಪ್ಪನವರು ಮಧ್ಯೇ ಪ್ರವೇಶಿಸಿ ಆ ವಿಷಯವನ್ನು ನನಗೆ ಬಿಡಿ, ಅನಂತರ ಈ ಕೆಲಸವನ್ನು ನಾನು ಮಾಡುತ್ತೇನೆ ಎಂದು ಹೇಳಿದರು. ಆದರೆ ಇದುವರೆಗೂ ಈ ಪ್ರಶ್ನೆ ಸರ್ಕಾರದ ಮುಂದೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಶ್ರೀಮಾನ್ ದೊಡ್ಡಮೇಟಿಯವರೂ ಬಹುಶಃ ಈ ಒಂದು ಬೇಡಿಕೆಯನ್ನು ಕೈಬಿಟ್ಟಿದ್ದಾರೋ ಏನೋ ನನಗೆ ಅದು ಗೊತ್ತಿಲ್ಲ. ಹಾಗೆಯೇ ನಮ್ಮ ಕನ್ನಡ ರಾಜ್ಯಕ್ಕೆ ಸೇರಲೇಬೇಕಾದಂತಹ ಕನ್ನಡ ಪ್ರದೇಶಗಳಾದ ಕಾಸರಗೋಡು, ಸೊಲ್ಲಾಪುರ ಮುಂತಾದ ಪ್ರದೇಶಗಳನ್ನು ಈ ರಾಜ್ಯಕ್ಕೆ ಸೇರಿಸಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇತ್ತೀಚೆಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಗೋವಾದ ಬಗ್ಗೆ ಮಾತನಾಡುತ್ತಾ ಅದು ನಮ್ಮ ರಾಜ್ಯಕ್ಕೆ ಸೇರತಕ್ಕಂಥ ಪ್ರದೇಶವಲ್ಲ ಎನ್ನುವ ಅರ್ಥದಲ್ಲಿ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮರಾಠಿ ಸ್ನೇಹಿತರು ನಮ್ಮನ್ನು ಕೇಳುತ್ತಾರೆ, ನಮ್ಮನ್ನು ಮುಂಬೈ ರಾಜ್ಯಕ್ಕೆ ಬಿಟ್ಟು ಕೊಡಿ ಎಂದು. ಈ ಪ್ರಶ್ನೆಯನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ಬಗ್ಗೆ ಹಿಂದೆ ಮುಂಬೈ ಮತ್ತು ಮೈಸೂರು ರಾಜ್ಯದಲ್ಲಿ ಎರಡು ಸಮಿತಿಗಳನ್ನು ನೇಮಿಸಿದ್ದರು. ನಮ್ಮ ಮೈಸೂರಿನಲ್ಲಿ ನೇಮಿಸಿದ್ದ ಸಮಿತಿಗೆ ಶ್ರೀಮಾನ್ ಚನ್ನಯ್ಯನವರು ಅಧ್ಯಕ್ಷರಾಗಿದ್ದರು. ಆ ಬಗ್ಗೆ ಅವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸಮಿತಿಯು ವಿಸರ್ಜನೆ ಆಯಿತೋ ಏನೋ ಗೊತ್ತಿಲ್ಲ. ಎಷ್ಟು ವರ್ಷಗಳವರೆಗೆ ನಮ್ಮ ಮರಾಠಿ ಸ್ನೇಹಿತರು ಈ ಸಭೆಯಲ್ಲಿ ಕುಳಿತುಕೊಂಡಿರಬೇಕೋ ಈ ಸಮಸ್ಯೆಗೆ ಪರಿಹಾರ ಇವೆಯೇ, ಎಷ್ಟು ವರ್ಷಗಳ ಕಾಲ ಇದೇ ರೀತಿ ಈ ಸಮಸ್ಯೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ ಎನ್ನತಕ್ಕ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಉಲ್ಲೇಖ ಮಾಡಿದಹಾಗೆ ಕಾಣಲಿಲ್ಲ. ಇಂಥ ಕೆಲವು ಸಮಸ್ಯೆಗಳಿವೆ ಎನ್ನುವುದನ್ನೂ ಕೂಡ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಇದು ತುಂಬಾ ವಿಶಾದಕರವಾದ ವಿಷಯ ಎಂದು ನಾನು ಹೇಳುತ್ತೇನೆ.

11-00 A.M.

ಇನ್ನು ಕನ್ನಡ ರಾಜ್ಯಭಾಷೆಯಾಗಬೇಕು, ಕನ್ನಡ ವ್ಯವಹಾರ ಭಾಷೆಯಾಗಬೇಕು, ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು ಎನ್ನುವ ಒಂದು ಸಿದ್ಧಾಂತವನ್ನು ಸಾಮಾನ್ಯವಾಗಿ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಅಲ್ಲದೆ ಕನ್ನಡ ರಾಜ್ಯಭಾಷೆ ಆಗಬೇಕು ಎನ್ನುವುದರ ಬಗ್ಗೆ ನಾವು ಒಂದು ಮಸೂದೆಯನ್ನು ಕೂಡ ಇಲ್ಲಿ ಅಂಗೀಕಾರ ಮಾಡಿದ್ದೇವೆ. ಸರ್ಕಾರ ಮಾತ್ರ ವ್ಯವಹಾರದಲ್ಲಿ, ತನ್ನ ಧೋರಣೆಯಲ್ಲಿ, ನೀತಿಯಲ್ಲಿ, ಇನ್ನೂ ಇಂಗ್ಲೀಷಿಗೆ ಗಂಟು ಬಿದ್ದು ಕನ್ನಡದ ಅಭಿವೃದ್ಧಿಗಾಗಲೀ ಕನ್ನಡ ಭಾಷೆಯನ್ನು ವ್ಯವಹಾರಿಕ ಭಾಷೆಯನ್ನಾಗಿ ಮಾಡುವುದಕ್ಕೆ ಬೇಕಾದ ಪೂರ್ವಭಾವಿ ಸಿದ್ಧತೆಗಳನ್ನಾಗಲಿ, ಮಾಡಿಕೊಳ್ಳುತ್ತ ಇಲ್ಲ ಎನ್ನುವುದನ್ನು ನಾವು ನೋಡಬಹುದಾಗಿದೆ. ಇದಕ್ಕೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಅವನ್ನು ಆದಷ್ಟು ಬೇಗ ಕೈಕೊಳ್ಳಬೇಕು. ಈಗ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡು ಇಂಥ ವಿಕೇಂದ್ರೀಕೃತವಾದ ಸಂಸ್ಥೆಗಳಿಗೆ—ನಾನು ಬಹಳ ವಿಷಾದದಿಂದ ಹೇಳುತ್ತೇನೆ—ಇವತ್ತಿಗೂ ಇಂಗ್ಲೀಷ್ ಭಾಷೆಯಲ್ಲಿಯೇ ಸರ್ಕ್ಯುಲರ್‌ಗಳನ್ನೂ ಕಾಗದಗಳನ್ನೂ ಬರೆಯುತ್ತಾರೆ. ಇದು ತೀರ ಅವಮಾನಕರ. ಎಲ್ಲಿಯತನಕ ಈ

(ಶ್ರೀ ಎಸ್. ಗೋಪಾಲ ಗೌಡ)

ಸಾಮಂತಷಾಹಿ ಭಾಷೆಯಲ್ಲಿ ಜನತಂತ್ರವನ್ನು ನಡೆಸಿಕೊಂಡು ಹೋಗುತ್ತಾರೆಯೋ ಗೊತ್ತಿಲ್ಲ. ಶ್ರೀಮಾನ್ ಪಿ. ಕೋದಂಡರಾಯರಂಥವರು, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಬೆಳೆದುಬಂದವರು, ಏನೋ ಒಂದು ಕನಸನ್ನು ಕಾಣುತ್ತ ಇರಬಹುದು, ಈ ದೇಶದಲ್ಲಿ ಇಂಗ್ಲೀಷ್ ಭಾಷೆ ಶಾಶ್ವತವಾಗಿ ಉಳಿಯುತ್ತದೆ ಎಂದು. ಅದು ಅವರಿಗೆ ಕುರುಡನಿಗೆ ಇರತಕ್ಕ ಒಂದು ಊರುಗೋಲು ಇದ್ದಹಾಗೆ. ಅದನ್ನು ಕಿತ್ತುಕೊಂಡರೆ ಅವರ ವ್ಯವಹಾರವೆಲ್ಲ ನಿಂತುಹೋಗುತ್ತದೆ. ಆದುದರಿಂದಲೇ ಅವರು ಆ ಭಾಷೆಯಲ್ಲಿ ವ್ಯವಹಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಪ ಯತ್ನಪಡುತ್ತಾರೆ. ಕೋಟ್ಯಾನುಕೋಟಿ ಜನರ ವ್ಯವಹಾರ, ಅವರ ವಿದ್ಯಾಭ್ಯಾಸ, ಅವರಿಗೆ ನಾವು ವಿಷಯವನ್ನು ತಿಳಿಸತಕ್ಕದ್ದು ಯಾವ ಭಾಷೆಯಲ್ಲಿ ಎನ್ನುವುದರ ಬಗ್ಗೆ ಬಹುಶಃ ಇಲ್ಲಿರತಕ್ಕವರು ಯಾರೂ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ. ಅದು ಮಾತ್ರ ಮಾತೃಭಾಷೆಯಲ್ಲಿಯೇ ಆಗಬೇಕು, ಪ್ರಾದೇಶಿಕ ಭಾಷೆಯಲ್ಲಿಯೆ ಆಗಬೇಕು. ಅದರ ಬಗ್ಗೆ ಮೈಸೂರು ಸರ್ಕಾರ ತಡಮಾಡದೆ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಭಾಷಾಕೋಶ, ಟೈಪ್‌ರೈಟರ್ ಹೀಗೆ ಏನೇನು ಸೌಕರ್ಯಗಳು ಬೇಕೋ, ಆ ದಿಕ್ಕಿನಲ್ಲಿ ಏನೇನು ಸೌಲಭ್ಯಗಳು ಬೇಕೋ, ಅವನ್ನೆಲ್ಲ ಒದಗಿಸಬೇಕು. ಜೊತೆಗೆ ಸಾಧ್ಯವಾದಮಟ್ಟಿಗೂ ಹಿಂದಿಯ ಬೆಳವಣಿಗೆಗೆ ಉತ್ತೇಜನವನ್ನೂ, ಅದನ್ನು ಕಲಿಯುವುದಕ್ಕೆ ವ್ಯವಸ್ಥೆಯನ್ನೂ ಮಾಡಬೇಕು. ಇವತ್ತು ಯಾರೋ ಕೆಲವರು ಹಿಂದಿಯನ್ನು ವಿರೋಧಿಸಬಹುದು, ಮದ್ರಾಸಿನಲ್ಲಿ ಹಿಂದಿ ವಿರೋಧ ಚಳವಳಿ ನಡೆದಿರಬಹುದು. ಹಿಂದಿ ರಾಷ್ಟ್ರಭಾಷೆಯಾಗಬೇಕು ಎನ್ನುವ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇರುವುದಕ್ಕೆ ಸಾಧ್ಯವೇ ಇಲ್ಲ. ಹಿಂದಿ ಬಿಟ್ಟು ಬೇರೆ ಭಾಷೆ ರಾಷ್ಟ್ರಭಾಷೆಯಾಗುವುದಕ್ಕೆ ಸಾಧ್ಯವೂ ಇಲ್ಲ. ಈ ದಿಕ್ಕಿನಲ್ಲಿ ಮೈಸೂರು ದೇಶ ಸ್ವಲ್ಪ ದೂರದೃಷ್ಟಿಯಿಂದ, ಜಾಗ್ರತೆಯಿಂದ ಕೆಲಸಕಾರ್ಯಗಳನ್ನು ಆರಂಭಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ, ಸ್ವಾಮಿ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಮೈಸೂರು ಸರ್ಕಾರ ತನ್ನ ವಿಳಂಬ ನೀತಿಯನ್ನು ಅನುಸರಿಸಿಕೊಂಡಿರುವುದಲ್ಲದೆ, ಕೃಷ್ಣ ಗೋದಾವರಿ ನೀರನ್ನು ಪಡೆದುಕೊಳ್ಳುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಒಮ್ಮೆ ಶ್ರೀಮಾನ್ ಜತ್ತಿಯವರು ಅಪ್ಪಣೆ ಕೊಡಿಸಿದರು ; ಕೇಂದ್ರದ ನೀರಾವರಿ ಮಂತ್ರಿಗಳು ಆಂಧ್ರದವರಾದರೂ ನಮಗೆ ನ್ಯಾಯವಾದುದನ್ನು ಕೊಟ್ಟೇ ಕೊಡುತ್ತಾರೆ, ಪಕ್ಷಪಾತ ಮಾಡುವುದಿಲ್ಲ ಎಂದು. ಆದರೆ ಈಗ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಿಗೂ ಲೋಕೋಪಯೋಗಿ ಖಾತೆಯನ್ನು ಹೊಂದಿರತಕ್ಕ ಮಂತ್ರಿಗಳಿಗೂ ಭಿನ್ನಾಭಿಪ್ರಾಯ ಎದ್ದು ಕಾಣುತ್ತಿದೆ. ಆಲಮಟ್ಟಿಯಲ್ಲಿ ಮೊದಲು ಕೃಷ್ಣ ನದಿಗೆ ಅಣೆಕಟ್ಟನ್ನು ಕಟ್ಟುತ್ತೇವೆ ಎಂದು ಬಿಜಾಪುರದಲ್ಲಿ ಹೋದಾಗ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಲೋಕೋಪಯೋಗಿ ಶಾಖೆ ಮಂತ್ರಿಗಳು ಗುಲ್ಬರ್ಗದವರು. ಅವರು ನಾರಾಯಣಪುರದಲ್ಲಿ ಕಟ್ಟಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆಂದು ಕಾಣುತ್ತದೆ. ಎರಡು ಕಡೆಗಳಲ್ಲಿಯೂ ಏಕ ಕಾಲದಲ್ಲಿ ಅಡಿಗಲ್ಲನ್ನು ಹಾಕಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದೂ ಹೇಳುತ್ತಾರೆ. ನೂರು ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚ ಮಾಡತಕ್ಕ ದೊಡ್ಡ ಯೋಜನೆಯ ಬಗ್ಗೆ ಇಷ್ಟು ತಾತ್ಸಾರ ಮನೋಭಾವನೆಯನ್ನು ಹೊಂದಿದ್ದರೆ ಈ ಯೋಜನೆ ಎಷ್ಟರ ಮಟ್ಟಿಗೆ ಸಾರ್ಥಕವಾದೀತು ಎನ್ನುವುದನ್ನು ಯೋಚನೆ ಮಾಡಬೇಕು. ನಾರಾಯಣಪುರದಲ್ಲಿ ಆಗಬೇಕು ಎನ್ನುವುದರ ಬಗ್ಗೆ ಪ್ಲಾನಿಂಗ್ ಕಮಿಷನ್‌ನವರ ಅಭಿಪ್ರಾಯವೂ ಇದ್ದಹಾಗೆ ಕಾಣುತ್ತದೆ. ನನಗೆ ಗೊತ್ತಿದ್ದಪ್ರಕಾರ ನಾರಾಯಣಪುರದಲ್ಲಿ ಅಣೆಕಟ್ಟನ್ನು ಕಟ್ಟುವುದರಿಂದ ಮುಂದೆ ಹೆಚ್ಚು ನೀರು ದೊರೆತು ಆಲಂಪುರ ಮತ್ತು ಗದ್ವಾಲಕ್ಕೆ ಸೇರಿದ ಅನೇಕ ಸಹಸ್ರಾರು ಎಕರೆಗಳಿಗೆ ನೀರು ಹರಿಯುತ್ತದೆ. ಯಾವತ್ತೂ ಕ್ಷಾಮ ಡಾಮರಗಳಿಗೆ ತುತ್ತಾಗತಕ್ಕ ಬಿಜಾಪುರದ ಭಾಗಗಳಿಗೆ ನೀರು ಕಡಮೆಯಾಗುತ್ತದೆ. ನಮಗೆ ಈಗಾಗಲೇ ಕೇಂದ್ರ ಸರ್ಕಾರದವರು ಏನು ನೀರಿನ ಹಂಚಿಕೆಯನ್ನು ಮಾಡಿದ್ದಾರೆಯೋ ಅದರಲ್ಲಿ ಬಹುಭಾಗ ನೀರು ಪುನಃ ಆಂಧ್ರಕ್ಕೆ ಹೋಗುವುದರಲ್ಲಿದೆ. ಮಹಾರಾಷ್ಟ್ರದವರಿಗೆ ಕೂಡ ಮತ್ತಷ್ಟು ನೀರನ್ನು ಕೊಡುತ್ತೇವೆ ಎಂದು ಕೇಂದ್ರದವರು ಒಪ್ಪಿಕೊಂಡಿದ್ದಾರೆ. ನಮಗೆ ಯಾವ ಯಾವ ನದಿಗಳಿಂದ ಎಷ್ಟೆಷ್ಟು ನೀರು ಬರುತ್ತದೆಯೋ ಅದನ್ನು ಕೊಟ್ಟುಬಿಡಿ ಎಂದು ನೀವು ಕೇಳುತ್ತಿದ್ದೀರಿ. ಆದರೆ, ನಿಮ್ಮ ಹತ್ತಿರ ಯಾವ ಯಾವ ಯೋಜನೆಗಳು ಸಿದ್ಧವಾಗಿವೆ, ಅದಕ್ಕೆ ಬೇಕಾದ ಹಣವಿದೆಯೇ ಸಿಬ್ಬಂದಿ ಇದೆಯೇ ದಕ್ಷತೆ ಇದೆಯೇ ? ಇದ್ದರೆ ಆ ಪ್ರಕಾರ ಕೆಲಸವನ್ನು ಪ್ರಾರಂಭಮಾಡಿ, ಕ್ಲಿಯರೆನ್ಸ್ ಕೊಡುತ್ತೇವೆ ಎಂದು ಅವರು ಹೇಳುತ್ತಾರೆ. ನೀರಿನ ಹಂಚಿಕೆಯ ವಿಷಯದಲ್ಲಿ ಅರ್ಬಿಟ್ರೇಷನ್‌ಗೆ ಕೇಳಿ ಎಂದರೆ ಆ ರೀತಿ ಕೇಳುವುದಕ್ಕೆ ತಯಾರಿಲ್ಲ. ಶ್ರೀಮಾನ್ ಶಿವಪ್ಪನವರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದರು. ಶರಾವತಿಯಲ್ಲಿ ನಡೆದ ವಿಚಾರಗಳಿಂದ

ಮುಖ ಉಳಿಸಿಕೊಳ್ಳಬೇಕಾಗಿತ್ತು. ಅದಕ್ಕೋಸ್ಕರ ಕೇಂದ್ರದಿಂದ ರಾಯರು ಬಂದಾಗ, ಅವರನ್ನು ಶರಾವತಿಗೆ ಕರೆದುಕೊಂಡು ಹೋಗಿದ್ದು ಅದರ ಬಗ್ಗೆ ಅವರಿಂದ ಒಂದು ಸರ್ಟಿಫಿಕೇಟನ್ನು ಪಡೆದು ಕೊಂಡಿರಿ. ಆದರೆ ಕೃಷ್ಣಾ ಗೋದಾವರಿ ನೀರಿನ ಬಗ್ಗೆಯಾಗಲೀ ನೀರಾವರಿ ಯೋಜನೆಗಳ ಬಗ್ಗೆ ಯಾಗಲೀ ಮಾತನಾಡಿ ನಮ್ಮ ಬೇಡಿಕೆಯನ್ನು ಅವರ ಮುಂದೆ ಇಟ್ಟು ಅವರನ್ನು ಒಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲ. ಇಂಥ ರೀತಿ ನೀತಿಯನ್ನು ತಾವು ಅನುಸರಿಸಿಕೊಂಡು ಹೋದರೆ ಎಂಥ ದೊಡ್ಡ ಅಪರಾಧವನ್ನು ತಾವು ರಾಜ್ಯಕ್ಕೆ ಮಾಡುತ್ತಿದ್ದೀರಿ, ಮುಂದೆ ಎಂದಾದರೂ ಅದನ್ನು ತಿದ್ದಿಕೊಳ್ಳುವು ದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರ ತುಂಬ ಗಂಭೀರವಾದ ರೀತಿಯಲ್ಲಿ ವಿಚಾರಮಾಡಬೇಕು. ಇದು ಸಣ್ಣ ವಿಷಯವಲ್ಲ. ಶಾಶ್ವತವಾಗಿ ಎಷ್ಟೋ ತಲೆಮಾರುಗಳವರೆಗೆ ಬರತಕ್ಕ ಪ್ರಶ್ನೆ. ಆದುದ ರಿಂದ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಕೇಂದ್ರದವರ ಜೊತೆಯಲ್ಲಿ ತಾವು ಕುಳಿತುಕೊಂಡು, ಸಂಬಂಧಪಟ್ಟ ಬೇರೆ ರಾಜ್ಯಗಳವರ ಜೊತೆಯಲ್ಲಿ ಕುಳಿತು ತಮ್ಮ ಹಿಸ್ಸೆಗೆ ಎಷ್ಟು ನೀರು ಬರಬೇಕೋ ಅದನ್ನು ತೀರ್ಮಾನ ಮಾಡದೆ ಹೋದರೆ ಬಹಳ ದೊಡ್ಡ ಅನಾಹುತವನ್ನು ಈ ರಾಜ್ಯಕ್ಕೆ ಮಾಡು ತ್ತಿದ್ದೀರಿ ಎಂದು ನಾನು ಮತ್ತೊಮ್ಮೆ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

ಆಂಧ್ರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ: ಮೈಸೂರು ರಾಜ್ಯದಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಗುಬ್ಬಲಘಟ್ಟದಲ್ಲಿ ಒಂದು ಕೆರೆಯನ್ನು ಕಟ್ಟಿದರೆ ಅದರಿಂದ ಮಡಕಸಿರಾಕ್ಕೆ ನೀರು ಬರುವುದಿಲ್ಲ ಎಂದು. ಮಡಕಸಿರಾ ಕನ್ನಡ ರಾಜ್ಯಕ್ಕೇ ಸೇರ ಬೇಕಾಗಿತ್ತು. ಈ ಕೆರೆ ಕಟ್ಟುವುದಕ್ಕೆ ಆಂಧ್ರದ ಮಂತ್ರಿಗಳು ವಿರೋಧವನ್ನು ವ್ಯಕ್ತಪಡಿಸು ತ್ತಿದ್ದಾರೆ. ಇನ್ನು ನದೀ ಪಾತ್ರದಲ್ಲಿ ಬಾವಿ ತೋಡುವುದಕ್ಕೆ, ಅಣೆಕಟ್ಟನ್ನು ಕಟ್ಟುವುದಕ್ಕೆ, ಪ್ರತಿ ಯೊಂದಕ್ಕೂ ಪ್ರತಿಭಟನೆಯನ್ನು ಸಲ್ಲಿಸುತ್ತಾರೆ. ಹೀಗಿರುವಾಗ ನಮ್ಮ ರಾಜ್ಯಸರ್ಕಾರದವರು ಸುಮ್ಮನೆ ಕೂಡುವುದರಲ್ಲಿ ಅರ್ಥವಿಲ್ಲ. ಶ್ರೀ ವೀರೇಂದ್ರ ಪಾಟೀಲರು ಆಗಾಗ ತಮ್ಮ ಭಾಷಣದಲ್ಲಿ ನಾವು ಪ್ರತಿಭಟನೆಯನ್ನು ಸೂಚಿಸುತ್ತೇವೆ; ನಮಗೆ 1951ರ ಒಪ್ಪಂದ ಒಪ್ಪಂದವೇ ಅಲ್ಲ, ನಮಗೆ 1963ರಲ್ಲಿ ಕೊಟ್ಟ ನೀರು ಸಾಲದು ಎಂದು ಹೇಳಿದ್ದೇವೆ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಕಾಲಹರಣ ಮಾಡದೆ ಸ್ಪಷ್ಟವಾಗಿ ಹೇಳಿಬಿಟ್ಟರೆ ರಾಜ್ಯದ ಜನರಾದರೂ ಒಂದು ಮಾರ್ಗವನ್ನು ಹುಡುಕಿಕೊಳ್ಳುತ್ತಾರೆ. ಇದು ಬಹಳ ದೊಡ್ಡ ಸಮಸ್ಯೆ. ಜನರು ಏನು ಮಾಡಬೇಕು ಎನ್ನುವುದು ಅವರಿಗೆ ಗೊತ್ತಾಗುತ್ತಿಲ್ಲ. ಬಿಜಾಪುರದಲ್ಲಿ ನೋಡಿದರೆ ಅಲ್ಲಿಯ ಜನರು ಎಷ್ಟು ಕಳವಳಕ್ಕೀಡಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಮಂತ್ರಿಗಳಾದ ತಾವು ಅಲ್ಲಿಗೆ ಹೋಗಿ ಭಾಷಣ ಮಾಡುವಾಗ ಮೂಗಿಗೆ ತುಪ್ಪ ಹಚ್ಚುವ ಹಾಗೆ ಮಾತನಾಡುತ್ತೀರಿ. ಮಲಪ್ರಭಾ, ಲೋಯರ್ ಭೀಮ ಮುಂತಾದ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ವಾಸ್ತವವಾಗಿ ಏನು ಮಾಡುತ್ತಿದ್ದೀರೆಂದು ನೋಡಿದರೆ, ನಮಗೆ ತುಂಬಾ ಕಳವಳವಾಗುತ್ತದೆ.

ಇನ್ನು ವಿದ್ಯುಚ್ಛಕ್ತಿಯ ವಿಷಯದಲ್ಲಿ ಹೇಳುವುದಾದಕ್ಕೆ ಶರಾವತಿಯಲ್ಲಿ ಅನೇಕ ಲೋಪ ದೋಷ ಗಳಿವೆ. ಕೋಟ್ಯಾಂತರ ರೂಪಾಯಿಗಳಷ್ಟು ಸಾರ್ವಜನಿಕ ಹಣ ಅಲ್ಲಿ ವ್ಯರ್ಥವಾಗಿದೆ, ದುರುಪ ಯೋಗವಾಗಿದೆ ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಿದ್ದೇನೆ. ಕೂಡಲೇ ವಿಚಾರ ಮಾಡುತ್ತೇ ವೆಂದೂ, ಅದರ ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟಣೆ ಮಾಡುತ್ತೇವೆಂದೂ ಹೇಳಿದರು. ಅದನ್ನು ಈವರೆಗೂ ಸರಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದುವರೆಗೆ ಅಲ್ಲಿ ನಡೆದಿರುವ ಕೆಲಸದಲ್ಲಿ ಅನೇಕ ಲೋಪ ದೋಷಗಳಿವೆ; ಇನ್ನೂ ಆಗುತ್ತಿವೆ. ತಲಕಳಲೆ ಮತ್ತು ಮಳಲಿ ಜಲಾಶಯಗಳನ್ನು ಮಂತ್ರಿಗಳು ಉದ್ಘಾಟನೆ ಮಾಡಿದರು. ಏಕೆ ಮಾಡಿದರು, ಯಾವ ದೃಷ್ಟಿಯಿಂದ ಮಾಡಿದರು ಎನ್ನುವುದು ಯಾರಿಗೂ ಗೊತ್ತಿಲ್ಲ. ಈ ಹೊತ್ತು ಚೀಫ್ ಇಂಜಿನಿಯರು ನಿವೃತ್ತರಾಗಬೇಕೆಂದಿದೆ. ಇನ್ನೊಬ್ಬರು ನಿವೃತ್ತರಾದರು. ಇವರು ಯಾವ ಕಂಟ್ರಾಕ್ಟರ ಮೇಲೆ ಉಸ್ತುವಾರಿವಾಡ ಬೇಕಾಗಿತ್ತೋ ಅವರ ಕೈಕೆಳಗೇ ಕೆಲಸ ಮಾಡುತ್ತಿದ್ದಾರೆ. ಅನೇಕ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ವಿಶೇಷ ಸಿಬ್ಬಂದಿಯನ್ನು ನೇಮಕಮಾಡಿ ಅಲ್ಲಿ ಸ್ವಲ್ಪ ಸಿಮೆಂಟು, ಇಲ್ಲಿ ಸ್ವಲ್ಪ ಕಬ್ಬಿಣ ಲಾರಿಗಳಲ್ಲಿ ಸಾಗಿ ಹೋಗುತ್ತಿದ್ದುದನ್ನು ಹಿಡಿದು ಆಮೇಲೆ ಯಾವುದೋ ಬರುವುದು ತಡ ವಾಯಿತು, ಅದಕ್ಕಾಗಿ ಸರಿ ಮಾಡಿಕೊಂಡೆವು ಎಂದು ಅವರು ಹೇಳಿದರು. ಹೀಗಾಗಿ ಕೇಂದ್ರ ಸರಕಾರದ ಮಂತ್ರಿಗಳಿಂದ ಎಲ್ಲವೂ ಸರಿಯಾಗಿದೆ ಎಂದು ಶಹಭಾಸ್‌ಗಿರಿ ಬಂದಿದೆ ಎಂದು ಹೇಳಿದರು. ಈ ವ್ಯವಹಾರದಲ್ಲಿ ಎಲ್ಲವೂ ಸರಿಯಾಗಿ ನಡೆದಿದೆ ಎಂದು ಯಾರೂ ಹೇಳುವಂತಿಲ್ಲ. ಆದುದರಿಂದ ಅಲ್ಲಿ ಲೋಪ ದೋಷಗಳೇನು ನಡೆದಿವೆಯೋ ಅದನ್ನು ಇನ್ನು ಮುಂದಾದರೂ ನಿವಾರಿಸಿ ಸರಿಯಾಗಿ ಕೆಲಸ ನಡೆಸಬೇಕು. ಸರಕಾರ ತನ್ನ ಮಾತನ್ನು ಉಳಿಸಿಕೊಳ್ಳಲಿ. ಪ್ರಾಮಾಣಿಕವಾಗಿ ಕೆಲಸ ನಡೆಸಿ ಕೊಂಡು ಹೋಗಲು ವ್ಯವಸ್ಥೆ ಮಾಡುತ್ತಾರೆಂದು ಆಶಿಸುತ್ತೇನೆ.

(ಶ್ರೀ ಎಸ್. ಗೋಪಾಲ ಗೌಡ)

ಇನ್ನು ದಕ್ಷಿಣದಲ್ಲಿ ಒಂದು ಗ್ರಿಡ್ ಎಂದರೆ ಒಂದು ವಿದ್ಯುಚ್ಛಕ್ತಿಯ ಜಾಲವನ್ನು ಮಾಡಬೇಕೆಂದು ವ್ಯವಹಾರ ನಡೆದಿದೆ. ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯ ಪೂರೈಕೆಯಾದಮೇಲೆ ಉಳಿದರೆ ಅದನ್ನು ಬೇರೆ ಕಡೆಗೆ ಕೊಡುತ್ತೇವೆಂದು ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳುತ್ತಾರೆ. ಆದರೆ ಆಂಧ್ರದ ಮಂತ್ರಿಗಳಾದ ಸುಬ್ಬಾರೆಡ್ಡಿಯವರು ತಮಗೆ ಇದು ಬೇಕಾಗಿಲ್ಲವೆಂದು ಹೇಳುತ್ತಾರೆ. ಇದರಲ್ಲೇನಿವೆ, ಇದಕ್ಕೆ ಒಪ್ಪಿಗೆ ಕೊಡಬೇಕೇ ಅಥವಾ ಬೇಡವೇ ವಿಚಾರ ಮಾಡೋಣ. ನಮ್ಮ ಸ್ಥಿತಿಗತಿ, ಸಾಧಕ ಬಾಧಕವೇನಿದೆ ಎಂಬುದನ್ನು ವಿಚಾರ ಮಾಡುವುದಕ್ಕೂ ನಮ್ಮ ಮೈಸೂರಿನ ಮಂತ್ರಿ ಮಂಡಲಕ್ಕೆ ಶಕ್ತಿಯಿಲ್ಲವೆಂದು ಕಾಣುತ್ತದೆ. ಇದು ಬಹು ಮುಖ್ಯವಾದ ವಿಷಯ. ಹೀಗೆ ರಾಜ್ಯದ ಹಿತವನ್ನು ಬಲಿಕೊಡುತ್ತಾ ಹೋದರೆ, ಕೈಬಿಡುತ್ತಾ ಹೋದರೆ ಈ ರಾಜ್ಯ ಇನ್ನು ಕೆಲವೇ ವರ್ಷಗಳಲ್ಲಿ ಯಾವುದಕ್ಕೂ ಕೆಲಸಕ್ಕೆ ಬಾರದೇಯಿರುವ ರಾಜ್ಯವಾಗಿ, ಇಲ್ಲಿ ಜೀವನ ಮಾಡುವ ಜನರು ಪರರ ಆಶ್ರಯದಲ್ಲಿ ಬಿದ್ದು ಯಾಚನೆ ಮಾಡುವಂತಾಗಲು ಏಕೆ ಅವಕಾಶ ಮಾಡುತ್ತೀರಿ ಎಂದು ಮಂತ್ರಿಗಳನ್ನು ಕೇಳಬೇಕಾಗಿದೆ.

ಇನ್ನು ವಿದ್ಯುಚ್ಛಕ್ತಿ ಯೋಜನೆಗಳಿಂದ ನಮ್ಮಗೆ ವಿದ್ಯುಚ್ಛಕ್ತಿ ಬರುವುದಿದೆಯೆಂದು ಹೇಳುತ್ತೇವೆ. ಅದರಬಗ್ಗೆ ಮುಂಚಿತವಾಗಿ ಏನೇನು ಯೋಜನೆ ಮಾಡಬೇಕು, ಅದನ್ನು ಬಳಸುವ ಬಗೆ ಹೇಗೆ, ಅದಕ್ಕಾಗಿ ಯಾವ ಯಾವ ವ್ಯವಸ್ಥೆ ಮಾಡಬೇಕು ಎಂಬ ಬಗ್ಗೆ ಯೋಜನೆಯನ್ನು ತಯಾರು ಮಾಡಿಲ್ಲ. ಇದೆಲ್ಲಕ್ಕೂ ಒಂದು ಸಾವಿರ ಕೋಟಿ ರೂಪಾಯಿ ಆಗುತ್ತದೆಂದು ಭಾಷಣಗಳಲ್ಲಿ ಹೇಳುತ್ತಿದ್ದಾರೆ. ನೀರಾವರಿಯ ಬಗ್ಗೆ ಹೇಳುತ್ತಾ ಆಯೋಗದವರು ಅಂದಾಜು ಮಾಡಿದ್ದಾರೆ, ತುಂಗಭದ್ರಾದಲ್ಲಿ ನೀರಾವರಿಗೇ ಸಂಬಂಧಪಟ್ಟಂತೆ ಸರಿಯಾಗಿ ನೀರು ಕೊಡುತ್ತೇವೆಂದೂ ಅದಕ್ಕೆ ಸೂಕ್ತ ಯೋಜನೆ ಮಾಡುತ್ತೇವೆಂದೂ ಹೇಳಿದ್ದಾರೆ. ಭದ್ರಾ ವಿಷಯದಲ್ಲಿಯೂ ಹೀಗೆಯೇ ಮಾಡಬೇಕು. ಇದಕ್ಕೆ ಅನೇಕ ಸಹಸ್ರ ಕೋಟಿ ರೂಪಾಯಿ ಖರ್ಚಾದರೂ ಅಲ್ಲಿ ರೈತರಿಗೆ ಯಾವ ರೀತಿ ನೀರಾವರಿ ಬೆಳೆ ಬೆಳೆಯಬೇಕೆಂದು ಹೇಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಕಾಲಾವಕಾಶ ನನಗೆ ಹೆಚ್ಚಾಗಿಲ್ಲವಾದುದರಿಂದ ಆದಷ್ಟು ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆ. ಬಸ್ ರಾಷ್ಟ್ರೀಕರಣದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ವಿಷಯದಲ್ಲಿ ಸರಕಾರದವರು ವಿಚಿತ್ರವಾದ ಹೇಳಿಕೆಗಳನ್ನು ಕೊಡುತ್ತಾರೆ. ಕೆಲವರು ಬ್ಯಾಂಕುಗಳ ರಾಷ್ಟ್ರೀಕರಣವಾಗಬೇಕೆನ್ನುತ್ತಾರೆ, ಮತ್ತೆ ಕೆಲವರು ಬೇಡವೆನ್ನುತ್ತಾರೆ. ಸಾರಿಗೆ ರಾಷ್ಟ್ರೀಕರಣ ಕೆಲವು ಭಾಗಗಳಲ್ಲಿ ಪೂರ್ಣವಾಗಿಲ್ಲ. ಈ ಭಾಗಗಳಲ್ಲಿ ಕೆಲವು ಹಿತಾಸಕ್ತಿಗಳು ಸರಕಾರದ ಮೇಲೆ ಪ್ರಭಾವವನ್ನಿಟ್ಟುಕೊಂಡಿವೆ. ಕೆಲವು ಬಸ್ ಕಂಪೆನಿಗಳಿವೆ, ಅವರು ತಮ್ಮ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲಿ ರಾಷ್ಟ್ರೀಕರಣ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಚೇಸಿಗಳಿಲ್ಲ ಎಂದು ಕುಂಟು ನೆಪವನ್ನು ಹೇಳುತ್ತಾರೆ, ಶ್ರೀಮಾನ್ ದೇವರಾಜ ಅರಸಿನವರು ರಾಷ್ಟ್ರೀಕರಣದಲ್ಲಿ ಒಂದು ಮೂಲ ತತ್ವ ಅಡಗಿದೆ. ಇದನ್ನು ಕಾರ್ಯಗತಮಾಡಿ ನಡೆಸಿಕೊಂಡು ಹೋಗುವ ಬಗ್ಗೆ ಸರ್ಕಾರ ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಯಾವ ಪ್ರಭಾವಕ್ಕೂ ಒಳಗಾಗದೆ ರಾಷ್ಟ್ರೀಕರಣವನ್ನು ಮೂರನೆಯ ಪಂಚವಾರ್ಷಿಕಯೋಜನೆ ಮುಗಿಯುವುದರೊಳಗೆ ಮುಗಿಸುತ್ತಾರೆಂದು ನಾನು ಆಶಿಸುತ್ತೇನೆ.

ಬೆಲೆಗಳ ಬಗ್ಗೆ ಸರಕಾರದ ವರದಿಯೇನಿದೆಯೋ ಅದು ಸತ್ಯಕ್ಕೆ ದೂರವಾಗಿದೆ. ಅವರಿಗೆ ಮಾರುಕಟ್ಟೆಯ ಪರಿಚಯವಿಲ್ಲ. ಬೇಸಾಯ ಮಾಡುವ ಮನುಷ್ಯನ ಪರಿಚಯವಾಗಲೀ, ಕೊಳ್ಳುವ ಪರಿಚಯವಾಗಲೀ ಇರುವಂತೆ ಕಾಣುವುದಿಲ್ಲ. ಅಥವಾ ಬೇಕೆಂದೇ ಹೀಗೆ ಹೇಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಈಹೊತ್ತು ಬೆಲೆಗಳು ಒಂದೇ ಸಮನಾಗಿ ಏರುತ್ತಿವೆ. ಹಣದ ಉಬ್ಬರ ಒಂದೇಸಮನೆ ಹೆಚ್ಚುತ್ತಿದೆ. ಖೋತಾ ಆಯವ್ಯಯಗಳು ಎಲ್ಲೆಲ್ಲಿಯೂ ಕಾಣುತ್ತಿವೆ. ಕೊಂಡು ತಿನ್ನತಕ್ಕ ಜನರು, ಅದರಲ್ಲಿಯೂ ಗೊತ್ತಾದ ಆದಾಯವಿರುವ ಜನರ ಜೀವನ ಬಹಳ ಕಷ್ಟವಾಗಿದೆ. ಕೇಂದ್ರದಲ್ಲಿ ಸರಕಾರೀ ನೌಕರರಿಗೆ ತುಟ್ಟಿಭತ್ಯವನ್ನು ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಮಾಡಿರುವಂತೆ ರಾಜ್ಯದಲ್ಲಿಯೂ ಮಾಡಬೇಕಾಗುತ್ತದೆ. ಇದು ಒಂದು ವಲಯಕ್ಕೆ ಅಥವಾ ಒಂದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ದೇಶದಾದ್ಯಂತ ಇರುವ ಪ್ರಶ್ನೆಯಾದುದರಿಂದ ಒಂದು ರಾಷ್ಟ್ರೀಯ ನೀತಿಯನ್ನನುಸರಿಸಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ರಾಜ್ಯಗಳಲ್ಲಿ ವಯಸ್ಸಾದವರಿಗೆ ಜೀವನಾಂಶ ಕೊಟ್ಟಿದ್ದಾರೆ. ಹಿಂದೆ ನಾನು ಈ ಬಗ್ಗೆ ಮೈಸೂರು ಸರಕಾರವನ್ನು ಕೇಳಿಕೊಂಡಿದ್ದೇನೆ. ವಯಸ್ಸಾದವರಿಗೆ ಜೀವನಾಂಶ ಕೊಡ

ಬೇಕೆಂದು ಸೂಚಿಸಿದ್ದೇನೆ. ಅದೇನು ಕಾರಣವೋ ಗೊತ್ತಿಲ್ಲ, ಹಿಂದೆ ಪ್ರಸ್ತಾವಿಸಿದವರು ಈಗ ಈ ವಿಷಯವನ್ನು ಕೈ ಬಿಟ್ಟಿದ್ದಾರೆ. ಈಗಲಾದರೂ ಎಲ್ಲ ವಯಸ್ಸಾದವರಿಗೂ ಜೀವನಾಂಶ ಕೊಡುವ ಕ್ರಮವನ್ನು ಸರಕಾರ ಕೂಡಲೇ ಕೈಕೊಳ್ಳಬೇಕೆಂದು ಸಲಹೆ ಕೊಡ ಬಯಸುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ, ಕೆಲವು ಖಾಸಗಿ ವಲಯಗಳಲ್ಲಿ ಪ್ರೋತ್ಸಾಹ ಕೊಡಬೇಕೆಂದು ಆ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ. ಶಿವಮೊಗ್ಗೆಯ ಹತ್ತಿರ ಒಂದು ದೊಡ್ಡ ಕಾಗದದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಪ್ರಯತ್ನ ನಡೆದಿದೆ. ಅದಕ್ಕೆ ಸಾಫ್ಟ್‌ಉಡ್ 40 ಲಕ್ಷ ಟನ್ ಒದಗಿಸಬೇಕೆಂದು ತೀರ್ಮಾನ ಮಾಡಿದಂತಿದೆ. ಭದ್ರಾವತಿ ಕಾರ್ಖಾನೆಯನ್ನು ವಿಸ್ತಾರ ಮಾಡುವುದಕ್ಕೆ ಸರಕಾರ ಒಪ್ಪಲಿಲ್ಲ. ಈಗಾಗಲೇ ಮಲೆನಾಡಿನಲ್ಲಿರುವ ಕಾಡುಬೊಂಬುಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಸಮಾಜವಾದದ ಹೆಸರಿನಲ್ಲಿ ಖಾಸಗಿ ಬಂಡವಾಳಗಾರರಿಗೆ ಈ ರೀತಿ ಪ್ರೋತ್ಸಾಹ ಮಾಡಿದರೆ ಮುಂದೆ ರಾಜ್ಯ ಎಲ್ಲಿಗೆ ಮುಟ್ಟುತ್ತದೆಂದು ಯೋಚನೆ ಮಾಡಬೇಕು.

ಸಾರ್ವಜನಿಕರ ಕ್ಷೇತ್ರದಲ್ಲಿ ಭದ್ರಾವತಿ ಕಬ್ಬಿಣ ಕಾರ್ಖಾನೆಯನ್ನು ಆರಂಭ ಮಾಡಿದ್ದಾರೆ. ಅದೇ ರೀತಿ ಇನ್ನೂ ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಿರುವುದರಿಂದಲೇ ನಮ್ಮ ಮೈಸೂರು ರಾಜ್ಯ ಮಾದರಿ ರಾಜ್ಯ ಎಂದು ಹೆಸರು ಗಳಿಸಿದೆ. ಆದರೆ ಈಗ ಹೊರಗಿನಿಂದ ಬಂಡವಾಳ ತಂದು ಹೊರಗಿನ ಬಂಡವಾಳಗಾರರಿಗೆ ಇಲ್ಲಿಯ ನೈಜವಾದ ಸಂಪತ್ತನ್ನು ಮಾರಾಟ ಮಾಡುವುದು ಒಳ್ಳೆಯದಲ್ಲ. ಇದು ಸಮಾಜವಾದ ಅಲ್ಲ. ಇದು ರಾಜ್ಯಕ್ಕೆ ಒಳ್ಳೆಯದಲ್ಲ. ನೈಜವಾದ ವನಸಂಪತ್ತನ್ನು ಮಾರಾಟ ಮಾಡುವ ಬಗ್ಗೆ 200-300 ವರ್ಷಗಳ ಒಂದು ಅಗ್ರಿಮೆಂಟ್ ಮಾಡಿಕೊಂಡು ಮುಂದುವರಿಸುವುದು ಸರಿಯಲ್ಲ. ಆ ರೀತಿ ಮಾಡುವುದಾದರೆ ರಾಜ್ಯಕ್ಕೂ ಜನತೆಗೂ ಅನ್ಯಾಯ ಮಾಡಿದಂತಾಗುತ್ತದೆಂದು ಎಚ್ಚರಿಕೆ ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಪಾಲರವರು ವಿಧಾನ ಮಂಡಲದ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕಾಗಿ ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸತಕ್ಕದ್ದು ಸೂಕ್ತ. ನಿಜವಾಗಿಯೂ ನಾವು ಅವರಿಗೆ ಥ್ಯಾಂಕ್ಸ್ ಕೊಡಬೇಕಾಗಿದದ್ದೇ, ಏತಕ್ಕೆಂದರೆ ಯಾರಾದರೂ ತಮ್ಮ ಕರ್ತವ್ಯವನ್ನು ತಾವು ಮಾಡಿದರೂ ಥ್ಯಾಂಕ್ಸ್ ಕೊಡಬೇಕಾದ ಕಾಲ ಈಗ ಬಂದಿದೆ. ಬೆಳಗಾಯಿತು, ಜನ ಎದ್ದರೆ ಎದ್ದರಾ, ಎದ್ದೆ ಎಂದರೆ ಥ್ಯಾಂಕ್ಸ್ ಕಾಫಿ ಕುಡಿದಿರಾ ಕುಡಿದೆ ಥ್ಯಾಂಕ್ಸ್ ಕಾಲ ಇದಾಗಿದೆ. ಹೀಗೆ ಪ್ರತಿಯೊಂದು ಕೆಲಸ ಮಾಡಿದ್ದಕ್ಕೆ ಥ್ಯಾಂಕ್ಸ್ ಕೊಡುತ್ತೇವೆ. ಅಂಥಾದ್ದರಲ್ಲಿ ರಾಜ್ಯಪಾಲರು ಇಷ್ಟೊಂದು ಹಿತವಚನ, ಎಲ್ಲರೂ ಕೂಡಿ ಸಹಕಾರದಿಂದ ಕೆಲಸಮಾಡುವ ಉದ್ದೇಶ ನೀಡಿರುವುದಕ್ಕೆ ಥ್ಯಾಂಕ್ಸ್ ಕೊಡಬೇಕಾದುದ್ದು ನಮ್ಮ ಕರ್ತವ್ಯ. ಈ ಸಂದರ್ಭದಲ್ಲಿ ನಮ್ಮ ರಾಜ್ಯಪಾಲರು ಇನ್ನೂ ನಾಲ್ಕು ಮಾತು ಹೆಚ್ಚು ಆಡಿ, ಇನ್ನೂ ಕೆಲವು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರೆ ಅವರಿಗೆ ಒಂದು ಮೂಟೆ ಥ್ಯಾಂಕ್ಸ್ ಕೊಡಲು ನಾನು ಇಷ್ಟ ಪಡುತ್ತಿದ್ದೆನು.

ನಮ್ಮ ರಾಜ್ಯಪಾಲರವರು ಸಮಾಜ ವಿಕಾಸ ಮತ್ತು ಪಂಚಾಯತಿ ರಾಜ್ಯ ಹಾಗೂ ಸಮಾಜಾಭಿವೃದ್ಧಿ ಕ್ಷೇತ್ರಗಳ ಬಗ್ಗೆ ಪ್ರಸ್ತಾಪ ಮಾಡಿ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತ್ನವೂ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಅದು ಯಾವಾಗ ಪ್ರಾರಂಭವಾಗಿದೆಯೋ; ಯಾವಾಗ ಮುಗಿಯುತ್ತದೆಯೋ ನನಗಂತೂ ಕಾಣತ್ತಿಲ್ಲ. ಪಂಚಾಯತಿ ರಾಜ್ಯದ ಬಗ್ಗೆ ಹೇಳುತ್ತಾ ವರದಿ ಮಾಡುವುದಕ್ಕಾಗಿ ಸರಕಾರದವರು ರಚಿಸಿದ ಅಭ್ಯಾಸ ಮಂಡಲಿಯು (ಸ್ಟಡಿ ಟೀಮು) ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿದೆ ಮತ್ತು ಅಭ್ಯಾಸ ಮಂಡಲಿಯು ಮಾಡಿದ ಸಲಹೆಯು ತತ್ತ್ವತಃ ಅಂಗೀಕೃತವಾಗಿದೆ ಎಂದು ಹೇಳಿದ್ದಾರೆ. ಈ ಮಸೂದೆ, ಸಭೆಯ ಮುಂದೆ ಚರ್ಚೆಗೆ ಬಂದಾಗ ಹೆಚ್ಚು ಮಾತನಾಡಲು ಅವಕಾಶ ಸಿಕ್ಕಬಹುದು ಎಂದು ನಂಬಿಕೊಂಡಿದ್ದೇನೆ. ಆದರೆ ಸುಧಾರಿತ ಬೀಜಗಳು, ಗೊಬ್ಬರಗಳು, ರಾಸಾಯನಿಕ ಗೊಬ್ಬರಗಳು, ಸುಧಾರಿತ ಉಪಕರಣಗಳು ನೀರಾವರಿ ಇವೇ ಮೊದಲಾದವುಗಳ ಸಹಾಯದಿಂದ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತವೂ ಪ್ರಾರಂಭವಾಗಿದೆ ಎಂದು ಹೇಳುವುದಾದರೆ ಹೆಚ್ಚಿನ ಬೆಳೆ ಎಲ್ಲಿ ಹೋಯಿತು ಎಂದು ಕೇಳುತ್ತೇನೆ. ಪಂಪ್ ಸೆಟ್ಟು ಕೊಂಡುಕೊಳ್ಳಲು ಸಾಲ ಕೊಡಲಾಗುತ್ತಿದೆ, ಹಾಗು ನೀರಾವರಿಗೆ ಅನುಕೂಲ ಮಾಡಿ ಕೊಟ್ಟಿದೆ ಎಂದು ಹೇಳಿದ್ದಾರೆ. ಯಾವ ಅನುಕೂಲ ಮಾಡಿಕೊಟ್ಟಿದ್ದಾರೆ ಎಂಬುದನ್ನು ಹೇಳಿದ್ದರೆ ಸಮಾಧಾನವಾಗುತ್ತಿತ್ತು.

ಇನ್ನು ಸಹಕಾರದ ವಿಚಾರವನ್ನು ಹೇಳುವುದಾದರೆ ಮಾನ್ಯ ಉಪ ಮಂತ್ರಿಗಳು ಒಮ್ಮೆ ನಮ್ಮ ಊರಿಗೆ-ಗುಂಡ್ಲುಪೇಟೆಗೆ ಬಂದಿದ್ದರು. ಆದರೆ ಅವರು ಜನರ ಕಷ್ಟ ಸುಖ ವಿಚಾರಿಸದೆ ಅಂದು ರಾತ್ರಿ ನಾಟಕ ನೋಡಿಕೊಂಡು ಬಂದರು. ಇದು ಸರಿಯಲ್ಲ. ಸಹಕಾರ ಸಂಘಗಳಲ್ಲಿ ಸರಿಯಾಗಿ ಸಿಕ್ಕುವುದಿಲ್ಲ. ತೂಕ ಸರಿಯಾಗಿ ಕೊಡುವುದಿಲ್ಲ. ಮಂತ್ರಿಗಳು ನಮ್ಮ ಊರ ಕಡೆ ಮೊದಲೇ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬರುವುದಿಲ್ಲ. ಬಂದವರೂ ಬಡ ರೈತರ ಕಷ್ಟ ಸುಖ ಏನು ಎಂಬುದನ್ನು ಕೇಳುವುದಿಲ್ಲ. ಬಡ ರೈತ ಜನರ ಕಷ್ಟ ಸುಖ ವಿಚಾರಿಸುವ ಹಾಗೆ ದೇವರು ಅವರಿಗೆ ಸರಿಯಾದ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ರಾಜ್ಯಪಾಲರವರು ಮಳೆ ಬೆಳೆಗಳ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡಿ ಮೈಸೂರು ಜಿಲ್ಲೆಯಲ್ಲಿ ಮಳೆಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ, ಪೀಡಿತ ಪ್ರದೇಶಗಳ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದಕ್ಕಾಗಿ ಪರಿಹಾರ ಕಾರ್ಯಕ್ರಮಗಳು, ತಕ್ಕಾವಿ ಮತ್ತು ಜಮೀನು ಆಬಾದಿನ ಸಾಲಗಳು, ಇತ್ಯಾದಿ ಸಹಾಯ ಕಾರ್ಯಗಳನ್ನೂ ಅವಶ್ಯವಿರುವ ಕಡೆಗಳಲ್ಲೆಲ್ಲಾ ಕೈಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಎಲ್ಲಿ ಪರಿಹಾರ ಕಾರ್ಯ ನಡೆದಿದೆ ಎಂದು ಕೇಳುತ್ತೇನೆ. ತಕ್ಕಾವಿ ಸಾಲ ದೊರೆಯಬೇಕಾದರೆ 25 ಸಲ ಮೈಸೂರಿಗೆ ಹೋಗಿ ಬರಬೇಕಾಗುತ್ತದೆ. ಈ ಬಾಬಿಗೆ ಒದಗಿಸಿರುವ ಹಣ ಬಹಳ ಕಡಿಮೆ. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಬಂದು ಪರಿಸ್ಥಿತಿ ನೋಡಬೇಕು. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಯಾರೂ ಬರುವುದಿಲ್ಲ. ನೀವು ನಿಜವಾಗಿ ಬಂದು ಅಲ್ಲಿ ಸುಭಿಕ್ಷವಾಗಿದೆ ಎಂದು ಹೇಳಿ. ನಾವು ಹೇಳುವುದು ತಪ್ಪಿಹೋಗುತ್ತದೆ. ನೀವು ಪ್ರವಾಸ ಮಾಡುತ್ತಾ ಇಲ್ಲವೆ ? ನಿಮ್ಮಿಂದ ಸ್ಪೆಂಟ್ ಎಕ್ಸ್‌ಚೆಕರಿಗೆ ಎಷ್ಟು ಖರ್ಚಾಗುತ್ತಾ ಇದೆ ? ಪ್ರವಾಸ ಎಲ್ಲಿ ಮಾಡಬೇಕೋ, ಅಲ್ಲಿ, ಕರೆದಕಡೆ, ಪ್ರವಾಸ ಮಾಡಬೇಕು. ಆದ್ದರಿಂದ ದಯೆಯಿಟ್ಟು ನಮ್ಮ ತಾಲ್ಲೂಕಿಗೆ ಬಂದುನೋಡಿ.

11-30 A.M.

ಕಲೆಕ್ಟರ್ ಆಫ್ ರೆವಿನ್ಯೂ ವಿಚಾರದಲ್ಲಿ ಈಗತಾನೇ ನಮಗೆ ಯಾರೋ ಸಮಾಚಾರ ಹೇಳಿದರು ಐದು ಆಣೆ ಬೆಳೆ ಪಹಣಿಯಲ್ಲಿ ಬೆಳೆದಿದ್ದಾರೆ ಎಂದು. ಮಳೆ ಆಗದೆ ಇರುವಾಗ, ಬೀಜ ಬಿತ್ತನೆ ಯಾಗದೆ ಇರುವಾಗ, 5 ಆಣೆ ಫಸಲು ಎಲ್ಲಿಂದ ಬಂತು ? ವಿಚಿತ್ರವಾಗಿದೆ. ನೀವು ಯಾರಾದರೂ ಬಂದು ನೋಡಿ ನಿಜವಾಗಿಯೂ ಆಗಿದೆಯೆಂದು ಖಾತ್ರಿಮಾಡಿಕೊಳ್ಳದೆ, ಯಾರೋ ಹೇಳಿದ್ದು ಕೇಳುವುದೇ ? ಅಯ್ಯೋ, ಯಾರೂ ಕೇಳುವವರೇ ಇಲ್ಲದಂತೆ ಆಗಿಹೋಗಿದೆ, ನಮ್ಮ ಗುಂಡ್ಲುಪೇಟೆ ತಾಲ್ಲೂಕು ! Tell us "you are unwanted children, we do not want you." ಆ ತಾಲ್ಲೂಕು ಬಿಟ್ಟು, ನೀಲಗಿರಿ ತಪ್ಪಲಿಗೋ, ಕಾಫೀ ತೋಟಕ್ಕೋ ಹೋಗಿಬಿಡುತ್ತೇವೆ. ಈ ತರಹ ಅನ್ಯಾಯ, ಪಾರ್ಸಿಯಾಲಿಟಿ ಏಕೆ ? ಗುಂಡ್ಲುಪೇಟೆ ತಾಲ್ಲೂಕಿನ ಬಗ್ಗೆ ಹೇಳುವವರು ಕೇಳುವವರು ಇಲ್ಲವೇ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಂಗಸರು ಹೊಲದಬದಿಯಲ್ಲಿ ಬೈಗಳನ್ನು ಹೇಗೆ ಬಯ್ಯುತ್ತಿರುತ್ತಾರೋ ಹಾಗೆ ಬಯ್ಯುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಹಳ್ಳಿಯವರು, ನೋಡಿ ಇಷ್ಟು ಹೊತ್ತಿನವರೆಗೂ ಹೇಳುತ್ತಾ ಇದ್ದೆ. ನಮ್ಮನ್ನು ಷೆಡ್ಯೂಲ್ಡ್ ಕ್ಯಾಸ್ಟ್, ಹಿಂದುಳಿದ ಜನಾಂಗವಾಗಿ ಮಾಡಿಬಿಡಿ. ಬಾಕಿಯವರ ಬೆನಿಫಿಟ್ಟುಗಳನ್ನು ತೆಗೆದು ಅವರಿಗೆ ಕೊಡುತ್ತಾ ಇದ್ದೀರಿ. ಅದರಂತೆಯೇ ನಮ್ಮ ತಾಲ್ಲೂಕನ್ನು "ಹರಿಜನ ತಾಲ್ಲೂಕು" ಎಂದು ಮಾಡಿಬಿಡಿ. ಹಾಗೆ ಆಯಿತು ಎಂದರೆ, ನಾಳೆ ದಿವಸ ಅದಕ್ಕೆ ಬೆನಿಫಿಟ್ ಸಿಕ್ಕುತ್ತದೆ ಎಂದು ನನಗನ್ನಿಸುತ್ತದೆ.

ಇನ್ನು ತೋಟಗಾರಿಕೆ ನಿರ್ಮಾಣ ಮಾಡುತ್ತಾರಂತೆ ! ತೋಟಗಾರಿಕೆ ರೂಲ್ಸ್ ರಚನೆಯಾಗದೆ ಮೂರು ವರ್ಷಗಳಿಂದಲೇನು ಹಣ ಲ್ಯಾಪ್ಸ್ ಆಗಿದೆ. ಸರಕಾರ ರೂಲ್ಸ್ ಫ್ರೇಮ್ ಮಾಡದೆ ಇನ್ನು ಏನು ತೋಟಗಾರಿಕೆ ಮಾಡುವುದು ? ಏನು ಹಣ್ಣುಗಳನ್ನು ಬೆಳೆಯುವುದು ? ಏನು ವನ ನಿರ್ಮಾಣ ಮಾಡುವುದು ? ಏನೂ ಕಾಣುತ್ತಾ ಇಲ್ಲ.

ಚಿಕ್ಕಪುಟ್ಟ ನೀರಾವರಿಗಳ ವಿಚಾರದಲ್ಲಿ ಹೇಳುವುದು ಎಂದರೆ, ನಿನ್ನೆ ದಿವಸ ನನ್ನ ಒಂದು ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು : New minor irrigation worksಗೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 99 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ, 10 ವರ್ಕ್ಸ್ ತೆಗೆದುಕೊಂಡಿದ್ದೇವೆ, ಎರಡು ವರ್ಷದಿಂದ ತೆಗೆದುಕೊಂಡಿದ್ದೇವೆ, ಒಟ್ಟು ಖರ್ಚು ಮಾಡಿರುವುದು 10 ಲಕ್ಷ ರೂಪಾಯಿ ಎಂದು ಅವರು ಹೇಳಿದರು. ಈ 99 ಲಕ್ಷ ರೂಪಾಯಿ ಕೆಲಸ ಮುಗಿಯುವುದು ಯಾವಾಗ ? ನಾನು ಮುದುಕಿಯಾಗಿ ಸತ್ತಮೇಲೆ ಇರಬಹುದು.

ಮೂರು ವರ್ಷಗಳಲ್ಲಿ 40 ಸಾವಿರ ರೂಪಾಯಿಗೆ ಒಂದು ಪಿಕ್‌ಅಪ್ ಕನ್‌ಸ್ಟ್ರಕ್ಟ್ ಮಾಡಬೇಕೆಂದು ಅಂದಾಜಾಯಿತು. ಆ ಪಿಕ್‌ಅಪ್ ಕಿತ್ತುಹೋಗಿ ಮೂರು ವರ್ಷವಾಗಿದೆ ಇನ್ನೂ ಕಟ್ಟಿಲ್ಲ. ಹೊಸ ಕನ್‌ಸ್ಟ್ರಕ್ಷನ್ ಆಗಬೇಕು ಎಂದು 13½ ಸಾವಿರ ರೂಪಾಯಿಗೆ ಒಂದು ಪಿಕ್‌ಅಪ್ ಕಟ್ಟಿದರು ; ಒಂದು

ತೊಟ್ಟು ನೀರೂ ಇಲ್ಲ, ಸೇತುವೆ ಇಲ್ಲ, ನೀರು ಹೋಗುತ್ತಿದೆ. ಸೂಪರಿಂಡೆಂಟಿಂಗ್ ಇಂಜನಿಯರು ಅದು ಆಗಕೂಡದು ಎಂದು ಹೇಳಿದರು, ಅವರಿಗೆ ವಿರೋಧವಾಗಿ 13½ ಸಾವಿರ ರೂಪಾಯಿ ಖರ್ಚು ಮಾಡಿದರು. ಯಾವ ಸುಖಕ್ಕೋಸ್ಕರ? ನಾವು ಮಾಡುವ ಕೆಲಸದಲ್ಲಿ ಪುಣ್ಯ ಇರಬೇಕು, ಪುರುಷಾರ್ಥ ವಿರಬೇಕು, ಎರಡೂ ಇಲ್ಲದೆ ಖರ್ಚು ಮಾಡುತ್ತಾರೆ. ಖರ್ಚು ಮಾಡುವುದೇ ಪ್ರಾಧಾನ್ಯವಲ್ಲ. ಖರ್ಚು ಮಾಡಿದಕ್ಕೆ ಬೆಳೆ ಬರುವುದು ಪ್ರಾಧಾನ್ಯ. ಹೀಗಿರುವಾಗ ಚಿಕ್ಕಪುಟ್ಟ ನೀರಾವರಿಗೆ ಖರ್ಚು ಮಾಡಿದ್ದಾರಂತೆ!

ನಮ್ಮ ತಾಲ್ಲೂಕಿನಲ್ಲಿ ಸಾಲ ಇಲ್ಲದೆ ಇರುವವರು ಯಾರೂ ಇಲ್ಲ; ಮೂರು ಕಾಸು ಆಗಲ ಜಮೀನು ಸಾಲ ಇಲ್ಲದೆ ಇರುವ ರೈತರು ಇಲ್ಲ; ಹೀಗಿರುವಾಗ ಬಾವಿಗೆ ಸಾಲ ತೆಗೆಯುವುದು ಹೇಗೆ? ಡಿವಿಜನಲ್ ಕಮಿಷನರು ಸುಮ್ಮಸುಮ್ಮನೆ ರಿಲೀಫ್ ವರ್ಕ್ಸ್ ಕೇಳಬೇಡಿ ಎನ್ನುತ್ತಾರೆ. ಸಾವಿರಾರು ಸಾರಿ ಹೇಳಿದ್ದೇನೆ ಸಾಲಗಾರರಾಗಿಲ್ಲದೆ ಇರುವ ರೈತರೇ ಇಲ್ಲ, ಸರಕಾರದವರೇ ಬಾವಿ ತೆಗೆಸಿ, ಆ ಹಣವನ್ನು ಇನ್‌ಸ್ಟಾಲ್‌ಮೆಂಟ್ ಮೇಲೆ ವಾಪಸ್ಸು ತೆಗೆದುಕೊಳ್ಳಿ ಎಂದು. ಬೇರೇಕಡೆ 20—30 ಕೋಟಿ ರೂಪಾಯಿವರೆಗೆ ಪೋಲಾಗಿ ಹೋಗಿದೆ. ಈ ಬಡರೈತರಿಗೆ ನೀರಾವರಿ ಬಾವಿ ಕಟ್ಟಿಸುವುದಕ್ಕೋಸ್ಕರ ಖರ್ಚು ಮಾಡುವರು ಅದಕ್ಕಿಂತ ಅನ್ಯಾಯವಲ್ಲ. ಬಾವಿ ತೋಡಿಸಲು ಕೊಟ್ಟ ಸಾಲ ಹಾಳಾಗಿಹೋದರೂ ಹೋಗಲಿ, ಬಾವಿ ಕಾಂಗಾರಿಗೆ ಹಣ ಖರ್ಚು ಮಾಡಿ, ಧರ್ಮಕ್ಕೆ ರೈತರಿಗೆ ಬಾವಿ ಕಟ್ಟಿಸಿ ಕೊಡಿ. ಇಲ್ಲದೆ ಹೋದರೆ ನಿಜವಾಗಿ ಈ ತಾಲ್ಲೂಕು ಮುಂದೆಬರುವುದಿಲ್ಲ, ಜನಗಳೂ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ.

ಇನ್ನು ವಿದ್ಯುಚ್ಛಕ್ತಿಯ ವಿಚಾರ. ಶರಾವತಿ ಯೋಜನೆಯನ್ನು ಪೂರ್ತಿಮಾಡುತ್ತೇವೆ, ನಮ್ಮ ರಾಜ್ಯದ ಪವರ್ ಜನರೇಷನ್ ಹೆಚ್ಚಿಬಿಡುತ್ತದೆಂದು ಹೇಳಿದ್ದಾರೆ. ಇದು ನಮ್ಮ ಮಕ್ಕಳು, ಮರಿ ಮಕ್ಕಳ ಕಾಲಕ್ಕೆ ಈ ಸಾಧನ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತಾರೋ ಏನೋ. ಈ ಹೆಚ್ಚಾಗಿ ದೊರೆಯುವ ವಿದ್ಯುಚ್ಛಕ್ತಿಯನ್ನು ಹೇಗೆ, ಯಾವ ತರಹ ಉಪಯೋಗಿಸಕೊಳ್ಳಲಾಗುತ್ತದೆ ಎಂಬ ಬಗ್ಗೆ ಏನಾದರೂ ಕಾಂಕ್ರಿಟ್ ಪ್ರಪೋಸಲ್ಸ್ ಹಾಕಿದ್ದಾರೆಯೇ, ಆ ವಿಷಯದಲ್ಲಿ ನಮ್ಮ ರಾಜ್ಯಪಾಲರು ಹೇಳಲಿಲ್ಲ.

ಇನ್ನು ರಸ್ತೆ ಸಾರಿಗೆಯ ವಿಚಾರಕ್ಕೆ ಹೋದರೆ, ಶ್ರೀಮಾನ್ ಅಪ್ಪಣ್ಣನವರು ಬಹಳ ಚೆನ್ನಾಗಿ ಹೇಳಿದರು. ಯಾವ ಬಸ್ಸೂ, ಟೈಮಿನಲ್ಲಿ, ನಿಯಮಿತ ಸ್ಥಳ ಮುಟ್ಟುವುದಿಲ್ಲ. ನಾವು ಹೋಗ ಬೇಕೆಂದು ಉದ್ದೇಶಿಸಿರುವ ಸ್ಥಳವನ್ನು ಕಾಲಕ್ಕೆ ಸರಿಯಾಗಿ ಸೇರುವುದಿಲ್ಲ! ಶ್ರೀ ದೇವರಾಜ ಅರಸರಿಗೆ ಬಸ್ಸಿನಲ್ಲಿ ಹೋಗಿ, ಅದರ ಅನುಭವ ಕಡಮೆ ಇರಬೇಕು. ಆ ಬಸ್ಸು ಕೆಟ್ಟುಹೋಯಿತು ಅಂದರೆ, ಅದನ್ನು ಸರಿಮಾಡಲು ಸ್ಪ್ಯಾನರ್ ಸೆಟ್ಟು ಇರುವುದಿಲ್ಲ, ಬೆಲ್ಟ್ ಇರುವುದಿಲ್ಲ, ನಟ್ ಇರುವುದಿಲ್ಲ, ಪೈಪ್ ಇರುವುದಿಲ್ಲ. ಯಾವ ಡ್ರೈವರ್ ಕೈಯ್ಯಲ್ಲಿಯೂ ಸ್ಪ್ಯಾನರ್ ಇರುವುದಿಲ್ಲ. ಬಸ್ಸಿನಲ್ಲಿ ಕುಳಿತುಕೊಂಡರೆ, ಅದು ಎಲ್ಲಿ ನಿಂತರೆ ಅಲ್ಲೇ ನಿಂತುಬಿಡುತ್ತದೆ. ಜನಗಳ ತೊಂದರೆ ಹೇಳ ತೀರದು. ಇಂಥ ಕಾಲದಲ್ಲಿ ಇತರ ಭಾಗಗಳಲ್ಲಿಯೂ ಬಸ್ ಸರ್ವಿಸುಗಳನ್ನು ನ್ಯಾಷನಲೈಸ್ ಮಾಡುತ್ತಾರಂತೆ. ನಾನು ಹತ್ತಾರು ದೇಶವನ್ನು ನೋಡಿದ್ದೇವೆ. ಎಲ್ಲಿಯೂ ಈ ರೀತಿ ಟ್ರಾನ್ಸ್ ಪೋರ್ಟ್ ನ್ಯಾಷನಲೈಸ್ ಮಾಡಿಲ್ಲ. ಅಲ್ಲಿ ಏನು ಮಾಡಿದ್ದಾರೆಂದರೆ ಬಸ್ಸಿನಲ್ಲಿ ಮಿನಿಮಮ್ ರೇಟ್‌ಗಳನ್ನು ಫಿಕ್ಸ್‌ಮಾಡಿರುತ್ತಾರೆ, ಮ್ಯಾಕ್ಸಿಮಮ್ ಕಂಫರ್ಟ್ ಒದಗಿಸುತ್ತಾರೆ, ಬಸ್ಸಿನಲ್ಲಿ ಇಷ್ಟು ಸ್ಪ್ರಿಂಗುಗಳು ಹಾಕಿರಬೇಕು, ಇಷ್ಟು ಕನ್‌ವೀನಿಯನ್ಸ್‌ಸ್ ಕೊಡಬೇಕು ಎಂದು ಜನಗಳಿಗೆ ಹೇಳಿರುತ್ತಾರೆ. ಇಷ್ಟಾದಮೇಲೆ ಆಪರೇಟರುಗಳಲ್ಲಿ ಕಾಂಪಿಟಿಷನ್ ಇದ್ದು, ಒಬ್ಬರು ರೇಡಿಯೋ ಹಾಕುತ್ತೇವೆಂದು ಹೇಳುತ್ತಾರೆ, ಇನ್ನೊಬ್ಬರು ಡ್ರಿಂಕಿಂಗ್ ವಾಟರ್ ಸಪ್ಲೈ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ 'ಅಲ್ಲೆಲ್ಲಾ maximum comfort at mininium charges ಇರುತ್ತದೆ.' ಇಲ್ಲಿ maximum charges andno comfort at all. ಅದೂ ಅಲ್ಲದೆ ನಮ್ಮ ಡೆಸ್ಟಿನೇಷನ್ನನ್ನೂ ನಾವು ಮುಟ್ಟುವುದಿಲ್ಲ. ಇಂಥ ರಾಷ್ಟ್ರೀಕರಣ ಮಾಡುತ್ತಾರೆ; ಇದನ್ನು ಏತಕ್ಕೋಸ್ಕರ ಮಾಡ ಬೇಕು? ಬಸ್ಸಿನಲ್ಲಿ ಒಂದು ಊರಿಗೆ ಹೊರಟರೆ, ಪ್ರಯಾಣಿಕರು ಕೈಯ್ಯಲ್ಲಿ ಜೀವವನ್ನು ಹಿಡಿದು ಕೊಂಡಿರಬೇಕು, ಮಧ್ಯೇ ಅದು ಎಲ್ಲಿ ನಿಂತು ಹೋಗುತ್ತದೊ, ಊರನ್ನು ತಲುಪುತ್ತೇವೋ ಇಲ್ಲವೋ ಎಂಬ ಚಿಂತೆ. ಹೀಗಿರುವಾಗ ನಮ್ಮ ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡುವುದು ನಮ್ಮ ಕರ್ಮ; ಇದಕ್ಕೆ ನಾವು ಥ್ಯಾಂಕ್ ಮಾಡಬೇಕು?

ಇನ್ನು ಕೈಗಾರಿಕೆಯ ವಿಚಾರದಲ್ಲಿ ನಿತ್ಯ ಪೇಪರಿನಲ್ಲಿ ಓದುತ್ತೇವೆ, ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಜರ್ ಫ್ಯಾಕ್ಟರಿ, ಸ್ಟೀಲ್ ಫ್ಯಾಕ್ಟರಿ ಆಗುತ್ತದೆಂದು. ಏನಾದರೂ ಅದರ ಒಂದು ಸುದ್ದಿ ನಮ್ಮ ರಾಜ್ಯಪಾಲರ ಭಾಷಣದಲ್ಲಿದೆಯೆ? ನಮ್ಮ ಶರಾವತಿ ಯೋಜನೆಯಲ್ಲಿ ನಾವು ಸಂಪಾದಿಸ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ತಕ್ಕಂಥ ಎಲೆಕ್ಟ್ರಿಸಿಟಿ ಮುಂದಕ್ಕೆ ಎಲ್ಲಾ ಕನ್‌ಸ್ಯೂಮ್ ಮಾಡುವುದಕ್ಕೆ ಏನೇನು ಪ್ರಪೋಸಲ್ ಹಾಕಿದ್ದಾರೆ ? ಫ್ಯಾಕ್ಟರಿ ಮಾಡುತ್ತಾರೆನ್ನುವುದಕ್ಕೆ ಒಂದು ಚೂರು ಈ ವಿಚಾರದಲ್ಲಿ ಇಲ್ಲ, ಮಾಡುತ್ತಾರೆಂದರೆ ಏನಾದರೂ ಬೇಡವೆ ? ಹೇಳಿದ್ದರೆ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತಿತ್ತು.

ನಮ್ಮ ತಾಲ್ಲೂಕು ತತ್ರಾಪಿ ನಮ್ಮ ಗವರ್ನಮೆಂಟನ್ನು ಥ್ಯಾಂಕ್ ಮಾಡಬೇಕು, ರೇಷ್ಮೆ ವ್ಯವಸಾಯ ಮಂತ್ರಿಗಳನ್ನು ಥ್ಯಾಂಕ್ ಮಾಡಬೇಕು. ಹಿಂದೆ ಹೇಳಿದ ತರಹ ಥ್ಯಾಂಕ್ಸ್ ಅಲ್ಲ, ಇದು ನಿಜವಾದ ಥ್ಯಾಂಕ್ಸ್. ಏಕೆಂದರೆ ಅವರು ಮಾರು ಕಟ್ಟೆ ಮಾಡಿ ರೇಷ್ಮೆ ವ್ಯವಸಾಯ ನಮ್ಮ ತಾಲ್ಲೂಕಿನಲ್ಲಿ ಸ್ವಲ್ಪ ಇಂಪ್ರೂವ್ ಮಾಡದೆ ಹೋಗಿದ್ದರೆ ಜನ ಹುಳುವಿನಂತೆ ಸತ್ತುಹೋಗುತ್ತಿದ್ದರು. ದೇವರು ಅವರಿಗೆ ನಿಜವಾಗಿ ಒಳ್ಳೆಯದು ಮಾಡಲಿ. ಈ ವಿಚಾರದಲ್ಲಿ ಜಾಸ್ತಿ ನಿಗ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ಇದರ ಜೊತೆಗೆ, ಸಿಲ್ಕ್ ಫಿಲೇಚರ್ಸ್ ಸ್ವಲ್ಪ ನಷ್ಟದಲ್ಲಿ ರನ್ ಆಗುತ್ತಾ ಇದೆ. ಜಪಾನೀಸ್ ಕೋಲಾಬೋರೇಷನ್ನಿನಿಂದ ಇವರು ಒಂದು ಫಿಲೇಚರ್ಸ್ ತೆಗೆದು ಅದು ಏನಾದರೂ ಇನ್ನೂ ಸ್ವಲ್ಪ ಮುಂದುವರಿಯುವಂತೆ ಮಾಡಲಿ ಎಂದು ನಾನು ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಒಂದು ಮಾತನ್ನಾಡಿ ನನ್ನ ಮಾತು ಮುಗಿಸುತ್ತೇನೆ. ನಮ್ಮ ದೇಶಕ್ಕೆ ಇದು ನಿಜವಾಗಿ curse, ಶಾಪ ಎಂದು ಹೇಳಬೇಕಾಗಿದೆ. ನಮ್ಮ ಸುವರ್ಣಗಾರರಿಗೆ ಸಹಾಯ ಮಾಡುವುದಕ್ಕೋಸ್ಕರ, ಮತ್ತು ಎಲ್ಲರಿಗೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮಾಡಿದೆ ಎಂದು ಇವರು ಹೇಳುತ್ತಿದ್ದರು. ಅಲ್ಲಿರತಕ್ಕಂಥ ಮೈಸೂರು ಆಫೀಸರಿಗೆ ನಮ್ಮ ಸರಕಾರ ಯಾವತರಹ ಶಿಕ್ಷೆ ಮಾಡಿದರೂ ಅದು ಕಡಮೆಯೇ ಎಂದು ಹೇಳಬೇಕಾಗಿದೆ. ಈಗಿರುವಂಥ ಸ್ಥಿತಿಯಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇರುವುದಾದರೆ, ಅದು ಏಕೆ ಬೇಕೋ ಎನ್ನುವುದನ್ನು ಸರಕಾರದವರು ಗಮನಿಸಬೇಕು.

ಇಷ್ಟು ಎಲ್ಲಾ ಹೇಳಿದ ಗವರ್ನರಿಗೆ Many Many Thanks ಹೇಳಿ, ಇಷ್ಟರವರೆಗೆ ಮಾತನಾಡಲು ಅವಕಾಶ ಕೊಟ್ಟ ನಮ್ಮ ಅಧ್ಯಕ್ಷರಿಗೆ ವಂದನೆಯನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಡಿ. ದೇವೇಂದ್ರಪ್ಪ.—ಸಭಾಪತಿಯವರೇ, ರಾಜ್ಯಪಾಲರು ಅನೇಕ ವರ್ಷಗಳಿಂದ ಇಂಗ್ಲೀಷ್‌ನಲ್ಲಿ ಭಾಷಣ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದರು. ಈ ಒಂದು ಕಾಲದಲ್ಲಿ ಅವರು ಇಡೀ ಕರ್ನಾಟಕದ ಜನತೆಗೆ ಬೇಕಾಗಿರತಕ್ಕ ಮತ್ತು ಅವರು ಅಪೇಕ್ಷೆ ಮಾಡತಕ್ಕ ಮಾತೃ ಭಾಷೆಯಾದ ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕೆ ನಾನು ಇಡೀ ಕರ್ನಾಟಕದ ಜನತೆಯ ಪರವಾಗಿ ಅವರನ್ನು ವಂದಿಸುತ್ತೇನೆ. ಹಾಗೂ ನಮ್ಮ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ಹುಟ್ಟಿ ಬೆಳೆದು ಅನೇಕ ವರ್ಷಗಳಿಂದ ನಮ್ಮ ಮೈಸೂರು ರಾಜ್ಯದ ರಾಜರಾಗಿ ಆಳಿಕೊಂಡು ಬಂದು, ಸ್ವಾತಂತ್ರ್ಯ ಬಂದ ನಂತರವೂ ನಮ್ಮ ರಾಜ್ಯದ ರಾಜ್ಯಪಾಲರಾಗಿ ಮುಂದುವರಿದುಕೊಂಡು ಬಂದಿರುತ್ತಾರೆ. ಆದ್ದರಿಂದ ನಮ್ಮ ನೆಚ್ಚಿನ ರಾಜ್ಯಪಾಲರಾದ ಅವರನ್ನೇ ಖಾಯಂ ರಾಜ್ಯಪಾಲರಾಗಿ ಮುಂದುವರಿಸಬೇಕೆಂದು ರಾಜ್ಯ ಸರಕಾರವನ್ನೂ ಕೇಂದ್ರ ಸರಕಾರವನ್ನೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯಕ್ಕೆ ಹೊಂದಿಕೊಳ್ಳುವ ಕೆಲವು ಅಭಿವೃದ್ಧಿ ಕೆಲಸಗಳ ವಿಷಯವಾಗಿ ಹೇಳಿರುವುದನ್ನು ನೋಡಿದರೆ ಅವರ ಭಾಷಣ ಬಹಳ ಅಮೂಲ್ಯವಾದ ಭಾಷಣವಾಗಿರುತ್ತದೆ. ಇನ್ನೂ ಅಭಿವೃದ್ಧಿ ಮಾಡತಕ್ಕ ಕೆಲಸ ಕಾರ್ಯಗಳು ಮುಂದೆ ಬೇಕಾದಷ್ಟು ಇವೆ. ರಾಜ್ಯಪಾಲರ ಭಾಷಣದಲ್ಲಿ ವ್ಯವಸಾಯ ಮತ್ತು ವ್ಯವಸಾಯದ ಉತ್ಪನ್ನಕ್ಕೆ ಅಧಿಕ ಹಣ ಖರ್ಚು ಮಾಡುತ್ತಾ ಇದ್ದೇವೆ ಎಂಬ ವಿಷಯವನ್ನು ಹೇಳಿದ್ದಾರೆ. ವ್ಯವಸಾಯದ ಅಭಿವೃದ್ಧಿಗೆ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಹೆಚ್ಚಿನ ಕೆಲಸವನ್ನು ಮಾಡುತ್ತವೆ ಎಂಬ ಮಾತನ್ನು ಹೇಳಿದ್ದಾರೆ. ಆಹಾರಧಾನ್ಯಕ್ಕೆ ಅಥವಾ ವ್ಯವಸಾಯಕ್ಕೆ ಹೆಚ್ಚು ಹಣ ಖರ್ಚು ಮಾಡಿದ್ದರೂ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕಾಗಿದೆ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ನಾವು ಪ್ರಸ್ತಾಪ ಮಾಡಬೇಕಾಗಿದೆ. ಆಹಾರ ಧಾನ್ಯದ ಬೆಲೆ ಜಾಸ್ತಿಯಾಗಿದೆ, ಜಾಸ್ತಿಯಾಗಿದೆ, ಜಾಸ್ತಿಯಾಗಿದೆ ಎನ್ನತಕ್ಕ ಮಾತನ್ನು ಕೆಲವು ಸದಸ್ಯರು ಹೇಳುತ್ತಾರೆಯೇ ವಿನಾ ಅಷ್ಟೇ ಪ್ರಾಮುಖ್ಯವಾದ ದಿನ ನಿತ್ಯ ಬಳಸತಕ್ಕ ಪ್ರತಿಯೊಂದು ಸಾಮಾನಿನ ಬೆಲೆಯೂ ಕೂಡ ಜಾಸ್ತಿಯಾಗಿದೆ ಎಂಬುದನ್ನು ಹೇಳದೆ ನಾಲ್ಕಾರು ಆಹಾರ ಪದಾರ್ಥಗಳ ಬೆಲೆ ಮಾತ್ರ ಜಾಸ್ತಿಯಾಗಿದೆ ಎಂದು ಹೇಳುವುದು ಸರಿಯಲ್ಲ. ನಾನಾದರೂ ಹೇಳುತ್ತೇನೆ, ಇವತ್ತು ಕಬ್ಬಿಣದ ಧಾರಣೆ, ಸಿಮೆಂಟಿನ ಧಾರಣೆ ಹತ್ತಿ ಧಾರಣೆ ಅಥವಾ ಔಷಧಿ ಧಾರಣೆ ಯಾವುದನ್ನು ತೆಗೆದುಕೊಂಡರೂ ಕೂಡ ಗಗನ ಮುಟ್ಟುತ್ತಾ ಇದೆ. ಅದನ್ನು ಹೇಳುವುದನ್ನು ಬಿಟ್ಟು ಬರೀ ಆಹಾರ ಧಾನ್ಯದ ಬೆಲೆ ಜಾಸ್ತಿಯಾಗಿದೆ, ಎಂಬ ಕೂಗನ್ನು

ಹೇಳುತ್ತಾ ಇದ್ದಾರೆ. ಇದು ಬಹಳ ವ್ಯಸನಪಡತಕ್ಕ ವಿಚಾರ. ವ್ಯವಸಾಯದ ಉತ್ಪನ್ನ ಮಾಡತಕ್ಕ ರೈತರು ದೇಶದಲ್ಲಿ ಶೇಕಡ 80 ಭಾಗ ಇದ್ದಾರೆ. ಉಳಿದ ಕೊಂಡುಕೊಂಡು ತಿನ್ನತಕ್ಕ ಜನ ಶೇಕಡ 20 ಭಾಗ ಇದ್ದಾರೆ. ಶೇಕಡ 80 ಭಾಗದ ಜನರಿಗೆ ರಕ್ಷಣೆ ನೀಡುವುದು ಯೋಗ್ಯವೇ ಅಥವಾ ಶೇಕಡ 20 ಭಾಗದ ಜನ ಕೊಂಡುಕೊಂಡು ತಿನ್ನತಕ್ಕವರಿಗೆ ರಕ್ಷಣೆ ಕೊಡುವುದು ಯೋಗ್ಯವೇ ಎಂಬುದನ್ನು ನೋಡಬೇಕು. ವ್ಯವಸಾಯಗಾರರು ಬರೀ ವ್ಯವಸಾಯವನ್ನೇ ಮಾಡಿಕೊಂಡು ಇದಿದ್ದರೆ ಬಹುಶಃ ಈ ಮಾತನ್ನು ನಾನು ಇವತ್ತು ಹೇಳುತ್ತಾ ಇರಲಿಲ್ಲ. ಇವತ್ತಿನ ದಿವಸ ಜನಸಂಖ್ಯೆ ಜಾಸ್ತಿ ಯಾಗುತ್ತಾ ಇದೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಜಮೀನು ಪಾಳು ಬಿದ್ದ ನಿದರ್ಶನಗಳು ಇವೆ. ಈಗ ಫಾರಸ್ಟ್ ಇಲಾಖೆಯವರೂ ಎಷ್ಟೋ ಜಮೀನುಗಳನ್ನು ಸಾಗಿಗೆ ಕೊಟ್ಟರೂ ಆಹಾರದ ಅಭಾವ ಕಾಣುತ್ತಾ ಇದೆ. ಈ ರೀತಿ ಏಕೆ ಆಗುತ್ತಾ ಇದೆ ಎಂಬುದನ್ನು ನಾವು ಇವತ್ತಿನ ದಿವಸ ಮುಖ್ಯ ವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಈಗ ಅವರಿಗೆ ಸರಿಯಾದ ಧಾರಣೆ ಸಿಕ್ಕುತ್ತಾ ಇಲ್ಲ. ಈಗಿರತಕ್ಕ ಧಾರಣೆ ಇದ್ದದ್ದರಲ್ಲಿ ಸ್ವಲ್ಪ ಅನುಕೂಲವಾಗಿದ್ದರೂ ಅದು ಸಾಲದು ಎಂಬುದನ್ನು ನಾವು ಇವತ್ತಿನ ದಿವಸ ಹೇಳಲೇಬೇಕಾಗಿದೆ. ವ್ಯವಸಾಯದ ಇಲಾಖೆಯವರು ಹೇಳುತ್ತಾ ಇದ್ದಾರೆ, ಒಂದು ಎಕರೆಯಲ್ಲಿ ಬತ್ತ ಬೆಳೆಯಬೇಕಾದರೆ ಎಷ್ಟು ಖರ್ಚು ಬಂತು ಎಷ್ಟು ಉತ್ಪನ್ನ ಬಂತು ಎಂಬ ಬಗ್ಗೆ ಅವರಲ್ಲಿ ಲೆಕ್ಕ ಇದೆ ಎಂದು ಲೆಕ್ಕಾಚಾರ ಹಾಕಿ ನೋಡಿದರೆ ಈಗಿರತಕ್ಕ ಧಾರಣೆವಾಸಿ ಕಡಿಮೆ ಇನ್ನೂ ಕೂಡ ಜಾಸ್ತಿ ಮಾಡಬೇಕು, ಮಾಡದೇ ಹೋದ ಪಕ್ಷದಲ್ಲಿ ಆಹಾರದ ಕೊರತೆ ಇದ್ದೇ ಇರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಅನೇಕ ಜನ ರೈತರು ಆಹಾರ ಧಾನ್ಯಗಳಿಗೆ ಧಾರಣೆವಾಸಿ ಕಡಿಮೆ ಬರುತ್ತದೆ ಎಂದು ಹೇಳಿ ಹೆಚ್ಚು ಧಾರಣೆವಾಸಿ ಬರತಕ್ಕ ಅಡಿಕೆ, ತೆಂಗು, ದ್ರಾಕ್ಷಿ ತೋಟ ಗಳನ್ನು ಮಾಡುತ್ತಾ ಇದ್ದಾರೆಯೇ ಹೊರತು ದಿನಂಪ್ರತಿ ಉಪಯೋಗ ಮಾಡತಕ್ಕ ಆಹಾರ ಧಾನ್ಯಗಳ ಬೆಳೆಯನ್ನು ಕಡಮೆ ಮಾಡುತ್ತಾ ಇದ್ದಾರೆ. ಇದನ್ನು ನಾವೆಲ್ಲರೂ ಯೋಚನೆ ಮಾಡ ಬೇಕಾಗಿದೆ. ಸರಕಾರದವರೂ ಇದರ ಬಗ್ಗೆ ಸೂಕ್ತವಾದ ಒಂದು ತೀರ್ಮಾನವನ್ನು ತೆಗೆದುಕೊಂಡು ಆಹಾರ ಧಾನ್ಯಗಳಿಗೆ ನ್ಯಾಯವಾದ ಒಂದು ದರವನ್ನು ನಿಗದಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಪಂಚಾಯ್ತಿ ವ್ಯವಸಾಯೋತ್ಪಾದನೆ ಯೋಜನೆಗಳನ್ನು ಸಕಲ ಪಂಚಾಯತಿಗಳಲ್ಲೂ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ನ್ಯಾಯವಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಈ ಯೋಜನೆಯ ಮೂಲಕ ಒದಗಿಸತಕ್ಕ ಸೌಲಭ್ಯಗಳನ್ನು ಗ್ರಾಮನೌಕರರ ಮೂಲಕ ಒದಗಿಸಲು ಏರ್ಪಾಡು ಮಾಡಿದ್ದೀರಿ ಆದರೆ ಅವರು ರಚನಾತ್ಮಕವಾಗಿ ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಏರ್ಪಾಡುಗಳನ್ನು ತಾವು ಮಾಡಬೇಕು ; ಎಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಮಳೆ ಬೆಳೆಗಳ ವಿಶೇಷ ಪರಿಸ್ಥಿತಿಯ ವಿಷಯವನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಭಾರಿ ಮಳೆ ಬೀಳುವ ಪ್ರದೇಶಗಳಲ್ಲೂ ಭಾರೀ ಪ್ರಮಾಣದ ಪ್ರವಾಹಗಳೇನೂ ಇರಲಿಲ್ಲ, ಮಳೆ ಬಿದ್ದುದೇ ತಡವಾಗಿ, ಬಿದ್ದ ಮಳೆಯೂ ಕಡಿಮೆ, ಇದರಿಂದಾಗಿ ಪೂರ್ವ ಭಾಗದ ಕೆಲವು ಜಿಲ್ಲೆಗಳಲ್ಲಿ ಮುಖ್ಯ ವಾಗಿ ಚಿತ್ರದುರ್ಗ, ತುಮಕೂರು, ಕೋಲಾರ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆ ಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ ಎಂದು ಹೇಳಿದ್ದಾರೆ ಇದು ವ್ಯಸನಕರವಾದ ಸಂಗತಿ. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯಾಗದೇ ಅನೇಕ ಕಡೆ ಫಸಲು ಆಗಿಲ್ಲ ಹಾಗೂ ನೀರಿನ ಆಶ್ರಯವಿರತಕ್ಕ ಕೆಲವು ಭಾಗಗಳಲ್ಲೂ ಅನೇಕ ರೋಗಗಳು ಬಂದು 20 ಪಲ್ಲ ಬೆಳೆಯುವ ಕಡೆ 10–12 ಪಲ್ಲಾ ಬೆಳೆಯಾಗಿದೆ. ಅದನ್ನೂ ತಾವು ವಿಚಾರ ಮಾಡಬೇಕಾಗಿದೆ ಎಂಬುದನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನೀರಿನ ಬಾವಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಅಂಕಿಅಂಶಗಳ ಪ್ರಕಾರ ನೋಡಿದರೂ ಎಷ್ಟು ಮಟ್ಟಿಗೆ ತಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾ ಇದ್ದಾರೆ ಎಂಬುದು ಅರ್ಥವಾಗುತ್ತದೆ. ಮಂಜೂರಾಗಿರತಕ್ಕ 27,500 ಬಾವಿಗಳ ಪೈಕಿ ಅರ್ಧ ಆಗಿವೆ, ಇನ್ನು ಅರ್ಧ ಆಗಿಲ್ಲ ಎಂದು ಅವರೇ ಹೇಳುತ್ತಾರೆ. ಆದ್ದರಿಂದ ಪಂಪ್‌ಸೆಟ್ಟುಗಳು ಇನ್ನೂ ಹೆಚ್ಚಾಗಿ ಕೆಲಸ ಮಾಡುವಂತಹ ಏರ್ಪಾಡನ್ನು ತಾವು ಮಾಡಬೇಕೆಂದು ಹೇಳುತ್ತೇನೆ.

ಕೈಗಾರಿಕೆಗಳಿಗೆ ಸಂಬಂಧಪಟ್ಟ ವಿಚಾರ. ಭದ್ರಾವತಿ ಕಾರ್ಖಾನೆಯಲ್ಲಿ 77,000 ಟನ್ನು ಗಳಷ್ಟು ವಿಶೇಷ ರೀತಿಯ ಉಕ್ಕನ್ನು ಉತ್ಪನ್ನ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ಸಂತೋಷದ ಸಂಗತಿ. ಅಲ್ಲಿ ಕಾರ್ಮಿಕರಿಗೆ ವಸತಿ ಸೌಕರ್ಯದ ಬಗ್ಗೆ ಯಾವ ಒಂದು ವಿಚಾರವನ್ನೂ ಪ್ರಸ್ತಾಪ ಮಾಡಿಲ್ಲ. ಕೈಗಾರಿಕೆ ಎಲ್ಲಿ ಬೆಳೆಯುತ್ತದೆಯೋ ಅಲ್ಲಿ ಕಾರ್ಮಿಕರಿಗೆ ವಾಸಕ್ಕೆ ಸರಿಯಾದ ಮನೆ ಇಲ್ಲದೇ ಹೋದರೆ ಅವರು ಕಾರ್ಖಾನೆಯಲ್ಲಿ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಲ್ಲಿ ಕೆಲಸ ಮಾಡುತ್ತಾರೆಯೋ ಅಲ್ಲಿ ಬಿಸಿಲು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಮತ್ತು ಬೆಂಕಿಯ ಶಾಖ ವಿಪರೀತವಾಗಿರುತ್ತದೆ. ಅಂತಹವರು ಹುಲ್ಲು ಗುಡಿಸಿಲಿನಲ್ಲಿ ವಾಸ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕಾರ್ಮಿಕರ ವಸತಿ ಸೌಕರ್ಯಕ್ಕೆ ಸ್ವಲ್ಪ ಹಣವನ್ನು ಒದಗಿಸಿದ್ದರೆ ಚೆನ್ನಾಗಿತ್ತು. ಆ ವಿಷಯವನ್ನು ಇದರಲ್ಲಿ ಪ್ರಸ್ತಾಪ ಮಾಡದೇ ಇರುವುದು ಅಷ್ಟು ಸಮಂಜಸವಾಗಿ ಕಾಣುತ್ತಾ ಇಲ್ಲ. ಮಾನ್ಯ ಹಣಕಾಸಿನ ಸಚಿವರು ಈ ಬಡ್ಜೆಟ್ಟಿನಲ್ಲೇ ವಸತಿಗೃಹಗಳ ರಚನೆಗೆ ಹಣ, ಒದಗಿಸುತ್ತಾರೆಂದು ನಂಬಿದ್ದೇನೆ. ರಾಜ್ಯಪಾಲರು ಕನ್ನಡದಲ್ಲೇ ಭಾಷಣ ಮಾಡಿರುವುದನ್ನು ಗಮನಿಸಿ ಅಧ್ಯಕ್ಷರೂ ಸಹ ಕನ್ನಡದಲ್ಲೇ ಉತ್ತರ ಕೊಡಬೇಕೆಂದು ಪ್ರಾರ್ಥನೆಮಾಡಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

ಅಧ್ಯಕ್ಷರು.—ನನಗೆ ಯಾರೂ ಆ ರೀತಿ ಪ್ರಶ್ನೆ ಹಾಕುವುದಿಲ್ಲ, ಹಾಕಿದರೆ ಕನ್ನಡದಲ್ಲೇ ಉತ್ತರ ಕೊಡಬಹುದು.

† ಶ್ರಿ ಕೆ. ದೇವಯ್ಯ (ಮಲ್ಲೇಶ್ವರಂ)—ಮೈಸೂರು ರಾಜ್ಯಪಾಲರು ತಾವು ಮಾಡಿದ ಭಾಷಣ ದಲ್ಲಿ ಒಂದು ಹೊಸ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಅವರು ನಮ್ಮ ರಾಜ್ಯದಲ್ಲಿ ಕನ್ನಡದಲ್ಲೇ ಭಾಷಣಮಾಡಿದ್ದು ಬಹಳ ಸಂತೋಷಕರ.

ನಮ್ಮ ಅನೇಕ ಸ್ನೇಹಿತರುಗಳು ಆಡಳಿತ ವಿಚಾರದಲ್ಲಿ ಮಾತನಾಡಿದ್ದಾರೆ, ನಾನೂ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನಾಡಲಿಚ್ಛಿಸುತ್ತೇನೆ. ಬೆಂಗಳೂರು ಕಾರ್ಪೊರೇಷನ್ ಪ್ರದೇಶದ ಕಷ್ಟನಷ್ಟಗಳನ್ನು ನೋಡಿ ಒಳ್ಳೆಯ ಉದ್ದೇಶದಿಂದ ಕಾವೇರಿ ನದಿಯ ನೀರನ್ನೊದಗಿಸಲು ತೀರ್ಮಾನಿಸಿದ್ದಾರೆ. ಅದಕ್ಕಾಗಿ ಬೇಕಾದ ಪೈಪುಗಳಿಗೆ ಆರ್ಡರು ಕೊಟ್ಟಿದ್ದಾರೆ. ಆದುದರಿಂದ ಕಾರ್ಪೋರೇಷನ್ನಿನ ಪರವಾಗಿ ವಿಧಾನಸಭೆಯ ಸದಸ್ಯರಿಗೆ ವಂದಿಸುತ್ತೇನೆ. ಇನ್ನೊಂದು ವಿಚಾರ ವೇನೆಂದರೆ ನಮ್ಮ ಕಾರ್ಪೋರೇಷನ್ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಉಪನಗರಗಳ ನಿರ್ಮಾಣದ ವಿಚಾರವನ್ನು ಸಹ ನಮೂದಿಸಿದ್ದಾರೆ. ಹಾಗೆ ಮಾಡುವುದು ಹಿತಕರ. ಪ್ರತಿವರ್ಷವೂ ಕೊಳಕು ಪ್ರದೇಶಗಳನ್ನು ನಿರ್ಮೂಲ ಮಾಡುವುದಾಗಿ ಕಾರ್ಪೊರೇಷನ್‌ನವರು ಮತ್ತು ಸರ್ಕಾರ ದವರು ಹೇಳುತ್ತಿದ್ದಾರೆ. ಆದರೆ ಇದುವರೆಗೆ ಆ ಸಂಬಂಧದಲ್ಲಿ ಸರಿಯಾದ ಕೆಲಸವೇನೂ ಆಗಿಲ್ಲ. ದಿನೇ ದಿನೇ ಕೊಳಕುಪ್ರದೇಶ ಬೆಳೆಯುತ್ತಿದೆ. ನಮ್ಮಲ್ಲಿ ಅನೇಕ ಸರ್ಕಾರಿ ಕಾರ್ಖಾನೆಗಳಿವೆ, ಎಚ್. ಎಂ. ಟಿ., ಎಚ್. ಎ. ಎಲ್., ಐ. ಟಿ. ಐ. ಮುಂತಾದ ಅನೇಕ ಕಾರ್ಖಾನೆಗಳು ಕಾರ್ಪೊ ರೇಷನ್ ಪ್ರದೇಶಕ್ಕೆ ದೂರವಾಗಿ ಸ್ಥಾಪಿಸಲ್ಪಟ್ಟಿವೆ ಮತ್ತು ಅವುಗಳ ನೌಕರರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಆದರೂ ಕೂಡ ಸಾವಿರಾರು ಕೆಲಸಗಾರರು ಪಟ್ಟಣದಿಂದ ಕಾರ್ಖಾನೆಗಳಿಗೆ ಹೋಗಿ ಬರುತ್ತಿದ್ದಾರೆ. ಅವರಲ್ಲಿ ಕೆಲವರು ಸ್ಲಂಪ್ರದೇಶಗಳಲ್ಲಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟರೆ ಸ್ಲಂ ಕ್ಲಿಯರ್ ಆಗುವುದಲ್ಲದೆ ಬೆಂಗಳೂರು ನಗರದಲ್ಲಿ ಮನೆಗಳ ಅಭಾವವೂ ಕಡಮೆ ಯಾಗುತ್ತದೆ, ಸ್ಲಂ ಡೆವಲಪ್ ಆಗುವುದೂ ಕಡಮೆಯಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇಷ್ಟು ಮಾತ್ರವೇ ಅಲ್ಲದೆ, ಕಾರ್ಖಾನೆಗಳ ಬಳಿ ಕಟ್ಟಿಸಿದ ಮನೆಗಳಿಗೆ ಸ್ಲಂಪ್ರದೇಶದಲ್ಲಿರುವವರು ಹೋದಮೇಲೆ ಅವರಿದ್ದ ಗುಡಿಸಲುಗಳನ್ನು ಇನ್ನೊಬ್ಬರಿಗೆ ಕೊಡದ ಹಾಗೆ ನೋಡಿಕೊಳ್ಳಬೇಕಾದುದು ಕಾರ್ಪೊರೇಷನ್ ಮತ್ತು ಸರ್ಕಾರದ ಕರ್ತವ್ಯ.

ಇನ್ನೊಂದು ವಿಷಾದ ವಿಚಾರ. ಬೆಂಗಳೂರಿನಲ್ಲಿ ಆಹಾರ ಪದಾರ್ಥಗಳ ಬೆಲೆ ಇಡೀ ಭಾರತ ದಲ್ಲೇ ಹೆಚ್ಚಿನದು, ಜೀವನಮಟ್ಟ ಏರಿದೆ, ಏರಿದೆ ಎಂಬುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಕೆಲವು ತಿಂಗಳ ಹಿಂದೆ ಹುಡುಗರು ಉಪವಾಸ ಮಾಡಿದ ಮೇಲೆ 200 ರೂಪಾಯಿಗಳ ಮೇಲೆ ತಿಂಗಳಿಗೆ ಸಂಪಾದನೆ ಇರುವವರ ಮಕ್ಕಳಿಗೆ ಶುಲ್ಕದ ರಿಯಾಯಿತಿ ತೋರಿಸಿರುತ್ತಾರೆ. ಹಾಗಿರುವಾಗ 200 ರೂಪಾಯಿಗಳಿಗಿಂತ ಕಡಮೆ ವರಮಾನವಿರುವವರಿಗೆ ಜೀವನ ಎಷ್ಟು ಕಷ್ಟತರವಾಗಿರು ತ್ತದೆಂಬುದನ್ನು ನಾನು ಹೇಳಬೇಕಾಗಿಲ್ಲ. ಆ ದೃಷ್ಟಿಯಿಂದ ಹೇಳುವುದಾದರೆ ಕಾರ್ಪೊರೇಷನ್ 5 ವರ್ಷಗಳಿಗೊಮ್ಮೆ ಕಂದಾಯ ಹೆಚ್ಚಿಸುತ್ತಿದೆ, ಹೆಚ್ಚಿನ ಬಾಡಿಗೆ ಬಂದರೆ ಕಂದಾಯ ಜಾಸ್ತಿ ಮಾಡು ತ್ತಿದೆ. ಆ ನೆಪದಿಂದ ಮನೆ ಮಾಲೀಕರು ಬಾಡಿಗೆದಾರರಿಂದ ಹೆಚ್ಚು ಬಾಡಿಗೆ ವಸೂಲು ಮಾಡುತ್ತಾರೆ ಮತ್ತು ಹೆಚ್ಚು ಕಿರುಕುಳ ಕೊಡುತ್ತಾರೆ. ಅಲ್ಲದೆ ಬಿಲ್ಡಿಂಗ್ ಟ್ಯಾಕ್ಸ್ ಅನ್ನು ಬೇರೆ ವಿಧಿಸಿದ್ದಾರೆ. ಇದನ್ನು ಉಪಯೋಗ ಮಾಡಿಕೊಂಡು ಮಾಲೀಕರು ಬಾಡಿಗೆಯನ್ನೂ ಇನ್ನೂ ಹೆಚ್ಚಿಸುವ ಪರಿಸ್ಥಿತಿ ಯಲ್ಲಿದ್ದಾರೆ. ಇದರಿಂದ ಬಡ ನೌಕರರ ಮಾತು ಜನರ ವಾಸದ ಮನೆಯ ವಿಚಾರ ಬಹಳ ಕಷ್ಟತರ ವಾಗಿದೆ. ಈ ದೃಷ್ಟಿಯಿಂದ ಸರ್ಕಾರದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಮನೆ ಬಾಡಿಗೆ ಭತ್ಯ ಮತ್ತು ತುಟ್ಟಿ ಭತ್ಯ ಕೊಡುತ್ತಿರುವುದನ್ನು ಹೆಚ್ಚಿಸಿ ಯಾವ ಪಟ್ಟಣಗಳಲ್ಲಾಗಲಿ ಅದರಲ್ಲೂ ಬೆಂಗಳೂರಿ ನಲ್ಲಿರುವ ನೌಕರರಿಗೆ ಸೌಕರ್ಯ ಕಲ್ಪಿಸಿ ಕೊಡಬೇಕು. ಈ ವಿಚಾರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿಲ್ಲ.

ಆಮೇಲೆ ಕಾರ್ಪೊರೇಷನ್ನಿಂದ 1954ನೆಯ ಇಸವಿಯ ಲಾಗಾಯ್ತು ಅನೇಕ ಬೇಡಿಕೆಗಳು, ಕಾನೂನಿನ ತಿದ್ದುಪಡಿಗಳು ಸರ್ಕಾರಕ್ಕೆ ಕಳುಹಿಸಲ್ಪಡುತ್ತಿವೆ. ಅವಕ್ಕೆ ಇಲ್ಲಿಯವರೆಗೂ ಹೆಚ್ಚಿನ ಬೆಲೆ ಬಂದಿಲ್ಲ. ಸುಮಾರು 14 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಈ ನಗರದಲ್ಲಿರುವ ಕೌನ್ಸಿಲರುಗಳ ಕಷ್ಟದ ಕಡೆ ಗಮನ ಕೊಡಬೇಕು. ಅವರಿಗೆ ಬೇರೆ ರೀತಿಯ ಸಂಪಾದನೆಯಿದೆ, ಕಷ್ಟವಿಲ್ಲ ಎಂಬ ಭಾವನೆಯಿದೆ. ಆದರೆ ನಿಷ್ಠಾವಂತರಾಗಿ ಜನಸೇವೆ ಮಾಡುವ ಬಡವರಿಗೆ ಬಹಳ ಅನ್ಯಾಯವಾಗಿದೆ. ನಾನು ಈ ಸಭೆಗೆ ಇಂದು ಪ್ರಾತಃಕಾಲ 8½ ಗಂಟೆಗೆ ಬರಬೇಕಾಗಿತ್ತು. ಆದರೆ ಒಂದು ರಸ್ತೆ ನಿರ್ಮಾಣ ಕಾರ್ಯವನ್ನು ನೋಡಿಕೊಂಡು ತಕ್ಕ ವ್ಯವಸ್ಥೆ ಮಾಡಿ ಬರಬೇಕಾಗಿತ್ತು, ಅದರಿಂದ ತಡ ವಾಯಿತು. ಕಾರ್ಪೊರೇಷನ್ ಸದಸ್ಯರು ಹಗಲೂ ರಾತ್ರಿ ದುಡಿದು ಜನರಿಗೆ ಸೌಕರ್ಯ ಕಲ್ಪಿಸಬೇಕು. ಇಲ್ಲಿನ ಮೀಟಿಂಗ್‌ನ ಜೊತೆಗೆ ಕಾರ್ಪೊರೇಷನ್ನಿನ ಬಡ್ಜೆಟ್ ಮೀಟಿಂಗ್ ಸಹ ಇರುತ್ತದೆ. ಇಷ್ಟೆಲ್ಲಾ ನೋಡಿಕೊಂಡು ನಾವು ಬದುಕುವ ದಾರಿಯ ಕಡೆಗೂ ಗಮನ ಕೊಡಬೇಕಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಅವರಿಗೆ ಒಂದು ಸಿಟಿಂಗ್ ಫೀಜನ್ನಾದರೂ ಕೊಡಬೇಕಾದುದು ನ್ಯಾಯವಾಗಿದೆ. ಅವರು ಕಷ್ಟದಿಂದ ಜೀವನ ಮಾಡಬೇಕಾಗಿದೆ. ನೀರಿನ ತೊಂದರೆ, ಸೊಳ್ಳೆಕಾಟ-ಇವುಗಳ ನಿವಾರಣೆಗೆ, ಬೆಂಗಳೂರಿನಲ್ಲಿ ಉದ್ಯಾನವನಗಳ ನಿರ್ಮಾಣ ಮುಂತಾದ ಕಾರ್ಯಗಳಿಗಾಗಿ ಬಹಳ ಗಮನ ಕೊಡಬೇಕು. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ.

12-00 NOON

ಆಮೇಲೆ ವಿದ್ಯಾಭ್ಯಾಸದ ವಿಚಾರ ಬೆಂಗಳೂರು ಪಟ್ಟಣದಲ್ಲಿ ಪ್ರೈಮರಿ ಎಜುಕೇಷನ್ನನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ. ಬಡ ವಿದ್ಯಾರ್ಥಿಗಳು ಹಾಗೂ ಪ್ರೈಮರಿ ವಿದ್ಯಾಭ್ಯಾಸ ಪಡೆಯುವ ಹುಡುಗರು ಯಾವ ವಾತಾವರಣದಲ್ಲಿದ್ದಾರೆ, ಮತ್ತು ಶಾಲೆಗಳನ್ನು ಯಾವ ರೀತಿ ನಡೆಸಿಕೊಂಡು ಬರಲಾಗುತ್ತಿದೆ ಎಂದು ನೋಡಲು ಹೋದರೆ ಅದೆಲ್ಲ ಬಹು ಶೋಚನೀಯ ವಾಗಿದೆ. ಸಿಟಿಯಲ್ಲಿರುವ ಸ್ಲಾಟರ್ ಹೌಸುಗಳಲ್ಲಿ ಯಾವ ರೀತಿ ಕುರಿಗಳ ಕತ್ತುಗಳನ್ನು ಕತ್ತರಿಸುತ್ತಿದ್ದಾರೋ ಹಾಗೆ ಈ ಶಾಲೆಗಳಲ್ಲಿ ಕುರಿಗಳಂತೆ ಹುಡುಗರನ್ನು ತುಂಬಿಕೊಂಡು ಪಾಠ ಹೇಳುತ್ತಿದ್ದಾರೆ, ಹೀಗಾದರೆ ವಿದ್ಯೆ ಕಲಿಯಲು ಸಾಧ್ಯವೇ ? ಶಾಲೆಗಾಗಿ ಸರಿಯಾದ ಕಟ್ಟಡಗಳಿಲ್ಲ. ಖಾಸಗಿಯವರು ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಸರಕಾರದವರು ಹೇಳುತ್ತಾರೆ. ಈಗಿರುವ ವಾತಾವರಣದಲ್ಲಿ ಶಾಲೆಗಳಲ್ಲಿರುವ ಹುಡುಗರ ಆರೋಗ್ಯ ಕೆಡುತ್ತದೆ. ಸರಿಯಾಗಿ ಗಾಳಿ ಬೆಳಕು ಇಲ್ಲದಿರುವ ಕೊಠಡಿಗಳಲ್ಲಿ ಇಂದು ಶಾಲೆಗಳು ನಡೆಯುತ್ತಿವೆ. ನಿನ್ನೆ ದಿನ ನಾನು ಒಂದು ಶಾಲೆಯಲ್ಲಿ ಒಂದು ಉತ್ಸವದ ಅಧ್ಯಕ್ಷತೆಯನ್ನು ವಹಿಸಿದ ಸಂದರ್ಭದಲ್ಲಿ ಅಲ್ಲಿರುವ ಉಪಾಧ್ಯಾಯರುಗಳು ಹಾಗೂ ಶಾಲೆಯಲ್ಲಿನ ಹೆಣ್ಣುಮಕ್ಕಳು ಅಲ್ಲಿನ ಜಾಗಗಳನ್ನೆಲ್ಲಾ ತೋರಿಸಿದರು, ಅದನ್ನು ನೋಡಿದರೆ ಅಲ್ಲಿ ಕುಳಿತುಕೊಂಡು ಸರಿಯಾಗಿ ಪಾಠಗಳನ್ನು ಕಲಿಯಲೇ ಆಗುತ್ತಿಲ್ಲ. ಇದನ್ನೆಲ್ಲ ತಡೆಗಟ್ಟಬೇಕಾದುದು ಅಗತ್ಯ. ಸರಕಾರದವರು ಯಾವರೀತಿ ಕಾರ್ಪೊರೇಷನ್ನು ಏರಿಯಾದಲ್ಲಿ ಪೋಲೀಸು ಸ್ಟೇಷನ್ನು, ಆಸ್ಪತ್ರೆ ಮಾಡುತ್ತೀರೋ ಅದೇರೀತಿ ಮೂವ್ವತ್ತುಸಾವಿರ ಜನಸಂಖ್ಯೆಯುಳ್ಳ ಭಾಗದಲ್ಲಿ ವಿಧ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಾಕಷ್ಟು ಆಟದ ಮೈದಾನ ಪ್ರತಿಯೊಂದು ಶಾಲಾ ಸಂಸ್ಥೆಗಳಲ್ಲೂ ಇರಬೇಕು ಎಂದು ಕಡ್ಡಾಯ ಮಾಡುವುದು ಒಳ್ಳೆಯದು ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri V. S. PATIL.—Sir, though two days are over, only 30 minutes are given to us. We are now debating the Governor's Address and I do not understand how all these small matters regarding villages and taluks become relevant at all and why the Chair is not checking the members when they are going astray.

Mr. SPEAKER.—It is for the members to co-operate. I am willing to remind them that they should not go into details.

† **Sri GANJI VEERAPPA** (Harihar).—Mr. Speaker, Sir as is rightly pointed out by my frined Sri V. S. Patil, this is an occasion on which we should confine ourselves to matters of broad policy that are enunciated in the Address of the Gevernor. While expressing satisfaction at the Address wherein the progress so far made by the State has been mentioned, I am not one of those who are complascent or feel that every-hing the people of the State expects has been achieved. The achivement

(SRI GANJI VEERAPPA)

may not be to our expectation, but to a satisfactory limit progress has been made. Even in the Governor's Address it has been mentioned that though the plan outlay is Rs. 250 crores, the expenditure is only to the extent of Rs. 110 crores which amounts to 44 per cent. Now, only two years more remain and all our developmental activities and plan targets must be achieved within that short period. So the remaining two years is a period of great importance.

Sri B. D. JATTI (Minister for Finance).—The figure that has been given is not the latest figure. Some addition will have to be made.

Sri GANJI VEERAPPA.—Thank you. I do not know what else is in store when the budget is presented before this House within the course of two days by the Finance Minister. Let us not anticipate all that.

Mr. SPEAKER.—I think a large number of members desire to participate in the debate. I may also mention to the House that on Monday we will be sitting in the morning when the Budget will be presented so that it can get due publicity in the News papers without any delay. Now, the point is whether we should sit in the afternoon or not. If the members are willing to sit in the afternoon, I am also willing. That will give us extra time for the discussion of the Governor's Address. We will have this discussion on Tuesday also. Can we sit for a couple of hours in the afternoon on Monday to continue the debate ? Such of those as are willing can come. Anyway, we shall decide this matter on Monday after the Budget is presented.

Sri C. J. MUCKANNAPPA.—There is some sanctity attached to the budget and we should not take up any business after the presentation of the budget.

Mr. SPEAKER.—It does not lose any sanctity by our taking up some Business after the presentation of the Budget. The time is intended for the study of the Budget. The figures are voluminous and the schemes are multitudinos and the main object with which time is granted is to enable member to study them and participate in the Debate.

Sri C. J. MUCKANNAPPA.—In the midst of *rahukala* the budget will be presented.

Mr. SPEAKER.—The Hon'ble Member is fallacious as usual. The first hour will be devoted to the Question hour and the Budget will be presented at 9-30 a. m.

Sri GANJI VEERAPPA.—With regard to our plans what is happening is that the Planning Commission and the Government of India have not given us the same consideration which they have given to the neighbouring States. If we take into consideration the very big power projects which are being worked out in the neighbouring States, the Central Government is giving the entire amount to them out of their own funds. But in our State a big power project like the Sharavathy Project has to be financed from our own resources which are very meagre. We have to pay for every item of expenditure on the Sharavathy Project

from our own funds and it is a very big burden on us. If we are to repay this loan to the Centre every year, then perhaps payment of interest alone will be so huge that it will affect our resources very badly. Take for instance, the Tungabhadara Project. The entire money spent on these two projects will have to be borne by us. That is not correct. If you see the Neyvelli project in Madras that is not the position. We expect the Centre to give the same treatment to us as they are giving to others with regard to the execution of these huge projects which are of national importance. In such cases the State alone should not be made to meet the expenditure from its poor resources, but, unfortunately, that is what is happening in Mysore. Speaking about the Kundah Project in Madras the full cost is given as Central aid. So I make an appeal to our Government to bring pressure on the Central Government and tell tham that we should also be given similar assistance from the Centre and, that for the big projects under excution we should not be asked to repay the loan given by them. In the case of the Upper Krishna project it is in a famine stricken area and it is not fair for the Central Government to ask us to bear the expenditure on the same from our own poor resources. If the Centre does not give assistance for that, we will have to think of fresh taxation measures to finance it when we are already overburdened with taxes. I hope the Finance Minister will impress upon the Planning Commission and the Central Government to consider these things more seriously.

Hon'ble members will agree with me that the prosperity of any country will depend upon its irrigation potentiality and its agricultural production. Our State is poor in irrigation and our percentage is only 7 to 8 per cent of land under irrigation whereas in the neighbouring States it is something like 40 to 46 per cent. Even then they are going on with gigantic projects and we are not progressing with our irrigation projects for want of funds. We must protest against this step-motherly treatment by the Centre. Some of the big irrigation and power projects must be taken up and worked up. Otherwise there will be no progres So we must press our case before the Centre for consideration at their hands.

Speaking about the Upper Krishna Project, a controversy seems to have been raised and we hear from press reports that the Union Irrigation Minister is going to come here. There is a controversy about the place where the dam is to be constructed, whether it should be in Almatti or in Narayanapura. Wherever it may be, the fact remains that our State is going to be benefited by it and it is a matter for our Engineers to decide where exactly the dam must be situated. I belong neither to Bijapur nor to Gulbarga. I hear that if the dam is constructed at Almatti it will take away the benefit that Gulbarga District will otherwise get. That is what, I think, the hon'ble Member Nomoshi made out in his speech. So far as we are concerned we feel that both Bijapur District and Gulbarga District should get the benefit and from that point of view it is said that Almatti will be more suitable. Anyway let us not leave the decision to any outsider and let us leave the decision to

(SRI GANJI VEERAPPA)

our Engineers to decide upon the more suitable place. If we leave the decision to the Central Government, the decision may not be quite favourable to us because if Narayanpur is taken up the surplus water will flow to the neighbouring State. That is why we should not leave the decision to the Central Government and let us not invite Dr. K. L. Rao to give a finding on this issue.

Sri G. V. GOWDA.—If we decide ourselves, and if the Central Government does not give technical clearance, what is to happen ?

Sri GANJI VEERAPPA.—I am told that the Centre has no objection to the construction of the dam at any of these two places. So let us not bother about technical clearance.

With regard to Cauvery waters, I am happy to learn that the Yagati project is to be taken up. I suggest that some more projects coming under the Cauvery basin also may be taken up. Otherwise we are likely to use the waters reserved for us under the 1924 Agreement. So some of these projects on the Cauvery basin must be given top priority. In this connection I may also mention that the Vedavati river has great potentialities and they can be further improved by diversion of the Yegachi to Vedavati. Sir, that will give an additional acreage of nearly 30,000 acres in Chitaldruga District and some more in the neighbouring District. In fact in Hassan District about 40,000 acres will be irrgiated if this project is taken up. I suggest that this project of diversion of water from Yagachi to Vedavathi may be seriously taken up so that with minimum expenditure, we will benefit a large area of two arid districts. The Government may kindly take up this question.

One other matter which is not found in the Governor's Address, as one my friends suggested, is with regard to prohibition. It is a very controversial matter and much can be said on both sides.

Sri B. D. JATTI.—So long as there is no change of policy, it cannot be mentioned in the Governor's address.

Sri GANJI VEERAPPA.—I can voice my feelings. I say that time has come for re-thinking, serious re-thinking and to take an immediate decision to continue it or to scrap it. If you want to continue it, what I suggest is, that the measures of enforcement must be very rigid. If you do not want to continue it, remove it so that there may not be any *via media* between the two, because it affects the State's resources very much. With regard to another matter regarding which I want to give my expression is this : It has been agitating the minds of the Members of this House that the reorganisation of the districts should be done on a rational basis. In fact, I am eager to have Davangere and Bagalkot as two new Districts.

Sri B. D. JATTI.—We can understand what are your feeling even if you are not eager.

Sri GANJI VEERAPPA.—Even from the point of view of administration, there are very small and huge districts; some districts have a population of 18 to 20 lakhs of people. So, with regard to these things, it is better that a decision is taken and I for one would feel that some of these places like Bagalkot and Davangere deserve to be converted into new districts. If there are other places which are conveniently fit for location of district headquarters, make them by all means also as districts. The question may be analysed and decision taken.

With regard to scarcity conditions prevailing in the State, it is very unfortunate that nature has been so unkind to us. Speaking from my personal knowledge, in Chitradruga, Devendra was not kind to 'us, and many of the Taluk in Chitaldrug have been terribly affected. Sir, it is time for the Government come to the rescue of the people who are in distress because a friend in need is a friend indeed. Some more relief measures in famine-stricken areas are necessary. I may even suggest that land revenue surcharge collections may be postponed for some time; not there must be remission because the agriculturist never bothers or hesitates to pay. He is the only honest person to pay. If he gets good crop, he will pay gladly. The Government may consider some of these questions of giving relief to famine-stricken areas because they are under very hard times.

The other thing which I would like to dwell upon is education. Sri Krishna was speaking about education. As a member of the Syndicate, if I do not express my feelings, I will be failing in my duty. The accusation was made that the Government in general and the Education Minister in particular had made discrimination bewteen the Karnatak University and the Mysore University in the matter of allocation of grants. Let us not hereafter think of Karnatak area, old Mysore area and Hyderbad Karnatak. After all, since 1956 we have all come together. This feeling of oneness must be there somehow. To my knowledge, of course, they have made no discrimination.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಸದಸ್ಯರು ಹರಿಹರ ಕ್ಷೇತ್ರದಿಂದ ಬಂದಿದ್ದಾರೆ. ಅವರು ಹರಿಹರ ಒಂದು ಮಾಡುವುದಕ್ಕೆ ಏನಾದರೂ ಸ್ವಲ್ಪ ತ್ಯಾಗ ಮಾಡಲಿ.

Sri GANJI VEERAPPA.—Even in matters of administration, there will be feelings between old Mysore Officers and integrated area officers. Some of us who are in the borders know that; people come us and tell us that there was discrimination in their case. To my knowledge so far as the university affairs are concerned in the matter of grants, as the Education Minister was pleased to announce here, at a meeting of the two Heads of Universities, they had come to an agreement with regard to grants. So I do not agree with Sri Krishna when he says that there has been discrimination in the matter of distribution of funds between the Karnata University and Mysore University. There are other matters like common syllabi where uniformity has to be brought about and they must receive our attention and as soon as possible, let us attain

(SRI GANJI VEERAPPA)

uniformity. Let there be no difference between Karnatak and Mysore Universities in regard to admissions to technical colleges. Unfortunately, in the matter of fee concessions and fee structure, there is a feeling especially among the students that certain areas are favoured whereas other areas are neglected. I congratulate the Government on there having appointed a Committee consisting of educationists to go into this question. Standards are falling. The general trend in India, let alone in Mysore, is that standards are lowering. There are many Failures. We must find out the real cause of this disease as to why there should be so much failure. There is no uniformity even in the teacher-pupil ratio. If you take one college, there the teacher-pupul ratio is 1 : 15. Take any college in Bangalore, Arts or Science college ; the ratio is 1 : 35 ; whereas in Mysore the ratio is 1 : 12 or 13. These things should be corrected. So how to improve the standards and how to eliminate the disease of so many failures should be a matter of reference to this Committee. They should go into this question and suggest ways and means of remedying them I think Sir time has come for the Govt. to rethink about our educational policy. It is very necessary for us to seriously think about this matter and improve standards whether it is with reference to the Karnatak University or Mysore University. After 10 years we must forget these differences and Mysore should be really integrated emotionally. I do not think there is need for me to dilate upon it any more. On the whole, the Address placed befor us is satisfactory and we have to agree with Sri Siddiah who has so able moved the Motion of Thanks.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರಕ್ಕಂಥ ಈ ರಾಜ್ಯಪಾಲರ ಭಾಷಣವನ್ನು ನೋಡಿದರೆ ಸರ್ಕಾರದವರು ಆಗಾಗ ನಮಗೆ ಕೊಡತಕ್ಕ ಅಡ್ಮಿನಿಸ್ಟ್ರೇಷನ್ ರಿಪೋರ್ಟ್‌ಗಳ ಹಾಗೆ ಇದೆ. ಅದೇ ರೀತಿ ಈಗಲೂ ಮಾಡದೆ, ಅಂತಹ ದೊಡ್ಡ ವ್ಯಕ್ತಿಗಳಾದ ರಾಜ್ಯಪಾಲರನ್ನು ಇಲ್ಲಿಗೆ ಕರೆದುಕೊಂಡು ಬಂದು ಅವರಿಂದ ಒಂದು ಘಂಟೆ ಕಾಲ ಭಾಷಣ ಮಾಡಿಸಿ ಈ ಸಭೆಯಲ್ಲಿ ಅಂತಹ ದೊಡ್ಡ ವ್ಯಕ್ತಿಗಳ ಬಗ್ಗೆ ಈಗ ಸಿಕ್ಕಾಪಟ್ಟೆ ಕೆಲವು ಸದಸ್ಯರು ಮಾತನಾಡತಕ್ಕ ಒಂದು ಅವಕಾಶವನ್ನು ಈ ಸರ್ಕಾರ ಏಕೆ ಕಲ್ಪನೆ ಮಾಡುತ್ತಿದಿಯೋ ಎಂದು ನನಗನ್ನಿಸುತ್ತದೆ. ಇದರಲ್ಲಿ ಹೇಳಿರತಕ್ಕಂಥಾದ್ದು ನಮಗೇನೂ ಹೊಸದೇನೂ ಅಲ್ಲ. ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತಿರುವ ವಿಚಾರಗಳನ್ನೆಲ್ಲಾ ಇದರಲ್ಲಿ ಹೇಳಿದ್ದಾರೆ. ಹೊಸದಾಗಿ ನಾವು ಈಗ ಏನು ಮಾಡುತ್ತಿದ್ದೇವೆ. ಮುಂದೆ ಏನೇನು ಮಾಡಬೇಕಾಗಿದೆ ಎಂಬುದನ್ನೆಲ್ಲಾ ಇಲ್ಲಿ ಹೇಳದೆ ಇರತಕ್ಕ ವಿಚಾರಗಳನ್ನು ಪದೇ ಪದೇ ಪ್ರಸ್ತಾಪಿಸುತ್ತಿರುವುದನ್ನು ಮಾತ್ರ ಇಲ್ಲಿ ನೋಡುತ್ತಿದ್ದೇವೆ. ಇದರಲ್ಲಿ ಇವರು ಬಿಟ್ಟಿರತಕ್ಕಂಥ ಮುಖ್ಯ ವಿಚಾರ ಒಂದಿದೆ. ಅದೇನೆಂದರೆ ಕೇಂದ್ರ ಮತ್ತು ನಮ್ಮ ರಾಜ್ಯ ಸರ್ಕಾರದಲ್ಲಿ ಕೆಲಸಮಾಡುತ್ತಿರುವ ಅಧಿಕಾರಿಗಳ ಮತ್ತು ನೌಕರರುಗಳ ಸಂಬಳ ಸಾರಿಗೆಗಳ ವಿಚಾರ. ಆ ವಿಚಾರದಲ್ಲಿ ರಾಜ್ಯಪಾಲರು ಯಾವ ಒಂದು ಮಾತನ್ನು ತಮ್ಮ ಭಾಷಣದಲ್ಲಿ ಆಡಲಿಲ್ಲ. ವಿಧಾನ ಸೌಧದ ಪಕ್ಕದಲ್ಲಿರತಕ್ಕ ಅಕೌಂಟೆಂಟ್ ಜನರಲ್ ಅವರ ಆಫೀಸಿನಲ್ಲಿ ಕೆಲಸಮಾಡತಕ್ಕವರಿಗೇ ಒಂದು ರೀತಿಯ ವೇತನ, ಈ ವಿಧಾನ ಸೌಧದಲ್ಲಿ ಕೆಲಸಮಾಡುತ್ತಿರುವವರಿಗೇ ಒಂದು ರೀತಿಯ ವೇತನ ಈಗ ಇದೆ. ಹೀಗಾದರೆ ಇಲ್ಲಿ ಕೆಲಸಮಾಡುವವರಿಗೆ ನಿಜವಾಗಿ ಆಷ್ಟಾಗಿ ಉತ್ಸಾಹ ಇರುವುದಿಲ್ಲ. ಅವರಿಗೆ ಬಹಳವಾಗಿ ಜಿಗುಪ್ಸೆಯುಂಟಾಗಿ ಸರ್ಕಾರೀ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯದಿರುವುದಕ್ಕೆ ಇದು ಮೂಲ ಕಾರಣವಾಗಿದೆ. ಏಕೆಂದರೆ ಈಗಾಗಲೇ ಎಷ್ಟೋ ಸರ್ಕಾರೀ ಕೆಲಸಕಾರ್ಯಗಳು ಕೆಟ್ಟುಹೋಗಿವೆ. ಬಹಳ ನಿಧಾನವಾಗಿ ಈಗಿನ ಸರ್ಕಾರೀ ಕೆಲಸಕ್ಯಾರಗಳು ನಡೆಯುತ್ತಾ ಇವೆ.

Mr. SPEAKER.—The House will now rise to meet again at 8-30 A.M. on Monday, the 2nd March 1964.

The House adjourned at Thirty Minutes past Twelve of the Clock to meet again at Thirty Minutes past Eight of the Clock on Monday, the 2nd March 1964.

WD 2374—GPB—900—14-4-64

MYSORE LEGISLATIVE ASSEMBLY

FOURTH DAY.

Monday, 2nd March 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Restoration of Bonal Tank in Shorapur Taluk.

Q.—10. Sri RAJA PID NAIK (Shorapur).—

Will the Government be pleased to state ;—

(*a*) whether they have received any application from the people of Bonal village, Shorapur taluk, Gulbarga District for the restoration of Bonal tank ;

(*b*) the extent of breach in the above tank ;

(*c*) the reasons for not taking any action so far, in spite of many representations in this behalf ;

(*d*) whether they intend to take immediate action to restore the tank and if so, when ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) 180 feet.

(*c*) The restoration was found to be uneconomical due to very large submergence and also due to alkalinity of water.

(*d*) This is being re-examined.

Sri RAJA PID NAIK.—May I know when the tank was breached and the reasons for the same ?

† Sri ALUR HANUMANTHAPPA.—The exact date is not with me.

Mr. SPEAKER.—Would it be possible to the Hon'ble Minister to tell the approximate date ?

†Indicates that the remarks or speeches have not been revised by the member concerned

Sri ALUR HANUMANTHAPPA.—That information is not with me, Sir.

Mr. SPEAKER.—What are the reasons for the breach ?

Sri ALUR HANUMANTHAPPA.—It is due to floods.

Sri RAJA PID NAIK.—May I know how many acres of land will be submerged ?

Sri ALUR HANUMANTHAPPA.—If the restoration is taken up, it will be something like 1,600 acres.

Sri RAJA PID NAIK.—Will the Government take immediate action to restore the tank before the setting in of monsoon ?

Sri ALUR HANUMANTHAPPA.—With regard to the restoration of the tank, according to the present proposal, the extent of submersion will be about 1,600 acres. There is a lot of agitation not to take up restoration of this tank because very valuable lands would be submerged. To avoid that and also to reduce the alkalinity of water, the Chief Engineer inspected the tank on 29th November 1963 and suggested certain methods. Action is being taken to adopt some other method for the restoration of the tank.

ಶ್ರೀ ಇ. ನಾರಾಯಣ ಗೌಡ.—ಈ ಕೆರೆ ರೆಸ್ಟೋರು ಮಾಡುವುದು ಮಿತವ್ಯಯವಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಎಸ್ಟಿಮೇಟು ತಯಾರಾದಾಗ ಇದರ ಅಚ್ಚುಕಟ್ಟು ಎಷ್ಟಿತ್ತು ?

ಶ್ರೀ ಆಲೂರು ಹನುಮಂತಪ್ಪ.—ಎಸ್ಟಿಮೇಟಿನ ಪ್ರಕಾರ ಆಗಿದ್ದ ಅಚ್ಚುಕಟ್ಟು 315 ಎಕರೆಗಳು.

Taking over of the Remand Home at Karwar by Government.

*Q.—11. Sri B. P. KADAM (Karwar).—

Will the Government be pleased to state :—

(a) whether it is not a fact that the Remand Home at Karwar is taken over by Government on 4th October 1962 along with its employees like peons-*cum*-watchman ;

(b) whether it is not a fact that the peons-*cum*-watchman have been renamed as guards ;

(c) what is the total service each such person has put on 4th October 1962 and what is the total emoluments (inclusive of D.A.) each was getting on this date ;

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷ್ಣ-ಗೋದಾವರಿ ವಿಷಯದ ಸಂಬಂಧವಾಗಿ ಹೇಳುತ್ತಾ, ಬಿಜಾಪುರ ಜಿಲ್ಲೆಯಲ್ಲಿ ಆಲಮಟ್ಟಿಯಲ್ಲಿ ಒಂದು ಇರ್ರಿಗೇಷನ್ ಸ್ಕೀಮು ಆಗತಕ್ಕದು ಇದೆ ಮತ್ತು ನಾರಾಯಣಪುರದಲ್ಲಿ ಸಹ ಒಂದು ಸ್ಕೀಮ್ ಆಗತಕ್ಕದ್ದು ಇದೆ ಎಂದು ವಿವರಿಸಿರುತ್ತಾರೆ. ಈ ಬಗ್ಗೆ ಟೆಕ್ನಿಕಲ್ ಸ್ಯಾಂಕ್ಷನ್ ಸಿಕ್ಕಿದೆ ಎಂದು ತಿಳಿಸೋಣವಾಗಿದೆ. ಅವನ್ನು ತೀವ್ರವಾಗಿ ಮುಂದುವರಿಸಿ, ಕೆಲಸ ನಡೆಸಿದಲ್ಲಿ ನಮ್ಮ ಭಾಗದ ರೈತರಿಗೆ ಹೆಚ್ಚು ಉಪಯೋಗವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಅದೇಪ್ರಕಾರ ನಮ್ಮ ಧಾರವಾಡ ಜಿಲ್ಲೆಯಲ್ಲಿ ಮಲಪ್ರಭಾ ಯೋಜನೆಯ ಬಗ್ಗೆ ಟೆಕ್ನಿಕಲ್ ಸ್ಯಾಂಕ್ಷನ್ನು, ಕ್ಲಿಯರನ್ಸು ಸಿಕ್ಕಿದೆ ಎಂದು ಹೇಳೋಣವಾಗಿದೆ. 2-3 ವರ್ಷಗಳಿಂದ ಆ ಕಾರ್ಯ ನಡೆಯುತ್ತಾ ಬಂದಿದ್ದರೂ ಬಹಳ ಮಂದಗತಿಯಿಂದ ಕೆಲಸ ಸಾಗಿರುತ್ತದೆ. ಬಹಳ ಮಂದಗತಿಯಿಂದ ನಡೆಯುತ್ತಿದೆ. ಆ ಕೆಲಸಕ್ಕೆ ಹೆಚ್ಚುಹೆಚ್ಚು ಖರ್ಚು ಬರುವ ಸಂಭವವಿದೆ. ಆದ್ದರಿಂದ ಶಕ್ಯವಿದ್ದಷ್ಟುಮಟ್ಟಿಗೆ ತೀವ್ರಗತಿಯಿಂದ ಮುಂದುವರಿಸಿ ಕೆಲಸ ಮುಗಿಸಿದಲ್ಲಿ ಆ ಭಾಗದ ಜನರಿಗೆ ಹೆಚ್ಚು ಹೆಚ್ಚು ಲಾಭವಾಗುವುದಲ್ಲದೆ, ಅಲ್ಲಿ ಮೇಲಿಂದಮೇಲೆ ಬರುವ ಬರಗಾಲ ತಪ್ಪಿಸಬಹುದು. ಅಲ್ಲಿ ಮೇಲಿಂದಮೇಲೆ ಬರಗಾಲ ಬರುತ್ತಾ ಇರುವುದರಿಂದ ಅಲ್ಲಿಯ ಜನರು ತಕಾವಿಸಾಲ ಬೇಕು, ಸೊಸೈಟಿ ಸಾಲ ಬೇಕು ಎಂದು ಮೇಲಿಂದಮೇಲೆ ಹೇಳುತ್ತಾ ಬರುತ್ತಾರೆ. ಅದನ್ನು ತಪ್ಪಿಸಲು ನೀರಾವರಿ ಯೋಜನೆಯ ಕೆಲಸ ಬಹಳ ಮುಖ್ಯವಾಗಿರುತ್ತದೆ. ಅದನ್ನು ಬಹಳ ತೀವ್ರಗತಿಯಿಂದ ಸಾಗಿಸಬೇಕು ಎಂದು ನಾನು ಸರಕಾರದವರಿಗೆ ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ.

(ಶ್ರೀ ಸಿ. ಎಸ್. ಹುಲಕೋಟಿ)

ಇದೇಪ್ರಕಾರ ನಮ್ಮ ಭಾಗದಲ್ಲಿ ಬಹುಮಟ್ಟಿಗೆ ದುರ್ಭಿಕ್ಷದ ಕ್ಷೇತ್ರವೂ ಇರುವುದು ಎಂದು ಮೇಲಿಂದಮೇಲೆ ಇಲ್ಲಿ ವಿವರಿಸಲಾಗಿದೆ. ಅದು ಸರಕಾರದ ಗಮನದಲ್ಲಿರುತ್ತದೆ. ಅದು ಹೆಚ್ಚು ಹೆಚ್ಚು ಸುಧಾರಣೆಯಾಗಿ, ಅಭಿವೃದ್ಧಿಯಾಗಿ ಉಳಿದ ಪ್ರದೇಶಗಳಂತೆ ಸರಿಯಾದ ಪ್ರಗತಿ ಹೊಂದಬೇಕಾದರೆ, ಅಲ್ಲಿ ನೀರಾವರಿ ಕೆಲಸದ ಅವಶ್ಯಕತೆ ಅಗತ್ಯ ಹೆಚ್ಚಾಗಿ ಇವೆಯೆಂದು ನನಗನಿಸುತ್ತದೆ.

ಸಣ್ಣ ನೀರಾವರಿ ಸ್ವಲ್ಪಮಟ್ಟಿಗೆ ಉಪಯೋಗವಾಗಬಹುದು. ಅದರಿಂದಲೇ ಪ್ರಗತಿ ಹೊಂದುತ್ತೇವೆಂದು ಹೇಳುವುದಕ್ಕಾಗದು. ಅಲ್ಲಿಯೂ ನಮ್ಮ ಧಾರವಾಡ ಜಿಲ್ಲೆಯಲ್ಲಿ ತುಂಗಭದ್ರ ನದಿಯು ಎಡವಂಡ ಬಹಳಮಟ್ಟಿಗೆ 30-40 ಮೈಲಿಗಳತನಕ ಇರುತ್ತದೆ. ತುಂಗಭದ್ರ ನದಿಯ ನೀರಿನಿಂದ ನಮ್ಮ ಧಾರವಾಡ ಜಿಲ್ಲೆಯಲ್ಲಿ ಮೇಜರ್ ಇರ್ರಿಗೇಷನ್ನಿಗೆ ಒಂದು ಹನಿ ನೀರು ಸಹ ಉಪಯೋಗವಾಗಿಲ್ಲ. ದುರ್ದೈವದಿಂದ ನಾವು ಮುಂಬೈ ರಾಜ್ಯದಲ್ಲಿದ್ದಾಗ ಆ ಕಾಲಕ್ಕೆ 1944 ನೆಯ ಇಸವಿಯಲ್ಲಿ ಏನು ಒಂದು ಕರಾರು ಆಗಿರುವುದೋ ಆ ಕರಾರಿನ ಕಾಲಕ್ಕೆ ಸರಕಾರದವರು ಅದರ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಳ್ಳದೆ ಇದ್ದುದರಿಂದ ತುಂಗಭದ್ರ ನದಿಯ ನೀರಿನ ಉಪಯೋಗ ನಮಗೆ ಅಷ್ಟು ದೊರೆತಿರುವುದಿಲ್ಲ. ಇದು ಬಹಳ ದುರ್ದೈವದ ಸಂಗತಿ. ನಿಜವಾಗಿ ಹೇಳಬೇಕಾದರೆ ನಮ್ಮ ಆ ಭಾಗದ ಜನರು, ಅಂದರೆ, ರಾಣೆಬೆನ್ನೂರು ತಾಲ್ಲೂಕು, ಬ್ಯಾಡಗಿ ಕೆಲವು ಭಾಗ, ಹಾವೇರಿ ಕೆಲವು ಭಾಗ, ಹಾಗೂ ಸಿರಹಟ್ಟಿಯ ಕೆಲವು ಭಾಗ ಮತ್ತು ಮುಂಡರಗಿ ಮುಖ್ಯ ಭಾಗ ಮತ್ತು ಕೊಪ್ಪಳದ ಕೆಲವು ಗ್ರಾಮಗಳಿಗೆ ಇದರ ಉಪಯೋಗವು ಆಗುವುದು ಎಂದು ಈಗ ಸಾಧಾರಣ ಸರ್ವೆ ಮಾಡಿದ್ದರ ಮೇಲೆ ತಿಳಿದುಬಂದಿರುತ್ತದೆ. ಆದರೆ ದುರ್ದೈವದಿಂದ ಆ ವಿಷಯವನ್ನು ಇಲ್ಲಿ ವಿಸ್ತರಿಸಲಾಗಿಲ್ಲ. ಅದು ಯಾವ ಕಾರಣದಿಂದ ಹಾಗೆಯೇ ಉಳಿದಿರುವುದು ಎಂದು ನನಗೆ ತಿಳಿಯದಾಗಿದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಈ ಪ್ರಾಜೆಕ್ಟನ್ನು ತೆಗೆದುಕೊಂಡಲ್ಲಿ ಸಾಧಾರಣವಾಗಿ ನಮ್ಮ ಧಾರವಾಡ ಜಿಲ್ಲೆ ಭಾಗದ ಎರಡೂವರೆ ಮೂರು ಲಕ್ಷ ಎಕರೆಗೆ ನೀರಾವರಿ ಉಪಯೋಗವಾಗುತ್ತದೆ ಎಂದು ನನಗೆ ತಿಳಿದುಬರುತ್ತದೆ. ಆ ಭದ್ರ ಕೆನಾಲ್ ಪ್ರಾಜೆಕ್ಟಿನಲ್ಲಿ ಹೆಚ್ಚು ನೀರು ಇರುವುದಾಗಿ ಗೊತ್ತಾಗುತ್ತದೆ. ಅದರ ಉಪಯೋಗದ ಬಗ್ಗೆ ವಿವರ ಕೊಟ್ಟಿಲ್ಲ. ಶಿವಮೊಗ್ಗ ಜಿಲ್ಲೆಗೆ ಅದರ ಉಪಯೋಗವಾಗುತ್ತದೆಂದು ತಿಳಿದುಬಂದಿರುತ್ತದೆ. ಈ ಹೆಚ್ಚಿನ ನೀರನ್ನು ಆ ಭಾಗಕ್ಕೆ ಕೊಟ್ಟಲ್ಲಿ ಆ ಜನರ ಪರಿಸ್ಥಿತಿ ಹೆಚ್ಚು ಸುಧಾರಿಸುವುದರಲ್ಲಿ ಏನೂ ಸಂಶಯ ಕಂಡು ಬರುವುದಿಲ್ಲ. ಸಾಧಾರಣವಾಗಿ, ಈಗ 4-5 ವರ್ಷಗಳಿಂದ ಆ ಭಾಗದಲ್ಲಿ ಸತತ ಬರಗಾಲ ಕಂಡುಬರುತ್ತಿದೆ. ಮುಖ್ಯವಾಗಿ ಹಾವೇರಿ ಕೆಲವು ಗ್ರಾಮಗಳಲ್ಲಿ, ಸಿರಹಟ್ಟಿ ಕೆಲವು ಭಾಗಗಳಲ್ಲಿ, ಮುಂಡರಗೆರೆ ಬಹುತೇಕ ಭಾಗ, ಕೊಪ್ಪಳದ ಕೆಲವು ಭಾಗಗಳು—ಇಲ್ಲಿ 50-60 ವರ್ಷಗಳಿಂದ ಸತತ ಬರಗಾಲ ಬರುತ್ತಾ ಇದೆ. ಜನರು ಕ್ಷೀಣವಾಗಿದ್ದಾರೆ. ಪ್ರತಿವರ್ಷ ಹೆಚ್ಚು ಸೊಸೈಟಿ ಸಾಲ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು; ತಕಾವಿ ಲೋನ್ ವಸೂಲಿಗೆ ಪ್ರೊಸೀಡಿಂಗ್ಸು ತೆಗೆದುಕೊಳ್ಳಬಾರದು ಎಂದು ಮೇಲಿಂದಮೇಲೆ ನಮ್ಮ ಕಡೆಗೆ ಜನರು ಒತ್ತಾಯ ಮಾಡುತ್ತಾ ಇದ್ದಾರೆ. ಹಾಗೆ ಮಾಡಬೇಕೆಂದು ನಾವು ಅಧಿಕಾರಿಗಳಿಗೆ ಒತ್ತಾಯ ಮಾಡುತ್ತಾ ಇದ್ದೇವೆ. ಇದರಿಂದ ಸರಕಾರಿ ಉತ್ಪನ್ನ ಸಹ ಕಡಿಮೆಯಾಗುವುದಲ್ಲದೆ ಜನರ ಪರಿಸ್ಥಿತಿ ಕೆಟ್ಟು, ಅವರ ಜೀವನ ಕಷ್ಟಕರವಾಗಿ, ಅವರು ಬಹಳ ತೊಂದರೆಗೀಡಾಗಿದ್ದಾರೆ. ಆದ್ದರಿಂದ ನಾನು ಸರಕಾರಕ್ಕೆ ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುವುದೇನೆಂದರೆ ತುಂಗಭದ್ರ ಕಾಲುವೆ ನೀರಿನ ಹಂಚಿಕೆಯಲ್ಲಿ ಆ ಭಾಗಕ್ಕೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂದು ಸರ್ವೆ ಮಾಡಿಸಿ ಇನ್‌ವೆಸ್ಟಿಗೇಷನ್ ಮಾಡಿಸಿ ಆ ಪ್ರಾಜೆಕ್ಟನ್ನೂ ಮೇಜರ್ ಇರ್ರಿಗೇಷನ್ ಸ್ಕೀಮಿನಲ್ಲಿ ಸೇರಿಸಬೇಕು ಎಂದು ನಾನು ಬಹು ಕಳಕಳಿಯಿಂದ ಜನರ ತರಫಿನಿಂದ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅದನ್ನು ದುರ್ಲಕ್ಷ್ಯ ಮಾಡಿದಲ್ಲಿ ಜನರು ಬಹಳ ಕೆಟ್ಟ ಪರಿಸ್ಥಿತಿಗೊಳಗಾಗುವ ಸಂಭವವಿದೆ. ಅಲ್ಲಿ ಜನ ಊರು ಬಿಟ್ಟು ಹೋಗುವಂಥ ಪರಿಸ್ಥಿತಿ ಇರುವುದರಿಂದ ಸರಕಾರದವರು ದಯವಿಟ್ಟು ಆ ಕಡೆ ಹೆಚ್ಚು ಗಮನ ಕೊಡಬೇಕು. ಮತ್ತು ಈ ಸಂಬಂಧವಾದ ಸರ್ವೆ ಯಾವ ಸ್ಟೇಜಿಗೆ ಬಂದಿದೆ, ಈ ಸ್ಕೀಮಿನ ಸರ್ವೆ ರಿಪೋರ್ಟು ಆಗಿದೆಯೋ ಎಂಬ ಬಗ್ಗೆ ಮಾಹಿತಿಯನ್ನು ಈ ಮಾನ್ಯಸಭೆಯ ಮುಂದೆ ಇಡಬೇಕು ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳು ಅದನ್ನು ವಿವರಿಸುವುದಾಗಿ ನಂಬುತ್ತೇನೆ.

ಇದೂ ಅಲ್ಲದೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಕೆಲವು ಹಳ್ಳಗಳು ಹರಿಯುತ್ತಿವೆ, ಆ ಹಳ್ಳಗಳ ಉಪಯೋಗ ನಮಗೆ ಸಾಕಷ್ಟು ಆಗಿಲ್ಲ. ಕೆಲವು ಮೈನರ್ ಇರ್ರಿಗೇಷನ್ ಸ್ಕೀಮುಗಳನ್ನು ಈಗಾಗಲೆ ಇನ್‌ವೆಸ್ಟಿಗೇಟ್ ಮಾಡಿದ್ದಾರೆ. ಅವುಗಳ ಸರ್ವೆ ಸಹಿತ ಆಗಿದೆ. ಕೆಲವು ಪ್ಲಾನ್ ಎಸ್ಟಿಮೇಟುಗಳೂ ಆಗಿವೆ. ಅವುಗಳನ್ನು ಶಕ್ಯವಿದ್ದಷ್ಟು ಬಡ್ಜೆಟ್‌ನಲ್ಲಿ ಸೇರಿಸಿ ಸಹಾಯ ಮಾಡಬೇಕೆಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

3-30 P.M.

ಕೇಲೂರು ಮೈನರ್ ಇರಿಗೇಷನ್ ಎಂಬ ಇದೆ. ಅವನ್ನೂ ಹೋದ ವರ್ಷ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಸೇರಿಸಲಾಗಿತ್ತು. ಅವನ್ನು ತೀವ್ರ ಗಮನಕ್ಕೆ ತಗೆದುಕೊಂಡು ತೀವ್ರಗತಿಯಿಂದ ಕೆಲಸ ಮಾಡುವ ಬಗ್ಗೆ ಸರಕಾರದವರು ತಮ್ಮ ಅಧಿಕಾರಸ್ಥರಿಗೆ ತಿಳಿಸುತ್ತಾರೆಂದು ನಂಬುತ್ತೇನೆ. ಅದೇ ಪ್ರಕಾರ ಕೊಪ್ಪಳ, ಶಿರಹಟ್ಟಿಯಲ್ಲಿ ಅನೇಕ ಸ್ಕೀಂಗಳು ಇವೆ. ಅವನ್ನೂ ಹೆಚ್ಚು ತೀವ್ರ ಗತಿಯಲ್ಲಿ ಸಾಗಿಸುತ್ತೀರಿ, ಅವುಗಳ ಉಪಯೋಗವನ್ನು ಹೆಚ್ಚಿಸುತ್ತೀರಿ ಎಂದು ನಂಬುತ್ತೇನೆ. ಇರಿಗೇಷನ್ ವರ್ಕ್ಸ್‌ಗೆ ಬೇಕಾದಷ್ಟು ಸ್ಕೋಪ್ ಇರುತ್ತದೆ, ಅವಕ್ಕೆ ಸಾಕಾದಷ್ಟು ಹಣ ಒದಗಿಸಿದರೆ ಜನರ ಕಷ್ಟ ಸ್ವಲ್ಪಮಟ್ಟಿಗಾದರೂ ಕಡಮೆಯಾಗುತ್ತದೆ ಎಂದು ನಂಬುತ್ತೇನೆ. ಈ ಬಗ್ಗೆ ಸರಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯ, ಸರಕಾರದವರ ಅಗ್ರಿಕಲ್ಚರಲ್ ಸ್ಕೀಮಿನಲ್ಲಿ ಮೆನ್ಯೂರಿಯಲ್ ಡಿಸ್ಟ್ರಿಬ್ಯೂಷನ್ ಎಂಬ ಒಂದು ಸ್ಕೀಂ ಇದೆ. ಅದು ಏನೆಂದರೆ, ಮುನಿಸಿಪಲ್ ಏರಿಯಾದಿಂದ ಗ್ರಾಮಾಂತರ ಪ್ರದೇಶಕ್ಕೆ 5 ಮೈಲಿ ದೂರದಲ್ಲಿ ಗೊಬ್ಬರವನ್ನು ಒಯ್ಯುವುದಕ್ಕೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಎಂದು ಹಣವನ್ನು ಕೊಡುತ್ತಾ ಇದ್ದಾರೆ. ಆದರೆ ಇದರ ಉಪಯೋಗ ಯಾವ ಪ್ರಕಾರ ಆಗುತ್ತಿದೆ ಎಂಬುದನ್ನು ನನ್ನ ಗಮನಕ್ಕೆ ಬಂದದ್ದನ್ನು ಸರಕಾರದವರಿಗೆ ತಿಳಿಸಲು ಬಯಸುತ್ತೇನೆ. ಅದು ಏನೆಂದರೆ ಈ ಸಬ್ಸಿಡಿ ಯಾರಿಗೆ ಮುಖ್ಯವಾಗಿ ಹಳ್ಳಿಯಲ್ಲಿರುವ ಬಡ ಜನರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಾ ಇಲ್ಲ ಮತ್ತು ಶಹರದಿಂದ ಗೊಬ್ಬರವನ್ನು ಹೇರಿಕೊಂಡು ಹೋಗುವ ಶ್ರೀಮಂತರಿಗೆ ಮಾತ್ರ ಸಿಕ್ಕುತ್ತಾ ಇದೆ; ಆದ್ದರಿಂದ, ಬಡಜನರಿಗೆ ಈ ಟ್ರಾನ್ಸ್‌ಪೋರ್ಟ್ ಫೆಸಿಲಿಟಿ, ಸಬ್ಸಿಡಿ ಸಿಕ್ಕುವಂತೆ ರೂಲ್ಸ್‌ನಲ್ಲಿ, ಅವಶ್ಯಕತೆಯೆನಿಸಿದರೆ ಮಾರ್ಪಾಟು ಸಹ ಮಾಡಬೇಕೆಂದು ನಾನು ಸರಕಾರದವರನ್ನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಉದಾಹರಣೆಯಾಗಿ ಹೇಳುವುದಾದರೆ ಗದುಗಿನಲ್ಲಿ ಆ ರೀತಿ ಕೊಡಲಾಯಿತು. ಈ ಸಾರಿ ಸಹ 58 ಸಾವಿರ ರೂಪಾಯಿ ಒಂದೇ ಹುಬ್ಬಳ್ಳಿ ಗ್ರಾಮದ ಮುನಿಸಿಪಲ್ ಏರಿಯಾದಲ್ಲಿ ಗೊಬ್ಬರ ಸಬ್ಸಿಡಿ ಕೊಡುವ ಬಗ್ಗೆ ಶಿಫಾರಸ್ಸು ಬಂದಿತ್ತು ಅದು ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಬಂದಿತ್ತು, ಆಗಲೂ ಸಹ ಈ ವಿಷಯದ ಬಗ್ಗೆ ಹೇಳಲಾಗಿದೆ. ಇಂಥಾದ್ದೆಲ್ಲಾ ಬಡಜನರಿಗೆ ಉಪಯೋಗವಾಗುವಂತ ತಕ್ಕ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೆಲವು ಕೋರ್ಟುಗಳಲ್ಲಿ ಸಾಕಾದಷ್ಟು ಕೆಲಸ ಇರುವುದಿಲ್ಲ. ಇಲ್ಲವೇ ಇದ್ದರೂ ಸಿವಿಲ್ ಜಡ್ಜಸ್ ಸಂಖ್ಯೆ ಮಾತ್ರ ಹೆಚ್ಚಾಗಿ ಇರುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡಬೇಕು, ಅವರು ದಿನದಲ್ಲಿ ಒಂದು ತಾಸು ಒಂದುವರೆ ತಾಸು ಬಂದು ಕೋರ್ಟಿನಲ್ಲಿ ಕೂಡುತ್ತಾ ಇರುತ್ತಾರೆ. ಇದ್ದ ಕೆಲಸವೂ ಸರಿಯಾಗಿ ಆಗುವುದಿಲ್ಲ. ಇದರ ಬಗ್ಗೆ ಹೈಕೋರ್ಟಿನವರಿಗೆ ತಿಳಿಸಿ ಸರಕಾರದವರು ಕೇಸುಗಳ ಡಿಸ್‌ಪೋಸಲ್ ಯಾವ ರೀತಿ ಆಗುತ್ತಿದೆ ಎಲ್ಲಿ ಹೆಚ್ಚು ಜಡ್ಜಿಗಳ ಅವಶ್ಯಕತೆ ಇದೆ ಎಲ್ಲಿ ಅವಶ್ಯಕತೆ-ಇಲ್ಲ ಎಂಬುವನ್ನು ನೋಡಿ ಎಲ್ಲಿಗೆ ಬೇಕೋ ಅಲ್ಲಿಗೆ ಹೆಚ್ಚಿನ ಹೊಸ ಹ್ಯಾಂಡ್ಸನ್ನು ತೆಗೆದುಕೊಳ್ಳದೇ ಇದ್ದ ಹ್ಯಾಂಡ್ಸನ್ನೇ ಉಪಯೋಗಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಹೇಳುತ್ತೇನೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದೆ, ಬಾಕಿ ಕಡೆಯೂ ಹೀಗೆಯೇ ಇರಬಹುದೇನೋ, ಇದನ್ನು ಪರಿಶೀಲನೆ ಮಾಡಿದರೆ ಈಗ ಸರಕಾರದವರಿಗೆ ಹಾವ ಅಪಚಶ ಇರುವುದರಿಂದ ಸೇವಿಂಗ್ಸ್ ಸಹಿತ ಆಗುತ್ತದೆ. ಆದ್ದರಿಂದ ಸರಕಾರದವರು ಇವನ್ನು ಪರಿಶೀಲನೆ ಮಾಡಿ ಎಲ್ಲಿ ಶಕ್ಯವಿದೆಯೋ ಅಲ್ಲಿ ಸೇವಿಂಗ್ಸ್ ಮಾಡುವುದು ಅಗತ್ಯ, ಅದನ್ನು ಮಾಡುತ್ತಾರೆ ಎಂದು ನಂಬುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. P. KADAM (Karwar).—Mr. Speaker, Sir, in the Motion of Thanks we are discussing the Governor's Address and the policy statements. At the outset I would just like to dilate upon certain motions, because some honourable members casually asked us as to why we did not stage a walk-out when the Kannada speech was being delivered.

Mr. SPEAKER.—It was never asked on the floor of the House. If it was asked outside, it need not be brought it here.

Sri B. P. KADAM.—We the members of the Samithi coming from the Marathi border area have no ill-will against the Kannada language. We have every respect and live for the Kannada language. And I look at it as a language of my brothers and respect it as our own. * * * *

* ** Expunged as ordered by the Chair

SRI B. P KADAM.— The Chair may delete it.

MR. SPEAKER —I will delete it

SRI B. P. KADAM.—The Hon'ble Member who moved the Motion of Thanks said that this country has really very fine to have a Constitution of Democratic socialism and that the theory of Socialism had further been expanded in the Congress sessions at Avadi and Bhubhaneshwar. Then, he raised a frontal attack against Soviet Russia stating that Soviet Russia, in spite of its progress, is a Communist Dictatorship. The Hon'ble Member is not here. I feel he would have done well to visit Soviet Russia and understood it. People there have liberty to do everything, to have everything but they have no liberty to exploit others. That is the only one thing denied to them. That is why Soviet Russia could have all-round progress. In spite of Western Imperialists, this is the first country which has been able to send its own Sputnik to the Moon. I will not dilate upon that.

I will dilate a bit upon democratic socialism achieved in this country. We have been free for the last fifteen to seventeen years. What is the gain of this democratic socialism? With all that this is the only country whose human beings are fighting with dogs for a morsel of food. We know that just outside the compound of rich people's homes, in the City, there are children and elderly human beings waiting with dogs for thrown out leaves. While coming from the railway station, we

**** Expunged as ordered by the Chair.

see dogs fighting with children for a morsal of food. This is the picture we see even after sixteen years of democratic socialism. What have we done, except having a Constitution with a pre-amble preaching equality, democratic justice and Socialism? There is nothing further than that.

Our *per capita* income has been shown to have risen a bit, but the standard of living has fallen. India, with all that is the country with the lowest standard of living in the entire world. India, with all its boasts, is the lowest *per capita* milk consuming country in the world. India is selling sugar to the foreigners at 51 nP. per kilo and selling in the internal market at Re. 1 and 30 nP. India is the lowest sugar consuming country in the world. In India the *per capita* consumption of sugar is three pounds, whereas, the *per capita* consumption of sugar in England is 40 lbs. In the villages, what is the sugar distribution per head? Hardly it is 00 grams or so. We have known how women with their babies stand in queues for getting there necessities. What is the democratic socialism achieved here which the Hon'ble Mover of the Motion of Thanks was expanding? We should first better realise the conditions here.

What is the rural indebtedness existing at present? Before the British quit India or at the time of their quitting this country's *per capita* rural indebtedness per family was Rs. 70. Today, the Government report says it is about Rs. 200.

Sir, taxation is the highest in this country. With the advent of the first Five Year Plan, when all-round failure was there, our leaders said that we are having a Second Five-Year Plan. When the Second Five-Year Plan failed to give us food and we are still begging all over the

world with a begging bowl, our leaders said that we would have a Third Five-Year Plan In the middle of the Third Five-Year Plan, we are being told that we are going to have the Fourth Five Year Plan: Thus, these Plans will go on-to the Vth plan.

Sri D. DEVARAJ URS.—I should like to know whether Russia is not importing food-stuffs.

Sri B. P. KADAM.—I know Russia has imported only this year. But the Hon'ble Minister who once hailed Russia should know under what circumstance they had to import Mr. Krushchev has given answer to his critics; only on account of atmospheric conditions the wheat grown there was spoiled by frost and so they had to import.

If we assess the progress made under the Third Five Year Plan, as stated in the report there is hardly any progress in agriculture sector. In all the sectors though a lot of money has been spent, the expected results have not been achieved. Under the Third Five Year Plan it was necessary to raise the taxation measure to the tune of about 1,700 crores. But now the Government succeeded to raise the taxation measure to 2,500 crores. This is the only sphere wherein we are making progress. The prices are raising and the Governor has failed to make a reference to it. The rich are getting richer and the money that has been spent under the Five Year Plans has been fitted only 20 per cent of the population and the remaining 80 per cent have been suffering. Even our Prime Minister Jawaharlal Nehru has expressed this view and he is deeply grieved at it What is the *per capita* income? When Dr. Lohia quoted the figure as two and a half annas in the Lok Sabha, the Hon'ble Home Minister stated it was seven annas and the Prime Minister as twelve annas. Even the great leaders have not been able to reconcile themselves with the progress made. This is the fate of our democratic socialism and this is the fate of our democracy and the mover of Motion of thanks should note all these things.

Coming to the solution of the border problem I feel the Governor would have done well by demanding a speedy solution of the merger of the Border Marathi speaking areas in Maharashtra and Border Kannada speaking areas in Karnatak. In 1956 the Governor in his speech in the first December session of the Legislative Assembly after reorganisation, made a pointed reference to the effect that the Government was seriously considering the merger of the border Kannada areas of Kasargod, Adoni, Akkalkot, etc, in Karnatak. I was there in the Assembly and we stated that equally the border areas of Karwar, Haliyal, Supa, Belguam, etc. should be merged in Maharashtra on the same principle, *i.e.*, taking village Language and contiguity as an unit. Referring to that the Hon'ble Chief Minister Sri S. Nijalingappa stated that, that question was receiving his attention and he was in correspondence with the Governments concerned and he for one would not object to the first demand. Nearly seven years have elapsed and even after this period the Hon'ble Chief Minister has not been able to do anything. That itself shows how weak, and indecisive this Government is. Therefore I say that the Governor ought to have at least expressed his regret over this question.

(SRI B. P. KADAM)

Today, what is the condition of the people in the border areas? They are nothing but slaves. The report of the four-man committee has been furnished long ago but nothing has been done so far. There have been serious atrocities committed on the Marathi people in the border areas. I stated in 1956 and twice earlier in this session that one Narayan Kurdever who was carrying on "Kirtans" in Marathi on the Government prohibition policy and getting assistance was denied all facilities to do his job in Marathi. When he said that he could not speach Kannada and the people could not understand it, the Government told him to stop his "Kirtana" and it was stopped. I stated that a very important Marathi school in Karwar taluk at Kadi ban was being throttled. Very near the school permission has been given to open a saw mill to a big man and that is how the Government have throttled the running of the Marathi school. No opportunity is given for the employment of Marathi knowing people; all facilities have been denied to them. There has been no Marathi A.D.E.I. in Karwar District for the last 3½ years. All the circulars to Marathi schools are sent in Kannada. The people in those areas do not understand Kannada. The people from Supa Taluk represented to the District School Board that they required Marathi schools at Anshe and Nujji and the Tahsildar was requested to submit his report. He submitted that there was need to have Marathi schools there. Even though 16 months have elapsed, nothing has been done. Even the Hon'ble Education Minister is keenly interested in throttling the Marathi schools. He nominated the school Betterment Committee in the place of the former District School Board N. Kanara District. When the proposal was in the air, I gave a representation that in the border areas, the interest of the Marathi schools must be safeguarded and I gave a list of names and requested that at least some among them might be nominated on the committee. He has done nothing not even one is nominated. There is not a single person from Karwar, Supa and Haliyal on that Committee to protect Marathi interest From Supa there is none on the Committee. One person whose mother tongue is not Marathi has been nominated from Haliyal. The person nominated from Karwar is an enemy of Marathi and has been throttling the progress the Marathi language. That is why I say that we the people in the border areas speaking Marathi have been virtually treated as slaves in this State and by this Government. All these days we have agitated non-violently and in a very peaceful manner to get our areas merged in Maharashtra. Still we have not been able to achieve our object and a speedy solution is not forthcoming. If this sort of attitude continues, the people will be compelled to take to other means. We are not the people to submit ourselves to slavery. If the legitimate agitation carried on in a peaceful way is not respected, then other ways are open to them. I say with all respect and I am going to send a copy of my speech to the Hon'ble Home Minister of the Government of India.

Mr. SPEAKER.—The Hon'ble Members' time is over.

SRI B. P. KADAM.—I may kindly be given two minutes more. So far no member from my side has spoken.

MR. SPEAKER.—I can give more time provided the whip of the member mentions it. How can he think that he is the only person speaking from his side? There are other members who want to speak. I have no objection to give him more time provided his whip is prepared to count the time allotted against his party. I am receiving slips rfom the party as well as from members. There must be some co-ordination. I will give time; I have not refused but there must be some restraint on the part of members.

SRI B. P. KADAM.—In the Bhalki taluk, the Marathi people have been denied facilities in the Secondary English schools and the hon'ble Member coming from that area tried his very best to present his case for a new school. He approached the Education Minister not less than 50 times, sent nearly 100 telegrams to the Director, Secretary and Minister for Education and the Education Minister is fond of saying: 'the matter is being considered'. This is how the interests of the Marathi areas are being totally neglected by an unsympathetic Government and the people of the area are living in an atmosphere of sheer slavery.

Sir, the development of the border areas is being awfully neglected. Even thoug there is a Rural Communication scheme to have 50 miles road for each taluk since 1959 in Karwar, Supa and Haliyal, nothing has been done. In Karwar Taluk only 2½ miles road work has been taken up and in Supa and Haliyal, nothing has been done. The road from Sadashivagad to Londa is closed since 5 years. Not even a single work pertaining to minor and major irrigation has been taken up. Everywhere, we are negleted. The Finance Minister may turn round and say that the port is being developed. We are not concerned with the port; it is for somebody's benefit. I am mainly concerned with the rural development of the area. I say that the area is being neglected with a vengeance.

SRI B. D. JATTI (Minister for Finance).—That is the only language to which the hon'ble Member is accustomed. Irresponsible statements would not help.

SRI B. P. KADAM.—We are speaking with full facts and sencse of responsibility. What else can we do?

SRI B. D. JATTI.—You can resign and get out.

SRI B. P. KADAM.—When the time comes shortly we will go to Maharashtra with our territories. We are not imbeciles.

SRI C. J. MUCKANNAPPA.—Sir, I rise to a point of order. When a Member is placing his grievances before the House, is it right on the part of the hon. Finance Minister to get into a temper and shout 'resign and go'. Who is the person to ask him to go. It is the Speaker. If a Member is not behaving properly, the Chair can call him to order and if he persists, he can direct him to leave the House. With all his experience, knowledge and wisdom, both as Minister here and Deputy

(SRI C. J. MUCKANNAPPA)

Minister in the Bombay State, it would be a sad thing indeed, if the Finance Minister were to lose himself so soon and order people to resign. Who is he and what is his status in this respect ..

Mr. SPEAKER.—Points of order have to be brief. I understood the point.

Sri C. J MUCKANNAPPA.—Sir, the Finance Minister has presented the budget in the morning and in the afternoon he has lost his temper. He should have patience enough to face the music.

Sri B. D. JATTI.—I am prepared to face the music. The point is that if the hon ble Member is not prepared to stay in the Mysore State, he has the liberty to go Maharashtra and live there.

Sri B. P. KADAM.- Is the Finance Minister right in asking me to resign and get out ? Who is he to direct me ? What is the offence that I have committed here ? I want an emphatic reply from the Chair just now.

Mr. SPEAKER.—Has the hon'ble Member any precedent to show that he can compel or direct the Chair to give a reply on a point of order on the spot ? A serious point of order has been raised and raised. with a great deal of emotion and temper. I want the temper to cool down. I will take time and give my considered ruling at the appropriate time. But the hon'ble Member cannot order me in the manner he is doing.

Sri B P. KADAM.—Have I not get the right to seek the protection of the Chair when I am insulted and asked to get out by another Member. Who is a Minister ? Is it not a matter of privilege ?

Mr. SPEAKER.—If anybody is asking the Member to get out, I am here to protect him.

Sri B. P. KADAM.—I have raised a point which the same Governor referred to in his speech in 19 6. It is a consistent and a relevant point but the hon'bl Finance Minister instead of bearing with me has lost his balance. I can only say that such an attitude will have serious repurcussions...

Sri B. D. JATTI. We are accustomed to such threats. Let not the hon'ble Member repeat them.

Sri B. P. KADAM.—I have every right to present my viewpoint. But I cannot be insulted in this manner.

Mr. SPEAKER.—I cannot tolerate anybody being subjected to insults.

Sri B. P. KADAM.—Then let the Finance Minister apologise.

Mr. SPEAKER.—Members must not be very sensitive in a Debate. If Members use a strong language, they must be prepared to receive back in equally and even stronger language. After all, what is the meaning of 'Debate' ? The question has been raised whether the Finance Minister was right in saying 'resign and go' 'Resign' does not mean 'resign from the House'. He has no right to ask somebody else to resign.

Sri C. J. MUCKANNAPPA.—The Finance Minister definitely asked the Hon'ble Member, Sri Kadam, to resign from the House and go to Maharashtra.

Mr. SPEAKER.—I am entitled to have a patient and respectful hearing. The hon'ble Member should not interrupt in this manner.

I was saying that, if anybody said 'resign and go' it has not a reference to resignation from the House but that the Member should leave the State. It is not an order to leave the House. Who is the person who can send anybody outside the House? Even the executive, that is the Government have no such right. Even a Minister cannot pass such an order. Of course, under certain conditions I can ask a Member to leave the House, now that I am fortified with a sergeant-at-arms (*laughter*). I am trying to see that such a situation does not arise. Here when somebody is asked to resign, it means that it should be done voluntarily by the Member concerned. No one can force the Member to resign if he does not want to Hence it only amounts to a suggestion to resign. Have not the Members of the Opposition asked the Members of the Treasury Benches to resign? Are they competent to force them to resign?

Did not some of the Members yesterday suggest that the earlier the Education Minister resigned, it was better? What kind of a language is that? I therefore, rule that there is no point of order.

4 00 P.M.

Sri B R. SUNTHANKAR (Belgaum City) —Sir, was it not a contemptuous remark from the Finance Minister?

Mr. SPEAKER. That is something different from the point of order. Sri Sunthankar may please advise his friends that there is no point of order.

Sri C. J. MUCKANNAPPA.—Sir, why should another member be asked to advise? The chair may advise us and not another member.

Mr. SPEAKER.—He has got a right to advise at my instance and at my instance the member can also advise.

(*Laughter*).

Sri B. P. KADAM.—Sir, I leave the matter at that. The public at large will pass the verdict on the Minister for Finance. Even though I have no protection here, the truth will be realised elsewhere.

Sir, there was a measure to extend the tenure of land surcharge. I do not know what has happen to that. I heard some whispers that it has given a decent burial. If it is so, it is better. Government will do well to do away with this measure which was causing so much of harassment to the agriculturists.

[MR. DEPUTY SPEAKER in the Chair.]

Mr. DEPUTY SPEAKER.—The hon'ble member may conclude now without going to a fresh point

Sri B. P. KADAM.—Yes Sir, I conclude.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೆ, ಈವರೆಗೂ ನಮ್ಮ ಸ್ನೇಹಿತರು ರಾಜ್ಯಪಾಲರ ಭಾಷಣದಲ್ಲಿದ್ದ ನ್ಯೂನತೆಗಳನ್ನೆತ್ತಿ ಆ ಬಗ್ಗೆ ಸೂಕ್ತ ಸಲಹೆಗಳನ್ನು ಇತ್ತಿದ್ದಾರೆ. ನಮ್ಮ ರಾಜ್ಯಪಾಲರು ಈ ಶಾಸನ ಸಭೆಗಳ ಸಂಯುಕ್ತಾಧಿವೇಶನಗಳನ್ನುದ್ದೇಶಿಸಿ ಮಾತನಾಡುವಾಗ ಮೊಟ್ಟ ಮೊದಲಿಗೆ ಕನ್ನಡದಲ್ಲಿ ಮಾತನಾಡಿದ್ದು ಇಡೀ ಕರ್ಣಾಟಕದ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದಂತಾಗಿದೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದನ್ನು ಬಿಟ್ಟರೆ ಇನ್ನುಳಿದ ವಿಚಾರಗಳಲ್ಲಿ ಅವರ ಭಾಷಣ ತುಂಬಾ ನಿಸ್ಸಾರವಾಗಿವೆಯೆಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನೇನು ಕೆಲಸ ಕಾರ್ಯಗಳನ್ನು ಆಗುಗೊಳಿಸಿದೆಯೆಂದು ಹೇಳಿದ್ದಾರೋ ಅವುಗಳ ಪೂರ್ಣಮಾಹಿತಿಯನ್ನು ಮಾತ್ರ ತಿಳಿಸಿಲ್ಲ. ಇದರಿಂದ ಜನರಿಗೆ ಸರ್ಕಾರದಲ್ಲಿ ಒಂದು ಅಪನಂಬಿಕೆಯುಂಟಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ: ರಾಜ್ಯಪಾಲರ ಭಾಷಣವೊಂದು ಸಹಕಾರ ಸಂಘಗಳ ಒಂದು ವರದಿಯನ್ನೊಪ್ಪಿಸಿದಾಗ ಮಾಡತಕ್ಕ ಒಂದು ಭಾಷಣವೆನಿಸುತ್ತದೆ ಅದರಂತೆ ಇದೂ ಕೂಡ ಇರುತ್ತದೆ. ಹೋದ ವರ್ಷ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆ ಚೀಣಿಯರು ಬಂಡೆಬ್ಬಿಸಿದ್ದುದನ್ನು ಸ್ಥಗಿತಗೊಳಿಸಲು ಒಂದು ರಾಷ್ಟ್ರೀಯ ರಕ್ಷಣಾ ನಿಧಿಯನ್ನು ಮಾಡಿ ಆ ಬಗ್ಗೆ ಇಲ್ಲಿಯವರೆಗೆ ಸಂಗ್ರಹಮಾಡಿರತಕ್ಕದ್ದು 1,97. (46 ಗ್ರಾಂ ಚಿನ್ನ ಮತ್ತು 83. 802 ಗ್ರಾಂ ಬೆಳ್ಳಿ, ಹಾಗೂ 331. 67 ಲಕ್ಷರೂಪಾಯಿಗಳಷ್ಟು ಹಣ ಒದಗಿಸಲಾಗಿದೆ ಎಂದು ಮತ್ತು ರಾಷ್ಟ್ರೀಯ ರಕ್ಷಣಾನಿಧಿಯ ಹಿತರಕ್ಷಣ ಸಮಿತಿಯು ಸಂಚಾಲಕರಿಗೆ ಸುಮಾರು 1. 73 ಲಕ್ಷರೂಪಾಯಿಗಳ ಮೌಲ್ಯದ ದಾನ ವಸ್ತುಗಳು ಕಳುಹಿಸಲ್ಪಟ್ಟಿವೆಯೆಂದೂ ಮತ್ತು ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ರಕ್ಷಣಾ ನಿಧಿಯ ಲಾಟರಿ ಫಲದಿಂದ 10. 81 ಲಕ್ಷರೂಪಾಯಿಗಳು ಉಳಿದು ಇನ್ನು 80,000 ರೂಪಾಯಿಗಳನ್ನು ಟಿಕೆಟ್ ಗೆದ್ದವರಿಗೆ ಬಹುಮಾನವಾಗಿ ಕೊಡಲು ಮೀಸಲಾಗಿಟ್ಟಿದೆ ಎಂದು ತಿಳಿಸಲಾಗಿದೆ. ಆದರೆ ಈ ವಿಚಾರದಲ್ಲಿ ಕೂಡ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟಿಲ್ಲ ಆದರೆ ಆ ನೇಫಾ ಗಡಿಯಲ್ಲಿ ನಮ್ಮವರು ಎಷ್ಟು ಜನ ಇದ್ದಾರೆಂಬುದನ್ನು ತಿಳಿಸಿಲ್ಲ. ಅಲ್ಲಿಗೆ ಹೋದವರ ವಿಚಾರವೇನೆಂಬುದನ್ನೂ ತಿಳಿಸದೆ ಇವರು ಅದನ್ನು ಮುಚ್ಚಿಟ್ಟಿದ್ದಾರೆ. ಈ ಏವನ ನೇಫಾ ಗಡಿಗೆ ಹೋಗಿ ಹಿಂತಿರುಗದ ಸಂಸಾರದಲ್ಲಿರತಕ್ಕ ಹೆಣ್ಣುಮಕ್ಕಳ ಕುಟುಂಬಕ್ಕೆ ಏನು ರಕ್ಷಣೆ ಕೊಟ್ಟಿದಾರೆ, ಅವರ ಕುಟುಂಬದ ಯೋಗಕ್ಷೇಮಕ್ಕೆ ಏನು ವ್ಯವಸ್ಥೆಮಾಡಿದ್ದಾರೆಂಬುದನ್ನು ತಿಳಿಸಿಲ್ಲ ಮುಂದೆ ಉತ್ತರಕೊಡುವಾಗಲಾದರೂ ಮಾನ್ಯ ಮಂತ್ರಿಗಳು ಈ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯೋಜನೆಗಳ ವಿಚಾರಕ್ಕೆ ಬಂದರೆ: ಮೂರನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಇಡಲಾಗಿದ್ದ 250 ಕೋಟಿ ರೂಪಾಯಿಗಳಲ್ಲಿ ಶೇಕಡ 44 ರಷ್ಟು ಹಣವನ್ನು ಖರ್ಚುಮಾಡಿ ಅಷ್ಟು ಕೆಲಸವನ್ನು ಕಾರ್ಯಗತ ಮಾಡಲಾಗಿದೆಯೆಂದು ಹೇಳಿದ್ದಾರೆ ಆದರೆ ಈ ಯೋಜನೆಗಳಲ್ಲಿ ಅಪವ್ಯಯವಾದ ಹಣದ ಬಗ್ಗೆ ಏನೂ ಹೇಳಿಲ್ಲ. ಶರಾವತಿ ಯೋಜನೆಯಲ್ಲಿ ಬೇಕಾದಷ್ಟು ಹಣ ಅಪವ್ಯಯವಾಗಿದೆ. ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯನ್ನು ಬರಮಾಡಿಕೊಂಡು ಅಷ್ಟೇ ಸಾಲದೆ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳನ್ನೇ ಬರುಮಾಡಿಕೊಂಡು ಅಲ್ಲಿ ಹಣವೇನೂ ಅಪವ್ಯಯವಾಗಿಲ್ಲವೆಂದು ಅವರ ಬಾಯಿಯಿಂದ ಹೇಳಿಸಿಬಿಟ್ಟರು. ಆದರೆ ಇದಕ್ಕೆ ಹಿಂದೆ ಶ್ರೀ ನಿಜಲಿಂಗಪ್ಪನವರೇ ಒಂದಾನೊಂದು ದಿವಸ ಒಂದು ಪ್ರೈವೇಟ್ ಪೇಪರನ್ನು ಇಷ್ಯೂಮಾಡಿದಂತೆ, ನನಗೆ ಆ ಶರಾವತಿಯ ಫೈಲುಗಳೆಲ್ಲಾ ಬಂದಿವೆ. ಅವರಲ್ಲಿಸ್ವಲ್ಪ ಹಣ ಅಪವ್ಯಯವಾಗಿದ್ದರೂ ಆಗಿರಬಹುದು ಅದನ್ನೆಲ್ಲಾ ಪರಿಷ್ಕಾರಮಾಡಿ ಈ ಸಭೆಗೆ ಒಂದು ಸವಿಸ್ತಾರ ಹೇಳಿಕೆಯನ್ನು ಕೊಡುವುದಾಗಿ ತಿಳಿಸಿದ್ದರು. ಆದರೆ ಈ ದಿವಸ ಅದನ್ನೆಲ್ಲಾ ಮುಚ್ಚಿಹಾಕಲು ಶ್ರೀ ರಾವ್ ಅವರ ಬಾಯಿಯಲ್ಲಿ ಅಲ್ಲಿ ಹಣವೇನೂ ಅಪವ್ಯಯವಾಗಿಲ್ಲವೆಂದು ಹೇಳಿಸಿಬಿಟ್ಟಿದ್ದಾರೆ. ಆದರೆ ಈಗ ಜನರು ಸರ್ಕಾರದ ಬಗ್ಗೆ ಬಹಳ ಎಚ್ಚೆತ್ತಿದ್ದಾರೆ. ಸರ್ಕಾರದವರು ಈ ಯೋಜನೆಗಳ ಬಗ್ಗೆ ಆಗಿಂದಾಗ್ಗೆ ಏನೇನು ಕಾರ್ಯಕ್ರಮ ಕೈಗೊಂಡಿದ್ದಾರೆಂಬ ಬಗ್ಗೆ ತಿಳಿದುಕೊಳ್ಳಲು ಅಸೆಂಬ್ಲಿಯ ಸದಸ್ಯರಿಂದ ಆಗಿಂದಾಗ್ಗೆ ಪ್ರಶ್ನೆಗಳನ್ನು ಹಾಕಿಸುತ್ತಲೇ ಇರುತ್ತಾರೆ. ಆದ್ದರಿಂದ ಇನ್ನಾದರೂ ಇಂಥ ಮುಚ್ಚುಮರೆಮಾಡತಕ್ಕ ವಿಚಾರಕ್ಕೆ ಸರ್ಕಾರದವರು ಗಮನ ಕೊಡದೆ ತಪ್ಪಿತಸ್ಥರನ್ನು ಹಿಡಿದು ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಆಗತಕ್ಕ ಕೆಲಸಕ್ಕೆ ಅಡಚಣೆಯುಂಟಾಗದ ಹಾಗೆ ಸರ್ಕಾರದವರು ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ. ಈವರೆಗೂ ಈ ತುರ್ತ ಪರಿಸ್ಥಿತಿಯೆಂಬುದು ಚೀಣಾ ಒಂದಕ್ಕೆ ಅನ್ವಯಿಸುತ್ತಿದ್ದುದು ಇನ್ನು ಮುಂದೆ ಪಾಕಿಸ್ತಾನಕ್ಕೂ ಅನ್ವಯವಾಗುತ್ತದೆ. ಅವನ್ನೂ ಕೂಡ ನಾವು ಸಗಿತಗೊಳಿಸಬೇಕು. ಅದಕ್ಕೂ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ಇನ್ನು ನಮ್ಮ ನೆರೆಹೊರೆ ರಾಜ್ಯಗಳಾದ ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ನೀರಾವರಿ ಕಾಮಗಾರಿಗಳು ಬಹಳ ಮುಂದುವರೆದಿವೆ. ಆದರೆ ನಮ್ಮ ರಾಜ್ಯದಲ್ಲೂ ಸಾಕಷ್ಟು ನೈಸರ್ಗಿಕ ಸಂಪತ್ತಿದೆ. ಇಲ್ಲಿಯೂ ಅನೇಕ ನದಿಗಳೂ ಹೊಳೆಗಳೂ ಹರಿಯುತ್ತಿವೆ.

ಇವುಗಳಿಗೆ ಅಣೆಕಟ್ಟೆಗಳನ್ನು ಕಟ್ಟಿ ಜನರಿಗೆ ವ್ಯವಸಾಯಕ್ಕೆ ಸೌಲಭ್ಯಗಳನ್ನೊದಗಿಸದೆ ಇರುವುದು ನಮ್ಮ ದುರ್ದೈವ. ಆದರೆ ಇಲ್ಲಿಯವರೆಗೂ ಆ ತುಂಗಭದ್ರ, ಭದ್ರ ಜಲಾಶಯಗಳಲ್ಲಿ ಎಷ್ಟು ನೀರನ್ನು ಈಗಾಗಲೇ ಶೇಖರಣೆಮಾಡಲಾಗಿದೆಯೋ ಅಷ್ಟನ್ನು ಉಪಯೋಗಿಸಿಕೊಳ್ಳುವದಕ್ಕೆ ಅವಕಾಶ ಕಲ್ಪಿಸಿ ಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದು ತುಂಬಾ ವಿಷಾದಕರವಾದ ಸಂಗತಿ. ಹೀಗೆ ನಾವು ಹಿಡಿಟ್ಟುಕೊಂಡಿರತಕ್ಕ ನೀರನ್ನೂ ಉಪಯೋಗಮಾಡಲು ಅವಕಾಶವಿಲ್ಲವೆನ್ನುವುದಾದರೆ ಇನ್ನು ನಮಗೆ ಮಳೆಯಾದರೂ ಏತಕ್ಕೆ ಬರಬೇಕು ? ಈ ದಿವಸ ರೈತರಿಗೇನು ಉಪಯೋಗವಾದಂತಾಯಿತು ? ಆದುದರಿಂದ ಇಲ್ಲಿ ಶೇಖರಿಸಿಟ್ಟಿರತಕ್ಕ ನೀರನ್ನು ಉಪಯೋಗಮಾಡಲು ಮೊದಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೃಹರಕ್ಷಣಾ ದಳಗಳ ಬಗ್ಗೆ ಹೇಳಿದ್ದಾರೆ : ಎನ್. ಸಿ. ಸಿ. ವಿಚಾರವಾಗಿ ಹೇಳಿದ್ದಾರೆ. ಈ ಮೊದಲು ಈ ಗೃಹರಕ್ಷಣಾ ದಳಗಳು ಮುಂಬೈರಾಜ್ಯದಲ್ಲಿ ಚಲಾವಣೆಯಲ್ಲಿದ್ದವು. ಈಗ ಇವುಗಳನ್ನು ರಾಜ್ಯದಲ್ಲೆಲ್ಲಾ ಹರಡಬೇಕೆಂಬ ಉದ್ದೇಶದಿಂದ ಈ ಬಗ್ಗೆ ಒಬ್ಬ ಡೆಪ್ಯುಟಿ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲರ ಹುದ್ದೆಯ ಅಧಿಕಾರಿಯೊಬ್ಬರು ಕಮಾಂಡೆಂಟ್ ಜನರಲ್‌ರಾಗಿ ನಿಯುಕ್ತರಾಗಿದ್ದಾರೆಂದು ಹೇಳಿದ್ದಾರೆ. ನನಗೆ ಗೊತ್ತಿರುವಹಾಗೆ ಈಗ ಲಕ್ಷ್ಮೇಶ್ವರದಲ್ಲಿ ಒಂದು ಯೂನಿಟ್ಟಿದೆ. ನಾನು ಅದರ ಅಕ್ವಿಸಿಷನ್ ಬಗ್ಗೆ ಅವರಿಗೆ ಒಂದು ಪತ್ರ ಬರೆದಿದ್ದೆ ಅದಕ್ಕೆ ಅವರಿಂದ ನನಗೆ ಇನ್ನೂ ಉತ್ತರ ಬಂದಿಲ್ಲ. ಇಂಥ ಯೂನಿಟ್ಟುಗಳನ್ನು ತೆರೆದರೆಷ್ಟು, ಬಿಟ್ಟರೆಷ್ಟು ? ಇಂಥ ಗೃಹರಕ್ಷಣಾ ದಳಗಳನ್ನು ಸ್ಥಾಪಿಸಿ ಸರ್ಕಾರದವರು ಸಾಧಿಸತಕ್ಕದ್ದಾದರೂ ಏನೆಂದು ಕೇಳುತ್ತೇನೆ ? ಇದಕ್ಕೆ ನೇಮಕವಾಗಿರತಕ್ಕ ಅಧಿಕಾರಿಗಳನ್ನು ಯಾವ ಆಧಾರದ ಮೇಲೆ ನೇಮಕ ಮಾಡಲಾಯಿತು, ಅದೇನು ಪಿ. ಎಸ್. ಸಿ. ಆಧಾರದ ಮೇಲೋ ಅಥವಾ ಸರ್ಕಾರಕ್ಕೆ ಬೇಕಾಗಿದ್ದವರೊಬ್ಬರನ್ನು ನೇಮಿಸಲಾಯಿತೋ ಅದನ್ನು ಇಲ್ಲಿ ತಿಳಿಸಿಲ್ಲ. ತಮ್ಮ ಮನಸ್ಸಿಗೆ ಬಂದವರೊಬ್ಬರನ್ನು ನೇಮಿಸಿದ್ದಾರೆಂದು ನಾನು ಹೇಳಬಯಸುತ್ತೇನೆ. ಈ ಗೃಹರಕ್ಷಣಾ ದಳಗಳಿಗೆ ಟ್ರೈನಿಂಗ್ ಬೇಕು. ಆದರೆ ಇಲ್ಲಿಯತನಕ ಇದ್ದ ದಳಗಳು ಮೊನ್ನೆ ಧಾರವಾಡ ಜಿಲ್ಲೆಯ ಅಣ್ಣಾವರ ಜನರನ್ನು ಸುಟ್ಟುಹಾಕಿದಾಗ, ನಿಮುಪಾಣಿಯಲ್ಲಿ ಹರಿಜನರನ್ನು ಸುಟ್ಟುಹಾಕಿದಾಗ, ಬಾಲ್ಕಿಯಲ್ಲಿ ಪೋಲೀಸ್ ಪಾಟೀಲರು 4 ಜನ ಹರಿಜನರನ್ನು ಕಂಬಕ್ಕೆ ಕಟ್ಟಿ ಹೊಡೆದು ಸಾಯಿಸಿದ್ದನ್ನು ಮತ್ತು ರಾಯಚೂರು ಜಿಲ್ಲೆಯಲ್ಲಿ ಇಡಪನೂರು ಗ್ರಾಮದಲ್ಲಿ 20 ಜನರನ್ನು ಹಿಡಿದು ಜೀವಸಹಿತ ಸುಟ್ಟ ವಿಚಾರದಲ್ಲಿ ಈ ಗೃಹರಕ್ಷಣಾ ದಳವವರೇನು ಮಾಡಿದರು ? ಆಗ ಎನ್. ಸಿ. ಸಿ. ಪೋಲೀಸ್ ಪಡೆ ಏನುಮಾಡಿತು, ಎಲ್ಲಿತ್ತು ಎಂಬುದೇ ಗೊತ್ತಾಗಲಿಲ್ಲ. ಆ ವಿಷಯದಲ್ಲಿ ರಾಜ್ಯದಲ್ಲೆಲ್ಲಾ ವಿಶೇಷ ಕಳವಳವುಂಟಾಯಿತು. ಜನರು ಯಾವರೀತಿ ಜೀವರಕ್ಷಣೆ ಮಾಡಿಕೊಳ್ಳಬೇಕು. ಇಂತಹದು ಅಲ್ಲಿ ನಡೆಯುತ್ತಿರುತ್ತದೆ ಇದರಿಂದ ಪೋಲೀಸರು ಎಷ್ಟರಮಟ್ಟಿಗೆ ದಕ್ಷತೆಯಿಂದ ಅಲ್ಲಿ ಕೆಲಸಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ ಅವರು ದಕ್ಷತೆವಹಿಸಿ ಅವರು ಕೆಲಸಮಾಡಬೇಕಾಗಿತ್ತು.

ಇನ್ನು ಪ್ರೊಹಿಬಿಷನ್ ಬಗ್ಗೆ ರಾಜ್ಯಪಾಲರು ಸರಿಯಾದಂಥ ವರದಿಯನ್ನು ಕೊಟ್ಟಿಲ್ಲ ; ಅದರಿಂದ ಮನಸ್ಸಿಗೆ ತುಂಬಾ ಅಸಮಾಧಾನವಾಯಿತು ಎಂಬುದಾಗಿ ಕೆಲವರು ಹೇಳಿದುದನ್ನೂ ನಾನೂ ಅನುಮೋದಿಸುತ್ತೇನೆ. ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಾರಾಯಿ ಮಾಡುತ್ತಿದ್ದಂಥ ನೂರಾರು ಜನರನ್ನು ಕರೆದು ಅವರನ್ನು ವಿಚಾರ ಮಾಡಿದರೆ ನಾವು ಒಂದು ದಿವಸಕ್ಕೆ 4 ಗ್ಯಾಲನ್ ಸಾರಾಯಿ ತಯಾರು ಮಾಡಿದರೆ 300 ರೂಪಾಯಿಗಳನ್ನು ಪೋಲೀಸಿನವರಿಗೆ ಲಂಚಕೊಡಬೇಕು ಎಂದು ಹೇಳುತ್ತಾರೆ. ಹೀಗೆ 150 ಮಂದಿಗಳ ಹತ್ತಿರ ಡಿಮ್ಯಾಂಡ್ ಮಾಡಿದರೆ ಆ ಕಸುಬಿನಲ್ಲಿ ತೊಡಗಿರುವವರು ಯಾವರೀತಿ ಜೀವಿಸಬೇಕು ? ಇದನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಓದಿರಬಹುದು. ಅವರು ಮಾಮೂಲು ಕೊಡಬೇಕೆಂದು ಬಂದು ಕೇಳುತ್ತಾರೆ ಅವರು ಬಂದಾಗರೆಲ್ಲಾ ಅದನ್ನು ತರಿಸಿ ಕುಡಿದೇ ಕುಡಿಯುತ್ತಾರೆ. ಒಬ್ಬಾತನಿಗೆ ಭಾರತ್‌ಮಿಲ್‌ನಲ್ಲಿ ಕೇವಲ 12 ಆಣೆ ದಿನಕೂಲಿ ಬರುತ್ತಿರಲಿಲ್ಲ. ಅವನನ್ನು ಎರಡುವರ್ಷಗಳಹಿಂದೆಯೇ ರಿಟ್ರೆಂಚ್ ಮಾಡಿದ್ದಕ್ಕೆ, ಹುಬ್ಬಳ್ಳಿಯಲ್ಲಿ ಪುನಃ ಬಟ್ಟಿಸಾರಾಯಿಯನ್ನು ತಯಾರುಮಾಡುತ್ತಾ ಈಗ ನಾಲ್ಕೈದುಸಾವಿರ ರೂಪಾಯಿಗಳ ಆಸ್ತಿವಂತನಾಗಿ 2½ಲಕ್ಷ ರೂಪಾಯಿಗಳ ಬೆಲೆಬಾಳುವಂಥ ಜಮೀನು ಸಾಗುವಳಿಗನುಕೂಲವಾದ 5-6 ಕೆರೆಗಳನ್ನು ಇಟ್ಟುಕೊಂಡಿರತಕ್ಕ ಪರಿಸ್ಥಿತಿ ಅವನಿಗೆ ಉಂಟಾಗಿದೆ, ಪೋಲೀಸರೇ ನಮ್ಮ ಹಿಂದೆ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ ಇಂಥಾದ್ದನ್ನು ಹೋಗಲಾಡಿಸುವುದಕ್ಕೆ ಈ ಸರ್ಕಾರ ಏನು ಕ್ರಮವನ್ನು ತಗೆದುಕೊಂಡಿದೆ ? ಗೃಹರಕ್ಷಣಾ ದಳ ಬೇಕೆಂದು ಹೇಳುತ್ತಾರೆ, ಪ್ರೊಹಿಬಿಷನ್ ಸಂಬಂಧದಲ್ಲಿ ಎಷ್ಟು ಮಂದಿಯನ್ನು ಹಿಡಿಯುವುದಕ್ಕೆ ಅವರು ಸಹಾಯ ಮಾಡಿದ್ದಾರೆ ? ಎನ್.ಸಿ.ಸಿ. ಪಡೆಯವರು ಏನು ದಕ್ಷತೆ ವಹಿಸಿದ್ದಾರೆಂಬ ವಿಷಯವನ್ನು ಹೇಳುತ್ತೇನೆ. ಜನರಿಗೆ ಇವತ್ತಿನ ದಿವಸ ಪೋಲೀಸ್ ರಕ್ಷಣೆ ಬೇಕಾಗಿದೆ ; ಅದು ದೊರೆಯುವಂತೆಯೂ, ಪೋಲೀಸರು ದಕ್ಷತೆಯಿಂದ ಕೆಲಸ ಮಾಡುವಂತೆಯೂ ಸರ್ಕಾರದವರು ಅದಷ್ಟುಮಟ್ಟಿಗೆ ನಿಗಾವಹಿಸಬೇಕು.

(ಶ್ರೀ ಸಿದ್ದಯ್ಯ ಕಾಶೀಮಠ)

ಇನ್ನು ಗ್ರಾಮಪಂಚಾಯಿತಿಗೆ ಹೆಚ್ಚಿನ ಅಧಿಕಾರ ಕೊಡುವ ವಿಷಯ. ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಯ ಪ್ರಕಾರ ವ್ಯವಸ್ಥೆ ಮಾಡಬೇಕೆಂಬ ಉದ್ದೇಶವನ್ನು ಹೊಂದಿದ್ದಾರೆ. ಅದು, ಒಳ್ಳೆಯದು. ಅದು ಮೊದಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಅನಂತರ ಜಾರಿಗೆ ಬರಬೇಕು. ನನ್ನ ಮಾನ್ಯ ಸ್ನೇಹಿತರೂ, ವಿರೋಧಪಕ್ಷದ ನಾಯಕರೂ ಆಗಿರುವ ಶ್ರೀಮಾನ್ ಶಿವಪ್ಪನವರು ತಾಲ್ಲೂಕ್ ಬೋರ್ಡ್, ಗ್ರಾಮಪಂಚಾಯಿತಿ ಚುನಾವಣೆಗಳು ಜಾಗ್ರತೆಯಾಗಿ ಆಗಬೇಕೆಂದು ಹೇಳಿದುದನ್ನು ನಾನು ಸಮರ್ಥಿಸುತ್ತೇನೆ. ಈಗ ಚುನಾವಣೆ ಮಾಡದೇಹೋದರೆ ತುಂಬ ಹಣ ಅಪವ್ಯಯವಾಗುತ್ತದೆ. ಅದಕ್ಕಾಗಿ ಜಾಗ್ರತೆ ಚುನಾವಣೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಅದರ ಬಗ್ಗೆ ರೂಲ್ಸ್‌ಅನ್ನು ಮಾಡಬೇಕಾದರೂ ಒಂದೆರಡು ವರ್ಷಗಳು ಬೇಕಾಗುತ್ತವೆ. ಹಿಂದಿನಸಾರಿಯೂ ಇವುಗಳ ಚುನಾವಣೆ ಜಾಗ್ರತ ಮಾಡಬೇಕೆಂದು ಕೇಳಿಕೊಂಡರೂ ಇದುವರೆಗೆ ಮಾಡಲಿಲ್ಲ. ಇನ್ನು ವಿಳಂಬಮಾಡದೆ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಆದಷ್ಟು ಜಾಗ್ರತೆ ನಡೆಸಬೇಕು. ಇದು ಕಾರ್ಯಗತವಾದನಂತರ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಯನ್ನು ಅಂಗೀಕರಿಸಿ ಅದರ ಪ್ರಕಾರ ರಾಜ್ಯದಲ್ಲಿ ಕಾನೂನುಗಳನ್ನು ಜಾರಿಗೆ ತರುವುದು ಒಳ್ಳೆಯದು. ಅದಕ್ಕಾಗಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳ ಚುನಾವಣೆಗಳನ್ನು ಮುಂದೂಡದೆ ಸದ್ಯದ ಪರಿಸ್ಥಿತಿಯಲ್ಲಿಯೇ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಭಿವೃದ್ಧಿ ಬ್ಲಾಕುಗಳ ವಿಷಯ. ಇವುಗಳ ಅಭಿವೃದ್ಧಿಗಾಗಿ ಮೊದಲನೆಯ ಹಂತದಲ್ಲಿ 1.12 ಲಕ್ಷ, ಎರಡನೆಯ ಹಂತದಲ್ಲಿ 1 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದರಲ್ಲಿ ಎಸ್ಟಾಬ್ಲಿಷ್‌ಮೆಂಟಿಗೆ 5-5 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಇನ್ನು ಮಿಕ್ಕ 50 ಸಾವಿರ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಕಾರ್ಯಗಳಿಗಾಗಿ ಕೊಟ್ಟಿದ್ದಾರೆ. ಇದು ಬಹಳ ಕಡಮೆ. ಎರಡನೆಯ ಹಂತದಲ್ಲಿ ಎರಡು ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಸಣ್ಣ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಕ್ಕರೆ ವಿತರಣೆಯ ಬಗ್ಗೆ ಹೇಳುವುದಾದರೆ, ಬೊಂಬಾಯಿ ಕರ್ಣಾಟಕದಲ್ಲಿ ಅದನ್ನು ಸರಿಯಾಗಿ ಹಂಚುತ್ತಿಲ್ಲ. ಈ ಬಗ್ಗೆ ಮೇಲಿಂದ ಮೇಲೆ ಸರ್ಕಾರಕ್ಕೆ ವರದಿ ಮಾಡಿದ್ದರೂ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದನ್ನು ಸರಿಯಾಗಿ ಹಂಚುತ್ತಿಲ್ಲ. ಇದಕ್ಕಾಗಿ ಸಬ್‌ಆಫೀಸರನ್ನೂ ನೇಮಿಸಿಲ್ಲ. ಅಲ್ಲಿರತಕ್ಕ ಸಿಬ್ಬಂದಿ ಬಹಳ ಕಡಮೆ ಇದೆ. ಇದರಿಂದ ಈ ಕೆಲಸಕ್ಕೆ ಅಲ್ಲಿ ತುಂಬಾ ತೊಂದರೆ ಯಾಗಿದೆ. ಸರಿಯಾದ ರೀತಿಯಲ್ಲಿ ಹಂಚಿದರೆ ಇರತಕ್ಕ ಸ್ಟಾಕು ಒಂದೆರಡು ತಿಂಗಳುಗಳವರೆಗೆ ಸಾಕಾಗುತ್ತದೆ. ಈರೀತಿ ಹಂಚದೇ ಇರುವುದರಿಂದ ಸಕ್ಕರೆ ಬೆಲೆ ಈಗ ಡಬ್ಬಲ್ ಆಗಿರುವ ಪರಿಸ್ಥಿತಿ ಬಂದಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಕ್ಕರೆ ವಿತರಣೆಯ ಬಗ್ಗೆ, ಸಹಕಾರ ಸಂಘಗಳ ಮೂಲಕ ಈ ಕಾರ್ಯವಾಗಬೇಕು ಎಂದು ಹೇಳಿದ್ದಾರೆ. ಆದರೆ ಇದುವರೆಗೆ ಎಷ್ಟು ಸಹಕಾರ ಸಂಘಗಳಿಗೆ ಹಂಚಿದ್ದಾರೆಂದು ನಾನು ಕೇಳುತ್ತೇನೆ. ಧಾರವಾಡದ ವಿಚಾರದಲ್ಲಿ ನಾನು ಹೇಳುವುದಾದರೆ ಅಲ್ಲಿ ಕೇವಲ ಖಾಸಗೀ ಜನಗಳಿಗೆ ಉತ್ತೇಜನ ಕೊಡುತ್ತಿದ್ದಾರೆಯೇ ಹೊರತು ಸಹಕಾರ ಸಂಘಗಳಿಗೆ ಕೊಡುತ್ತಾ ಇಲ್ಲ. ಆದ್ದರಿಂದ ಧಾರವಾಡದಲ್ಲಿಯೂ ಸಕ್ಕರೆ ವಿತರಣೆಯನ್ನು ಸಹಕಾರ ಸಂಘಗಳ ಮೂಲಕವೇ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ವಿಷಯ. ತುಂಗಭದ್ರಾ ನದಿ, ವರದಾ ನದಿ ಮತ್ತು ಮಲಪ್ರಭಾ ನದಿಗಳು ಸರಾಗವಾಗಿ ಹರಿಯುತ್ತಿದ್ದರೂ ಅದರ ಉಪಯೋಗ ಧಾರವಾಡ ಜಿಲ್ಲೆಗೆ ಆಗುತ್ತಾ ಇಲ್ಲ. ಈ ಮಲಪ್ರಭಾ ಯೋಜನೆಯಿಂದ ಕೇವಲ ಐದಾರು ತಾಲ್ಲೂಕುಗಳಿಗೆ ನೀರು ಸೌಕರ್ಯ ಉಂಟಾಗಬಹುದೆಂಬುದಾಗಿ ನನ್ನ ಅಭಿಪ್ರಾಯ. ಇವೆಲ್ಲಾ ಆಡಂಬರವೇ ಹೊರತು ಯಾವತರಹ ಕೆಲಸವೂ ಇದರಿಂದ ಆಗುವುದಿಲ್ಲ. 10 ವರ್ಷಗಳಾದರೂ ನೀರೇ ಸಿಕ್ಕುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳ ಮುಖಾಂತರ ನೀರಾವರಿ ಸೌಕರ್ಯವನ್ನು ಒದಗಿಸಿ ಕೊಟ್ಟರೆ ಕ್ಷಾಮಪರಿಸ್ಥಿತಿಯಲ್ಲಿ ಅಭಾವ ಪ್ರದೇಶಗಳಲ್ಲಿರತಕ್ಕ ತೊಂದರೆಯನ್ನು ನೀಗಿಸುವುದಕ್ಕೆ ಅನುಕೂಲವಾಗುತ್ತದೆ. ನೀರಾವರಿ ಸೌಕರ್ಯಗಳನ್ನು ಉತ್ತೇಜನಕರವಾಗಿ ಮಾಡಿದರೆ ಇದರಿಂದ ರಾಜ್ಯದಲ್ಲಿ ಹೆಚ್ಚು ಅನುಕೂಲವಾಗುವುದು. ಸಾರ್ವಜನಿಕ ಸಮಾರಂಭಗಳಲ್ಲಿ ಬೇಕಾದಷ್ಟು ಬಾವಿಗಳನ್ನು ನಿರ್ಮಾಣ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ, ಎಲ್ಲಾಕಡೆಗಳಲ್ಲೂ ಬಾವಿಗಳ ನಿರ್ಮಾಣದ ಬಗ್ಗೆ ಯಾವ ಒಂದು ಅಂದಾಜನ್ನು ಇವರು ಹಾಕಿಕೊಂಡಿಲ್ಲ. ಬಾವಿಗಳ ಸಪ್ತಾಹ ಕಾರ್ಯಕ್ರಮವನ್ನು ಹಾಕಿಕೊಂಡಾಗ್ಗೆ ಬಾವಿಗಳಿಗಾಗಿ ಬಂದಿದ್ದ ಸುಮಾರು 230 ಅರ್ಜಿಗಳ ಪೈಕಿ ಕೇವಲ 40 ಅರ್ಜಿಗಳನ್ನು ಮಂಜೂರ್ಮಾಡಿ ಬಾವಿಗಳನ್ನು ಕೊಟ್ಟಿದ್ದಾಗೆ. ಮಿಕ್ಕ ಅರ್ಜಿಗಳೆಲ್ಲಾ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿಯೇ ಬಿದ್ದಿವೆ. ಆದ್ದರಿಂದ ಸರ್ಕಾರದವರು ಈ ಬಾವಿಗೆ ಹೆಚ್ಚು

ಹಣವನ್ನು ಒದಗಿಸಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿಗೆ ನೀರಾವರಿ ಸೌಲಭ್ಯವನ್ನು ಮಾಡಿಕೊಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮಿ, ನಮ್ಮ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಕೃತಜ್ಞತಾ ಸೂಚನೆಯ ಪ್ರಸ್ತಾವವನ್ನು ಸ್ವಾಗತಿಸುತ್ತಾ, ಮೊದಲನೆಯದಾಗಿ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿ ಒಂದೆರಡು ಸಲಹೆಗಳನ್ನು ಹೇಳುತ್ತೇನೆ. ಆಹಾರಧಾನ್ಯಗಳನ್ನು ಹೆಚ್ಚು ಉತ್ಪತ್ತಿ ಮಾಡಬೇಕೆಂದು ಬಹಳ ಪ್ರಚಾರವೇನೋ ನಡೆಯುತ್ತಿದೆ. ಈ ಬಗ್ಗೆ ಸಾಕಷ್ಟು ಸರ್ಕಾರದವರು ಕಾರ್ಯಕ್ರಮವನ್ನು ಹಾಕಿದ್ದರೂ ಅವು ಯಶಸ್ವಿಯಾಗಿ ನಡೆಯುತ್ತಾ ಇಲ್ಲ. ಆಹಾರಧಾನ್ಯಗಳನ್ನು ರಾಜ್ಯದಲ್ಲಿ ಹೆಚ್ಚು ಉತ್ಪತ್ತಿ ಮಾಡುವುದಕ್ಕೂ ಸಾಧ್ಯವಾಗಿಲ್ಲ. ಈಗ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಹಾಸನದಲ್ಲಿ 6 ಸಾವಿರ ಕೆರೆಗಳಿವೆ. ರಾಜ್ಯದ ಎಲ್ಲೋ ಒಂದೊಂದು ತಾಲ್ಲೂಕಿಗೆ ಲಕ್ಷಾಂತರ ರೂಪಾಯಿಗಳನ್ನು ಈ ಬಾಬಿಗೆ ಕೊಡುತ್ತಿದ್ದೀರಿ ಎಂಬುದಾಗಿ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಇಷ್ಟು ಕೆರೆಗಳಿದ್ದರೂ ಕೆರೆಗಳ ಕಾಮಗಾರಿ ಕೆಲಸಗಳು ಬಹಳ ಕಡಮೆಯಾಗಿ ಆಗುತ್ತಾ ಇವೆ. ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಿಗೆ ಬಾವಿಗಳಾಗದಿರುವಾಗ ಸಣ್ಣಪುಟ್ಟ ಕೆರೆಗಳನ್ನು ಚೆನ್ನಾಗಿ ಅಭಿವೃದ್ಧಿ ಮಾಡಿದರೆ ಆಹಾರೋತ್ಪತ್ತಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹುಚ್ಚು ಬೆಳೆಯನ್ನೂ ಸಹ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದರ ಜೊತೆಗೆ ರಾಯಚೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಗಡಲೆ, ಬತ್ತದ ಬೆಳೆಗಳನ್ನು ತೀವ್ರವಾಗಿ ಬೆಳೆಯುವುದಕ್ಕೆ ಪ್ಯಾಕೇಜ್ ಪ್ರೋಗ್ರಾಂ ಹಾಕಿಕೊಂಡಿರುವಂತೆ ಉಳಿದ ಜಿಲ್ಲೆಗಳಲ್ಲಿ ಯಾವ್ಯಾವ ಮುಖ್ಯ ಬೆಳೆಗಳನ್ನು ಬೆಳೆಯುತ್ತಾರೋ ಆ ಬೆಳೆಗಳನ್ನೆಲ್ಲಾ ತೀವ್ರವಾಗಿ ಅಭಿವೃದ್ಧಿಮಾಡುವುದಕ್ಕೋಸ್ಕರ ಆ ತರಹದಲ್ಲಿ ಎಲ್ಲಾ ಕಡೆಗಳಲ್ಲೂ ಪ್ಯಾಕೇಜ್ ಸ್ಕೀಮುಗಳನ್ನು ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಆ ಮೇಲೆ ರಾಜ್ಯಪಾಲರ ಭಾಷಣದಲ್ಲಿ ರಸ್ತೆ ಸಾರಿಗೆ ಕಾರ್ಪೊರೇಷನ್ನಿನವರು ಪ್ರಸಕ್ತ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತಷ್ಟು ಪ್ರದೇಶದಲ್ಲಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಸರ್ಕಾರದವರು ರಾಷ್ಟ್ರೀಕರಣ ಮಾಡಿದಂತಹ ಪ್ರದೇಶಗಳಲ್ಲಿ ರಾಷ್ಟ್ರೀಕರಣದಿಂದ ಜನತೆಗೆ ಪ್ರಯೋಜನವಾಗಿದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಒಪ್ಪಿಕೊಂಡಿರತಕ್ಕ ನಾವು ರಾಷ್ಟ್ರೀಕರಣವನ್ನು ಒಪ್ಪಿಕೊಂಡಿದ್ದೇವೆ. ಆದರೆ ರಾಷ್ಟ್ರೀಕರಣ ಮಾಡುವಾಗ ಅದರಿಂದ ಜನತೆಗೆ ಉಪಯೋಗ ಆಗಬೇಕು. ಅದರಿಂದ ಉಪಯೋಗವಾಗದೆ ಒಂದು ತತ್ವದೃಷ್ಟಿಯಿಂದ ರಾಷ್ಟ್ರೀಕರಣ ಮಾಡುವುದು ಸರಿಯಲ್ಲ. ಈಗಾಗಲೇ ಸರ್ಕಾರದವರು ರಾಷ್ಟ್ರೀಕರಣ ಮಾಡಿರತಕ್ಕ ಪ್ರದೇಶದಲ್ಲಿ ಸರಿಯಾದ ಆಡಳಿತವನ್ನು, ಸರಿಯಾದ ವ್ಯವಸ್ಥೆಯನ್ನು ಉಂಟುಮಾಡಿ ಅನಂತರ ಉಳಿದ ಪ್ರದೇಶಗಳಲ್ಲಿ ರಾಷ್ಟ್ರೀಕರಣ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ ಬಸ್ ಲೈನುಗಳು ರಾಷ್ಟ್ರೀಕರಣವಾದ ಮೇಲೆ ಅಲ್ಲಿನ ಪ್ರಯಾಣಿಕರಿಗೆ ಆಗಿರತಕ್ಕ ಕಿರುಕುಳ ಮತ್ತು ತೊಂದರೆಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರಸ್ತೆ ಸಾರಿಗೆ ಶಾಖೆಯನ್ನು ವಹಿಸಿಕೊಂಡಿರತಕ್ಕ ನಮ್ಮ ಮಾನ್ಯ ಮಂತ್ರಿಗಳು ಬರೀ ಪ್ರಯಾಣಿಕರ ಮೇಲೆ ಮಾತ್ರ ತಪ್ಪನ್ನು ಹೊರಿಸಿ ಸಾರ್ವಜನಿಕರದು ತಪ್ಪು ಎನ್ನತಕ್ಕ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆಯೇ ವಿನಾ ಅಧಿಕಾರಿಗಳು ಏನು ತಪ್ಪು ಮಾಡುತ್ತಾರೆ. ಅಧಿಕಾರಿಗಳೂ ಸಹ ತಪ್ಪು ಮಾಡಿದ್ದಾರೆಯೇ ಇಲ್ಲವೆ ಎನ್ನತಕ್ಕ ವಿಚಾರವನ್ನು ಮಾತ್ರ ಯಾವ ಸಭೆಯಲ್ಲೂ ಹೇಳುವುದಿಲ್ಲ. ಅಧಿಕಾರಿಗಳ ಮೀಟಿಂಗ್‌ನಲ್ಲೂ ಹೇಳುವುದಿಲ್ಲವೋ ಏನೋ ಗೊತ್ತಿಲ್ಲ. ಅದೂ ಕೂಡ ಅನುಮಾನವಾಗಿದೆ. ನಮ್ಮ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾದ ಮೇಲೆ ಅಲ್ಲಿನ ಜನ ಬಹಳಮಟ್ಟಿಗೆ ನೊಂದಿದ್ದಾರೆ. ಇದರ ಜೊತೆಗೆ ರಸ್ತೆ ಸಾರಿಗೆ ಕಾರ್ಪೊರೇಶನ್ನಿನಲ್ಲಿ ಕೆಲಸಕ್ಕೆ ಸೇರಿಕೊಂಡಿರತಕ್ಕ ಬಹಳ ಜನ ಕೆಲಸವಿಲ್ಲದೆ ಸುಮ್ಮನೆ ಓಡಾಡುತ್ತಿರುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆಯೋ ಅದು ನನಗೆ ಗೊತ್ತಿಲ್ಲ. ಅಂತೂ ಬಸ್ಸುಗಳು ಮಾತ್ರ ಕಾಲಕಾಲಕ್ಕೆ ಸರಿಯಾಗಿ ಓಡುವುದಿಲ್ಲ. ಬಸ್ಸುಗಳು ಸೇರಬೇಕಾದಂತಹ ಸ್ಥಳಗಳನ್ನು ಸರಿಯಾದ ಕಾಲಕ್ಕೆ ಸೇರುವುದಿಲ್ಲ. ಕೆಲವು ವೇಳೆ ಬಸ್ಸುಗಳು ದಾರಿಯ ಮಧ್ಯದಲ್ಲಿ ಹಾಗೆಯೇ ಕೆಟ್ಟು ನಿಂತುಬಿಡುತ್ತವೆ. ಮಕ್ಕಳುಮರಿಗಳನ್ನು ಕಟ್ಟಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗತಕ್ಕ ಸಂಸಾರಗಳಿಗೆ ಆಗತಕ್ಕಂಥ ತೊಂದರೆ ಅಷ್ಟಿಷ್ಟಲ್ಲ. ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದರ ಜೊತೆಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಟಿಕೆಟ್‌ಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆಯಲ್ಲಿರತಕ್ಕ ತೊಂದರೆಯನ್ನೂ ನಾನು ಹೇಳುತ್ತೇನೆ. ಮೊನ್ನೆ ನಾನು ಹಾಸನದಿಂದ ಬೆಂಗಳೂರಿಗೆ ಬರುವಾಗ ಬಸ್ ಸ್ಟ್ಯಾಂಡಿನಲ್ಲಿ ಒಬ್ಬ ಪ್ರಯಾಣಿಕನಿಗೆ ಬೆಳಿಗ್ಗೆ ಏಳೂವರೆ ಗಂಟೆಗೆ ಟಿಕೇಟ್ ಕೊಟ್ಟಿದ್ದರು. ಆದರೆ ಬಸ್ಸು ಏಳೂವರೆ ಗಂಟೆಗೆ ಹೊರಡಲಿಲ್ಲ.

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ಎಂಟು ಗಂಟೆಗೆ ಹೊರಟಿತು. ಆಮೇಲೆ ನಮ್ಮ ಬಸ್ಸು ಎಂಟು ಮೈಲಿ ಬಂದಮೇಲೆ ಇನ್‌ಸ್ಪೆಕ್ಟರು ಟಿಕೆಟ್‌ಗಳನ್ನು ಚೆಕ್ ಮಾಡಿದಾಗ ಆತ ಕೊಂಡುಕೊಂಡಿರತಕ್ಕ ಟಿಕೆಟ್ ಅನ್ನು ನೋಡಿ ಈ ಟಿಕೆಟ್ ಈ ಬಸ್ಸಿಗೆ ಸಂಬಂಧಪಟ್ಟಿದ್ದಲ್ಲ, ಇದು ಬೇರೆ ಬಸ್ಸಿಗೆ ಸಂಬಂಧಪಟ್ಟಿದ್ದು ಆದ್ದರಿಂದ ಬೇರೆ ಬಸ್ ಚಾರ್ಜ್ ಕೊಡಿ ಟಿಕೇಟ್ ಕೊಂಡುಕೊಳ್ಳಿ ಇಲ್ಲದೆ ಇದ್ದರೆ ಈ ಬಸ್ಸಿನಿಂದ ಇಳಿದುಬಿಡಿ ಎಂದು ಹೇಳಿದರು. ಈ ರೀತಿ ದಾರಿಯ ಮಧ್ಯದಲ್ಲಿ ತೊಂದರೆ ಮಾಡಿದರೆ; ಆಕಸ್ಮಾತ್ ಪ್ರಯಾಣಿಕರ ಹತ್ತಿರ ದುಡ್ಡು ಇಲ್ಲದೆ ಹೋದರೆ ಮುಂದೆ ಅವರ ಗತಿಯೇನು ? ದಾರಿಯ ಮಧ್ಯದಲ್ಲಿ ಯಾರು ದುಡ್ಡು ಕೊಡುತ್ತಾರೆ ? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಪ್ರಯಾಣಿಕರು ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆ ದಂಡನೆಗೆ ಅರ್ಹರಾಗುತ್ತಾರೆ ಎಂದು ಹೇಳಿದಮೇಲೆ ಬಸ್ ಸ್ಟ್ಯಾಂಡಿನಲ್ಲಿ ಈಗ ಟಿಕೆಟ್ ಕೊಡತಕ್ಕ ವ್ಯವಸ್ಥೆಯಿಂದ ಏನು ಪ್ರಯೋಜನವಿಲ್ಲ ಎಂದು ನಾನು ಹೇಳುತ್ತೇನೆ. ಸಾರ್ವಜನಿಕರಿಂದ ಎಷ್ಟೋ ದೂರುಗಳು ಬಂದರೂ ಪ್ರಯಾಣಿಕರಿಗೆ ಸೌಕರ್ಯವನ್ನು ಒದಗಿಸಿಕೊಡತಕ್ಕ ವಿಚಾರದಲ್ಲಾಗಲೀ ಬಸ್ಸಿನಲ್ಲಿರತಕ್ಕ ನೌಕರರು ಪ್ರಯಾಣಿಕರ ವಿಷಯದಲ್ಲಿ ಯಾವ ರೀತಿ ವರ್ತಿಸುತ್ತಿದ್ದಾರೆ ಎನ್ನತಕ್ಕ ವಿಷಯದಲ್ಲಾಗಲೀ ಸ್ವಲ್ಪವೂ ಗಮನವನ್ನು ಕೊಡುತ್ತಿಲ್ಲ. ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಈಗ ಎರಡು ವರ್ಷಗಳಿಂದಲೂ ಹಾಸನ ಮತ್ತು ಹಳೆಯ ಮೈಸೂರಿನ ಕೆಲವು ಭಾಗಗಳಲ್ಲಿ ರಾಷ್ಟ್ರೀಕರಣವಾಗಿರುವ ಪ್ರದೇಶದಲ್ಲಿ ನಷ್ಟವಾಗುತ್ತಿರುವುದಲ್ಲದೆ ಪ್ರಯಾಣಿಕರಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ರಾಷ್ಟ್ರೀಕರಣ ಮಾಡಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರಯಾಣಿಕರಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಸಮಾಜ ಕಲ್ಯಾಣ ಇಲಾಖೆಯ ವಿಷಯವನ್ನು ಹೇಳುವುದಾದರೆ ಈ ಇಲಾಖೆಯಲ್ಲಿ ಸಾಕಷ್ಟು ಕೆಲಸಗಳು ನಡೆಯುತ್ತಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಾರೆ. ಆ ಇಲಾಖೆಯಲ್ಲಿ ಏನು ಕೆಲಸ ನಡೆಯುತ್ತದೆಯೋ ಏನೋ ನನಗಂತೂ ಗೊತ್ತಿಲ್ಲ. ಹರಿಜನರಿಗೆ ಮತ್ತು ಗಿರಿಜನರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಈಗ ಎರಡು ವರ್ಷಗಳಿಂದಲೂ ಭಾಷಣ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೆಲಸಗಳು ಆಗಿದ್ದನ್ನು ನೋಡಿದರೆ ಏನು ಕೆಲಸವೂ ಆಗಿಲ್ಲ. ಯಾವ ಕೆಲಸವನ್ನೂ ಮಾಡಿಲ್ಲ. ಈಗ್ಗೆ ಎರಡು ವರ್ಷಗಳ ಹಿಂದೆ ಆ ಇಲಾಖೆಯಲ್ಲಿ ಎಷ್ಟು ಕೆಲಸವಾಗಿತ್ತೋ ಅಷ್ಟೇ. ಸರ್ಕಾರದವರು ಇತ್ತಕಡೆ ಸ್ವಲ್ಪ ಗಮನಿಸಬೇಕು.

ಇನ್ನು ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣವನ್ನೇನೋ ಸರಕಾರದವರು ಖರ್ಚು ಮಾಡುತ್ತಿದ್ದಾರೆ, ಅದನ್ನು ಸ್ವಾಗತ ಮಾಡುತ್ತೇನೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕ ಹಣ ಸದ್ವಿನಿಯೋಗವಾಗುವಹಾಗೆ ಖರ್ಚು ಮಾಡಬೇಕು. ಎಷ್ಟೋ ಹರಿಜನ ವಿದ್ಯಾರ್ಥಿಗಳ ಹಾಸ್ಟೆಲುಗಳಿಗೆ ಬೇಕಾದಂತ ಕಟ್ಟಡಗಳಿಲ್ಲ. ಎಷ್ಟೋಕಡೆ ಅನೇಕ ವಿದ್ಯಾರ್ಥಿನಿಲಯಗಳು ಟೌನಿನ ಮಧ್ಯದಲ್ಲಿ ಇವೆ. ಒಂದು ಹರಿಜನ ವಿದ್ಯಾರ್ಥಿಗಳ ಕಾಲೇಜು ವಿದ್ಯಾರ್ಥಿನಿಲಯ ಸುಮಾರು 25ವರ್ಷಗಳಿಂದಲೂ ನಡೆಯುತ್ತಾ ಇದೆ. ಆ ವಿದ್ಯಾರ್ಥಿನಿಲಯ 25 ವರ್ಷಗಳಿಂದ ನಡೆಯುತ್ತಾ ಇದ್ದರೂ ಅದಕ್ಕೆ ಬೇಕಾದ ಒಂದು ಸ್ವಂತ ಕಟ್ಟಡವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಂಬುದು ಇದರಿಂದಲೇ ಗೊತ್ತಾಗುತ್ತದೆ ಆ ಹಾಸ್ಟಲಿನ ಕಟ್ಟಡದ ಮಾಲೀಕರನ್ನು ರಿಪೇರಿ ಮಾಡಿಸಿಕೊಡಿ ಎಂದು ಕೇಳಿದರೆ ರಿಪೇರಿ ಮಾಡಿಸುವುದಕ್ಕೆ ಸಾಧ್ಯವಿಲ್ಲ, ನಿಮಗೆ ಈ ಕಟ್ಟಡಬೇಕಿಲ್ಲದಿದ್ದರೆ ಬಿಟ್ಟುಬಿಡಿ ಬೇರೆಯವರಿಗೆ ಬಾಡಿಗೆಗೆ ಕೊಡುತ್ತೇನೆ ಎಂದು ಹೇಳುತ್ತಾರೆ. ಇದೇ ರೀತಿ ಎಷ್ಟೋ ಹಾಸ್ಟಲುಗಳಿಗೆ ಸ್ವಂತ ಕಟ್ಟಡಗಳಿಲ್ಲದೆ ತೊಂದರೆಯಾಗಿದೆ. ಆದರೂ ಸಹ ಇಂತಹ ಹಾಸ್ಟಲುಗಳಿಗೆ ಸರ್ಕಾರದವರು ಸ್ವಂತ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಉಪಯೋಗಕ್ಕೆ ಬಾರದ ಎಷ್ಟೋ ಕೆಲಸಗಳಿಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಇಂಥಾ ಕೆಲಸಗಳಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡುವುದಿಲ್ಲ. ಇದರಿಂದ ಹರಿಜನರು ಮತ್ತು ಗಿರಿಜನರ ವಿಚಾರದಲ್ಲಿ ನಮ್ಮ ಸರ್ಕಾರದವರಿಗೆ ಇನ್ನೂ ಉದಾಸೀನ ಪ್ರವೃತ್ತಿ ಹೋಗಿಲ್ಲ ಎಂಬುದು ಗೊತ್ತಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಸ್ಕೂಲುಗಳು ಮತ್ತು ಶಿಶುವಿಹಾರಗಳನ್ನು ತೆರೆದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಎಲ್ಲಿ ನೋಡಿದರೂ ತರಪೇತಾದ ಉಪಾಧ್ಯಾಯರು ಇಲ್ಲ ಎಂದು ಹೇಳುತ್ತಿದ್ದಾರೆ; ಮತ್ತು ಸ್ಕೂಲುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ನೋಡಿದರೆ ಈ ಇಲಾಖೆಯ ಆಡಳಿತದಲ್ಲಿ ಲೋಪದೋಷಗಳಿವೆ ಎಂಬುದು ಗೊತ್ತಾಗುತ್ತದೆ. ಈ ಇಲಾಖೆಯಲ್ಲಿ ಡೈರೆಕ್ಟರಿಂದ ಹಿಡಿದು ಜವಾನರವರೆಗೂ ಯಾರಿಗೂ ಹೆದರಿಕೆಯೇ ಇಲ್ಲ. ಬೇಜವಾಬ್ದಾರಿ ಜಾಸ್ತಿ

ಯಾಗಿದೆ. ಇದಕ್ಕೆ ಕಾರಣವೇನೆಂದರೆ ಇಲಾಖೆಯವರು ಸರಿಯಾಗಿ ಕ್ರಮವನ್ನು ತೆಗೆದುಕೊಂಡಿದ್ದರೆ ಆ ರೀತಿಯ ಬೇಜವಾಬ್ದಾರಿ ಇರುತ್ತಾ ಇರಲಿಲ್ಲ. ಈ ರೀತಿ ಬೇಜವಾಬ್ದಾರಿಯಿಂದ ನಡೆಯತಕ್ಕ ಇಲಾಖೆಯಲ್ಲಿ ಎಷ್ಟು ಖರ್ಚು ಮಾಡಿದರೂ ಹಣ ಪೋಲಾಗುತ್ತದೆ. ಸರ್ಕಾರದವರು ಜನತೆ ಕೊಡ ತಕ್ಕ ದುಡ್ಡನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿ ಅದು ಸದ್ವಿನಿಯೋಗವಾಗುವ ಹಾಗೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಹರಿಜನರಿಗೆ ಸಂಬಂಧಪಟ್ಟಂತೆ, ಇನ್ನೂ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ನಾನು ತರಬೇಕೆಂದಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ಆಗಿರತಕ್ಕ ತೀರ್ಮಾನವನ್ನು ಜಾರಿಗೆ ತರಬೇಕು, ಪ್ರಮೋಷನ್ ವೇಕೆನ್ಸಿಯಲ್ಲಿ ಹರಿಜನರಿಗೆ ನ್ಯಾಯವನ್ನು ದೊರಕಿಸಿ ಸರಿಯಾದ ಪರ್ಸೆಂಟೇಜನ್ನು ಕೊಡಬೇಕೆಂದು ಈಗ ಎರಡು ವರ್ಷಗಳಿಂದಲೂ ಸರ್ಕಾರದವರನ್ನು ಕೇಳುತ್ತಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಅದನ್ನು ಜಾರಿಗೆ ತರುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೂ ಆ ಕಾರ್ಯ ಹಾಗೆಯೇ ಹಿಂದೆ ಬಿದ್ದಿದೆ. ಅದು ಆ ರೀತಿ ಆಗಬಾರದು. ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಮೋಷನ್ನಿನ ವಿಚಾರದಲ್ಲಿ ಸಣ್ಣ ಕೆಲಸವಾಗಲೀ ದೊಡ್ಡ ಹುದ್ದೆಯಾಗಲೀ ಹರಿಜನರಿಗೆ ಸಿಕ್ಕಬೇಕಾದಂತಹ ಹುದ್ದೆಯನ್ನು ಕೊಡಿಸಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಐ.ಎ.ಎಸ್. ಮತ್ತು ಐ.ಪಿ.ಎಸ್. ತರಪೇತಿ ಕೇಂದ್ರಗಳನ್ನು ತೆರೆದಿದ್ದಾರೆ. ಇದರಿಂದ ಹರಿಜನರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ಈ ತರಪೇತಿ ಕೇಂದ್ರಗಳಲ್ಲಿ ನೇಮಕವಾಗಿರತಕ್ಕ ಅಧ್ಯಾಪಕವರ್ಗ ಏನಿದೆಯೋ ಅದು ಅಷ್ಟು ಚೆನ್ನಾಗಿಲ್ಲ. ಎರಡು ಮೂರು ವರ್ಷ ಸರ್ವೀಸ್ ಆಗಿರತಕ್ಕ ಲೆಕ್ಚರರುಗಳನ್ನು ಅಲ್ಲಿ ಪಾಠ ಹೇಳುವುದಕ್ಕೆ ನೇಮಕಮಾಡಿದ್ದಾರೆ. ಅಲ್ಲಿ ಪಾಠವನ್ನು ಹೇಳತಕ್ಕ ಲೆಕ್ಚರರುಗಳೇ ಐ.ಎ.ಎ.ಎಸ್. ಮತ್ತು ಐ.ಪಿ.ಸಿ. ಪರೀಕ್ಷೆಗಳಿಗೆ ಕುಳಿತು ಕೊಂಡರೆ ಅವರಿಗೆ ಅದನ್ನು ಪಾಸು ಮಾಡತಕ್ಕ ಯೋಗ್ಯತೆ ಇದೆಯೋ ಇಲ್ಲವೋ ಅದು ಅನುಮಾನಾಸ್ಪದವಾಗಿದೆ. ಸರ್ಕಾರದವರು ಖರ್ಚು ಮಾಡತಕ್ಕ ಹಣ ಪೋಲಾಗದೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು. ಆ ತರಪೇತಿ ಕೇಂದ್ರದಲ್ಲಿ ತರಪೇತಿಯನ್ನು ಪಡೆದ ವಿದ್ಯಾರ್ಥಿಗಳಲ್ಲಿ ಕೇವಲ ಎರಡು ಮೂರು ಹುಡುಗರು ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳನ್ನು ಪಾಸು ಮಾಡಿದ್ದಾರೆ. ಎರಡು ಮೂರು ಹುಡುಗರು ಆ ತರಪೇತಿ ಕೇಂದ್ರದಲ್ಲಿ ತರಪೇತಿಯನ್ನು ಪಡೆಯದೇ ಆ ಪರೀಕ್ಷೆಗೆ ಕುಳಿತುಕೊಂಡು ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳನ್ನು ಪಾಸು ಮಾಡಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಸರ್ಕಾರದವರು ಖರ್ಚು ಮಾಡತಕ್ಕ ಹಣ ದುರುಪಯೋಗವಾಗಬಾರದು. ಅದು ಸದ್ವಿನಿಯೋಗವಾಗುವುದಕ್ಕೆ ಬೇಕಾದ ಭದ್ರತೆಯನ್ನು ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀಮಾನ್ ಬೀರಪ್ಪ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಎರಡು ವರ್ಷಗಳಾದುವು. ಅದನ್ನು ಜಾರಿಗೆ ತರುವುದಕ್ಕೋಸ್ಕರ ಅದನ್ನು ಈ ಸಭೆಯಲ್ಲಿ ಚರ್ಚೆಗೆ ತರದೆ ಹಾಗೆಯೇ ಇಟ್ಟಿದ್ದಾರೆ. ಹರಿಜನರ ಬಗ್ಗೆ ಎಷ್ಟು ತಾತ್ಸಾರವಿದೆ ಎನ್ನುವುದನ್ನು ಇದು ತೋರಿಸುತ್ತದೆ. ಈ ವರದಿಯ ಚರ್ಚೆಗೆ ಅವಕಾಶಮಾಡಿಕೊಟ್ಟು ಅದರಲ್ಲಿ ಸಲಹೆಮಾಡಿರತಕ್ಕದ್ದನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇನೆ.

4-3) P.M.

Economic aid ಎಂದರೆ ಕೋಳಿ, ಎಮ್ಮೆ, ಹಸು, ಇವುಗಳನ್ನು ಹರಿಜನರಿಗೆ ಕೊಡುತ್ತಿದ್ದಾರೆ. ಒಂದು ಸಂಸಾರಕ್ಕೆ ಒಂದು ಕೋಳಿ, ಕುರಿ, ಎಮ್ಮೆ ಕೊಟ್ಟರೆ ಅದರಿಂದ ಅವನ ಆರ್ಥಿಕಸ್ಥಿತಿ ಉತ್ತಮವಾಗುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ದಯವಿಟ್ಟು ರದ್ದುಮಾಡಿ ಅದಕ್ಕೆ ಬದಲು ತಾಲ್ಲೂಕ್ ಅಥವಾ ಜಿಲ್ಲಾ ಮುಖ್ಯಸ್ಥಳಗಳಲ್ಲಿ ಒಂದೋ ಎರಡೋ ಗ್ರಾಮಾಂತರ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ ಹರಿಜನರಿಗೆ ತರಪೇತಿಯನ್ನು ಕೊಟ್ಟು ಅವರಿಗೆ ಒಂದು ಕಸುಬು ಬರುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕು. ದರಖಾಸ್ತಿನಲ್ಲಿ ಜಮೀನು ಸಿಕ್ಕತಕ್ಕದ್ದು ಕಡಮೆಯಾಗಿರುವುದರಿಂದ ಅವರಿಗೆ ಗ್ರಾಮಾಂತರ ಕೈಗಾರಿಕೆಗಳಲ್ಲಿ ತರಪೇತಿಯನ್ನು ಕೊಟ್ಟು ಅವರ ಜೀವನಕ್ಕೆ ಒಂದು ದಾರಿ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರವಾಸೋದ್ಯಮವನ್ನು ನಮ್ಮ ರಾಜ್ಯದಲ್ಲಿ ಅಭಿವೃದ್ಧಿಮಾಡಬೇಕೆಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಆದರೆ ಪ್ರವಾಸೋದ್ಯಮ ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಬೇಲೂರು ಮತ್ತು ಹಳೇಬೀಡು ದೇವಸ್ಥಾನಗಳು ಜಗತ್‌ಪ್ರಸಿದ್ಧವಾಗಿವೆ. ಇಲ್ಲಿಗೆ ಜಗತ್ತಿನ ನಾನಾ ಕಡೆಗ

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ಳಿಂದ ಪ್ರವಾಸಿಗಳು ಬರುತ್ತಾರೆ. ಈ ಸ್ಥಳದಲ್ಲಿ ಇವರು ಉಳಿದುಕೊಳ್ಳುವುದಕ್ಕೆ ಜಾಗವಿಲ್ಲ. ಹಳೇಬೀಡು ದೇವಸ್ಥಾನಕ್ಕೆ ಲೈಟುಗಳಿಲ್ಲ, ಈ ದೇವಸ್ಥಾನಗಳು ಕೇಂದ್ರಸರ್ಕಾರಕ್ಕೆ ಸೇರಿರುತ್ತವೆ. ಬೇಲೂರಿನಲ್ಲಿ ರಾಜ್ಯಸರ್ಕಾರದ ಒಂದು ಪ್ರವಾಸಮಂದಿರವಿದೆ. ಅದರಲ್ಲಿ ಐದಾರು ಕೊಠಡಿಗಳಿವೆ. ಒಂದೊಂದು ಬಸ್ಸಿನಲ್ಲಿ ಬರುವ ಪ್ರವಾಸಿಗರು ಇಲ್ಲಿ ಉಳಿದುಕೊಳ್ಳುವುದು ಹಾಗಿರಲಿ, ಕೊನೆಯ ಪಕ್ಷ ಸ್ವಲ್ಪಹೊತ್ತು ವಿಶ್ರಾಂತಿಪಡೆಯುವುದಕ್ಕಾದರೂ ಅವಕಾಶವಿಲ್ಲವೆಂದರೆ ಪ್ರವಾಸೋದ್ಯಮದಿಂದ ಏನೂ ಪ್ರಯೋಜನವಿಲ್ಲ. ಮಾನ್ಯ ಗೃಹಸಚಿವರು ಈ ಬಗ್ಗೆ ಬಹಳ ಕುತೂಹಲಗಳಾಗಿದ್ದಾರೆ. ಅವರು ಬೇಲೂರಿಗೆ ದಯಮಾಡಿಸಿದ್ದಾಗ ಬೇಲೂರು ಮತ್ತು ಹಳೇಬೀಡಿನ ಜನರು ಈ ವಿಷಯವನ್ನು ಅವರಲ್ಲಿ ಪ್ರಸ್ತಾಪಮಾಡಿ ಪ್ರವಾಸಮಂದಿರದ ಅಗತ್ಯವನ್ನು ತಿಳಿಸಿರುತ್ತಾರೆ. ಅಲ್ಲಿರುವ ಕಷ್ಟವನ್ನು ನೋಡಲಾರದೆ ಲೋಕೋಪಯೋಗಿ ಮಂತ್ರಿಗಳು ಹಳೇಬೀಡಿಗೆ ಬಂದಾಗ ಎರಡು ಕೊಠಡಿಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರು. ಅದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಇವು ಕೇಂದ್ರಸರ್ಕಾರದ ಅಧೀನದಲ್ಲಿರುವುದರಿಂದ ರಾಜ್ಯಸರ್ಕಾರವು ಕೇಂದ್ರಕ್ಕೆ ಒತ್ತಾಯಮಾಡಿ ಬೇಲೂರಿನಲ್ಲಿ ಒಂದು upper grade rest house ಆಗುವಂತೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಪ್ರಥಮವಾಗಿ ಕನ್ನಡದಲ್ಲಿ ತಮ್ಮ ಭಾಷಣವನ್ನು ಮಾಡಿದ್ದಾರೆ. ಅವಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

ಸ್ವಾಮಿ, ರಾಜ್ಯಪಾಲರ ಭಾಷಣ, ಸೊಸೈಟಿಗಳಲ್ಲಿ ವರ್ಷೇ ವರ್ಷೇ ನಡೆಯುತಕ್ಕ ಜನರಲ್ ಬಾಡಿಮೀಟಿಂಗ್ ಸಂದರ್ಭದಲ್ಲಿ ಒಪ್ಪಿಸುವ ಒಂದು ಪುಟ್ಟ ವರದಿಯಂತಿದೆ ಎಂದರೆ ತಪ್ಪಾಗಲಾರದು. ಸಹಕಾರಸಂಘಗಳಲ್ಲಿ ಒಂದು ಮಾಮೂಲಿ ವರದಿಯನ್ನು ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಸದಸ್ಯರ ಸಂಖ್ಯೆ ಎಷ್ಟು, ಬಂಡವಾಳವೆಷ್ಟು, ಕುರ್ಚಿ, ಮೇಜು, ಎಷ್ಟಿವೆ, ಹಳೆಯ ಗೋಣಿಚೀಲ ಎಷ್ಟಿವೆ. ಇತ್ಯಾದಿ ವಿವರಗಳನ್ನೊಳಗೊಂಡ ಒಂದು ಪಟ್ಟಿಯನ್ನು ಇಟ್ಟುಕೊಂಡಿರುತ್ತಾರೆ. ಅದೇ ರೀತಿಯಲ್ಲಿಯೇ ರಾಜ್ಯಪಾಲರ ಭಾಷಣವೂ ಇದೆ ಎಂದರೆ ತಪ್ಪಾಗಲಾರದು. ಇದರಲ್ಲಿ ಕೊಟ್ಟಿರುವ ರಾಷ್ಟ್ರೀಯರಕ್ಷಣಾನಿಧಿ, ಯೋಜನಾಕಾರ್ಯಕ್ರಮ ಇವುಗಳ ಬಗ್ಗೆ ನೋಡಿದರೆ ದೇಶಕ್ಕೆ ಆಪತ್ತು ಬಂದಾಗ ಪ್ರತಿಯೊಬ್ಬ ಪ್ರಜೆಯೂ ತನ್ನಶಕ್ತಿಮೀರಿ ಆಡಳಿತ ನಡೆಸುತ್ತಿರುವ ಪಕ್ಷಕ್ಕೆ ಸಹಕಾರ ಕೊಡತಕ್ಕದ್ದು ಅಗತ್ಯ. ಪ್ರತಿಯೊಂದು ಪಕ್ಷವೂ ತನ್ನ ಸಹಕಾರವನ್ನು ಈ ದಿಸೆಯಲ್ಲಿ ಕೊಟ್ಟಿದೆ. ನಮ್ಮ ರ್ಯಾಜಪಾಲರು ಅಧಿಕ ಉತ್ಪಾದನೆಗಾಗಿ ಜನತೆಯ ಸಹಕಾರ ಹೆಚ್ಚು ಅವಶ್ಯಕವಾಗಿದೆ ಎಂದು ತಿಳಿಸಿದ್ದಾರೆ. ಆಡಳಿತ ಪಕ್ಷದವರು ಅಧಿಕ ಉತ್ಪಾದನೆಗೆ ವಿರೋಧಪಕ್ಷದ ಸದಸ್ಯರ ಹಾಗೂ ದೇಶದ ಜನತೆಯ ಸಹಕಾರವನ್ನು ಎಷ್ಟರಮಟ್ಟಿಗೆ ಬಯಸುತ್ತಾರೆಯೋ ಆ ರೀತಿಯಲ್ಲಿ ದೊರಕುತ್ತದೆಂದು ನಾನು ಹೇಳುತ್ತೇನೆ. ಈ ದಿಸೆಯಲ್ಲಿ ದೇಶಕ್ಕೆ ಆಪತ್ತು ಬಂದಾಗ ಪ್ರತಿಪ್ರಜೆಯೂ ತನ್ನಶಕ್ತಿಮೀರಿ ದೇಶದ ರಕ್ಷಣೆಗೆ, ದೇಶದ ಹಿತಕ್ಕಾಗಿ ದುಡಿಯುತಕ್ಕದ್ದು ಪ್ರತಿಯೊಬ್ಬನಕರ್ತವ್ಯ. ಇಷ್ಟಾದರೂ 'ಊರು ದೋಚಿಕೊಂಡು ಹೋದಮೇಲೆ ದೊಡ್ಡಿಬಾಗಿಲು ಹಾಕಿದರು'. ಎಂಬಂತೆ ದೇಶದ ನಾಯಕರು ತಾತ್ಕಾರ ಮನೋಭಾವದಿಂದ ಜನತೆಯನ್ನು ರಕ್ಷಣಾನಿಧಿಗೆ ಹಣಕೊಡಿ, ಚಿನ್ನಕೊಡಿ, ಬೆಳ್ಳಿಕೊಡಿ ಎಂದು ಸುಲಿಗೆಯನ್ನು ಮಾಡತಕ್ಕ ವಿಷಾದಕರ ಪರಿಸ್ಥಿತಿಗೆ ಬಂತು. ದೇಶದ ಜನತೆ ಕಷ್ಟಪಟ್ಟು ದುಡಿದುದರಲ್ಲಿ ತಮ್ಮ ಪಾಲನ್ನು ಕೊಡಬೇಕಾದ ಸ್ಥಿತಿಗೆ ಬಂತು. ಈ ಒಂದು ಸ್ಥಿತಿಯಲ್ಲಿ ಸಹ ದೇಶದ ಜನತೆ ತಮ್ಮ ಶಕ್ತಿಮೀರಿ ಸಹಾಯಮಾಡಿದ್ದಾರೆ.

ಸಮಾಜ ವಿಕಾಸ ಮತ್ತು ಪಂಚಾಯಿತಿ ರಾಜ್ಯಗಳ ಮಟ್ಟಿಗೆ ಹೇಳಬೇಕಾದರೆ, ಪಂಚಾಯಿತಿ ರಾಜ್ಯ ಎನ್ನುವುದು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ಇವುಗಳಲ್ಲಿ ಹಣ ದುರ್ವಿನಿಯೋಗವಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿ ತಾಲ್ಲೂಕು ಬೋರ್ಡುಗಳಲ್ಲಿಯೂ ಆಗುತ್ತಿದೆ. ದೇಶದ ಜನತೆ ಕೊಟ್ಟಂಥ ತೆರಿಗೆಯಹಣ ಅನಾವಶ್ಯಕವಾಗಿ ಖರ್ಚಾಗಿ ಯಾವುದಕ್ಕೆ ಖರ್ಚುಮಾಡಬೇಕೋ ಅಂಥದಕ್ಕೆ ಖರ್ಚುಮಾಡದೆ, ಅನೇಕ ರೀತಿಯಲ್ಲಿ ದುಂದುವೆಚ್ಚವಾಗುತ್ತಿರುವುದನ್ನು ನಾವು ಕಾಣುತ್ತೇವೆ. ಅದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಕುಣಿತಕ್ಕೆ, ನಾಟಕ ಆಡಿಸುವುದಕ್ಕೆ ಎಂದು ಅನೇಕರೀತಿಯಲ್ಲಿ ಸುಳ್ಳುಸುಳ್ಳುಲೆಕ್ಕ ಬರೆದು ಹಣವನ್ನು ಪೋಲು ಮಾಡುತ್ತಿದ್ದಾರೆ. ಈ ರೀತಿಯಾಗಿ ಕೋಟ್ಯಾಂತರ ರೂಪಾಯಿ ದುರ್ವಿನಿಯೋಗವಾಗುತ್ತಿದೆ. ಅದರಲ್ಲಿ ಸದ್ವಿನಿಯೋಗವಾಗತಕ್ಕದ್ದು ಬಹಳ ಕಡಮೆ. ಗ್ರಾಮಪಂಚಾಯಿತಿಗಳು ಅಲ್ಲಿಯ ಆಡಳಿತಗಾರರ ಕೈವಶವಾಗಿ ಅವುಗಳ ಹಣವೆಲ್ಲ ಪೋಲಾಗುತ್ತಿದೆ. ಅನೇಕ ಪಂಚಾಯಿತಿಗಳಲ್ಲಿ ಹಣ ದಿನನಿತ್ಯದ ಕಾರ್ಯಕ್ರಮಗಳ ಹೆಸರಿನಲ್ಲಿ ಲೂಟಿಯಾಗುತ್ತಿದೆ ಎಂದು ನಾನು ಈ ಸಂದರ್ಭ

ದಲ್ಲಿ ಹೇಳುತ್ತೇನೆ. ಮಾನ್ಯಮಂತ್ರಿಗಳು ಪಂಚಾಯಿತಿ ರಾಜ್ಯ ಬಹಳ ಚೆನ್ನಾಗಿ ನಡೆಯುತ್ತಿದೆ. ಆ ಬಗ್ಗೆ ಕೇಂದ್ರಮಂತ್ರಿಗಳಾದ ಶ್ರೀ ಎಸ್. ಕೆ. ಡೇ ಅವರು ಪ್ರಶಂಸೆ ಮಾಡಿದ್ದಾರೆಂದು ಹೇಳಿದರು. ಅವುಗಳ ಆಡಳಿತ ಅಷ್ಟು ಚೆನ್ನಾಗಿ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲವೆಂದು ನಾನು ಹೇಳುತ್ತೇನೆ. ಒಬ್ಬ ಮಂತ್ರಿಗಳಾದವರು ಸಮಾರಂಭಗಳಿಗೆ ಹೋಗಿ ಹೂವಿನ ಹಾರ ಹಾಕಿಸಿಕೊಂಡು ಬಂದು ಪಂಚಾಯಿತಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳುವುದು ಸರ್ವಥಾ ನ್ಯಾಯವಲ್ಲ. ಇವೊತ್ತು ಪಂಚಾಯಿತಿಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳಲ್ಲಿ ಲಕ್ಷಾಂತರ ರೂಪಾಯಿ ದುರ್ವಿನಿಯೋಗವಾಗಿ ಅನೇಕ ಜನರ ಪಾಲಾಗುತ್ತಿದೆಎಂದು ನಾನು ವಿಷಾದದಿಂದ ಹೇಳುತ್ತಿದ್ದೇನೆ. ಎಲ್ಲ ಕೆಲಸ ತಾಲ್ಲೂಕ್ ಬೋರ್ಡು ಮಾಡಬೇಕು ಅದಕ್ಕೆ ಸರ್ವ ಹಕ್ಕು ಇದೆ, ಸರ್ವ ವಿಧವಾದ ಅಧಿಕಾರ ಕೊಟ್ಟಿದ್ದೇವೆ ಎಂದು ತಾಲ್ಲೂಕ್ ಬೋರ್ಡು ಆಡಳಿತದ ಬಗ್ಗೆ ಹೇಳುತ್ತಾರೆ. ಆದರೆ ಅವುಗಳ ಆರ್ಥಿಕ ಪರಿಸ್ಥಿತಿ ಹೇಗಿದೆ, ಆದಾಯ ಏನಿದೆ, ಯಾವ ಯಾವ ಕೆಲಸ ನಿರ್ವಹಿಸಬಲ್ಲವು ಎಂಬುದನ್ನು ಸರಕಾರ ಯೋಚನೆ ಮಾಡಿಲ್ಲ. ಆಸ್ಪತ್ರೆ ನಡೆಸಬೇಕು, ಸ್ಕೂಲ್ ನಡೆಸಬೇಕು, ಶಾಲಾ ಕಟ್ಟಡ ಕಟ್ಟಿಸಬೇಕು, ಬಾವಿ ತೋಡಿಸಬೇಕು ಎಂದು ಹೇಳಿ ಐವತ್ತು ಸಾವಿರ ರೂಪಾಯಿ ಕೊಟ್ಟು, ಐದು ಲಕ್ಷ ರೂಪಾಯಿ ಕೆಲಸದ ವಿವರ ಕೊಟ್ಟರೆ ಅದನ್ನು ನಿರ್ವಹಿಸುವುದು ಹೇಗೆ? ಇದಲ್ಲದೆ ತಾಲ್ಲೂಕ್ ಬೋರ್ಡುಗಳಲ್ಲಿ ಪಕ್ಷದ ಮನೋಭಾವ ಬೆಳೆದು ತಿಕ್ಕಾಟ ಪ್ರಾರಂಭವಾಗಿದೆ. ಆದುದರಿಂದ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ಅರ್ಧದಷ್ಟು ತಾಲ್ಲೂಕ್ ಬೋರ್ಡುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತೇನೆ. ಅನೇಕ ನ್ಯೂನತೆಗಳು ಇವೆ. ಎಂಟು ವರ್ಷಗಳಾದರೂ ಒಂದು ಶಾಲಾ ಕಟ್ಟಡ ರಿಪೇರಿ ಮಾಡುವುದು ಆಗಿಲ್ಲ. ಶಾಲಾ ಕಟ್ಟಡ ಬಿದ್ದು ಹೋಗುವ ಪರಿಸ್ಥಿತಿ ಬಂದಿದೆ. ಇದೇ ರೀತಿ ಬಾವಿ ಕೆಲಸ ಸಹ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಅರ್ಧದವರೆಗೆ ನಡೆದ ಬಾವಿ ಕೆಲಸ ಪೂರ್ತಿಯಾಗದೆ ಬಿದ್ದು ಹೋದ ದುಸ್ಥಿತಿ ಬಂದಿದೆ. ಇದೇ ರೀತಿ ಆಸ್ಪತ್ರೆ ನಡೆಸುವ ಕೆಲಸ ಸಹ ಸಮಾಧಾನಕರವಾಗಿಲ್ಲ. ಇಂಥ ಸನ್ನಿವೇಶವನ್ನು ನಾನು ಕಣ್ಣಿಂದ ನೋಡಿದ್ದೇನೆ. ಸಾಕಷ್ಟು ಹಣ ಇಲ್ಲದೆ ಕೆಲಸ ಹಾಳಾಗಿ ಹೋಗತಕ್ಕ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಸರಕಾರ ಇದನ್ನು ಕೂಲಂಕಷವಾಗಿ ವಿಚಾರ ಮಾಡಿ ಅವುಗಳಿಗೆ ಸೂಕ್ತ ಅಧಿಕಾರ ವ್ಯಾಪ್ತಿ ಕೊಡಬೇಕು. ಕೆಲಸ ಮಾಡತಕ್ಕ ಶಕ್ತಿ ಇದಯೇ ಎಂಬುದನ್ನು ಯೋಚನೆ ಮಾಡಿ ಅಂಥ ಕೆಲಸ ವಹಿಸಿ ಕೊಟ್ಟರೆ ಕೆಲಸ ಸಮರ್ಪಕವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ.

ಇನ್ನು ಸಹಕಾರ ಸಂಸ್ಥೆಗಳು. ಅನೇಕ ಸಹಕಾರ ಸಂಸ್ಥೆಗಳು ಹುಟ್ಟಿದ ಕೆಲವೇ ವರ್ಷಗಳಲ್ಲಿ ಅವಸಾನ ಕಾಲ ಬಂದಂಥ ಪರಿಸ್ಥಿತಿ ಇವತ್ತಿನ ದಿವಸ ದೇಶದಲ್ಲಿ ಬಹಳ ಎದ್ದು ಕಾಣುತ್ತದೆ. ಕೆಲವರು ತಮ್ಮ ತಮ್ಮ ಜನರ ಹೆಸರಿನಲ್ಲಿ ಮಕ್ಕಳ ಹೆಸರಿನಲ್ಲಿ ಮೊಮ್ಮಕ್ಕಳ ಹೆಸರಿನಲ್ಲಿ ಷೇರ್ ಬಂಡವಾಳ ಹಾಕಿ, ತಮ್ಮ ಹಿತಕ್ಕಾಗಿ ತಮ್ಮದೇ ಆದ ಸೊಸೈಟಿ ಮಾಡಿಕೊಂಡು ಸರಕಾರದಿಂದ ದೊರೆಯುವ ಹಣವನ್ನು ಕಬಳಿಸಿ, ಹಣ ವಾಪಸ್ ಕೊಡದೇ ಇರತಕ್ಕ ನೂರಾರು ಸೊಸೈಟಿಗಳು ಹುಟ್ಟಿವೆ. ಅಂಥ ಸೊಸೈಟಿಗಳ ಅವಸಾನ ಕಾಲ ಸಹ ಬಂದಿದೆ ಎಂದು ಹೇಳಬಹುದು. ಏಕೆಂದರೆ ವಿದ್ಯಾವಂತರಲ್ಲದ ಸದಸ್ಯರುಗಳ ಹೆಸರಿನಲ್ಲಿ ಅರ್ಜಿಗಳನ್ನು ಹಾಕಿ ಹಣ ತಾವೇ ಪಡೆದುಕೊಳ್ಳುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಮೋಸ ನಡೆಯುತ್ತಿದೆ. ಇದನ್ನು ಸರಿಪಡಿಸತಕ್ಕದ್ದು ಮಂತ್ರಿಗಳ ಆದ್ಯ ಕರ್ತವ್ಯವಾಗಿದೆ.

ಇನ್ನು ಮಳೆ ಬೆಳೆಗಳ ಪರಿಸ್ಥಿತಿಯನ್ನು ಪ್ರಸ್ತಾಪಿಸಿ, ಮುಖ್ಯವಾಗಿ ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆ ಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ ಎಂದು ರಾಜ್ಯಪಾಲರವರು ಭಾಷಣದಲ್ಲಿ ಹೇಳಿದ್ದಾರೆ. ಯಾವದೇ ವಿಧವಾದ ಶಾಶ್ವತ ಪರಿಹಾರ ಕ್ರಮವನ್ನು ತುಮಕೂರು ಜಿಲ್ಲೆಯಲ್ಲಿ ಸರಕಾರ ತೆಗೆದುಕೊಂಡಿಲ್ಲ. ಹೇಮಾವತಿ ಅಣೆಕಟ್ಟಿನ ಯೋಜನೆಯಿಂದ ಸುಮಾರು ಆರರಿಂದ ಎಂಟು ತಾಲ್ಲೂಕುಗಳಿಗೆ ಅನುಕೂಲವಾಗಿ ಶಾಶ್ವತ ಪರಿಹಾರ ದೊರೆಯುವಂತೆ ಇದೆ. ಈ ಹೇಮಾವತಿ ಯೋಜನೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ನಾವು ಅನೇಕಸಲ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಆದರೆ ಸರಕಾರ ಸರಿಯಾಗಿ ನಿಗಾ ಕೊಟ್ಟಂತೆ ಕಾಣುವುದಿಲ್ಲ. ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕುಗಳಿಗೆ ಅನ್ವಯಿಸುವಂತೆ ಕೆಲಸ ನಡೆಸಲು ಪ್ರಯತ್ನ ಮಾಡುತ್ತಿದ್ದಾರೆ. ಯಾವ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಕೆಲಸ ನಡೆಸುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಇದು ಸರಿಯಲ್ಲ. ಎಂಟು ತಾಲ್ಲೂಕುಗಳಿಗೆ ಅನ್ವಯಿಸುವಂತೆ ಮಾರ್ಪಡಿಸಿ ಯೋಜನೆಯನ್ನು ಆದಷ್ಟು ಕಾರ್ಯಗತ ಮಾಡಬೇಕು. ಈ ಯೋಜನೆಯಿಂದ ಈ ಪ್ರದೇಶದಲ್ಲಿರತಕ್ಕಂಥ ಕ್ಷಾಮ ಪ್ರದೇಶಕ್ಕೆ ಶಾಶ್ವತ ಪರಿಹಾರ ಒದಗಿಸಿಕೊಟ್ಟಂತಾಗುತ್ತದೆ. ಆದುದರಿಂದ ಬೇಗ ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಮತ್ತು ಈ ಮೂಲಕ ಸರಕಾರಕ್ಕೆ ಒತ್ತಾಯಪಡಿಸುತ್ತೇನೆ.

(ಶ್ರೀ ಬಿ. ಹೆಚ್. ಬೈರಪ್ಪಾಜಿ)

ಈ ಹಿಂದೆ ರಾಜ್ಯಪಾಲರವರು ಭಾಷಣ ಮಾಡಿದ ಕಾಲದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದಾರೆಯೋ ಅವುಗಳನ್ನು ಈಡೇರಿಸಿದ್ದಾರೆಯೇ ? ಈ ಭಾಷಣದಲ್ಲಿ ಕೊಟ್ಟಿರುವ ಆಶ್ವಾಸನೆಗಳನ್ನು ಇನ್ನು ಮುಂದೆ ಈಡೇರಿಸುತ್ತಾರೆಯೋ ಎನ್ನುವುದನ್ನು ಸರಿಯಾಗಿ ತಿಳಿಸಿದ್ದರೆ ಚೆನ್ನಾಗಿತ್ತು. ಈ ಸಲದ ರಾಜ್ಯಪಾಲರವರ ಭಾಷಣ ಒಂದು ಸೊಸೈಟಿಯ ವಾರ್ಷಿಕ ಆಡಳಿತ ವರದಿಯ ಹಾಗೆ ಇದೆ. ಯಾವ ಯಾವ ಕೆಲಸ ಸಾಧಿಸಿದ್ದಾರೆ, ಏನೇನು ನ್ಯೂನತೆಗಳು ಇವೆ, ಹೇಗೆ ಸರಿಪಡಿಸಿದ್ದಾರೆ ಎಂಬುದನ್ನು ಅನುಮಾನ ಆಗದಂತೆ ಸ್ಪಷ್ಟವಾಗಿ ಈ ಮಹಾ ಸಭೆಗೆ ತಿಳಿಸಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಇನ್ನು ಮುಂದೆಯಾದರೂ ಸರಿಯಾದ ರೀತಿಯಲ್ಲಿ ತಿಳಿಸಬೇಕೆಂದು ಈ ಮೂಲಕ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri J. P. SARWESH (Serum).—Mr. Speaker, while welcoming the Address of the Governor, I wish to say a few words regarding the welfare of the backward classes of State. In his speech the Governor was pleased to state :

"It is the endeavour of the Government to raise the level of these Backward Classes to the level of the general community as quickly as possible and the various schemes that are being implemented for their benefit are oriented to achieve this object." We are quite aware of the schemes that are implemented in the villages and talukas of our State. In Taluks with a lakh of population we are distributing to one or two families, one or two bullocks and some chickens. By that we cannot say that we can solve the problem of the Harijans. The Harijans and the Backward Classes are people who are economically enslaved. The first object of the Government should be to release these enslaved people from enconomic exploitation. I want the Government to give proper attention to this problem. My suggestion is that Government must formulate such schemes by which these Harijans and the weaker section of the community will be able to stand on their own legs. In a Taluka, Government should choose ten villages and in those ten villages all the cultivable land should be purchased by Government and entrusted to co-operative societies of which these weaker sections of the community should be the members. By that, Government will be permanently relieving them from exploitation and will bring them to the level of other communities. If that is not done, by merely giving Rs. 50 or 60 we cannot solve this problem and this problem of the economic emancipation of these people will remain as a permanent problem. The schemes that the Government have at present are not at all beneficial to them. These are poor people when they get a grant at the taluk level, even before they reach home they sell away whatever they get and spend the money. Some of us have experience of this. So I suggest that serious attention should be paid to the solution of this problem and such schemes should be adopted which will really help to raise these weaker sections from their present poor condition

Then, Sir, the Scheduled Caste Hostels run by the Social Welfare Department are in a very pitiable condition. There is the Education Department spending crores of rupees on the education of the people. I ask why should the Education Department not provide from their own

budget for the education of Scheduled Castes ! Also the maintenance of these hostels should be handed over to the Education Department from the Social welfare Department which is spending only a very meagre amount on these hostels. Last year they spent only Rs. 50 lakhs and out of that they spent Rs. 38 lakhs for the maintenance of these hostels. That is why I say that it is necessary that these hostels should be taken over from the Social Welfare Department and run by the Education Department.

Then, Sir in my area which happens to be a very backward area, there are no industries at all. The one main industry is the M. S. K. Mills which the Government have financed recently and posted a Managing Director. A majority of the members of the Board have passed a resolution that the present Managing Director should be removed, but I find the same man is kept as Managing Director. He comes to Bangalore and goes back in his own car. He makes very frequent trips to Bangalore and back in his own car and he gets the highest T. A and D. A. in the whole State. Even the Managing Director of Bhadravathi Works does not get so much T. A. and D. A. as the Managing Director of the M. S. K. Mills. There is a motor car belonging to the M. S. K. Mills. They spent nearly Rs. 4 ,000 for its repair, but he does not use it for his trips to Bangalore and he uses his personal car. The Mills have asked for another loan of Rs. 50 lakhs from Government. In this connection I would suggest that Government should ask them to set things right before giving any loan. Otherwise all the amounts advanced to them would be a waste.

Regarding the cement company at Wadi for which licence has been given to A. C. C. we hear that the company has not come up till now.

In the field of minor irrigation, our area is very backward and it needs special attention. Several times whenever the Minister for Public Works visited the area he said that the Government would give special attention to our area, but unfortunately the roads are in the same primitive condition. As regards irrigation facilities, there are several tanks which need repair. The Deputy Minister promised that he would see that proper attention was given and that funds were provided, but up till now things are as they were and nothing has been done.

Regarding the milk supply scheme sanctioned by Government it is not implemented up till now. Milk schemes were sanctioned for Gulbarga and two other Districts and we hear that the scheme has been implemented in those districts but in Gulbarga it has not yet been implemented.

Regarding hospitals, out of 21 hospitals in our district, 17 hospitals do not have doctors and those hospitals are run by compounders and nurses. We can very well imagine the pitiable condition of the patients in those hospitals. I want that Government should see that prompt attention is given to this problem.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಮೂರುದಿನದಿಂದ ಕಾದದ್ದಕ್ಕೆ ಸಮಯ ಸಿಕ್ಕಿತಲ್ಲ ಸಂತೋಷ * * *

ರಾಜ್ಯಪಾಲರು ಭಾಷಣವನ್ನು ಕನ್ನಡದಲ್ಲಿ ಮಾಡಿದರು, ರಾಜ್ಯಪಾಲರು ದೇಶದ ಆಗು ಹೋಗುಗಳನ್ನು ಈಡೇರಿಸತಕ್ಕಂಥ ಬಹಳ ಒಳ್ಳೆಯ ಕೆಲಸಗಳ ಬಗ್ಗೆ ಭಾಷಣ ಮಾಡಿದ್ದಾರೆಂದು ನನ್ನ ಅನೇಕ ಜನ ಸ್ನೇಹಿತರು ಹೇಳಿದರು. ರಾಜ್ಯಪಾಲರ ಭಾಷಣದ 35 ಪೇಜುಗಳನ್ನು ತಿರುವಿ ಹಾಕಿ ನೋಡಿದರೆ ರಾಜ್ಯದ ಉನ್ನತಿ ಗೋಸ್ಕರವಾಗಿ, ಜನತೆಯ ಕಲ್ಯಾಣಕ್ಕೋಸ್ಕರವಾಗಿ ಒಂದು ವಿಷಯವನ್ನೂ ಮಾತನಾಡಿಲ್ಲ. ಎಲ್ಲಿಯಾದರೂ ಹೊಸ ಕಾರ್ಖಾನೆಗಳನ್ನು ತೆರೆಯುತ್ತಾರೆ, ಹೊಸ ಉದ್ಯಮ ಹೊಂದುವ ದಾರಿಯಲ್ಲಿದ್ದಾರೆ, ಇದರಿಂದ ಜನತೆಯ ಕಲ್ಯಾಣವಾಗುತ್ತದೆ ಎಂದು ಎಲ್ಲಿಯಾದರೂ ಹೇಳಿದ್ದಾರೆಯೆ ?

ಕೆಲವರು ಹೇಳಿದರು : ಇದೊಂದು ಸೊಸೈಟಿ ಬ್ಯಾಲನ್ಸ್ ಶೀಟು ಎಂದು ಇನ್ನೊಬ್ಬರು ಇನ್ನೊಂದು ತರಹ ಹೇಳಿದರು. ನನ್ನ ಸ್ನೇಹಿತರಾದ ಶ್ರೀ ಗೋಪಾಲಗೌಡರು ಇದು ಒಂದು ಕರಟು ಪುರಾಣ ಎಂದು ಹೇಳಿದರು. ನಾನು ಇನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುತ್ತೇನೆ: ರಾಜ್ಯಪಾಲರು 55 ನಿಮಿಷ ಕಷ್ಟಪಟ್ಟು ಓದಿದ ಭಾಷಣವನ್ನು ನಾನು ಕೇಳಿದೆ; ಕೇಳುತ್ತಾ ಕೇಳುತ್ತಾ ಕೆಲವರು ಅಲ್ಲಲ್ಲಿ ಹಾಗೆ ಕಣ್ಣುಮುಚ್ಚಿ ನಿದ್ದೆ ಮಾಡಿಬಿಟ್ಟರು, ಅಷ್ಟು ಆಪ್ಯಾಯಮಾನವಾಗಿತ್ತು. ಜತ್ತಿಯವರ ಭಾಷಣ ಕೇಳಿ ಹೃದಯ ವಿಘಾತವಾಗಿ ಹೋಯಿತು.

5-00 P. M.

[MR. SPEAKER in the Chair]

ಏಕೆಂದರೆ ಇವರು ಹೇಳಿದ್ದರಲ್ಲೂ ಸ್ವಾರಸ್ಯವಿಲ್ಲ, ನೀರಸವೂ, ನಿರಾಧಾರವೂ ಇದ್ದದರ ಜೊತೆಗೆ ಜನತೆಯನ್ನು ನಿರ್ಲಕ್ಷದಿಂದ ಕಂಡಂಥ ಭಾವನೆಯಿಂದ ಕೂಡಿತ್ತು. ಹೊಕ್ಕು ತಿನ್ನುತ್ತಾ ಇದ್ದವನನ್ನು ಹಳೆಯ ಹುಣಸೆಹಣ್ಣು ಕೊಡು ಎಂದು ಕೇಳುವುದಕ್ಕೆ ಹೋದರು ಎಂದು ಹೇಳುತ್ತಾರೆ. ಬಯಕೆ ಆಗುತ್ತದೆ ಎಂದು ಹೊಕ್ಕು ತಿನ್ನುತ್ತಾ ಇರತಕ್ಕ ಈ ಸರಕಾರದ ಮುಂದೆ ಎರಡು ಕೋಟಿ ಜನ ಹಳೆ ಹುಣಸೆಹಣ್ಣನ್ನು ಕೇಳುತ್ತಾ ಇದ್ದಾರೆ. ಅಂತಹ ಬಯಕೆ ಆಗುತ್ತಾ ಇದೆ, ಇದು ನಾಚಿಕೆಗೇಡು. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ದೇಶದಲ್ಲಿ ನಡೆದು ಹೋದ ದುರ್ವ್ಯಾಪಾರ ದುರ್ವ್ಯವಹಾರ ಒಂದನ್ನೂ ಗಮನದಲ್ಲಿಟ್ಟುಕೊಳ್ಳದೇ ಆಡುವವರು ಆಡಿಕೊಂಡರೂ ಚಿಂತೆ ಇಲ್ಲ ಹೋಗುವ ದಾರಿಯಲ್ಲಿ ಹೋಗಿ, ಮಾಡಿಕೊಳ್ಳಬೇಕಾದ್ದನ್ನು ಮಾಡಿಕೊಳ್ಳಬೇಕೆಂದು ಸರಕಾರ ಹೊರಟರೆ ದೇಶದ ಜನತೆಯ ಕಲ್ಯಾಣ ಹೇಗೆ ಆಗುತ್ತದೆ ಎಂದು ಕೇಳುತ್ತೇನೆ. ಸ್ವಾಮಿ, ನಮ್ಮ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ್ಯಾದಂತ ಕುಡಿತದಿಂದ ಜನ ಕೆಟ್ಟಿದ್ದಾರೆ ಆದರಿಂದ ಭಟ್ಟಿ ಶರಾಬು ಕುಡಿದು ಪ್ರಾಣ ಹಾನಿ ಆಗುತ್ತಿದೆ ಆದ್ದರಿಂದ ಪಾನನಿರೋಧವನ್ನು ಸಕ್ರಿಯ ಮಾಡಿ ಎಂದು ಹೇಳಿದರೆ ನನ್ನ ಸರಕಾರ ಪಾನನಿರೋಧದ ವಿಚಾರದಲ್ಲಿ ಈ ನೀತಿ ಅನುಸರಿಸುತ್ತದೆ ಎಂದು ಎಲ್ಲಾದರೂ ಇದೆಯೇ?

ಆಮೇಲೆ ಅವರ ಭಾಷಣದಲ್ಲಿ ಭೂಸುಧಾರಣೆ ಈ ಸಭೆಯಲ್ಲಿ ತೀರ್ಮಾನವಾಯಿತು ಎಂದು ಬರೆದಿದ್ದಾರೆ. ಏನು ತೀರ್ಮಾನವಾಯಿತು ? ಯಾರು ಏನಾದರು ! ಏನೂ ಗೊತ್ತಿಲ್ಲ. ಕನ್ನಡ ಭಾಷೆ ಏನೋ ಬಂತು. ಅವರು ಮಾಡಿದ ಭಾಷಣ ಏನು ? ಅದನ್ನು ಏನೆಂದು ತಿಳಿದುಕೊಂಡು ಅದರ ಮೇಲೆ ಭಾಷಣ ಮಾಡಲಿ, ಜನತೆ ಏನೆಂದು ತಿಳಿದುಕೊಂಡಿದೆ ಎಂಬುದು ಒಂದೂ ಗೊತ್ತಾಗುತ್ತಾ ಇಲ್ಲ.

MR. SPEAKER.—Did the Hon'ble Member make any personal allegation against the Governor or any insinuation against him ?

SRI C. J. MUCKANNAPPA.—Absolutely nothing, Sir.

MR. SPEAKER.—I will have it examined.

SRI C. J. MUCKANNAPPA.—Where? * * *

MR. SPEAKER.—The Hon'ble Member must remember that the Governor is a constitutional head and reflection should not be made against the Governor.

SRI C. J. MUCKANNAPPA.—It is not a reflection. I am just telling what is going on.

Expunged as ordered by the Chair.

Mr. SPEAKER.—If the Hon. member says the Government is so, I do not mind because the Government will defend itself and the tradition of very good House is that no reflection should be made upon the Governor. * * *

Sri C. J. MUCKANNAPPA.—Please go through the proceedings as to what I have said.

Mr SPEAKER.—That is why I called upon the member first to say if he has done so.

Sri C. J. MUCKANNAPPA.—The Chair must see in what context I have said.

Mr. SPEAKER.—Whatever might be the context, I can conceive of no context wherein personal motive could be attributed to Governor.

Sri C. J. MUCKANNAPPA.—* * * *

Mr. SPEAKER.—* * * *

Sri C J. MUCKANNAPPA.—As head of the State.

Mr. SPEAKER.—As Head of the State he is a Constitutional Head.

Sri C. J. MUCKANNAPPA.—There is nothing personal against Sri Jayachamaraja Wadiyar.

Mr. SPEAKER.—Nor do the member hold any such feelings against him ?

Sri C. J. MUCKANNAPPA.—I cannot say that here. I cannot say what I am feeling. My feelings may be different.

Mr. SPEAKER.—I have no concern about the feelings the member expresses outside.

Sri C. J. MUCKANNAPPA.—I have not expressed anything against the Constitutional Head.

ಸ್ವಾಮಿ, ಇಷ್ಟಾದಮೇಲೆ ಈ ರಾಜ್ಯಪಾಲರ ಭಾಷಣದಲ್ಲಿ ಯಾವುದಾದರೂ ಒಂದು ಮಾಲದ ಬಗ್ಗೆ ಒಂದು ಹೊಸ ಬೆಳಕನ್ನು ಚೆಲ್ಲಿದೆಯೇ, ಅಂತಹ ಯಾವುದಾದರೂ ಒಂದು ಹೊಸ ಕಾರ್ಯ ಮಾಡುತ್ತೇವೆ, ಹೊಸ ನೀತಿಯನ್ನು ಅನುಸರಿಸುತ್ತೇವೆ ಹೊಸರೀತಿಯನ್ನು ಅನುಸರಿಸುತ್ತೇವೆ ಎಂಬುದನ್ನು ಏನಾದರೂ ಹೇಳಿದ್ದಾರೆಯೇ ಎಂದರೆ ಏನೇನೂ ಇಲ್ಲ. ಇದಕ್ಕೆ ಏನೆಂದು ಕರೆಯಬೇಕು ! ಈ ಭಾಷಣವನ್ನು ರಾಜ್ಯಪಾಲರಿಂದ ಮಾಡಿಸುವುದಕ್ಕೆ ಮುಂಚೆ, ಇದಕ್ಕೆ ನಾಲ್ಕು ದಿನ ಕಳೆಯುವುದಕ್ಕೆ ಮುಂಚೆ ಇದನ್ನು ಬೇಕಾದರೆ ಸರಕಾರದವರು ತಿದ್ದುಪಡಿಮಾಡಿ ಬಡ್ಜೆಟ್ ಮೇಲೆ ಏನು ಭಾಷಣ ಮಾಡುತ್ತೀರಿ ಅದರ ಮೇಲೆ ಈ ವಿಷಯಗಳನ್ನು ಚರ್ಚೆಮಾಡಿ ಎಂದು ಹೇಳಿ ಆಗಲೇ ಒಂದು ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇದರಲ್ಲಿ ಯಾವುದಾದರೂ ಒಂದುಕಡೆ ಈ ರೀತಿ ಮಾಡಬೇಕೆಂದಿದ್ದೇವೆ ಎಂದು ಹೇಳಿರುವುದನ್ನು ತೋರಿಸಿ ಕೊಡುತ್ತೀರಾ ? ನನ್ನ ಸರಕಾರ ಇಂತಹ ಒಳ್ಳೆಯ ಕೆಲಸ ಮಾಡಿದೆ ಎಂಬುದನ್ನು ಹೇಳುವುದೇ ಇದರ ಉದ್ದೇಶವಾಗಿದ್ದ ಪಕ್ಷದಲ್ಲಿ, ಕೇರ್ ಸಂಸ್ಥೆಯವರು ಮಾಡಿದ ಸಹಾಯವನ್ನು ವಿದ್ಯಾ ಮಂತ್ರಿಗಳು ಅವರ ಉತ್ತರದಲ್ಲಿ ಹೇಳುತ್ತಾರೆ. ಹಣಕಾಸಿನ ವಿಚಾರದಲ್ಲಿ ಹಣಕಾಸಿನ ಮಂತ್ರಿಗಳು ಹೇಳುತ್ತಾರೆ. ಸೊಸೈಟಿಗಳ ವಿಷಯ ಕೋ-ಆಪರೇಟೀವ್ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳುತ್ತಾರೆ. ಇದಕ್ಕೆ 3-4 ದಿವಸ ಕಾಲಹರಣ ಮಾಡುವುದಕ್ಕಿಂತ ಮುಂಚೆ ಇದರ ರೀತಿ ನೀತಿಯನ್ನು ಬದಲಾವಣೆ ಮಾಡುವುದು ಸರಿಯೆಂದು ಕಾಣುತ್ತದೆ. ಇದನ್ನು ಯೋಚನೆ ಮಾಡಬೇಕೆಂದು ಸರಕಾರದವರನ್ನು ತಮ್ಮ ಮುಖಾಂತರ ಕೇಳುತ್ತಾ ಇದ್ದೇನೆ.

ಪಾನನಿರೋಧದ ವಿಚಾರವನ್ನು ತೆಗೆದುಕೊಳ್ಳೋಣ, ಅಲ್ಲಿ ಏನು ಮಾಡಿದ್ದಾರೆ ಎಂದರೆ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಓಡಾಡುತ್ತಾ ಇದ್ದಾರೆ. ಶರಾವತಿಯಲ್ಲಿ ಹಣ ಪೋಲಾಗಿದೆ ಎಂದರೆ ಕೆ. ಎಲ್. ರಾವ್ ಅವರ ಹತ್ತಿರ ಹೋಗಿ ಎಲ್ಲಾ ಸರಿಯಾಗಿದೆ ಎಂದು ಹೇಳಿ ಅವರಿಂದ ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತೀರಿ. ಖಾದಿ ಬೋರ್ಡಿನಲ್ಲಿ ಹಣ ಪೋಲಾಗಿದೆ ಎಂದು

* * * Expunged as ordered by the Chair.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೇಳಿದರೆ ಖಾದಿ ಕಮಿಷನ್ ಅವರ ಹತ್ತಿರ ಹೋಗಿ ಎಲ್ಲಾ ಸರಿಯಾಗಿದೆ ಎಂದು ಹೇಳಿ ಪ್ರೆಸ್ ಸ್ಟೇಟ್‌ಮೆಂಟ್ ಕೊಡಿಸುತ್ತೀರಿ, ಅಲ್ಲಿ ನಡೆಯುವುದಕ್ಕೆ ಯಾವುದಕ್ಕೂ ಲೆಕ್ಕಪತ್ರಗಳೇ ಇಲ್ಲ ಎಂದರೆ ನಾಯಿ ಕೊಂಡುಕೊಂಡಿದ್ದೇವೆ, ಕತ್ತೆ ಕೊಂಡುಕೊಂಡಿದ್ದೇವೆ ರಶೀತಿ ಇದೆ ಎಂದು ಹೇಳುತ್ತೀರಿ. ಇದಕ್ಕೆ ತಕ್ಕ ಸಾಕ್ಷಿ, ಸಾಹಿತ್ಯ ಹೇಳಬೇಕಾದರೆ ಒಂದು ಪಬ್ಲಿಕ್ ಕೋರ್ಟ್ ಕಾನ್‌ಸ್ಟಿಟ್ಯೂಟ್ ಮಾಡಿ ಆಗ ಅಲ್ಲಿ ಏನೇನು ಅನ್ಯಾಯ ನಡೆದಿದೆ ಎಂಬುದು ಅರ್ಥವಾಗುತ್ತದೆ. ಕೇಂದ್ರ ಸರಕಾರದವರು ತಮ್ಮ 17 ವರ್ಷಗಳ ಅನುಭವದಲ್ಲಿ ರಾಜ್ಯದಲ್ಲೆಲ್ಲಾ ಭ್ರಷ್ಟಾಚಾರ ಜಾಸ್ತಿಯಾಗಿದೆ, ಅದನ್ನು ಏನಾದರೂ ಮಾಡಿ ಮೂಲೋತ್ಪಾಟನೆ ಮಾಡಬೇಕು ಎಂದು ಹೇಳಿ ಹೊರಟಿದ್ದಾರೆ. ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳನ್ನೇ ಮನೆಗೆ ಕಳುಹಿಸಿದ್ದಾರೆ. ಅವರ ಪ್ರೈವೇಟ್ ಸೆಕ್ರೆಟರಿಗಳ ಮೇಲೆ ಕಾನೂನಿನ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಒರಿಸ್ಸಾ ಮಂತ್ರಿಮಂಡಲವೇ ಬದಲಾವಣೆಯಾಯಿತು. ಕೇರಳದ ಗೃಹ ಮಂತ್ರಿ ಚಾಕೋ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋದರು. ಇಲ್ಲಿ ಯಾವ ಕೆಲಸವನ್ನು ಚೆನ್ನಾಗಿ ಮಾಡುತ್ತಾ ಇದ್ದೀರಿ ಎಂಬುದನ್ನು ತೋರಿಸಬೇಕಾದರೆ ಯಾವ ಕನ್ನಡಿ ಮುಂದೆ ತೋರಿಸಬೇಕು ಎಂಬುದು ಗೊತ್ತಾಗುತ್ತಾ ಇಲ್ಲ. ನಾಲ್ಕು ಕೋಟಿ ರೂಪಾಯಿಗಳ ಲೆಕ್ಕ ಖಾದಿ ಬೋರ್ಡಿನಲ್ಲಿ ಇಲ್ಲ ಎಂದರೆ ಅದನ್ನು ಹೊಸದಾಗಿ ಬರೆಸುತ್ತೇವೆ ನಿಮ್ಮ ಕೈಯಲ್ಲಿ ಕೊಡುತ್ತೇವೆ ಎಂದು ಹೇಳಿದ ಸರಕಾರದಲ್ಲಿ ಎಷ್ಟು ಮಟ್ಟಿಗೆ ನೀತಿ ಪತನವಾಗಿದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಿ. ಶರಾವತಿಯಲ್ಲಿ ಹಣ ದುರ್ವ್ಯಯವಾಗಿದೆ, ಅದನ್ನು ಒಪ್ಪಿಕೊಳ್ಳಿ, ಕಾನ್‌ಫಿಡೆನ್ಷಿಯಲ್‌ಆಗಿ ನೋಡಿ ಎಂದು ಹೇಳಿದರೆ ಅದಕ್ಕೆ ಒಂದು ವೈಟ್ ಪೇಪರ್ ಕೊಡುತ್ತೇವೆ ಎಂದು ಹೇಳಿ ಮೂರು ದಿವಸ ಆದಮೇಲೆ ವೈಟ್ ಪೇಪರ್ ವಿತ್ ಬ್ಲೂ ಕಲರ್ ಕೊಟ್ಟಿದ್ದೀರಲ್ಲಾ; ಏನು ಮಾಡಿದ್ದೀರಿ ಎಂದು ಕೇಳುತ್ತೇನೆ? ಶ್ರೀಮಾನ್ ಜತ್ತಿಯವರು ಭಾಷಣ ಮಾಡುತ್ತಾ,

> "We may go before the Government of India for a temporary accommodation of money"

ಎಂದು ಹೇಳಿದರು. ಬ್ಯಾಂಕ್ ಬ್ಯಾಲೆನ್ಸ್ ಎಷ್ಟಿದೆ, ಬೇಕಾದ ಹಣ ಎಷ್ಟು ಎಂಬುದನ್ನು ಕೇಳಿದರೆ ಪ್ಲಾನ್‌ಗೆ ಖರ್ಚುಮಾಡುವುದಕ್ಕೆ ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಪ್ಲಾನ್‌ಗಾಗಿ ಖರ್ಚು ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇದ್ದಿದ್ದರೆ ಯಾವತ್ತೂ ಓವರ್ ಡ್ರಾಫ್ಟ್ ಮಾಡುತ್ತಾ ಇರಲಿಲ್ಲ.

Mr. SPEAKER.—Do as the member propose to participate in the Debate on the Budget?

Sri C. J. MUCKANNAPPA.—I do not want to develop the point further. Regarding, why I was compelled to mention that point regarding Finances was that he was so jubilant when he was reading out the longest speech possible ಖಾದಿ ಬೋರ್ಡ್ ಹಣ ಏನಾಯಿತು? ಶರಾವತಿ ಹಣ ಏನಾಯಿತು? ಇನ್‌ಫೆಂಟ್ರಿ ರೋಡ್‌ನಲ್ಲಿ ಒಂದು ಉಣ್ಣೆ ಕಂಪೆನಿ ಇದೆ ಅದರ ಯಜಮಾನರು ಒಬ್ಬರು ಮುಂಧ್ರಾ ಇದ್ದಾರೆ ಅವರ ಹತ್ತಿರ ಏನು ವ್ಯವಹಾರ ಮಾಡಿದ್ದೀರಿ ಎಂದರೆ ಅದಕ್ಕೆ ಉತ್ತರವೇ ಇಲ್ಲ. ಆ ಸೊಸೈಟಿಯವರು ಏನು ಆಬ್‌ಜೆಕ್ಷನ್ ಇದೆಯೋ ಅದಕ್ಕೆ ಉತ್ತರ ಕೊಡುತ್ತಾರೆಯೇ ಹೊರತು, ಆಡಿಟ್ ರಿಪೋರ್ಟನ್ನು ಕೊಡುವುದೇ ಇಲ್ಲ. ಇಂಡಿಯಾ ಸರಕಾರದವರ ಗ್ರಾಂಟ್ ಬರುತ್ತದೆ, ಮೈಸೂರು ಸರಕಾರದವರು ಹಣ ಕೊಡುತ್ತಾರೆ, ಖಾದಿ ಕಮಿಷನ್ ಅವರು ಹಣ ಕೊಡುತ್ತಾರೆ ಅದಕ್ಕೆ ಅಧ್ಯಕ್ಷರು ಯಾರು ಎಂದರೆ ಮೈಸೂರು ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರು, ಯಾರಿಗೂ ಯಾವುದರಲ್ಲೂ ಕಡಿಮೆ ಇಲ್ಲದವರು, ಮೈಸೂರು ಕಾಂಗ್ರೆಸ್‌ನ ಆಡಳಿತದಲ್ಲಿ ಇರತಕ್ಕ ಪಕ್ಷದ ಆ ಸಂಸ್ಥೆಯ ಉಪಾಧ್ಯಕ್ಷರಾದ ಒಬ್ಬರು ಅಲ್ಲಿ ಇದ್ದುಕೊಂಡು ನಾಲ್ಕು ವರ್ಷಗಳಿಂದ ಎರಡು ಲಕ್ಷ ಹದಿನಾರು ಸಾವಿರ ರೂಪಾಯಿಗಳನ್ನು ಅನಾಮತ್ತು ಲೆಕ್ಕದಿಂದ ಹೊರಗೆ ಇಟ್ಟು ಖರ್ಚು ಮಾಡಿದ್ದಾರೆ.

ಸೆಂಟ್ರಲ್ ವುಲನ್ ಕೋಆಪರೇಟಿವ್ ಸೊಸೈಟಿ ತಮಗೆ ಹಣ ಕೊಟ್ಟಿಲ್ಲ ಎಂದು ಪೋಲೀಸಿಗೆ ದೂರು ಕೊಟ್ಟು ಮೋಸ ಮಾಡಿದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಟ್ಟಿರುವ ಕಾಂಗ್ರೆಸ್ಸಿನವರನ್ನು ಏನೆಂದು ಕರೆಯಬೇಕು? ಇವರು ದೊಡ್ಡ ಕ್ರಿಮಿನಲ್ಸ್, ಕ್ರೈಮ್ಸ್ ಮಾಡುವುದಕ್ಕೆ ಅಬೆಟ್ ಮಾಡುತ್ತಿದ್ದಾರೆ; ಆದುದರಿಂದ ಇವರನ್ನು ಅಬೆಟರ್ಸ್ ಎಂದು ಕರೆಯಬೇಕು. ಈ ವಿಚಾರದಲ್ಲಿ ಇವರು ಕ್ರಮವೇನು ಕೈಕೊಂಡಿದ್ದಾರೆ? ಎರಡು ಸಾವಿರ ರೂಪಾಯಿಗಳನ್ನು ತಿಂದು ಸುಳ್ಳು ರಶೀತಿ ಕೊಟ್ಟವರನ್ನು ಹಿತ್ತಿಲು ಬಾಗಿಲಿನಿಂದ ಮೆಂಬರು ಮಾಡಬೇಕೆಂದು ಹೊರಟಿದ್ದಾರೆ.

ಹಿಂದೆ ಹಣಕಾಸಿನ ಸಚಿವರು ಒಬ್ಬ ಅಡಿಟರನ್ನು ನೇಮಿಸುತ್ತೇವೆ, ಸಬ್ಸಿಡಿ, ರಿಬೇಟ್ ನಿಲ್ಲಿಸುತ್ತೇವೆ ಎಂದು ಹೇಳಿದರು. ಯಾರಿಗೆ ರಿಬೇಟು ಕೊಡುತ್ತಾರೆ, ಯಾರಿಗೆ ಸೌಲತ್ತು ಕೊಡುತ್ತಾರೆ ಎಂದು ಯಾರು ನೋಡುತ್ತಾರೆ? ಇನ್ನೊಂದೇನೆಂದರೆ ನೆಯ್ಗೆಯವರಿಗೆ ಯಾವ ಸೊಸೈಟಿ ಮಾಡಿದರೂ ಅದರಿಂದ ಅವರಿಗೆ ಅನುಕೂಲವಾಗುತ್ತಿಲ್ಲ. ಆಂಧ್ರ ಪ್ರದೇಶದಿಂದ ಲಕ್ಷಾಂತರ ರೂಪಾಯಿಗಳ ಕಂಬಳಿ ಕೊಂಡರೆ ಅವರ ಗತಿಯೇನು? ಇದಕ್ಕೆಲ್ಲಾ ಖಾದಿ ಬೋರ್ಡ್‌ಗೆ ಕೇಂದ್ರ ಸರ್ಕಾರ ಹಣ ಕೊಡುವುದಾದರೆ ಅದಕ್ಕಿಂತ ಬೇರೆ ಅಪರಾಧವಿದೆಯೆ? ಇಂಥ ಜಯಪ್ರಕಾಶ ನಾರಾಯಣರಂಥವರನ್ನು ತಡೆಯದಿದ್ದರೆ ದೇಶಕ್ಕೆ ನಿಜವಾಗಿಯೂ ಹಾನಿ. ಅವರನ್ನು ತಡೆಗಟ್ಟದೆ ಅವರಿಗೆ ಹಣವು ದಾದರೆ ಬಹಳ ಅನಾಹುತವಾಗುತ್ತದೆ. ಸೊಸೈಟಿಗಳಲ್ಲಿರುವ ಹೆಗ್ಗಣಗಳನ್ನು ಸದೆಬಡಿಯದಿದ್ದರೆ, ಮರ್ದನಮಾಡದಿದ್ದರೆ ಈ ದಿವಸ ಮಂತ್ರಿಗಳೆಲ್ಲಾ ಭಾಷಣಮಾಡುವುದು ಬರೀ ಭಾಷಣವಾಗುತ್ತದೆಯೇ ಹೊರತು ದೇಶಕ್ಕೆ ಕಲ್ಯಾಣವಾಗುವುದಿಲ್ಲವೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಒಂದು ಬ್ಯಾಂಕಿನಲ್ಲಿ ತಿಮ್ಮನ ಆಸ್ತಿಯಮೇಲೆ ಬೊಮ್ಮನಿಗೆ ಸಾಲ ಕೊಟ್ಟಿದ್ದಾರೆ. ಒಂದು ಲಕ್ಷ ಹದಿನಾಲ್ಕು ಸಾವಿರ ರೂಪಾಯಿಗಳ ಕ್ಯಾಷ್ ಒಂದು ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಕಡಮೆಯಿರುವಾಗ ಸಹಕಾರ ತತ್ವ ಹೇಗೆ ಬೆಳೆದೀತು? ರೈತರಿಗೆ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ ಎಂದು 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಸಾಲ ಕೊಡಲು ಹಣ ಎಲ್ಲಿ ತಂದಿರಿ? ನಮ್ಮ ಪಂಚಾಯತಿಗಳಿಗೆ, ಬ್ಯಾಂಕುಗಳಿಗೆ ಹಂಚಿಕೆ ಮಾಡಲು ಹಣ ತಂದು ಲಕ್ಷಾಂತರ ರೂಪಾಯಿಗಳನ್ನು ಪೋಲುಮಾಡಿದರೆ ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೇ? ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್, ಡಿಸ್ಟ್ರಿಕ್ಟ್ ಬ್ಯಾಂಕ್, ಖಾದಿಬೋರ್ಡ್ ಮುಂತಾದುವುಗಳಿಗೆ ಕೊಡುವ ಹಣದಮೇಲೆ ಈ ಸಭೆಗೆ ಅಧಿಕಾರವಿದೆ. ಆ ಸಂಸ್ಥೆಗಳು ಸರಿಯಾಗಿ ಕೆಲಸಮಾಡದಿದ್ದರೆ ತಕ್ಕ ಬಂದೋಬಸ್ತು ಮಾಡಬೇಕು. ಹಾಗೆ ಮಾಡದಿದ್ದರೆ ಸರ್ಕಾರಕ್ಕೆ ಕೀರ್ತಿ ಬರುವುದಿಲ್ಲ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಸಹಕಾರ ಸಂಘಗಳು ಸಕ್ಕರೆಯನ್ನು ಹಂಚುತ್ತಿವೆ ಎಂದು ತಿಳಿಸಿದ್ದಾರೆ. ಆದರೆ ಬೆಳಗಾದರೆ ಇಂಥ ಸೊಸೈಟಿ ಇಷ್ಟು ಮೊಟೆ ದುರುಪಯೋಗ ಮಾಡಿವೆ ಎಂದು ಹೇಳುತ್ತಿರುತ್ತಾರೆ. ಸಕ್ಕರೆ ವ್ಯವಹಾರ, ಸ್ಟೇಟ್ ಮಾರ್ಕೆಟಿಂಗ್ ಕಮಿಟಿ ವ್ಯವಹಾರ, ಹ್ಯಾಂಡ್‌ಲೂಂಬೋರ್ಡಿನ ಸ್ಥಿತಿ ಏನಾಗಿದೆ ಎಂಬುದನ್ನು ಗಮನಿಸಬೇಕು. ನೆಯ್ಗೆಯವರಿಗೆ ಸಹಾಯ ನೀಡಬೇಕಾದ್ದು ಅವಶ್ಯಕ. ಆದರೆ ಮಧ್ಯವರ್ತಿ ಜನರು ಹಣ ತಿನ್ನುತ್ತಿದ್ದಾರೆ. ಅದನ್ನು ಹಿಡಿದು ಬಂದೋಬಸ್ತು ಮಾಡಿದರೆ ನಾವು ಹೇಳುವುದಕ್ಕೆ ಗಮನ ಕೊಟ್ಟರೆ ಸಹಕಾರ ಮಾಡಬಹುದು. ಹಾಗೆ ಮಾಡದೆ ಸುಮ್ಮನೆ ಮಾತನಾಡುತ್ತಿದ್ದರೆ ನಾವು ಹೇಗೆ ಸಹಕಾರ ನೀಡುವುದು? ದೇಶದಲ್ಲಿ ಕ್ರೆಡಿಟ್ ಸೊಸೈಟಿ, ಸರ್ವಿಸ್ ಸೊಸೈಟಿ, ಮಲ್ಟಿಪರ್ಪಸ್ ಸೊಸೈಟಿ, ಕನ್‌ಸ್ಯೂಮರ್ ಸೊಸೈಟಿ ಮುಂತಾದುವೆಲ್ಲಾ ಇವೆ. ಬಾರ್ಬರ್ಸ್‌ಗಾಗಿ ಒಂದು ಸೊಸೈಟಿ ಏಕೆ ಮಾಡಬಾರದು? ಒಂದೊಂದು ಪಂಚಾಯತಿಗೆ ಸಂಬಂಧಪಟ್ಟಂತೆ ಒಂದು ಕೋಆಪರೇಟಿವ್ ಷೇವಿಂಗ್ ಸೆಲೂನ್ ಏಕೆ ಮಾಡಬಾರದು? ಒದಗಿಸುವ ಹಣ ಎಲ್ಲಿ ಹಾಳಾಗಿಹೋಗುತ್ತಿದೆ? ಕೆ. ಎಚ್. ರಾಮಯ್ಯನವರು ಒಳ್ಳೆಯ ಬುನಾದಿಯಿಂದ ಸಹಕಾರ ಕಟ್ಟಬೇಕೆಂದು ತಾವು ಯೋಚನೆ ಮಾಡುವುದಕ್ಕೆ ಮುಂಚೆ ಸಹಕಾರ ಪದ್ಧತಿಯನ್ನು ಜಾರಿಗೆ ತಂದರು. ಅದನ್ನು ಬೃಹದಾಕಾರವಾಗಿ ಬೆಳೆಸಿದಮೇಲೆ ನ್ಯೂನತೆಯಿರುವುದನ್ನು ಸರಿಪಡಿಸಬೇಕು ಎಂದು ಕಟುವಾಗಿ ಹೇಳಬೇಕಾಗಿದೆ. ನಾನು ಯಾವುದೇ ವಿಚಾರವಲ್ಲಿ ವೈಯಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಬಳ್ಳಾರಿ ಜಿಲ್ಲೆಯ ಒಂದು ಸ್ಪಿನಿಂಗ್ ಪ್ಲಾಂಟ್ ತಂದು ರಾಯಚೂರಿನಲ್ಲಿ ಇನ್‌ಸ್ಟಾಲ್ ಮಾಡಿ 6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ಕಟ್ಟಿ 50 ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟರು. ಅದಕ್ಕೆ ಅಂದಾಜಿಲ್ಲ, ಬ್ಲೂಪ್ರಿಂಟಿಲ್ಲ. ಈ ಕಂಪನಿಯಲ್ಲಿ ಒಬ್ಬರು ಡೆಪ್ಯುಟಿ ರಿಜಿಸ್ಟ್ರಾರರಿದ್ದಾರೆ, ಅವರು ನೋಡಿಕೊಳ್ಳುತ್ತಾರೆಯೆ ಎಂದರೆ ಅದಕ್ಕೆ ಉತ್ತರವಿಲ್ಲ. ಎಂ.ಪಿ.ಸಿ.ಸಿ. ಅಧ್ಯಕ್ಷರನ್ನು ಹೆದರಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ತೋರುತ್ತದೆ. ರಾತ್ರಿ 12 ಗಂಟೆಯಲ್ಲಿ ಒಂದು ಡ್ರಾಫ್ಟ್ ಬರೆದುಕೊಂಡು ಬನ್ನಿ ಎಂದರೆ ಬರೆದುಕೊಂಡು ಹೋಗಬೇಕು. ಮುಂಧ್ರ ವ್ಯವಹಾರವನ್ನೇ ಬಿಡದಿರುವಾಗ ಈ ಸಣ್ಣ ರಾಜ್ಯದಲ್ಲಿ ಟೋಪಿ ಹಾಕುವವರಿಗೆ ಹೆದರಿದರೆ ಹೇಗೆ? ಇದನ್ನೆಲ್ಲಾ ಸರಿಯಾಗಿ ನೋಡದೆ ಲಕ್ಷಾಂತರ ರೂಪಾಯಿಗಳನ್ನು ಚರಂಡಿಗೆ ಹಾಕುವುದು ಸರಿಯೆ? ಸರ್ಕಾರ ಇದನ್ನು ಯೋಚನೆ ಮಾಡಬೇಕು.

ರಾಷ್ಟ್ರೀಕರಣ ಮಾಡಬೇಕೆಂದು ಪದೇ ಪದೇ ಹೇಳುತ್ತಾರೆ. ಅದಾಗಬೇಕು. ವೆಸ್ಟೆಡ್ ಇಂಟರೆಸ್ಟ್ ಇರುವವರು ಇಲ್ಲೂ ದೆಹಲಿಯಲ್ಲೂ ಇದ್ದಾರೆ. ಅವರು ಎಲ್ಲಾದರೂ ಇರಲಿ, ಸಂಚಾರ ಹತೋಟಿಯನ್ನು, ರಾಷ್ಟ್ರೀಕರಣವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ರಾಜ್ಯಭಾರವನ್ನು, ಸರಿಯಾಗಿ ನಡೆಸದಿದ್ದರೆ, ಡ್ರೈವರುಗಳು, ಕಂಡಕ್ಟರುಗಳು ಮನಸ್ಸು ಬಂದಹಾಗೆ ನಡೆಯುತ್ತಿದ್ದರೆ, ಸ್ಟ್ರೈಕ್ ಮಾಡಿ, ಮಧ್ಯೆ ಗಾಡಿ ನಿಲ್ಲಿಸಿದರೆ ಜನರಿಗೆ ತೊಂದರೆಯಾಗುವುದಿಲ್ಲವೆ? ಸರ್ಕಾರಕ್ಕೆ ದಕ್ಷತೆಯಿಲ್ಲದಿದ್ದರೆ ಏನು ತಾನೆ ನಡೆಸುವುದೋ ಅರ್ಥವಾಗುವುದಿಲ್ಲ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೀವು ಸರಿಯಾದ ಆಡಳಿತ ಮಾಡುವ ಹಾಗಿದ್ದರೆ ಆಡಳಿತ ಮಾಡಿ, ಇಲ್ಲವೇ ಹೋದರೆ ನಿಮ್ಮ ಮನೆಗೆ ಹೋಗಿ, ನಿಮ್ಮ ಕುಟುಂಬದವರೊಡನೆ ನಮ್ಮ ಕೈಯ್ಯಲ್ಲಿ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿಬಿಡಿ. ಅದಕ್ಕಾಗಿ ಮಂತ್ರಿ ಪದವಿಯನ್ನು ಬಿಟ್ಟು, ಬೇರೆ ಯಾರಾದರೂ ಬಂದು ಯಾವ ರೀತಿ ಆಡಳಿತ ಮಾಡುತ್ತಾರೆನ್ನುವುದನ್ನು ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡು ನೋಡಿ. ನಾನು ಆಗಲೇ ಹೇಳಿದಂತೆ ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿ ಎಂದು ನಾನು ಹೇಳುತ್ತಿಲ್ಲ ಮತ್ತು ಹಾಗೆ ಹೇಳಲು ನನಗೆ ಅಧಿಕಾರವೂ ಇಲ್ಲ. ನಿಮ್ಮ ಮಂತ್ರಿ ಸ್ಥಾನವನ್ನು ಬಿಟ್ಟು ಹೊರಗೆ ಬನ್ನಿ ಎಂದು ಹೇಳುತ್ತಿದ್ದೇನೆ.

ಸ್ವಾಮೀ, ಮಾನ್ಯ ಅಧ್ಯಕ್ಷರ ಕ್ಷೇತ್ರದಿಂದಲೇ ಒಂದು ಸಾರಿ ರೋಡು ಟ್ರಾನ್ಸ್‌ಪೋರ್ಟು ಇಲಾಖೆಗೆ ಸೇರಿದ ಬಸ್ಸಿನಲ್ಲಿ ಬರುವಾಗ ಮಂಗಳೂರಿನಿಂದ ನಿಮ್ಮ ಕಾನ್ಸ್‌ಟಿಟುಯೆನ್ಸಿ ಮೂಲಕ ಬಂದು ಹಾಸನದ ಬಸ್ ಸ್ಟ್ಯಾಂಡಿಗೆ ಬಂದೆ. ಅದನ್ನು ನೋಡಿದಾಗ ಅದಕ್ಕಿಂತ ದೊಡ್ಡದಾದ ಬೇರೊಂದು ನರಕ ಇನ್ನೆಲ್ಲೂ ಇಲ್ಲ ಎಂದು ಹೇಳಬಹುದು. ಅಲ್ಲಿರುವ ಸಣ್ಣಪುಟ್ಟ ಅಧಿಕಾರಿಗಳೇ ಸರ್ವಾಧಿಕಾರಿಗಳಾಗಿರುತ್ತಾರೆ, ಇವರು ಯಾರ ಮಾತನ್ನೂ ಕೇಳುವುದಿಲ್ಲ. ಇಂತಹ ಅವ್ಯವಸ್ಥೆ ಹಾಗೂ ದುರ್ವ್ಯವಹಾರಗಳನ್ನು ಮಾಡುವುದಕ್ಕಿಂತ ಈ ರಾಷ್ಟ್ರೀಕರಣವನ್ನು ಮಾಡದೇ ಇರುವುದೇ ಸರಿಯೆಂದು ತೋರುತ್ತದೆ. ಇಂತಹ ರಾಷ್ಟ್ರೀಕರಣದ ವಿಚಾರದಲ್ಲಿ ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನವನ್ನು ಕೊಟ್ಟರು ಎನ್ನುವ ಕಾರಣದ ಮೇಲೆ ಆಂಧ್ರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಸಂಜೀವರೆಡ್ಡಿಯವರು ತಮ್ಮ ಮಂತ್ರಿ ಸ್ಥಾನವನ್ನು ಬಿಟ್ಟು ತಮ್ಮ ಸ್ಥಾನಕ್ಕೆ ಧೈರ್ಯದಿಂದ ರಾಜೀನಾಮೆ ಕೊಟ್ಟರು. ಅಲ್ಲದೆ ಆಂಧ್ರದ ಜನತೆಯಲ್ಲಿ ಅಷ್ಟು ನಂಬಿಕೆ ವಿಶ್ವಾಸಗಳಿಸಿದ್ದವರೂ ಅಧಿಕಾರ ಬಿಟ್ಟು ಹೊರಗೆ ಬಂದರು. ಹಾಗೆ ಇಲ್ಲಿರುವ ಮಂತ್ರಿಗಳಿಗೆ ತಮ್ಮ ಸ್ಥಾನ ಬಿಡುವುದಕ್ಕೆ ಧೈರ್ಯವೆಲ್ಲಿಂದ ಬರಬೇಕು ? ಆದುದರಿಂದ ತಾವು ಈಗಿರುವ ರೋಡು ಟ್ರಾನ್ಸ್‌ಪೋರ್ಟು ಸಂಚಾರ ವ್ಯವಸ್ಥೆಯನ್ನು ಸುವ್ಯವಸ್ಥೆಯಿಂದ ನಡೆಸಲು ಯೋಚನೆ ಮಾಡಬೇಕು ಎಂದು ಸಲಹೆ ಮಾಡುತ್ತಿದ್ದೇನೆ.

ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ನಮ್ಮ ವಿದ್ಯಾ ಮಂತ್ರಿಗಳ ವಿಚಿತ್ರ ನೀತಿಯ ಬಗ್ಗೆ ಹೇಳಬೇಕಾಗಿದೆ. ವಿದ್ಯಾ ಮಂತ್ರಿಗಳು ಮಾನ್ಯ ಸದಸ್ಯರಾದ ಅಪ್ಪಣ್ಣನವರ ಕ್ಷೇತ್ರಕ್ಕೆ ಹೋಗಿದ್ದಾಗ ಅವರೊಡನೆ ಈಗ ಹೆಚ್ಚಿಸಿರುವ ಫೀಸನ್ನು ಕಡಿಮೆ ಮಾಡಲು ನಾನು ಒಪ್ಪುವುದಿಲ್ಲ. ಆದರೆ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಒಪ್ಪಬೇಕು ಎಂದು ಹೇಳಿದರೂ ನಾನು ಅದಕ್ಕೆ ಸಮ್ಮತಿಸುವುದಿಲ್ಲ ಮತ್ತು ಕಡಿಮೆ ಮಾಡುವುದಿಲ್ಲ ಎಂದು ಹೇಳಿದ್ದವರು ಈಗ......

The Government which has yielded to threats is not worth continuing in office for a moment. I requested the Hon'ble Minister for Education, my dearest friend Sri S. R. Kanthi, to quit the ministership at once and get out of office and to say "I am here, another soldier who has sacrificed."

ಹೀಗೆ ಊರಿಂದೂರಿಗೆ ವಿದ್ಯಾ ಮಂತ್ರಿಗಳು ಹೋಗುವುದು ಅಲ್ಲಿ ಜನ ಕೊಡುವ ಹೂವಿನ ಹಾರಗಳನ್ನು ಹಾಕಿಸಿಕೊಳ್ಳುವುದು ಅಲ್ಲಿ ಭಾಷಣಗಳನ್ನು ಮನಸ್ಸಿಗೆ ಬಂದಂತೆ ಮಾತನಾಡುವುದು ; ಹೀಗೆ ಮಾತನಾಡತಕ್ಕ ಮಂತ್ರಿಗಳು ಯಾರಾದರೂ ಇದ್ದರೆ ನಿಜವಾಗಿಯೂ ಅವರು ಮಂತ್ರಿಗಳಾಗಿ ಮಂತ್ರಿಮಂಡಲದಲ್ಲಿರಲು ಲಾಯಕ್ಕಿಲ್ಲ ಎಂದು ಜನರು ಇತ್ತೀಚೆಗೆ ಆಡಿಕೊಳ್ಳುತ್ತಿದ್ದಾರೆ ಎಂದು ನಾನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ವಿಶ್ವವಿದ್ಯಾನಿಲಯದ ಪರಂಪರೆಗಳನ್ನು ನೋಡುತ್ತ ಹೋದರೆ ಅದರದೇ ಒಂದು ದೊಡ್ಡ ಕತೆಯಾಗಿದೆ. ಇವೊತ್ತಿನ ದಿವಸ ನಮ್ಮ ಶರಣ ಸಾಹಿತ್ಯದ ಸಂಪಾದಕರಾದ ಶ್ರೀಮಾನ್ ಶಿವಮೂರ್ತಿ ಶಾಸ್ತ್ರಿಗಳನ್ನು ಕರೆದು, ಇಲ್ಲಿ ನಡೆದಿರುವಂತಹ ಎಲ್ಲಾ ವಿಚಾರಗಳನ್ನು ಕುರಿತು ಒಂದು ಚರಿತೆಯನ್ನು ಬರೆಯುವಂತೆ ಏರ್ಪಾಟು ಮಾಡಿದರೆ ಅವರೂ ಸ್ವಲ್ಪ ಅನುಭವ ಪಡೆದುಕೊಂಡಂತಾಗುತ್ತದೆ. ಈ ರಾಜ್ಯದಲ್ಲಿ ಯಾರೂ ಗತಿಯಿಲ್ಲ ಎಂದು ಶ್ರೀಮಾನ್ ಮಾದಪ್ಪಗೌಡರು ಹೇಳಿದ ಹಾಗೆ, ದೆಹಲಿಯಲ್ಲಿದ್ದವರಿಗೆ ಶ್ರೀಮಾನ್ ಮಾಲಯವರು ಬೇಡ ಎಂದಿದ್ದವರಿಗೆ ಮೈಸೂರು ಯೂನಿವರ್ಸಿಟಿಯ ಉಪಕುಲಪತಿಗಳಾಗುವಂತೆ ಆದೇಶ ಕೊಟ್ಟಿದ್ದಾರೆಂದು ಪ್ರಕಟಣೆ ಬಂದಿದೆ. ನಾನಾದರೂ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ತಮಗೆ ಈ ಮಂತ್ರಿ ಮಂಡಲದಲ್ಲಿ ಸ್ಥಾನವಿಲ್ಲದಿದ್ದರೂ ಪರವಾಗಿಲ್ಲ, ತಮ್ಮನ್ನೇ ಈ ರಾಜ್ಯದಲ್ಲಿ ಉಪಕುಲಪತಿಗಳನ್ನಾಗಿ ಮಾಡಿಸಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. (ನಗು) ಈ ಸ್ಥಾನಕ್ಕೆ ತಾವು ಭೂಷಣಪ್ರಾಯರಾದವರು ಎಂದು ನಾನಾದರೂ ಹೇಳುತ್ತೇನೆ.

ತಮ್ಮಂಥವರೂ ಎಂದರೆ ಏನು ? Please conclude the idea. An offer to me like that is an insult.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂತಹ ಅನಿಶ್ಚಯತೆಯ ದುರ್ವ್ಯವಹಾರಗಳನ್ನು ಕಡಮೆ ಮಾಡುವುದಕ್ಕೆ ತಮ್ಮಂತಹವರು ಎಂದರೆ ಮಾನ್ಯ ವಿದ್ಯಾಮಂತ್ರಿಗಳವರು a great educationist, a great lawyer, ಇಂತಹ ಸ್ಥಾನದಲ್ಲಿರಬಾರದಾಗಿತ್ತು ಎಂದು ಇಲ್ಲಿ ತಮ್ಮ ಮೂಲಕ ಅರಿಕೆ ಮಾಡುತ್ತಿದ್ದೇವೆ. ಹೀಗೆ ಜನ ಪಿಸುಮಾತಿನಲ್ಲಿ ಹೇಳುತ್ತಿದ್ದುದನ್ನು ಇಲ್ಲಿ ಸಭೆಗೆ ಅರಿಕೆಮಾಡುತ್ತಿದ್ದೇನೆ. ತಾವು ಈ ಸಭೆಯಲ್ಲಿ ಅಧ್ಯಕ್ಷರಾಗಿಯೇ ಇರಬೇಕೆಂದು ದೇವರಲ್ಲಿ ಪ್ರಾರ್ಥನೆಮಾಡುತ್ತೇನೆ ಮತ್ತು ಹಾಗೇ ತಾವೇ ಇಲ್ಲಿ ಇದ್ದುಬಿಡಿ.

ವಿದ್ಯಾಖಾತೆಯಲ್ಲಿ ಈ ಹಿಂದೆ ನಡೆದ ದುರಂತಗಳ ಬಗ್ಗೆ, ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ಕೃಷ್ಣಪ್ಪನವರೂ ಹಾಗೂ ಶ್ರೀಮಾನ್ ಮಾದಪ್ಪ ಗೌಡರವರೂ ಹೇಳಿದಂತೆ, ಇದನ್ನು ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದರು. ಮದರಾಸಿನ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಆದ ಶ್ರೀ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಆದ ಶ್ರೀಮಾನ್ ಪಾವಟೆಯವರು, ಗುಲ್ಬರ್ಗಾ ಕಾಲೇಜಿನ ಪ್ರಿನ್ಸಿಪಾಲರವರು ಮತ್ತು ಈಗ ತಾತ್ಕಾಲಿಕ ಉಪಕುಲಪತಿಗಳಾಗಿರುವ ಶ್ರೀಮಾನ್ ದಾವರ್ ಅವರು ಈ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆ. ಹಳೆಯ ಮೈಸೂರಿಗೆ ಸೇರಿದ ಒಬ್ಬ ಪ್ರತಿನಿಧಿಗಳೂ ಇದ್ದಾರೆಯೇ ಎಂದರೆ ಯಾರೂ ಇದರಲ್ಲಿ ಇಲ್ಲ. ನಮ್ಮಲ್ಲಿ ವಿದ್ಯಾ ಕ್ಷೇತ್ರದಲ್ಲೆಲ್ಲ ಪರಿಣತರಾದ ಶ್ರೀಮಾನ್ ಮಲ್ಲಾರಾಧ್ಯರವರು ಇರಲಿಲ್ಲವೇ ? ಶ್ರೀಮಾನ್ ಕಸ್ತೂರಿರಾಜಚೆಟ್ಟಿಯವರು ಇರಲಿಲ್ಲವೇ ? ಶ್ರೀಮಾನ್ ನಿಕ್ಕಂ ಅವರು ಇರಲಿಲ್ಲವೇ! ಹಿಂದೆ ಡಿ. ಪಿ. ಐ. ಆಗಿದ್ದವರು ಶ್ರೀಮಾನ್ ಗುರುದತ್ತ ಅವರು ಇರಲಿಲ್ಲವೇ ಇಂತಹ ಕಮಿಟಿ ಮಾಡುವಾಗ ಅವರ್‍ಯಾರೂ ತಮ್ಮ ಕಣ್ಣಿಗೆ ಬೀಳಲಿಲ್ಲವೇ! ಇಂತಹ ಏಕ ಪಕ್ಷೀಯವಾದ ಒಂದು ಕಮಿಟಿಯನ್ನು ಮಾಡಿಕೊಂಡು ಇವತ್ತು ತಾವೆಲ್ಲಾ ಹೋಗಿ ನಿಮ್ಮ ಖರ್ಚಿನಲ್ಲೇ ಮದರಾಸಿಗೆ ಹೋಗಿ ಎವಿಡೆನ್ಸು ಕೊಡಬೇಕು ಎಂದರೆ ಏನರ್ಥ ? ಇವೊತ್ತು ಚಿಕ್ಕಮಗಳೂರಿನಿಂದ ಬರುವವರು, ಮಂಗಳೂರಿನ ಕಡೆಯಿಂದ ಬರುವವರು ಹಾಗೂ ಮೈಸೂರು ಕಡೆಯಿಂದ ಬರುವವರು ಅಲ್ಲಿಗೆ ಹೋಗಿ ರುಜುವಾತು ಕೊಡಬೇಕೆಂದರೆ ಹೇಗೆ ? 'bankruptcy of intelligence and bankruptcy of any other thing'. ಮದರಾಸಿಗೆ ಹೋಗಿ ರುಜುವಾತು ಕೊಡು ಎಂದು ಜನಕ್ಕೆ ಹೇಳಿದ್ದರೂ ಯಾರು ಒಂದು ಸರಿಯಾದ ರುಜುವಾತು ಕೊಡಲಿಲ್ಲ ಆದರಿಂದ ನಮ್ಮ ಮುಂದ ಇದ್ದ ದಾಖಲೆಗಳಂತೆ ಹಾಗೂ ಇತರ ಮೆಟೀರಿಯಲ್ಲುಗಳ ಆಧಾರದ ಮೇಲೆ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟಿದ್ದೇವೆಂದು ಹೇಳಿದರೆ ಅಂತಹ ರಿಪೋರ್ಟನ್ನು ಸರಕಾರ ಒಪ್ಪುವುದು ನ್ಯಾಯವೂ ಅಲ್ಲ. ಅದಕ್ಕೋಸ್ಕರ ಈಗಲಾದರೂ ಸರ್ಕಾರ ಒಂದು ಪ್ರೆಸ್ಸು ನೋಟನ್ನು ಹೊರಡಿಸಿ ಈಗ ಹೇಳಿರುವ ಹೇಳಿಕೆಗಳನ್ನು ವಾಪಸು ಪಡೆದರೂ ಚಿಂತೆ ಇಲ್ಲ, ಈಗಿರುವ ಕಮಿಟಿಯವರು ದೇಶದ ಎಲ್ಲ ಕಡೆಗಳಲ್ಲಿಯೂ ಸಂಚಾರಮಾಡಿ ಅಲ್ಲಿರುವ ಜನಗಳ ಕಡೆಯಿಂದ ವಿಚಾರಗಳನ್ನೆಲ್ಲಾ ಶೇಖರಿಸಿ, ಆ ನಂತರ ಬೊಂಬಾಯಿಯಲ್ಲಿರುವ ಸ್ಟ್ರಕ್ಚರು, ಮದರಾಸಿನಲ್ಲಿರುವ ನಮೂನೆ, ಆಂಧ್ರದಲ್ಲಿ ಹಾಗೂ ದೆಹಲಿಯಲ್ಲಿರುವ ಪ್ಯಾಟರ್ನುಗಳನ್ನೆಲ್ಲಾ ಯೋಚನೆ ಮಾಡಿ ಒಂದು ವಾಸ್ತವವಾದ ತೀರ್ಮಾನವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಈ ಕಮಿಟಿಯಲ್ಲಿ ಹಳೆಯ ಮೈಸೂರಿನ ಒಬ್ಬರು ಪ್ರತಿನಿಧಿಗಳನ್ನಾದರೂ ಈಗಲಾದರೂ ನೇಮಕ ಮಾಡುವುದು ಒಳ್ಳೆಯದು ಎಂದು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲ ಸಾಲೆನ್ಸ (ಮೂಡಬಿದ್ರಿ).—ಸ್ವಾಮಿ, ರಾಜ್ಯಪಾಲರ ಭಾಷಣದಲ್ಲಿರುವ ಎಲ್ಲ ವಿಚಾರಗಳನ್ನು ನೋಡಿದರೆ ಅದರಲ್ಲಿ ಜನೋಪಯುಕ್ತವಾದ ವಿಚಾರಗಳು ಯಾವುದೂ ಇರುವಂತೆ ಕಾಣಿಸುವುದಿಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಈ ಭಾಷಣದಲ್ಲಿ ಹೇಳಿರುವಂತೆ ಯೋಜನೆಗಳಿಗಾಗಿ ಶೇಕಡಾ 44ರಷ್ಟು ಮಾತ್ರ ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಇನ್ನು ಬರುವ ವರ್ಷಗಳಲ್ಲಿ ಎಂದರೆ ಯೋಜನೆಗಳ ಅವಧಿಯು ಪೂರ್ತಿಯಾಗುವುದರೊಳಗಾಗಿ ಹಣ ಖರ್ಚು ಮಾಡಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ವಿಮರ್ಶೆ ಮಾಡಬೇಕಾಗಿದೆ. ಶೇಕಡ 44ರಷ್ಟು ಎಂದರೆ ಈ ದೇಶದ ಜನರಿಗೆ ಅರ್ಧದಷ್ಟು ಉಪಯೋಗವಾಗುತ್ತದೋ ಇಲ್ಲವೋ ಅದು ಸ್ಪಷ್ಟವಾಗುವುದಿಲ್ಲ. ದೊಡ್ಡದಾಗಿ ಯೋಜನೆಗಳನ್ನು ಮಾಡುತ್ತೇವೆ; ಇದರಿಂದ ಜನಗಳಿಗೆ ಪ್ರಯೋಜನವಾಗುತ್ತದೆ ಎಂದು ಹೇಳುತ್ತ ಇಷ್ಟು ಕಡಿಮೆಯಾಗಿ ಖರ್ಚು ಮಾಡಿದರೆ ಏನು ಪ್ರಯೋಜನ ; ಮತ್ತು ಇಂತಹ ಪಟ್ಟಿಯನ್ನು ಕೊಡುವುದರಿಂದ ಜನರಿಗೇನೂ ಉಪಯೋಗವಾಗುತ್ತದೆಯೇ ಇಲ್ಲವೇ ಎನ್ನುವುದನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ಸರಿಯಾದ ರಚನಾತ್ಮಕವಾದ ಟೀಕೆಗಳನ್ನು ಕೊಡುತ್ತಿದ್ದರೂ ಅಧಿಕಾರದಲ್ಲಿರುವವರು ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಆದರೆ ಇದರಲ್ಲಿ

(ಶ್ರೀ ಎಸ್. ಗೋಪಾಲ ಸಾರೆನ್ನ)

ಪ್ರತಿಪಕ್ಷದವರು ಆಡಳಿತ ಪಕ್ಷದವರಿಗೆ ತಕ್ಕ ಲೋಪದೋಷಗಳನ್ನೆತ್ತಿ ತೋರಿಸಿ ಅವುಗಳನ್ನು ತಿದ್ದಿಕೊಳ್ಳಿ ಎಂದರೆ ಆಡಳಿತ ಪಕ್ಷಕ್ಕೆ ಅದು ಸಮಾಧಾನಕರವಾಗಿಲ್ಲ. ಆಡಳಿತ ಪಕ್ಷಕ್ಕೆ ಈ ದಿವಸ ಅಂಥ ಒಂದು ಜಡ್ಡು ಅಥವಾ ದಡ್ಡತನ ಬಂದುಹೋಗಿದೆ. ಕೆಲವು ರೋಗಿಗಳಿಗೆ ಇಂಜಕ್ಷನ್ ಕೊಟ್ಟ ಹಾಗೆಲ್ಲಾ ರೋಗ ಬಲವಾಗಿ ಅಂಟಿಕೊಳ್ಳುವಂತೆ ಈ ಆಡಳಿತ ಪಕ್ಷಕ್ಕೆ ಅವರ ಲೋಪದೋಷಗಳನ್ನು ತಿದ್ದಿಕೊಳ್ಳಲಿ ಎಂದು ನಾವು ಹೇಳಿದಂತೆಲ್ಲಾ ಅವರ ಜಡ್ಡು ಜಾಸ್ತಿಯಾಗುತ್ತಲೇ ಇದೆ. ಅಂಥ ಒಂದು ದೊಡ್ಡ ರೋಗ ಬಂದಿದೆ, ಆಡಳಿತ ಪಕ್ಷಕ್ಕೆ. ತಿದ್ದಲಿಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಆಡಳಿತ ನಡೆದುಕೊಂಡು ಬರುತ್ತಿದೆ. ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಅಷ್ಟು ಅಂಟಿಕೊಂಡಿದೆ.

5-30 P.M.

ರಾಜ್ಯದಲ್ಲಿ ಅಧಿಕಾರವಿಕೇಂದ್ರೀಕರಣ ಮಾಡಲೆಂದು ಪಂಚಾಯಿತಿ ರಾಜ್ಯಸ್ಥಾಪನೆಗೆ ನಾವು ಒಪ್ಪಿಗೆ ಕೊಟ್ಟೆವು. ಸರ್ಕಾರದವರು ಈಗ ಇದನ್ನು ಜಾರಿಗೆ ತಂದಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಆ ಪಂಚಾಯಿತಿಗಳಿಗೆ ಜೀವ ಇದೆಯೋ, ಅವುಗಳಿಗೇನಧಿಕಾರವಿದೆ ಎಂಬುದೊಂದೂ ಗೊತ್ತಾಗುವುದಿಲ್ಲ. ಹೀಗಾಗಿ ಈ ದಿವಸ ಈ ಗ್ರಾಮಪಂಚಾಯಿತಿಗಳು ಕೇವಲ ಒಂದು ಪಟ್ಟಿಯಲ್ಲಿ ಹೆಸರಿಗೆ ಮಾತ್ರ ಉಳಿದಿರುತ್ತವೆಯೇ ವಿನಾ ಅವುಗಳಿಗೆ ಯಾವ ಸೌಲತ್ತೂ ಇಲ್ಲ.

ಇದರಂತೆಯೇ ವ್ಯವಸಾಯದ ಯೋಜನೆಗಳ ಒಂದು ಪಟ್ಟಿಯನ್ನೂ ತಯಾರು ಮಾಡಿದ್ದಾರೆ. ಆದರೆ ವ್ಯವಸಾಯಾಭಿವೃದ್ಧಿಮಾತ್ರ ಆಗಿಲ್ಲ. ಯೋಜನೆಗಳನ್ನು ತಯಾರು ಮಾಡಿ ಅದನ್ನು ಒಂದು ಪುಸ್ತಕದಲ್ಲಿಟ್ಟಿದ್ದಾರೆ. ಆದರೆ ಆ ಪುಸ್ತಕದಲ್ಲಿ ಹೇಳಿರುವಂತೆ ಜನರಿಗೆ ಅನುಕೂಲ ಕಲ್ಪಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವಾಗಿದೆ.

ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ರಾಜ್ಯಪಾಲರು ಹೇಳಿದ್ದಾರೆ. ಈ ಹಿಂದೆ ಒಂದು ಗೊಬ್ಬರದ ಮತ್ತು ಅಲ್ಯೂಮಿನಿಯಂ ಕಾರ್ಖಾನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವುದಾಗಿ ಹೇಳಲಾಗಿತ್ತು. ಆದರೆ ಈಗ ಅವು ಅಲ್ಲಿ ಯಾವ ರೀತಿಯಲ್ಲಿ ಮುಂದುವರಿಯುತ್ತಿವೆಯೆಂಬ ವಿಚಾರ ಇದರಲ್ಲಿ ಕಾಣುತ್ತಿಲ್ಲ. ನಮ್ಮ ವೆಸ್ಟ್‌ಕೋಸ್ಟಿನಲ್ಲಿ ಅಲ್ಯೂಮಿನಿಯಂ ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಹೇಳಿದ್ದರು. ಈ ವರ್ಷದ ಭಾಷಣದಲ್ಲಿ ಅದರ ಹೆಸರೇ ಇಲ್ಲ. ಇನ್ನು ಮುಂದಿನ ವರ್ಷಕ್ಕೆ ಇದರ ಜ್ಞಾಪಕವು ಉಳಿಯದಂತಾಗುತ್ತದೆ.

ಇನ್ನು ಸಹಕಾರ ಸಂಘಗಳ ವಿಚಾರವನ್ನು ಬಹಳವಾಗಿ ಹೇಳಿದ್ದಾರೆ. ಆದರೆ ಇವು ಅಷ್ಟು ಚುರುಕಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಿ ಹಣದ ಅಗತ್ಯವಿಲ್ಲವೋ ಅಲ್ಲಿಗೆ ಹಣವನ್ನು ಒದಗಿಸಿ ಎಲ್ಲಿಗೆ ಹಣದ ಅಗತ್ಯ ಬಹಳವಾಗಿರುತ್ತದೆಯೋ ಅಲ್ಲಿಗೆ ಹಣವನ್ನೊದಗಿಸುತ್ತಿಲ್ಲ. ಇಂಥ ಸಹಕಾರ ಸಂಘಗಳವು. ರೈತರಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕೂಡ ಸಿಗುತ್ತಿಲ್ಲ. ಆದ್ದರಿಂದ ಇವುಗಳನ್ನೆಲ್ಲಾ ಬರಿ ಒಂದು ಅಂಕಿ ಸಂಖ್ಯೆಗಳಲ್ಲಿ ತೋರಿಸಿದರೆ ಪ್ರಯೋಜನವಿಲ್ಲ.

ಇನ್ನು ಹರಿಜನ ಗಿರಿಜನರ ಶೋಷಣೆ ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂಬುದನ್ನು ನೋಡೋಣ: ಇವರ ಯೋಗಕ್ಷೇಮ ನೋಡಿಕೊಳ್ಳಲು ರಚಿಸಿರತಕ್ಕ ಆ ಸೋಷಿಯಲ್ ವೆಲ್‌ಫೇರ್ ಇಲಾಖೆಯೆಂಬುದಿದೆಯೋ ಇಲ್ಲವೋ ಅದು ನನಗೆ ಗೊತ್ತಾಗುವುದಿಲ್ಲ. ಈ ಹಿಂದೆ ನಮ್ಮ ರಾಜ್ಯದಲ್ಲಿರತಕ್ಕ ಸಮಗ್ರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರ ಹೆಸರುಗಳನ್ನು ಬರೆದು ಅದನ್ನು ಕೇಂದ್ರ ಸರ್ಕಾರದವರ ಅನುಮತಿಗಾಗಿ ಕಳುಹಿಸಲಾಗಿದೆಯೆಂದು ಹೇಳಿದ್ದರು. ಈಗ ಅದೇನಾಗಿದೆ ಎಂಬುದು ತಿಳಿಯದಂತಾಗಿದೆ. ಅದಾಗ್ಯೂ ಹೆಸರಿಗೆ ಮಾತ್ರ ಇರಲಿ ಎಂದು ಈಗಿನ ರಾಜ್ಯಪಾಲರ ಭಾಷಣದಲ್ಲೂ ಸೋಷಿಯಲ್ ವೆಲ್‌ಫೇರ್ ಇಲಾಖೆಯನ್ನು ಸೇರಿಸಿದ್ದಾರೆ. ಆದರೆ ಅಲ್ಲಿ ಯಾವ ಒಂದು ಇಲಾಖೆಯೂ ಇಲ್ಲದೆ ಅಲ್ಲಿ ಒಂದು ಬೋರ್ಡ್ ಮಾತ್ರ ಇರುತ್ತದೆ. ಷೆಡ್ಯೂಲ್ಡ್ ಟ್ರೈಬಿನವರನ್ನು ಕಂಡು ಅವರಿಂದ ವಿಚಾರ ತಿಳಿಯದೆ ಮುಗುಂ ಆಗಿ ಆ ಜನಾಂಗದ ಹೆಸರನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕಾರಣವೇನು ? ಇದರಿಂದ ಆ ಜನಾಂಗಕ್ಕೆ ಬಹಳ ಅನ್ಯಾಯವಾಗಿದೆ. ಈ ವಿಚಾರವನ್ನು ಈ ಹಿಂದೆಯೇ ಶ್ರೀ ಸುಬ್ಬಯ್ಯ ನಾಯಕರು ಇದೇ ಸಭೆಯಲ್ಲಿ ತಿಳಿಸಿದ್ದಾರೆ. ಅವರ ಜನಾಂಗಕ್ಕೆ ಪಲ್ಲಕ್ಕಿ ಹೊರಿಸುತ್ತಾ ಅವರ ಹೆಣ್ಣುಮಕ್ಕಳಿಗೆ ತುಂಬಾ ಅನ್ಯಾಯಮಾಡಿದ್ದಾರೆಂದು ಅವರು ಹೇಳಿದ್ದಾರೆ. ಹರಿಜನರನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಒಂದು ಬೋರ್ಡನ್ನು ಹಾಕಿ ಅವರನ್ನು ಅಸ್ಪೃಶ್ಯರೆಂದು ಹೇಳುತ್ತಿರುವಾಗ ಆ ಬೋರ್ಡನ್ನಾದರೂ ಏಕೆ ಹಾಕಬೇಕಾಗಿತ್ತು ? ಇದನ್ನೆಲ್ಲಾ ನೋಡಿದರೆ ಹರಿಜನ ಗಿರಿಜನರನ್ನು ಇತರ ಸವರ್ಣೀಯರ ಮಟ್ಟಕ್ಕೆ ತರತ್ತೇವೆಂದು ಒಪ್ಪಿರತಕ್ಕದ್ದು ಕೇವಲ ಒಂದು ದಾಕ್ಷಿಣ್ಯಕ್ಕೆ ಎಂದು ಕಾಣುತ್ತದೆ. ಆದರೆ ಅವರ ಅಂಥ ದಾಕ್ಷಿಣ್ಯ ನಮಗೆ ಬೇಡ ಇದು ಘಟನಾತ್ಮಕವಾಗಿ ನಮಗೆ ಬಂದಿರತಕ್ಕ ಒಂದು ಹಕ್ಕು. ಈ ಹೊತ್ತು ಸರ್ಕಾರ ಆ ರಾಜ್ಯಾಂಗಕ್ಕೆ ಅಪಮಾನ ಮಾಡಿದೆ. ಕೆಲವು ಹರಿಜನ ಅಧಿಕಾರಿಗಳನ್ನು ಮನೆಗೆ ಕಳಿಸಿದ್ದಾರೆ. ಯಾರದೋ

ಅನ್ಯಾಯಕ್ಕೆ ಯಾರನ್ನೋ ಶಿಕ್ಷೆಮಾಡಿದ್ದಾರೆ. ಹೀಗೆ ಈ ದಿವಸ ಹರಿಜನರಿಗಾಗಿರತಕ್ಕ ಅನ್ಯಾಯವನ್ನು ಕೇಳತಕ್ಕವರೇ ಇಲ್ಲ. ಮೊದಲೇ ನೌಕರಿಯಲ್ಲಿ, ಗೆಜೆಟೆಡ್ ಹುದ್ದೆಯಲ್ಲಿ ಹರಿಜನರಿರುವುದು ಬಹಳ ಕಡಮೆ. ಇದನ್ನು ಕೇಳತಕ್ಕವರೇ ಇಲ್ಲ. ಈಗ ತಾನೆ ಶ್ರೀ ಸಿದ್ದಯ್ಯ ಕಾಶೀಮಠ ಅವರು 4 ಜನ ಹರಿಜನರನ್ನು ಕಂಬಕ್ಕೆ ಕಟ್ಟಿ ಹೊಡೆದು ಕೊಂದು ಹಾಕಿದರೆಂದು ಹೇಳಿದರು. ಅವರನ್ನು ಕೇಳತಕ್ಕವರೇ ಇಲ್ಲ. ದಲಿತವರ್ಗದವರಿಗೆ ಹೀಗೆಲ್ಲಾ ಅನ್ಯಾಯವಾಗುತ್ತಿರುವಾಗ, ಅವರು ಬದುಕುವುದಕ್ಕೇ ಕಷ್ಟವಾಗುತ್ತಿರುವಾಗ ಅಧಿಕಾರದಲ್ಲಿರತಕ್ಕ ನಾಯಕರು ಇವರಿಗೇನು ರಕ್ಷಣೆ ಕೊಟ್ಟಿದ್ದಾರೆ? ಎಷ್ಟೋ ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ತೋರಿಸುತ್ತಾರೆ. ಯೋಜನೆಗಳಲ್ಲಿಯೂ ತೋರಿಸುತ್ತಾರೆ. ಅದರ ಪ್ರಕಾರ ಇಲ್ಲಿಯವರೆಗೂ ಎಷ್ಟು ಪ್ರಯೋಜನ ಸಿಕ್ಕಿದೆಯೆಂದರೆ ಸರಿಯಾದ ಉತ್ತರವಿಲ್ಲ. ಮಧ್ಯಮ ವರ್ಗದ ಜನರು ಹರಿಜನ ಸೇವಕರಾಗಿ ಮತ್ತು ಜನತೆಯ ಸೇವಕರಾಗಿ ಮುಂದೆ ಮುಂದೆ ಬಂದಿದ್ದಾರೆಂದೇನೋ ಹೇಳುತ್ತಿದ್ದಾರೆ. ಇದಕ್ಕಾಗಿ ಹಣ ಖರ್ಚಾಗಿರಬಹುದು. ಆದರೆ ಎಷ್ಟು ಜನ ದಲಿತವರ್ಗದವರು ಆರ್ಥಿಕ ದೃಷ್ಟಿಯಿಂದ ಮುಂದೆ ಬರುವಂತಾಗಿದೆ ಎಂಬ ಬಗ್ಗೆ ಸರ್ಕಾರದವರು ಲೆಕ್ಕ ಕೊಡಬೇಕು. 500ರರಿಂದ 2,500ರ ರವರೆಗೆ ವಿದ್ಯಾವಂತ ದಲಿತವರ್ಗದವರಿಗೆ ಸರ್ಕಾರದವರು ಹೆಚ್ಚು ಸಹಾಯ ಮಾಡಿ ಅವರ ಜೀವನಕ್ಕೆ ಅನುಕೂಲ ಮಾಡಿಕೊಡಬೇಕು. ಬೇರೆ ಬೇರೆ ಕೈಗಾರಿಕೆಗಳ ಯೋಜನೆಗಳಲ್ಲಿ ಕೆಲಸ ಮಾಡಲು ಎಷ್ಟೋ ಜನರನ್ನು ಕಳುಹಿಸಿದ್ದೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ಒಬ್ಬರಿಗೂ ಅದರ ಅವಕಾಶ ಸಿಗಲಿಲ್ಲ. ಬಾಕಿ ಜಿಲ್ಲೆಗಳಲ್ಲಿ ಆಗಿದ್ದಂಥ ಪ್ರಯೋಜನ ನಮಗೆ ಸಿಕ್ಕಲಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಬೇಸಾಯ ಕಾಲೋನಿಗಳನ್ನು ಬೇರೆ ಮಾಡಿದ್ದಾರೆ.

ಅಧ್ಯಕ್ಷರು.—ಇನ್ನು ಹೊಸ ವಿಷಯಗಳನ್ನು ಡೆವಲಪ್ ಮಾಡುವುದು ಸರಿಯಲ್ಲ. ಅವರ ಪಕ್ಷದವರು ಇದ್ದಾರೆ. ಅವರ ಹತ್ತಿರ ಬೇಕಾದರೆ ಟೈಂ ಮತ್ತೆ ಕೇಳಿ ತೆಗೆದುಕೊಳ್ಳಿ. ನಮಗೆ 10 ನಿಮಿಷಗಳನ್ನು ಅವರೇ ಕೊಟ್ಟಿದ್ದಾರೆ. ತಮ್ಮ ಪಕ್ಷದ ನಾಯಕರಿಂದ ಬೇಕಾದಷ್ಟು ಕಾಲಾವಕಾಶವನ್ನು ತೆಗೆದುಕೊಂಡು ಮಾತನಾಡುವುದು ಸರಿಯೇ ಹೊರತು ನನ್ನ ಹತ್ತಿರ ಸದಸ್ಯರು ಈ ರೀತಿ ಚರ್ಚೆ ಮಾಡುವುದರಿಂದ ಬಹಳ ಕಷ್ಟವಾಗುತ್ತದೆ. ಇನ್ನೂ ಹೊಸ ವಿಷಯಗಳೇನಾದರೂ ಇದ್ದರೆ ಬಡ್ಜೆಟ್ ಚರ್ಚೆಯ ಕಾಲದಲ್ಲಿ ಮಾತನಾಡಬಹುದು ಎಂಬ ಅಂಶವನ್ನು ಮಾನ್ಯ ಸದಸ್ಯರು ಗಮನಿಸಬೇಕು. ಆದ್ದರಿಂದ ಮಾನ್ಯಸದಸ್ಯರು ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಗೋಪಾಲ ಸಾಲೆನ್ನ.—ಕಾಲಾವಕಾಶವನ್ನು ಕೊಡುವ ಅಧಿಕಾರ ತಮಗೇ ಪೂರ್ತಿಯಾಗಿ ಇದೆ.

ಅಧ್ಯಕ್ಷರು.—ಒಂದು ಘಂಟೆಗೆ 60 ನಿಮಿಷಗಳಿರುವ ಬದಲು 65 ನಿಮಿಷಗಳಿದ್ದರೆ ಖಂಡಿತವಾಗಿ ಪ್ರತಿಯೊಬ್ಬರಿಗೂ ಕೇಳುವಷ್ಟು ಕಾಲಾವಕಾಶವನ್ನು ಕೊಡುತ್ತಿದ್ದೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ನನ್ನ ಪಕ್ಷದ ನಾಯಕರನ್ನು ನಾನು ಒಪ್ಪಿಸಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಈಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರನ್ನು ವರ್ಗ ಮಾಡುವುದಾಗಿ ಅದರಿಂದ ಸ್ವಲ್ಪ ಹಣ ಖರ್ಚಾಗಿದೆ. ಕಳೆದ ಸಾರಿ ಹೊಸದಾಗಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಡೈರೆಕ್ಟರಾಗಿ ಬಂದವರನ್ನು ಈಗ ಪುನಃ ಬದಲಾವಣೆ ಮಾಡಿ ಇನ್ನೊಬ್ಬರನ್ನು ತಂದಿದ್ದಾರೆ. ಇದು ಒಂದು ಕ್ರಮದಲ್ಲಿ ನಡೆಯಬೇಕು ಎಂಬ ಉದ್ದೇಶ ಸರ್ಕಾರಕ್ಕಿಲ್ಲವೆಂದು ನಾನು ಹೇಳುತ್ತೇನೆ. ಮೊದಲು ಎಷ್ಟೋ ವಿದ್ಯಾಮಂದಿರಗಳಿಗೆ, ಹಾಸ್ಟಲುಗಳಿಗೆ ಮತ್ತು ಸಮಾಜ ಮಂದಿರಗಳಿಗೆ ವಿದ್ಯಾ ಸೌಲತ್ತುಗಳ ಬಗ್ಗೆ ಸಾಲವನ್ನು ಕೊಡುತ್ತಿದ್ದರು. ಈಗ ಹೊಸದಾಗಿ ಇವರು ಮಾಡುವಂತಹದೇನೂ ಕಾಣುವುದಿಲ್ಲ. ಏನೋ ಸಂಶೋಧನೆಗಾಗಿ ಎಕ್ಸ್‌ಪೆರಿಮೆಂಟಿಗಾಗಿ ಕೆಲವು ಸಮಾಜ ಸೇವಾಕಾರ್ಯಗಳನ್ನು ಕೈಗೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆಯೇ ಹೊರತು ಸಮಾಜ ಕಲ್ಯಾಣ ಮಂತ್ರಿಗಳಾಗಿರತಕ್ಕವರು ಈ ಬಗ್ಗೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಪಂಗಡದವರಿಗೆ ಯಾವ ಒಂದು ಅನುಕೂಲತೆಯನ್ನೂ ಸಂಬಂಧಪಟ್ಟ ಇಲಾಖೆಯಿಂದ ಕಲ್ಪಿಸಿಕೊಡುತ್ತಾ ಇಲ್ಲವೆಂಬ ಅಂಶವನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಇಲಾಖೆಯ ಪೂರ್ಣಾಧಿಕಾರವನ್ನು ಮುಖ್ಯ ಮಂತ್ರಿಗಳು ವಹಿಸಿಕೊಳ್ಳುವುದು ಮತ್ತು ಅವರ ಕೈಗೆ ಬಿಟ್ಟುಕೊಡುವುದು ಒಳ್ಳೆಯದೆಂದು ನನ್ನ ಸಲಹೆ. ನಮ್ಮ ಪ್ರತಿನಿಧಿಯೊಬ್ಬರು ಈಗಾಗಲೇ ಒಂದು ಕಡೆಯಲ್ಲಿ ಕಾಡುಗಳ ರಕ್ಷಣೆ ಮತ್ತು ಸಮುದ್ರದ ಮೀನಿನ ಸಂಪತ್ತಿನ ರಕ್ಷಣೆ ನೋಡುತ್ತಾ ಇದ್ದಾರೆ. ನಮ್ಮ ವಿಷಯವನ್ನು ಯಾರೂ ನೋಡುತ್ತಿಲ್ಲ. ಮಾನ್ಯ ಶ್ರೀಮಾನ್ ಪ್ರಭಾಕರ್ ಅವರು ಸೋಷಿಯಲ್ ವೆಲ್‌ಫೇರಿನ ಉಪಮಂತ್ರಿಗಳಾಗಿದ್ದರೂ ನಮ್ಮ ದಲಿತವರ್ಗದವರಿಗೆ ಯಾವ ಪ್ರಯೋಜನವೂ ಇಲ್ಲ. ಮಾನ್ಯ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಯೋಜನಾ ಶಾಖೆಯ ಉಪಸಚಿವರಾಗಿದ್ದಾರೆ. ಇವರೆಲ್ಲರೂ ಎಲ್ಲಿದ್ದಾರೆಂಬುದು ಅವರಿಗೇ ಗೊತ್ತಿಲ್ಲವೆಂದು ಕಾಣುತ್ತದೆ. ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಂಬುದೇ ನನಗೆ ಗೊತ್ತಿಲ್ಲ.

(ಶ್ರೀ ಎಸ್. ಗೋಪಾಲ ಸಾಣೆನ್ನ)

ಸುಮಾರು 3 ಲಕ್ಷ ಜನ ದಲಿತವರ್ಗದವರ ಪರವಾಗಿ ಕೇವಲ ಮೂರು ಜನ ಮಂತ್ರಿಗಳಿದ್ದಾರೆ. ಅದರಲ್ಲಿ ಇಬ್ಬರು ಉಪಮಂತ್ರಿಗಳಿದ್ದಾರೆ. ಈ ಮೂರು ಜನರೂ ದಲಿತವರ್ಗದವರ ಹಿತರಕ್ಷಣೆಯನ್ನು ನೋಡದೇ ಇದ್ದರೆ ಇವರು ಏತಕ್ಕೆ ಇರಬೇಕು ? ಈಗ ಈ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಆ ಜನರು ಮುಂದೆ ಬಂದಿದ್ದಾರೆ. ಅವರು ಇವರನ್ನು ಸುಮ್ಮನೆ ಬಿಡುವ ಕಾಲ ಹೋಯಿತು. ಅವರಂತೆಯೇ ಬಿಡುವ ಕಾಲವಿಲ್ಲ. ಮದ್ರಾಸಿನಲ್ಲಿ ಹಿಂದೆ ಒಂದು ಸಾರಿ ಅಲ್ಲಿನ ಜನ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಪ್ರಕಾಶಂ ಅವರ ಮನೆ ಬಾಗಿಲಿನಲ್ಲಿ ಸತ್ಯಾಗ್ರಹ ಚಳವಳಿಯನ್ನು ಹೂಡಿದಂತೆ ಇಲ್ಲಿಯೂ ದಲಿತವರ್ಗದವರೊಡನೆ ಜನ ಮಾನ್ಯ ಮಂತ್ರಿಗಳ ಮನೆಯ ಬಾಗಿಲಿನ ಮುಂದೆ ಸತ್ಯಾಗ್ರಹವನ್ನು ಹೂಡುವ ಕಾಲ ಈಗ ಬಂದಿದೆ. ಜನರು ಆ ಪ್ರಕಾರ ಚಳುವಳಿಯನ್ನು ಆರಂಭಿಸಬಹುದೆಂಬುದನ್ನು ನಾನು ಈಗಲೇ ಆಡಳಿತ ಪಕ್ಷದವರಿಗೆ ಎಚ್ಚರಿಸುತ್ತೇನೆ.

ಅಧ್ಯಕ್ಷರು.—ತಮ್ಮ ವೇಳೆಯಾಯಿತು. ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಗೋಪಾಲ ಸಾಣೆನ್ನ.—ಆದ್ದರಿಂದ ಸರ್ಕಾರದವರು ನಮ್ಮ ನಿಮ್ನವರ್ಗದವರ ಅಭಿವೃದ್ಧಿ ಹೆಚ್ಚಿಗೆ ಗಮನ ಕೊಡಬೇಕು. ಅದರಲ್ಲೂ ಈ ನಮ್ಮ ದಲಿತವರ್ಗದವರ ಅಭಿವೃದ್ಧಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಡುವುದು ರಾಷ್ಟ್ರದ ಒಂದು ಮಹತ್ವದ ಕಾರ್ಯವೆನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಪ್ರತ್ಯೇಕವಾಗಿ ಸೂಚನೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

(Chair's Ruling *re* : Expunction of Certain Remarks)

MR. SPEAKER.—Now, before I call upon another member, I must deal with a very important matter. I wish the hon'ble member who spoke about the Governor was present here. He raised a very serious matter and I drew his attention to it. He mentioned to me that he had not said anything which was objectionable. I have got a copy of that portion which relates to the matter. I am sorry the member is not here now. I sent a messenger to find out whether he was in the lobby so that he might be requested to come in and hear it himself.

I am sorry, a few sentences which I read are not only objectionable but highly objectionable. I am dealing with it to-day only because I do not want the Press to report it. I direct that these sentences will be expunged. I am making this very clear to the House and those who are here to record the proceedings * * * *

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಸಭಾಪತಿಯವರೇ, ನನಗೆ ಕನ್ನಡದಲ್ಲಿ ಮಾತನಾಡುವ ಅಭ್ಯಾಸ ಅಷ್ಟಾಗಿ ಇಲ್ಲ. ಆದರೂ ನನಗೆ ತಿಳಿದಮಟ್ಟಿಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯಪಾಲರು ಕನ್ನಡದಲ್ಲಿ ಏನು ಮಾತನಾಡಿದರು ಅದಕ್ಕಾಗಿ ನಾನು ಅವರಿಗೆ ಅಭಿನಂದನೆ ಮಾಡಿ ಮುಂದೆ ರಾಜ್ಯಪಾಲರ ಭಾಷಣದ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ.

1956ನೇ ಇಸವಿಗಿಂತ ಮೊದಲು ಈ ಕರ್ನಾಟಕ ರಾಜ್ಯ ಬೇರೆ ಬೇರೆ ಭಾಗಗಳಲ್ಲಿ ಇತ್ತು. 1956ನೇ ಇಸವಿಯಲ್ಲಿ ಕನ್ನಡ ನಾಡು ಒಂದಾಗಿ ನವಕರ್ನಾಟಕ ರಾಜ್ಯ ನಿರ್ಮಾಣವಾಯಿತು. ಅನಂತರ ಈ ಸಭೆಯಲ್ಲಿ ಒಂದು ಠರಾವನ್ನು ತಂದು ಈ ರಾಜ್ಯಕ್ಕೆ ಈಗಿರುವ ಹೆಸರನ್ನು ಬದಲಾವಣೆ ಮಾಡಿ ಕರ್ನಾಟಕ ಎಂದು ಹೆಸರಿಡಬೇಕೆಂದು ಪ್ರಯತ್ನಪಟ್ಟರು. ಅದರ ಮುಖಾಂತರ ಒಂದು ಸುಲಭವಾದ ರೀತಿಯಿಂದ ಭಾವೈಕ್ಯತೆಯನ್ನು ನಿರ್ಮಾಣಮಾಡಬೇಕೆಂದು ಪ್ರಯತ್ನಪಟ್ಟರು. ಆ ಠರಾವಿನ ಮೇಲೆ ಪೂರ್ಣವಾದ ಚರ್ಚೆ ನಡೆದು ಈ ಸಭೆಯ ಮಾನ್ಯ ಸದಸ್ಯರ ಪೈಕಿ ಸುಮಾರು ¾ ಭಾಗ ಸದಸ್ಯರು ಆ ಠರಾವನ್ನು ಅನುಮೋದಿಸಿ ಈ ದೇಶಕ್ಕೆ ಕರ್ನಾಟಕ ಎಂದು ಹೆಸರಿಡ

* * * * Expunged as ordered by the Chair.

ಬೇಕೆಂದು ಒಪ್ಪಿಕೊಂಡರು. ಅನೇಕರು ಟೆಲಿಗ್ರಾಮ್ ಮತ್ತು ಟೆಲಿಫೋನ್‌ಗಳ ಮುಖಾಂತರ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕಳುಹಿಸಿದರು. ಆದರೆ ಸ್ವಲ್ಪ ಜನ ಹಟವಾದಿಗಳ ದುರಾಗ್ರಹಗಳಿಗೆ ಸರ್ಕಾರ ತಲೆಬಾಗಿ ಹೆಸರನ್ನು ಬದಲಾಯಿಸಲಿಲ್ಲ. ಇದು ತುಂಬಾ ವಿಷಾದ ಎನಿಸುತ್ತದೆ. ಈಗ ಲಾದರೂ ಪ್ರಯತ್ನಮಾಡಿ ಆ ಕಾರ್ಯವನ್ನು ಮಾಡಬೇಕು. ಈ ವರ್ಷ ರಾಜ್ಯಪಾಲರು ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿದ್ದಕ್ಕೆ ನಾವೆಲ್ಲರೂ ಎಷ್ಟು ಸಂತೋಷ ಪಟ್ಟಿದ್ದೇವೋ ಅದೇ ರೀತಿ ತಮ್ಮ ರಾಜ್ಯದಲ್ಲಿ ಭಾವಕ್ಯತೆಯನ್ನು ನಿರ್ಮಾಣಮಾಡಿ ಮುಂದಿನ ವರ್ಷ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಇಟ್ಟಿದ್ದೇವೆ ಎಂದು ಹೇಳತಕ್ಕ ಮಾತನ್ನು ಕೇಳಿ ನಾವೆಲ್ಲರೂ ಸಂತೋಷಪಡುವ ಹಾಗೆ ಮಾಡಬೇಕು ಎಂದು ನಾನು ಆಶೆ ಮಾಡುತ್ತೇನೆ.

ಇನ್ನೂ ಸರ್ಕಾರದ ಪಾಲಸಿಯ ವಿಷಯವಾಗಿ ನಮ್ಮ ರಾಜ್ಯಪಾಲರು ಏನೆಂದು ಸ್ಟೇಟ್‌ಮೆಂಟ್ ಮಾಡಿದ್ದಾರೆಯೋ ಅದರ ಮೇಲೆ ನಾನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರ ಸಮಾಜವಾದ, ಪ್ರಜಾಪ್ರಭುತ್ವ, ಸೋಷಿಲಿಜಮ್ ಎಂದು ಏನು ಹೇಳುತ್ತಾರೆಯೋ ಅದು ಸರಿಯಾದ ರೀತಿಯಿಂದ ನಡೆದಿದೆಯೋ ಎಂದು ನೋಡುವುದಾದರೆ ಅದು ಸರಿಯಾದರೀತಿಯಿಂದ ನಡೆದಿಲ್ಲ ಎಂದು ನಾನು ಹೇಳುತ್ತೇನೆ. ಪ್ರತಿಯೊಂದೂ ಹೇಳುವುದು ಸುಲಭ ಆದರೆ ಅದನ್ನು ಆಚರಣೆಗೆ ತರುವುದು ಕಷ್ಟ. ಆದ್ದರಿಂದ ಇವೊತ್ತು ಆಡಳಿತ ಪಕ್ಷದವರು ಏನು ಮಾಡುತಿದ್ದಾರೆಂದರೆ ಬಾಯಲ್ಲಿ ಹೇಳುವುದು ಒಂದು ಅದರೆ ಕಾರ್ಯತಃ ಮಾಡುವುದು ಇನ್ನೊಂದು. ಈ ರೀತಿಯಾಗಿದೆ. ಇವೊತ್ತಿನ ದಿವಸ ದೇಶದಲ್ಲಿ ಅಶಾಂತಿ ಉಂಟಾಗಿದೆ. ದೇಶದಲ್ಲಿ ಅನ್ಯಾಯ ನಡೆದಿದೆ. ಪ್ರಜಾಪ್ರಭುತ್ವ ಎಂದು ಹೇಳುತ್ತಾರೆ ಆದರೆ ಸಾಮ್ರಾಜ್ಯಷಾಹಿ ಪದ್ಧತಿ ನಡೆದಿದೆ ಎಂದು ನಾನು ಹೇಳುತ್ತೇನೆ.

ನಮ್ಮ ರಾಜ್ಯಪಾಲರ ಭಾಷಣದಲ್ಲಿ ಭೂಸುಧಾರಣೆಯ ಕಾನೂನು, ಇನಾಮ್ ಅಬಾಲಿಷನ್ ಆಕ್ಟ್ ಮುಂತಾದ ಕಾಯಿದೆಗಳನ್ನು ಪಾಸುಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇದರಿಂದ ಒಕ್ಕಲಿಗರಿಗೆ ಅಷ್ಟೇನು ಪ್ರಯೋಜನವಾಗಿಲ್ಲ. ಸಮತಾವಾದ ಸಮಾಜವನ್ನು ಕಟ್ಟುತ್ತೇವೆಂದು ಹೇಳುತ್ತಾರೆ. ಆದರೆ ದೇಶದಲ್ಲಿ ಮಾಡಿರತಕ್ಕ ಕೆಲಸಗಳು ಪರಸ್ಪರ ವಿರುದ್ಧವಾಗುತ್ತವೆ. ಭೂ ಸುದಾರಣಾ ಕಾಯಿದೆಯನ್ನು ಈ ಸಭೆಯಲ್ಲಿ ಪಾಸ್‌ಮಾಡಿ 2-3 ವರ್ಷಗಳಾದವು. ಆದರೂ ಅದನ್ನು ಜಾರಿಗೆ ತರುವುದಕ್ಕೆ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಬೇಕು ಎಂದು ಅದನ್ನು ಹಾಗೆಯೇ ಇಟ್ಟಿದ್ದಾರೆ. ಇದರಿಂದ ಟೆನೆಂಟುಗಳಿಗೆ ಉಪಯೋಗವಿಲ್ಲ. ಜಮೀನ್ದಾರರಿಗೆ ಅನುಕೂಲವಾಗಿದೆ. ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು, ಈ ಭೂ ಸುದಾರಣೆಯ ಕಾನೂನು ಕಾನ್‌ಸ್ಟಿಟ್ಯೂಷನ್ನಿನ 17ನೇ ಅಮೆಂಡ್‌ಮೆಂಟನ್ನು ಮಾಡಿ ಅದನ್ನು ಜಾರಿಗೆ ತರದೆ ಇದ್ದರೆ ಆತ್ಮ ವಿಲ್ಲದ ಶರೀರವಾಗುತ್ತದೆ ಎಂದು. ಅದು ಅಮೆಂಡ್‌ಮೆಂಟ್ ಆದ ನಂತರ ಮತ್ತೆ ಯಾವ ಸಂಶಯ ಬರುತ್ತದೋ ಏನೋ ಗೊತ್ತಿಲ್ಲ. ಈಗ ಭೂ ಸುಧಾರಣೆಯ ಕಾನೂನನ್ನು ಮಾಡಿ ಭೂ ಮಾಲೀಕರಿಗೆ ಒಂದು ಪ್ರಕಾರ ಸಹಾಯ ಮಾಡಿ ಅವರಿಗೆ ಅನುಕೂಲ ಮಾಡಿದ್ದಾರೆ.

ಆಮೇಲೆ ಇನಾಮ್ ಅಬಾಲಿಷನ್ ಆಕ್ಟ್ ಎಂದು ಮಾಡಿದರು. ಇದನ್ನು ಇನಾಮ್ ಅಬಾಲಿಷನ್ ಆಕ್ಟ್ ಎಂದು ಕರೆಯುವುದಕ್ಕಿಂತ ಬೇರೆ ಹೆಸರಿನಿಂದ ಕರೆದರೆ ಒಳ್ಳೆಯದೆಂದು ಕಾಣುತ್ತದೆ. ಈ ಇನಾಮ್ ಅಬಾಲಿಷನ್ ಆಕ್ಟಿಗೆ ಸಂಬಂಧಪಟ್ಟ ಅನೇಕ ಕೇಸುಗಳು ಇನ್ನೂ ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ಆಕಡೆ ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ. 1952ನೇ ಇಸವಿಯಲ್ಲಿ ಜಹಗೀರ್ ದಾರರಿಗೆ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್‌ಅನ್ನು 50 ಪರ್ಸೆಂಟ್ ಸಸ್‌ಪೆಂಡ್‌ಮಾಡಿ ರೈಟ್‌ಆಫ್ ಮಾಡುತ್ತೇವೆಂದು ಹೇಳಿದರು. ಆದರೆ ಅದು 12 ವರ್ಷಗಳಾದರೂ ಹಾಗೆಯೇ ಉಳಿದಿದೆ. 1956ನೇ ಇಸವಿಯಲ್ಲಿ ಹೊಸ ರಾಜ್ಯವಾಯಿತು. ಎಂದರೆ 7 ವರ್ಷಗಳಾಯಿತು. ಈಗ 7 ವರ್ಷಗಳಿಂದಲೂ ಅವರು ಆ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಅದು ಹಾಗೆಯೇ ಉಳಿದಿದೆ. ಇದರ ಪರಿಣಾಮ ಏನಾಗಿದೆ ಎಂದರೆ ಡಬಲ್‌ಕಾಂಪೆನ್‌ಸೇಷನ್ ಕೊಡುವ ಹಾಗೆ ಆಯಿತು. ಎಂದರೆ ಆಕ್ಚುಯಲ್ ಪೇಮೆಂಟ್‌ನ 4 ಪಟ್ಟು ಕಾಂಪೆನ್‌ಸೇಷನ್ ಕೊಡುವಹಾಗೆ ಆಯಿತು. ಈ ಎಲ್ಲಾ ಕಾರಣಗಳಿಂದ ಇದಕ್ಕೆ ಜವಾಬ್ದಾರಿ ಸರ್ಕಾರ ಎಂದು ಹೇಳುವುದಕ್ಕೆ ಲಾಯಕ್ಕಾಗಿಲ್ಲ ಎಂದು ನಾನು ಹೇಳುತ್ತೇನೆ.

6.00 P.M.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಮೊನ್ನೆತಾನೆ ಪೋಲೀಸ್ ಆಕ್ಟನ್ನು ಜಾರಿಗೆ ತಂದಿದ್ದಾರೆ. ಆದು ಪ್ರಜಾಪ್ರಭುತ್ವಕ್ಕೆ ಸರಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇವೊತ್ತು ನಮ್ಮ ದೇಶದಲ್ಲಿ ಲಾ ಅಂಡ್ ಆರ್ಡರ್ ಇಲ್ಲವೇ ಇಲ್ಲ ಎಂದು ಹೇಳಬೇಕಾಗಿದೆ. ನಮ್ಮ ಬೀದರ್

(ಶ್ರೀ ಎಸ್. ಭೀಮಣ್ಣ)

ಜಿಲ್ಲೆಯಲ್ಲಿ ಈಗ್ಗೆ 7-8 ತಿಂಗಳ ಹಿಂದೆ ಕೊಲೆಗಳು ಆಗಿದ್ದರೂ ಆ ಬಗ್ಗೆ ಇದುವರೆಗೂ ಯಾವ ವಿಚಾರಣೆಯೂ ಆಗಿಲ್ಲ. ಈ ವಿಷಯದಲ್ಲಿ ಒಂದೇ ಒಂದು ಮಾತನ್ನು ಹೇಳಬಹುದು. ಅದೇನೆಂದರೆ ಈ ನಮ್ಮ ದೇಶದಲ್ಲಿ ಅರಾಜಕತೆ ಇದೆ ಎಂದು ಹೇಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ನಿಡೋಡಿ ಮತ್ತು ಚಿಡಗೂಪ್ಪೆಯಲ್ಲಿ ನಡೆದ ಕೇಸುಗಳನ್ನು ನಾನು ನಮ್ಮ ಪೋಲೀಸುಖಾತೆಯ ಮಂತ್ರಿಗಳಾದ ಆರ್. ಎಂ. ಪಾಟೀಲರಿಗೆ ತಿಳಿಸಿದ್ದೇನೆ. ಆ ಕೇಸಿನ ಸಂಬಂಧದಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಪಟವರ್ಧನ್ ಎಂಬವರ ಮೇಲೆ ಕಂಪ್ಲೇಂಟ್ ಮಾಡಿ 20 ಜನ ಪೋಲೀಸಿನವರು ಅವರನ್ನು ರಾತ್ರಿಯೇ ರಾತ್ರಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅವರಿಗೆ ಅನೇಕ ರೀತಿಯಲ್ಲಿ ಹಿಂಸೆಯನ್ನು ಕೊಟ್ಟಿದ್ದಾರೆ. ಆ ಬಗ್ಗೆ ಡಿವಿಜನಲ್ ಕಮೀಷನರಿಗೂ ಪಿಟಿಷನ್ ಕೊಟ್ಟಿದೆ ಅವರು ಪೋಲೀಸಿನವರಿಂದ ರಿಪೋರ್ಟ್ ತರಿಸಿಕೊಂಡು ಅದನ್ನು ಎಕ್ವೈರಿ ಮಾಡಿದ್ದಾರೆ. ಅದರಲ್ಲಿ ಅನ್ಯಾಯವಾಗಿದೆ. 8 ತಿಂಗಳುಗಳಾದರೂ ಆ ವಿಷಯದಲ್ಲಿ ಏನೂ ಮಾಡಿಲ್ಲ. ಇದು ಬಹಳ ದುಃಖದ ವಿಷಾತು ಎಂದು ನಾನು ಹೇಳುತ್ತೇನೆ.

ಇಡವದಿ ಎಂಬ ಊರಿನಲ್ಲಿ ಒಬ್ಬ ತಪ್ಪು ಮಾಡಿದ. ತಪ್ಪುಮಾಡಿದವನಿಗೆ ಶಿಕ್ಷೆಯಾಗಬೇಕು. ಅದಕ್ಕೆ ನೀತಿ ನಿಯಮವಿದೆ. Executive officers ಯಾರಿದ್ದಾರೆ ಅವರು ಸ್ವತಃ ಯಾವ ಪ್ರಕಾರ ಅಧಿಕಾರವನ್ನು ನಡೆಸುತ್ತಿದ್ದಾರೆಂದು ತಿಳಿಸುತ್ತೇನೆ. ಯಾರು ತಪ್ಪುಮಾಡಿದ್ದಾರೆ, ನೂರಾರು ಜನರ ಎದುರಿಗೆ ಅವರ ಕೈ ಕಾಲು ಕಟ್ಟಿಹಾಕಿ ಅವರ ಬಾಯಲ್ಲಿ ಮಲಮೂತ್ರಗಳನ್ನೂ ಹಾಕಿದ್ದಾರೆ. ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿದೆ ಡಿವಿಷನಲ್ ಕಮಿಷನರು ವಿಚಾರಣೆನಡೆಸಿದರು. ಕೊನೆಗೆ ಏನಾಯಿತೆಂಬುದು ಇನ್ನೂ ರಹಸ್ಯವಾಗಿಯೇ ಉಳಿದಿದೆ. ಹೀಗಾದರೆ ಖೂನಿ ದರೋಡೆ ಏನು ಬೇಕಾದರೂ ನಡೆಯಬಹುದಾಗಿದೆ. ಇದನ್ನು ಸರ್ಕಾರ ವಿಚಾರಮಾಡಬೇಕಾಗಿದೆ.

MR. SPEAKER.—The House will now rise and meet tomorrow at half past Twelve.

The House adjourned at Five Minutes past Six of the Clock to meet again at Thirty Minutes past Twelve of the Clock on Tuesday, the 3rd March 1964.

WD 2401—GPB—900—21-4-64

GOVERNMENT OF KARNATAKA

DEPARTMENT OF
KARNATAKA STATE ARCHIVES
LIBRARY, BANGALORE

This book should be returned on
or before the date mentioned below :

KSA LIBRARY, B'lore
B004808(2)
351.722 RP 1961
JJ-34